ಬುಡಕಟ್ಟು ಅಭಿವೃದ್ಧಿಯಲ್ಲಿ ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳ ಪಾತ್ರ

(ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳನ್ನು ಪರಿಗಣಿಸಿ)

ROLE OF GOVERNMENT AND NON GOVERNMENTAL ORGANISATIONS IN THE DEVELOPMENT OF TRIBES

(With Special reference to South Canara and Udupi Districts)

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅಂತರ್‌ಶಿಸ್ತೀಯ ಅಧ್ಯಯನದ ವಿಧಾನದ ಮೂಲಕ ಸಮಾಜಕಾರ್ಯ ವಿಷಯದಲ್ಲಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕ

ಅತುಲ್ ಎಸ್ ಸೇಮಿತ

ಮಾರ್ಗದರ್ಶಕರು

ಡಾ. ಗಂಗಾಧರ ದೈವಜ್ಞ

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩ ೨೭೬

೨೦೧೬

676

ಬುಡಕಟ್ಟು ಅಭಿವೃದ್ಧಿಯಲ್ಲಿ ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳ ಪಾತ್ರ

(ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳನ್ನು ಪರಿಗಣಿಸಿ)

ROLE OF GOVERNMENT AND NON GOVERNMENTAL ORGANISATIONS IN THE DEVELOPMENT OF TRIBES

(With Special reference to South Canara and Udupi Districts)

ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅಂತರ್‌ಶಿಸ್ತೀಯ ಅಧ್ಯಯನದ ವಿಧಾನದ ಮೂಲಕ ಸಮಾಜಕಾರ್ಯ ವಿಷಯದಲ್ಲಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕ

ಅತುಲ್ ಎಸ್ ಸೇಮಿತ

ಮಾರ್ಗದರ್ಶಕರು

ಡಾ.। ಗಂಗಾಧರ ದೈವಜ್ಞ

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ-೫೮೩೨೭೬
೨೦೧೬

ಪ್ರಮಾಣ ಪತ್ರ

"ಬುಡಕಟ್ಟು ಅಭಿವೃದ್ಧಿಯಲ್ಲಿ ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳ ಪಾತ್ರ" (ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳನ್ನು ಪರಿಗಣಿಸಿ) ಎಂಬ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ***ಡಾ. ಗಂಗಾಧರ ದೈವಜ್ಞ*** ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಈ ಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲಿ ಅಥವಾ ಉದ್ದೇಶಗಳಿಗಾಗಲಿ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಅತುಲ್ ಎಸ್ ಸೇಮಿತ)
ಸಂಶೋಧಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ-೫೮೩೨೭೬.

ಸ್ಥಳ : ಗಿರಿಸೀಮೆ

ದಿನಾಂಕ : ೦೯.೦೮.೨೦೧೬

ದೃಢೀಕರಣ ಪತ್ರ

ಅತುಲ್ ಎಸ್ ಸೇಮಿತ ಅವರು **"ಬುಡಕಟ್ಟು ಅಭಿವೃದ್ಧಿಯಲ್ಲಿ ಸರಕಾರ ಮತ್ತು** (ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳನ್ನು ಪರಿಗಣಿಸಿ) **ಸ್ವಯಂಸೇವಾ ಸಂಸ್ಥೆಗಳ ಪಾತ್ರ"** ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲಿ ಅಥವಾ ಉದ್ದೇಶಗಳಿಗಾಗಲಿ ಇವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ಗಂಗಾಧರ ದೈವಜ್ಞ)
ಮಾರ್ಗದರ್ಶಕರು
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ-೫೮೩೨೭೬.

ಸ್ಥಳ : ಗಿರಿಸೀಮೆ

ದಿನಾಂಕ : ೦೯.೦೮.೨೦೧೬

ಪರಿವಿಡಿ

ಅಧ್ಯಾಯ ೧

ಸಂಶೋಧನೆಯ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಸಂಶೋಧನೆಯ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧.೧ ಪ್ರಸ್ತಾವನೆ

ಬುಡಕಟ್ಟು ಸಮುದಾಯಗಳ ಇತಿಹಾಸಗಳನ್ನು ನಾವು ಅವಲೋಕಿಸಿದಾಗ, ಪ್ರಪಂಚದಾದ್ಯಂತ ಅನೇಕ ಪ್ರದೇಶಗಳಲ್ಲಿ ವಿವಿಧ ಮಾನವ ಜನಾಂಗಗಳಿಗೆ ಸೇರಿದ ಬುಡಕಟ್ಟುಗಳು ಕಂಡು ಬರುತ್ತವೆ. ಭಾರತದಲ್ಲೂ ಸೇರಿದ ವಿವಿಧ ಬುಡಕಟ್ಟು ಸಮುದಾಯಗಳು ಸಿಂಧೂ ನದಿಯ ನಾಗರಿಕತೆಯ ಜೊತೆ ಜೊತೆಯಲ್ಲೇ ಸಾಗಿ ಬಂದಿರುವುದನ್ನು ಐತಿಹಾಸಿಕವಾಗಿ ದೊರೆತಿರುವ ಪ್ರಾಕ್ತನ ಆಧಾರಗಳು, ಭೂ ಉತ್ಖನನಗಳ ಮೂಲಕ ಧೃಡಪಡಿಸಲಾಗಿದೆ. ಭಾರತದಲ್ಲಿ ಅನೇಕ ಬುಡಕಟ್ಟುಗಳು ಇನ್ನೂ ಸರಿಯಾಗಿ ಗುರುತಿಸಲ್ಪಡದೇ ಅಭಿವೃದ್ಧಿಯ ವಾಹಿನಿಯಿಂದ ದೂರ ಉಳಿದಿವೆ ಮತ್ತು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಇನ್ನು ಕೆಲವು ಬುಡಕಟ್ಟು ಸಮುದಾಯಗಳು ಭಾರತದ ಜಾತಿ ವ್ಯವಸ್ಥೆ, ರಾಜಕೀಯ ವ್ಯವಸ್ಥೆ, ಆಧುನೀಕರಣ, ಕೈಗಾರೀಕರಣ ಇತ್ಯಾದಿ ಅಂಶಗಳ ಪ್ರಭಾವಕ್ಕೊಳಗಾಗಿ ಬದಲಾವಣೆಯ ಗಾಳಿಯಲ್ಲಿ ಸಿಲುಕಿವೆ.

ಭಾರತದಲ್ಲಿ ಕೆಲವೊಮ್ಮೆ ರಾಜಕೀಯ ಕಾರಣಗಳಿಂದಲೋ ಅಥವಾ ವೈಜ್ಞಾನಿಕವಾಗಿ ಬುಡಕಟ್ಟು ಸಮುದಾಯಗಳನ್ನು ಗುರುತಿಸಲು ಸಾಧ್ಯವಾಗದೇ ಇರುವುದರಿಂದಲೋ ಎಷ್ಟೋ ಬುಡಕಟ್ಟುಗಳು ಬುಡಕಟ್ಟಿನ ಅಧಿಕೃತ ಸ್ಥಾನಮಾನ ಪಡೆದೇ ಇಲ್ಲ ಎಂದು ಹೇಳಬಹುದು. ಇದರಿಂದಾಗಿ ನಿಜವಾದ ಬುಡಕಟ್ಟು ಸಮುದಾಯಗಳು ಸರ್ಕಾರದ ಎಲ್ಲಾ ಅವಕಾಶಗಳಿಂದ ವಂಚಿತರಾಗಿ ಇತರ ಸಮುದಾಯಗಳು ಲಾಭವನ್ನು ಪಡೆಯುತ್ತಿದ್ದಾರೆ. ಇನ್ನು ಕೆಲವು ರಾಜ್ಯಗಳಲ್ಲಿ ಕೆಲವು ಬುಡಕಟ್ಟು ಸಮುದಾಯಗಳನ್ನು ಸರ್ಕಾರದ ಮೀಸಲಾತಿಯ ನೀತಿಯಡಿಯಲ್ಲಿ ಹಿಂದುಳಿದ ವರ್ಗಗಳೆಂದು ಪರಿಗಣಿಸಲಾಗಿದ್ದು, ಇದರಿಂದಾಗಿ ಈ ಸಮುದಾಯಗಳು ಇನ್ನೂ ಕೂಡ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಕರ್ನಾಟಕದಲ್ಲಿ ಕಾಡುಗೊಲ್ಲ, ಕಚ್ಚೆ ಗೌಳಿಗ, ಹಾಲಕ್ಕಿ ಒಕ್ಕಲಿಗ ಮುಂತಾದ ಬುಡಕಟ್ಟು ಸಮುದಾಯಗಳನ್ನು ಪರಿಶಿಷ್ಟ ಪಂಗಡದಲ್ಲಿ ಸೇರಿಸದೇ ಇರುವುದನ್ನು ಕಾಣಬಹುದು.

ಭಾರತದಲ್ಲಿ ಬುಡಕಟ್ಟು ಸಮುದಾಯಗಳ ಸಮಸ್ಯೆಗಳು ಒಂದೇ ತೆರನಾಗಿಲ್ಲ. ಉತ್ತರ ಭಾರತದ ಹಲವು ಬುಡಕಟ್ಟು ಸಮುದಾಯಗಳು ಮತ್ತು ಪೂರ್ವ ಈಶಾನ್ಯ ಭಾಗದ ಬುಡಕಟ್ಟು ಸಮುದಾಯಗಳು ಅವುಗಳ ಜನಸಂಖ್ಯಾ ಪ್ರಾಬಲ್ಯ ಮತ್ತು ರಾಜಕೀಯ ಬೆಂಬಲಗಳಿಂದ ಮತ್ತು ಶಿಕ್ಷಣದ ಪ್ರಭಾವದಿಂದಾಗಿ ತಮ್ಮ ಸಂವಿಧಾನಾತ್ಮಕ ಹಕ್ಕುಗಳ ರಕ್ಷಣೆಯ ಜೊತೆಗೆ ಸರ್ಕಾರದಿಂದ ವಿಶೇಷ ಸವಲತ್ತುಗಳನ್ನು

ಪಡೆಯುವಲ್ಲಿ ಸಫಲವಾಗಿವೆ. ಆದರೆ ದಕ್ಷಿಣ ಭಾರತದ ಕೆಲವು ಬುಡಕಟ್ಟು ಸಮುದಾಯಗಳು ಮತ್ತು ಕರಾವಳಿ ಭಾಗದ ಪಶ್ಚಿಮ ಘಟ್ಟದ ಬುಡಕಟ್ಟುಗಳು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿ ಅನೇಕ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಕೆಲವೊಂದು ರಾಜ್ಯಗಳ ಬಯಲು ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳು ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಪಡೆಯುವುದರ ಜೊತೆಗೆ ಜೀವನ ವಿಧಾನಗಳಲ್ಲಿ ಇತರೆ ಸಮುದಾಯಗಳ ಜಾತಿ ವ್ಯವಸ್ಥೆಗೆ ಹತ್ತಿರವಾಗುತ್ತಿವೆ.

ಭಾರತದಲ್ಲಿರುವ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಸ್ವಾತಂತ್ರ್ಯ ಬಂದಾಗಿನಿಂದ ಭಾರತದ ಸಂವಿಧಾನ ಮತ್ತು ಸರಕಾರಗಳು ನಿರಂತರವಾಗಿ ಶ್ರಮಿಸುತ್ತಿವೆ. ಬುಡಕಟ್ಟು ಮತ್ತು ಇತರೆ ಸಮುದಾಯಗಳ ನಡುವಿನ ಅಸಮಾನತೆ ಮತ್ತು ಹಿಂದುಳಿದಿರುವಿಕೆಯನ್ನು ತೊಡೆದು ಹಾಕಿ, ಸಾಮಾಜಿಕ ನ್ಯಾಯ ಒದಗಿಸುವ ಸಲುವಾಗಿ ಪ್ರಾರಂಭಿಕ ಹಂತದಲ್ಲಿ ಸರಕಾರವು ರಕ್ಷಣಾತ್ಮಕ ನೀತಿಯಲ್ಲಿ ಸಂವಿಧಾನಾತ್ಮಕ ಮತ್ತು ಕಾನೂನಾತ್ಮಕ ಹಕ್ಕುಗಳನ್ನು ಒಳಗೊಂಡಿದ್ದು, ಬುಡಕಟ್ಟುಗಳ ಹಿತಾಸಕ್ತಿಗಳನ್ನು ಕಾಪಾಡುವಂತಾಗಿದ್ದವು. ಮೀಸಲಾತಿ ನೀತಿಯಡಿ ವಿವಿಧ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ವಿಸ್ತರಿಸುವ ಮೂಲಕ ಬುಡಕಟ್ಟು ಜನರ ಕಲ್ಯಾಣ ಸಾಧಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು. ಆದರೆ ರಾಜಕೀಯ ಇಚ್ಛಾಶಕ್ತಿಯ ಕೊರತೆ, ಭ್ರಷ್ಟಾಚಾರ ಮುಂತಾದ ಕಾರಣಗಳಿಂದ ಅಭಿವೃದ್ಧಿಯೆಂಬುದು ಬುಡಕಟ್ಟುಗಳಿಗೆ ಇನ್ನು ಕೂಡ ಮರಿಚೀಕೆಯಾಗಿ ಉಳಿದಿದೆ.

ಇತ್ತೀಚಿನ ವರುಷಗಳಲ್ಲಿ ಆದ ಇನ್ನೊಂದು ಧನಾತ್ಮಕ ಬೆಳವಣಿಗೆ ಎಂದರೆ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸರಕಾರದ ಜೊತೆಗೆ ಹಲವು ಸರ್ಕಾರೇತರ ಸಂಸ್ಥೆಗಳು ಕೈಜೋಡಿಸುತ್ತಿರುವುದು ಒಳ್ಳೆಯ ವಿಚಾರ. ಸರ್ಕಾರದ ಅಭಿವೃದ್ದಿ ಯೋಜನೆಗಳು ಬುಡಕಟ್ಟು ಜನರಿಗೆ ತಲುಪಿಸುವಲ್ಲಿ ಮತ್ತು ಅವುಗಳ ಬಗ್ಗೆ ಅರಿವು ಮೂಡಿಸುವಲ್ಲಿ ಈ ಸ್ವಯಂಸೇವಾ ಸಂಸ್ಥೆಗಳ ಪಾತ್ರ ಮಹತ್ತರವಾದದು. ಸ್ವಯಂ ಸೇವಾ ಸಂಸ್ಥೆಗಳು ಈ ಕಾರ್ಯವನ್ನು ಪ್ರಾಂಜಲ ಮನಸ್ಸಿನಿಂದ ನಿರ್ವಹಿಸಿದರೆ ಮಾತ್ರ ಬುಡಕಟ್ಟುಗಳಲ್ಲಿ ಸ್ವಲ್ಪ ಪ್ರಮಾಣದ ಅಭಿವೃದ್ಧಿ ಸಾಧ್ಯವಾಗುತ್ತದೆ. ಆದರೆ ಕೆಲವೊಂದು ಸ್ವಯಂಸೇವಾ ಸಂಸ್ಥೆಗಳು ಹೆಸರಿಗೆ ಮಾತ್ರ ಅಭಿವೃದ್ದಿಯ ನೆಪದಲ್ಲಿ ಹಣ ಮಾಡುವ ಸಂಸ್ಥೆಗಳಾಗಿ ಪರಿವರ್ತನೆಗೊಂಡರೆ ಇನ್ನು ಕೆಲವು ಸ್ವಯಂಸೇವಾ ಸಂಸ್ಥೆಗಳು ಆರ್ಥಿಕ ಮುಗ್ಗಟಿನಿಂದಲೋ, ನಿರಾಸಕ್ತಿಯಿಂದಲೋ ಅರ್ಧದಲ್ಲೇ ತಮ್ಮ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸಿ ನಾಪತ್ತೆಯಾಗಿಬಿಡುತ್ತವೆ.

ಈ ರೀತಿಯ ಅಭಿವೃದ್ಧಿಯ ವೈರುಧ್ಯಗಳು ಕರ್ನಾಟಕದ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳಲ್ಲೂ ಕಂಡು ಬರುತ್ತಿವೆ ಎಂದರೆ ತಪ್ಪಾಗಲಾರದು. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಕಂಡು ಬರುವ ಪ್ರಮುಖ ಬುಡಕಟ್ಟುಗಳೆಂದರೆ ಕೊರಗರು, ಮಲೆಕುಡಿಯರು ಮತ್ತು ಮರಾಠಿ ನಾಯ್ಕರು. ಇವುಗಳಲ್ಲಿ ಮರಾಠಿ

ನಾಯ್ಕರು ಬಹುಪ್ರಮಾಣದಲ್ಲಿ ಕಂಡುಬಂದರೆ ಕೊರಗರ ಜನಸಂಖ್ಯೆ ಅತ್ಯಂತ ಕಡಿಮೆ. ಒಟ್ಟಾರೆಯಾಗಿ ಉಳಿದ ಸಮುದಾಯಗಳಿಗೆ ತುಲನೆ ಮಾಡಿದಾಗ ಈ ಎರಡು ಜಿಲ್ಲೆಗಳಲ್ಲಿ ಬುಡಕಟ್ಟು ಸಮುದಾಯಗಳ ಜನಸಂಖ್ಯೆ ತೀರ ಕಡಿಮೆ ಎಂದು ಹೇಳಬಹುದು. ಆದರೆ ಈ ಬುಡಕಟ್ಟು ಸಮುದಾಯಗಳು ಭಾರತದ ಇತರೆ ಬುಡಕಟ್ಟುಗಳಂತೆ ಇವತ್ತಿಗೂ ಕೂಡಾ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಭಾರತದಲ್ಲಿ ಸ್ವಾತಂತ್ರ್ಯ ನಂತರ ಅಧಿಕಾರಕ್ಕೆ ಬಂದ ಪ್ರತಿಯೊಂದೂ ಸರಕಾರಗಳು ದೇಶದಲ್ಲಿರುವ ಎಲ್ಲಾ ಬುಡಕಟ್ಟು ಸಮುದಾಯಗಳನ್ನು ಅಭಿವೃದ್ಧಿಪಡಿಸಬೇಕು ಎಂಬ ಸಂಕಲ್ಪ ತೊಟ್ಟು ಕಾರ್ಯೋನ್ಮುಖವಾಗಿ ತೊಡಗಿಕೊಂಡವು. ಈ ನಿಟ್ಟಿನಲ್ಲಿ ಸರಕಾರವು ಅನೇಕ ಆಯೋಗಗಳನ್ನೂ ರಚಿಸಿತು. ಮುಖ್ಯವಾಗಿ ೧೯೬೧ರಲ್ಲಿ ರಚನೆಯಾದ ದೇಬರ್ ಆಯೋಗ, ೧೯೬೨ರ ಹರಿಸಿಂಗ್ ಸಮಿತಿ, ೧೯೭೬ರ ರಾಷ್ಟ್ರೀಯ ಕೃಷಿ ಆಯೋಗ, ೧೯೮೨ರ ರಾಯ್ ಬರ್ಮನ್ ಆಯೋಗದ ವರದಿ, ೧೯೯೯ ಭೂರಿಯಾ ಆಯೋಗದ ವರದಿಗಳು ಮಾಡಿರುವ ಶಿಫಾರಸ್ಸುಗಳು ಬುಡಕಟ್ಟು ಸಮುದಾಯಗಳನ್ನು ಅಭಿವೃದ್ಧಿಯೆಡೆಗೆ ಕೊಂಡೊಯ್ಯುವ ಅಂಶಗಳನ್ನು ಒಳಗೊಂಡಿತ್ತು. ಇವುಗಳ ಆಧಾರದಲ್ಲಿ ಸರಕಾರವು ಹೊಸ ನೀತಿಗಳನ್ನು ಪ್ರಕಟಿಸುವುದರ ಜೊತೆಗೆ ವಿಶೇಷ ಯೋಜನೆಗಳನ್ನು ಜಾರಿಗೆ ತಂದವು. ಜೊತೆಗೆ ಪಂಚವಾರ್ಷಿಕ ಯೋಜನೆಗಳಲ್ಲಿಯೂ ಬುಡಕಟ್ಟು ಸಮುದಾಯಗಳಿಗೆ ವಿಶೇಷ ಅನುದಾನಗಳನ್ನು ಬಿಡುಗಡೆ ಮಾಡಿತು. ಇವುಗಳ ಜೊತೆಗೆ ಸರಕಾರವು ಅಭಿವೃದ್ಧಿಯ ಪ್ರಕ್ರಿಯೆಗೆ ವೇಗ ಹೆಚ್ಚಿಸಲು ಮತ್ತು ನಿಗಾ ವಹಿಸಲು ಪ್ರತ್ಯೇಕ ಇಲಾಖೆಗಳು ಮತ್ತು ರಾಷ್ಟ್ರೀಯ ಆಯೋಗಗಳನ್ನು ಸ್ಥಾಪಿಸಿದವು.

ಇದೇ ಸಂದರ್ಭದಲ್ಲಿ ಇನ್ನೊಂದು ಕಡೆ ಬುಡಕಟ್ಟುಗಳ ಅಭಿವೃದ್ಧಿಗಾಗಿ ಅನೇಕ ಸ್ವಯಂ ಸೇವಾ ಸಂಸ್ಥೆಗಳು ಕೂಡ ಹುಟ್ಟಿಕೊಂಡವು. ಕೆಲವೊಂದು ಸ್ವಯಂಸೇವಾ ಸಂಸ್ಥೆಗಳು ತಮ್ಮದೇ ನೀತಿ, ಕಾರ್ಯವಿಧಾನಗಳಿಂದ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಶ್ರಮಿಸತೊಡಗಿದರೆ, ಇನ್ನು ಕೆಲವು ಸ್ವಯಂ ಸೇವಾ ಸಂಸ್ಥೆಗಳು ಸರಕಾರದ ನೀತಿ, ಕಾರ್ಯಕ್ರಮಗಳನ್ನು ಬುಡಕಟ್ಟು ಸಮುದಾಯಗಳಿಗೆ ತಲುಪಿಸುವ ಕಾರ್ಯಗಳಲ್ಲಿ ಕೈ ಜೋಡಿಸಿವೆ. ಕೆಲವೊಂದು ಸ್ವಯಂಸೇವಾ ಸಂಸ್ಥೆಗಳು ಸರಕಾರ ಮತ್ತು ಸ್ಥಳೀಯ ದಾನಿಗಳ ಅನುದಾನದ ನೆರವು ಬಳಸಿಕೊಂಡರೆ ಇನ್ನು ಕೆಲವು ಸ್ವಯಂಸೇವಾ ಸಂಸ್ಥೆಗಳು ವಿದೇಶಿ ದೇಣಿಗೆಯನ್ನು ಬಳಸಿಕೊಂಡು ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಈ ಸ್ವಯಂಸೇವಾ ಸಂಸ್ಥೆಗಳು ಅಭಿವೃದ್ಧಿ ಕಾರ್ಯದ ಜೊತೆಗೆ ಬುಡಕಟ್ಟುಗಳ ಮೇಲಿನ ಶೋಷಣೆ, ದೌರ್ಜನ್ಯಗಳಿಗೆ ಹೋರಾಡುವ, ಸಮುದಾಯದ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಜೊತೆಗೆ ಜನರನ್ನು ಸಂಘಟಿತರನ್ನಾಗಿ ಮಾಡಿ ಅವರನ್ನು ಸಬಲೀಕರಣಗೊಳಿಸುವ ಪ್ರಕ್ರಿಯೆಡೆಗೆ ಕೊಂಡೊಯ್ಯುವ ಕೆಲಸಗಳನ್ನು ಮಾಡುತ್ತಿವೆ.

ಪ್ರಸ್ತುತ, ಇವೆಲ್ಲದರ ಪರಿಣಾಮವಾಗಿ ಹೊರಬಂದ ಬುಡಕಟ್ಟು ಅಭಿವೃದ್ಧಿಯ ಚಿತ್ರಣವನ್ನು

ಮನಿಸಿದಾಗ ಬುಟಕಟ್ಟುಗಳ ಅಭಿವೃದ್ಧಿಯ ಬಗೆಗಿನ ವೈರುಧ್ಯಗಳು ಕಂಡುಬರುವುದು ಸಹಜ. ಬುಡಕಟ್ಟು ಮುದಾಯಗಳ ಅಭಿವೃದ್ಧಿಯಾಗಿದೆ ಎಂಬ ವಾದದ ಪರವಾಗಿ ಗಮನಿಸಿದಾಗ, ಬುಡಕಟ್ಟು ಮುದಾಯಗಳಿಗೆ ಮಂಜೂರಾದ ಉಚಿತ ಭೂಮಿಗಳು, ನಿರ್ಮಾಣಗೊಂಡ ಉಚಿತ ವಸತಿಗಳು, ರಸ್ತೆ, ೀರು ಮತ್ತು ಇನ್ನಿತರ ಮೂಲಭೂತ ಸೌಕರ್ಯಗಳು, ಉಚಿತ ಔಷಧ ಮತ್ತು ಚಿಕಿತ್ಸೆಗಳು, ಉದ್ಯೋಗ ರಬೇತಿ, ಮೀಸಲಾತಿ, ಸಾಲ ಸೌಲಭ್ಯಗಳು ಹೀಗೆ ಅನೇಕ ಸುಧಾರಣೆಯ ಅಂಶಗಳು ಕಂಡು ಬರುತ್ತಿವೆ. ಇನ್ನೊಂದೆಡೆ ಬುಡಕಟ್ಟು ಸಮುದಾಯಗಳು ಅಭಿವೃದ್ಧಿಯಾಗಿಲ್ಲ ಎಂಬ ತರ್ಕದ ಪರವಾಗಿ ನಿಂತರೆ ಂದು ಹೊತ್ತಿನ ಊಟಕ್ಕೂ ಪರದಾಡುವ ಬುಡಕಟ್ಟು ಕುಟುಂಬಗಳು, ಸರಿಯಾದ ಸೂರಿಲ್ಲದ ುಡಿಸಲುಗಳು, ಅಪೌಷ್ಟಿಕಾಂಶತೆ ಮತ್ತು ಇನ್ನಿತರ ಕಾರಣಗಳಿಂದ ರೋಗ ರುಜಿನಗಳಿಂದ ನರಳುವ ನರು, ವಿದ್ಯುತ್, ರಸ್ತೆ, ನೀರು ಇನ್ನಿತರ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ತಟಸ್ಥರಾಗಿರುವಂತೆ ಕಂಡುಬರುವ ಬುಡಕಟ್ಟು ಸಮುದಾಯಗಳ ವಾಸ್ತವ ಸ್ಥಿತಿ ಅರಿವಾಗತೊಡಗುತ್ತದೆ.

೧.೨ ಅಧ್ಯಯನದ ಮಹತ್ವ

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬುಡಕಟ್ಟು ಸಮುದಾಯಗಳಾದ ಕೊರಗರು, ಮಲೆಕುಡಿಯರು ಮತ್ತು ಮರಾಠಿನಾಯ್ಕ ಸಮುದಾಯಗಳ ಪ್ರಸ್ತುತ ಸ್ಥಿತಿ-ಗತಿಗಳೇನು? ಈ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಪ್ರಕ್ರಿಯೆ ಯಾವ ರೀತಿಯಲ್ಲಿ ಸಾಗುತ್ತಿದೆ? ಸರಕಾರಗಳು ರೂಪಿಸಿರುವ ಅಭಿವೃದ್ಧಿ ಯೋಜನೆಗಳು ಪರಿಣಾಮಕಾರಿಯಾಗಿ ಬುಡಕಟ್ಟು ಜನರನ್ನು ತಲುಪುತ್ತಿವೆ? ಸ್ವಯಂ-ಸೇವಾ ಸಂಸ್ಥೆಗಳಿಂದ ಈ ಬುಡಕಟ್ಟು ಸಮುದಾಯಗಳಲ್ಲಿ ಯಾವ ರೀತಿಯ ಬದಲಾವಣೆಗಳಾಗಿವೆ? ಹೀಗೆ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಮಾಹಿತಿಗಳನ್ನು ಸಂಗ್ರಹಿಸಿ ವಿಮರ್ಶಿಸಿ ಅರ್ಥೈಸಿಕೊಳ್ಳುವುದು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಕರ್ನಾಟಕದ ಕರಾವಳಿ ಭಾಗದ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಪಶ್ಚಿಮ ಘಟ್ಟ ಅರಣ್ಯ ಪ್ರದೇಶಗಳಿಂದಲೂ ಆವೃತ್ತಗೊಂಡಿದ್ದು ಕೊರಗರು, ಮಲೆಕುಡಿಯರು ಮತ್ತು ಮರಾಠಿನಾಯ್ಕರು ಇಲ್ಲಿ ನೆಲೆ ನಿಂತಿರುವ ಪ್ರಮುಖ ಬುಡಕಟ್ಟು ಸಮುದಾಯಗಳಾಗಿವೆ. ಇವರಲ್ಲಿ ಕೊರಗರು ಈ ಭಾಗದ ಮೂಲನಿವಾಸಿಗಳೆಂದು ಅನೇಕ ಅಧ್ಯಯನಗಳಿಂದ ತಿಳಿದು ಬಂದಿದ್ದು, ಇದರ ಜೊತೆಗೆ ಕೇಂದ್ರ ಸರಕಾರವು ಕೊರಗರನ್ನು ಆದಿಮ ಬುಡಕಟ್ಟುಗಳೆಂದು (Primitive Tribal Graup) ಘೋಷಿಸಿದೆ. ಆದರೆ ಉಳಿದ ಸಮುದಾಯಗಳಿಗೆ ಹೋಲಿಸಿದಲ್ಲಿ ಕೊರಗರ ಜನಸಂಖ್ಯೆ ತುಂಬಾ ಕಡಿಮೆಯಿದ್ದು, ಈ ಕಾರಣದಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸರಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಹೆಚ್ಚಿನ ಪ್ರಮಾಣದಲ್ಲಿ ಅಭಿವೃದ್ಧಿಯೆಡೆಗೆ ವಿಶೇಷ ಕಾಳಜಿ ನೀಡಲಿಲ್ಲ ಎಂದು

ಹೇಳಬಹುದು. ಇದರ ಜೊತೆಗೆ ಈ ಜಿಲ್ಲೆಗಳಲ್ಲಿ ಬುಡಕಟ್ಟು ಸಮುದಾಯದ ಪರವಾಗಿ ಕೆಲಸ ಮಾಡುವ ಸ್ವಯಂ ಸೇವಾಸಂಸ್ಥೆಗಳು ಬೆರಳೆಣಿಕೆಯಷ್ಟೇ ಇರುವುದರಿಂದ ಈ ಜಿಲ್ಲೆಗಳಲ್ಲಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಪ್ರಕ್ರಿಯೆ ಮಂದಗತಿಯಲ್ಲಿ ಸಾಗುತ್ತಿದ್ದು, ಇವುಗಳಿಗೆ ಕಾರಣಗಳನ್ನು ತಿಳಿದುಕೊಳ್ಳುವ ಮತ್ತು ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಅಧ್ಯಯನ ಮಾಡಲಾಗಿದೆ.

ಒಟ್ಟಾರೆಯಾಗಿ ಸರಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳಿಂದ ಇಲ್ಲಿನ ಬುಡಕಟ್ಟು ಸಮುದಯಗಳ ಮೇಲೆ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ರಾಜಕೀಯ ಮತ್ತು ಆರ್ಥಿಕ ಬದಲಾವಣೆಗಳನ್ನು ಗುರುತಿಸುವುದರ ಜೊತೆಗೆ ಈ ಜಿಲ್ಲೆಗಳಲ್ಲಿರುವ ಬುಡಕಟ್ಟುಗಳ ' ಅಭಿವೃದ್ಧಿಗೆ ಸಂಬಂಧಿಸಿದಂತೆ ಸರಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಮುಂದಿರುವ ಸವಾಲುಗಳನ್ನು ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಮಹತ್ವವಾಗಿದೆ.

೧.೩. ಅಧ್ಯಯನದ ಉದ್ದೇಶಗಳು:

ಪ್ರಸ್ತುತ ಅಧ್ಯಯನವು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳ ಪಾತ್ರ ಕುರಿತು ಅಧ್ಯಯನ ನಡೆಸಲಾಗಿದೆ. ಈ ಜಿಲ್ಲೆಗಳಲ್ಲಿರುವ ಬುಡಕಟ್ಟುಗಳ ಸಮಸ್ಯೆಗೆ ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ಯಾವ ರೀತಿ ಅಭಿವೃದ್ಧಿ ನೀತಿಗಳು ಯೋಜನೆಗಳನ್ನು ಕೈಗೊಂಡಿದೆ? ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸರಕಾರ, ಸ್ವಯಂಸೇವಾ ಸಂಸ್ಥೆಗಳು ಮತ್ತು ಬುಡಕಟ್ಟುಗಳು ತಮ್ಮನ್ನು ತಾವು ಯಾವ ರೀತಿ ತೊಡಗಿಸಿಕೊಂಡಿವೆ? ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ಅಧ್ಯಯನ ನಡೆಸಲಾಗಿದೆ.

೧. ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸರಕಾರದ ರೂಪಿಸಿರುವ ಅಭಿವೃದ್ಧಿ ಕಾರ್ಯಕ್ರಮಗಳು ಈ ಪ್ರದೇಶದ ಆದಿವಾಸಿಗಳಿಗೆ ಎಷ್ಟರ ಮಟ್ಟಿಗೆ ತಲುಪಿವೆ ಮತ್ತು ಪ್ರಯೋಜನಕಾರಿಯಾಗಿವೆ ಎಂಬುದನ್ನು ತಿಳಿದುಕೊಳ್ಳಲಾಗಿದೆ.

೨. ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸ್ವಯಂಸೇವಾ ಸಂಸ್ಥೆಗಳ ಪಾತ್ರವೇನು? ಅವು ಬುಡಕಟ್ಟುಗಳ ಅಭಿವೃದ್ದಿಗಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ? ಅದರ ಪರಿಣಾಮಗಳೇನು ಎಂಬುದನ್ನು ಕಂಡುಕೊಳ್ಳಲಾಗಿದೆ.

೩. ವರ್ತಮಾನದ ಸಂದರ್ಭದಲ್ಲಿ, ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸ್ವಯಂಸೇವಾ ಸಂಸ್ಥೆಗಳ ನಿರ್ವಹಣೆ, ಆರ್ಥಿಕತೆ ಮತ್ತು ಹೊಸ ಬದಲಾವಣೆಗಳನ್ನು ಅರ್ಥೈಸಿಕೊಳ್ಳುವುದು.

೪. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಬುಡಕಟ್ಟು ಸಮುದಾಯಗಳ ನಡುವಿನ ಮತ್ತು ಪ್ರಾದೇಶಿಕ ಬದಲಾವಣೆಗಳನ್ನು ಗುರುತಿಸುವುದು.

೧.೪.ಅಧ್ಯಯನದ ಪ್ರಕಲ್ಪನೆಗಳು

೧. ಸರಕಾರ ಅನುಷ್ಠಾನಗೊಳಿಸುವ ಬುಡಕಟ್ಟು ಅಭಿವೃದ್ಧಿ ಯೋಜನೆಗಳನ್ನು ಬುಡಕಟ್ಟು ಜನರಿಗೆ ತಲುಪಿಸುವಲ್ಲಿ ಬೆರಳೆಣಿಕೆಯ ಸ್ವಯಂ ಸೇವಾ ಸಂಸ್ಥೆಗಳು ಯಶಸ್ವಿಯಾಗಿವೆ ಎಂದು ಹೇಳಬಹುದು.

೨. ಸರಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಹಮ್ಮಿಕೊಂಡಿರುವ ಕೆಲ ಅಭಿವೃದ್ಧಿ ಯೋಜನೆಗಳು, ನೀತಿಗಳು ಬುಡಕಟ್ಟುಗಳ ಅಭಿವೃದ್ಧಿಗೆ ಪೂರಕವಾಗಿವೆ. ಉದಾಹರಣೆಗೆ ಶಿಕ್ಷಣ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಸುಧಾರಣೆಗಳು ಎಂದು ಹೇಳಬಹುದು.

೩. ಸರಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಹಮ್ಮಿಕೊಂಡಿರುವ ಅಭಿವೃದ್ಧಿ ಪೂರಕ ಯೋಜನೆಗಳಿಂದ ಬುಡಕಟ್ಟುಗಳಲ್ಲಿ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಹಾಗು ರಾಜಕೀಯ ಕ್ಷೇತ್ರಗಳಲ್ಲಿ ಆಗಿರುವ ಅಭಿವೃದ್ಧಿ ಕಡಿಮೆ.

೪. ಪ್ರಸ್ತುತ ಬುಡಕಟ್ಟುಗಳ ಅಭಿವೃದ್ಧಿಗೆ ತೊಡಕಾಗಿರುವ ಹೊಸ ಸವಾಲುಗಳನ್ನು ಎದುರಿಸುವಲ್ಲಿ ಸರಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಸಫಲವಾಗಿದೆ.

೧.೫.ಅಧ್ಯಯನದ ಮಿತಿಗಳು

* ಅಧ್ಯಯನದ ಸ್ಪಷ್ಟತೆ ಮತ್ತು ಸೂಕ್ಷ್ಮತೆಗಾಗಿ ಕೇವಲ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಬುಡಕಟ್ಟು ಸಮುದಾಯಗಳಾದ ಕೊರಗರು, ಮಲೆಕುಡಿಯರು ಮತ್ತು ಮರಾಠಿ ನಾಯ್ಕ ಸಮುದಾಯಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ.ಕೊರಗರಲ್ಲಿ ೧೦೯, ಮಲೆಕುಡಿಯಲ್ಲಿ ೧೧೬ ಹಾಗೂ ಮರಾಠಿ ನಾಯ್ಕ ಸಮುದಾಯದ ೧೦೯ ಕುಟುಂಬಗಳನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ
* ಅಧ್ಯಯನವನ್ನು ಮತ್ತಷ್ಟು ಸೂಕ್ಷ್ಮತೆಗೊಳಪಡಿಸಿ ನೈಜ ಅಂಶಗಳನ್ನು ಹೊರತೆಗೆಯುವ ಸಲುವಾಗಿ ಕೊರಗರು ೯ ಹಾಡಿಗಳನ್ನು, ಮಲೆಕಡಿಯರ ೮ ಹಾಡಿಗಳನ್ನು ಹಾಗೂ ಮರಾಠಿನಾಯ್ಕ ಸಮುದಾಯದ ೭ ಹಾಡಿಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.
* ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಕಛೇರಿಗಳು, ಕಾರ್ಕಳ ಮತ್ತು ಬೆಳ್ತಂಗಡಿ ತಾಲೂಕು ಸಮಾಜ ಕಲ್ಯಾಣ ಇಲಾಖೆಗಳು, ಸಮಗ್ರ ಗ್ರಾಮೀಣ ಆಶ್ರಮ, ನಾಗರಿಕ ಸೇವಾ ಟ್ರಸ್ಟ್, ಅಕ್ಷರ ಸ್ವಯಂಸೇವಾ ಸಂಸ್ಥೆ ಮತ್ತು ಸ್ಫೂರ್ತಿ ಸ್ವಯಂಸೇವಾ ಸಂಸ್ಥೆಗಳ ಬಗ್ಗೆ ಅಧ್ಯಯನಿಸಲು ಕ್ಷೇತ್ರ ಕಾರ್ಯವನ್ನು ಕೈಗೊಂಡು ಅಧ್ಯಯನ ನಡೆಸಲಾಗಿದೆ.

೧.೬.ಪರಿಶೋಧಿಸಬೇಕಾದ ಸಮಸ್ಯೆ

ಇಂದು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಬಹುತೇಕ ಬುಡಕಟ್ಟುಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಸರಕಾರಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ ಸಹ ಅಭಿವೃದ್ಧಿಯ ವೇಗ ನಿರೀಕ್ಷಿತ ಮಟ್ಟದಲ್ಲಿ ಸಾಗುತ್ತಿಲ್ಲ. ಸರಕಾರ ಅನೇಕ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತಂದಿದೆ. ಆದರೆ ಅದರ ಫಲಿತಾಂಶಗಳು ನಿರೀಕ್ಷಿತ ಮಟ್ಟದಲ್ಲಿ ಹೊರಬರುವಲ್ಲಿ ವಿಫಲವಾಗಿವೆ. ಜೊತೆಗೆ ಸ್ವಯಂ ಸೇವಾ ಸಂಸ್ಥೆಗಳು ಅನೇಕ ಸಮಸ್ಯೆ ಮತ್ತು ಸವಾಲುಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿವೆ. ಪ್ರಸ್ತುತ ಅಧ್ಯಯನದಲ್ಲಿ ಸರಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಎದುರಿಸುತ್ತಿರುವ ಸಮಸ್ಯೆಗಳ ಕಡೆಗೂ ಗಮನ ಹರಿಸಲಾಗಿದೆ.

೧.೭.ಅಧ್ಯಯನದ ವ್ಯಾಪ್ತಿ

ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳ ಪಾತ್ರದ ಬಗೆಗಿನ ಅಧ್ಯಯನವು ಸೂಕ್ಷ್ಮವೂ, ಆಕರ ಸಾಮಾಗ್ರಿಯೂ ಆಗಬೇಕಾದರೆ ಅವರನ್ನು ಒಂದು ಸೀಮಿತ ಚೌಕಟ್ಟಿನಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ. ಅಧ್ಯಯನದ ಕಾರ್ಯಾಕ್ಷೇತ್ರವು ವಿಸ್ತಾರವಾದ ಹಾಗೆ ಸೂಕ್ಷ್ಮ ಒಳನೋಟಗಳು ಸುಲಭವಾಗಿ ಅರ್ಥವಾಗುವುದಿಲ್ಲ. ಈ ಕಾರಣದಿಂದ, ಪ್ರಸ್ತುತ ಅಧ್ಯಯನಕ್ಕಾಗಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳನ್ನು ಮಾತ್ರ ಪರಿಗಣಿಸಿ, ಇಲ್ಲಿನ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳ ಪಾತ್ರದ ಬಗ್ಗೆ ಅಧ್ಯಯನಕ್ಕೆ ಮಿತಿಗೊಳಿಸಲಾಗಿದೆ.

ಕೊರಗ ಸಮದಾಯದ ಅಧ್ಯಯನಕ್ಕೆ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕುಂಭಾಶಿಯ ೦೭ ಕುಟುಂಬಗಳು, ಕಾರ್ಕಳ ತಾಲೂಕಿನ ಮರಿಣಾಪುರದ ೧೫ ಕುಟುಂಬಗಳು, ಸಚ್ಚರಿಪೇಟೆ ಗ್ರಾಮದ ೧೫ ಕುಟುಂಬಗಳು, ಹೆಬ್ರಿ ಬಡಗುಡ್ಡೆ ಕೊರಗ ಕಾಲೊನಿಯ ೧೩ ಕುಟುಂಬಗಳು, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ನಾವುರ ಗ್ರಾಮದ ೦೪ ಕುಟುಂಬಗಳು, ಮಂಗಳೂರು ತಾಲೂಕಿನ ಕೋಡಿಕಲ್ ಗ್ರಾಮದ ೨೦ ಕುಟುಂಬಗಳು, ಸುರತ್ಕಲ್ ಬಳಿಯ ಕೃಷ್ಣಾಪುರದ ೧೫ ಕುಟುಂಬಗಳು, ಮುಕ್ಕ ಗ್ರಾಮದ ೧೦ ಕುಟುಂಬಗಳು ಮತ್ತು ಕಂಕನಾಡಿ ಕೊರಗರ ಕಾಲೋನಿಯಲ್ಲಿರುವ ೧೦ ಕುಟುಂಬಗಳು ಹೀಗೆ ಉಡುಪಿ ಮತ್ತ ಮಂಗಳೂರ ಜಿಲ್ಲೆಗಳ ಒಟ್ಟು ೧೧೯ ಕೊರಗ ಕುಟುಂಬಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಮಲೆಕುಡಿಯ ಸಮದಾಯದ ಅಧ್ಯಯನಕ್ಕೆ ಉಡುಪಿ ಜಿಲ್ಲೆಯ ಈದು ಗ್ರಾಮದ ಕನ್ಯಾಲ್‌ದ ೦೮ ಮಲೆಕುಡಿಯ ಕುಟುಂಬಗಳು, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಕುತ್ಲೂರು ಗ್ರಾಮದ ಪಂಜಾಲುವಿನ ೨೪ ಕುಟುಂಬಗಳು ಸುಲ್ಕೇರಿ ಗ್ರಾಮದ ನಾಯ್ದುಗುರಿಯ ೧೮ ಕುಟುಂಬಗಳು, ಸವಣಾಲು ಗ್ರಾಮದ ಮೌಲಾಜೆಯ ೦೮ ಕುಟುಂಬಗಳು, ನಾವುರ ಗ್ರಾಮದ ಬಲ್ಯದ ೧೦

ಟುಂಬಗಳು, ಬೆಳ್ತಂಗಡಿಯ ಬೆಲ್ಲ ಎಂಬಲ್ಲಿಯ ೧೫ ಕುಟುಂಬಗಳು. ಬಂಗಾಡಿ ಗ್ರಾಮದ ಸೂರ್ಲಿಯ ೩ ಕುಟುಂಬಗಳು, ಬೆಳ್ತಂಗಡಿಯ ನೆರಿಯ ಬಳಿಯ ಅನೀರು ಎಂಬಲ್ಲಿ ೩೦ ಕುಟುಂಬಗಳು ಹೀಗೆ ಟ್ಟು ೧೧೬ ಮಲೆ ಕುಡಿಯ ಕುಟುಂಬಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಮರಾಠಿ ನಾಯ್ಕ ಸಮುದಾಯದ ಅಧ್ಯಯನಕ್ಕೆ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಬೈಲೂರು ಗ್ರಾಮದ ಸಾಣೆಕಲ್ಲು ಬಳಿಯ ಪಂಚನಬೆಟ್ಟು ಎಂಬಲ್ಲಿಯ ೨೦ ಮರಾಠಿ ನಾಯ್ಕ ಕುಟುಂಬಗಳು, ತೆಳ್ಳಾರು ಗ್ರಾಮದ ೭೫ ಕುಟುಂಬಗಳು, ದುರ್ಗಾ ಗ್ರಾಮದ ೧೫ ಕುಟುಂಬಗಳು, ವರಂಗ ಗ್ರಾಮದ ಕಾಡು ಹೊಳೆಯ ೨೨ ಕುಟುಂಬಗಳು, ಹೆಬ್ರಿಯ ಕುಚ್ಚೂರು ಗ್ರಾಮದ ೧೫ ಕುಟುಂಬಗಳು, ಉಡುಪಿ ತಾಲೂಕಿನ ಸಗ್ರಿ ಗ್ರಾಮದ ೧೨ ಕಟುಂಬಗಳು, ಕುಕ್ಕೆಹಳ್ಳಿ ಗ್ರಾಮದ ೧೦ ಕುಟುಂಬಗಳು ಒಟ್ಟು ೧೦೯ ಮರಾಠಿ ನಾಯ್ಕ ಕುಟುಂಬಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿಯ ಆದಿವಾಸಿಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಕಛೇರಿಗಳು, ಕಾರ್ಕಳ ಮತ್ತು ಬೆಳ್ತಂಗಡಿ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಗಳು, ಸಮಗ್ರ ಗ್ರಾಮೀಣ ಆಶ್ರಮ, ನಾಗರಿಕ ಸೇವಾ ಟ್ರಸ್ಟ್, ಅಕ್ಷರ ಸ್ವಯಂ ಸೇವಾ ಸಂಸ್ಥೆ ಮತ್ತು ಸ್ಫೂರ್ತಿ ಸ್ವಯಂಸೇವಾ ಸಂಸ್ಥೆಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

೧.೮.ಅಧ್ಯಯನ ವಿಧಾನ:

ಪ್ರಸ್ತುತ ಅಧ್ಯಯನಕ್ಕೆ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಪರಿಸರದಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಕೆಲಸ ಮಾಡುತ್ತಿರುವ ಸರಕಾರಿ ಇಲಾಖೆಗಳು ಮತ್ತು ಸ್ವಯಂಸೇವಾ ಸಂಸ್ಥೆಗಳನ್ನು ಹಾಗೂ ಅವುಗಳ ವ್ಯಾಪ್ತಿಯಲ್ಲಿ ಬರುವ ಬುಡಕಟ್ಟುಗಳ ಸಮುದಾಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಮುಖ್ಯವಾಗಿ ಸರಕಾರಿ ಇಲಾಖೆಗಳು ಮತ್ತು ಸ್ವಯಂಸೇವಾ ಸಂಸ್ಥೆಗಳಿಂದ ಬುಡಕಟ್ಟುಗಳ ಅಭಿವೃದ್ಧಿ ಯಾವ ಕ್ಷೇತ್ರಗಳಲ್ಲಿ ಆಗಿವೆ ಮತ್ತು ಇನ್ನು ಯಾವ ಕ್ಷೇತ್ರಗಳಲ್ಲಿ ಅಭಿವೃದ್ಧಿಯಾಗಬೇಕಿದೆ ಎಂಬುವುದರ ಮೇಲೆ ಅಧ್ಯಯನ ಮಾಡಲಾಗಿದೆ. ಕೊರಗ, ಮಲೆಕುಡಿಯ ಹಾಗೂ ಮರಾಠಿ ನಾಯ್ಕ ಸಮುದಾಯದಲ್ಲಿ ನಡೆದ ಅಧ್ಯಯನಗಳನ್ನು ಗಮನಿಸಿ, ಅವಗಳನ್ನು ಆಕರ ಸಾಮಗ್ರಿಯಾಗಿ ಬಳಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನ ಪೂರೈಸಲು ಈ ಕೆಳಗಿನ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ.

೧. ಪ್ರಶ್ನಾವಳಿ ವಿಧಾನ

೨. ಸಂದರ್ಶನ ವಿಧಾನ

೩. ಮಾದರಿಗಳ ಆಯ್ಕೆ (ನಮೂನೆ ವಿಧಾನ)

೪. ಸಹಭಾಗಿತ್ವ ವಿಧಾನ

೫. ಗುಂಪು ಚರ್ಚೆ ಮತ್ತು ಸಂದರ್ಶನ

೬. ಅವಲೋಕನ ವಿಧಾನ

೭. ಛಾಯಾಚಿತ್ರ ಮತ್ತು ಧ್ವನಿಮುದ್ರಣ

೧.೮.೧ ಪ್ರಶ್ನಾವಳಿ ವಿಧಾನ:

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಸರಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಕೈಗೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳಿಂದ ಬುಡಕಟ್ಟುಗಳಲ್ಲಿ ಉಂಟಾದ ಬದಲಾವಣೆಗಳನ್ನು ಕಂಡುಕೊಳ್ಳುವ ಹಾಗೂ ಸಮುದಾಯದ ಅಭಿವೃದ್ಧಿಗೆ ಸಂಬಂಧಿಸಿದ ವರ್ತಮಾನದ ಸ್ಥಿತಿಗಳನ್ನು ಕಂಡುಕೊಳ್ಳುವ ಸಲುವಾಗಿ ಕೊರಗರ ೯ ಮಾದರಿ ಗ್ರಾಮಗಳಲ್ಲಿಯ ೧೦೯ ಕುಟುಂಬಗಳನ್ನು, ಮಲೆಕುಡಿಯರ ೮ ಗ್ರಾಮಗಳಲ್ಲಿಯ ೧೧೬ ಕುಟುಂಬಗಳನ್ನು ಹಾಗೂ ಮರಾಠಿ ನಾಯಕರ ೭ ಗ್ರಾಮಗಳಲ್ಲಿಯ ೧೦೯ ಮಾದರಿ ಕುಟುಂಬಗಳನ್ನು ಆಯ್ಕೆ ಮಾಡಿಕೊಂಡು ಅವರ ಸಾಮಾಜಿಕಾರ್ಥಿಕ ಸಂಗತಿಗಳನ್ನು ಅಂಕಿ ಸಂಖ್ಯೆಗಳ ಮೂಲಕ ತಿಳಿಸುವ ಪ್ರಯತ್ನ ಮಾಡಿದ್ದೇನೆ. ಕೊರಗ, ಮಲೆಕುಡಿಯ ಹಾಗೂ ಮರಾಠಿ ನಾಯ್ಕ ಸಮುದಾಯದವರಿಂದ ಮಾಹಿತಿ ಸಂಗ್ರಹಿಸಲು ಒಂದು ಪ್ರಶ್ನಾವಳಿಯನ್ನು, ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ನಿರತರಾದ ಸರಕಾರದ ವಿವಿಧ ಇಲಾಖೆಗಳ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಲು ಒಂದು ಪ್ರಶ್ನಾವಳಿಯನ್ನು ಹಾಗೂ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ನಿರತರಾದ ಸ್ವಯಂ ಸೇವಾ ಸಂಸ್ಥೆಗಳಿಂದ ಮಾಹಿತಿ ಸಂಗ್ರಹಿಸಲು ಒಂದು ಪ್ರಶ್ನಾವಳಿಯನ್ನು ಹೀಗೆ ಮೂರು ವಿವಿಧ ರೀತಿಯ ಪ್ರಶ್ನಾವಳಿಗಳನ್ನು ಸಿದ್ದಪಡಿಸಿಕೊಂಡು ಮಾಹಿತಿಯನ್ನು ಸಂಗ್ರಹಿಸಿ ಆ ಮಾಹಿತಿಯನ್ನು ಪ್ರಬಂಧದಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಈ ಅಧ್ಯಯನಕ್ಕೆ ಬಳಸಿಕೊಂಡಿರುವ ಎಲ್ಲ ಪ್ರಶ್ನಾವಳಿಯ ಮಾದರಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

೧.೮.೨.ಸಂದರ್ಶನ ವಿಧಾನ;

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿರುವ ಕೊರಗ, ಮಲೆಕುಡಿಯರ ಹಾಗೂ ಮರಾಠಿ ನಾಯ್ಕ ಸಮುದಾಯಗಳ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಆಯಾ ಸಮುದಾಯಗಳ ಪ್ರಮುಖರೊಂದಿಗೆ ಚರ್ಚೆ ನಡೆಸಲಾಯಿತು. ಇಲ್ಲಿ ಕೇವಲ ನಾವು ಪ್ರಶ್ನೆ ಕೇಳುವವರಾಗಿ ಅವರು ಉತ್ತರಿಸುವವರಾಗಿ ಇರಲಿಲ್ಲ. ವಿಷಯದ ಬಗ್ಗೆ ಸುದೀರ್ಘ ಚರ್ಚೆ ನಡೆಸಲಾಯಿತು. ಕೊರಗ, ಮಲೆಕುಡಿಯರ ಹಾಗೂ ಮರಾಠಿ ನಾಯ್ಕ ಸಮುದಾಯಗಳ ಪ್ರಮುಖರ ಅಭಿಪ್ರಾಯಗಳನ್ನು ಹೊರಗೆಡವಲು ಸಂದರ್ಶನವು ಬಹಳ ಸಹಕಾರಿಯಾಯಿತು. ಅವರಿಂದ ಬಂದ ಅಭಿಪ್ರಾಯಗಳನ್ನು ದಾಖಲು ಮಾಡಿಕೊಳ್ಳಲಾಯಿತು. ಇದರಿಂದ ನಮಗೆ ಕೊರಗ, ಮಲೆಕುಡಿಯರ ಹಾಗೂ ಮರಾಠಿ ನಾಯ್ಕ ಸಮುದಾಯಗಳ ಜೀವನ ಕ್ರಮ. ಅವರ ಆಶೋತ್ತರಗಳು ಮತ್ತು ಅವರ ವಿಚಾರಗಳೇನು? ಸರಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಹಮ್ಮಿಕೊಂಡಿರುವ ಅಭಿವೃದ್ದಿ ಕಾರ್ಯಕ್ರಮಗಳ ಬಗೆಗೆ ಕೊರಗ, ಮಲೆಕುಡಿಯರ ಹಾಗೂ ಮರಾಠಿ

ನಾಯ್ಕ ಸಮುದಾಯಗಳ ಅಭಿಪ್ರಾಯಗಳೇನು ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಂಡು ಪ್ರಬಂಧ ಸಿದ್ಧಪಡಿಸಲು ಕ್ರಮವಹಿಸಲಾಯಿತು. ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು, ಸರಕಾರದ ಐ.ಟಿ.ಡಿ.ಪಿಯ ಎಲ್ಲ ಅಧಿಕಾರಿಗಳನ್ನು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸದಸ್ಯರನ್ನು ಹಾಗೂ ಆಯಾ ಸ್ವಯಂಸೇವಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬುಡಕಟ್ಟು ಸಮುದಾಯದ ಸದಸ್ಯರನ್ನು ಹಾಗೂ ಕೊರಗ, ಮರಾಠಿ ನಾಯ್ಕ ಮತ್ತು ಮಲೆಕುಡಿಯ ಸಮುದಾಯದ ಒಟ್ಟು ೩೩೪ ಬುಡಕಟ್ಟುಗಳ ಆಯ್ದ ವ್ಯಕ್ತಿಗಳನ್ನು ವಿಸ್ತ್ರತವಾದ ಪ್ರಶ್ನಾವಳಿಯನ್ನು ಬಳಸಿ ಸಂದರ್ಶನಕ್ಕೆ ಒಳಪಡಿಸಿ, ಅವರಿಂದ ಸಂಗ್ರಹಿಸಿದ ಎಲ್ಲ ಮಾಹಿತಿಯನ್ನು ಈ ಪ್ರಬಂಧದಲ್ಲಿ ಬಳಸಿಕೊಂಡಿದ್ದೇನೆ.

೧.೮.೩.ಮಾದರಿಗಳ ಆಯ್ಕೆ :

ಉಡುಪಿ ಜಿಲ್ಲೆಯ ಕಾರ್ಕಳ, ಉಡುಪಿ, ಕುಂದಾಪುರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಸುಳ್ಯ, ಮಂಗಳೂರು, ಪುತ್ತೂರು, ಬಂಟ್ವಾಳ ತಾಲೂಕುಗಳಲ್ಲಿ ವಾಸಿಸುತ್ತಿರುವ ಕೊರಗ, ಮರಾಠಿ ನಾಯ್ಕ ಹಾಗೂ ಮಲೆಕುಡಿಯ ಬುಡಕಟ್ಟುಗಳ ಅಭಿವೃದ್ಧಿಗಾಗಿ ಸರಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಹಮ್ಮಿಕೊಂಡಿರುವ ಕೆಲ ಪ್ರದೇಶಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಕಾಡಿನ ಮಧ್ಯದಲ್ಲಿರುವ, ಕಾಡಿನ ಅಂಚಿನಲ್ಲಿರುವ ಹಾಗೂ ನಗರಗಳಿಗೆ ಸಮೀಪವಿರುವ ಕೊರಗರ, ಮಲೆಕುಡಿಯರ ಹಾಗೂ ಮರಾಠಿ ನಾಯ್ಕ ಸಮುದಾಯಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಬದುಕು ಹೇಗೆ ಭಿನ್ನವಾಗಿ ಕಾಣುತ್ತದೆ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಕೊರಗರ ಅಧ್ಯಯನಕ್ಕೆ ಒಟ್ಟು ೯ ಗ್ರಾಮಗಳನ್ನು ಆಯ್ಕೆಮಾಡಿಕೊಳ್ಳಲಾಗಿದ್ದು ಅದರಲ್ಲಿ ೩ ಗ್ರಾಮಗಳು ನಗರ ಪ್ರದೇಶಗಳಿಗೆ ಹತ್ತಿರವಿರುವ ಹಾಗೂ ಕಾಡಿನಲ್ಲಿರುವ ೬ ಗ್ರಾಮಗಳ ಒಟ್ಟು ೧೧೯ ಕುಟುಂಬಗಳನ್ನು ಈ ಅಧ್ಯಯನಕ್ಕೆ ಒಳಪಡಿಸಿದ್ದು ೧೧೯ ಕುಟುಂಬಗಳಲ್ಲಿ ೧೫ ಕುಟುಂಬಗಳು ಮಧ್ಯಮ ವರ್ಗದಲ್ಲಿದ್ದು, ೨೦ ಕುಟುಂಬಗಳು ಬಡತನದಲ್ಲಿದ್ದು ಉಳಿದ ೭೪ ಕುಟುಂಬಗಳು ಬಡತನ ರೇಖೆಗಿಂತ ಕೆಳಸ್ಥರದಲ್ಲಿವೆ. ಮಲೆಕುಡಿಯರ ಅಧ್ಯಯನಕ್ಕೆ ಒಟ್ಟು ೮ ಗ್ರಾಮಗಳನ್ನು ಆಯ್ಕೆಮಾಡಿಕೊಳ್ಳಲಾಗಿದ್ದು ಅದರಲ್ಲಿ ೨ ಗ್ರಾಮಗಳು ನಗರ ಪ್ರದೇಶಗಳಿಗೆ ಹತ್ತಿರವಿರುವ ಹಾಗೂ ಕಾಡಿನಲ್ಲಿರುವ ೬ ಗ್ರಾಮಗಳ ಒಟ್ಟು ೧೧೬ ಕುಟುಂಬಗಳನ್ನು ಈ ಅಧ್ಯಯನಕ್ಕೆ ಒಳಪಡಿಸಿದ್ದು ೧೧೬ ಕುಟುಂಬಗಳಲ್ಲಿ ೩೭ ಕುಟುಂಬಗಳು ಮಧ್ಯಮವರ್ಗದಲ್ಲಿದ್ದು, ೪೦ ಕುಟುಂಬಗಳು ಬಡತನದಲ್ಲಿದ್ದು ಉಳಿದ ೩೯ ಕುಟುಂಬಗಳು ಬಡತನ ರೇಖೆಗಿಂತ ಕೆಳಸ್ಥರದಲ್ಲಿವೆ. ಮರಾಠಿ ನಾಯ್ಕ ಸಮುದಾಯದ ಅಧ್ಯಯನಕ್ಕೆ ಒಟ್ಟು ೭ ಗ್ರಾಮಗಳನ್ನು ಆಯ್ಕೆಮಾಡಿಕೊಳ್ಳಲಾಗಿದ್ದು ಅದರಲ್ಲಿ ೩ ಗ್ರಾಮಗಳು ನಗರ ಪ್ರದೇಶಗಳಿಗೆ ಹತ್ತಿರವಿರುವ ಹಾಗೂ ಕಾಡಿನಲ್ಲಿರುವ ೪ ಗ್ರಾಮಗಳ ಒಟ್ಟು ೧೧೯ ಕುಟುಂಬಗಳನ್ನು ಈ ಅಧ್ಯಯನಕ್ಕೆ ಒಳಪಡಿಸಿದ್ದು ೧೧೯ ಕುಟುಂಬಗಳಲ್ಲಿ ೨೫ ಕುಟುಂಬಗಳು

ಧ್ಯಮವರ್ಗದಲ್ಲಿದ್ದು, ೫೦ ಕುಟುಂಬಗಳು ಬಡತನದಲ್ಲಿದ್ದು ಉಳಿದ ೩೪ ಕುಟುಂಬಗಳು ಬಡತನ ೇಖೆಗಿಂತ ಕೆಳಸ್ಥರದಲ್ಲಿವೆ.

೧.೮.೪.ಸಹಭಾಗಿತ್ವ ವಿಧಾನ:

ಕೊರಗ, ಮಲೆಕುಡಿಯರ ಹಾಗೂ ಮರಾಠಿ ನಾಯ್ಕ ಸಮುದಾಯಗಳ ಕೆಲವು ಆಚರಣೆಗಳು, ಂಸ್ಕಾರಗಳಲ್ಲಿ ಹಾಗೂ ಮದುವೆಗಳು ನಡೆಯುವ ಸಂದರ್ಭದಲ್ಲಿ ನೇರವಾಗಿ ಭಾಗವಹಿಸಿ ಅದಕ್ಕೆ ಂಬಂಧ ಪಟ್ಟ ಮಾಹಿತಿಯನ್ನು ಕಲೆಹಾಕಲಾಗಿದೆ. ಹಾಗೆಯೇ ಕೃಷಿ, ಕೃಷಿಕೂಲಿ, ಅವರು ಅನುಸರಿಸತ್ತಿರುವ ವ್ರತ್ತಿಗಳಲ್ಲಿ, ವ್ಯಾಪಾರ ವ್ಯಯಹಾರ ಮುಂತಾದ ಚಟುವಟಿಕೆಗಳಲ್ಲಿ ಕೊರಗ, ಮಲೆಕುಡಿಯ ಹಾಗೂ ಮರಾಠಿ ನಾಯ್ಕ ಸಮುದಾಯಗಳು ಹೇಗೆ ಕಾರ್ಯ ನಿರ್ವಹಿಸುತ್ತಿವೆ ಎಂಬುದನ್ನು ಖುದ್ದಾಗಿ ವೀಕ್ಷಣೆ ಮಾಡಲಾಯಿತು. ಈ ವಿಧಾನದ ಮೂಲಕ ಆಯಾ ಸಮುದಾಯಗಳ ಸೂಕ್ಷ್ಮತೆಗಳನ್ನು ಅರಿಯುವುದರ ಜೊತೆಗೆ ಹಲವಾರು ಮಾಹಿತಿಯನ್ನು ಸಂಗ್ರಹಿಸಿ ಅವುಗಳನ್ನು ಈ ಪ್ರಬಂಧದಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಜೊತೆಗೆ ಬುಡಕಟ್ಟುಗಳ ಅಭಿವೃದ್ದಿಯಲ್ಲಿ ತೊಡಗಿಕೊಂಡಿರುವ ಸರಕಾರಿ ಇಲಾಖೆಗಳ ಅಧಿಕಾರಿಗಳ ಮತ್ತು ಸ್ವಯಂಸೇವಾ ಸಂಸ್ಥೆಗಳ ಜೊತೆ ಕೆಲವು ದಿನಗಳನ್ನು ಕಳೆಯುವುದರ ಜೊತೆಗೆ ಅವರು ಈ ಪ್ರದೇಶದ ಬುಡಕಟ್ಟುಗಳ ಅಭಿವೃದ್ದಿಗೆ ಹಾಕಿಕೊಳ್ಳಲು ಯೋಜನೆಗಳ ಬಗೆಗೆ ಮಾಹಿತಿ ಪಡೆದುಕೊಂಡು ಪ್ರಬಂಧದಲ್ಲಿ ಪ್ರಸ್ತಾಪಿಸಿದ್ದೇನೆ

೧.೮.೫.ಗುಂಪು ಚರ್ಚೆ:

ಕೊರಗ, ಮಲೆಕುಡಿಯರ ಹಾಗೂ ಮರಾಠಿ ನಾಯ್ಕ ಸಮುದಾಯಗಳನ್ನು ಭಾರತ ಸರ್ಕಾರ ಪರಿಶಿಷ್ಟ ಪಂಗಡಕ್ಕೆ ಸೇರಿಸಿದ ನಂತರ ಮೀಸಲಾತಿ ಸೌಲಭ್ಯಕ್ಕನುಗುಣವಾಗಿ ಸರ್ಕಾರವು ನೀಡಿರುವ ಸೌಲಭ್ಯಗಳನ್ನು ಇವರು ಹೇಗೆ ಸದುಪಯೋಗ ಹಾಗೂ ದುರಪಯೋಗ ಪಡಿಸಿಕೊಳ್ಳುತ್ತಿದ್ದಾರೆ? ಸರ್ಕಾರದ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಅಭಿವೃದ್ದಿಯಿಂದ ಹಾಗೂ ಇತರೆ ಸೌಲಭ್ಯಗಳಿಂದ ಅವರಲ್ಲಿ ಆಗಿರುವ ಸುಧಾರಣೆಗಳೇನು? ಎಂಬುದನ್ನು ತಿಳಿದುಕೊಳ್ಳಲು ಕೊರಗ, ಮಲೆಕುಡಿಯರ ಹಾಗೂ ಮರಾಠಿ ನಾಯ್ಕ ಸಮುದಾಯಗಳ ಹಿರಿಯರ ಮತ್ತು ಯುವಕರ ಜೊತೆ ಸೇರಿ ನಿಶ್ಚಿತ ಪ್ರಶ್ನಾವಳಿ ಬಳಸಿಕೊಂಡು ಗುಂಪು ಚರ್ಚೆಯ ಮೂಲಕ ಮಾಹಿತಿ ಸಂಗ್ರಹಿಸಿ, ಆ ಮಾಹಿತಿಯನ್ನು ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಜೊತೆಗೆ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಸಮಾಜ ಕಲ್ಯಾಣಾಧಿಕಾರಿಗಳು, ಐ.ಟಿ.ಡಿ.ಪಿ. ಅಧಿಕಾರಿಗಳು, ಜಿಲ್ಲಾ ಹಾಗೂ ತಾಲೂಕು ಪಂಚಾಯತಿಗಳ ಕಾರ್ಯನಿರ್ವಹಣಾಧಿಕಾರಿಗಳ ಮತ್ತು ಸ್ವಯಂಸೇವಾ ಸಂಸ್ಥೆಗಳ ಸದಸ್ಯರ ಜೊತೆಗೆ ಚರ್ಚಿಸಿ, ಚರ್ಚಿಸಿದ ಮಾಹಿತಿಗಳನ್ನು ಪ್ರಬಂಧದಲ್ಲಿ ವ್ಯಕ್ತಪಡಿಸಿದ್ದೇನೆ.

೧.೮.೬ ಅವಲೋಕನ ವಿಧಾನ :

ಕೊರಗ, ಮಲೆಕುಡಿಯರ ಹಾಗೂ ಮರಾಠಿ ನಾಯ್ಕ ಸಮುದಾಯಗಳ ಆರ್ಥಿಕ ಹಾಗೂ ಸಮಾಜಿಕ ಚಟುವಟಿಕೆಗಳನ್ನು ಅವರ ದಿನನಿತ್ಯದ ಉತ್ಪಾದನೆ, ಉಪಜೀವನದಲ್ಲಿ ಅವರ ವೆಚ್ಚಗಳು, ಬಂದು ವೆಚ್ಚಗಳು, ಮತ್ತು ಹವ್ಯಾಸಗಳ ಅವಲೋಕನ ಮಾಡಲಾಯಿತು. ಹಬ್ಬ ಹರಿದಿನಗಳಲ್ಲಿ ಅವರು ಯಾವ ರೀತಿ ಹಣವನ್ನು ಬಳಸುತ್ತಾರೆ. ಹಣದ ಕೊರತೆಯನ್ನು ನೀಗಿಸಿಕೊಳ್ಳಲು ಯಾರಿಂದ ಸಾಲ ಪಡೆಯುತ್ತಾರೆ. ಸಾಲದ ಮರುಪಾವತಿ ಹೇಗೆ ಮಾಡುತ್ತಾರೆ ಮುಂತಾದ ವಿಚಾರಗಳನ್ನು ಈ ವಿಧಾನದ ಮೂಲಕ ಕಂಡುಕೊಂಡು ಈ ಅಧ್ಯಯನದಲ್ಲಿ ಬಳಸಲಾಗಿದೆ. ವಿಶೇಷವಾಗಿ ಕೊರಗರು ಪರಂಪರಾನುಗತವಾಗಿ ಪಾಲಿಸಿಕೊಂಡು ಬಂದಿದ್ದ ಅಜಲು ಪದ್ದತಿಯನ್ನು ಸರಕಾರ ನಿಷೇಧಿಸಿದೆ. ಅಜಲು ಪದ್ದತಿಗೆ ಒಳಪಡಿಸುವ ಮತ್ತು ಒಳಪಡಿಸಲು ಯತ್ನಿಸುತ್ತಿರುವವರ ವಿರುದ್ಧ ಕಾನೂನು ಕ್ರಮ ಜರಗಿಸುವ ಆದೇಶವಿದ್ದರೂ ಕಾಡಿನ ಮಧ್ಯದಲ್ಲಿ ವಾಸಿಸುತ್ತಿರುವ ಕೊರಗರು ಇಂದೂ ಸಹ ಅಜಲಿನಂತಹ ಆಚರಣೆಯನ್ನು ಮುಂದುವರೆಸಿಕೊಂಡು ಬರುತ್ತಿರುವುದನ್ನು ಗಮನಿಸಿದ್ದೇನೆ. ಆ ಎಲ್ಲ ವಿಚಾರಗಳನ್ನು ಪ್ರಬಂಧದಲ್ಲಿ ಚರ್ಚಿಸಿದ್ದೇನೆ.

೧.೮.೭.ಛಾಯಾಚಿತ್ರ ಮತ್ತು ಧ್ವನಿಮುದ್ರಣ :

ಕೊರಗ, ಮಲೆಕುಡಿಯರ ಹಾಗೂ ಮರಾಠಿ ನಾಯ್ಕ ಸಮುದಾಯಗಳ ಜೊತೆಗೆ ಸಂಪರ್ಕ ಸಾಧಿಸಿದ ಸಮಯದಲ್ಲಿ ಅವರೊಂದಿಗಿನ ಕೆಲವು ಅಪರೂಪದ ಕ್ಷಣಗಳನ್ನು ಛಾಯಾಚಿತ್ರದಲ್ಲಿ ಸೆರೆಹಿಡಿಯಲಾಯಿತು. ಕೃಷಿ, ಕೃಷಿಕೂಲಿ, ಸಾಮಾನ್ಯ ಕಾರ್ಮಿಕರು ಹೀಗೆ ವಿವಿಧ ವೃತ್ತಿಗಳಲ್ಲಿ ತೊಡಗಿರುವ ಕೊರಗ, ಮಲೆಕುಡಿಯರ ಹಾಗೂ ಮರಾಠಿ ನಾಯ್ಕ ಸಮುದಾಯಗಳ ಛಾಯಾಚಿತ್ರಗಳನ್ನು ತೆಗೆಯಲಾಯಿತು. ಈ ಸಮುದಾಯಗಳ ಜೊತೆಗೆ ಚರ್ಚಿಸಿದ ಹಲವು ವಿಷಯಗಳನ್ನು ಧ್ವನಿಮುದ್ರಣ ಮಾಡಿಕೊಳ್ಳಲಾಯಿತು. ಆ ಎಲ್ಲ ಮಾಹಿತಿಯನ್ನು ಈ ಪ್ರಬಂಧದಲ್ಲಿ ಬಳಸಿಕೊಳ್ಳಲಾಗಿದೆ.

೧.೯.ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

1. **Lawrence D'Souza S.J. "Korgas – A Primitive Trive of South India". UNESCO Co-Action Learning Centre Mangaluru-1991-** ಈ ಗ್ರಂಥದಲ್ಲಿ ಕೊರಗರು ಎದುರಿಸುತ್ತಿರುವ ಸಮಸ್ಯೆಗಳು, ಕೊರಗರ ಸಾಮಾಜಿಕ, ಆರ್ಥಿಕ ಸ್ಥಿತಿ–ಗತಿಗಳು. ಕೊರಗರ ಆಚರಣೆ–ಸಂಸ್ಕೃತಿಗಳು, ಕೊರಗರ ರಾಜಕೀಯ ವ್ಯವಸ್ಥೆ, ಹೀಗೆ ಅನೇಕ ವಿಚಾರಗಳನ್ನು ಉದಾಹರಣೆ ಸಹಿತ ನೈಜ ಚಿತ್ರಣದಂತೆ ವಿವರಿಸಿದ್ದಾರೆ.

೨. **ವಿವೇಕ ರೈ. ಬಿ.ಎ., ಯದುಪತಿ ಗೌಡ ಡಿ. ಇವರ "ಮಲೆಕುಡಿಯರು", ಪ್ರಸಾರಾಂಗ, ಮಂಗಳ ಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು** ಈ ಗ್ರಂಥದಲ್ಲಿ ಮಲೆಕುಡಿಯರ

ಹುಟ್ಟಿನ ಬಗ್ಗೆ ಐತಿಹ್ಯಗಳು, ಪ್ರಸರಣ,ಕುಲಕಸುಬುಗಳು, ಮಲೆಕುಡಿಯರ ಬಳಿಗಳ ವಿವರಗಳು ಸಂಸ್ಕೃತಿ, ಆಚರಣೆಗಳು, ಶಿಕ್ಷಣ ಮತ್ತು ಸಾಮಾಜಿಕ ಸ್ಥಿತಿಗತಿ ಇತ್ಯಾದಿ ವಿಷಯಗಳನ್ನು ವಿವರಿಸಿದ್ದಾರೆ.

೩. **ಸುಂದರ ನಾಯಕ್ ಕೆ. "ಕರಾವಳಿ ಕರ್ನಾಟಕದ ಮರಾಠಿ ನಾಯ್ಕ ಪರಂಪರೆ ಮತ್ತು ಆಧುನಿಕತೆ", ದೀಪಪ್ರಿಯ ಪ್ರಕಾಶನ, ಬೆಂಗಳೂರು ೨೦೦೮,** ಇವರ ಈ ಗ್ರಂಥದಲ್ಲಿ ಮರಾಠಿ ನಾಯ್ಕ ಸಮುದಾಯದ ಮೂಲ, ಅವರ ಐತಿಹಾಸಿಕ ಕಾಲಘಟ್ಟ ಮತ್ತು ವಲಸೆ ವಿಚಾರಗಳು, ಅವರ ಸಾಮಾಜಿಕ ಜೀವನ ವ್ಯವಸ್ಥೆ ಮತ್ತು ಜೀವನಾವರ್ತನ ಆಚರಣೆಗಳು, ಶೈಕ್ಷಣಿಕ ಸ್ಥಿತಿಗತಿಗಳು, ಪರಂಪರೆಗಳು ಮತ್ತು ಆಧುನಿಕ ವೃತ್ತಿ ಬದುಕಿನ ಸಂಘರ್ಷಗಳು, ಹೋರಾಟಗಳು, ಸಂಘ ಸಂಸ್ಥೆಗಳು ರಾಜಕೀಯ ಕ್ರಮಗಳು ಹೀಗೆ ಅನೇಕ ವಿವರಗಳನ್ನು ವಿವರಿಸಿದ್ದಾರೆ.

೪. **ಎ.ಎಸ್. ಪ್ರಭಾಕರ ಅವರ "ಬುಡಕಟ್ಟು ಅಭಿವೃದ್ಧಿ ಮೀಮಾಂಸೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೪** ಈ ಗ್ರಂಥದಲ್ಲಿ ಬುಡಕಟ್ಟು ಅಭಿವೃದ್ಧಿಗೆ ಸಂಬಂಧಪಟ್ಟಂತೆ ಹಲವು ವಿದ್ವಾಂಸರುಗಳ ಅಮೂಲ್ಯ ಲೇಖನಗಳು ಒಳಗೊಂಡಿದ್ದು, ಈ ಗ್ರಂಥದಲ್ಲಿ ಬುಡಕಟ್ಟು ಅಭಿವೃದ್ಧಿಯ ಪರಿಕಲ್ಪನೆಗಳು, ಬುಡಕಟ್ಟು ಅಭಿವೃದ್ಧಿಯ ಮಾದರಿಗಳು, ಬುಡಕಟ್ಟು ಅಭಿವೃದ್ಧಿಯ ಹೋರಾಟಗಳು, ನೀತಿಗಳೂ, ಜಾಗತೀಕರಣದ ಸಂದರ್ಭದಲ್ಲಿ ಬುಡಕಟ್ಟುಗಳ ಅಭಿವೃದ್ಧಿ, ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸ್ವಯಂಸೇವಾ ಸಂಸ್ಥೆಗಳು, ಸರಕಾರದ ಬುಡಕಟ್ಟು ಅಭಿವೃದ್ಧಿ ಯೋಜನೆಗಳು, ಬುಡಕಟ್ಟು ಬಗೆಗಿನ ವಿದ್ವಾಂಸರ ಚಿಂತನೆಗಳು ಹೀಗೆ ಅನೇಕ ವಿವರಣೆಗಳನ್ನು ಒಳಗೊಂಡಿದೆ.

೫. **ಮೇತ್ರಿ ಕೆ.ಎಂ. "ಬುಡಕಟ್ಟು ಕುಲಕಸುಬುಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೨.** ಇವರ ಈ ಗ್ರಂಥದಲ್ಲಿ ಕೊರಗ, ಮಲೆಕುಡಿಯ, ಮರಾಠಿ ನಾಯ್ಕ ಸೇರಿದಂತೆ ಕರ್ನಾಟಕದ ಬುಡಕಟ್ಟು ಸಮುದಾಯಗಳ ವಾಸಿಸುವ ಪ್ರದೇಶಗಳು, ಜನಸಂಖ್ಯೆ ಮತ್ತು ಸಮುದಾಯದ ಒಳ ಪಂಗಡಗಳ ವಿವರಗಳು. ಪಾರಂಪರಿಕ ಕುಲಕಸುಬುಗಳು, ಕುಲಕಸುಬುಗಳಿಗೆ ಸಂಬಂಧಿಸಿದಂತೆ ಆದ ಬದಲಾವಣೆಗಳು ಸಮಸ್ಯೆ ಸವಾಲುಗಳ ಬಗ್ಗೆ ವಿವರಣೆಗಳನ್ನು ಈ ಕೃತಿ ಒಳಗೊಂಡಿದೆ.

೬. **ಗಂಗಾಧರ ದೈವಜ್ಞ, "ಕೊರಗರು ಸಮಕಾಲೀನ ಸ್ಪಂದನ", ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೧೨** ಇವರ ಈ ಗ್ರಂಥದಲ್ಲಿ ಕೊರಗ ಬುಡಕಟ್ಟು ಸಮುದಾಯಕ್ಕೆ ಸಂಬಂಧಪಟ್ಟಂತೆ ಕೊರಗ ಸಮುದಾಯದ ಲೇಖಕರುಗಳ ಅನುಭವದ

ವಿಚಾರಗಳ ಲೇಖನಗಳನ್ನು ಒಳಗೊಂಡಿದ್ದು, ಕೊರಗ ಸಮುದಾಯದ ಚಾರಿತ್ರಿಕತೆ ಮತ್ತು ಚಿಂತನೆ, ಕೊರಗ ಸಮುದಾಯದ ಅನನ್ಯತೆ, ಅಭಿವೃದ್ಧಿ ಸವಾಲುಗಳು, ಕೊರಗ ಸಮುದಾಯದ ಸ್ಥಿತಿಗತಿಗಲು, ಕೊರಗರ ಅಜಲು ಪದ್ಧತಿ, ಭೂಮಿ ಹಬ್ಬ ಹೀಗೆ ಕೊರಗ ಸಮುದಾಯಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಒಳಗೊಂಡಿದೆ.

೭. **ಬಾಬು ಕೊರಗ ಪಾಂಗಳ, ಕೊರಗರ ಅಜಲು (ಒಂದು ವಿಶ್ಲೇಷಣೆ), ವಾಮಂಜೂರು, ಮಂಗಳೂರು-೨೦೦೯,** ಇವರ ಈ ಗ್ರಂಥದಲ್ಲಿ ಕೊರಗರ ಅಜಲು ಪದ್ಧತಿಯ ವಿವರಣೆಗಳು, ಆಚರಣೆಗಳು ಅಜಲು ಪದ್ಧತಿಯಲ್ಲಿನ ಅಪಾಯಗಳು, ಅಜಲು ಆಚರಣೆಯಿಂದ ಕೊರಗ ಸಮುದಾಯದ ಮೇಲೆ ಉಂಟಾಗುವ ಪರಿಣಾಮಗಳು, ಅಜಲು ಪದ್ಧತಿಯ ಬಿಡುಗಡೆಗೆ ಕ್ರಮಗಳೂ, ಅಜಲು ಪದ್ಧತಿ ವಿರೋಧಿ ಆಂದೋಲನದ ಆರಂಭದ ಬಗ್ಗೆ ವಿವರಣೆಗಳನ್ನು ನೀಡಿದ್ದಾರೆ.

೮. **ಮುನಿರಾಜು ಎಸ್.ಬಿ. "ಬುಡಕಟ್ಟು ಅಭಿವೃದ್ಧಿ ಒಂದು ವಿಮರ್ಶಾತ್ಮಕ ಅಧ್ಯಯನ (ಜೇನು ಕುರುಬ ಮತ್ತು ಕೊರಗ ಆದಿಮ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ)" ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ** ಮಹಾಪ್ರಬಂಧ-೨೦೦೮. ಈ ಮಹಾಪ್ರಬಂಧದಲ್ಲಿ ಜೇನುಕುರುಬ ಮತ್ತು ಕೊರಗ ಸಮುದಾಯಗಳ ಸ್ಥಿತಿ-ಗತಿಗಳು, ಸರಕಾರಗಳ ವಿವಿಧ ಅಭಿವೃದ್ಧಿ ಯೋಜನೆಗಳ ವಿವರಗಳು, ಬುಡಕಟ್ಟು ಅಭಿವೃದ್ಧಿಯ ಬಗ್ಗೆ ವಿಮರ್ಶೆ, ಸಂಶೋಧನೆಯ ಮೂಲಕ ಕಂಡುಕೊಂಡ ಫಲಿತಗಳ ವಿವರಣೆಗಳನ್ನು ನೀಡಲಾಗಿದೆ.

೧.೧೦. ಮಹಾಪ್ರಬಂಧದ ಅಧ್ಯಾಯಗಳು

ಅಧ್ಯಯನದ ಸ್ಪಷ್ಟತೆ ಮತ್ತು ಸೂಕ್ಷ್ಮತೆಯ ದೃಷ್ಟಿಯಿಂದ ಈ ಮಹಾಪ್ರಬಂಧವನ್ನು ಆರು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಮೊದಲನೆಯ ಅಧ್ಯಾಯ: ಸಂಶೋಧನೆಯ ಉದ್ದೇಶ, ವ್ಯಾಪ್ತಿ, ಮಹತ್ವ ಮತ್ತು ವಿಧಾನಗಳು: ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶಗಳು, ಅಧಯಯನದ ವ್ಯಾಪ್ತಿ, ವಿಷಯ ನಿರೂಪಣೆಗಳು, ಅಧ್ಯಯನದ ಮಹತ್ವ, ಮತ್ತು ಪ್ರಕಲ್ಪನೆಗಳು, ಅಧ್ಯಯನದ ಮಿತಿಗಳು, ಪರಿಶೋಧಿಸಬೇಕಾದ ಸಮಸ್ಯೆಗಳ ವಿವರಗಳು, ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಆಯ್ದ ತಾಲೂಕು ಮತ್ತು ಗ್ರಾಮಗಳ ವಿವರಗಳು, ಭೇಟಿ ಮಾಡಿದ ವಿವಿಧ ಬುಡಕಟ್ಟು ಸಮುದಾಯಗಳ ಕುಟುಂಬಗಳ ಅಂಕಿ-ಅಂಶಗಳು, ಅಧ್ಯಯನಕ್ಕೆ ಬಳಸಿದ ಸಂಶೋಧನಾ ವಿಧಾನಗಳ ಬಗೆಗೆ ವಿವರಿಸಲಾಗಿದೆ.

ಎರಡನೆಯ ಅಧ್ಯಾಯ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಹಿನ್ನೆಲೆಗಳು: ಈ ಅಧ್ಯಾಯದಲ್ಲಿ ಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ, ಜನಸಂಖ್ಯೆ ವಿವರ, ದಕ್ಷಿಣ ನ್ನಡ ಮತ್ತು ಉಡುಪಿಯಲ್ಲಿ ಕಂಡುಬರುವ ಬುಡಕಟ್ಟುಗಳು, ಅವರ ಸಂಸ್ಕೃತಿ, ಆಚಾರ, ವಿಚಾರ, ುಡಕಟ್ಟುಗಳು ಇರುವ ನೆಲೆಗಳು, ಅವರ ಜನಸಂಖ್ಯೆಯ ವಿವರಗಳು, ಬುಡಕಟ್ಟುಗಳು ೊಡಗಿಸಿಕೊಂಡಿರುವ ವೃತ್ತಿಗಳು, ಈ ಎರಡು ಜಿಲ್ಲೆಗಳ ವೈಶಿಷ್ಟ್ಯಗಳನ್ನು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯ: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ರಕಾರಿ ಸಂಸ್ಥೆಗಳ ಪಾತ್ರ: ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸರಕಾರ ವಿವಿಧ ಯೋಜನೆಗಳ ಮೂಲಕ ುಡಕಟ್ಟುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸ ತೊಡಗಿಕೊಂಡಾಗ ಬುಡಕಟ್ಟು ಮುದಾಯಗಳಲ್ಲಿ ಉಂಟಾದ ಧನಾತ್ಮಕ ಮತ್ತು ಋಣಾತ್ಮಕ ಪ್ರಗತಿಗಳ ಬಗ್ಗೆ ವಿವರಿಸಲಾಗಿದೆ. ಈ ಧ್ಯಾಯದಲ್ಲಿ ವಿವಿಧ ಬುಡಕಟ್ಟು ಅಭಿವೃದ್ಧಿ ಸಂಬಂಧಿತ ಸರಕಾರಿ ಸಂಸ್ಥೆ/ ಇಲಾಖೆಗಳ ವಿವರಗಳು, ವಿಧ ಅಭಿವೃದ್ಧಿ ಯೋಜನೆಗಳ ವಿವರಗಳು, ಶೈಕ್ಷಣಿಕ, ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಯೋಜನೆಗಳ ವರಗಳು, ಅಭಿವೃದ್ದಿ ಯೋಜನೆಗಳಿಗೆ ಸಂಬಂಧಿಸಿದಂತೆ ಹಣಕಾಸಿನ ವಿವರಣೆಗಳು ಮತ್ತು ಅಂಕಿ–ಂಶಗಳು, ವಿವಿಧ ಅಭಿವೃದ್ಧಿ ಯೋಜನೆಗಳನ್ನು ಪಡೆದ ಫಲಾನುಭವಿಗಳ ವಿವರಣೆಗಳು, ಾಯಾಚಿತ್ರಗಳು ಮತ್ತು ಅಂಕಿ–ಅಂಶಗಳ ಮಾಹಿತಿಗಳನ್ನು ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯ: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ್ವಯಂ ಸೇವಾ ಸಂಸ್ಥೆಗಳ ಪಾತ್ರ: ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಪಾಲ್ಗೊಂಡ ಸ್ವಯಂ ಸೇವಾ ಂಸ್ಥೆಗಳಿಂದ ಬುಡಕಟ್ಟು ಸಮುದಾಯಗಳಲ್ಲಿ ಉಂಟಾದ ಧನಾತ್ಮಕ ಹಾಗೂ ಋಣಾತ್ಮಕ ಪ್ರಗತಿಗಳ ಬಗ್ಗೆ ವಿವರಿಸಲಾಗಿದೆ. ಮತ್ತು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಬುಡಕಟ್ಟು ಸಮುದಾಯಗಳ ಭಿವೃದ್ಧಿಗೆ ಶ್ರಮಿಸುತ್ತಿರುವ ಪ್ರಮುಖ ಸ್ವಯಂಸೇವಾ ಸಂಸ್ಥೆಗಳಾದ ಸಮಗ್ರ ಗ್ರಾಮೀಣ ಆಶ್ರಮ, ನಾಗರಿಕ ೇವಾ ಟ್ರಸ್ಟ್, ಅಕ್ಷರ ಮತ್ತು ಸ್ಪೂರ್ತಿ ಸ್ವಯಂ ಸೇವಾ ಸಂಸ್ಥೆಗಳ ಆಡಳಿತಾತ್ಮಕ ವಿವರಣೆಗಳು, ್ಯೇಯೋದ್ದೇಶಗಳು, ಅಭಿವೃದ್ದಿ ಕಾರ್ಯಕ್ರಮಗಳ ವಿವರಣೆಗಳು, ಛಾಯಾಚಿತ್ರಗಳು, ಆರ್ಥಿಕ ಮೂಲಗಳು ಹಾಗೂ ಇನ್ನಿತರ ಸ್ವಯಂ ಸೇವಾ ಸಂಸ್ಥೆಗಳ ಮಾಹಿತಿಗಳನ್ನು ವಿವರಿಸಲಾಗಿದೆ.

ಐದನೆಯ ಅಧ್ಯಾಯ: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಬುಡಕಟ್ಟುಗಳ ಪ್ರಸ್ತುತ ಸ್ಥಿತಿಗಳು: ುಡಕಟ್ಟುಗಳು ನಿರೀಕ್ಷಿಸುವ ಅಭಿವೃದ್ಧಿ ಯೋಜನೆಗಳ ಬಗ್ಗೆ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಬುಡಕಟ್ಟು ಸಮುದಾಯಗಳು ಎದುರಿಸುತ್ತಿರುವ ವಿವಿಧ ಸಮಸ್ಯೆಗಳು, ಸಮಸ್ಯೆಗಳ ಬಗ್ಗೆ ಸಮುದಾಯದ ಜನರ ಸ್ಪಂದನೆ, ಪ್ರತಿಕ್ರಿಯೆಗಳು, ಕೊರಗ ಮಲೆಕುಡಿಯ

ುತ್ತು ಮರಾಠಿ ನಾಯ್ಕ ಸಮುದಾಯಗಳ ಸಮಸ್ಯೆಗಳು ಮತ್ತು ಅಭಿವೃದ್ಧಿಯ ನಡುವಿನ ಭಿನ್ನತೆಗಳು ುತ್ತು ವರ್ತಮಾನದ ಸ್ಥಿತಿಗಳನ್ನು ಚರ್ಚಿಸಲಾಗಿದೆ.

ಆರನೆಯ ಅಧ್ಯಾಯ: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಸರಕಾರಿ ಮತ್ತು ಸ್ವಯಂಸೇವಾ ಂಸ್ಥೆಗಳ ಪ್ರಸ್ತುತ ಸ್ಥಿತಿಗಳು: ಈ ಅಧ್ಯಾಯದಲ್ಲಿ ಸರಕಾರ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಸ್ಥಿತಿಗಳು, ಯಂಸೇವಾ ಸಂಸ್ಥೆ ಮತ್ತು ಅಭಿವೃದ್ದಿಗೆ ಸಂಬಂಧಿಸಿದಂತೆ ಸ್ಥಿತಿಗಳು, ಅಭಿವೃದ್ಧಿಗೆ ಸಂಬಂಧಿಸಿದಂತೆ ರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ಪ್ರಸ್ತುತ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳ ಗ್ಗೆ ವಿವರಿಸಲಾಗಿದೆ.

ಏಳನೆಯ ಅಧ್ಯಾಯ: ಉಪಸಂಹಾರ: ಉಪಸಂಹಾರದಲ್ಲಿ ಸಂಶೋಧನೆಯ ಮೂಲಕ ಂಡುಕೊಂಡ ಫಲಿತಗಳನ್ನು ಮತ್ತು ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡಲಾಗಿದೆ.

ಈ ಅಧ್ಯಯನ ಪೂರೈಸಲು ಬಳಸಿದ ಆಕರ ಗ್ರಂಥಗಳ ವಿವರ, ಅನುಬಂಧದಲ್ಲಿ ಮಾಹಿತಿದಾರರ ವರ, ಉಡುಪಿ ಜಿಲ್ಲೆಯ ಕೊರಗರಿಗೆ ಭೂಮಿ ನೀಡಿದ ವಿವರ, ಪ್ರಶ್ನಾವಳಿ ಮತ್ತು ಛಾಯಾಚಿತ್ರಗಳನ್ನು ೀಡಲಾಗಿದೆ.

ಅಡಿ ಟಿಪ್ಪಣಿಗಳು:

೧. ಗುರುಲಿಂಗಯ್ಯ ಎಂ., ಬುಡಕಟ್ಟು ಅಧ್ಯಯನ, ಸಂಪುಟ ೩, ಸಂಚಿಕೆ ೧, ಬುಡಕಟ್ಟು ಸಮಸ್ಯೆ ಮತ್ತು ಅಭಿವೃದ್ಧಿ: ಸಮಾಜ ಶಾಸ್ತ್ರೀಯ ದೃಷ್ಟಿಕೋನ, ಪು. ೨೨, ೨೩, ೨೦೦೬.

ಆಧಾರ ಗ್ರಂಥಗಳು:

೧ ಪ್ರಭಾಕರ ಎ.ಎಸ್., ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೨. ಬುಡಕಟ್ಟು ಅಧ್ಯಯನ, ಸಂಪುಟ ೪, ಸಂಚಿಕೆ ೧, ೨, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೩. ಬುಡಕಟ್ಟು ಅಧ್ಯಯನ, ಸಂಪುಟ ೩, ಸಂಚಿಕೆ ೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬. ಮುನಿರಾಜು ಎಸ್.ಬಿ., ಬುಡಕಟ್ಟು ಅಭಿವೃದ್ಧಿ: ಒಂದು ವಿಮರ್ಶಾತ್ಮಕ ಅಧ್ಯಯನ, ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

ಅಧ್ಯಾಯ ೨

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಹಿನ್ನೆಲೆ


ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಹಿನ್ನೆಲೆ

ಭೌಗೋಳಿಕ, ಚಾರಿತ್ರಿಕ ಹಿನ್ನೆಲೆ:

ಪಶ್ಚಿಮ ಘಟ್ಟಗಳು ಮತ್ತು ಕರಾವಳಿಗಳ ವೈಶಿಷ್ಟ್ಯವನ್ನು ಮೈಗೂಡಿಸಿಕೊಂಡ ಜಿಲ್ಲೆ ದಕ್ಷಿಣ ನ್ನಡ. ಪಶ್ಚಿಮ ಘಟ್ಟ ಮತ್ತು ಅರಬ್ಬೀ ಸಮುದ್ರದ ಮಧ್ಯದಿಂದ ೨೪೦ ಕಿ.ಮೀ ಉದ್ದ ೩೨ ರಿಂದ ೯೬ .ಮೀ ಅಗಲವಾದ ಪ್ರದೇಶ ದಕ್ಷಿಣ ಕನ್ನಡ ಜಿಲ್ಲೆ. ೧೮೬೦ರಲ್ಲಿ ಬ್ರಿಟಿಷರಿಂದ ವಿಭಜಿಸಲ್ಪಡುವವರೆಗೆ ಕ್ಷಿಣೋತ್ತರ ಜಿಲ್ಲೆಗಳನ್ನು 'ಕರಾವಳಿ' ಜಿಲ್ಲೆಗಳೆಂದು ಕರೆಯುತ್ತಿದ್ದರು. ಪೋರ್ಚುಗೀಸರು ಕರೆದ "ಕೆನರಾ" ಜಿಲ್ಲೆಯನ್ನು ಆಡಳಿತ ಅನುಕೂಲಕ್ಕಾಗಿ ಬ್ರಿಟಿಷರು ಉತ್ತರ ಮತ್ತು ದಕ್ಷಿಣ ಕನ್ನಡಗಳೆಂದು ವಿಭಜಿಸಿದರು. ಇತ್ತೀಚೆಗೆ ಮತ್ತೆ ದಕ್ಷಿಣ ಕನ್ನಡವನ್ನು ಉಡುಪಿ ಮತ್ತು ಮಂಗಳೂರು ಜಿಲ್ಲೆಗಳೆಂದು ವಿಂಗಡಿಸಿದರೂ ಇದರ ಸಾಂಸ್ಕೃತಿಕ ನೆಲೆಗಟ್ಟು ಒಂದೇ ಆಗಿದೆ. ಒಂದು ಕಾಲಕ್ಕೆ ಮಲೆನಾಡು ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳವರೆಗೆ ವ್ಯಾಪಿಸಿಕೊಂಡಿದ್ದ ದಕ್ಷಿಣ ಕನ್ನಡ ಜಿಲ್ಲೆ ಒಂದೇ ಸಂಸ್ಕೃತಿಗೆ ಸೇರಿದ ವಿಶಾಲ ಕರಾವಳಿ ಜಿಲ್ಲೆಯಾಗಿತ್ತು.

ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ ಉದ್ದ ಸುಮಾರು ೧೪೦ ಕಿ.ಮೀಗಳು. ಪಶ್ಚಿಮಘಟ್ಟದಲ್ಲಿ ಹುಟ್ಟಿ ಸುಮಾರು ೬೦ ಕಿ.ಮೀ ಗಳಷ್ಟು ಹರಿದು ಪಶ್ಚಿಮದ ಅರಬ್ಬೀ ಸಮುದ್ರವನ್ನು ಸೇರುವ ಹಲವಾರು ಮುಖ್ಯ ನದಿಗಳಿವೆ. ನೇತ್ರಾವತಿ, ಗಂಗೊಳ್ಳಿ, ಸೀತಾನದಿ, ಸ್ವರ್ಣನದಿ ಇವು ವಿಶಾಲವಾದ ಹರಹುವುಳ್ಳ ನದಿಗಳು. ಅದರ ಜೊತೆಗೆ ಕಿರು ನದಿಗಳೂ ಸಾಕಷ್ಟಿವೆ. ನೇತ್ರಾವತಿ ನದಿಯು ಕುದುರೆಮುಖದಲ್ಲಿ ಹುಟ್ಟಿ, ಬಂಗಾಡಿ ಕಣಿವೆಯಲ್ಲಿ ಹರಿದು ಕುಮಾರಪರ್ವತದಲ್ಲಿ ಹುಟ್ಟಿ ಹರಿಯುವ ಕುಮಾರಾಧಾರಾ ನದಿಯನ್ನು ಉಪ್ಪಿನಂಗಡಿಯಲ್ಲಿ ಸಂಧಿಸಿ, ಬಂಟ್ವಾಳದ ಕಡೆಗೆ ಹರಿಯುತ್ತದೆ. ಹಲವಾರು ಗುಡ್ಡ ಬೆಟ್ಟಗಳ ನಡುವೆ ಹರಿದು ಹಲವು ಕಂದುರುಗಳನ್ನು ನಿರ್ಮಿಸಿ ನೇತ್ರಾವತಿ ನದಿ ಮಂಗಳೂರಿನಲ್ಲಿ ಗುರುಪುರ ನದಿಯನ್ನು ಸೇರಿಕೊಳ್ಳುತ್ತದೆ. ಅನೇಕ ಉಪ ನದಿಗಳನ್ನು ಜೊತೆಗೂಡಿಸಿಕೊಂಡು ಹರಿಯುವ ಗಂಗೊಳ್ಳಿ ನದಿ, ಕುಂದಾಪುದಲ್ಲಿ ವಿಶಾಲವಾದ ವ್ಯಾಪ್ತಿಯನ್ನು ಪಡೆಯುತ್ತದೆ. ಕೊಲ್ಲೂರು, ಹಾಲಾಡಿ, ಚಕ್ರಾನದಿಗಳ ಧಾರೆಯನ್ನೊಳಗೊಂಡ ಗಂಗೊಳ್ಳಿ ನದಿ, ಅರಬ್ಬೀ ಸಮುದ್ರದಿಂದ ಕೇವಲ ನಲವತ್ತು ಕಿ.ಮೀಗಳಷ್ಟು ದೂರವಿರುವ ಪಶ್ಚಿಮ ಘಟ್ಟದಲ್ಲಿ ಹುಟ್ಟುವ ನದಿಯ ಕವಲುಗಳನ್ನು ಹೊಂದಿದೆ. ಪಶ್ಚಿಮ ಘಟ್ಟದ ಸೋಮೇಶ್ವರದ ಬಳಿ ಹುಟ್ಟುವ ಸೀತಾನದಿ ಉಡುಪಿ ತಾಲೂಕಿನ ಉತ್ತರ ದಕ್ಷಿಣ ಭಾಗದಲ್ಲಿ ಹರಿಯುತ್ತದೆ. ಬಾರಕೂರಿನ ಬಳಿ ಸೀತಾನದಿ ಮತ್ತು ಸ್ವರ್ಣಾ ನದಿಗಳು ಅರಬ್ಬೀ ಸಮುದ್ರವನ್ನು ಸೇರುವಾಗ ವಿಶಾಲವಾದ ಹಿನ್ನೀರಿನ ನೆಲೆಯನ್ನು ಸೃಷ್ಟಿಸಿವೆ. ಇವಲ್ಲದೆ ಶೀರೂರು, ಉಪ್ಪುಂದ, ಕಲ್ಯಾಣಪುರ, ಮುಲ್ಕಿ,

ವಂಜೆ, ವಾರಾಹಿ, ದಾಸನಕಟ್ಟೆ, ನೆರಿಯ, ಶಿಶಿರ, ಮುಂತಾದ ನದಿಗಳು ದಕ್ಷಿಣ ಕನ್ನಡದ ಜನಜೀವನದ ಧಾರ ಸ್ತಂಭಗಳಾಗಿವೆ.



ದಕ್ಷಿಣ ಕನ್ನಡ ಜಿಲ್ಲೆ.

ದಕ್ಷಿಣ ಕನ್ನಡದಲ್ಲಿ ಮುಖ್ಯವಾಗಿ ಎರಡು ಭಾಷೆಗಳು. ಕನ್ನಡ ಮತ್ತು ತುಳು. ಶೈಕ್ಷಣಿಕ ಂಸ್ಥೆಗಳಲ್ಲಿ ಆಡು ಭಾಷೆಯಾಗಿ ಹೆಚ್ಚಿನ ಜನರು ವ್ಯವಹರಿಸುವ ಭಾಷೆ ಕನ್ನಡವೇ ಆಗಿದೆ. ಹಾಗೆಯೇ ನ್ನಡದಲ್ಲೂ ಉಪಭಾಷೆಗಳಿವೆ. ಗೌಡರು, ಹವ್ಯಕ ಬ್ರಾಹ್ಮಣರು ಆಡುವ ಕನ್ನಡವೇ ಬೇರೆ. ಕೊರಗರಂತಹ ರಿಶಿಷ್ಟ ವರ್ಗದವರಿಗೆ ಪ್ರತ್ಯೇಕ ಕೊರಗ ಭಾಷೆಯಿದೆ.

ಕಲ್ಯಾಣಪುರ ಹೊಳೆಯಿಂದಾಚೆ ಕುಂದಾಪುರ ಕನ್ನಡ (ಕುಂದಗನ್ನಡ) ಮಾತೃ ಭಾಷೆಯಾಗಿ ಉಪಯೋಗಿಸಲ್ಪಡುತ್ತದೆ. ಕಲ್ಯಾಣಪುರ ಹೊಳೆಯಿಂದ ಈಚೆ ದಕ್ಷಿಣದ ಚಂದ್ರನದಿ ಹೊಳೆಯವರೆಗೆ ಇಲ್ಲಿ ುಳುವೇ ಮಾತೃಭಾಷೆಯಾಗಿರುವುದು ಕಂಡುಬರುತ್ತದೆ. ತುಳು ಭಾಷೆಯನ್ನು ಕನ್ನಡ ಮತ್ತು ತುಳು ಲ್ಲವರು ಕೂಡಾ ಉಪಯೋಗಿಸುತ್ತಾರೆ. ಗೌಡ ಸಾರಸ್ವತರು, ಸಾರಸ್ವತರು ಮತ್ತು ರೋಮನ್ ್ಯಾಥೋಲಿಕ್‌ರು ಮತ್ತು ಇತರ ಕೆಲವು ವರ್ಗಗಳ ಜನರು ಕೊಂಕಣಿ ಭಾಷೆಯನ್ನು ಉಪಯೋಗಿಸುತ್ತಾರೆ. ೋವೆಯನ್ನು ಪೋರ್ಚುಗೀಸರು ಆಕ್ರಮಿಸಿದ ನಂತರ ಹೆಚ್ಚಿನ ಕೊಂಕಣಿಗರು ದಕ್ಷಿಣ ಕನ್ನಡಕ್ಕೆ ವಲಸೆ ಂದರು. ಇಲ್ಲಿ ಉರ್ದು ಭಾಷೆಯನ್ನು ಡೆಕ್ಕನಿ ಮುಸ್ಲಿಮರು ಉಪಯೋಗಿಸುತ್ತಾರೆ, ಮರಾಠಿ ಾಷೆಯನ್ನಾಡುವ ಜನವರ್ಗಗಳೂ ಇಲ್ಲಿವೆ. ನಗರಗಳಲ್ಲಿ ಗುಜರಾತಿ ಭಾಷಿಕರೂ ಇದ್ದಾರೆ. ತೆಲುಗು, ಮಿಳು, ಮಲಯಾಳಂ ಮನೆಮಾತಿನವರೂ ಚಿಕ್ಕ ಸಂಖ್ಯೆಯಲ್ಲಿ ಇಲ್ಲಿ ನೆಲೆಸಿದ್ದಾರೆ. ಮಾಪಿಳ್ಳೆ (ಬ್ಯಾರಿ) ನರು ಮಲಯಾಳಂನ್ನು, ನವಾಯತರು ಕೊಂಕಣಿಯನ್ನು ಉಪಯೋಗಿಸುತ್ತಾರೆ.

೧. ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆ:

೨೦೧೧ರ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯು ೨,೦೮೯,೬೪೯ರಷ್ಟು ಜನಸಂಖ್ಯೆ ಹೊಂದಿದ್ದು, ಇದರಲ್ಲಿ ಪರುಷರ ಸಂಖ್ಯೆ ೧,೦೩೪,೭೧೪ ಮತ್ತು ಮಹಿಳೆಯರ ಸಂಖ್ಯೆ ೧,೦೫೪,೯೩೫. ದಕ್ಷಿಣ ಕನ್ನಡ ಜಿಲ್ಲೆಯು ಒಟ್ಟು ೪೮೬೧ Sq.km ಗಳಷ್ಟು ವಿಸ್ತೀರ್ಣ ಹೊಂದಿದ್ದು, ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೪೭.೬೭%ರಷ್ಟು ನಗರವಾಸಿಗಳು ಮತ್ತು ಶೇಕಡಾ ೫೨.೩೩%ರಷ್ಟು ಗ್ರಾಮೀಣವಾಸಿಗಳಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯು ಶೇಕಡಾ ೮೮.೫೭% ಸಾಕ್ಷರತಾ ಪ್ರಮಾಣವನ್ನು ಪಡೆದಿದ್ದು, ಕರ್ನಾಟದಲ್ಲೇ ಮೊದಲ ಸ್ಥಾನವನ್ನು ಪಡೆದುಕೊಂಡಿದೆ.

೧.೨. ದಕ್ಷಿಣ ಕನ್ನಡ ಜಿಲ್ಲೆಯ ಬುಡಕಟ್ಟುಗಳ ಜನಸಂಖ್ಯೆ: (೨೦೧೧ ಜನಗಣತಿ)

ಬುಡಕಟ್ಟು ಸಮುದಾಯಗಳು	ಅಂಕಿ–ಅಂಶಗಳು
ಒಟ್ಟು ಜನಸಂಖ್ಯೆ	೮೨,೨೬೮
ಪುರುಷರು	೪೦,೯೬೧
ಮಹಿಳೆಯರು	೪೧,೩೦೭
ನಗರವಾಸಿಗಳು	೧೬,೪೨೪
ಗ್ರಾಮೀಣವಾಸಿಗಳು	೬೫,೮೪೪

ಒಟ್ಟು ೨,೦೮೯,೬೪೯ರಷ್ಟು ಜನಸಂಖ್ಯೆ ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆಯ ಆಧಾರದಲ್ಲಿ ರಾಜ್ಯದಲ್ಲೇ ೮ನೇ ಸ್ಥಾನ ಪಡೆದುಕೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆಯ ಲಿಂಗಾನುಪಾತ ಪ್ರಮಾಣವು ರಾಜ್ಯದ ಉಳಿದ ಜಿಲ್ಲೆಗಳಿಗೆ ಹೋಲಿಸಿದಲ್ಲಿ ಉತ್ತಮವಾಗಿದ್ದು, ರಾಜ್ಯದಲ್ಲೇ ದ್ವಿತೀಯ ಸ್ಥಾನ ಪಡೆದುಕೊಂಡಿದೆ. (ಲಿಂಗಾನುಪಾತ ಪ್ರಮಾಣ ೧೦೨೦:೧೦೦೦). ದಕ್ಷಿಣ ಕನ್ನಡ ಜಿಲ್ಲೆಯ ಬುಡಕಟ್ಟು ಜನಸಂಖ್ಯೆ ಒಟ್ಟು ೮೨,೨೬೮ ಮತ್ತು ಇದು ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇಕಡಾ ೩.೧ರಷ್ಟಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯದ ಲಿಂಗಾನುಪಾತ ಪ್ರಮಾಣವು ೧೦೦೦:೧೦೦೦ ಇದೆ. ಮತ್ತು ಉಳಿದ ಜಿಲ್ಲೆಗಳಿಗಿಂತ ಉತ್ತಮವಾಗಿದೆ. ೨೦೦೦೪ರ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಒಟ್ಟು ೦.೭೨೨ ಅಂಕಗಳನ್ನು ಪಡೆದು ಮಾನವ ಅಭಿವೃದ್ಧಿ ಪ್ರಮಾಣದಲ್ಲಿ ರಾಜ್ಯದಲ್ಲೇ ಎರಡನೆಯ ಸ್ಥಾನ ಪಡೆದುಕೊಂಡಿದೆ. ಆರೋಗ್ಯ ಸೂಚ್ಯಾಂಕದಲ್ಲಿ ೦.೭೦೭

ಂಕಗಳನ್ನು ಪಡೆದು ರಾಜ್ಯದಲ್ಲಿ ಎರಡನೇ ಸ್ಥಾನವನ್ನು ಪಡೆದುಕೊಂಡಿದೆ. ಹಾಗೆಯೇ ಶಿಕ್ಷಣ ಾಚ್ಯಾಂಕದಲ್ಲಿ ೦.೮೨೩ ಅಂಕಗಳನ್ನು ಪಡೆದು ರಾಜ್ಯದಲ್ಲಿ ೪ನೆಯ ಸ್ಥಾನ ಪಡೆದುಕೊಂಡರೆ, ಆದಾಯ ಾಚ್ಯಾಂಕದಲ್ಲಿ ೦.೬೩೬ ಅಂಕಗಳನ್ನು ಪಡೆದು ರಾಜ್ಯದಲ್ಲಿ ಎರಡನೆಯ ಸ್ಥಾನ ಪಡೆದಿದೆ.

ಒಟ್ಟು ಜನಸಂಖ್ಯೆ ಮತ್ತು ಕುಟುಂಬಗಳು / Total Population and Households

ತಾಲೂಕುಗಳು	ಒಟ್ಟು ಕುಟುಂಬಗಳು			ಪರಿಶಿಷ್ಟ ಜಾತಿ ಒಟ್ಟು ಕುಟುಂಬಗಳ ಸಂಖ್ಯೆ			ಪರಿಶಿಷ್ಟ ಪಂಗಡದ ಒಟ್ಟು ಕುಟುಂಬಗಳ ಸಂಖ್ಯೆ		
	ನಗರ Urban	ಗ್ರಾಮೀಣ Rural	ಒಟ್ಟು Total	ನಗರ Urban	ಗ್ರಾಮೀಣ Rural	ಒಟ್ಟು Total	ನಗರ Urban	ಗ್ರಾಮೀಣ Rural	ಒಟ್ಟು Total
2	6	7	8	9	10	11	12	13	14
ಬಂಟ್ವಾಳ	9106	52683	61789	232	3136	3368	103	2826	2929
ಬೆಳ್ತಂಗಡಿ	1571	43796	45367	176	4486	4662	56	2437	2493
ಮಂಗಳೂರು	114810	51614	166424	4843	3516	8359	1315	1286	2601
ಪುತ್ತೂರು	8985	39657	48642	833	5464	6297	347	2382	2729
ಸುಳ್ಯ	3344	24129	27473	418	3814	4232	203	2156	2359
ಜಿಲ್ಲಾ ಮೊತ್ತ	**137816**	**211879**	**349695**	**6502**	**20416**	**26918**	**2024**	**11087**	**13111**

.೩. ಉದ್ಯಮ ಕ್ಷೇತ್ರ:

ದಕ್ಷಿಣ ಕನ್ನಡ ಜಿಲ್ಲೆಯು ಮುಖ್ಯವಾಗಿ ಕೃಷಿಯನ್ನೇ ಅವಲಂಬಸಿದ ಜಿಲ್ಲೆಯಾದರೂ ಪ್ರಸ್ತುತ ಇಲ್ಲಿ ಉದ್ಯಮ ಸ್ವಲ್ಪ ಮಟ್ಟಿಗೆ ಬೆಳೆಯುತ್ತಿದೆ. ಇಲ್ಲಿ ಸಾಫ್ಟ್‌ವೇರ್ ಉದ್ಯಮಗಳು, ರಿಯಲ್ ಎಸ್ಟೇಟ್ ಉದ್ಯಮಗಳು, ತಯಾರಿಕ ಘಟಕಗಳ ಉದ್ಯಮಗಳು ಸ್ವಲ್ಪ ಮಟ್ಟಿಗೆ ಬೆಳೆಯುತ್ತಿವೆ. ಈಗ ಕೃಷಿ ಆಧಾರಿತ ಉದ್ಯಮಕ್ಕೆ ವಿಫುಲ ಅವಕಾಶ ಜಿಲ್ಲೆಯಲ್ಲಿ ಇದೆ. ತೆಂಗು, ಅಡಿಕೆ, ರಬ್ಬರ್‌ಗಳನ್ನು ಆಧರಿಸಿ ಸಾಕಷ್ಟು ಉದ್ಯಮಗಳಿಗೆ ಅವಕಾಶವಿದೆ. ಮತ್ಸ್ಯೋದ್ಯಮದಲ್ಲಿ ಕರ್ನಾಟಕದಲ್ಲಿಯೇ ದಕ್ಷಿಣ ಕನ್ನಡವು ಮುಂದಿದೆ. ಇಲ್ಲಿಯ ಆವೇ ಮಣ್ಣಿನ ಗುಣದಿಂದಾಗಿ ಹಂಚಿನ ಉದ್ಯಮ ಚೆನ್ನಾಗಿ ಬೆಳೆದಿದೆ. ಇತ್ತೀಚೆಗೆ ಬೇರೆ ಬೇರೆ ರೀತಿಯ ಅಲಂಕಾರಿಕ ಟೈಲ್ಸ್ ತಯಾರಿಸುವ ಉದ್ಯಮ ಬೆಳೆಯುತ್ತಿದೆ. ಮಂಗಳೂರು ಹಂಚು ದೇಶದಲ್ಲಿ ಮಾತ್ರವಲ್ಲದೆ ವಿದೇಶಗಳಿಗೂ ರಫ್ತಾಗುತ್ತಿದೆ. ಇಲ್ಲಿಯ ಹಂಚಿಗೆ ಶ್ರೀಲಂಕಾ, ಆಫ್ರಿಕಗಳಿಂದ ಬೇಡಿಕೆ ಇದೆ. ಗೇರುಬೀಜ ಸಂಸ್ಕರಣದ ಉದ್ಯಮಗಳಿಗೆ ಜಿಲ್ಲೆಯಲ್ಲಿ ಸಾಕಷ್ಟು ಪ್ರಾಶಸ್ತ್ಯವಿದೆ. ಕರಾವಳಿಯ ಹೈವೇ ಹಲವಾರು ಉದ್ಯಮಗಳಿಗೆ ದಾರಿಯನ್ನು ತೆರೆದಿದೆ. ಉದ್ಯಮಗಳು ಬೆಳೆಯಬೇಕೆಂಬ ದೃಷ್ಟಿಯಿಂದ ಮಂಗಳೂರಿನ ಬೈಕಂಪಾಡಿಯಲ್ಲಿ ಸ್ಥಳವನ್ನು ಮೀಸಲಿರಿಸಲಾಗಿದೆ. ಉದ್ದಿಮೆಗಳ ಬೆಳವಣಿಗೆಗಾಗಿ ಸಾಲ ನೀಡುವ ಬ್ಯಾಂಕುಗಳ ಸಂಖ್ಯೆ ಹೆಚ್ಚಿದೆ. ಇಷ್ಟೇ ಅಲ್ಲದೆ ಉದ್ದಿಮೆಗಾಗಿ ಸಾಲ ನೀಡಲು ರಾಜ್ಯ ಉದ್ಯಮ ವಿಭಾಗ, ದಕ್ಷಿಣ ಕನ್ನಡ ಉದ್ಯಮ ಸಹಕಾರೀ ಬ್ಯಾಂಕು ಮತ್ತು ರಾಷ್ಟ್ರೀಯ ಸಣ್ಣ ಕೈಗಾರಿಕೆ ಕಾರ್ಪೋರೇಶನ್‌ಗಳನ್ನು ಸ್ಥಾಪಿಸಲಾಗಿದೆ.



ಮಂಗಳೂರು ನಗರದ ಪುರಭವನ

೪. ಬ್ಯಾಂಕಿಂಗ್ ವ್ಯವಹಾರ:

ಬ್ಯಾಂಕಿಗ್ ವ್ಯವಹಾರ ಜಿಲ್ಲೆಯಲ್ಲಿ ಪ್ರಾರಂಭವಾಗುವ ಮೊದಲು ಹಣದ ಲೇವಾದೇವಿ ನಿಧಿ ೂಪದಲ್ಲಿ ಇತ್ತು. ಈ ನಿಧಿಯ ವಿಧಗಳು ಒಂದು ರೀತಿಯಲ್ಲಿ ಸಹಕಾರಿ ತತ್ವದ ಮೇಲೆ ರೂಪಗೊಂಡಿದ್ದವು. ಈಗಲೂ ಈ ನಿಧಿಯ ರೂಪದ ಲೇವಾದೇವಿ ಸಂಸ್ಥೆಗಳು ಹತ್ತು ಜನರ ಒಪ್ಪಂದದ ಮೇಲೆ ಡೆಯುವುದನ್ನೂ ನಾವು ನೋಡಬಹುದು.

ಈ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡದ ಆರ್ಥಿಕ ಪ್ರಗತಿಗೆ ಬ್ಯಾಂಕಿಗ್ ಕ್ಷೇತ್ರದ ಕೊಡುಗೆ ಬಹಳ ೊಡ್ಡದು. ಇಂದು ಭಾರತದಲ್ಲಿ ಹಾಗೂ ವಿದೇಶಗಳಲ್ಲಿ ಬ್ರ್ಯಾಂಚುಗಳಿರುವ ಹಲವು ಬ್ಯಾಂಕುಗಳು ದಕ್ಷಿಣ ನ್ನಡದ ಹೆಮ್ಮೆಯ ಕೊಡುಗೆ ಎಂದು ಹೇಳಬಹುದು. ಬ್ಯಾಂಕಿಂಗ್ ಕ್ಷೇತ್ರಗಳು ಉದ್ಯಮ ಕ್ಷೇತ್ರವನ್ನು ಾರಾಳವಾಗಿ ಬೆಳೆಸಿದವು. ಹಾಗೆಯೇ ನಿರುದ್ಯೋಗದ ಸಮಸ್ಯೆಯನ್ನು ಬಹುಪಾಲು ನಿವಾರಿಸಿದವು. ಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದ ನಾಲ್ಕು ಬ್ಯಾಂಕು ಈ ಜಿಲ್ಲೆಯಲ್ಲಿ ಹುಟ್ಟಿದವು ಎಂಬುದು ಗಮನಾರ್ಹ. ೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಕಾರ್ಪೋರೇಶನ್ ಬ್ಯಾಂಕ್, ವಿಜಯಾ ಬ್ಯಾಂಕ್‌ಗಳು ಅಂತಹ ್ಯಾಂಕುಗಳಾಗಿದ್ದು, ದೇಶಾದ್ಯಂತ ಮತ್ತು ವಿದೇಶಗಳಲ್ಲಿ ಶಾಖೆಗಳನ್ನು ಹೊಂದಿವೆ. ಅಲ್ಲದೆ ಕರ್ನಾಟಕ ್ಯಾಂಕ್ ಒಂದು ಪ್ರಮುಖ ಪ್ರಾದೇಶಿಕ ಬ್ಯಾಂಕ್ ಆಗಿದೆ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಕೂಡ, ಗಣನೀಯ ವ್ಯವಹಾರ ಹೊಂದಿದ್ದು, ದಕ್ಷ ಸಹಕಾರಿ ಬ್ಯಾಂಕ್ ಎಂದು ಖ್ಯಾತಿ ಗಳಿಸಿದೆ.

.೫. ಹೋಟೆಲ್ ಉದ್ಯಮ:

ದಕ್ಷಿಣ ಕನ್ನಡದಲ್ಲಿ ಹುಟ್ಟಿ ದೇಶಾದ್ಯಂತ ವಿಸ್ತರಿಸಿದ ಉದ್ಯಮಗಳಲ್ಲಿ ಬ್ಯಾಂಕಿಂಗ್ ಒಂದಾದರೆ ಹೋಟೇಲು ಉದ್ಯಮ ಇನ್ನೊಂದು. ಇಂದು ದೇಶಾದ್ಯಂತ ಉಡುಪಿ ಹೊಟೇಲುಗಳಿಗೆ ವಿಶಿಷ್ಟವಾದ ಮನ್ನಣೆಯಿದೆ. ಮುಖ್ಯವಾಗಿ ಜಿಲ್ಲೆಯ ಸಾಹಸಿಗಳು ಮುಂಬೈಯಂಥ ಮುಖ್ಯ ನಗರಗಳಿಗೆ ಹೋಗಿ ಹೊಟೇಲು ಉದ್ಯಮವನ್ನು ಬೆಳೆಸಿದರು. ಇದರಿಂದಾಗಿ ಜಿಲ್ಲೆಗೆ ಹೊರಗಿನಿಂದ ಸಂಪತ್ತು ಹರಿದು ಬರುವಂತಾಯಿತು. ಜಿಲ್ಲೆಯ ಜನರು ಬಡತನವೂ ನೀಗಿತು. ಇಂದು ಮುಂಬೈ ಮಾತ್ರವಲ್ಲದೆ ದೇಶದ

ಲ್ಲೆಡೆ ದಕ್ಷಿಣ ಕನ್ನಡದವರ ಹೊಟೇಲು ಉದ್ಯಮಗಳು ಪ್ರಖ್ಯಾತವಾಗಿದೆ. ಮುಂಬೈ, ಮದ್ರಾಸ್, ಡೆಲ್ಲಿಗಳಲ್ಲಿ ಲ್ಲ ಕಡೆ ಜಿಲ್ಲೆಯ ಹೊಟೇಲು ಉದ್ಯಮಗಳು ವಿಸ್ತರಿಸಿದೆ. ವಿವಿಧ ರಾಜ್ಯಗಳ ಸಣ್ಣ ಸಣ್ಣ ನಗರಗಳಲ್ಲೂ ೊಟೇಲುಗಳನ್ನು ಈ ಜಿಲ್ಲೆಯ ಸಾಮಾನ್ಯ ಜನರು ನಡೆಸುವುದನ್ನು ನೋಡಬಹುದು.

ಬ್ಯಾಂಕಿಂಗ್ ಮತ್ತು ಹೊಟೇಲು ಉದ್ಯಮಿಗಳಿಂದ ದಕ್ಷಿಣ ಕನ್ನಡದ ಆರ್ಥಿಕ ಪ್ರಗತಿ ೊಸ ಚೈತನ್ಯ ಬಂದಿದೆ. ಇದರ ಜೊತೆಗೆ ಬೇರೆ ಬೇರೆ ರೀತಿಯ ಉದ್ಯಮಶೀಲತೆ ಬೆಳೆದು ಂದಿರುವುದನ್ನು ನೋಡಬಹುದು. ಜಿಲ್ಲೆಯವರ ಉದ್ಯಮ ಸಾಹಸ ಪ್ರವೃತ್ತಿ ಈ ದಿಸೆಯಲ್ಲಿ ್ತ್ಯಾರ್ಹವಾದುದು. ಬ್ಯಾಂಕುಗಳ ಪ್ರಗತಿಯಿಂದಾಗಿ ಜಿಲ್ಲೆಯ ವ್ಯವಹಾರ ವಾಣಿಜ್ಯ ಚಟುವಟಿಕೆಗಳೂ ಸ್ತರಿಸಿವೆ. ಬ್ಯಾಂಕುಗಳು ರಾಷ್ಟ್ರೀಕರಣಗೊಂಡ ಮೇಲೆ ಅನೇಕ ಯೋಜನೆಗಳ ಮೂಲಕ ಕೃಷಿಕರಿಗೆ ಹಾಗೂ ುದ್ಯಮಿಗಳಿಗೆ ಸಾಲ ನೀಡಿ ಪ್ರೋತ್ಸಾಹಿಸಿವೆ. ಈ ರೀತಿಯ ಬೆಳವಣಿಗೆಯ ಮೂಲಕ ಜಿಲ್ಲೆಯಲ್ಲಿ ್ಯಾಪಕವಾಗಿ ಆಧುನಿಕತೆಯ ಗಾಳಿ ಬೀಸಲಾರಂಭಿಸಿದೆ. ಸರಕಾರ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಿದ ೕಲೆ ಉಂಟಾದ ತೊಂದರೆಗಳ ಪರಿಹಾರಕ್ಕಾಗಿ ಎಂಬಂತೆ ಫೈನಾನ್ಸ್ ಕಂಪನಿಗಳು ಅಪಾರ ಸಂಖ್ಯೆಯಲ್ಲಿ ುಟ್ಟಿವೆ.

೬. ಶಿಕ್ಷಣ:

ಶಿಕ್ಷಣ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆಗೈದಿರುವ ದಕ್ಷಿಣ ಕನ್ನಡವು ಈ ಕ್ಷೇತ್ರದಲ್ಲಿ ರಾಜ್ಯದಲ್ಲೇ ತ್ಯಂತ ಮುಂದುವರಿದ ಜಿಲ್ಲೆಯಾಗಿದೆ. ಸಾಕ್ಷರತಾ ಯೋಜನೆಯಲ್ಲಿ ಸಂಪೂರ್ಣ ಸಾಕ್ಷರತೆಯನ್ನು ಾಧಿಸಿದ ಜಿಲ್ಲೆಯಾಗಿದೆ. ಸಾಂಪ್ರದಾಯಿಕ ಶಿಕ್ಷಣ, ಗುರುಕುಲ ಪದ್ಧತಿಯ ಶಿಕ್ಷಣಗಳಿಂದ ಮುಂದುವರಿದು, ಾಶ್ಚಾತ್ಯ ಮಿಶನರಿಗಳ ಮೂಲಕ ಆಧುನಿಕ ಶಿಕ್ಷಣದ ಸ್ವರೂಪದ ಆರಂಭವನ್ನು ಕಂಡ ಈ ಜಿಲ್ಲೆಯಲ್ಲಿ ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾಲಯದವರೆಗೆ ಅಸಂಖ್ಯಾತ ವಿದ್ಯಾಕೇಂದ್ರಗಳಿವೆ. ವೈದ್ಯಕೀಯ, ಂಜಿನಿಯರಿಂಗ್, ಮ್ಯಾನೇಜ್‌ಮೆಂಟ್, ಹೋಟೇಲ್ ಮ್ಯಾನೇಜ್‌ಮೆಂಟ್, ಫಿಸಿಯೋಥೆರಪಿ, ಫ್ಯಾಶನ್ ಾಂತ್ರಿಕತೆವರೆಗೂ, ಅಂಗವಿಕಲ ಶಾಲೆಯಿಂದ ತೊಡಗಿ, ಕಲಾಶಿಕ್ಷಣ ಶಾಲೆಗಳವರೆಗೂ, ಕುಶಲಕರ್ಮಿ ್ಷಣದಿಂದ ಯೋಗ ಶಿಕ್ಷಣದ ತನಕ ವಿಶಾಲ ವ್ಯಾಪ್ತಿಯ ಶಿಕ್ಷಣ ಕ್ಷೇತ್ರವಿದ್ದು, ದೇಶ ವಿದೇಶಗಳಿಗೆ ಮಾನವ ಂಪನ್ಮೂಲವನ್ನು ದೊಡ್ಡ ಪ್ರಮಾಣದಲ್ಲಿ ಒದಗಿಸಿದೆ. ಇತ್ತೀಚಿನ ದಿನಗಳಲ್ಲಿ ಶಿಕ್ಷಣದಲ್ಲಿ ಅದರಲ್ಲೂ ುಖ್ಯವಾಗಿ ತಾಂತ್ರಿಕ ಶಿಕ್ಷಣದಲ್ಲಿ ಹೆಚ್ಚಿನ ಪ್ರಗತಿಯಾಗಿದೆ. ಹೆಚ್ಚೆಚ್ಚು ಉನ್ನತ ಶಿಕ್ಷಣ ಸಂಸ್ಥೆಗಳ ್ಥಾಪನೆಯಿಂದಾಗಿ ಶಿಕ್ಷಣ ಕ್ಷೇತ್ರವು ಈ ಜಿಲ್ಲೆಯಲ್ಲಿ ಒಂದು ಬೃಹತ್ ಉದ್ಯಮ ಕೇಂದ್ರವಾಗಿ ಬೆಳೆಯುತ್ತಿದೆ. ಿಲ್ಲೆಯಲ್ಲಿರುವ ಎಂಜಿನಿಯರಿಂಗ್ ಕಾಲೇಜುಗಳು, ಅನೇಕ ಪಾಲಿಟೆಕ್ನಿಕ್ ಕಾಲೇಜುಗಳು, ಹಾಗೆಯೇ ಐಟಿಐ ಂಸ್ಥೆಗಳು ಉದ್ಯಮ ಕ್ಷೇತ್ರದ ಬೆಳವಣಿಗೆಗೆ ಸಾಕಷ್ಟು ದೇಣಿಗೆಯನ್ನು ನೀಡುತ್ತಲಿವೆ.

ಖಾಸಗಿ ಸಾಹಸಕ್ಕೆ ಹೆಸರಾದ ಈ ಜಿಲ್ಲೆಯಲ್ಲಿ ಖಾಸಗಿ ಶಿಕ್ಷಣ ವಲಯವೂ ಅತ್ಯಂತ ಲಿಷ್ಟವಾಗಿದೆ. ಜೊತೆಗೆ ಸರಕಾರಿ ಶಿಕ್ಷಣ ಕ್ಷೇತ್ರವೂ ದೊಡ್ಡ ಪ್ರಮಾಣದಲ್ಲಿ ಬೆಳೆದು ಬಂದಿದೆ. ಖಾಸಗಿ ಶಿಕ್ಷಣ ತ್ರದಲ್ಲಿ ಕೆಥೋಲಿಕ್ ಬೋರ್ಡ್, ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್, ಧರ್ಮಸ್ಥಳ ಂಜುನಾಥೇಶ್ವರ ಶಿಕ್ಷಣ ಸಂಸ್ಥೆ, ಕೆನರಾ ಹೈಸ್ಕೂಲ್ ಅಸೋಷಿಯೇಶನ್ ಮತ್ತು ನಿಟ್ಟೆ ಎಜ್ಯುಕೇಶನ್ ವುಗಳಲ್ಲಿ ಪ್ರಮುಖವಾದವುಗಳು.

೨. ಉದ್ಯಮೀಕರಣದ ಸವಾಲುಗಳು:

ಈ ಜಿಲ್ಲೆಯು ಮುಖ್ಯವಾಗಿ ಬ್ಯಾಂಕಿಂಗ್‌ನಂತಹ ಸೇವಾ ಉದ್ಯಮಗಳಿಗೆ ಮತ್ತು ಕೆಲವು ಕಿರು ದ್ಯಮಗಳಿಗೆ ಪ್ರಸಿದ್ಧವಾದುದು. ಇದೀಗ ಈ ಜಿಲ್ಲೆಗೆ ವಿಶೇಷವಾಗಿ ಮಂಗಳೂರಿನಿಂದ ಉಡುಪಿಯವರೆಗಿನ ರಾವಳಿ ಪ್ರದೇಶಕ್ಕೆ ದೊಡ್ಡ ಸಂಖ್ಯೆಯಲ್ಲಿ ಬೃಹತ್ ಉದ್ಯಮಗಳು ಪ್ರವೇಶಿಸುತ್ತಿವೆ. ಈ ಚಿಕ್ಕ ಪ್ರದೇಶದಲ್ಲಿ ಮಾರು ಐವತ್ತರಷ್ಟು ದೊಡ್ಡ ಉದ್ಯಮಗಳೂ, ಅದಕ್ಕೆ ಸಂಬಂಧಿಸಿದ ಹಲವು ಪೂರಕ ಉದ್ಯಮಗಳೂ ರಂಭವಾಗುವ ಸಿದ್ಧತೆ ನಡೆದಿದ್ದು, ಇದು ಈ ಪ್ರದೇಶದ ಭವಿಷ್ಯದ ಕುರಿತು ದೊಡ್ಡ ಚರ್ಚೆಗೆ ರಣವಾಗಿದೆ. ಸರಕಾರವೂ, ಉದ್ಯಮಿಗಳೂ ಈ ಬಗೆಯ ಔದ್ಯಮೀಕರಣವು ಅಭಿವೃದ್ಧಿಗೆ ಅನಿವಾರ್ಯವೆಂದು ಾದಿಸಿದರೂ, ಪರ್ಯಾಯ ಅಭಿವೃದ್ಧಿ ವಾದಿಗಳೂ, ಪರಿಸರವಾದಿಗಳೂ ಈ ಅಭಿವೃದ್ಧಿಯ ಚಿಂತನೆಯನ್ನೇ ಶ್ನಿಸುತ್ತಿದ್ದಾರೆ. ಬೃಹತ್ ಉದ್ಯಮಗಳ ಕೇಂದ್ರಿಕರಣವು ಹಲವು ಆಪತ್ತುಗಳಿಗೆ ಕಾರಣವೆಂದೂ, ಜಿಲ್ಲೆಯ ಾರಣಾ ಶಕ್ತಿಯ ಮೇಲೆ, ಪರಿಸರ, ಸಮುದ್ರ, ಜೀವಜಾಲಗಳ ಮೇಲೂ, ನಾಗರಿಕ ಸೌಲಭ್ಯಗಳ ಜೊತೆಗೆ ಈ ಜಿಲ್ಲೆಗಳಲ್ಲಿ ಇರುವ ಬುಡಕಟ್ಟು ಸಮುದಾಯಗಳ ಮೇಲೆ ಇದು ದುಷ್ಪರಿಣಾಮವನ್ನು ಬೀರಿ, ಜನ ೀವನವನ್ನು ಬಹುವಾಗಿ ಬಾಧಿಸಲಿದೆಯೆಂದೂ ವಾದಿಸಲಾಗಿದ್ದು, ಈ ಅಭಿಪ್ರಾಯಗಳಿಗೆ ರಾಷ್ಟ್ರೀಯ, ಂತರಾಷ್ಟ್ರಿಯ ತಜ್ಞರ ಬೆಂಬಲವಿದೆ. ಪರಿಸರ ಸಂಬಂಧಿ ತಜ್ಞ ಸಮಿತಿಗಳೂ, ಖಾಸಗಿ ಸಂಸ್ಥೆಗಳೂ ತಮ್ಮ ಾದಗಳಲ್ಲಿ ಈ ಬಗೆಯ ಉದ್ಯಮೀಕರಣವನ್ನೂ ವಿರೋಧಿಸಿವೆ. ೧೯೩೦ರ ದಶಕದಲ್ಲಿ ಈ ಪ್ರದೇಶವು ೃಹತ್ ಉದ್ಯಮಗಳಿಗೆ ಸೂಕ್ತವಲ್ಲ ಎಂದು ಅಂದಿನ ತಜ್ಞ ಸಮಿತಿಯೊಂದು ಅಭಿಪ್ರಾಯಪಟ್ಟದನ್ನು ಇಲ್ಲಿ ೆನಪಿಸಿಕೊಳ್ಳಬಹುದು. ಅಂತೂ, ಈ ಬೃಹತ್ ಉದ್ಯಮಗಳ ಕೇಂದ್ರೀಕರಣವು ಸದ್ಯ ಈ ಪ್ರದೇಶದ ುಖ್ಯವಾದ ಒಂದು ಸಮಸ್ಯೆಯಾಗಿದ್ದು, ಮುಂದಿನ ಐದು ವರ್ಷಗಳು ಈ ನಿಟ್ಟಿನಲ್ಲಿ ರ್ಣಾಯಕವಾಗಲಿವೆ.

ಬಹುಭಾಷಿಕತೆ, ಸಂಸ್ಕೃತಿ ಮತ್ತು ಮತೀಯ ಸಾಮರಸ್ಯ, ಖಾಸಗಿ ಸಾಹಸ, ಉದ್ಯಮಶೀಲತೆ, ಿಕ್ಷಣ, ಸಾಹಿತ್ಯ, ಕಲೆ, ಅಭಿವೃದ್ಧಿ ಮುಂತಾದವುಗಳಲ್ಲಿ ಮಾದರಿ ಪ್ರದೇಶವೆನಿಸುವ ದಕ್ಷಿಣ ಕನ್ನಡವು ಅನೇಕ ್ಥಿತ್ಯಂತರಗಳನ್ನು ಹಾಗೂ ಸವಾಲುಗಳನ್ನು ಸ್ವೀಕರಿಸುತ್ತ ಮುನ್ನಡೆದಿದೆ. ಜೊತೆಗೆ ಉದ್ಯಮೀಕರಣ, ರುದ್ಯೋಗ, ಜನಸಂಖ್ಯೆಯ ಸಮಸ್ಯೆಗಳಿಂದಲೂ, ಸಾರ್ವಜನಿಕ ಸೌಲಭ್ಯಗಳ ಮೇಲೆ ಹೆಚ್ಚುತ್ತಿರುವ

ಡಿಕೆಯಿಂದಲೂ, ಒತ್ತಡಗಳನ್ನು ಅನುಭವಿಸುತ್ತಿದೆ, ಶಾಂತಿ, ಭದ್ರತೆಗಳಿಗೆ ಹೆಸರಾದ ಈ ಪ್ರದೇಶದಲ್ಲಿ ತ್ತೀಚೆಗೆ ಕಾನೂನು ಸುವ್ಯವಸ್ಥೆ ಸಮಸ್ಯೆಗಳೂ ತಲೆದೋರಿವೆ. ಪರಶುರಾಮನು ತನ್ನ ಕೊಡಲಿಯನ್ನು ಸೆದು ಸಮುದ್ರವನ್ನು ಹಿಂದೆ ಸರಿಸಿ ಹೊಸ ನೆಲವನ್ನು ಪಡೆದುದರಿಂದ ಪರಶುರಾಮ ಸೃಷ್ಟಿ ಎನಿಸಿದ ಾವಳಿಯ ಭಾಗವಿದು. ಹೊಸ ಕ್ಷೇತ್ರಗಳನ್ನು ಪಡೆಯುವ, ಆಪತ್ತಿನ ತರೆಗಳನ್ನು ದೂರ ಸರಿಸುವ ಜನಶೀಲತೆ, ಕ್ರಿಯಾಶಕ್ತಿ ಇಲ್ಲಿಯ ಜನರಲ್ಲಿದ್ದು, ಅವುಗಳಿಗೆ ಹೆಚ್ಚು ಅವಕಾಶಗಳೂ, ಸವಾಲುಗಳೂ, ುಂದಿನ ದಿನಗಳಲ್ಲಿ ಕಾದಿವೆ.

ಉಡುಪಿ ಜಿಲ್ಲೆಯ ಇತಿಹಾಸ:

"ಉಡುಪಿ" ಎಂಬ ಪದ ಸಂಸ್ಕೃತ ಭಾಷೆಯ "ಉಡುಪ" ಎಂಬ ಪದದ ಮೂಲದಿಂದ ಂದಿದ್ದು, ಚಂದ್ರ ಎಂಬ ಅರ್ಥವನ್ನು ಹೊಂದಿದ್ದು, ಇದು ಉಡುಪಿಯ ಅತ್ಯಂತ ಪುರಾತನ ಂದ್ರಮೌಳಶ್ವರ ದೇವಸ್ಥಾನದ ಜೊತೆ ಸಂಬಂಧ ಹೊಂದಿದೆ ಎಂದು ಇತಿಹಾಸದಲ್ಲಿ ಉಲ್ಲೇಖಿಸಲಾಗಿದೆ.



ಉಡುಪಿ ಜಿಲ್ಲೆ

ಉಡುಪಿ ಜಿಲ್ಲೆಯು ಈ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿದ್ದು ೧೯೯೭ ಆಗಸ್ಟ್ ೨೫ ರಂದು ಪ್ರತ್ಯೇಕ ಜಿಲ್ಲೆಯಾಗಿ ರಾಜ್ಯ ಸರ್ಕಾರದಿಂದ ಘೋಷಣೆಯಾಯಿತು. ಒಟ್ಟು ೬೮.೨೩km ೨೬.೩೪ Sq mit.)ನಷ್ಟು ವಿಸ್ತೀರ್ಣ ಹೊಂದಿರುವ ಉಡುಪಿ ಜಿಲ್ಲೆಯ ಒಟ್ಟು ಜನಸಂಖ್ಯೆ ೧,೬೫,೪೦೧. ಇದರಲ್ಲಿ ಪುರುಷರ ಪ್ರಮಾಣ ೪೯% ಮತ್ತು ಮಹಿಳೆಯರ ಪ್ರಮಾಣ ೫೧%. ಉಡುಪಿ ಜಿಲ್ಲೆಯ ಸಾಕ್ಷರತಾ ಪ್ರಮಾಣವು ೮೩% ಹೊಂದಿದ್ದು ಇದರಲ್ಲಿ ಪುರುಷರು ೮೬% ಮತ್ತು ಮಹಿಳೆಯರು ೮೧% ಸಾಕ್ಷರತಾ ಪ್ರಮಾಣವನ್ನು ಹೊಂದಿದ್ದಾರೆ.

.೧. ಉಡುಪಿ ಜಿಲ್ಲೆಯ ಜನಸಂಖ್ಯೆ:

೨೦೧೧ರ ಜನಗಣತಿಯ ಪ್ರಕಾರ ಉಡುಪಿ ಜಿಲ್ಲೆಯು ೧,೧೭೭,೩೬೧ರಷ್ಟು ಜನಸಂಖ್ಯೆಯನ್ನು ಹೊಂದಿದ್ದು, ಇದರಲ್ಲಿ ಪುರುಷರ ಜನಸಂಖ್ಯೆ ೫,೬೨,೧೩೧ ಮತ್ತು ಮಹಿಳೆಯರ ಜನಸಂಖ್ಯೆ ೬,೧೫,೨೩೦. ಉಡುಪಿ ಜಿಲ್ಲೆಯು ಒಟ್ಟು ೩೫೮೨ Sq.km ಗಳಷ್ಟು ವಿಸ್ತೀರ್ಣವನ್ನು

ಾಂದಿದ್ದು, ಒಟ್ಟು ಜನಸಂಖ್ಯೆಯಲ್ಲಿ ೨೮.೩೭% ಜನರು ನಗರವಾಸಿಗಳು ಮತ್ತು ಶೇಕಡಾ ೭೧.೬೩% ಷ್ಟು ಗ್ರಾಮೀಣವಾಸಿಗಳಾಗಿದ್ದಾರೆ.

ಉಡುಪಿ ಜಿಲ್ಲೆಯ ಬುಡಕಟ್ಟುಗಳ ಜನಸಂಖ್ಯೆ (೨೦೧೧ ಜನಗಣತಿ)

ಬುಡಕಟ್ಟು ಸಮುದಾಯಗಳು	**ಅಂಕಿ–ಅಂಶಗಳು**
ಒಟ್ಟು ಜನಸಂಖ್ಯೆ	೫೨,೮೯೭
ಪುರುಷರು	೨೬,೨೬೮
ಮಹಿಳೆಯರು	೨೬,೬೬೯
ನಗರವಾಸಿಗಳು	೧೧,೩೦೧
ಗ್ರಾಮೀಣವಾಸಿಗಳು	೫೨,೮೯೭

.೨.೨.ಉಡುಪಿ ಜಿಲ್ಲೆಯ ತಾಲೂಕುವಾರು ಬುಡಕಟ್ಟುಗಳ ಜನಸಂಖ್ಯೆ:

ಕ್ರ.ಸಂ	**ತಾಲೂಕು**	**ಪುರುಷರು**	**ಮಹಿಳೆಯರು**	**ಒಟ್ಟು**
1	ಉಡುಪಿ	9967	10150	20117
2	ಕುಂದಾಪುರ	5543	5640	11183
3	ಕಾರ್ಕಳ	5062	5251	10313
	ಒಟ್ಟು	**20572**	**21041**	**41613**

೨೦೦೪ರ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಉಡುಪಿ ಜಿಲ್ಲೆಯು ಒಟ್ಟು ೦.೭೧೪ ಅಂಕಗಳನ್ನು ಗಳಿಸಿ ಮಾನವ ಅಭಿವೃದ್ಧಿ ಪ್ರಮಾಣದಲ್ಲಿ ರಾಜ್ಯದಲ್ಲಿ ಮೂರನೆಯ ಸ್ಥಾನ ಪಡೆದುಕೊಂಡಿದೆ. ಆರೋಗ್ಯ ಸೂಚ್ಯಾಂಕದಲ್ಲಿ ೦.೭೧೩ ಅಂಕಗಳಿಸಿ ರಾಜ್ಯದಲ್ಲಿ ಮೊದಲ ಸ್ಥಾನ ಪಡೆದುಕೊಂಡಿದೆ. ಹಾಗೆಯೇ ಶಿಕ್ಷಣ ಸೂಚ್ಯಾಂಕದಲ್ಲಿ ೦.೮೪೨ ಅಂಕಗಳನ್ನು ಪಡೆದು ರಾಜ್ಯದಲ್ಲೇ ಎರಡನೆಯ ಸ್ಥಾನ ಪಡೆದುಕೊಂಡರೆ, ಆದಾಯ ಸೂಚ್ಯಾಂಕ ಸ್ಥಾನಮಾನದಲ್ಲಿ ೦.೫೮೮ ಅಂಕಗಳನ್ನು ಪಡೆದು ೫ನೆಯ ಸ್ಥಾನವನ್ನು ಪಡೆದುಕೊಂಡಿದೆ.

. ಉಡುಪಿ ಜಿಲ್ಲೆಯ ಪ್ರಮುಖ ಧರ್ಮಗಳು ಮತ್ತು ಜನಸಂಖ್ಯೆ (೨೦೧೧ ಜನಗಣತಿ)

ಧರ್ಮಗಳು	ಒಟ್ಟು ಜನಸಂಖ್ಯೆ	ಶೇಕಡಾವಾರು
ಹಿಂದು	೧,೦೦೦೯,೧೭೯	೮೫.೭೨%
ಮುಸ್ಲಿಂ	೯೬,೭೪೦	೮.೨೨%
ಕ್ರಿಶ್ಚಿಯನ್	೬೫,೮೩೮	೫.೫೯%
ಸಿಖ್	೨೩೨	೦.೦೨%
ಜೈನ	೪,೫೩೪	೦.೩೯%
ಇತರ	೧೫೫	೦.೦೧%
ಉಲ್ಲೇಖವಾಗದ	೫೨೨	೦.೦೪%

ಉಡುಪಿ ಜಿಲ್ಲೆಯು ಒಟ್ಟು ೧,೧೭೭,೩೬೧ ಜನಸಂಖ್ಯೆಯನ್ನು ಹೊಂದಿದ್ದು ರಾಜ್ಯದ ಜನಸಂಖ್ಯೆಯ ೀಕಡಾ ೧.೯%ರಷ್ಟು ಹೊಂದಿರುತ್ತದೆ, ಮತ್ತು ಜನಸಂಖ್ಯೆಯ ಆಧಾರದಲ್ಲಿ ರಾಜ್ಯದಲ್ಲಿ ೨೩ನೇ ಸ್ಥಾನ ೊಂದಿದೆ. ಉಡುಪಿ ಜಿಲ್ಲೆಯ ಲಿಂಗಾನುಪಾತ ಪ್ರಮಾಣವು ರಾಜ್ಯದ ಉಳಿದ ಜಿಲ್ಲೆಗಳಿಗೆ ಹೋಲಿಸಿದಲ್ಲಿ ತೀ ಹೆಚ್ಚಿನದಾಗಿರುತ್ತದೆ ಮತ್ತು ಮೊದಲ ಸ್ಥಾನ ಪಡೆದಿರುತ್ತದೆ. (ಲಿಂಗಾನುಪಾತ ಪ್ರಮಾಣ ೦೯೪:೧೦೦೦). ಉಡುಪಿ ಜಿಲ್ಲೆಯು ಶೇಕಡಾ ೮೬.೨ರಷ್ಟು ಸಾಕ್ಷರತಾ ಪ್ರಮಾಣವನ್ನು ಹೊಂದಿದ್ದು ಾಜ್ಯದಲ್ಲಿ ಮೂರನೇ ಸ್ಥಾನ ಪಡೆದುಕೊಂಡಿದೆ. ಉಡುಪಿ ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯದ ಿಂಗಾನುಪಾತ ಪ್ರಮಾಣವು ೧೦೧೭:೧೦೦೦ ಇದೆ ಮತ್ತು ಉಳಿದ ಜಿಲ್ಲೆಗಳಿಗಿಂತ ಉತ್ತಮವಾಗಿದೆ.

.೪. ಉಡುಪಿ ಜಿಲ್ಲೆಯ ತಾಲೂಕು, ಗ್ರಾಮ, ನಗರಗಳು:

ಉಡುಪಿ ಜಿಲ್ಲೆ ತಾಲೂಕುಗಳು	ಗ್ರಾಮಗಳು	ನಗರಗಳು
ಕುಂದಾಪುರ	೯೮	೨
ಉಡುಪಿ	೮೬	೧೬
ಕಾರ್ಕಳ	೪೯	೨



ಛಾಯ ಚಿತ್ರ ಸಂ. ಉಡುಪಿ ಜಿಲ್ಲಾಧಿಕಾರಿಗಳ ಕಛೇರಿ

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರಮುಖ ಬುಡಕಟ್ಟುಗಳು:

೩.೧. ಕೊರಗರು:

೨.೩.೧.೧. ಕೊರಗ ಸಮುದಾಯದ ಮೂಲ:

ಕೊರಗ ಸಮುದಾಯದ ಮೂಲ ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ನ್ನಾಭಿಪ್ರಾಯಗಳನ್ನು ಅಷ್ಟೊಂದು ಸಲೀಸಾಗಿ ತಳ್ಳಿ ಹಾಕುವಂತಿಲ್ಲ. ಈ ಭಿನ್ನಾಭಿಪ್ರಾಯಗಳಲ್ಲಿ ಐತಿಹಾಸಿಕ ುತ್ತು ಪೌರಾಣಿಕ ವಿಷಯಗಳನ್ನೊಳಗೊಂಡಿವೆ ಹಾಗೂ ಇವುಗಳಲ್ಲಿ ಪ್ರತ್ಯೇಕತೆಯಿರುವುದಲ್ಲದೆ, ಎರಡನ್ನೂ ಮೀಕರಿಸಿ ಹೇಳಿರುವಂತಹದ್ದೂ ಕಂಡು ಬರುತ್ತದೆ. ಈ ವಿಷಯ ವಸ್ತುವನ್ನು ಪೌರಾಣಿಕ ಮತ್ತು ಾರಿತ್ರಿಕತೆಯ ಹಿನ್ನೆಲೆಯಲ್ಲಿಯೇ ಒಡೆದು ನೋಡಿ ಅವುಗಳ ಮೂಲ ಸ್ವರೂಪವನ್ನು ಕೆದುಕಬಹುದಾಗಿದೆ.

೨.೩.೧.೨. ಕೈಫಿಯತ್ತಿನ ದಾಖಲೆಗಳು:

ಚಾರಿತ್ರಿಕವಾಗಿ ಕೊರಗರ ಮೂಲದ ಬಗೆಗೆ ಸಮಾಜಶಾಸ್ತ್ರಿಯ ಮತ್ತು ರಾಜಕೀಯ ್ರಾಬಲ್ಯದ ಸೋಲಿನ ವಿವರಣೆಗಳಿವೆ. ಕ್ರಿ. ಶ. ೧೮೭೫ರಲ್ಲಿ ಎಂ. ಓ. ವಾಲೆ ಹೌಸ್ ಬರೆದ ಲೇಖನದಲ್ಲಿ Journal of Anthropological Institute IV) ಕೈಫಿಯತ್ತು ನೀಡುವ ದಾಖಲೆ ಈ ರೀತಿಯಾಗಿದೆ.

ೃಫಿಯತ್ತಿನಲ್ಲಿರುವ ದಾಖಲೆಗಳು:

* ವರ್ಣ ವ್ಯವಸ್ಥೆ ಹೇಗೆ ಸೃಷ್ಟಿಯಾಯಿತು ಮತ್ತು ಮೂರು ಘಟ್ಟಗಳಲ್ಲಿ ಆದ ಬದಲಾವಣೆ ಹಾಗೂ ವರ್ಣ ಸಂಕರದ ವರ್ಣಭೇದಗಳ ವಿಚಾರ ಪ್ರಸ್ತಾಪಿಸಲಾಗಿದೆ.
* ಕೊನೆಯ ಘಟ್ಟದಲ್ಲಿ, ಶೂದ್ರ ಮತ್ತು ಬ್ರಾಹ್ಮಣರ ಸಂಕರದಿಂದ ಹುಟ್ಟಿದವರು ಚಂಡಾಲರಾದರು. ಇವರಲ್ಲಿ ೧೫ ಉಪವರ್ಗಗಳಿದ್ದು. ಕೊನೆಯ ವರ್ಗದಲ್ಲಿ ಬರುವವರು ಕೊರಗರು
* ಕೊರಗರಲ್ಲಿ ಎರಡು ಪಂಗಡಗಳು 'ಕಪಟ' ಅಥವಾ 'ಕಂಬಳಿ' 'ಕೊರಗರು' ಮತ್ತು 'ಸೊಪ್ಪು ಕೊರಗರು'.

೨.೩.ಚಾರಿತ್ರಿಕ ಹಿನ್ನೆಲೆ:

ಡರ್ಸ್ಟನ್ ತನ್ನ "ದಕ್ಷಿಣ ಭಾರತದ ಜಾತಿಗಳು ಮತ್ತು ಪಂಗಡಗಳು" ಎಂಬ ಬೃಹತ್ ಗ್ರಂಥ ೯ನೇ ಶತಮಾನದಲ್ಲಿ ಪ್ರಕಟಿಸಲ್ಪಟ್ಟಿರುವ ಮಾನ್ಯುಯಾಲ್ ಅಫ್ ದಿ. ಸೌತ್ ಕೆನರಾ ಡಿಸ್ಟ್ರಿಕ್ಟ್ ಕೃತಿಯಿಂದ ಹತ್ವದ ಸಂಗತಿಯೊಂದನ್ನು ಉಲ್ಲೇಖಿಸಿದ್ದಾನೆ. ಒಂದು ದಂತಕತೆಯ ಪ್ರಕಾರ "ಹಬಾಶಿಕಾ ಂಗಾರವರ್ಮ ರೂಪಿಸಿದ ತಂತ್ರಕ್ಕೆ ಬಲಿಯಾಗಿ ಮರಣ ಹೊಂದಿದನು. ಅದೇನೆಂದರೆ ಹತ್ತಿರದ ಇನ್ನೊಬ್ಬ ಜನನ್ನು ತನ್ನ ತಂಗಿಯೊಂದಿಗೆ ಹಬಾಶಿಕಾನ ವಿವಾಹಕ್ಕೆ ಪ್ರೇರೆಪಿಸಿದನು. ಅಂಗಾರವರ್ಮ ಮತ್ತು ನ್ನೊಬ್ಬ ರಾಜ ಸೇರಿ ಕುಟಿಲ ತಂತ್ರವೊಂದನ್ನು ರೂಪಿಸಿದರು. ಮದುವಣಿಗನಾಗಿ ತನ್ನ ತಿಬಾಂಧವರೊಂದಿಗೆ ಬಂದ ಹಬಾಶಿಕಾನನ್ನೂ ಅನುಯಾಯಿಗಳನ್ನು ಅಂಗಾರವರ್ಮ ಭೀಕರ ತ್ಯೆಗೈದನು. ಅನಂತರ ಅಂಗಾರವರ್ಮನು ಮಂಜೇಶ್ರಕ್ಕೆ ದಾಳಿಯಿಟ್ಟು ಹುಬಾಶಿಕಾನ ಸೈನಿಕರನ್ನು ೂಡೆದೋಡಿಸಿದನು.: ಅವರನ್ನು ಕಾಡಿಗಟ್ಟಿದನು ಅವರು ಗುಲಾಮರಾಗಲು ಒಪ್ಪುವ ತನಕ ಂಸಿಸಲಾಯಿತು ಆದರೆ ಹಬಾಶಿಕಾ ರಾಜ್ಯವಾಳುತ್ತಿದ್ದಾಗ ಸರ್ಕಾರದ ಅತ್ಯುನ್ನತ ಪದವಿಗಳಿಗೇರಿದ್ದ ಾರಗರನ್ನು ವಿವಸ್ತ್ರಗೊಳಿಸಿ ಕರಾವಳಿ ಕಡೆಗೆ ನೇಣು ಹಾಕಲು ಓಡಿಸಲಾಯಿತು. ಆಗ ನಗ್ನ ಕೊರಗರು ಡದ ಸೊಪ್ಪು ಎಲೆಗಳಿಂದ ತಮ್ಮ ಗುಪ್ತಾಂಗಗಳನ್ನು ಮುಚ್ಚಿಕೊಂಡರು, ತಮ್ಮ ನಗ್ನತೆಗಾಗಿ ಅವರು ಾಚಿಕೊಂಡು ಅವಮಾನಕ್ಕೊಳಗಾದರು. ಆಗ ಅಂಗಾರವರ್ಮನ ಸೈನಿಕರು ಕೊರಗರ ಬಗೆಗೆ ಕರುಣೆ ೂರಿದರು. ಆದರೆ ಅವರು ಇನ್ನೆಂದಿಗೂ ವಸ್ತ್ರ ತೊಡದೆ ಕೇವಲ ಸೊಪ್ಪು ಎಲೆಗಳಿಂದಲೇ ತಮ್ಮ ತಮ್ಮ ೇಹಗಳನ್ನು ಮುಚ್ಚಿಕೊಳ್ಳಬೇಕೆಂದು ಕಟ್ಟಪ್ಪಣೆ ಮಾಡಿ ಆ ಕೊರಗರನ್ನು ಬಿಟ್ಟು ಬಿಟ್ಟರು. ಹೀಗೆ ಕೊರಗರ ಟ್ಟು ಆಯಿತು."

ಈ ವಿಚಾರಗಳ ಹಿನ್ನೆಲೆಯಲ್ಲಿ ನಾವು ಕೊರಗ ಸಮುದಾಯವನ್ನು ಗಮನಿಸಿದಾಗ ಸ್ತಿಪಾಸ್ತಿಗಳಿಲ್ಲದೆಯೇ ಕಾಡುಮೇಡುಗಳನ್ನಲೆಯುವುದು. ವಾಸವಾಗಿರುವ ಸ್ಥಳ ಊರಿನಿಂದ ೂರಗಿರುವುದು, ಆಸ್ತಿಯ ಮಾಲೀಕರು ಹೊಡೆದೋಡಿಸಿದಾಗ ಅಲ್ಲಿಂದ ಓಡಿ ಹೋಗುವುದು, ಅಧಿಕೃತ ನಸಂಪರ್ಕ ಕಡಿದುಕೊಂಡು ಕಾಡುಮೇಡುಗಳಲ್ಲಿ ವಾಸಿಸುತ್ತ ಕೊರಗರು ಸೃಷ್ಟಿಯಾರಾಧಕರಾಗಿದ್ದಾರೆ. ವರು ತಮ್ಮ ವೈಭವದ ಸಂಸ್ಕೃತಿಯ ಸಂಬಂಧವನ್ನು ಕಳೆದುಕೊಂಡರು. ಸಂಸ್ಕೃತಿಯ ಮೂಲದ ಂಬಂಧಗಳನ್ನು ಮಾತ್ರ ಕಳಚಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲವೆನ್ನುವುದು ಅವರ ಆಚಾರ ವಿಚಾರಗಳು ಂಬಿಕೆ ಸಂಪ್ರಾದಾಯಗಳು ವಿಧಿ ನಿಷೇಧಗಳು, ಕಥೆ ಪಾಡ್ದನಗಳು ಪಳಿಯುಳಿಕೆಗಳಾಗಿ ನಿಂತುಕೊಳ್ಳುತ್ತವೆ.

ಇನ್ನೊಂದು ಮಹತ್ವದ ವಿಷಯವೆಂದರೆ ಕೊರಗರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ೋಗುವಾಗ ಅವರ ಕೈಯಲ್ಲಿ 'ದಂಡ' ಇರಲೇ ಬೇಕು ಎಂಬ ನಿಯಮವಿದೆ, ದಂಡ ಎನ್ನುವುದು ಧಿಕಾರದ ಸಂಕೇತವಾಗಿ ಬರುತ್ತದೆ. ಇದು ಈ ಹಿಂದೆ ಇದ್ದ ಅಧಿಕಾರದ ಪಳೆಯುಳಿಕೆಯನ್ನು

ಚಿಸುತ್ತದೆ ಎನ್ನಬಹುದು. ಕೊರಗ ತನಿಯನ ಕೈಯಲ್ಲಿಯೂ ಈ ದಂಡ ಇರುವುದು ಹೆಚ್ಚಿನ ಾವೆಯನ್ನು ಕೊಡುತ್ತದೆ. ಇದೇ ದಂಡದ ಹಿಂದೆ ಇನ್ನೊಂದು ಪದ್ಧತಿಯೂ ಇದೆ. ಊರಲ್ಲಿ ೇಶಿಸುವಾಗ ದಂಡದಿಂದ ನೆಲವನ್ನು ಕುಟ್ಟಿ ಸದ್ದು ಮಾಡುತ್ತಾ ಬರಬೇಕೆನ್ನುವುದು. ಇದು ಕೊರಗರ ಶಕುನದ ಹಿನ್ನೆಲೆಯಲ್ಲಿ ಈ ಪದ್ಧತಿಯನ್ನು ಅರ್ಥೈಸುವುದಿದೆ. ಈ ಅರ್ಥೈಸುವಿಕೆಯನ್ನು ್ಲಗಳೆಯಲಾಗದಿದ್ದರೂ ಕಾಲಾಂತರದಲ್ಲಿ ನಿರಾಶ್ರಿತತೆ ಮತ್ತು ದೌರ್ಬಲ್ಯಗಳು, ಅಸ್ಪೃಶ್ಯತಾ ಸೋಂಕು-ೆಲ್ಲವುಗಳ ಹಿನ್ನೆಲೆಯಲ್ಲಿ ಅದು ಅಪಶಕುನದ ಅರ್ಥ ಪಡೆದುಕೊಂಡಿರಬಹುದಾದ ಸಾಧ್ಯತೆಗಳೇ ್ಚಾಗಿವೆ ಎನಿಸುತ್ತದೆ.

.೪. ಕೊರಗರ ದೈಹಿಕ ಲಕ್ಷಣ ಮತ್ತು ವೇಷಭೂಷಣಗಳು:

ಕೊರಗರ ದೈಹಿಕ ಚಹರೆ ಮತ್ತು ಲಕ್ಷಣಗಳು ಬಹುಮಟ್ಟಿಗೆ ದ್ರಾವಿಡ ಜನಾಂಗಕ್ಕೆ ್ತಿರವಾಗಿವೆ. ಕೊರಗರು ಕಪ್ಪು ಮೈ ಬಣ್ಣದವರು, ಅಗಲವೂ ಚಪ್ಪಟೆ ಮೂಗು, ಪುಟ್ಟ ಪುಟ್ಟ ಕಂಗಳು, ಗಲವಾದ ಹಣೆ, ಕಪ್ಪು ಕಪ್ಪಾದ ದಟ್ಟವಾದ ಗುಂಗುರು ಕೂದಲು ಉಳ್ಳವರು. ಸುಮಾರು ಐದು ಅಡಿ ಲ್ಕು-ಆರು ಇಂಚು ಎತ್ತರದ ಕೊರಗರು ದೈಹಿಕ ರಚನೆ ಲಕ್ಷಣಗಳಲ್ಲಿ ಕೆಲವು ಮಟ್ಟಿಗೆ ದಕ್ಷಿಣ ಭಾರತದ ತರೇ ಗುಡ್ಡ ಗಾಡು ಜನರನ್ನೂ ಹೋಲುವರು. ದಪ್ಪವಾದ ತೊಂಡೆ ಹಣ್ಣಿನಂಥ ತುಟಿಗಳು ಡುಬರುತ್ತವೆ.

ಕೊರಗರ ವೇಷಭೂಷಣ ಬಹಳ ಸರಳವಾಗಿದೆ. ಏಕೆಂದರೆ ಅವರಿಗೆ ವಸ್ತ್ರ ತೊಡಬಾರದೆಂಬ ಷೇಧವಿರುವುದರಿಂದ ಅವರು ಕೇವಲ ಮುಂಡು ಧರಿಸುವುದು, ಅಥವಾ ಸೊಪ್ಪಸೆದೆ ಕಟ್ಟಿಕೊಳ್ಳುವುದು ಂದು ಕಾಲದಲ್ಲಿ ನಡೆದ ಪದ್ಧತಿಯಾಗಿತ್ತು. ಇಂದು ಕೊರಗರು ಜನಸಾಮಾನ್ಯರು ಧರಿಸುವಂತಹ ುಡುಪುಗಳನ್ನು ಉಟ್ಟುಕೊಳ್ಳುವುದು ಕಂಡುಬರುತ್ತದೆ. ಗಂಡಸರು ಹೆಂಗಸರಂತೆ ಉದ್ದ ಕೂದಲು ಡುವರು, ಗಡ್ಡ ಮೀಸೆಗಳನ್ನು ಉದ್ದವಾಗಿ ಬೆಳೆಸುವ ಕ್ರಮವಿತ್ತು. ಇತ್ತೀಚೆಗೆ ಕೊರಗರ ಗಂಡಸರು ತರರಂತೆ ಲುಂಗಿ ಪಂಚೆಯನ್ನೂ ಬಣ್ಣ ಬಣ್ಣದ ಹತ್ತಿ ಬಟ್ಟೆಗಳನ್ನೂ ಟೆರಿಕಾಟ್ ಅಂಗಿಗಳನ್ನು ಬಳಸುವರು. ಂದೆ ಕೊರಗರ ಹೆಂಗಸರು ಮುಂಡನ್ನು ಸೊಂಟಕ್ಕೆ ಕಟ್ಟಿ ರವಿಕೆಯನ್ನು ತೊಡುತ್ತಿದ್ದರು ಸೆರಗು ಾಕುತ್ತಿರಲಿಲ್ಲ. ಇಂದಿಗೂ ಹಳ್ಳಿಗಾಡುಗಳಲ್ಲಿರುವ ಕೊರಗ ಹೆಂಗಸರು ಅದೇ ಹಳೆಯ ಪದ್ಧತಿ ನುಸರಿಸುತ್ತಿರುವುದು ಕಂಡುಬರುತ್ತದೆ.

.೫. ಕೊರಗರ ಒಳಪಂಗಡಗಳು ಮತ್ತು ಬಳಿ ಪದ್ಧತಿ:

ೂರಗ' ಎನ್ನುವ ಸಮುದಾಯದಲ್ಲಿ ಅನೇಕ ಒಳ ಪಂಗಡಗಳಿವೆ. ಅವು ಈ ಕೆಳಗಿನಂತಿವೆ.

ೂಪ್ಪು ಕೊರಗರು

ಪ್ಪೆ ಕೊರಗರು

ತಿ ಕೊರಗರು
ುಡು ಕೊರಗರು
ುಡೆ ಕೊರಗರು.

ಪ್ಪು ಕೊರಗರು: ಇವರು ಮೈಗೆ ಬಟ್ಟೆಯನ್ನು ತೊಡದೆ, ಗಿಡ ಮರಗಳ ಎಲೆಯನ್ನೇ ಬಳಸಿ, ದೇಹವನ್ನು ಚ್ಚಿಕೊಂಡು ಬದುಕುತ್ತಿದ್ದರು. ಇವರಿಗೆ ಸೊಪ್ಪು ಕೊರಗರು, ತಪ್ಪಲು ಕೊರಗರು ಎಂಬ ಪರ್ಯಾಯ ರುಗಳಿಂದಲೂ ಗುರುತಿಸುತ್ತಾರೆ.

ುಡು ಕೊರಗರು: ಇವರು ಮೊಣಕಾಲಿನವರೆಗೆ ಮುಂಡು (ಪಂಚೆ) ತೊಡುತ್ತಾರೆ. ಹೆಂಗಸರೂ ಕೂಡ ಂಟದಿಂದ ಮೊಣ ಕಾಲಿನವರೆಗೆ ಮಾತ್ರ ಮುಂಡು ಸುತ್ತಿಕೊಳ್ಳುತ್ತಾರೆ. ಇವರಿಗೆ ಕುಂಬು ಕೊರಗರು ಂಬು-ಬಟ್ಟೆ) ಎಂದೂ ಕರೆಯುತ್ತಾರೆ.

ಡೆ ಕೊರಗರು: ಇವರು ಕೊರಳಿಗೆ ಅಂಡೆಯನ್ನು ಕಟ್ಟಿಕೊಂಡು ತಿರುಗುವಂಥವರು. ಅಂಡೆ ಎಂದರೆ ರಿನಲ್ಲಿ ತಯಾರಿಸಿದ ಒಂದು ಕೊಳವೆ (ಕೆಕ್ಕಿಲ ಕಾಳಾಂಜಿ) ಅದಕ್ಕೆ ದಾರವನ್ನು ಕಟ್ಟಿ ಕೊರಳಿಗೆ ಕಿಕೊಳ್ಳುತ್ತಾರೆ.

ಪ್ಪೆ ಕೊರಗರು: ತೆಂಗಿನ ಚಿಪ್ಪೆಗೆ ದಪ್ಪನೆಯ ದಾರದಿಂದ ಕಟ್ಟಿ ಬಗಲಿಗೆ ಕುತ್ತಿಗೆಗೆ ಹಾಕಿಕೊಂಡಿರುತ್ತಿದ್ದರು. ೆ ಈ ಚಿಪ್ಪೆ ಬೆನ್ನಿನ ಹಿಂದೆ ಜೋತಾಡುತ್ತಿರುತ್ತದೆ. ಈ ಚಿಪ್ಪೆಯನ್ನು ಇವರು ನೀರು ಕುಡಿಯುವುದಕ್ಕಾಗಿ ಳಸುತ್ತಿದ್ದರು.

ಕುಡೆ ಕೊರಗರು: ಇವರ ಮೂಲತಃ ಭಂಗಿ ವೃತ್ತಿಯನ್ನು ಮಾಡುವವರು ಎಂದು ಹೇಳಗುತ್ತದೆ. ಮೊದಲು ರಗರು ಭಂಗಿಯತ್ತ ವೃತ್ತಿಯನ್ನು ಮಾಡುತ್ತಿರಲಿಲ್ಲ. ನಗರಪಾಲಿಕೆಯ ವತಿಯಿಂದ ಕೊರಗರಿಗೆ ಕೆಲಸ ಸಿಕ್ಕ ತರದಲ್ಲಿ ಕೊರಗರೂ ಭಂಗಿ ಕೆಲಸ ಮಾಡಬೇಕಾಗಿ ಬಂತು.

೨.೬. ಕೊರಗರ ಹಬ್ಬಗಳು ಮತ್ತು ಆರಾಧನೆ;

ನಿಸರ್ಗದ ಮಡಿಲಿನಲ್ಲಿ ವಾಸಿಸುವ ಕೊರಗರು ಮುಖ್ಯವಾಗಿ 'ಸೂರ್ಯ'ನ ಆರಾಧಕರು. ಕ್ಷ ಮತ್ತು ಜಲಾರಾಧನೆಯೂ ಇದರೊಂದಿಗೆ ಸೇರಿಕೊಂಡಿದೆ. ಈ ಮೂರು ಶಕ್ತಿಗಳನ್ನು ಸಮೀಕರಿಸಿ ಾಧಿಸುವ ಪದ್ಧತಿ ಇದೆ. ಬೆಳಗಿನ ಜಾವದಲ್ಲಿ ಎದ್ದು, ಗಿಡದಡಿಗೆ ಬಂದು ನೀರು ಹಾಕಿ, ನಂತರ ತಾನು ಂಖ ತೊಳೆದು ಸೂರ್ಯ ದೇವನಿಗೆ ನಮಿಸುವ ವಾಡಿಕೆ ಇದೆ. ಕೊರಗತನಿಯ ದೈವದ ಆರಾಧಕರಾದ ವರು ಇತ್ತೀಚಿನ ದಿನಗಳಲ್ಲಿ ಪಿಲಿಚಾಮುಂಡಿ, ಮಹಾಕಾಳಿ, ಜುಮಾದಿ ಗುಳಿಗ ಮುಂತಾದ ದೈವಗಳನ್ನು ಾಧಿಸುತ್ತಿರುವುದು ಕಂಡುಬರುತ್ತದೆ.

೨.೭. ಕೊರಗರ ನ್ಯಾಯ ಪದ್ಧತಿ:

ಕೊರಗ ಸಮುದಾಯದವರು ತಮ್ಮದೇ ಆದ ವಿಶಿಷ್ಟ ನ್ಯಾಯದಾನ ವ್ಯವಸ್ಥೆ ಹೊಂದಿದ್ದಾರೆ. ವಿವಿಧ ೆಯ ತಪ್ಪುಗಳಿಗೆ ನ್ಯಾಯ ಕೊಡುವುದು ಎಲ್ಲಾ ಕೆಳವರ್ಗಗಳಲ್ಲಿ ಕಂಡುಬರುತ್ತದೆ. ದೇವರ ಉತ್ಸವ, ೂತ ಕೋಲ, ಮದುವೆ ಸಂದರ್ಭಗಳಲ್ಲಿ ಕೊರಗರು ಒಂದೆಡೆ ಸೇರಿದಾಗ ಹಿಂದಿನ ಸಮಸ್ಯೆಗಳನ್ನು ತ್ತಿಕೊಂಡು ನ್ಯಾಯದಾನ ವಿಚಾರಣೆ ನಡೆಸುವುದು ಕೊರಗರಲ್ಲಿ ವಾಡಿಕೆಯಾಗಿವೆ. ನ್ಯಾಯ ವಿಚಾರಣೆಯ ೇತೃತ್ವವನ್ನು ಕೊರಗರ ಗುರಿಕಾರರು, ಹಿರಿಯರು ವಹಿಸುವುದು ರೂಢಿಯಲ್ಲಿದೆ. ಕೊರಗರಲ್ಲಿ ತೀರಾ ತ್ತೀಚಿನವರೆಗೂ ಅವಿಭಕ್ತ ಕುಟುಂಬ ವ್ಯವಸ್ಥೆ ಗಟ್ಟಿಯಾಗಿ ಬೇರೂರಿತ್ತು. ಈ ಕಾರಣದಿಂದಾಗಿ ಅಯಾ ವಿಭಕ್ತ ಕುಟುಂಬ ಪರಂಪರೆಯ ಹಿರಿಯನೇ ಎಲ್ಲಾ ಬಗೆಯ ವಿಚಾರಗಳಲ್ಲೂ ತೀರ್ಮಾನ ನಿರ್ಣಯ ೆಗೆದುಕೊಳ್ಳುವವನು. ಆತನ ಕುಟುಂಬದ ಇತರ ಸದಸ್ಯರಿಗೆ ಅವರು ಬುದ್ಧಿವಂತರಾಗಿದ್ದರೂ ನ್ಯಾಯ ಚಾರಣೆಯಲ್ಲಿ ಕುಟುಂಬದ ಕಲಹಗಳು ಹಾಗೂ ಆಗು-ಹೋಗುಗಳಲ್ಲಿ ತೀರ್ಮಾನ ತೆಗೆದುಕೊಳ್ಳುವ ಹಕ್ಕು ರುವುದಿಲ್ಲ.

೨.೮. ಕೊರಗರ ಭಾಷೆ:

ಕೊರಗ ಸಮುದಾಯದವರು ತಮ್ಮ ಮನೆಗಳಲ್ಲಿ ಮಾತನಾಡುವ ಭಾಷೆಯನ್ನು ಆ ಸಮುದಾಯದ ೆಸರಿನಿಂದಲೇ 'ಕೊರಗ' ಎಂದು ಕರೆಯಲಾಗುತ್ತದೆ. ಕೊರಗ ಭಾಷೆಯು ದ್ರಾವಿಡ ಭಾಷಾ ವರ್ಗಕ್ಕೆ ೇರಿದುದಾಗಿದೆ. ಸರ್ವೇ ಸಾಮಾನ್ಯವಾಗಿ ಕೊರಗರು ದ್ವಿಭಾಷಿಗಳು ಹಾಗೂ ಮೂಡು ಕೊರಗರು ಮಾತ್ರ ಹು ಭಾಷಿಗಳಾಗಿದ್ದಾರೆ. ಅಂದರೆ ಕೊರಗರು ವ್ಯವಹಾರಿಕ ಜೀವನದಲ್ಲಿ ಹೊರಗೆ ತುಳು, ಕನ್ನಡ ಳಸುವರು, ಮನೆಯಲ್ಲಿ ತಮ್ಮದೇ ಆದ ಕೊರಗ ಭಾಷೆ ಮಾತನಾಡುವರು. ತಮ್ಮ ಕೊರಗ ಭಾಷೆಯು ಳು, ತಮಿಳು, ಕನ್ನಡ ಮತ್ತು ಮಲಯಾಳ ಮುಂತಾದ ದ್ರಾವಿಡ ಭಾಷೆಗಳ ಸಂಮಿಶ್ರಣದಿಂದಾದುದಾಗಿದೆ ಂದು ನಂಬುತ್ತಾರೆ. ಕೊರಗರು ತಮ್ಮ ಭಾಷೆಯನ್ನು ಇತರರಿಗೆ ಕಲಿಸುವುದಿಲ್ಲ. ಇತರರು ಕೊರಗರೊಂದಿಗೆ ವು ದಲಿತರೆಂಬ ಕಾರಣಕ್ಕೆ ಬೆರೆಯುವುದಿಲ್ಲ. ಹೀಗಾಗಿ ಕೊರಗರು ಬೇರೆ ಸಮುದಾಯದ ಮುಂದೆ ತಮ್ಮ ಾಷೆಯನ್ನಾಡುವುದಿಲ್ಲ. ಈ ವಿಷಯದಲ್ಲಿ ಕೊರಗರು ಸಂಕೋಚ ಸ್ವಭಾವದವರು.

೨.೯. ಕೊರಗರ ವೃತ್ತಿ ಮತ್ತು ಭೌಗೋಳಿಕ ಪರಿಸರ:

ಗುಲಾಮ ಕಾರ್ಮಿಕರಾಗಿ ಕೊರಗರು ದುಡಿಯುತ್ತಿದ್ದಾಗ ಕಲಿತ ಕಸುಬು ಬುಟ್ಟಿ ಹೆಣೆಯುವುದು, ೋಟದ ಕೆಲಸ, ಕೃಷಿ, ಮನೆ ಚೊಕ್ಕಟ ಇತ್ಯಾದಿ. ಈ ಎಲ್ಲಾ ಕಸುಬುಗಳನ್ನೂ ಇಂದಿನ ಕೊರಗರೂ ೈಗೊಂಡಿದ್ದಾರೆ. ಪ್ರಧಾನವಾಗಿ ಇಂದು ಕೊರಗರು ಬುಟ್ಟಿ ಹೆಣೆಯುವುದು ಕಂಡು ಬರುತ್ತದೆ. ಾಮಾನ್ಯವಾಗಿ ಬೆಟ್ಟಗುಡ್ಡಗಳ ತಪ್ಪಲುಗಳಲ್ಲಿ, ಕಾಡುಮೇಡುಗಳಲ್ಲಿ ವಾಸಿಸುವ ಕಾಡಿನಿಂದ ಬೆತ್ತ ತಂದು ಬಗೆ ಗೆಯ ಬುಟ್ಟಿಗಳನ್ನು ತಯಾರಿಸಿ ಹಳ್ಳಿಯ ಕೃಷಿಕರಿಗೆ ಮಾರುತ್ತಾರೆ. ಕೊರಗರು ಕಾಡಿನಿಂದ ನಾರುಗಳು,

ಬಿಳಲುಗಳು ಮತ್ತು ಧಣಿಗಳ ಮನೆಗಳಿಂದ ತೆಂಗಿನ ಚಿಪ್ಪುಗಳನ್ನು ಗೆರಟೆಗಳನ್ನು ತಂದು ವಿವಿಧ ಬಗೆಯ ಬುಟ್ಟಿಗಳನ್ನು, ಅಕ್ಕಿ ಸೋಸುವ ಗೆರಸೆ, ಧಾನ್ಯ ಅಳೆಯುವ ಕಳಸಿಗೆ, ಕೋಳಿಗಳನ್ನು ರಕ್ಷಿಸುವ ಬುಟ್ಟಿ, ತರಗೆಲೆ ಸಂಗ್ರಹಿಸುವ ಮುಡಚ್ಚಟ, ಮೀನು ಹಿಡಿಯುವ ಕುತ್ತೇರಿ, ಹೀಗೆ ಬಗೆ ಬಗೆಯ ತಟ್ಟಿಗೆಗಳು ತಯಾರಿಸುವರು.



ಪಾರಂಪರಿಕ ಕುಲಕಸುಬಾದ ಬುಟ್ಟಿ ಹೆಣೆಯುವಿಕೆಯಲ್ಲಿ ತೊಡಗಿಕೊಂಡ ಕೊರಗ ಯುವಕ.

ಅತಿ ಹಿಂದುಳಿದ ಪ್ರದೇಶಗಳಲ್ಲಿ ಕೊರಗರು ಬಹಳ ನಿಕೃಷ್ಟ ಜೀವನ ನಡೆಸುತ್ತಿದ್ದಾರೆ. ಅವರಿಗೆ ಬೆತ್ತದ ಕೆಲಸ ಬಿಟ್ಟರೆ ಬೇರೇನೂ ಬರುವುದಿಲ್ಲ. ಇತರೆ ಕೊರಗರನ್ನು ಇಂದು ಕೃಷಿಕರು ಕೂಲಿ ಕೆಲಸಕ್ಕೂ ಕರೆಯುವುದಿಲ್ಲ. ತೀವ್ರ ಕಡುಬಡತನದಿಂದ ನರಳುತ್ತ ಬಳಲಿ ಬೆಂಡಾಗಿರುವ ಕೊರಗರು ಕೂಲಿ ಕೆಲಸ ಮಾಡಲು ಗಮನಹರಿಸುವುದಿಲ್ಲ. ಮನೆ ಮನೆಗೆ ಹೋಗಿ ಅನ್ನ ಬೇಡುತ್ತ ಜೀವಿಸುವ ಕೊರಗರನ್ನೂ ಇಂದು ಹಳ್ಳಿಗಳಲ್ಲಿ ಕಾಣಬಹುದು.

೨.೩.೨. ಉಡುಪಿ ಜಿಲ್ಲೆಯ ಕೊರಗರ ನೆಲೆಗಳು ಮತ್ತು ಕುಟುಂಬಗಳ ವಿವರಗಳು:

೨.೩.೨.೧. ಕುಂದಾಪುರ ಹೋಬಳಿಯಲ್ಲಿ ವಾಸಿಸುತ್ತಿರುವ ಕೊರಗರ ನೆಲೆಗಳು ಮತ್ತು ಕುಟುಂಬಗಳು: ಹಾಲಾಡಿ ಪೇಟೆಯಲ್ಲಿ ೨೯ ಕುಟುಂಬಗಳು, ಚೋರಾಡಿ ೬ ಕುಟುಂಬಗಳು, ಹೈಕಾಡಿ ೫ ಕುಟುಂಬಗಳು, ಬೆಳ್ವೆ ೯ ಕುಟುಂಬಗಳು, ಆರ್ಡಿ ೬ ಕುಟುಂಬಗಳು, ಅರಸಮ್ಮನ ಕಾನು ೫ ಕುಟುಂಬಗಳು, ಹಂಜ ೬ ಕುಟುಂಬಗಳು, ಹಳೆ ಅಮಾಸೆ ಬೈಲು ೧೪, ಅಮಾಸೆ ಬೈಲು ೭, ತೊಂಬಟ್ಟು ೫, ಹೆಂಗವಳ್ಳಿ ೧೨, ಹಳ್ಳಾಡಿ ೨೪, ಜನ್ನಾಡಿ ೨೨, ಹುಣ್ಸೆಮಕ್ಕಿ ೨೧, ವಕ್ವಾಡಿ ೧೫, ಅಸೋಡು ೮, ಕೋಟೇಶ್ವರ ೧೬, ಕಾಗೇರಿ ೭, ಕುಂಬಾಸಿ ೧೧, ಮೂಡುಗೋಪಾಡಿ ೧೩, ಕೆದೂರು ೧೪, ವಡೇರ ಹೋಬ್ಳಿ ೨೮, ಬಸ್ರೂರು ೧೫, ಕಂದಾವರ ೫, ಮತ್ತು ತೆಕ್ಕಟ್ಟೆ ೪ ಕುಟುಂಬಗಳು, ಕುಂದಾಪುರ ತಾಲೂಕಿನ ೨೬ ಸ್ಥಳಗಳಲ್ಲಿ ಒಟ್ಟು ೩೦೭ ಕೊರಗರ ಕುಟುಂಬಗಳು ವಾಸಿಸುತ್ತಿವೆ.

೨.೩.೨.೨. ಕುಂದಾಪುರ ತಾಲೂಕು ವಂಡ್ಸೆ ಹೋಬಳಿಯಲ್ಲಿಯ ಕೊರಗರ ಗ್ರಾಮಗಳು ಮತ್ತು ಕುಟುಂಬಗಳು: ಹಕ್ಲಾಡಿಗುಡ್ಡೆ ೭ ಕುಟುಂಬಗಳು, ಹಕ್ಲಾಡಿ ೫ ಕುಟುಂಬಗಳು, ಕುಂದಬಾರಂಡಾಡಿ ೪, ನೂಜಾಡಿ ೯, ಗುಜ್ಜಾಡಿ ೩, ಮೇಲ್ ಗಂಗೊಳ್ಳಿ ೫, ಮೋವಾಡಿ ದೇವಾಡಿ ೧೦, ಆಲೂರು ೧೪, ಹರ್ಕೂರು ೭, ತಲ್ಲೂರು ೧೨, ಕೋಟೆಬಾಗಿಲು ೧೭, ಕಟ್ ಬೆಲ್ತೂರು ೯, ಸಂತೋಷನಗರ ೧೦, ಬಾಳೆಕೆರೆ ೩, ಕನ್ಯಾನ್ ೪, ಕೆಂಚನೂರು ೭, ಮಾರಣಕಟ್ಟೆ ೭, ಹೊಸೂರು ೪, ಇಡೂರು ೫, ಕೆರಾಡಿ ೧೫, ನಂದ್ರೊಳ್ಳಿ ೧೧, ಬೆಳ್ಳಾಲ ೬, ಮೊರ್ಟು ೬, ಅಜ್ರಿ ೭, ವಂಡ್ಸೆ ೯, ಕರ್ಕುಂಜೆ ಗುಡ್ರೆ ೧೧, ಕರ್ಕುಂಜೆ ೨, ಕರ್ಕುಂಜೆ-೨ ೩ ಕುಟುಂಬಗಳು, ಪಡು ವಾಲ್ತೂರು ೧೫, ತೆಂಕಬೆಟ್ಟು ೫, ಅಂಪಾರು ೭, ಮೂಡುಬಗೆ ೮, ಹೊಸಂಗಡಿ ೭, ಎಡಮೊಗ್ಗೆ ಅಜ್ಜಿ ಕಾನು ೭, ಸಿದ್ದಾಪುರ ೨೭, ಶಂಕರನಾರಾಯಣ ಮೇಬೈಲ್ ಕೊಡಳ್ಳಿ ೧೦ ಮತ್ತು ಬೆದ್ರಕಟ್ಟೆ ಶಂಕರನಾರಾಯಣದಲ್ಲಿ ೧೯ ಕುಟುಂಬಗಳು, ಕುಂದಾಪುರ ತಾಲೂಕಿನ ವಂಡ್ಸೆ ಹೋಬಳಿಯ ೩೮ ಸ್ಥಳಗಳಲ್ಲಿ ವಾಸಿಸುತ್ತಿರುವ ಕೊರಗರ ಒಟ್ಟು ಕುಟುಂಬಗಳ ಸಂಖ್ಯೆ ೩೩೬ ಇರುವುದು ಕಂಡುಬರುತ್ತದೆ.

೨.೩.೨.೩. ಕುಂದಾಪುರ ತಾಲೂಕು ಬೈಂದೂರು ಪರಿಸರದ ಕೊರಗರ ಸ್ಥಳಗಳು ಮತ್ತು ಕುಟುಂಬಗಳು: ಶಿರೂರು ೭ ಕುಟುಂಬಗಳು, ಬೈಂದೂರು ೬, ಬವಳಾಡಿ ೭, ಕೊಣ್ಕೆ ೯, ಹೆಮ್ಮಂಜೆ ೬, ಅಕ್ಷರ ಕರಾವಳಿ ೧೬, ಹಡವು ೧೧, ಬಂಟ್ವಾಳ ೩, ಅರೆಹೊಳೆ ೮, ಮೂರೂರು ೧೧, ಯರುಕೋಣೆ ೬, ರಾಗಿಹಕ್ಲು ೧೧, ಉಳ್ಳೂರು-೧೧ ೫ ಕುಟುಂಬಗಳು, ಯಳಜಿತ್ ೬, ಕೊಲ್ಲೂರು ೨೦, ನಿರೋಣಿ ೯, ಹಳಗೇರಿ ೯, ಜಡ್ಕಲ್ ೯, ಮೂದೂರು ಮೈದಾನ ೮, ಮೂದೂರು ಉದಯನಗರ ೩೪, ಹಳ್ಳಿಹೊಳೆ ೭ ಮತ್ತು ಕಮಲಶಿಲೆ ೨ ಕುಟುಂಬಗಳು, ಕುಂದಾಪುರ ತಾಲೂಕಿನ ಬೈಂದೂರು ಪರಿಸರದಲ್ಲಿ ಒಟ್ಟು ೨೧೦ ಕೊರಗರ ಕುಟುಂಬಗಳು ವಾಸಿಸುತ್ತಿವೆ. ಕುಂದಾಪುರ ತಾಲೂಕಿನ ಬೈಂದೂರು ಪ್ರದೇಶದ ಒಟ್ಟು ೨೨ ಪ್ರದೇಶಗಳಲ್ಲಿ ೨೧೦ ಕುಟುಂಬಗಳು ವಾಸಿಸುತ್ತಿವೆ.

೨.೩.೨.೪. ಕಾರ್ಕಳ ತಾಲೂಕಿನ ಕೊರಗರ ಗ್ರಾಮಗಳು ಮತ್ತು ಕುಟುಂಬಗಳು: ಕಡಾರಿ ೧೯ ಕುಟುಂಬಗಳು, ಬಜಗೋಳಿ ೧೯, ಜೋಡುಕಟ್ಟೆ ೫, ಗುಂಡಾಜೆ ೧೨, ಸಾಣೂರು ೭, ರೆಂಜಾಳ ೮, ದೂಪದಕಟ್ಟೆ (ಅತ್ತೂರು) ೯, ನಿಟ್ಟೆ ೯, ಕುಂಟಾಡಿ ೯, ನಿಂಜೂರು ೮, ಪಳ್ಳಿ ೭, ಬೋಳ ೧೧. ಶಿರ್ಲಾಲು ೫, ಕಡೆಕುಂಜ ೧೨, ಪಡುಇನ್ನ ೬, ಇನ್ನ (ಪಂಚಾಯತಿ ಹತ್ತಿರ) ೧೦, ಪೆರಲ್ಪಾದೆ ೨೧, ಮುಂಡ್ಕೂರು ೧೯ ಪೋಸ್ರಾಲು ೧೯, ಮುದ್ರಾಡಿ ೧೨, ಬೇಳಂಜೆ ೪, ಕಡ್ತಲ ೧೪, ಸೋಮೇಸ್ವರ ೭, ಮನಿಯಾಲು ೧೧ ವರಂಗ ೫, ಗುಡ್ಡೆಯಂಗಡಿ ೧೨, ಎಣ್ಣೆಹೊಳೆ ೪, ಶಿವಪುರ ೬, ಮಂಡಾಡಿ ಜಡ್ಡು ೬, ಬಡಾಗುಡ್ಡೆ ಹೆಬ್ರಿ ೫೦, ಕುಕ್ಕುಂದೂರು ೨೦, ಮರಿಣಾಪುರ ೨೭, ನೀರೆ ೭, ಮೊಸನೊಟ್ಟು ೧೫, ಸೂಡ ೨, ಕೂಡಬೆಟ್ಟ ೫

ಮತ್ತು ಜಾರ್ಕಳದಲ್ಲಿ ೧ ಕುಟುಂಬ. ಕಾರ್ಕಳ ತಾಲೂಕಿನ ೩೭ ವಸತಿ ಪ್ರದೇಶಗಳಲ್ಲಿ ಒಟ್ಟು ೪೨೩ ಕೊರಗರ ಕುಟುಂಬಗಳು ವಾಸಿಸುತ್ತವೆ.

೨.೩.೨.೫. ಉಡುಪಿ ನಗರಸಭೆಯ ವ್ಯಾಪ್ತಿಯ ಕೊರಗರ ವಾಸಸ್ಥಳಗಳು ಮತ್ತು ಕುಟುಂಬಗಳು: ಮಂಚಿಕೋಡಿ ೧೧೫ ಕುಟುಂಬಗಳು, ಕಿನ್ನಿಮಲ್ಕಿ ೧೨, ಕಕ್ಕುಂಜೆ ೪, ಕೊಡವೂರು ೯, ಮಲ್ಪೆ ೫, ಅಲೆವೂರು ೧೧, ಕಪ್ಪೆಟ್ಟು ೭, ಹಿರಿಯಡ್ಕ ೧೫, ಅಂಜಾರು ೫, ಮಣಿಪಾಲ ೧೯, ಹಿರೇಬೆಟ್ಟು ೨೧, ಚಿಟ್ಪಾಡಿ ೩೯, ಬೀಡಿನಗುಡ್ಡೆ ೧೬, ವಿನೋಬನಗರ ೧೩, ಪದವು ೨೯, ಗಿರಿಜನ ಕೃಷಿ ಕಾಲೋನಿ ೧೨, ಕುದ್ಮಲ್ ರಂಗರಾವ್ ನಗರ ೮೧, ಬುಡ್ನಾರು ೨೫, ಕೊರಂಗ್ರಪಾಡಿ ೧೦, ಸಿದ್ಧಾರ್ಥ್ ನಗರ ೪೩, ಪರ್ಕಳ ೨೫, ಮೂಡುಬೆಟ್ಟು ೯, ಸರಳೇ ಬೆಟ್ಟು ೩ ಮತ್ತು ಕೆಮ್ಮಣ್ಣುನಲ್ಲಿ ೪ ಕುಟುಂಬಗಳು. ಉಡುಪಿ ತಾಲೂಕಿನ ನಗರ ಪ್ರದೇಶ ವ್ಯಾಪ್ತಿಯಲ್ಲಿಯ ೨೪ ಸ್ಥಳಗಳಲ್ಲು ಒಟ್ಟು ೫೩೨ ಕೊರಗರ ಕುಟುಂಬಗಳು ಇರುವುದು ಕಂಡುಬರುತ್ತದೆ.

೨.೩.೨.೬. ಉಡುಪಿ ತಾಲೂಕು ಕೋಟ ವ್ಯಾಪ್ತಿಯ ಕೊರಗರ ವಾಸಸ್ಥಳಗಳು ಮತ್ತು ಕುಟುಂಬಗಳು: ಶಿರೂರು, ಮೂರುಕೈ ೧೩ ಕುಟುಂಬಗಳು, ಜಾನುವಾರು ಕಟ್ಟೆ ಶಾಲೆಹತ್ತಿರ ೧೦, ಗೋಳಿಯಂಗಡಿ,ಹೊಗ್ಯೆ ಬೇಳಾರ ೧೭, ಕಾರಿಕಟ್ಟೆ ಶಾಲೆ ಹತ್ತಿರ ೫, ಮಧುವನ ಶಾಲೆ ೨೫, ಕಾವಡಿ ೮, ನಾಗೇರ್ತಿ ೮, ಕೂರಾಡಿ ವಾಣಿ ಪ್ರೌಢ ಶಾಲೆ ೧೫, ಉದ್ದಾಲಗುಡ್ಡೆ ೩, ಮಂದಾರ್ತಿ ೧೧, ಸೈಬರಕಟ್ಟೆ ೯, ಸೈಬರಕಟ್ಟೆ (ಬಾರ್ಕೂರು) ೧೪, ರಂಗನಕೆರೆ ೧೪, ಪಾಂಡೇಶ್ವರ, ನೀರಾಡಿಜಿಡ್ಡು ೮, ಗುಂಡ್ಮಿಶಾಲೆ ೧೦, ಕಾರ್ಕಡಶಾಲೆ ೧೦, ಗೆಂಡೆಕೆರ ಕಾಲೋನಿ ೧೧, ನ್ಯೂ ಕಾರ್ಕಡ ಶಾಲೆ ೧೯, ಕೋಟ ತಟ್ಟು ಪೆಟ್ರೋಲ ಬಂಕ ಹತ್ತಿರ ೧೬ ಮತ್ತು ಹೊನ್ನಾರಿ ಗುಂಪು ಹತ್ತಿರ ೧೧ ಕುಟುಂಬಗಳು. ಉಡುಪಿ ತಾಲೂಕಿನ ಕೋಟಾದ ಒಟ್ಟು ೨೦ ಸ್ಥಳಗಳಲ್ಲಿ ೨೩೭ ಕುಟುಂಬಗಳು ನೆಲೆ ಕಂಡುಕೊಂಡಿವೆ.

೨.೩.೨.೭. ಉಡುಪಿ ತಾಲೂಕು ಕಾಪು ವಲಯದ ಕೊರಗರ ನೆಲೆಗಳು ಮತ್ತು ಕುಟುಂಬಗಳು: ಪಾದೂರು, ಜಲಂಚಾರು ೬ ಕುಟುಂಬಗಳು, ಹೇರೂರು ೫, ಮಜೂರು ೫, ಪಕಿರಣಕಟ್ಟೆ ೧೦, ಕುತ್ಯಾರು ೧೧, ಪಯ್ಯಾರು ಶಾಲೆ ೧, ಕಳತ್ತೂರು ಸೂರ್ಯಗಡ್ಡೆ ೧೧, ಮೈಕೋಡಿ ಮುದರಂಗಡಿ ೧೦, ಕುಂಜಿನಗುಡ್ಡೆ ೧೫, ಕಾಡಂಬೈಲು ೧, ಹಲಸಿನಕಟ್ಟೆ ಸಾಂತೂರು ೫, ಪೆರ್ನಾಲು, ಪಿಲಾರ್‌ಖಾನ್ ೬, ಬೆಳ್ಳಿಬೆಟ್ಟು ಅಡ್ವೆ ೯, ಪಲಿಮಾರು ೬, ಪುಂಚಕಾಡು ೧೬, ಕಂಚಿನಡ್ಕ ೫, ಪಾದೆಬೆಟ್ಟು ೯, ಬಂಡಸಾಲೆ, ಕೆಮ್ಮುಂಡೆಲು ೧೩, ಪಣಿಯೂರು ೧೨, ಮೂಡುಬೆಟ್ಟು ೮, ಕಾಪು ಶಾಲೆ ಹತ್ತಿರ ೩, ಉಳಿಯಾರಗೋಳಿ ೪, ಸರಕಾರಿಗುಡ್ಡೆ ಗಾಂಧಿ ನಗರ ೧೪, ಪಾಂಬೂರು ೧೪, ಕಟಪಾಡಿ ಪಳ್ಳಿಗುಡ್ಡೆ ೮, ಏಣಿಗುಡ್ಡೆ, ಅಗ್ರಹಾರ ೫, ಕುರ್ಕಾಲು ೭, ಮಣಿಪುರ ಬೈಂದೂರುಕಟ್ಟೆ ೧೪, ಮುಳಿಕಂಬ್ಳ ೨, ಮಟ್ಪಾರು (ಕೆಮುಂಡೆಲು) ೧೦, ಮಿತ್ರಬೆಟ್ಟು ೬, ಮಸೀದಿ ಹತ್ತಿರ ೪, ಬಂಟಕಲ್ಲು ೮, ಶಿರ್ವ ಪದವು ೮, ಮುಳ್ಳುಗುಡ್ಡೆ ೫, ಪೆರ್ಣಂಕಿಲ ೫ ಮತ್ತು

ಓಂತಿಬೆಟ್ಟದಲ್ಲಿ ೯ ಕುಟುಂಬಗಳು. ಉಡುಪಿ ತಾಲೂಕಿನ ಕಾಪು ವಲಯದ ಒಟ್ಟು ೩೭ ಪ್ರದೇಶಗಳಲ್ಲಿ ೨೯೦ ಕೊರಗರ ಕುಟುಂಬಗಳು ನೆಲೆನಿಂತಿವೆ.

೨.೩.೨.೮. ಬ್ರಹ್ಮಾವರ ವಲಯದ ಕೊರಗರ ನೆಲೆಗಳು ಮತ್ತು ಕುಟುಂಬಗಳು. ಚಾಂತಾರು ಗರಡಿ ಹತ್ತಿರ ೧೫ ಕುಟುಂಬಗಳು, ಕುಂಜಾಲು ಗ್ರಾ. ಪಂ. ಹತ್ತಿರ ೧೪, ನೀಲಾವರ ಶ್ರೀಮತಿ ಮನೆ ಹತ್ತಿರ ೧, ಕುಕ್ಕುಡೆ ೧೧, ಬೇಳುರು ಜೆಡ್ಡು ೪, ಬಲ್ಜಿಗುಡ್ಡೆ ೯, ಪೇತ್ರಿ ೪, ಇಂದಿರಾನಗರ ೫ ಸೆಂಟ್ಸ್ ೧೩, ಕಿಳಂಜೆ ಶಾಲೆ ಹತ್ತಿರ ೫, ಲಕ್ಷ್ಮೀನಗರ ಅಂಗನವಾಡಿ ೭, ನೇಜಾರು ೧೩, ಕೆಂಜೂರು ಶಾಲೆ ೨೭, ಕಳತ್ತೂರು ೨೦, ಮಿಯಾರು ಶಾಲೆ ೮, ಮಾರಾಳಿ ಶಾಲೆ ೭, ಸೂರಾಲುಶಾಲೆ ೯, ಕೊಕ್ಕರ್ಣೆ ಶಾಲೆ ೧೦, ಕುಕ್ಕುಂಡಿ ೧೨, ಕುಕ್ಕೆಹಳ್ಳಿ ೭, ದೂಪದಕಟ್ಟೆ ೬ ಮತ್ತು ದೊಡೆರಂಗಡಿ ಅಡಂಗಲದಲ್ಲಿ ೪ ಕುಟುಂಬಗಳು ವಾಸಿಸುತ್ತಿವೆ. ಬ್ರಹ್ಮಾವರ ವಲಯದ ೨೩ ಸ್ಥಳಗಳಲ್ಲಿ ಒಟ್ಟು ೨೨೧ ಕೊರಗರ ಕುಟುಂಬಗಳು ವಾಸಿಸುತ್ತಿರುವುದು ಕಂಡುಬರುತ್ತದೆ.

೨.೩.೨.೯. ಉಡುಪಿ ಜಿಲ್ಲೆಯ ಒಟ್ಟು ಬುಡಕಟ್ಟುಗಳ ಜನಸಂಖ್ಯೆ: ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಉಡುಪಿ ಇವರು ೨೦೧೧-೧೨ ರಲ್ಲಿ ಉಡುಪಿ ಜಿಲ್ಲೆಯಲ್ಲಿ ವಾಸಿಸುತ್ತಿರುವ ಕೊರಗ, ಮಲೆಕುಡಿಯ ಮತ್ತು ಮರಾಠಿ ನಾಯ್ಕ ಸಮುದಾಯದ ಜನಸಂಖ್ಯೆಗೆ ಸಂಬಂಧಿಸಿದಂತೆ ಸಮೀಕ್ಷೆ ನಡೆಸಿದಾಗ ಉಡುಪಿ ತಾಲೂಕಿನಲ್ಲಿ ೧೨೯೧೯ ಪುರುಷರು ೧೩೧೬೮ ಸ್ತ್ರೀಯರು ಒಟ್ಟು ಜನಸಂಖ್ಯೆ: ೨೬,೦೮೭, ಕುಂದಾಪುರ ತಾಲೂಕಿನಲ್ಲಿ ೭೨೧೪ ಪುರುಷರು ೭೫೦೫ ಸ್ತ್ರೀಯರು ಒಟ್ಟು ಜನಸಂಖ್ಯೆ: ೧೪೭೭೯, ಕಾರ್ಕಳ ತಾಲೂಕಿನಲ್ಲಿ ೬೭೯೫ ಪುರುಷರು ೫೯೯೬ ಸ್ತ್ರೀಯರು ಒಟ್ಟು ಜನಸಂಖ್ಯೆ: ೧೨೭೯೧. ಒಟ್ಟು ಉಡುಪಿ ಜಿಲ್ಲೆಯ ಕೊರಗರ ಜನಸಂಖ್ಯೆ: ಪುರುಷರು ೨೬೨೨೮ ಮಹಿಳೆಯರು ೨೬೬೬೯ ಒಟ್ಟು ೫೨೮೯೭ ಇರುವುದನ್ನು ದಾಖಲಿಸಿದ್ದಾರೆ. ಉಡುಪಿ ಜಿಲ್ಲೆಯ ಈ ಜನಸಂಖ್ಯೆಯ ವಿವರಗಳಲ್ಲಿ ಕೊರಗರು ೧೧೧೩೩, ಮಲೆಕುಡಿಯರು ೧೯೫೬ ಹಾಗೂ ಮರಾಠಿ ನಾಯ್ಕರು ೩೯೮೦೮ ಎಂದು ಗುರುತಿಸಿದ್ದಾರೆ.

೨.೩.೨.೧೦. ಉಡುಪಿ ಜಿಲ್ಲೆಯ ಎಲ್ಲ ಕೊರಗರ ಕುಟುಂಬಗಳ, ವಾಸದ ನೆಲೆಗಳ ಮತ್ತು ಜನಸಂಖ್ಯೆ: ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಉಡುಪಿ ಇವರು ೨೦೦೭ ರ ಮಾರ್ಚ್ ತಿಂಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಕೊರಗರ ಕುಟುಂಬಗಳ ಮತ್ತು ಅವರು ವಾಸಿಸುತ್ತಿರುವ ಪ್ರದೇಶಗಳ ಸಮೀಕ್ಷೆ ನಡೆಸಿದಾಗ ಉಡುಪಿ ತಾಲೂಕಿನ ೧೪೭ ಪ್ರದೇಶಗಳಲ್ಲಿ ೧೨೭೬ ಕುಟುಂಬಗಳಿದ್ದು ಅಲ್ಲಿಯ ಒಟ್ಟು ಜನಸಂಖ್ಯೆ ೬೨೦೦ ಕಂಡು ಬಂದಿದ್ದು ಅದರಲ್ಲಿ ೩೧೦೪ ಪುರುಷರು, ೩೦೯೬ ಸ್ತ್ರೀಯರು ಕುಂದಾಪುರ ತಾಲೂಕಿನ ೧೨೨ ಸ್ಥಳಗಳ ೮೫೨ ಕುಟುಂಬಗಳ ಒಟ್ಟು ೩೧೫೪ ಜನಸಂಖ್ಯೆಯಲ್ಲಿ ೧೫೮೦ ಪುರುಷರು ೧೫೭೪ ಮಹಿಳೆಯರು ಇರುವುದನ್ನು ಹಾಗೂ ಕಾರ್ಕಳ ತಾಲೂಕಿನ ೮೭ ಪ್ರದೇಶಗಳ ೪೨೨ ಕುಟುಂಬಗಳಲ್ಲಿ ಒಟ್ಟು ೧೭೭೯ ಜನಸಂಖ್ಯೆಯಲ್ಲಿ ೮೮೨ ಪುರುಷರು ೮೯೭ ಮಹಿಳೆಯರು ಇರುವುದನ್ನು ಗುರುತಿಸಿದ್ದಾರೆ. ಉಡುಪಿ

ಜಿಲ್ಲೆಯಾದ್ಯಂತ ಕೊರಗ ಸಮುದಾಯದ ಒಟ್ಟು ೩೬೩ ಸ್ಥಳಗಳ ೨೫೫೭ ಕುಟುಂಬಗಳಲ್ಲಿ ೧೧೧೩೩ ಜನಸಂಖ್ಯೆ ಇದ್ದು ಇದರಲ್ಲಿ ೫೫೬೬ ಗಂಡಸರು ೫೫೬೭ ಹೆಂಗಸರ ಇರುವಿಕೆಯನ್ನು ಗುರುತಿಸಿದ್ದಾರೆ.

೨.೩.೨.೧೧. ಉಡುಪಿ ಜಿಲ್ಲೆಯ ಕೊರಗರ ಶೈಕ್ಷಣಿಕ ವಿವರಗಳು: ಉಡುಪಿ ಜಿಲ್ಲೆಯಲ್ಲಿರು ಕೊರಗರ ಶೈಕ್ಷಣಿಕ ವಿವರಗಳನ್ನು ಗಮನಿಸಿದಾಗ, ಉಡುಪಿ ತಾಲೂಕಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳ ಸಂಖ್ಯೆ ೧೦೭೦ ಇದ್ದು ಶಾಲೆ ಬಿಟ್ಟ ಮಕ್ಕಳ ಸಂಖ್ಯೆ ೭೮, ಒಟ್ಟು ೨೯೯೭ ಕೊರಗರು ಪ್ರಾಥಮಿಕ, ಮಾಧ್ಯಮಿಕ, ಪ್ರೌಢ, ಪದವಿ ಪೂರ್ವ ಹಾಗೂ ಪದವಿಯ ವರೆಗೆ ಶಿಕ್ಷಣ ಪಡೆದವರಿದ್ದಾರೆ.

ಕುಂದಾಪುರ ತಾಲೂಕಿನಲ್ಲಿ ವಿದ್ಯಾಬ್ಯಾಸ ಮಾಡುತ್ತಿರುವ ಮಕ್ಕಳ ಸಂಖ್ಯೆ ೬೦೮ ಇದ್ದು ಶಾಲೆ ಬಿಟ್ಟ ಮಕ್ಕಳ ಸಂಖ್ಯೆ ೧೩೨ ಇದ್ದು, ಒಟ್ಟು ೨೪೮ ಕೊರಗರು ಪ್ರಾಥಮಿಕ,ಮಾಧ್ಯಮಿಕ, ಪ್ರೌಢ, ಪದವಿ ಪೂರ್ವ ಹಾಗೂ ಪದವಿಯ ವರೆಗೆ ಶಿಕ್ಷಣ ಪಡೆದವರಿದ್ದಾರೆ. ಇಲ್ಲಿ ಪ್ರಾಥಮಿಕ ಶಿಕ್ಷಣ ಪಡೆದವರ ಸಂಖ್ಯೆ ಹೆಚ್ಚಾಗಿದೆ.

ಕಾರ್ಕಳ ತಾಲೂಕಿನಲ್ಲಿ ವಿದ್ಯಾಬ್ಯಾಸ ಮಾಡುತ್ತಿರುವ ಮಕ್ಕಳ ಸಂಖ್ಯೆ ೩೪೫ ಇದ್ದು ಶಾಲೆ ಬಿಟ್ಟ ಮಕ್ಕಳ ಸಂಖ್ಯೆ ೧೯ ಇದ್ದು ಒಟ್ಟು ೧೦೪೧ ಕೊರಗರು ಪ್ರಾಥಮಿಕ,ಮಾಧ್ಯಮಿಕ, ಪ್ರೌಢ, ಪದವಿ ಪೂರ್ವ ಹಾಗೂ ಪದವಿಯ ವರೆಗೆ ಶಿಕ್ಷಣ ಪಡೆದವರಿದ್ದಾರೆ. ಇಲ್ಲಿಯೂ ಪ್ರಾಥಮಿಕ ಶಿಕ್ಷಣ ಪಡೆದವರ ಸಂಖ್ಯೆ ಹೆಚ್ಚಾಗಿದೆ.

೨.೩.೨.೧೨. ಉಡುಪಿ ಜಿಲ್ಲೆಯ ಕೊರಗರು ಅನುಸರಿಸುತ್ತಿರುವ ವೃತ್ತಿಗಳು: ಉಡುಪಿ ಜಿಲ್ಲೆಯಲ್ಲಿರು ಕೊರಗರ ಅನುಸರಿಸುತ್ತಿರುವ ವೃತ್ತಿಗಳ ವಿವರಗಳನ್ನು ಗಮನಿಸಿದಾಗ, ಉಡುಪಿ ತಾಲೂಕಿನಲ್ಲಿ ಬುಟ್ಟಿ ಹೆಣೆಯುವ ಪಾರಂಪರಿಕ ವೃತ್ತಿಯಲ್ಲಿ ೩೩೨ ಜನರು ತೊಡಗಿಸಿಕೊಂಡಿದ್ದರೆ, ೧೯೯೦ ಜನರು ವಿವಿಧ ಬಗೆಯ ಕೂಲಿ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ ಮತ್ತು ೧೨೦೩ ಜನರು ಸಫಾಯಿ ಕರ್ಮಚಾರಿ ಮತ್ತು ವಿವಿಧ ರೀತಿಯ ಸ್ವಚ್ಚತಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದು, ೯೪ ಜನರು ಸರಕಾರದ ಸಿ ಮತ್ತು ಡಿ ಶ್ರೇಣಿಯ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಕೊರಗರು ರಾಜಕೀಯ ಮೀಸಲಾತಿಯ ಮೂಲಕ ಉಡುಪಿ ತಾಲೂಕಿನ ಗ್ರಾಮ ಪಂಚಾಯತಿಯಲ್ಲಿ ೨೯ ಜನರು ಸದಸ್ಯರಾಗಿ ಆಯ್ಕೆಯಾಗಿರುವು ಕಂಡುಬರುತ್ತದೆ.

ಕುಂದಾಪುರ ತಾಲೂಕಿನ ಕೊರಗರ ಅನುಸರಿಸುತ್ತಿರುವ ವೃತ್ತಿಗಳ ವಿವರಗಳನ್ನು ಗಮನಿಸಿದಾಗ, ಈ ತಾಲೂಕಿನಲ್ಲಿ ಬುಟ್ಟಿ ಹೆಣೆಯುವ ಪಾರಂಪರಿಕ ವೃತ್ತಿಯಲ್ಲಿ ೧೫೫ ಜನರು ತೊಡಗಿಸಿಕೊಂಡಿದ್ದರೆ, ೮೧೩ ಜನರು ವಿವಿಧ ಬಗೆಯ ಕೂಲಿ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ ಮತ್ತು ೯೯ ಜನರು ಸಫಾಯಿ ಕರ್ಮಚಾರಿ ಮತ್ತು ವಿವಿಧ ರೀತಿಯ ಸ್ವಚ್ಚತಾ ಕಾರ್ಯಗಳಲ್ಲಿ ತೊಡಗಿಕೊಂಡಿದ್ದಾರೆ. ಸರಕಾರದ ಸಿ ಮತ್ತು ಡಿ ಶ್ರೇಣಿಯ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಹಾಗೂ ೩೨ ಜನರು ಕೃಷಿಯಲ್ಲಿ ತೊಡಗಿಕೊಂಡಿರುವುದು ಈ ತಾಲೂಕಿನ ವಿಶೇಷ ಎಂದು ಹೇಳಬಹುದು. ಕೊರಗರು ರಾಜಕೀಯ

ಮೀಸಲಾತಿಯ ಮೂಲಕ ಕುಂದಾಪುರ ತಾಲೂಕಿನ ವಿವಿಧ ಗ್ರಾಮ ಪಂಚಾಯತಿಯತಿಗಳಲ್ಲಿ ೩೪ ಜನರು ಸದಸ್ಯರಾಗಿ ಆಯ್ಕೆಯಾಗಿರುವು ಕಂಡುಬರುತ್ತದೆ.

ಕಾರ್ಕಳ ತಾಲೂಕಿನ ಕೊರಗರ ಅನುಸರಿಸುತ್ತಿರುವ ವೃತ್ತಿಗಳ ವಿವರಗಳನ್ನು ಗಮನಿಸಿದಾಗ, ಈ ತಾಲೂಕಿನಲ್ಲಿ ಬುಟ್ಟಿ ಹೆಣೆಯುವ ಪಾರಂಪರಿಕ ವೃತ್ತಿಯಲ್ಲಿ ೧೬೦ ಜನರು ತೊಡಗಿಸಿಕೊಂಡಿದ್ದರೆ, ೭೫೪ ಜನರು ವಿವಿಧ ಬಗೆಯ ಕೂಲಿ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ ಮತ್ತು ೩೬ ಜನರು ಸಫಾಯಿ ಕರ್ಮಚಾರಿ ಮತ್ತು ವಿವಿಧ ರೀತಿಯ ಸ್ವಚ್ಚತಾ ಕಾರ್ಯಗಳಲ್ಲಿ ತೊಡಗಿಗೊಂಡಿದ್ದಾರೆ. ೩ ಜನರು ಸರಕಾರದ ಸಿ ಮತ್ತು ಡಿ ಶ್ರೇಣಿಯ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಕೊರಗರು ರಾಜಕೀಯ ಮೀಸಲಾತಿಯ ಮೂಲಕ ಕಾರ್ಕಳ ತಾಲೂಕಿನ ವಿವಿಧ ಗ್ರಾಮ ಪಂಚಾಯತಿಗಳಲ್ಲಿ ೪ ಜನರು ಸದಸ್ಯರಾಗಿ ಆಯ್ಕೆಯಾಗಿರುವು ಕಂಡುಬರುತ್ತದೆ.

೨.೩.೩. ದಕ್ಷಿಣ ಕನ್ನಡ ಜಿಲ್ಲೆಯ ಕೊರಗರ ನೆಲೆಗಳು:

೨.೩.೩.೧. ಮಂಗಳೂರು ನಗರ ವ್ಯಾಪ್ತಿಯ ಕೊರಗರ ನೆಲೆಗಳು ಮತ್ತು ಕುಟುಂಬಗಳು: ದೇರೇಬೈಲನಲ್ಲಿ ೫೦ ಕುಟುಂಬಗಳು, ಲಾಲ್‌ಭಾಗ್ ೭, ಜಪ್ಪು (ಮಹಾಕಾಳಿಪಡ್ಪು) ೨, ಪಚ್ಚನಾಡಿ ೨, ಕಂಕನಾಡಿ ಕುದ್ರೋಳಿಗುಡ್ಡೆ ೨೩, ಉರ್ವ ೨೧, ನ ತೂರು ಹೈಪಾಡಿಟ್ ೮, ಕೃಷ್ಣಾಪುರ ೧೧, ಚೊಕ್ಕಬೆಟ್ಟು ಅಗರ್‌ಮೈಲ್ ೧, ತಡ ಬೈಲ್ ವೆಂಕಟರಮಣ ಕಲೋನಿ ೧೭, ಕಾವೂರು ೧, ಕುಳಾಯಿ ೧೦, ಅತ್ತಾವರ ೩, ಚಿಲಿ ಬಿ ಆದರ್ಶನಗರ ೨, ಕಾವೂರು ಮಲ್ಲಕಾಡು ೨, ಕಣ್ಣೂರು ೨, ಬಜಾಲ ೨, ಪಚ್ಚನಾಡಿ ೬, ಪಚ್ಚನಾಡಿ ವೈದ್ಯನಾಥ ನಗರ ೧, ಜ್ಯೋತಿ ನಗರ ೯, ಶಕ್ತಿನಗರ (ಪದವು) ೨, ವಾಮಂಜೂರು ಜಂಕ್ಷನ್ ೧, ಕಾಟಿಪಳ್ಳ ೧೪, ಕಣ್ಣೂರು ಗ್ರಾಮ ಬಳ್ಳೂರುಗುಡ್ಡೆ ೧, ಕೋಟಮುರ ಕುಲಶೇಖರದಲ್ಲಿ ೧ ಕುಟುಂಬ ಮತ್ತು ಸುರತ್ಕಲ್ (ಮಧ್ಯಪದವು) ಮಧ್ಯ ೬೬ ಕುಟುಂಬಗಳು ವಾಸಿಸುತ್ತಿದ್ದು, ಒಟ್ಟು ೨೮ ಪ್ರದೇಶದಲ್ಲಿ ೨೬೪ ಕೊರಗರ ಕುಟುಂಬಗಳು ಇರುವುದು ಕಂಡುಬರುತ್ತದೆ.

೨.೩.೩.೨. ಮಂಗಳೂರು ತಾಲೂಕು ಗ್ರಾಮಾಂತರ ವ್ಯಾಪ್ತಿಯ ಕೊರಗರ ನೆಲೆಗಳು ಮತ್ತು ಕುಟುಂಬಗಳು: ಅಂಬ್ಲ ಮೊಗರ ೧ ಕುಟುಂಬ, ತಿಲಕ್‌ನಗರ ೨, ಪಾವೂರು ೧, ಬೆಳುವಾಯಿ ೬, ಬಜ್ಪೆ ೪, ಶಾಂತಿಗುಡ್ಡ ಬಜ್ಪೆ ೧೦, ಮಳವೂರು ೨೯, ಬಳ್ಕುಂಜೆ ೧೯, ಬೋಳಿಯಾರು ೩, (ದರೆಗುಡ್ಡ) ಕೆಲ್ಲಪುತ್ತಿಗೆ ೯, ಪಣಪಿಲ ೪, ಗುರುಪುರ ೩, (ಗಂಜಿಮಠ) ಬಡಗಗುಳಿಪಾಡು ೬, ಮೊಗರು ೧೧, ಹೊಸಬೆಟ್ಟ ೧೮, ಇರುವೈಲು ೨, ಹಳೆಯಂಗಡಿ ೧, ಐಕಳ ೮, ಜೋಕಟ್ಟೆ ೫, ಕಲ್ಲುಮುಂಡ್ಕೂರು ೧೩, ಕಂದಾವರ ೭, ಕೊಳಂಬೆ ೪, ಅದ್ಯಪಾಡಿ ೨, ಅತ್ತೂರು ಕೆಮ್ರಾಲ್ ೬, ಪಂಜ ೩, ಕಿಲ್ಪಾಡಿ ೧೮, ಅತಿಕಾರಿಬೆಟ್ಟು ೨, ಶಿಮಂತೂರು ೨, (ಕಿನ್ನಿಗೋಳಿ) ತಾಳಿಪಾಡಿ ೨೯, ಕಿನ್ಯಾ ೧, ಕೋಣಾಜೆ ೧, ಕೋಟೆಕಾರು ೧೪, (ಕುಪ್ಪೆಪದವು) ಕಿಲೆಂಜಾರು ೧, ಮಂಜನಾಡಿ೧೦, ಕೊಂಡೆಮೂಲಗಿಡಿಗೆರೆ ೨೩, (ಮೆನ್ನೆಬೆಟ್ಟು) ಕೆಮ್ಮಡೆ ೨೨, ಮುಚ್ಚೂರು

೩, ಮೂಡುಗಡ್ಡೆ ೩೦, ನೆಲ್ಲಿಕಾರು ೪, ನೀರುಮಾರ್ಗ ೧, ಮಲ್ಲೂರು ೧, ಕಡಂದಲೆ ಪಾಲಡ್ಕ ೧೩, ಪಡುವಣಬೂರು ೨೨, ಪಡುಪೆರಾರು ೧೧, ಪೆರ್ಮುದೆ ೩, ಕುತ್ತೆತ್ತೂರು ೨, ಸೂರಿಂಜೆ ೪, ತೆಂಕಮಿಜಾರು ೧೭, ನೀರುಮಾರ್ಗ ಜಂಕ್ಷನ್ ೧, ಬಡಗ ಎಕ್ಕಾರು ನಿರೋಡಿ ೧೧, ತೆಂಕೆಕ್ಕಾರು, ೫, ಶಿರ್ತಾಡಿಮಕ್ಕಿ ೧, ಅಡ್ಯಾರು ೧, (ಮುಲ್ಕಿ ನಗರಸಭೆ) ಕಾರ್ನಾಡು ೧೦, ಮಾನಂಪಾಡಿ ೧, (ಮೂಡಬಿದ್ರೆ) ಮಾರ್ಪಾಡಿ ೬, ಕಲ್ಲಬೆಟ್ಟು ೪, (ತೆಂಖೆಡಪದವು) ಎಡಪದವು ೨, ಬಡಗ ಎಡಪದವು ೫, ಉಳೇಪಾಡಿ ೩, ಕರ್ನಿರೆ ೫ ಮತ್ತು ನೆಲ್ಲಿಗುಡ್ಡೆ ಮೂಡಬಿದ್ರೆ ೩ ಕುಟುಂಬಗಳು ವಾಸಿಸುತ್ತಿವೆ. ಒಟ್ಟು ೬೫ ನೆಲೆಗಳಲ್ಲಿ ಕೊರಗರ ೪೭೬ ಕುಟುಂಬಗಳಿರುವುದನ್ನು ದಾಖಲಿಸಲಾಗಿದೆ.

೨.೩.೩.೩. ಬಂಟ್ವಾಳ ತಾಲೂಕು ವ್ಯಾಪ್ತಿಯ ಕೊರಗರ ನೆಲೆಗಳು ಮತ್ತು ಕುಟುಂಬಗಳು: ಅಮ್ಮಾಡಿ ೧ ಕುಟುಂಬ, ಕುರಿಮಾಳ ೩, ಅನಂತಾಡಿ ೩, ಬಡಗಕಜೆಕಾರು ೧, ಬಾಳೆಪುಣಿ ೧೫, ಕೈರಂಗಳ ೨, ಬಾಳ್ತಿಲ ೨, (ಚೆನ್ನೈತೋಡಿ) ಅಜ್ಜಿಬೆಡ್ಡ ೪, ಅಮ್ಟೂರು ೨, ಇರಾ ೪, ಕನ್ಯಾನ ೪, ಕರೋಪಾಡಿ ೮, (ಕಾವಳಪಡೂರು) ಕಾಡಬೆಟ್ಟ ೨, ಪುಣಚ ೧, ಕುಟ್ಟಿತಡ್ಕ ೪, ಕೊಳ್ನಾಡು ೬, ಸಾಲೆತ್ತೂರು ೩, ಕಾವಳಮೂಡುರು ೧, ಪುಣಚ ೧, ಕುಟ್ಟತಡ್ಕ ೪, ಕೋಲ್ನಾಡು ೬, ಸಾಲೆತ್ತೂರು ೩, ಕಾವಳಮೂಡುರು ೧, ಕುಕ್ಕಿಪಾಡಿ ೪, ಕೇಪು (ಅಜ್ಜಿನಡ್ಕ) ೪, ಮಂಚಿ (ಕೇಪುಳ ಗುರಿ) ೨, (ಮಾಣಿ) ಬಳ್ಳಮಜಲು ಶಂಬುಗ ೬, (ಮೇರಮಜಲು) ಕೊಡ್ಮಣ್ ಮದಕ ೩, ನರಿಕೊಂಬು ೪, ನರಿಗಾನ (ಸುಟ್ಟ) ೪, ನರಿಗಾನ ಪೊಟ್ಪೊಳಿಕೆ ೬, ನರಿಗಾನ ನೆತ್ತಿಲಪದವು ೧, ಪಂಜಿಕಲ್ಲು ೨, ಮೂಡನಡುಗೋಡು ೫, (ಪಂಜಿಕಲ್ಲು) ಕರಿಮಣ್ಣು ೨, (ಪೆರುವಾಯಿ) ಮುದ್ದಾಪು ೨, ಮಾಣಿಲಪಕಳಕುಂಜ ೪, ಪಿಲಾತಬೆಡ್ಡ ೭, ಪುದು ೪, ರಾಯಿ ೨, (ಸಜಿಪಮೂಡ) ಸುಭಾಷನಗರ ೩, (ಸರಪಾಡಿ) ಕಾಯರಪಲಿಕೆ ೬, ತುಂಬೆ ಜನಪದವು ೧, (ಉಳಿ) ಗುಡ್ಡಬೆಟ್ಟ ೩, (ವೀರಕಂಬ) ಮಂಗಿಲಪದವು ೧೨, ಬೋಳತೂರು೪, ವಿಟ್ಲ ಕಸಬು೮, ವಿಟ್ಲಪಡ್ನೂರು ೪, (ಇಡ್ಕಿದು) ಅಳಿಕೆಮಜಲು ೨, ನಗರ ಪಂಚಾಯತ್ ಬಂಟ್ವಾಳ ೬ ಮತ್ತು ಅಮ್ಮೆನಲ್ಲಿ ೧ ಕುಟುಂಬ ಇರುವುದು ಕಂಡುಬರುತ್ತದೆ. ಬಂಟ್ವಾಳ ತಾಲೂಕಿನಲ್ಲಿ ಕೊರಗರ ೬೪ ನೆಲೆಗಳಿದ್ದು ಅದರಲ್ಲಿ ೧೮೨ ಕುಟುಂಬಗಳು ವಾಸಿಸುತ್ತಿವೆ.

೨.೩.೩.೪. ಪುತ್ತೂರು ತಾಲೂಕು ವ್ಯಾಪ್ತಿಯ ಕೊರಗರ ನೆಲೆಗಳು ಮತ್ತು ಕುಟುಂಬಗಳು: ಆಲಂಕಾರು ಗ್ರಾಮದಲ್ಲಿ ೧ ಕುಟುಂಬ, ಮಾಡ್ನೂರು ೩, ಹೊಸಗದ್ದೆ ೨, (ಅರಿಯಡ್ಕ) ಪಾಪೆಮಜಲು ೨, ಬಜತ್ತೂರು ೬, (ಬನ್ನೂರು) ಪಡ್ನೂರು ೨, ಪಾರಾ ೩, ಇರ್ದೆ ೨, ಬೇರಿಕೆ ೩, ಪಾನಾಜೆ೨, (ಬೆಲದೂರು) ಅಜರಂಗಳ ೨, ಬಿಳಿನೆಲೆ ೧೧, (ಗೋಳಿತೊಟ್ಟು) ಕಡಬ ೧, ಕುಡಿಪಾಡಿ ೨, (ಕೆದಬಾಡಿ) ಕೆಯ್ಯೂರು ೪, ೩೪-ದೇವಿನಗರ ೪, ಕೌಕ್ರಾಡಿ೧, (ಮುಂಡೂರು) ಸರ್ವೆನೆಕ್ಕಿಲು ೩, ಕರಿಯಡ್ಕ ೩, ನರಿಮೊಗರು ೨, ನೆಕ್ಕಿನಾಡಿ ೧, ನೆಟ್ಟಣಗೆ ಮಡ್ನೂರು ೧,ನೆಲ್ಯಾಡಿ ೬ಅಜೆಲಡ್ಕ ೧, ಪೆರಾಬೆ ೫, (ರಾಮಕುಂಜ) ಹಳೇನೇರಂಕಿ

೨, ಸವಣೂರು ೧, ಉಪ್ಪಿನಗಡಿ ೨, ಬೆಳ್ಳಿಪ್ಪಾಡಿ ೪, (ಕೋಡಿಬಾಡಿ) ದಾರದಕುಕ್ಕು ೪, (ಪುರಸಭೆ ಪುತ್ತೂರು) ಬಲ್ನಾಡುದಲ್ಲಿ ೧ ಕುಟುಂಬ ಹಾಗೂ ೪ತಡ್ಕದಲ್ಲಿ ೭ ಕುಟುಂಬಗಳು ವಾಸಿಸುತ್ತಿವೆ. ಪುತ್ತೂರು ತಾಲೂಕಿನ ೫೫ ನೆಲೆಗಳಲ್ಲಿ ಕೊರಗರ ಒಟ್ಟು ೯೯ ಕುಟುಂಬಗಳು ಅಸ್ತಿತ್ವ ಕಂಡುಕೊಂಡಿರುವುದು ಕಂಡುಬರುತ್ತದೆ.

೨.೩.೩.೫. ಬೆಳ್ತಂಗಡಿ ತಾಲೂಕು ವ್ಯಾಪ್ತಿಯ ಕೊರಗರ ನೆಲೆಗಳು ಮತ್ತು ಕುಟುಂಬಗಳು: ಅಡಿಂಜೆಯಲ್ಲಿ ೮ ಕುಟುಂಬಗಳು, ಅರಬೋಡಿ ೩, ಬಾರ್ಯ ೧, ಬೆಳಾಲು ೧, ಚಾರ್ಮಾಡಿ ೮, ಧರ್ಮಸ್ಥಳ ೧೧,ಇಂದಬೆಟ್ಟ ೩, ನಾವೂರು ಎಸ್ ಟಿ ಕಾಲೋನಿ ೧, (ಕಣಿಯೂರು) ಉರುವಾಲು ೨, ಕೊಕ್ಕಡ ೧,ಕುವೆಟ್ಟು ೧,ಲ್ಯಾಲ ೧, ಮುಚ್ಚಿನ ೨, ಮೇಲಂತಬೆಟ್ಟು ೧೫, ಮುಂಡಾಜೆ ೧,ನಾರಾವಿ ೧೦, ಕಲ್ಮಂಜ ೧೬, ನಿಡ್ಲೆ ೧,ಪಡಂಗಡಿ ೨, ಉಜಿರೆ ೧೧ಕಸಬಾದಲ್ಲಿ ೧ ಕುಟುಂಬ ಹಾಗೂ ಕಳಿಯದಲ್ಲಿ ೧ ಕುಟುಂಬ ಇರುವುದು ಕಂಡುಬರುತ್ತದೆ. ಪುತ್ತೂರು ತಾಲೂಕಿನ ಒಟ್ಟು ೨೧ ಪ್ರದೇಶಗಳಲ್ಲಿ ಕೊರಗರ ೧೦೭ ಕುಟುಂಬಗಳು ವಾಸಿಸುತ್ತಿವೆ.

೨.೩.೩.೬. ಸೂಳ್ಯ ತಾಲೂಕು ವ್ಯಾಪ್ತಿಯ ಕೊರಗರ ನೆಲೆಗಳು ಮತ್ತು ಕುಟುಂಬಗಳು: ಐವತ್ತೊಕ್ಲು ೯ ಕುಟುಂಬಗಳು, ದೇವಚಳ್ಳ ೧, ಸುಬ್ರಹ್ಮಣ್ಯ ೧, ಅಮರ ಮೂಡ್ನೂರು ೧, ಮುಡಪ್ಪಾಡಿ ೪, ನೆಲ್ಲೂರು ಕೇಮ್ರಾಜೆ ೨, ಸೋಣಗೇರಿ ೨, ಕೊಲ್ಲಮೊಗ್ರ ೩, ಪೆರುವಾಜೆಯಲ್ಲಿ ೯ ಕುಟುಂಬಗಳು ಹಾಗೂ ಸುಳ್ಯದಲ್ಲಿ (ದುಗ್ಗಲಗುಡ್ಡ) ೨ ಕುಟುಂಬಗಳಿವೆ. ಸೂಳ್ಯ ತಾಲೂಕಿನ ಒಟ್ಟು ೧೦ ಸ್ಥಳಗಳಲ್ಲಿ ಕೊರಗರ ೩೪ ಕುಟುಂಬಗಳಿರುವುದು ಕಂಡು ಬರುತ್ತದೆ. ಈ ತಾಲೂಕಿನಲ್ಲಿ ಕೊರಗರು ಕಡಿಮೆ ಪ್ರಮಾಣದಲ್ಲಿರುವುದನ್ನು ಗಮನಿಸಬಹುದು.

೨.೩.೩.೭. ದಕ್ಷಿಣ ಕನ್ನಡ ಜಿಲ್ಲೆಯ ಕೊರಗ ಸಮುದಾಯದ ತಾಲೂಕಾವಾರು ಜನಸಂಖ್ಯೆ:

ಕ್ರಸಂಖ್ಯೆ	ತಾಲೂಕು	ಕುಟುಂಬಗಳ ಸಂಖ್ಯೆ	ಗಂಡು	ಹೆಣ್ಣು	ಒಟ್ಟು
೧	ಮಂಗಳೂರು(ನಗರ)	೨೭೧	೬೨೧	೫೮೩	೧೨೦೪
೨	ಮಂಗಳೂರು	೫೦೩	೧೦೮೮	೧೧೧೪	೨೨೦೨
೩	ಬಂಟ್ವಾಳ	೧೮೫	೨೯೪	೨೭೮	೫೭೨
೪	ಪುತ್ತೂರು	೧೦೦	೨೦೬	೧೯೦	೩೯೬
೫	ಸೂಳ್ಯ	೩೫	೬೧	೪೦	೧೦೧
೬	ಬೆಳ್ತಂಗಡಿ	೧೧೨	೧೯೫	೧೮೮	೩೮೩
	ಒಟ್ಟು	೧೨೦೬	೨೪೬೫	೨೩೯೩	೪೮೫೮

೨.೩.೩.೮. ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ಬುಡಕಟ್ಟು ಸಮುದಾಯಗಳ ಜನಸಂಖ್ಯೆ:

ಕ್ರಸಂ.	ತಾಲೂಕು	ಪುರುಷರು	ಮಹಿಳೆಯರು	ಒಟ್ಟು
೧.	ಮಂಗಳೂರು	೮,೧೩೭	೮,೧೦೯	೧೬,೨೪೬
೨.	ಬಂಟ್ವಾಳ	೧೦,೪೮೬	೧೦,೪೨೬	೨೦,೯೧೨
೩.	ಪುತ್ತೂರು	೮,೭೩೩	೮,೮೫೪	೧೭,೬೨೭
೪.	ಬೆಳ್ತಂಗಡಿ	೭,೭೩೩	೭,೯೦೯	೧೫,೬೪೨
೫.	ಸುಳ್ಯ	೫,೮೩೨	೬,೦೦೯	೧೧,೮೪೧
	ಒಟ್ಟು	೪೦,೯೬೧	೪೧,೩೦೭	೮೨,೨೬೮

೨.೪. ಮಲೆಕುಡಿಯರು:

೨.೪.೧. ಚಾರಿತ್ರಿಕ ಹಿನ್ನೆಲೆ:

"ಮಲೆಕುಡಿಯ" ಎನ್ನುವ ಹೆಸರು ಸೃಷ್ಟಿಯಾಗಿರುವುದನ್ನು ಕುರಿತಾದ ಒಂದು ಐತಿಹ್ಯವಿದೆ. "ಈ ಸೃಷ್ಟಿಯ ಪ್ರಾರಂಭದಲ್ಲಿ ಪಾರ್ವತಿ ಮೊಲೆ ಕುಡಿಸಿ, ಒಂದು ಪರ್ವತದಲ್ಲಿ ಮಗುವನ್ನು ಬಿಡುವಾಗ, ಆ ಮಗುವಿಗೆ ಒಂದು ಹೆಸರು ಬೇಕು ಎಂದು ಯೋಚಿಸಿದಳು. ಆ ಮುಗುವಿಗೆ ಹೆಸರು ಇಡುವ ಕುರಿತು ಈಶ್ವರ ಮತ್ತು ಪಾರ್ವತಿ ನಿರ್ಧಾರ ತೆಗೆದುಕೊಳ್ಳುವಾಗ, ನಾವು ಮೊಲೆ ಕೊಟ್ಟು ಬಿಟ್ಟು ಕಾರಣ ಮಗುವಿಗೆ 'ಮೊಲೆ ಕುಡಿಯ' ಎಂದು ಹೆಸರಿಟ್ಟರು." ಮತ್ತೆ ಕಾಲಕ್ರಮೇಣ ಮೊಲೆ ಕುಡಿಯ ಹೋಗಿ ಮಲೆಕುಡಿಯ ಆಯಿತು. ಹೀಗೆ ಮಲೆಕುಡಿಯರಲ್ಲಿ ಬೆಳವಣಿಗೆಯಾಗುತ್ತಾ ಅವರಲ್ಲಿ ಅನೇಕ ಪಂಗಡಗಳು ಹುಟ್ಟಿಕೊಂಡವು. ಇಂದು ಮಲೆಕುಡಿಯರಲ್ಲಿ ಕೆಲವರು ನಾಡಿಗೆ ಬಂದಿದ್ದರೆ, ಮತ್ತೆ ಕೆಲವರು ಕಾಡಿನಲ್ಲಿಯೇ ಉಳಿದಿದ್ದಾರೆ.

೨.೪.೨. ಪ್ರಸರಣ:

ಮಲೆಕುಡಿಯರು ಪ್ರಾರಂಭದ ಹಂತದಲ್ಲಿ ಮಲೆಗಳಲ್ಲಿಯೇ ವಾಸವಾಗಿದ್ದರು. ಕಾಲಕ್ರಮೇಣ ಅವರು ಬದುಕುತ್ತಿದ್ದ ಮಲೆಗಳು ದೊಡ್ಡ ಭೂಮಾಲೀಕರ ವಶವಾದವು. ಕೆಲವು ಶ್ರೀಮಂತರು ಮಲೆಕುಡಿಯರ ಅಪಾರ ಕೃಷಿ ಸ್ಥಳವನ್ನು ತಮ್ಮ ವಶಕ್ಕೆ ಪಡೆದುಕೊಂಡು, ಅವರಿಗೆ ಮಲೆಯ ಕೆಳಗಡೆ ಲ್ಪ ಸ್ವಲ್ಪ ಭೂಮಿ ಕೊಟ್ಟರು. ಇನ್ನೂ ಕೆಲವು ಮಲೆಕುಡಿಯರಿಗೆ ಸರಕಾರ ಅರಣ್ಯ ನೀತಿಯ ಕಾರಣವೊಡ್ಡಿ ಅವರನ್ನು ಒಕ್ಕಲೆಬ್ಬಿಸಿ ಸರ್ಕಾರವೇ ಪುರ್ನವಸತಿ ಹೆಸರಿನಲ್ಲಿ ಮೂರರಿಂದ ಐದು ಎಕರೆಗಳಷ್ಟು ಸ್ಥಳ ನೀಡಿತು. ಮತ್ತೆ ಕೆಲವರು ವಿವಿಧ ಕಾರಣಗಳಿಂದ ಇತರೆ ಊರುಗಳಿಗೆ ವಲಸೆ ಹೋದರು. ಪುತ್ತೂರು ತಾಲೂಕಿನ ಸಿರಿಬಾಗಿಲು ಗ್ರಾಮದ ಮುಂಡೆತ್ತೋಟ ಸುಬ್ಬ ಮಲೆಕುಡಿಯ ಹೇಳುವಂತೆ "ಸಿರಿಬಾಗಿಲು ಗ್ರಾಮದ ಮಲೆಕುಡಿಯರು ಸುಮಾರು ಎಪ್ಪತ್ತು ಚರ್ಷಗಳ ಹಿಂದೆ ಮಡಿಕೇರಿ ಕಡೆಯಿಂದ ವಲಸೆ ಬಂದವರು. ಇವರು ಪ್ರಾರಂಭದಲ್ಲಿ ಕೊಂಬಾರಿನ ಮಲೆಕುಡಿಯರೊಂದಿಗೆ ಸಂಬಂಧ ಬೆಳೆಸಿದರು.

ಸುಬ್ರಹ್ಮಣ್ಯದ ಮಲೆಕುಡಿಯರು ಮೊದಲು ಮಲೆಯಲ್ಲಿಯೇ ಇದ್ದವರು. ನಮ್ಮ ಹಿರಿಯರು ಮಲೆಯಲ್ಲಿಯೇ ಇದ್ದವರು. ಸರ್ಕಾರದ ಬ್ಲಾಕುಗಳು ಬಂದ ಮೇಲೆ ಊರಿನ ಕಡೆಗೆ ಇಳಿದದ್ದು" ಎಂದು ಸುಬ್ರಹ್ಮಣ್ಯದ ಕರಿಯಪ್ಪ ಮಲೆಕುಡಿಯರ ಅಭಿಪ್ರಾಯ. ಬೆಳ್ತಂಗಡಿ ತಾಲೂಕಿನ ಸಂಸ್ಥೆಯ ಕಾಡಿನಲ್ಲಿದ್ದ ಮಲೆಕುಡಿಯರು ದಿಡುಪೆಯಲ್ಲಿ ಬಂದು ನೆಲೆಸಿದ್ದಾರೆ. ಹಾಗೆಯೇ ನಾಲ್ಮಲೆಯವರು ಕೆಳಗಡೆ ಬಂದು ನೆಲೆ ನಿಂತು ಇತರ ಮಲೆಕುಡಿಯರೊಂದಿಗೆ ಎಲ್ಲಾ ರೀತಿಯ ಸಂಪರ್ಕವನ್ನು ಬೆಳೆಸಿಕೊಂಡ ಮೇಲೆ ಈಗ ನಾಲ್ಮಲೆಯವರು ಮತ್ತು ಮಲೆಕುಡಿಯರು ಒಂದೇ ಆಗಿದ್ದಾರೆ.

೨.೪.೩. ಆಹಾರ:

ಮಲೆಕುಡಿಯರು ಮಾಂಸಾಹಾರಿಗಳು. ಹಂದಿ, ಕಡವೆ, ಜಿಂಕೆ, ಮೊಲ, ಬರಿಂಕ, ಮುಸು, ಕಾಡುಕುರಿ, ಕಾಡುಕೋಳಿ, ಚಟ್ಟೆ(ದೊಡ್ಡ ಜಾತಿಯ ಉಡ), ಮುಳ್ಳು ಮುಂತಾದ ಕಾಡು ಪ್ರಾಣಿಗಳನ್ನು ಉರುಳು ಕಟ್ಟಿ ಹಿಡಿಯುತ್ತಿದ್ದರು. ಇಂದು ಇವರಲ್ಲಿ ಬೇಟೆಯಾಡುವುದು ಕಡಿಮೆಯಾಗಿದೆ. ಕುಮೇರಿಯ ಭತ್ತ, ರಾಗಿ, ಬಿಂಗಿರಿ ಜೋಳ, ಸಿಹಿಗೆಣಸು, ಮರಗೆಣಸು, ಸೂಣಗೆಣಸು, ತುಪ್ಪೆಗೆಣಸು, ಸುವರ್ಣಗೆಡ್ಡೆಗಳನ್ನು ಬೆಳೆಸಿ ಆಹಾರಕ್ಕಾಗಿ ಉಪಯೋಗಿಸುತ್ತಾರೆ. ಕಾಡಿನಲ್ಲಿ ಸಿಗುವ ಈರೊಳು, ನರೆ, ಕಬಲೆ, ಕಾರವೊಳು, ಪುಂಡಿಕೇನೆ, ಅಡ್ಕರೆ ಮುಂತಾದ ಗೆಡ್ಡೆ ಕಾಯಿಗಳನ್ನು ಬೇಯಿಸಿ ತಿನ್ನುತ್ತಾರೆ. ಕೈಪೆರೆ ಪುಳಿ, ಸೋನೆತಪ್ಪು, ತಜಂಕ್(ಚಗತೆ), ತೇರಕೊಡಿ ಮುಂತಾದವುಗಳನ್ನು ಸಾರು ಮಾಡಲು ಉಪಯೋಗಿಸುತ್ತಾರೆ.



ಚಿತ್ರ: ಅರಣ್ಯ ಪ್ರದೇಶದಿಂದ ಒಕ್ಕಲೆದ್ದು ಹೋದ ಮಲೆಕುಡಿಯರ ಪಾಳುಬಿದ್ದ ಮನೆ.

೨.೪.೪. ಉಡುಗೆ ತೊಡುಗೆ:

ಮಲೆಕುಡಿಯ ಹೆಂಗಸರು ಸಾಂಪ್ರದಾಯಿಕವಾಗಿ ತುಂಬ ಸರಳವಾದ ಉಡುಪನ್ನು ಧರಿಸುತ್ತಿದ್ದರು. ಸೊಂಟ, ಎದೆ, ಬೆನ್ನು ಮುಚ್ಚುವಂತೆ ಒಂದು ಬಟ್ಟೆಯನ್ನು ಕಟ್ಟಿಕೊಳ್ಳುವುದು ಸಾಂಪ್ರದಾಯಿಕ ಕ್ರಮ. ಇದಕ್ಕೆ ಗೇಂಟಿ ಕಟ್ಟುವುದು ಎನ್ನುತ್ತಾರೆ. ಗೇಂಟಿ ಕಟ್ಟಿದ ಹೆಂಗಸರು ರವಿಕೆ ತೊಡುವ ಕ್ರಮವಿಲ್ಲ. ಮಲೆಯಲ್ಲಿ ಕೆಲಸ ಮಾಡುವ ಕುಡಿಯರಿಗೆ ಇದು ಅನುಕೂಲವೆಂದೇ ತೋರುತ್ತದೆ. ಗಂಡಸರು ಮನೆಯಲ್ಲಿರುವಾಗ ಒಂದು ಚಿಕ್ಕ ಅಂಗವಸ್ತ್ರ, ಅದಕ್ಕೆ ತಾವೇ ಬೆತ್ತದಿಂದ ಹೆಣೆದು ಕತ್ತಿಯನ್ನು



ಸಿಕ್ಕಿಸಿಕೊಳ್ಳುವಂತಹ ವಿನ್ಯಾಸವುಳ್ಳ ವಸ್ತುವನ್ನು ಬೆಲ್ಟ್ ರೀತಿಯಲ್ಲಿ ಕಟ್ಟಿಕೊಳ್ಳುತ್ತಾರೆ. ಗಂಡಸರು ಕಿವಿಗೆ ಕೊಡಂಗೆ, ಟಿಕ್ಕಿ, ಕುಂಡಲಗಳನ್ನು ಇಟ್ಟುಕೊಂಡರೆ, ಹೆಂಗಸರು ಕಿವಿಗೆ ಓಲೆ, ಮೂಗಿಗೆ ನತ್ತು, ಕೊರಳಿಗೆ ಮಣಿಸರವನ್ನು ಹಾಕಿಕೊಳ್ಳುತ್ತಾರೆ.

೨.೪.೫. ಕೃಷಿ:


ಮಲೆಕುಡಿಯರು ಈಗ ಮುಖ್ಯವಾಗಿ ಭತ್ತ, ತೆಂಗು, ಅಡಿಕೆ ಮತ್ತು ಎಣ್ಣೆ ಹುಲ್ಲನ್ನು ಹೆಚ್ಚಾಗಿ ಬೆಳೆಯುತ್ತಾರೆ. ಹಾಗೆಯೇ ಅಡಿಕೆ ತೋಟದ ಮಧ್ಯದಲ್ಲಿ ಏಲಕ್ಕಿಯನ್ನು ಬೆಳೆಯುತ್ತಾರೆ. ಅಡಿಕೆ ಮತ್ತು ಹೊಂಗಾರೆ ಗಿಡಗಳಲ್ಲಿ ಕರಿಮೆಣಸನ್ನು ಬೆಳೆಸುತ್ತಾರೆ. ಅಲ್ಲದೆ ಅಲ್ಲಲ್ಲಿ ಕೆಲವರು ಮುಡ್ಯಾಲ ಲಾವಂಚವನ್ನು ಬೆಳೆಸುತ್ತಾರೆ. ಹೆಚ್ಚಿನ ಮಲೆಕುಡಿಯರು ಕೃಷಿ ಕಾರ್ಮಿಕರಾಗಿದ್ದಾರೆ. ತಮಗೆ ಸರ್ಕಾರದಿಂದ ಅಥವಾ ಧಣಿಗಳಿಂದ ಸಿಕ್ಕಿದ ಸ್ವಲ್ಪ ಭೂಮಿಯಲ್ಲಿ ಕೃಷಿ ಮಾಡಿ ಉಳಿದ ಸಂದರ್ಭಗಳಲ್ಲಿ ಕೂಲಿ ಕೆಲಸಗಳನ್ನು ಮಾಡುತ್ತಾರೆ. ಜಿಲ್ಲೆಯ ಮಲೆಕುಡಿಯರಲ್ಲಿ ಬೆಳ್ತಂಗಡಿ ಮತ್ತು ಸುಳ್ಯ ತಾಲೂಕಿನ ಮಲೆಕುಡಿಯರು ಇತರ ಕಡೆಗಳಲ್ಲಿರುವ ಮಲೆಕುಡಿಯರಿಗಿಂತ ಕೃಷಿಯಲ್ಲಿ ಮತ್ತು ಶೈಕ್ಷಣಿಕವಾಗಿ ಮುಂದುವರೆದಿದ್ದಾರೆ. ಕೆಲವರು ಬೈನೆ ಮರದಿಂದ ಹೆಂಡ ತೆಗೆಯುವ ಕೆಲಸವನ್ನು ಮಾಡುತ್ತಿದ್ದಾರೆ. ಕೆಲವು ಮಲೆಕುಡಿಯರು ಶಿಕ್ಷಣವನ್ನು ಪಡೆದು ಬ್ಯಾಂಕು ಮತ್ತು ಇತರ ಸರ್ಕಾರಿ ಕಚೇರಿಗಳಲ್ಲಿ ಉದ್ಯೋದಲ್ಲಿದ್ದಾರೆ. ಸರ್ಕಾರಿ ಉದ್ಯೋಗದಲ್ಲಿರುವವರ ಕುಟುಂಬ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರೆದಿದೆ. ಆಧುನಿಕ ಸವಲತ್ತುಗಳನ್ನು ಪಡೆಯುವಲ್ಲಿ ಇವರು ಯಶಸ್ವಿಯಾಗಿದ್ದಾರೆ ಎಂದು ಹೇಳಬಹುದು.



ಚಿತ್ರ: ಅರಣ್ಯ ಪ್ರದೇಶದಲ್ಲಿರುವ ಮಲೆಕುಡಿಯರ ಕೃಷಿ ತೋಟ.

೨.೪.೬ ಕುಲ ಕಸುಬು:

ಮಲೆಕುಡಿಯರು ಬೆತ್ತದ ಬುಟ್ಟಿ, ಬೀಳಿನ ಬುಟ್ಟಿ, ಮೀನು ಹಾಕುವ ಮುಡಿಕ್ಕೆ, ಕೋಳಿ ಮರಿಗಳನ್ನು ಮುಚ್ಚಿಡುವ ಕೂಟಾಯಿ, ತರಗೆಲೆ ತರುವ ಕುರ್ಕಿಲ್‌ಗಳನ್ನು ತಯಾರಿಸುತ್ತಾರೆ. ಇತ್ತೀಚೆಗೆ ಬೆತ್ತದಿಂದ ಕುರ್ಚಿಗಳನ್ನು ತಯಾರು ಮಾಡುತ್ತಿರುವುದು ಕಂಡುಬರುತ್ತದೆ. ಬೆಳ್ತಂಗಡಿ ತಾಲೂಕಿನ ಶಿಶಿಲದಲ್ಲಿ ಮಲೆಕುಡಿಯರಿಗಾಗಿಯೇ ಬೆತ್ತದ ಮತ್ತು ಮರದ ಸಾಮಾಗ್ರಿಗಳನ್ನು ತಯಾರು ಮಾಡುವ ಒಂದು ಸಹಕಾರಿ



ಸಂಘ ಇದೆ. ಕುಡಿಯರು ತಯಾರಿಸುವ ಬೆತ್ತದ ಮತ್ತು ಮರದ ಎಲ್ಲಾ ವಸ್ತುಗಳನ್ನು ಸಂಘವೇ ಕೊಂಡು ಮಾರಾಟ ಮಾಡುತ್ತದೆ. ಹೆಂಗಸರು 'ಮಂಡೇವು' ಗಿಡದ ಎಲೆಗಳಿಂದ ಚಾಪೆ ಹೆಣೆಯುತ್ತಾರೆ. ಅಲ್ಲದೆ ಮನೆಯಲ್ಲಿ ವಸ್ತುಗಳನ್ನಿಡಲು ಸಣ್ಣ ಸಣ್ಣ ಪೆಟ್ಟಿಗೆಗಳನ್ನು ಹೆಣೆಯುತ್ತಾರೆ.

೨.೪.೭ ಮಲೆಕುಡಿಯರ ಬಳಿಗಳು:

ಮಲೆಕುಡಿಯರಲ್ಲಿರುವ ಪ್ರಮುಖ ಬಳಿಗಳು ಈ ಕೆಳಗಿನಂತೆ ಇರುವುದು ಕಂಡು ಬರುತ್ತವೆ.

೧. ಮೂಲ್ಯೆರೆ ಬರಿ
೨. ಬಂಗೇರ ಬರಿ
೩. ಬಲಸರ್ನ ಬರಿ
೪. ಗುಂಡೆರೆ ಬರಿ
೫. ಚಾಲ್ಯೆರೆ ಬರಿ
೬. ಪೆರ್ವರೆ/ಪೆರ್ಗಡೆ ಬರಿ
೭. ನಂದೆರೆ ಬರಿ
೮. ಚೌಟೆರೆ ಬರಿ
೯. ಕರ್ಂ ಬೆರೆ ಬರಿ
೧೦. ಬಾಗ್ಯಾಟ್ಟಿ ಬರಿ
೧೧. ಪುಲ್ಯೆಟ್ಟಿ ಬರಿ
೧೨. ಉನ್ನಿತನ್ನ ಬರಿ
೧೩. ಮುಚ್ಚುರಿನ ಬರಿ
೧೪. ಬನ್ನಾಲು ಬರಿ
೧೫. ಬಾರ್ತೆರೆ ಬರಿ

ಇದರಲ್ಲಿ ಗುಂಡರ ಬಳಿಯಲ್ಲಿ ಕುತ್ತಿಗುಂಡೆರ್ ಮತ್ತು ಪೇಪ್ ಗುಂಡೇರ್ ಎಂದು ಎರಡು ವಿಧಗಳಿವೆ. ಮಲೆಕುಡಿಯರಲ್ಲಿ ಅಳಿಯಕಟ್ಟು ಮತ್ತು ಮಕ್ಕಳಕಟ್ಟು ಈ ಎರಡೂ ಸಂಪ್ರದಾಯಗಳು ಅಚರಣೆಯಲ್ಲಿವೆ. ಈ ಎರಡು ಕಟ್ಟುಗಳ ಮಲೆಕುಡಿಯರ ನಡುವೆ ಮದುವೆ ನಡೆಯುತ್ತದೆ. ಹಿಂದೆ ಅಳಿಯ ಕಟ್ಟಿನ ಸಂಪ್ರದಾಯಸ್ಥ ಮಲೆಕುಡಿಯರಲ್ಲಿ ತಾಳಿ ಇರಲಿಲ್ಲ. ಈಗ ಎರಡು ಸಂಪ್ರದಾಯದವರು ಕರಿಮಣಿ ತಾಳಿಯನ್ನು ಹಾಕುತ್ತಾರೆ.

೨.೪.೮ ಮಲೆಕುಡಿಯರ ವಾರ್ಷಿಕಾವರ್ತನ ಆಚರಣೆಗಳು:

ಮಲೆಕುಡಿಯರು ಇತರ ಸಮುದಾಯಗಳಂತೆ ಕೆಲವು ವಾರ್ಷಿಕ ಆಚರಣೆಗಳನ್ನು ನಡೆಸುತ್ತಾ ಬಂದಿದ್ದಾರೆ. ಮುಖ್ಯವಾಗಿ ಅವರ ಬದುಕಿನ ಆಗುಹೋಗುಗಳ ಬಗ್ಗೆ ಅವರು ನಂಬಿಕೊಂಡು ಬಂದ ದೈವಗಳು. ಭೂತಾರಾಧನೆಯು ವರ್ಷದ ಮುಖ್ಯ ಆಚರಣೆಗಳಲ್ಲೊಂದು. ದೈವ ದೇವರುಗಳಿಂದಲೇ ತಮ್ಮ ಬದುಕು ಸಾಗಿ ಬಂದಿದೆ ಎಂದು ನಂಬಿದವರು ಅವರು. ದೈವ ದೇವರುಗಳ ಕ್ರಮವನ್ನು ಅವರ ಹಿಂದಿನ ತಲೆಮಾರಿನವರು ಮಾಡಿಕೊಂಡು ಬಂದ ಹಾಗೆ ಬಹಳ ಶ್ರದ್ಧೆಯಿಂದ ಮಾಡುತ್ತಾ ಬಂದಿದ್ದಾರೆ. ಮಲೆಕುಡಿಯರು ಮುಖ್ಯವಾಗಿ ಮಲೆಚಾಮುಂಡಿ, ಗುಳಿಗ, ಕಲ್ಲುರ್ಟಿ, ಪಂಜುರ್ಲಿ, ಮಾಲಕೊರಗ, ಕೊರತಿ

ಭೂತ, ಬಸ್ತಿನಾಯಕ ಮುಂತಾದ ಭೂತಗಳನ್ನು ನಂಬುತ್ತಾರೆ. ಭೂತಗಳನ್ನು ಹೆಚ್ಚಾಗಿ ತಂಬಿಲ ಕೊಡುವುದರ ಮೂಲಕ ಆರಾಧಿಸುತ್ತಾರೆ.



ಅರಣ್ಯ ಪ್ರದೇಶದಲ್ಲಿರುವ ಮಲೆಕುಡಿಯರು ಪೂಜಿಸುವ ದೈವಸ್ಥಾನಗಳು.

ಪುತ್ತೂರು ತಾಲೂಕಿನ ಸಿರಿಬಾಗಿಲಿನಲ್ಲಿ ಊರವರು ಮತ್ತು ಮಲೆಕುಡಿಯರು ಸೇರಿ ಆರಾಧಿಸುವ ಪಂಜುರ್ಲಿ, ಗುಳಿಗ ಮತ್ತು ಕಲ್ಲುರ್ಟಿ ಭೂತಗಳಿಗೆ ಪೂಜಾರಿಗಳು ಮಲೆಕುಡಿಯರೇ ಆಗಿದ್ದಾರೆ. ಇಲ್ಲಿ ಭೂತಗಳಿಗೆ ಕೋಳಿ ಬಲಿ ಕೊಡುತ್ತಾರೆ ಮತ್ತು ಅದೇ ಕೋಳಿಯ ಮಾಂಸದಿಂದ ಅಡುಗೆ ಮಾಡಿ ಬಡಿಸುತ್ತಾರೆ. ಅಲ್ಲಿ ಸೇರಿದವರೆಲ್ಲರು ಅಲ್ಲಿಯೇ ಊಟ ಮಾಡಿ ಹೋಗುತ್ತಾರೆ. ಈ ಆಚರಣೆ ಮೇ ತಿಂಗಳಲ್ಲಿ ನಡೆಯುತ್ತದೆ. ಮಲೆಕುಡಿಯರು ಭೂತರಾಧನೆಯನ್ನು ಯಾವ ರೀತಿಯಲ್ಲಿ ನಡೆಸಿಕೊಂಡು ಬಂದಿದ್ದಾರೋ, ಅದೇ ರೀತಿಯಲ್ಲಿ ದೇವರ ಸೇವೆಯನ್ನು ಬಹಳ ನಿಷ್ಠೆಯಿಂದ ಮಾಡಿಕೊಂಡು ಬರುತ್ತಿದ್ದಾರೆ. ಸುಬ್ರಹ್ಮಣ್ಯ, ಧರ್ಮಸ್ಥಳ, ಬಳ್ಳಮಂಜ, ಕೊಕ್ಕಡ ದೇವಸ್ಥಾನಗಳ ಉತ್ಸವಗಳಲ್ಲಿ ಈಗಲೂ ಮಲೆಕುಡಿಯರ ಪಾತ್ರ ಮಹತ್ವದ್ದು. ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಜಾತ್ರೆಯ ಸಂದರ್ಭದಲ್ಲಿ ಚಪ್ಪರಹಾಕುವುದು. ರಥ ಕಟ್ಟುವುದು, ಅದಕ್ಕೆ ಬೇಕಾದ ಬಿದಿರು ಕಟ್ಟಿಗೆಗಳ ಪೂರ್ವ ತಯಾರಿಯನ್ನು ಮಲೆಕುಡಿಯರು ಮಾಡುತ್ತಾರೆ. ಹಿಂದಿನ ಕಾಲದಲ್ಲಿ ಇವರ ಸೇವೆಗೆ ಆರು ಆಣೆ ದುಡ್ಡು, ಮೂರು ಸೇರು ಭತ್ತ ಮತ್ತು ಮಧ್ಯಾಹ್ನದ ಊಟ ಕೊಡುತ್ತಿದ್ದರು. ಹದಿನೈದು ಸೇರು ಅಕ್ಕಿ ಮತ್ತು ಐವತ್ತು ರೂಪಾಯಿ ಹಾಗೂ ಬಟ್ಟೆ ಇದು ಈಗ ಮಲೆಕುಡಿಯರಿಗೆ ದೇವಸ್ಥಾನದಿಂದ ಸಿಗುವ ಸಂಬಳ. ಅಲ್ಲದೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿರುವ 'ಹೊಸಲಿಗಮ್ಮ' ಭೂತಕ್ಕೆ ವರ್ಷಾವದಿ ಉತ್ಸವ ಆಗುವಾಗ, ಅಲ್ಲಿ ತೋರಣ ಕಟ್ಟುವುದು, ಗಂಟೆ ಬಾರಿಸುವುದು, ಸೂಟೆ ಕೊಡುವ ಕೆಲಸವನ್ನು ಮಲೆಕುಡಿಯರು ಮಾಡುತ್ತಾರೆ.

೨.೪.೯ ಹಬ್ಬಗಳು:

ಮಲೆಕುಡಿಯರು ಭೂತಾರಾಧನೆಯ ಜೊತೆಗೆ ಕೆಲವು ಹಬ್ಬಗಳನ್ನು ಆಚರಿಸುತ್ತಾರೆ. ಆಟಿ ಅಮಾವಾಸ್ಯೆ, ಎಳ್ಳಮಾವಾಸ್ಯೆ, ಕಾವೇರಿ ಸಂಕ್ರಮಣ, ಕೆಡ್ಡಸ, ದೀಪಾವಳಿ, ಮಕ್ಕಳ ಹುಣ್ಣಿಮೆ ಮುಂತಾದ



ಹಬ್ಬಗಳನ್ನು ಆಚರಿಸುತ್ತಾರೆ. ಆಟಿ ಅಮಾವಾಸ್ಯೆ ದಿನ ಬೆಳಿಗ್ಗೆ ಹಾಳೆ ಮರದ ತೊಗಟೆಯನ್ನು ತಂದು ಅದರ ರಸವನ್ನು ಕುಡಿಯುತ್ತಾರೆ. ಆ ದಿನ ಹಾಳೆ ಮರದ ರಸದಲ್ಲಿ ಎಲ್ಲಾ ಕಾಯಿಲೆಗಳನ್ನು ವಾಸಿ ಮಾಡುವ ಗುಣವಿದೆ ಎಂದು ನಂಬುತ್ತಾರೆ. ಆದುದರಿಂದ ಇದನ್ನು ಎಲ್ಲರೂ ತಪ್ಪದೆ ಕುಡಿಯುತ್ತಾರೆ. ಸುಬ್ರಹ್ಮಣ್ಯ ಪ್ರದೇಶದಲ್ಲಿ ಆಟಿ ಅಮಾವಾಸ್ಯೆಯ ದಿನ ಕಲ್ಲುರ್ಟಿ ಭೂತಕ್ಕೆ ಆಹಾರವನ್ನು ಬಡಿಸುತ್ತಾರೆ. ಕಾರ್ಕಳ ಪ್ರದೇಶದಲ್ಲಿ ಗುಳಿಗ ಭೂತಕ್ಕೆ ಬಡಿಸುತ್ತಾರೆ. ಆ ದಿನ ಸಂಜೆ ಮಾಂಸದ ಅಡುಗೆಯನ್ನು ಮಾಡುತ್ತಾರೆ. ಕೆಡ್ಡೆಸ ತುಳುನಾಡಿನ ವಿಶಿಷ್ಟ ಹಬ್ಬಗಳಲ್ಲಿ ಒಂದು. 'ಕೆಡ್ಡಸ' ಎಂಬುದು ಭೂಮಿ ದೇವಿ ರಜಸ್ವಲೆಯಾಗುವ ಕಾಲವೆಂದು ಜನಪದರ ಗ್ರಹಿಕೆ. ಭೂಮಿತಾಯಿ ಋತುಮತಿಯಗಿ ಬೀಜೋತ್ಪತ್ತಿಯ ನಿರೀಕ್ಷೆಯಲ್ಲಿರುವ ಸಂಧಿಕಾಲ ಈ ಹಬ್ಬ ಋತುಮಾನಕ್ಕೆ ಸಂಬಂಧಪಟ್ಟದ್ದಾಗಿದ್ದು, ಇದು ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ದಿನಗಳ ಆಚರಣೆ ಆಗಿರುತ್ತದೆ. ಮಲೆಕುಡಿಯರು ಕೆಡ್ಡೆಸದ ದಿನ ಮೀನು, ಮಾಂಸ ಪದಾರ್ಥ ಮಾಡುತ್ತಾರೆ. ಕೆಡ್ಡಸದ ದಿನ ಮಾಂಸ ತಿನ್ನದಿದ್ದರೆ ತಮ್ಮ ದೇಹದ ಎಲುಬು ಹಾಳಾಗುತ್ತದೆ ಎಂಬ ನಂಬಿಕೆ ಇವರಲ್ಲಿದೆ. ಕಾವೇರಿ ಸಂಕ್ರಮಣದ ದಿನ ಹೊಸ ಅಕ್ಕಿಯ ದೋಸೆ ಮತ್ತು ರೊಟ್ಟಿಯನ್ನು ಮಾಡುತ್ತಾರೆ. ಅಷ್ಟರವರೆಗೆ ಹೊಸ ಅಕ್ಕಿಯ ದೋಸೆ ಮತ್ತು ರೊಟ್ಟಿಯನ್ನು ಮಾಡಬಾರದು ಎನ್ನುವ ನಂಬಿಕೆ ಮಲೆಕುಡಿಯರಲ್ಲಿದೆ. ದೀಪಾವಳಿ ಹಬ್ಬವನ್ನು ಮಲೆಕುಡಿಯರು ಮೂರು ದಿನಗಳವರೆಗೆ ಆಚರಿಸುತ್ತಾರೆ. ಈ ಮೂರು ದಿನಗಳನ್ನು ಅಮಾವಾಸ್ಯೆ, ಪಾಡ್ಯ ಮತ್ತು ಕರಿ ಎಂದು ಕರೆಯುತ್ತಾರೆ. ಪಾಡ್ಯದ ದಿನ ದನಗಳನ್ನು ಸಾಕುವವರು ಗೋಪೂಜೆ ಮಾಡುತ್ತಾರೆ ಮತ್ತು ಅದೇ ವರ್ಷ ಮರಣ ಹೊಂದಿದ ಹಿರಿಯರಿಗೆ ಅವಲಕ್ಕಿ ಬಡಿಸುವ ಕಾರ್ಯ ಮಾಡುತ್ತಾರೆ.

೨.೪.೧೦. ಶಿಕ್ಷಣ:

ಮಲೆಕುಡಿಯರು ಪ್ರಾರಂಭದ ಹಂತದಲ್ಲಿ ಶಿಕ್ಷಣದಿಂದ ವಂಚಿತರಾಗಿದ್ದರೂ ಈಗ ಶೇಕಡ ೯೦ರಷ್ಟು ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಅಲ್ಲದೆ ಕೆಲವು ವಿದ್ಯಾರ್ಥಿಗಳು ಹೈಸ್ಕೂಲು ಹಾಗೂ ಕಾಲೇಜುಗಳಲ್ಲಿಯೂ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಮಲೆಕುಡಿಯರ ಮಕ್ಕಳಿಗಾಗಿಯೇ ಸರ್ಕಾರ ಆಶ್ರಮ ಶಾಲೆಗಳನ್ನು ತೆರೆದಿದೆ. ಬೆಳ್ತಂಗಡಿ ತಾಲೂಕಿನ ಆಳಾದಂಗಡಿ, ನಾರಾವಿ, ಶಿಶಿಲ ಮತ್ತು ಧರ್ಮಸ್ಥಳದಲ್ಲಿ ಈ ಶಾಲೆಗಳಿವೆ ಹಾಗೂ ಸುಳ್ಯ ತಾಲೂಕಿನ ಸುಬ್ರಹ್ಮಣ್ಯದಲ್ಲಿಯೂ ಈ ಆಶ್ರಮ ಶಾಲೆ ಇದೆ. ಮಲೆಕುಡಿಯ ಮಕ್ಕಳಿಗೆ ಊಟ, ವಸತಿ ವ್ಯವಸ್ಥೆಗಳೆಲ್ಲ ಅಲ್ಲಿವೆ. ಆದುದರಿಂದ ಮಲೆಕುಡಿಯರ ಮಕ್ಕಳು ತೀರ ಬಡತನ ಇದ್ದರೂ ಕೂಡ ಶಿಕ್ಷಣ ಪಡೆಯಲು ಸಾಧ್ಯವಾಗಿದೆ. ದೂರದ ಅಂಬಟೆ ಮಲೆ, ಬಾಂಜಾರು ಮಲೆ, ಮತ್ತು ಕೋಲೊಡಿ ಪ್ರದೇಶದ ಮಲೆಕುಡಿಯರು ತಮ್ಮ ಮಕ್ಕಳನ್ನು ಶಾಲೆ ಪ್ರಾರಂಭವಾಗುವ ದಿನ ಶಾಲೆಯ ತನಕ ಬಿಟ್ಟು ಹೋಗುತ್ತಾರೆ. ಆ ಮೇಲೆ ಮಕ್ಕಳ ಹೆತ್ತವರು ಬಂದು ಕರೆದುಕೊಂಡು ಹೋಗುವ ತನಕ ಮಕ್ಕಳ ಜವಾಬ್ದಾರಿ ಅಧ್ಯಾಪಕರು ಮತ್ತು ವಸತಿಯ ಮೇಲ್ವಿಚಾರಕರದ್ದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭವಾದ ಸಂಪೂರ್ಣ ಸಾಕ್ಷರತಾ ಆಂದೋಲನದಲ್ಲಿ ಹದಿನಾಲ್ಕರಿಂದ ಮೂವತ್ತೈದು ವರ್ಷದ ಒಳಗಿನ ಹೆಚ್ಚಿನ ಮಲೆಕುಡಿಯರು ಸಾಮಾನ್ಯ ಓದು ಬರಹವನ್ನು ಕಲಿತಿದ್ದಾರೆ. ವ್ಯವಹಾರಕ್ಕಾಗಿ ಕನ್ನಡ ಭಾಷೆಯನ್ನು ಕಲಿತಿದ್ದಾರೆ. ಈ ಆಂದೋಲನದಲ್ಲಿ ಮಲೆಕುಡಿಯರ ಮಹಿಳೆಯರು ಸಕ್ರೀಯವಾಗಿ ಭಾಗವಹಿಸಿದ್ದಾರೆ. ಸಾಕ್ಷರತಾ ಆಂದೋಲನದ ಸ್ವಯಂಸೇವಕರು ಮಲೆಕುಡಿಯರ ಕಾಲೋನಿಗಳಿಗೆ ಭೇಟಿಕೊಟ್ಟು ಅವರಿಗೆ ಆರೋಗ್ಯ, ಕುಟುಂಬ ಜೀವನ, ಸ್ವಚ್ಚತೆ ಮತ್ತು ಆಧುನಿಕತೆಯ ಬಗ್ಗೆ ಮಾಹಿತಿಗಳನ್ನು ನೀಡಿದ್ದಾರೆ. ಆ ಮೂಲಕ ಮಲೆಕುಡಿಯರ ಮಹಿಳೆಯರು ಪೇಟೆಗಳಿಗೆ ಹೋಗಿ ತಮಗೆ ಬೇಕಾದ ವಸ್ತುಗಳನ್ನು ಪಡೆದುಕೊಂಡು ಬರುವಷ್ಟು ಮುಂದುವರೆದಿದ್ದಾರೆ. ಇದರಿಂದಾಗಿ ಮಲೆಕುಡಿಯರ ಆಚಾರ ವಿಚಾರ, ಉಡುಗೆ ತೊಡುಗೆಗಳಲ್ಲಿ ಬದಲಾವಣೆಗಳು ಕಂಡು ಬಂದಿವೆ.



ಮಲೆಕುಡಿಯರು ವಾಸವಾಗಿರುವ ಅರಣ್ಯ ಪ್ರದೇಶದ ನಡುವಿನಲ್ಲಿರುವ ಅಂಗನವಾಡಿ.

೨.೪.೧೧. ಮಲೆಕುಡಿಯರ ನೆಲೆಗಳು:

ಬುಡಕಟ್ಟು ಸಮುದಾಯಕ್ಕೆ ಸೇರಿದ ಮಲೆಕುಡಿಯರು ಕರ್ನಾಟಕದ ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ದಕ್ಷಿಣ ಕನ್ನಡದಲ್ಲಿ ಇವರನ್ನು ಮಲೆಕುಡಿಯರು ಎಂದೂ, ಕೊಡಗಿನಲ್ಲಿ ಕುಡಿಯರು ಎಂದೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಲ್ಯೆಕುಡಿ ಅಥವಾ ಮಲೆಯರು ಎಂದೂ ಕರೆಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಕಾರ್ಕಳ, ಪುತ್ತೂರು ಮತ್ತು ಸುಳ್ಯ ತಾಲೂಕುಗಳಲ್ಲಿ ಇವರು ವಾಸವಾಗಿದ್ದಾರೆ.

೨.೪.೧೧.೧ ಬೆಳ್ತಂಗಡಿ ತಾಲೂಕು ವ್ಯಾಪ್ತಿಯ ಮಲೆಕುಡಿಯರ ನೆಲೆಗಳು ಮತ್ತು ಕುಟುಂಬಗಳು. ಕಾಶಿಪಟ್ಣದಲ್ಲಿ ೬ ಕುಟುಂಬಗಳು, ಕೊಕ್ಕಡದಲ್ಲಿ ೧೦, ಕೊಯ್ಯೂರು ೧೭, ಕುಕ್ಕೇಡಿ ೧೪, ಕುವೆಟ್ಟು ೧೨, ಲ್ಯಾಲ ೨೬, ಮಚ್ಚಿನ ೪೦, ಮಡಂತ್ಯಾರು ೩, ಮಾಲಾಡಿ ೩, ಮಲವಂತಿಗೆ ೮೧, ಮೇಲಂತಬೆಟ್ಟ ೨೯, ಮಿತ್ತಬಾಗಿಲು ೧೩, ಮುಂಡಾಜೆ ೨೭, ನಡ ೧೨, ನಾರಾವಿ ೧೨೫, ನೆರಿಯ ೧೨೪, ಕಲ್ಮಂಜ ೧೨, ನಿಡ್ಲೆ ೧೦೭,

ಪಡಂಗಡಿ ೧, ಪಟ್ರಮೆ ೧೮, ಪುದುವೆಟ್ಟು ೧೭, ಶಿಬಾಜೆ ೮, ಶಿರ್ಲಾಲು ೨೭, ಶಿಶಿಲ ೫೮, ತಣ್ಣೀರುಪಂತ ೨, ಉಜಿರೆ ೧೧, ಬೆಳ್ತಂಗಡಿ ನಗರ ಪಂಚಾಯತ ಪ್ರದೇಶದಲ್ಲಿ ಮಲೆಕುಡಿಯರ ೭, ಕುಟುಂಬಗಳು ವಾಸಿಸುತ್ತಿವೆ. ಒಟ್ಟು ಬೆಳ್ತಂಗಡಿ ತಾಲೂಕಿನ ೨೯ ಮಲೆಕುಡಿಯರ ನೆಲೆಗಳಲ್ಲಿ ೧೧೯೪ ಕುಟುಂಬಗಳಿರುವುದನ್ನು ಸಮೀಕ್ಷೆ ಮಾಡಲಾಗಿದೆ. ಬೆಳ್ತಂಗಡಿ ತಾಲೂಕಿನ–ನೆರೆಯ ಗ್ರಾಮದ ಬಂಜಾರು ಮಲೆ, ಅಂಬಟೆಮಲೆ, ಎಲಿಮಲೆ, ಬಾರಿಮಲೆ, ಗಮಡಿಬಾಗಿಲು, ಕೊಲೋಡಿಗಳಲ್ಲಿಯೂ, ಚಾರ್ಮಾಡಿ, ಧರ್ಮಸ್ಥಳ, ನಾವೂರು, ಮಲವಂತಿಗೆ, ಕುತ್ಲೂರು, ಸವಣಾಲು, ಬೆಳಾಲು ಮುಂತಾದ ಗ್ರಾಮಗಳಲ್ಲಿ ವಾಸಿಸುತ್ತಿರುವ ಮಲೆಕುಡಿಯರ ಸಮೀಕ್ಷೆಯ ಮಾಹಿತಿ ದೊರೆತಿಲ್ಲ.

೨.೪.೧೧.೨ ಸೂಳ್ಯ ತಾಲೂಕು ವ್ಯಾಪ್ತಿಯ ಮಲೆಕುಡಿಯರ ನೆಲೆಗಳು ಮತ್ತು ಕುಟುಂಬಗಳು: ಕುತ್ಕುಂಜ ಗ್ರಾಮದಲ್ಲಿ ೩ ಕುಟುಂಬಗಳು, ಮರ್ಕಂಜದಲ್ಲಿ ೯, ಹರಿಹರ ಪಲ್ಲತಡ್ಕ ೫, ಬಾಳುಗೋಡು ೨೨, ಐನೆಕಿದು ೭, ದೇವಚಳ್ಳ ೫, ಸುಬ್ರಮಣ್ಯದಲ್ಲಿ ೯೦, ಏನೆಕಲ್ಲು ೨, ಅಮರ ಮಡ್ನೂರು ೫, ಕನಮಜಲ ೧, ಉಬರಡ್ಕ ಮಿತ್ತೂರು ೧೧, ಗುತ್ತಿಗಾರು ೨, ಮುಡಪ್ಪಾಡಿ ೨೦, ನೆಲ್ಲೂರು ಕೇಮ್ರಾಜೆ ೪, ಅರಂತೊಡು ೨೭, ಕೊಲ್ಲಮೊಗ್ರುದಲ್ಲಿ ೧ ಕುಟುಂಬ ಹಾಗೂ ಕಲ್ಮಕಾರುದಲ್ಲಿ ೫ ಮಲೆಕುಡಿಯರ ಕುಟುಂಬಗಳು ವಾಸಿಸುತ್ತಿವೆ. ಸೂಳ್ಯ ತಾಲೂಕಿನ ೧೭ ಪ್ರದೇಶಗಳಲ್ಲಿ ೨೧೯ ಮಲೆಕುಡಿಯರ ಕುಟುಂಬಗಳು ಇರುವುದನ್ನು ಗುರುತಿಸಲಾಗಿದೆ.

೨.೪.೧೧.೩. ದಕ್ಷಿಣ ಕನ್ನಡ ಜಿಲ್ಲೆಯ ಮಲೆಕುಡಿಯ ಸಮುದಾಯದ ತಾಲೂಕಾವಾರು ಜನಸಂಖ್ಯೆ:

ಕ್ರಸ	ತಾಲೂಕು	ಕುಟುಂಬಗಳ	ಗಂಡು	ಹೆಣ್ಣು	ಒಟ್ಟು	ಮಲೆಕುಡಿಯರ ಕಾಲೋನಿಗಳು	ಮಲೆಕುಡಿಯರು ವಾಸಿಸುತ್ತಿರುವ ಪಂಚಾಯತಗಳ ಸಂಖ್ಯೆ
೧	ಮಂಗಳೂರು	೧೭	೩೧	೨೭	೫೮	೨	೨
೨	ಬಂಟ್ವಾಳ	೮೬	೨೨೩	೨೦	೪೨೪	೧೦	೧೦
೩	ಪುತ್ತೂರು	೯೧	೨೫೦	೨೨೨	೪೭೨	೧೪	೧೧
೪	ಸೂಳ್ಯ	೨೧೯	೪೬೨	೫೧೮	೯೮೦	೧೯	೧೨
೫	ಬೆಳ್ತಂಗಡಿ	೧೧೯೧	೩೦೧೭	೨೭೩೩	೫೭೫೦	೮೭	೩೯
	ಒಟ್ಟು	೧೬೦೪	೩೯೮೩	೩೭೦೧	೭೬೮೪	೧೩೨	೭೪

೨.೪.೧೧.೪. ಉಡುಪಿ ಜಿಲ್ಲೆಯಲ್ಲಿರುವ ಮಲೆಕುಡಿಯರ ನೆಲೆಗಳು ಮತ್ತು ಕುಟುಂಬಗಳು:

ಕಾರ್ಕಳ ತಾಲೂಕಿನಲ್ಲಿ ಮಲೆಕುಡಿಯರ ನೆಲೆಗಳು ಮತ್ತು ಕುಟುಂಬಗಳು: ಈದು ಗ್ರಾಮದಲ್ಲಿ ೨೭ ಮಲೆಕುಡಿಯರ ಕುಟುಂಬಗಳು, ನೂರಾಳ್ ಬೆಟ್ಟದಲ್ಲಿ ೩೧, ದುರ್ಗಾ ೧೯, ಮಾಳದಲ್ಲಿ ೬೦, ಮೇಗದ್ದೆ ೧೫, ನೆಲ್ಲಿಕಟ್ಟೆ ೭, ಅಂಡಾರು ೩೮, ಶಿರ್ಲಾಲು (ಸೂಡಿ) ೫, ಶಿರ್ಲಾಲು (ಪಡಿಬೆಟ್ಟು) ೧೧, ಶಿರ್ಲಾಲು

(ಸೂರ್ಯಂತೊಕ್ಲು) ೫, ಕೆರ್ವಾಶೆ (ಬಂಗ್ಲೆಗುಡ್ಡ) ಮತ್ತು ಕೆರ್ವಾರ್ಸೆ ಶೆಟ್ಟಿಬೆಟ್ಟದಲ್ಲಿ ೪೨, ಹೆರ್ಮುಂಡೆ ೧೨, ರೆಂಜಾಳ ೧೨, ನಲ್ಲೂರು ೧೨, ಕಬ್ಬಿನಾಲೆ ೮೭, ಮುದ್ರಾಡಿ ೨೩, ಕಾರ್ಕಳ ಪುರಸಭೆ ೧ ಮತ್ತು ಕುಕ್ಕುಂದೂರಿನಲ್ಲಿ ೧ ಕುಟುಂಬ ವಾಸಿಸುತ್ತಿದೆ. ಉಡುಪಿ ತಾಲೂಕಿನ ಬ್ರಹ್ಮಾವರದಲ್ಲಿ ೧, ಮತ್ತು ಕುಂದಾಪುರ ತಾಲೂಕಿನ ಅಮಾಸೆಬೈಲನಲ್ಲಿ ಮಲೆಕುಡಿಯರ ೧ ಕುಟುಂಬ ವಾಸಿಸುತ್ತಿದೆ. ಉಡುಪಿ ಜಿಲ್ಲೆಯ ೨೧ ಪ್ರದೇಶಗಳಲ್ಲಿ ಮಲೆಕುಡಿಯರ ೪೦೩ ಕುಟುಂಬಗಳು ವಾಸಿಸುತ್ತಿರುವುದು ದಾಖಲಾಗಿದೆ.

ಮಲೆಕುಡಿಯರು ಒಂದೊಂದು ಮಲೆಯನ್ನು ಆಶ್ರಯಿಸಿಕೊಂಡು ಬದುಕುತ್ತಿದ್ದರು. ಆದುದರಿಂದ ತಮ್ಮ ಗುಂಪಿಗೆ ಆಯಾ ಮಲೆಯ ಹೆಸರನ್ನೇ ಇಟ್ಟುಕೊಳ್ಳುತ್ತಿದ್ದರು. ಸುಳ್ಯ ತಾಲೂಕಿನಲ್ಲಿ ಪೂಮಲೆ ಕುಡಿಯರು, ತೇಮಲೆ ಕುಡಿಯರು ಹಾಗೂ ಅಡ್ಕೆ ಮಲೆ ಕುಡಿಯರು ಎಂಬ ಪಂಗಡಗಳಿವೆ. ಪೂಮಲೆ ಕುಡಿಯರ ಪ್ರಕಾರ ಅವರು ವಾಸಿಸುವ ಪೂಮಲೆಯೆ ಅವರ ಮೂಲಸ್ಥಳ. ಅವರ ಆಡು ಭಾಷೆ ತುಳು. ಲೇಮಲೆ ಕುಡಿಯರ ಮೂಲ ಕೇರಳವಾಗಿದ್ದು, ಮಲೆಯಾಳ ಇವರ ಆಡು ಭಾಷೆಯಾಗಿದೆ. ತುಳು ಮನೆಮಾತಿನ ಅಡ್ಕೆ ಕುಡಿಯರು ಸಂಪಾಜೆ, ಸುಬ್ರಹ್ಮಣ್ಯ ಕಾಡುಗಳಲ್ಲಿದ್ದಾರೆ. ನಾಲ್ಮಲೆ ಕುಡಿಯರು ಬೆಳ್ತಂಗಡಿ ತಾಲೂಕಿನ ನೆರಿಯದಲ್ಲಿದ್ದಾರೆ. ಇವರು ಬಂಜಾರು ಮಲೆ, ಅಂಬಟೆ ಮಲೆ, ಎಲಿಮಲೆ ಮತ್ತು ಬಾರಿಮಲೆ ಎಂಬ ನಾಲ್ಕು ಮಲೆಗಳಲ್ಲಿ ವಾಸ ಮಾಡುತ್ತಿದ್ದುದರಿಂದ ಇವರಿಗೆ ನಾಲ್ಮಲೆಯವರು ಎಂಬ ಹೆಸರು ಬಂದಿದೆ.



ಮಲೆಕುಡಿಯರ ಕುಟುಂಬ.

೨.೫ ಮರಾಠಿ ನಾಯ್ಕ ಸಮುದಾಯ:

೨.೫.೧ ಮರಾಠಿ ನಾಯ್ಕ ಸಮುದಾಯದ ಹಿನ್ನೆಲೆ:

ಮಧ್ಯಯುಗದ ಕಾಲಘಟ್ಟದಲ್ಲಿ ಮಹಾರಾಷ್ಟ್ರದಿಂದ ವಲಸೆ ಬಂದು ಕರಾವಳಿ ಕರ್ನಾಟದಲ್ಲಿ ನೆಲೆನಿಂತ ಮರಾಠಿಗರು ಕರ್ನಾಟಕದ ಒಂದು ಬುಡಕಟ್ಟು ಸಮುದಾಯವಾಗಿದೆ. ರಾಜಕೀಯ ಮತ್ತು ಆರ್ಥಿಕ ಕಾರಣಗಳಿಗೆ ಕರ್ನಾಟಕಕ್ಕೆ ಅನೇಕ ಸಮುದಾಯಗಳು ವಲಸೆ ಬಂದಿವೆ. ಜನಸಮುದಾಯವೊಂದು ವಲಸೆ ಬಂದು ಗುಡ್ಡಗಾಡು ಪ್ರದೇಶದಲ್ಲಿ ವಾಸಿಸತೊಡಗಿ ಕಾಲಕ್ರಮೇಣ ಬುಡಕಟ್ಟು ಸಮುದಾಯ



ಪರಿಗಣನೆಗೆ ಒಳಪಡುತ್ತದೆ. ಮರಾಠಿ ಸಮುದಾಯವು ಹೀಗೆ ವಲಸೆ ಬಂದು ರಾಜಕೀಯ ಕಾರಣ ಮತ್ತು ಆರ್ಥಿಕ ಪ್ರಗತಿಯ ಉದ್ದೇಶದಿಂದ ಬುಡಕಟ್ಟಿನ ಪರಿಕಲ್ಪನೆಯೊಂದಿಗೆ ಸೇರಿಕೊಂಡಿದೆ.

ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಮರಾಠಿಗರು ವಲಸೆ ಬಂದಿರುವ ವಿಚಾವು ಬಹುತೇಕ ಖಚಿತವಾದ ಸಂಗತಿಯಾಗಿದೆ. ಮರಾಠಿಗರ ವಲಸೆಯ ಕಾರಣ ಮತ್ತು ಹಿನ್ನೆಲೆಯನ್ನು ಪರಿಶೀಲಿಸಿದಾಗ ಜೀವನ ನಿರ್ವಹಣೆಗಾಗಿ, ಬರಗಾಲದ ಬಡತನದಿಂದ ಪಾರಾಗುವುದಕ್ಕಾಗಿ ಮತ್ತು ಮುಖ್ಯವಾಗಿ ವಿದೇಶಿಯರ ಮತಾಂತರದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಮರಾಠಿಗರು ಕರ್ನಾಟಕಕ್ಕೆ ಮತ್ತು ಅಲ್ಲಿಂದ ಕರಾವಳಿ ಕರ್ನಾಟಕಕ್ಕೆ ವಲಸೆ ಬಂದರೆಂಬುದು ಐತಿಹಾಸಿಕ ಸಾಕ್ಷ್ಯಾಧಾರಗಳಿಂದ ಸ್ಪಷ್ಟವಾಗುತ್ತದೆ. ಮರಾಠಿಗರು ಉತ್ತರ ಕರ್ನಾಟಕ ಮತ್ತು ಗೋವಾ ಪ್ರಾಂತ್ಯದ ಮೂಲಕ ಬೇರೆ ಬೇರೆ ಕಾಲಘಟ್ಟದಲ್ಲಿ ತಂಡ ತಂಡವಾಗಿ ವಲಸೆ ಬಂದಿರುವುದನ್ನು ವಿದ್ವಾಂಸರು ತಮ್ಮ ಸಂಶೋಧನಾ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ವಲಸೆ ಬಂದ ಸಂದರ್ಭದಲ್ಲಿ ಈ ಸಮುದಾಯದ ಭಾಷೆ ಮರಾಠಿಯಾಗಿತ್ತು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

೨.೫.೨. ಮೂಲ, ವಲಸೆ ಮತ್ತು ಐತಿಹಾಸಿಕ ಕಾಲಘಟ್ಟಗಳಲ್ಲಿ ಮರಾಠಿ ನಾಯ್ಕ ಸಮುದಾಯ:

ಕ್ರಿ.ಶ. ೧೭ನೇ ಶತಮಾನದ ಆದಿಭಾಗದಲ್ಲಿ ಸೈನಿಕ ಕಾರ್ಯಾಚರಣೆಯ ಮೂಲಕ ಮರಾಠಿಗರು ಕರ್ನಾಟಕಕ್ಕೆ ಆಗಮಿಸಿದರು ಎಂಬುದು ಬಹುತೇಕ ಇತಿಹಾಸ ತಜ್ಞರ ನಿಲುವಾಗಿದೆ. ಶಿವಾಜಿಯ ಕಾಲಾವಧಿ ಹಾಗು ತದನಂತರ ಪೇಶ್ವೆಯವರ ಆಳ್ವಿಕೆಯ ಸಂದರ್ಭದಲ್ಲಿ ಮರಾಠಿಗಳ ವಲಸೆ ತೀವ್ರಗೊಂಡು ತದನಂತರ ಅವರು ಕರ್ನಾಟಕದ ಬಹುಮುಖ್ಯ ಸಮುದಾಯವಾಗಿ ರೂಪುಗೊಂಡರು. ಜೊತೆಗೆ, ಇಲ್ಲಿನ ಆಳುವ ವರ್ಗದ ಭಾಗವಾಗಿಯೂ ಬೆಳೆದುಬಂದರು. ಹೀಗೆ, ಕರ್ನಾಟಕದ ಇತಿಹಾಸದಲ್ಲಿ ಮರಾಠಿಗರ ಉಪಸ್ಥಿತಿ ಹಾಗೂ ಪ್ರಭಾವ ಗಾಢವಾಗಿದ್ದು, ಅನೇಕ ಬಗೆಯ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಪ್ರಕ್ರಿಯೆಗಳಿಗೆ ಎಡೆಮಾಡಿಕೊಟ್ಟುತ್ತು ಎನ್ನುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಮರಾಠಿಗರ ವಲಸೆಯ ಜೊತೆಗೆ ಮಹಾರಾಷ್ಟ್ರದಿಂದ ಇನ್ನೂ ಅನೇಕ ಸಮುದಾಯಗಳು ಕರ್ನಾಟಕವನ್ನು ಪ್ರವೇಶಿಸಿದ್ದು, ಇವುಗಳಲ್ಲಿ ಕರಾಡ ಬ್ರಾಹ್ಮಣ ಸಮುದಾಯವೂ ಒಂದು. ಮರಾಠಿಗರು ಮೂಲತಃ ಅವಿಭಜಿತ ದಕ್ಷಿಣ ಕನ್ನಡ, ಕಾಸರಗೋಡು ಅಥವಾ ಕೊಡುಗು ಜಿಲ್ಲೆಯವರಲ್ಲ ಎಂಬುದು ವಾಸ್ತವ ಸತ್ಯವಾಗಿದೆ. ಇದಕ್ಕೆ ಇರುವ ಪ್ರಮುಖ ಆಧಾರಗಳೆಂದರೆ ಇವರು ಮಾತಾಡುವ ಮರಾಠಿ ಭಾಷೆ ಮತ್ತು ಮಹಾರಾಷ್ಟ್ರದಲ್ಲಿ ಅಂಭಾ ಭವಾನಿ, ಆದಿಶಕ್ತಿ ಮಹಾಮಾಯಿಗೆ ನೀಡುತ್ತಿರುವ 'ಗೋಂಧಳಿ ಪೂಜಾ' ಆಚರಣೆಗಳಾಗಿವೆ. ತುಳುನಾಡಿನ ಪಾಡ್ದನಗಳಲ್ಲಿ ಕೊರಗ, ನಲ್ಕೆ, ಪರವ, ಪಂಬದ ಮುಂತಾದ ಜಾತಿಯವರ ಹಾಗೂ ಉಳಿದ ಮೇಲ್ವರ್ಗದವರ ಜಾತಿ, ವೃತ್ತಿ ಇತ್ಯಾದಿಗಳು ಉಕ್ತಗೊಂಡಿವೆ. ಆದರೆ ಮರಾಠಿಗರ ಹೆಸರು, ವೃತ್ತಿ ಮುಂತಾದವು ಈ ಪಾಡ್ದನಗಳಲ್ಲಿ ಉಲ್ಲೇಖವಾಗಿಲ್ಲ. ತುಳುನಾಡಿನ ಪುರಾಣಗಳಾದ ಅಲಿಖಿತ ಪರಂಪರೆಯ

ಪಾಡ್ದನಗಳಲ್ಲಿ ಮರಾಠಿ ಪದದ ಉಲ್ಲೇಖವಾಗಲೀ, ಮರಾಠಿ ಜನರ ಕುರಿತಂತೆ ಪ್ರಸ್ತಾವವಾಗಲೀ, ಇಲ್ಲದಿರುವುದರಿಂದ ಮರಾಠಿಗರು ೧೬-೧೭ನೇ ಶತಮಾನದಿಂದೀಚೆಗೆ ಕರಾವಳಿ ಕರ್ನಾಟಕಕ್ಕೆ ವಲಸೆ ಬಂದಿರಬೇಕು.

ಮಹಾರಾಷ್ಟ್ರದಲ್ಲಿ ಕ್ರಿ.ಶ.೧೩೦೦ರ ನಂತರ, ಮುಸ್ಲಿಂ ಅಕ್ರಮಣದ ಬಳಿಕ, ಮರಾಠರು ತಮ್ಮ ಅಸ್ತಿತ್ವವನ್ನು ಕಂಡುಕೊಂಡರು. ನಿರಂತರ ಮುಸ್ಲಿಂ ಧಾಳಿಯಿಂದ ಅಲ್ಲಿನ ಮೂಲನಿವಾಸಿಗಳು ಹಾಗೂ ಇತರೆ ಸಮುದಾಯದವರ ಮಾನಸಿಕವಾಗಿ ಮತ್ತು ಭೌತಿಕವಾಗಿ ಕಂಗೆಟ್ಟು ವಿವಿಧ ಪ್ರಾಂತ್ಯಗಳಿಗೆ ಜೀವನೋಪಾಯಕ್ಕಾಗಿ ವಲಸೆ ಹೋಗಿರುವುದನ್ನು ಚರಿತ್ರೆಕಾರರು ದಾಖಲಿಸಿದ್ದಾರೆ.

೨.೫.೩. ವಲಸೆಯ ಹಿನ್ನೆಲೆ:

ವಿಂಧ್ಯ ಪರ್ವತದ ದಕ್ಷಿಣಕ್ಕೆ ಕಡಲ ತೀರದಿಂದ ಪಶ್ಚಿಮ ಘಟ್ಟದ ಗುಡ್ಡಗಾಡು ಪ್ರದೇಶದ ತಪ್ಪಲುಗಳಲ್ಲಿ ಮರಾಠಿ ಜನರು ವಾಸಿಸುತ್ತಿರುವುದನ್ನು ಕಾಣಬಹುದಾಗಿದೆ. ಈ ಜನರ ಕೆಲವು ಗುಂಪುಗಳು ಕುಮ್ರಿ ಬೇಸಾಯ ಮಾಡುತ್ತಾ ಅವಿಭಜಿತ ದಕ್ಷಿಣ ಕನ್ನಡ, ಕಾಸರಗೋಡು ಹಾಗೂ ಕೊಡಗು ಜಿಲ್ಲೆಗಳನ್ನು ಪ್ರವೇಶಿಸಿರಬಹುದು. ಈ ರೀತಿಯ ಸ್ಥಳಾಂತರಿತ ಬೇಸಾಯ ಮಾಡುತ್ತಿದ್ದುದರಿಂದ ಇವರನ್ನು 'ಕುಮ್ರಿ' ಮರಾಠಿಗರೆಂದು ಗುರುತಿಸಲಾಗಿದೆ. ಈ ಸಮುದಾಯದ ಕೆಲವು ಗುಂಪುಗಳು ಪಂಢರಾಪುರ ಹಾಗೂ ಸತಾರದಿಂದ ಬಿಜಾಪುರ ಮೂಲಕ ಬೆಳಗಾವಿ, ಹಳಿಯಾಳ, ಸಿರ್ಸಿ ಮಾರ್ಗವಾಗಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಬಂದು ನೆಲೆಸಿರಬಹುದೆಂದು ಅಭಿಪ್ರಾಯಗಳಿವೆ. ಮರಾಠಿಗರು ಮೂಲತಃ ಮಹಾರಾಷ್ಟ್ರ ಮತ್ತು ಗೋವಾ ಪ್ರಾಂತ್ಯದವರಾಗಿದ್ದು ಇವರು ಕೊಂಕಣಿ ಮಿಶ್ರಿತ ಮರಾಠಿ ಭಾಷೆಯನ್ನು ಮಾತೃ ಭಾಷೆಯಾಗಿ ಉಪಯೋಗಿಸುತ್ತಾರೆ. ಇವರು ತಮ್ಮನ್ನು ಕ್ಷತ್ರಿಯರೆಂದು ಗುರುತಿಸಿಕೊಂಡಿದ್ದು ಇವರಲ್ಲಿ ಮುಖ್ಯವಾಗಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರು ಎಂಬ ಎರಡು ಪಂಗಡಗಳಿವೆ. ಬ್ರಾಹ್ಮಣೇತರ ಮರಾಠಿಗರು ಹಿಂದೆ ಮರಾಠ ರಾಜರುಗಳ ಸೈನ್ಯದಲ್ಲಿ (ಪೇಶ್ವೆ ಮತ್ತು ಶಿವಾಜಿಯ ಕಾಲದಲ್ಲಿ) ಸೈನಿಕರಾಗಿದ್ದು ಕಾರಣಾಂತರಗಳಿಂದ ಕರ್ನಾಟಕ ಮತ್ತು ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಗಳಿಗೆ ಬಂದು ನೆಲೆನಿಂತು ಬುಡಕಟ್ಟುಕರಣಕ್ಕೊಳಗಾದವರೆಂದು ಹೇಳಲಾಗಿದೆ.

"ಮಹಾರಾಷ್ಟ್ರದಲ್ಲಿ ಮರಾಠರ ಆಳ್ವಿಕೆ ಕೊನೆಗೊಂಡ ಬಳಿಕ ಇವರು ಈ ಮೇಲಿನ ಪ್ರದೇಶಗಳತ್ತ ವಲಸೆ ಹೋದರೆಂದು ಕೆಲವು ವಿದ್ವಾಂಸರು ವಾದಿಸುತ್ತಾರೆ. ಕೆಲ ಸಂಶೋಧಕರು, ಉಪಲಬ್ಧ ದಾಖಲೆಗಳ ಆಧಾರದಿಂದ ಅವರ ಮೂಲ ನೆಲೆಯ ನಿಷ್ಪರ್ಷೆಯನ್ನು ಮಾಡುವುದು ಸಾಧ್ಯವಿಲ್ಲವೆನ್ನುತ್ತಾರೆ. ಮರಾಠ ಸೇನೆಯಲ್ಲಿ ಸೈನಿಕರಾಗಿಯೋ, ಸೇನಾ ಸಹಾಯಕರಾಗಿಯೋ ಕಾರ್ಯ ನಿರ್ವಹಿಸುತ್ತಿದ್ದ ವ್ಯಕ್ತಿಗಳು, ಯಾವ್ಯಾವುದೋ ಕಾರಣಗಳಿಗೆ ಆ ಆಶ್ರಯಗಳನ್ನು ಕಳೆದುಕೊಂಡಿರಬೇಕು. ಆ ಸಂಕ್ರಮಣ ಸ್ಥಿತಿಯಲ್ಲಿ ಅವರು ಕರ್ನಾಟಕದ ಗಿರಿವನಗಳಲ್ಲಿ ವಾಸಿಸುತ್ತ, ನಂತರ ಇಲ್ಲಿಯ ಕೃಷಿ ಕಾರ್ಮಿಕರಾಗಿ

ಪರಿವರ್ತಿತರಾಗಿರಬೇಕು ಎನ್ನುವ ಊಹೆಯನ್ನು ಕೆಲವರು ಮಾಡಿದ್ದಾರೆ. ಈ ಮರಾಠಿ ಸಮಾಜದ ಸಂಸ್ಕೃತಿಯಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕದ ಸಂಸ್ಕೃತಿಯ ಅಂಶಗಳ ಹಿತವಾದ ಮಿಶ್ರಣವನ್ನು ಗುರುತಿಸುತ್ತೇವೆ" ಎಂದು ಇತಿಹಾಸಕಾರರು ಉಲ್ಲೇಖಿಸುತ್ತಾರೆ.

೨.೫.೪. ಮರಾಠಿ ನಾಯ್ಕರ ಮೂಲ, ವಲಸೆ ಮತ್ತು ಸದ್ಯದ ಸ್ಥಿತಿಗತಿಗಳು:

ಮರಾಠಿಗರನ್ನು ಒಂದೇ ಪಂಗಡ ಎಂದು ಗುರುತಿಸದೆ, ಹಲವಾರು ಪಂಗಡಗಳನ್ನೊಳಗೊಂಡ ಸಮೂಹವೆಂದು ಗುರುತಿಸಲಾಗಿದೆ. ಮಹಾರಾಷ್ಟ್ರದಿಂದ ವಲಸೆ ಬಂದ ಈ ಸಮುದಾಯವನ್ನು ಇವರು ನೆಲೆ ನಿಂತ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆದಿರಬಹುದು. ಅವಿಭಜಿತ ದಕ್ಷಿಣ ಕನ್ನಡ ಹಾಗೂ ಕಾಸರಗೋಡು ಜಿಲ್ಲೆಗಳಲ್ಲಿ ಇವರನ್ನು ಮರಾಠಿಗಳೆಂದೂ ಕೊಡಗಿನಲ್ಲಿರುವವರನ್ನು ಮರಾಠರೆಂದೂ ಕರೆಯಲಾಗಿದೆ. ಬುಡಕಟ್ಟು ಪಂಗಡಕ್ಕೆ ಇವರನ್ನು ಕೇಂದ್ರ ಸರ್ಕಾರ ಸೇರಿಸಿದೆ. ಅವಿಭಜಿತ ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆಗಳ ಮರಾಠಿ ಹಾಗೂ ಕೊಡಗಿನ ಮರಾಠ ಸಮುದಾಯದವರು ವಲಸೆ ಬಂದವರೆಂಬುದು ಬಹುತೇಕ ಖಚಿತ ಅಭಿಪ್ರಾಯಗವಾಗಿದೆ. ಅನೇಕರು ನೇರವಾಗಿ ಅವಿಭಜಿತ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಿಗೂ, ಕೆಲವರು ಗೋವಾ ಮೂಲಕ ಕರಾವಳಿ ಮಾರ್ಗವಾಗಿ ಉಡುಪಿ ಜಿಲ್ಲೆಗೂ ವಲಸೆ ಬಂದಿದ್ದಾರೆ. ಜೀವನೋಪಾಯದ ಮಾರ್ಗಗಳನ್ನು ಹುಡುಕುತ್ತಾ, ಮತಾಂತರಗೊಳ್ಳುವುದನ್ನು ತಪ್ಪಿಸಿಕೊಳ್ಳಲು ಮತ್ತು ಬರಗಾಲದಿಂದ ಪಾರಾಗಲು ಮರಾಠಿಗರು ವಲಸೆ ಬಂದಿದ್ದಾರೆ. ಕರಾವಳಿ ಕರ್ನಾಟಕ, ಕಾಸರಗೋಡು ಹಾಗೂ ಕೊಡಗು ಜಿಲ್ಲೆಗಳಲ್ಲಿ ನೆಲೆಸಿರುವ ಮರಾಠಿ ಮತ್ತು ಮರಾಠರನ್ನು ಕುಣಬಿಗಳೆಂದು ಸಮರ್ಥಿಸಿಕೊಳ್ಳಲು ಅವರ ಮೂಲ ವೃತ್ತಿಯಾದ ಕುಮ್ರಿ ವ್ಯವಸಾಯ ಮತ್ತು ಅವರು ಆರಾಧಿಸಿಗೊಂಡು ಬರುತ್ತಿರುವ ಗೋಂಧಳಿ ಪೂಜೆಗಳನ್ನು ಆಧಾರವಾಗಿ ಬಳಸಿಕೊಳ್ಳಲಾಗಿದೆ. ಅವಿಭಜಿತ ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆಯ ಮರಾಠಿ ಹಾಗೂ ಕೊಡಗಿನ ಮರಾಠ ಸಮುದಾಯದವರನ್ನು ಕುಣಬಿ ಬುಡಕಟ್ಟು ಪಂಗಡದ ಮರಾಠಿಗರೆಂದು ಪರಿಗಣಿಸಲಾಗಿದೆ. ವಲಸೆ ಬಂದ ಮರಾಠಿಗರನ್ನು ಅನನ್ಯ ಪಂಗಡವೆಂದು ಗುರುತಿಸಲು ಅವರು ಮಾತಾಡುವ ಮರಾಠಿ ಭಾಷೆ, ಆಚರಿಸುವ ಗೋಂಧಳಿ ಪೂಜೆ, ಭೈರವ ಪೂಜೆ ಮತ್ತು ಕುಮ್ರಿ ಸಾಗುವಳಿ ಇವು ಆಧಾರವಾಗಿವೆ.

೨.೫.೫. ಕುಟುಂಬ:

ಮರಾಠಿಗರಲ್ಲಿ ಈಗ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯಿದ್ದರೂ ಮೂಲತಃ ಇವರು ಮಾತೃ ಪ್ರಧಾನ ವ್ಯವಸ್ಥೆಯಿಂದ ಬಂದಿರಬೇಕು. ಮದುವೆ ಮತ್ತು ಕಜಂಬು ತೆಗೆಸುವ ಶಾಸ್ತ್ರಗಳಲ್ಲಿ ಸೋದರ ಮಾವನಿಗೆ ಇರುವ ಮಹತ್ವವನ್ನು ಗಮನಿಸಿದರೆ ಮೇಲಿನ ಅಭಿಪ್ರಾಯಕ್ಕೆ ಪುಷ್ಟಿ ದೊರೆಯುತ್ತದೆ. ಇಂದಿಗೂ ಮರಾಠಿಗರ ಮಕ್ಕಳು, ಮೊಮ್ಮಕ್ಕಳು 'ಅಜ್ಜಿಯ ಮನೆಗೆ ಹೋಗುತ್ತೇವೆ' ಎಂದು ಹೇಳುವರಲ್ಲದೆ 'ಅಜ್ಜನ

ಮನೆಗೆ' ಹೋಗುತ್ತೇವೆಂದು ತಪ್ಪಿಯೂ ಹೇಳುವುದಿಲ್ಲ. ತಾಯಿಯ ಸಹೋದರರ ಮಕ್ಕಳೊಂದಿಗೆ ವಿವಾಹ ಸಂಬಂಧ ಬೆಳೆಸುವ ಪದ್ಧತಿಯೂ ರೂಢಿಯಲ್ಲಿರುವುದರಿಂದ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯ ಸುಳಿವು ಇದ್ದಂತೆ ಗೋಚರಿಸುತ್ತದೆ. ಉನ್ನತ ಜಾತಿಯ ಸಮುದಾಯಗಳಲ್ಲಿ ತಮ್ಮ ಮೂಲವನ್ನು 'ಗೋತ್ರ'ಗಳ ಮೂಲಕ ಗುರುತಿಸುವ ಕ್ರಮವಿದ್ದು ಬುಡಕಟ್ಟು ಮತ್ತು ಇತರ ಕೆಳಜಾತಿಗಳ ಜನರು 'ಬಳಿ'ಯ ಮೂಲಕ ತಮ್ಮ ಕುಲದ ಮೂಲವನ್ನು ಗುರುತಿಸಿಕೊಳ್ಳುತ್ತಾರೆ. ಬುಡಕಟ್ಟಿನ ಯುವಜನರಿಗೆ ಬಳಿ ಕುರಿತು ಮಾಹಿತಿ ಇಲ್ಲದಿದ್ದರೂ ಬುಡಕಟ್ಟಿನ ಹಿರಿಯರು ಬಳಿ ಮೂಲಕವೇ ತಮ್ಮ ಮೂಲವನ್ನು ಗುರುತಿಸಿಕೊಳ್ಳುತ್ತಾರೆ.



ಮರಾಟಿ ನಾಯ್ಕ ಸಮುದಾಯದ ಯುವಕ

ಕುಟುಂಬದ ಸದಸ್ಯರು ಕೂಲಿ ಅಥವಾ ಬೇರೆ ರೀತಿಯಲ್ಲಿ ದುಡಿದು ಸಂಪಾದಿಸಿದ ಹಣವನ್ನು ಯಜಮಾನನಿಗೆ ಒಪ್ಪಿಸಬೇಕು. ಮರಾಠಿಗರು ಕೃಷಿ ಪ್ರಧಾನ ಉದ್ಯೋಗವನ್ನು ಮೊದಲು ಹೊಂದಿರಲಿಲ್ಲ. ಶ್ರೀಮಂತರ ಮನೆ ಮತ್ತು ಘಟ್ಟದ ಮೇಲಿನ ಕಾಫೀ ತೋಟಗಳಲ್ಲಿ ಕೂಲಿ ಕೆಲಸ ಹಾಗು ಜೀತದಾಳಾಗಿ ದುಡಿದು, ಗಂಡಸರು ಹೆಂಗಸರು ಹಣ ಸಂಪಾದಿಸುತ್ತಿದ್ದರು. ಮನೆಯ ಯಜಮಾನ ಧಾರ್ಮಿಕ ಆಚರಣೆಗಳಿಗಾಗಿ ಕುಟುಂಬದ ಸದಸ್ಯರು ಸಂಪಾದಿಸಿದ ಹಣದಲ್ಲಿ ವೆಚ್ಚಮಾಡಿ ಉಳಿದ ಹಣವನ್ನು ಕುಟುಂಬದ ಪೋಷಣೆಗೆ ವಿನಿಯೋಗಿಸುತ್ತಾನೆ. ಮನೆಯ ಕೆಲಸಗಳನ್ನು ಕುಟುಂಬದ ಸದಸ್ಯರಿಗೆ ಯಜಮಾನ ಹಂಚಿಕೆ ಮಾಡುತ್ತಿದ್ದು ಅದನ್ನು ಮನೆಯ ಸದಸ್ಯರು ಅನುಸರಿಸುತ್ತಾರೆ. ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಮನೆಯ ಹೆಂಗಸರೆಲ್ಲರೂ ಸೇರಿ ಅಡುಗೆ ಮಾಡಿ ಎಲ್ಲಾ ಸದಸ್ಯರಿಗೂ ಒಟ್ಟಿಗೆ ಊಟ ಬಡಿಸುತ್ತಾರೆ. ಮರಾಠಿಗರು ವಲಸೆ ಬಂದ ಪ್ರಾರಂಭದಲ್ಲಿ ಗುಡ್ಡ ಬೆಟ್ಟಗಳ ಸರ್ಕಾರಿ ಭೂಮಿಗಳಲ್ಲಿ 'ಕುಮೇರಿ' ಬೇಸಾಯ ಮಾಡುತ್ತಿದ್ದರು. ಭತ್ತ, ರಾಗಿ, ಜೋಳ, ಗೆಡ್ಡೆ ಗೆಣಸುಗಳನ್ನು ಬೆಳೆಸಿ ಪ್ರತಿ ವರ್ಷ ಒಂದು ಸ್ಥಳದಿಂದ ಇನ್ನೊಂದೆಡೆಗೆ ಬೇಸಾಯವನ್ನು ಸ್ಥಳಾತರಿಸಿಕೊಂಡು (Shifting cultivation) 'ಕುಮೇರಿ' ಬೇಸಾಯ ಮಾಡಿ ಜೀವನ ನಡೆಸುತ್ತಿದ್ದರು.



ಮರಾಠಿಗರು ಯಾವುದೇ ಫಲವತ್ತಾದ ಭೂಮಿಯ ಒಡೆತನವನ್ನು ಹೊಂದಿರದೆ ಜೀವನಕ್ಕಾಗಿ ದೈಹಿಕ ಶ್ರಮವನ್ನೇ ಅವಲಂಬಿಸಿದ್ದರು. ಕಾಲಕ್ರಮೇಣ ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಸರಕಾರಿ ಜಮೀನನ್ನು 'ದರಕಾಸ್ತು' ಮಾಡಿಕೊಂಡು ಅದರಲ್ಲಿ ಹುಲ್ಲಿನ ಮನೆಕಟ್ಟಿ ವಾಸ ಮಾಡತೊಡಗಿದರು. ವೃತ್ತಿಯಲ್ಲಿ ಮರಾಠಿಗರು ಕೃಷಿ ಕಾರ್ಮಿಕರು. ಬೇಟೆಯಾಡುವುದು, ಮೀನು ಹಿಡಿಯುವುದು, ಗೆಡ್ಡೆಗೆಣಸುಗಳನ್ನು ಸಂಗ್ರಹಿಸುವುದು ಇವರ ಇತರೆ ಉಪವೃತ್ತಿಗಳು. ಮರಾಠಿಗರು ಸಾಮಾನ್ಯವಾಗಿ ನಾಯಿ, ಕೋಳಿ, ಆಡುಗಳನ್ನು ಸಾಕುತ್ತಾರೆ. ಕೆಲವು ಮನೆಗಳಲ್ಲಿ ಧಾರ್ಮಿಕ ಆಚರಣೆಯ ಗೋಂಧಳಿ ಪೂಜೆಗೆ ಹಂದಿಗಳನ್ನು ಸಾಕುತ್ತಾರೆ. ಭೂ ಸುಧಾರಣೆಯ ಕಾಯಿದೆ ಬಂದು ಭೂಮಿಯ ಒಡೆತನ ಸಿಕ್ಕ ಮೇಲೆ ತಾವೇ ಸ್ವತಃ ಸಾಗುವಳಿ ಮಾಡಲು ಪ್ರಾರಂಭಿಸಿದರು. ಸಾಗುವಳಿಯಲ್ಲಿ ಗಂಡಸರಂತೆ ಹೆಂಗಸರು ಕೂಡಾ ದುಡಿಯುತ್ತಾರೆ. ಬಿಡುವಿದ್ದಾಗ ಹೆಂಗಸರು ಬೀಡಿ ಕಟ್ಟುತ್ತಾರೆ. ಬೀಡಿ ಉದ್ಯಮವು ಮರಾಠಿ ಹೆಂಗಸರ ಬದುಕಿನಲ್ಲಿ ಹೊಸ ಆರ್ಥಿಕ ಶಕ್ತಿಯನ್ನು ಮೂಡಿಸಿದೆ. ದುಡಿಮೆ ಮತ್ತು ಉತ್ಪಾದನೆಯ ಮೇಲೆ ಸಮಾನ ಹಕ್ಕು ಹೊಂದಿರುವ ಮರಾಠಿ ಗಂಡಸರು ಮತ್ತು ಹೆಂಗಸರು ಕೌಟುಂಬಿಕ ನೆಲೆಯಲ್ಲಿ ನಡೆಯುವ ಧಾರ್ಮಿಕ ಚಟುವಟಿಕೆಗಳಲ್ಲಿಯೂ ಸಮಾನವಾಗಿ ಭಾಗವಹಿಸುತ್ತಾರೆ.

೨.೫.೬.ಮರಾಠಿ ನಾಯ್ಕ ಸಮುದಾಯದ ಒಟ್ಟು ಜನಸಂಖ್ಯೆ ವಿವರಗಳು:

ಕ್ರ.ಸಂ	ಜಿಲ್ಲೆಗಳು	ಹಳ್ಳಿ		ನಗರ		ಪಟ್ಟಣ		ಒಟ್ಟು
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	
೧.	ದಕ್ಷಿಣ ಕನ್ನಡ	೨೨೮೫	೯೧.೪೦	೧೩೮	೫.೫೨	೩೮	೧.೫೨	೨೫೦೦
೨.	ಉಡುಪಿ	೧೪೧೨	೯೪.೧೩	೪೫	೩.೦೦	೨೧	೧.೪೦	೧೫೦೦
೩.	ಕೊಡಗು	೪೫೩	೯೦.೬೦	೧೨	೨.೪೦	೨೭	೫.೪೦	೫೦೦
೪.	ವಲಸೆ ಹೋದವ	೨೪೨	೯೬.೮೦	೦೧	೦.೪೦	೦೭	೨.೮೦	೨೫೦
	ಒಟ್ಟು	೪೩೯೨	೯೩.೨೩	೧೯೬	೨.೮೩	೯೩	೨.೭೮	೪೭೫೦
	ಕಾಸರಗೋಡ	೪೮೪	೯೬.೮೦	೦೨	೦.೪೦	೦೪	೦.೮೦	೫೦೦

ಮೇಲಿನ ಟೇಬಲ್ಲಿನ ಅಂಕಿ ಅಂಶಗಳ ಪ್ರಕಾರ ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಹಾಗೂ ವಲಸೆ ಹೋದವರು ಸೇರಿಕೊಂಡು ಶೇಕಡಾ ೯೩.೨೩ ಮರಾಠಿಗರು ಇನ್ನೂ ಹಳ್ಳಿಗಳಲ್ಲೇ ವಾಸಿಸುತ್ತಿದ್ದಾರೆ. ಕಾಸರಗೋಡು ಜಿಲ್ಲೆಯಲ್ಲೂ ಶೇಕಡಾ ೯೬.೮೦ರಷ್ಟು ಮರಾಠಿಗರು ಹಳ್ಳಿ ಪ್ರದೇಶಗಳಲ್ಲಿ ವಾಸ್ತವ್ಯವಾಗಿರುವುದನ್ನು ಗಮನಿಸಬಹುದು.

೨.೫.೭. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ ಮರಾಠಿ ನಾಯ್ಕ ಸಮುದಾಯದ ಜನಸಂಖ್ಯೆ:

ಕ್ರಸಂ	ತಾಲೂಕುಗಳು	ಕುಟುಂಬಗಳ ಸಂ	ಗಂಡು	ಹೆಣ್ಣು	ಒಟ್ಟು ಜನಸಂಖ್ಯೆ	ಮರಾಠಿನಾಯ್ಕ ಕಾಲೋನಿಗಳ ಸಂಖ್ಯೆ
೧	ಮಂಗಳೂರು	೭೯೩	೬೩೯೭	೬೩೮೫	೧೨೭೮೨	೧೩೭
೨	ಬಂಟ್ವಾಳ	೩೨೯೧	೯೯೬೯	೯೯೪೭	೧೯೯೧೬	೧೪೯
೩	ಪುತ್ತೂರು	೨೯೦೭	೮೩೧೭	೮೪೪೨	೧೬೭೫೯	೧೪೭
೪	ಬೆಳ್ತಂಗಡಿ	೧೮೨೭	೪೫೨೧	೪೯೮೮	೯೫೦೯	೧೪೨
೫	ಸೂಳ್ಯ	೨೦೧೫	೫೩೦೯	೫೪೫೧	೧೦೭೬೦	೧೪೨
	ಒಟ್ಟು	೧೦,೮೩೩	೩೪,೫೧೩	೩೫,೨೧೩	೬೯೭೨೬	೭೧೭




ಅಭಿವೃದ್ಧಿಗೊಂಡಿರುವ ಮರಾಠಿ ನಾಯ್ಕ ಕುಟುಂಬಗಳು

ಆಧುನೀಕರಣ, ನಗರೀಕರಣ ಮತ್ತು ಸಂಪರ್ಕ ಸಮೂಹ ಮಾಧ್ಯಮಗಳ ಪ್ರಭಾವಗಳು ಮರಾಠಿಗರ ಮನೆಗಳ ನಿರ್ಮಾಣ ಮತ್ತು ಅವುಗಳ ವಿನ್ಯಾಸಗಳ ಮೇಲಾಗಿವೆ. ಮರಾಠಿಗರ ಮನೆಗಳನ್ನು ಹುಲ್ಲಿನಮನೆ, ಹಂಚಿನ ಮನೆ, ಕಾಂಕ್‌ರೀಟ್ ಮನೆಗಳೆಂದು ವಿಂಗಡಿಸಬಹುದು. ಹುಲ್ಲಿನ ಮನೆಗಳ ರಚನೆಯು ತುಂಬಾ ಸರಳವಾಗಿರುತ್ತದೆ. ಸ್ಥಳೀಯವಾಗಿ ಸಿಗುವ ಕಲ್ಲು, ಮಣ್ಣು, ಬಿದಿರು, ಅಡಿಕೆ ಮರ, ಮುಳಿ ಹುಲ್ಲು ಮತ್ತು ಕಾಡುಗಳಲ್ಲಿ ಸಿಗುವ ಮರಮಟ್ಟುಗಳನ್ನು ಬಳಸಿ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಸ್ವಂತ ಅನುಭವದ ಮೇಲಿನಿಂದ ಮರಾಠಿಗರು ತಮ್ಮ ಮನೆಗಳನ್ನು ಕಟ್ಟಿದ್ದಾರೆ. ಶಾಸ್ತ್ರ, ಪಂಚಾಂಗ, ಮುಹೂರ್ತಗಳು ಅಷ್ಟಾಗಿ ಮುಖ್ಯವಾಗಿರಲಿಲ್ಲ. ಅವಿಭಕ್ತ ಕುಟುಂಬ ಪದ್ಧತಿಗೆ ಒಳಪಟ್ಟ ಮರಾಠಿ ಕುಟುಂಬಗಳು ಒಂದೇ ಮನೆಯಲ್ಲಿ ಎಲ್ಲರೂ ಜೊತೆಯಲ್ಲೇ ವಾಸಿಸುವ ರೂಢಿಯು ಬಹಳ ವರ್ಷಗಳ ತನಕ ನಡೆಯಿತು. ಪಿತೃಪ್ರಧಾನ




ಕುಟುಂಬ ವ್ಯವಸ್ಥೆಯಲ್ಲಿ ತಂದೆಯಿಂದ ಹಿರಿಯ ಮಗನಿಗೆ ಎಲ್ಲಾ ಜವಾಬ್ದಾರಿಗಳಿದ್ದುವು. ಮೂಲ ಮನೆಯು ಅವನಿಗೆ ಸೇರುತ್ತಿತ್ತು. ಅವಿಭಕ್ತ ಕುಟುಂಬಗಳು ಕ್ರಮೇಣ ವಿಭಕ್ತ ಕುಟುಂಬಗಳಾಗಿ ಬೇರ್ಪಟ್ಟು ಅವರವರ ಅನುಕೂಲಕ್ಕೆ ತಕ್ಕಂತೆ ವಾಸದ ಮನೆಗಳನ್ನು ರಚಿಸಿಕೊಂಡರು.



೨.೫.೮. ಶೈಕ್ಷಣಿಕ ಸ್ಥಿತಿಗತಿಗಳು:

ವಲಸೆ ಬಂದ ಆರಂಭದಲ್ಲಿ ಪ್ರತ್ಯೇಕವಾಗಿ ಗುಡ್ಡಬೆಟ್ಟಗಳಲ್ಲಿ ವಾಸಿಸುತ್ತಿದ್ದ ಮರಾಠಿಗರಿಗೆ ಶಿಕ್ಷಣ ಹೊಂದುವ ಅವಕಾಶಗಳಿರಲಿಲ್ಲ. ಬಡತನ, ಅಜ್ಞಾನ ಮತ್ತು ಮೂಢನಂಬಿಕೆ ಮೊದಲಾದ ಕಾರಣಗಳಿಂದ, ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕಿಂತ ಹೆಚ್ಚಾಗಿ ಕೂಲಿ ಕೆಲಸಗಳಿಗೆ ಕಳುಹಿಸುವುದಕ್ಕೆ ಹೆತ್ತವರೇ ಬೆಂಬಲಿಸುತ್ತಿದ್ದರು. ಶಿಕ್ಷಣದ ಮಹತ್ವವಾಗಲೀ ಶಿಕ್ಷಣದಿಂದ ಒದಗುವ ಔದ್ಯೋಗಿಕ ಲಾಭಗಳಾಗಲೀ ಮರಾಠಿಗರಿಗೆ ತಿಳಿದಿರಲಿಲ್ಲ. ತುಳು ಮತ್ತು ಮರಾಠಿಯನ್ನು ಮಾತನಾಡುತ್ತಿದ್ದ ಮರಾಠಿಗರಿಗೆ ಕನ್ನಡ ಭಾಷೆ ಅಪರಿಚಿತವೇ ಆಗಿತ್ತು. ಆಹಾರ, ಉಡುಪು, ಪುಸ್ತಕಗಳ ಕೊರತೆ, ಹೆತ್ತವರ ಬೇಜವಾಬ್ದಾರಿತನ ಮತ್ತು ಶಿಕ್ಷಕರ ಅಸಡ್ಡೆಯಿಂದ ಸಂಕೋಚ ಭಾವನೆಯಿಂದಾಗಿ ಮರಾಠಿಗರ ಮಕ್ಕಳು ಶಾಲೆಗೆ ಹೋಗುವುದನ್ನು ತಪ್ಪಿಸಿಕೊಳ್ಳುತ್ತಿದ್ದರು. ಕೂಲಿ, ಪಶುಪಾಲನೆ ಮತ್ತು ಕೃಷಿಯನ್ನೇ ನಂಬಿ ಬದುಕುವ ಈ ಸಮುದಾಯದಲ್ಲಿ ಬಾಲಕಾರ್ಮಿಕ ಪದ್ಧತಿ ಅಧಿಕವಾಗಿತ್ತು. ಶಾಲೆಗೆ ಹೋಗಬೇಕಾದ ಮಕ್ಕಳು ಶ್ರೀಮಂತರ ಮನೆಗಳಲ್ಲಿ ಜಾನುವಾರುಗಳನ್ನು ಮೇಯಿಸುವ ಕಾರ್ಯದಲ್ಲಿ ತೊಡಗುತ್ತಿದ್ದರು. ಬೇಸಾಯದ ಸಮಯದಲ್ಲಿ ಮಕ್ಕಳ ಶ್ರಮ ಬಹಳ ಅವಶ್ಯಕವಾಗಿದೆಯೆಂದು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರಲಿಲ್ಲ. ಕೃಷಿ ಪ್ರಧಾನ ಅವಿಭಕ್ತ ಕುಟುಂಬದಲ್ಲಿ ಸಣ್ಣ ಮಕ್ಕಳಿಗೆ ಬೇಕಾದಷ್ಟು ಕೆಲಸಗಳಿರುತ್ತಿದ್ದವು. ಚಿಕ್ಕ ಮಕ್ಕಳನ್ನು ಎತ್ತಿ ಆಡಿಸುವುದು, ಜಾನುವಾರುಗಳಿಗೆ ಹುಲ್ಲು, ನೀರು ತರುವುದು, ಹೊಲಗದ್ದೆಗಳಿಗೆ ಹೋಗಿ ಬುತ್ತಿಕೊಟ್ಟು ಬರುವುದು ಮೊದಲಾದ ಸಣ್ಣಪುಟ್ಟ ಕೆಲಸಗಳಿಗೆ ಮಕ್ಕಳನ್ನು ಬಳಸಿಕೊಳ್ಳುತ್ತಿದ್ದರು. ಶ್ರೀಮಂತರ ಮನೆಗಳಲ್ಲಿ ಅವರ ಮಕ್ಕಳನ್ನು ನೋಡಿಕೊಳ್ಳುವುದಕ್ಕೂ ಈ ಮರಾಠಿ ಮಕ್ಕಳನ್ನು ಉಪಯೋಗಿಸುತ್ತಿದ್ದರು. ಅತ್ಯಂತ ಬಡತನದಲ್ಲಿ ಕಾಲ ಕಳೆಯುತ್ತಿದ್ದ ಮರಾಠಿಗರು ಮಕ್ಕಳನ್ನು ಶಾಲೆಗೆ ಕಳುಹಿಸಲು ಆಸಕ್ತಿ ತೋರಿಸುತ್ತಿರಲಿಲ್ಲ. ಹೊಟ್ಟೆ ತುಂಬಿಸಲು ಮನೆ ಮಂದಿಯೆಲ್ಲ ಕೂಲಿ ಮಾಡಬೇಕು ಎಂಬ ಧೋರಣೆಯು ಅವರಲ್ಲಿತ್ತು. ಕೃಷಿ,

ಕುಲಕಸುಬು ಇತ್ಯಾದಿ ಪರಂಪರಾಗತ ವೃತ್ತಿಗಳಲ್ಲಿ ಕುಟುಂಬದ ಎಲ್ಲ ವಯಸ್ಸಿನ ಸದಸ್ಯರಿಗೆ ಕೆಲಸಗಳು ಇರುತ್ತವೆ. ಮರಾಠಿ ಕುಟುಂಬಗಳು ಇದಕ್ಕೆ ಹೊರತಾಗಿರಲಿಲ್ಲ.



ಮರಾಠಿ ನಾಯ್ಕರ ಕುಟುಂಬದ ಕೃಷಿತೋಟ

೨.೬. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಬುಡಕಟ್ಟುಗಳ ಜನಸಂಖ್ಯೆ:

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಟ್ವಾಳ, ಬೆಳ್ತಂಗಡಿ, ಮಂಗಳೂರು, ಪುತ್ತೂರು, ಸುಳ್ಯ ಹೀಗೆ ಐದು ತಾಲೂಕುಗಳಿದ್ದು, ೨೦೧೧ರ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ೨೦,೮೩,೬೨೫ ಜನರಿದ್ದು ಅದರಲ್ಲಿ ೧೦,೩೨,೫೭೭ರಷ್ಟು ಪುರುಷರು ಮತ್ತು ೧೦,೫೧,೦೪೮ ಮಹಿಳೆಯರಿದ್ದಾರೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ೧೩,೧೧೧ ಪರಿಶಿಷ್ಟ ಪಂಗಡದ ಕುಟುಂಬಗಳಿವೆ. ಅವುಗಳಲ್ಲಿ ೨೦೨೪ ಕುಟುಂಬಗಳು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದರೆ, ೧೧,೦೮೭ ಕುಟುಂಬಗಳು ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿವೆ. ಬಂಟ್ವಾಳ ತಾಲೂಕಿನಲ್ಲಿ ೨೯೨೯ ಪರಿಶಿಷ್ಟ ಪಂಗಡದ ಕುಟುಂಬಗಳು ಬೆಳ್ತಂಗಡಿಯಲ್ಲಿ ೨೪೯೩ ಮತ್ತು ಮಂಗಳೂರು ತಾಲೂಕಿನಲ್ಲಿ ೨೬೦೧ ಪರಿಶಿಷ್ಟ ಪಂಗಡದ ಕುಟುಂಬಗಳಿವೆ. ಪುತ್ತೂರು ತಾಲೂಕಿನಲ್ಲಿ ಅತೀ ಹೆಚ್ಚು ಅಂದರೆ ೨೭೨೯ ಕುಟುಂಬಗಳಿದ್ದರೆ ಸುಳ್ಯ ತಾಲೂಕಿನಲ್ಲಿ ಅತೀ ಕಡಿಮೆ ಅಂದರೆ ೨೩೪೯ ಕುಟುಂಬಗಳಿವೆ. ೨೦೧೧ರ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಕೊರಗ ಸಮುದಾಯದ ಜನಸಂಖ್ಯೆ ೪೮೫೮. ಮಂಗಳೂರು ತಾಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ಅತೀ ಹೆಚ್ಚು ಅಂದರೆ ೨೨೦೨ ಕೊರಗ ಸಮುದಾಯದ ಜನರಿದ್ದಾರೆ ಮತ್ತು ಸುಳ್ಯ ತಾಲೂಕಿನಲ್ಲಿ ಅತೀ ಕಡಿಮೆ ಅಂದರೆ ೧೦೧ ಕೊರಗ ಜನರು ಕಂಡು ಬಂದಿದ್ದಾರೆ. ಉಳಿದಂತೆ ಮಂಗಳೂರು ತಾಲೂಕಿನ ನಗರ ಪ್ರದೇಶದಲ್ಲಿ ೧೨೦೪, ಬಂಟ್ವಾಳ ತಾಲೂಕಿನಲ್ಲಿ ೫೭೨, ಪುತ್ತೂರು ತಾಲೂಕಿನಲ್ಲಿ ೩೯೬ ಮತ್ತು ಬೆಳ್ತಂಗಡಿ ತಾಲೂಕಿನಲ್ಲಿ ೩೮೩ ಕೊರಗ ಸಮುದಾಯದ ಜನರಿದ್ದಾರೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ೧೨೦೬ ಕೊರಗ ಕುಟುಂಬಗಳಿವೆ. ಮಂಗಳೂರು ತಾಲೂಕಿನಲ್ಲಿ ೭೭೪ ಕೊರಗ ಕುಟುಂಬಗಳು, ಬಂಟ್ವಾಳ ತಾಲೂಕಿನಲ್ಲಿ ೧೮೫ ಕೊರಗ ಕುಟುಂಬಗಳು, ಪುತ್ತೂರು ತಾಲೂಕಿನಲ್ಲಿ

೯೯ ಕೊರಗ ಕುಟುಂಬಗಳು, ಸುಳ್ಯ ತಾಲೂಕಿನಲ್ಲಿ ೩೫ ಕೊರಗ ಕುಟುಂಬಗಳು ಮತ್ತು ಬೆಳ್ತಂಗಡಿ ತಾಲೂಕಿನಲ್ಲಿ ೧೧೩ ಕೊರಗ ಕುಟುಂಬಗಳು ನೆಲೆಸಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಬುಡಕಟ್ಟುಗಳು ಮತ್ತು ಜನಸಂಖ್ಯೆಯ ವಿವರಗಳು

ಕ್ರ.ಸಂ.	ಪ್ರಮುಖ ಬುಡಕಟ್ಟು ಸಮುದಾಯಗಳು	ಜನಸಂಖ್ಯೆ
೧.	ಕೊರಗ	೪,೮೫೮
೨.	ಮಲೆಕುಡಿಯ	೭,೬೮೪
೩.	ಮರಾಠಿ ನಾಯ್ಕ	೬೯,೭೨೬
	ಒಟ್ಟು	೮೨,೨೬೮

೨೦೧೧ರ ಜನಗಣತಿಯ ಪ್ರಕಾರ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ಒಟ್ಟು ಮಲೆಕುಡಿಯರ ಜನಸಂಖ್ಯೆ ೭೬೮೦. ಬೆಳ್ತಂಗಡಿ ತಾಲೂಕಿನಲ್ಲಿ ಅತೀ ಹೆಚ್ಚು ಅಂದರೆ ೫೭೫೦ ಮಲೆಕುಡಿಯರ ಸಂಖ್ಯೆ ಇದ್ದರೆ ಮಂಗಳೂರು ತಾಲೂಕಿನಲ್ಲಿ ಅತೀ ಕಡಿಮೆ ಅಂದರೆ ೫೮ ಮಲೆಕುಡಿಯರಿದ್ದಾರೆ. ಉಳಿದಂತೆ ಪುತ್ತೂರು ತಾಲೂಕಿನಲ್ಲಿ ೪೬೮, ಬಂಟ್ವಾಳ ತಾಲೂಕಿನಲ್ಲಿ ೪೨೪, ಸುಳ್ಯ ತಾಲೂಕಿನಲ್ಲಿ ೯೮೦ರಷ್ಟು ಮಲೆಕುಡಿಯರಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ೧೬೭೮ ಮಲೆಕುಡಿಯರ ಕುಟುಂಬಗಳಿವೆ. ಮಂಗಳೂರು ತಾಲೂಕಿನಲ್ಲಿ ೧೨೮, ಬಂಟ್ವಾಳ ತಾಲೂಕಿನಲ್ಲಿ ೮೫, ಪುತ್ತೂರು ತಾಲೂಕಿನಲ್ಲಿ ೯೦, ಸುಳ್ಯ ತಾಲೂಕಿನಲ್ಲಿ ೨೨೦ ಮತ್ತು ಬೆಳ್ತಂಗಡಿ ತಾಲೂಕಿನಲ್ಲಿ ೧೧೫೫ ಮಲೆಕುಡಿಯ ಕುಟುಂಬಗಳಿವೆ.

ಆಧಾರ ಗ್ರಂಥಗಳು:

೧. ಪ್ರಭಾಕರ ಜೋಶಿ, ಗುರುರಾಜ ಮಾರ್ಪಳ್ಳಿ ಎಂ., ದಕ್ಷಿಣ ಕನ್ನಡ (ಮಂಗಳೂರು ಮತ್ತು ಉಡುಪಿ ಜಿಲ್ಲೆಗಳು), ವಿದ್ಯಾ ಪಬ್ಲಿಶಿಂಗ್ ಹೌಸ್, ಮಂಗಳೂರು, ೧೯೯೭.

೨. ವಿವೇಕ ರೈ ಬಿ.ಎ., ಯದುಪತಿ ಗೌಡ ಡಿ., ಮಲೆಕುಡಿಯರು, ಪ್ರಸಾರಾಂಗ ಮಂಗಳ ಗಂಗೋತ್ರಿ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ೧೯೯೬.

೩. ಮೈತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೪. ಬಾಬು ಕೊರಗ ಪಾಂಗಾಳ, ಕೊರಗರ ಅಜಲು (ಒಂದು ವಿಶ್ಲೇಷಣೆ), ವಾಮಂಜೂರು, ಮಂಗಳೂರು, ೨೦೦೯.

೫. ಸುಂದರ್ ನಾಯಕ್ ಕೆ., ಕರಾವಳಿ ಕರ್ನಾಟಕ ಮರಾಠಿ ಜನಾಂಗ ಪರಂಪರೆ ಮತ್ತು ಆಧುನಿಕತೆ, ದೀಪಪ್ರಿಯ ಪ್ರಕಾಶನ, ಬೆಂಗಳೂರು, ೨೦೦೮.

೬. ಬುಡಕಟ್ಟು ಅಧ್ಯಯನ, ಸಂಪುಟ ೪, ತುಳುನಾಡಿನ ಕೊರಗರು–ಸಾಮಾಜಿಕ ಆರ್ಥಿಕ ಸ್ಥಿತಿಗತಿ, ಇಂದಿರಾ ಹೆಗಡೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

ಅಧ್ಯಾಯ – ೩

ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸರಕಾರಿ ಇಲಾಖೆಗಳ ಪಾತ್ರ

ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸರಕಾರಿ ಇಲಾಖೆಗಳ ಪಾತ್ರ

೩.೧. ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸರಕಾರ:

ಸ್ವಾತಂತ್ರ್ಯ ನಂತರ ಭಾರತ ಸರಕಾರ ಹಲವು ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಿತ್ತು. ಅವುಗಳಲ್ಲಿ ಬುಡಕಟ್ಟು ಅಭಿವೃದ್ಧಿಯು ಒಂದು ಮಹತ್ವದ ಕಾರ್ಯ ಯೋಜನೆಯಾಗಿತ್ತು. ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ವೆರಿಯರ್ ಎಲ್ವಿನ್, ಠಕ್ಕರ ಬಾಬಾ ಮುಂತಾದವರು ಬುಡಕಟ್ಟು ಜನರ ಅಭಿವೃದ್ಧಿಗಾಗಿ ಹಲವು ಅಭಿವೃದ್ಧಿ ನೀತಿಗಳನ್ನು ಅಂದೇ ರೂಪಿಸಿದ್ದರು. ಅಂದಿನಿಂದ ಇಂದಿನವರೆಗೆ ಸರಕಾರಗಳು ಅನೇಕ ರೀತಿಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಶ್ರಮಿಸುತ್ತಿವೆ.

ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸರ್ಕಾರದ ಜೊತೆಗೆ ಕೆಲವು ಸರ್ಕಾರೇತರ ಸಂಸ್ಥೆಗಳು ಕೈ ಜೋಡಿಸಿರುವುದು ಇತ್ತೀಚಿನ ವಿದ್ಯಮಾನಗಳಲ್ಲಿ ಒಂದು. ಸರ್ಕಾರ ಅಭಿವೃದ್ಧಿ ಯೊಜನೆಗಳನ್ನು ಅನುಷ್ಠಾನಕ್ಕೆ ತಂದರೆ ಆ ಯೋಜನೆಗಳು ಬುಡಕಟ್ಟುಗಳಿಗೆ ತಲುಪುವಲ್ಲಿ ಮತ್ತು ಅವುಗಳ ಬಗ್ಗೆ ಅರಿವು ಮೂಡಿಸುವಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ ಮಹತ್ವವಾದದ್ದು. ಅವುಗಳ ಬಗ್ಗೆ ಅರಿವು ಮೂಡಿಸುವಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ ಪ್ರಮುಖವಾದದ್ದು.

20003ರ ಆಗಸ್ಟ ತಿಂಗಳಿನಲ್ಲಿ ಲೋಕಸಭೆಯು ರಾಷ್ಟ್ರೀಯ ಬುಡಕಟ್ಟುಗಳ ಆಯೋಗವನ್ನು ರಚಿಸಲು ಅವಕಾಶ ಮಾಡಿಕೊಡುವ ಸಂವಿಧಾನಕ್ಕೆ 94ನೇ ತಿದ್ದುಪಡಿ ತರುವ ಮಸೂದೆಗೆ ಅಂಗೀಕಾರ ನೀಡಿರುವುದು ಬುಡಕಟ್ಟು ಅಭಿವೃದ್ಧಿಯ ಇನ್ನೊಂದು ಹೆಜ್ಜೆಯಾಗಿದೆ. ಇದುವರೆಗೂ ರಾಷ್ಟ್ರಮಟ್ಟದಲ್ಲಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಒಂದೇ ಆಯೋಗವಿತ್ತು. ಈಗ ಕೇಂದ್ರ ಸರ್ಕಾರದಲ್ಲಿ ಪ್ರತ್ಯೇಕ ಬುಡಕಟ್ಟು ಅಭಿವೃದ್ಧಿ ಖಾತೆಯನ್ನು ಸೃಷ್ಟಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬುಡಕಟ್ಟುಗಳ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ರೂಪಿಸಿ ಅವುಗಳ ಮೂಲಕ ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಪ್ರಯತ್ನಿಸುತ್ತಿವೆ.

೩.೨. ಸಮಿತಿ, ಆಯೋಗಗಳು ಮತ್ತು ಬುಡಕಟ್ಟು ಅಭಿವೃದ್ಧಿ:

"ಸಂವಿಧಾನಾತ್ಮಕ ರಕ್ಷಣೆ ಮತ್ತು ಸವಲತ್ತುಗಳಲ್ಲದೆ ಭಾರತದ ಬುಡಕಟ್ಟುಗಳ ಬದುಕನ್ನು ಉತ್ತಮಪಡಿಸಲು ಹಲವು ಯೋಜನೆಗಳನ್ನು ಸರ್ಕಾರ ಕೈಗೊಂಡಿರುವುದು ಗಮನಾರ್ಹ ಸಂಗತಿ. ಅವುಗಳಲ್ಲಿ ಸಮಿತಿ ಮತ್ತು ಆಯೋಗಗಳನ್ನು ಸ್ಥಾಪಿಸುವುದು ಮುಖ್ಯವಾದಂತಹ ಅಂಶವಾಗಿದ್ದು

ಆ ಮೂಲಕ ಕಾರ್ಯಕ್ರಮಗಳನ್ನು ರೂಪಿಸುವುದನ್ನು ಕಾಣಬಹುದಾಗಿದೆ. ಬುಡಕಟ್ಟು ಜನರಿಗೆ ಕನಿಷ್ಠ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯತಂತ್ರ ರೂಪಿಸಲು ೧೯೬೧ರಲ್ಲಿ ಕೇಂದ್ರ ಸರ್ಕಾರ ದೇಬರ್‌ರವರ ಅಧ್ಯಕ್ಷತೆಯಲ್ಲಿ ಮೊಟ್ಟ ಮೊದಲ ಬುಡಕಟ್ಟು ಆಯೋಗವನ್ನು ರಚಿಸಲಾಯಿತು. ಈ ಆಯೋಗದ ಶಿಫಾರಸ್ಸಿನಂತೆ ಬುಡಕಟ್ಟುಗಳ ಸಮಗ್ರ ಯೋಜನೆಗಳನ್ನು ರೂಪಿಸಿ ಕನಿಷ್ಠ ಅವಶ್ಯಕತೆಗಳಾದ ಆಹಾರ, ನೀರು, ಉದ್ಯೋಗ, ವಸತಿ, ಶಿಕ್ಷಣ, ಆರೋಗ್ಯ, ರಸ್ತೆ ಸೌಕರ್ಯವನ್ನು ಒದಗಿಸಲಾಯಿತು. ೧೯೭೨ರಲ್ಲಿ ರಚಿತವಾದ ಬುಡಕಟ್ಟು ಪ್ರದೇಶಗಳ ಅಭಿವೃದ್ಧಿಯ ಕಾರ್ಯಪಡೆಯು ಬುಡಕಟ್ಟುಗಳ ಅಭಿವೃದ್ಧಿಗೆ ನೀತಿಯನ್ನು ರೂಪಿಸುವಾಗ ಪರಿಸರೀಯ ಉದ್ಯೋಗ ಮತ್ತು ಸಾಮಾಜಿಕ ಸೂಚಕಗಳನ್ನು ಅಳವಡಿಕೊಳ್ಳಬೇಕು ಎಂದು ಸಲಹೆ ಮಾಡಿತು. ಇದರಿಂದ ಬುಡಕಟ್ಟು ಜನರಿಗೆ ಅತೀ ಶೀಘ್ರದಲ್ಲಿ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುತ್ತದೆ ಎಂಬುದು ಕಾರ್ಯಪಡೆಯ ಉದ್ದೇಶವಾಗಿತ್ತು. ನಂತರ ೧೯೮೦ರಲ್ಲಿ ಬುಡಕಟ್ಟು ಅಭಿವೃದ್ಧಿಗೆ ಬುಡಕಟ್ಟು ಉಪಯೋಜನೆಯನ್ನು ರೂಪಿಸಲಾಯಿತು. ಈ ಯೋಜನೆಯು ಮುಖ್ಯವಾಗಿ ಎರಡು ಅಂಶಗಳನ್ನು ಒಳಗೊಂಡಿತ್ತು.

ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಮತ್ತು ಶೋಷಣೆಯಿಂದ ಬುಡಕಟ್ಟು ಜನರನ್ನು ತಪ್ಪಿಸುವುದು. ಬುಡಕಟ್ಟು ಉಪಯೋಜನೆಗೆ ಹಣಕಾಸಿನ ನೆರವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒದಗಿಸಿದವು. ಈ ಯೋಜನೆಯ ಅಡಿಯಲ್ಲಿ ಶಿಕ್ಷಣ, ಆರೋಗ್ಯ ಮತ್ತು ವಸತಿ ಒದಗಿಸುವುದರ ಜೊತೆಗೆ ಕುಟುಂಬ ಆಧಾರಿತ ವರಮಾನದ ಯೋಜನೆಗಳಾದ ಕೃಷಿ, ಹೈನುಗಾರಿಕೆಗೆ, ಸಹಕಾರ, ಬುಡಕಟ್ಟುಗಳ ಕರಕುಶಲ ಕಲೆಗೆ ಮತ್ತು ಇತರೆ ಪರಿಣತಿಗೆ ಹೆಚ್ಚು ಒತ್ತು ಕೊಡಲಾಯಿತು. ಬುಡಕಟ್ಟು ಉಪಯೋಜನೆಯಲ್ಲಿ ಒಟ್ಟಾರೆ ಮೂಲ ಸೌಕರ್ಯಗಳಿಗೆ ಹೆಚ್ಚಿನ ಗಮನ ಹರಿಸಿದ್ದರಿಂದ ಬುಡಕಟ್ಟು ಜನರ ಅಭಿವೃದ್ಧಿಯನ್ನು ಅಷ್ಟೇನು ಸಾಧಿಸಿದಂತಾಗಲಿಲ್ಲ. ಆದರೂ, ಶಿಕ್ಷಣದ ಮಟ್ಟಿಗೆ ಹೇಳುವುದಾದರೆ ಬುಡಕಟ್ಟುಳಲ್ಲಿ ಅಲ್ಪ ಪ್ರಮಾಣದ ಅಭಿವೃದ್ಧಿಯನ್ನು ಸಾಧಿಸಿದಂತಾಯಿತು. ಇದರಿಂದ ಶೇಕಡಾ ೯೫ರಷ್ಟು ಬುಡಕಟ್ಟು ನೆಲೆಗಳು ಶಾಲೆಗಳನ್ನು ಹೊಂದಲು ಸಾಧ್ಯವಾಯಿತು.

" ೧೯೯೬ರಲ್ಲಿ ಕೇಂದ್ರ ಸರ್ಕಾರ ಎರಡನೇ ಅನುಸೂಚಿತ ಪ್ರದೇಶ ಮತ್ತು ಬುಡಕಟ್ಟುಗಳ ಆಯೋಗವನ್ನು ರಚಿಸಿದ್ದು, ದಿಲೀಪ್ ಸಿಂಗ್ ಭುರಿಯಾರನ್ನು ಅದರ ಅಧ್ಯಕ್ಷರನ್ನಾಗಿ ನೇಮಕ ಮಾಡಿತು. ಆ ಆಯೋಗವು ಬುಡಕಟ್ಟುಗಳ ಅಭಿವೃದ್ಧಿಗೆ ಮತ್ತು ಕಲ್ಯಾಣಕ್ಕೆ ೪೦ ವರ್ಷಗಳ ಒಂದು ಯೋಜನೆಯನ್ನು ರೂಪಿಸಿದೆ. ಈ ಯೋಜನೆಯ ಮುಖ್ಯ ಉದ್ದೇಶ ಭೂಮಿ, ನೀರು ಮತ್ತು ಅರಣ್ಯಕ್ಕೆ ಸಂಬಂಧಿಸಿದಂತೆ ಬುಡಕಟ್ಟು ಜನರ ಹಕ್ಕುಗಳ ರಕ್ಷಣೆ, ಶಿಕ್ಷಣ, ಆರೋಗ್ಯ,

ಉದ್ಯೋಗ ಮತ್ತು 'ಇತರೆ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಾಗಿದೆ. ಜುಲೈ ೨೦೦೩ರಲ್ಲಿ ಆಯೋಗದ ಅಧ್ಯಕ್ಷರಾದ ಭುರಿಯಾ ಮತ್ತು ಇತರೆ ಸದಸ್ಯರು ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡಿದಾಗ ಅವರು ಕರ್ನಾಟಕದಲ್ಲಿ ಪ್ರಸ್ತುತ ಯಾವುದೆ ಬುಡಕಟ್ಟುಗಳು ಇರುವ ಪ್ರದೇಶವನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಲಾಗಿಲ್ಲ. ಆದರೆ ರಾಜ್ಯದಿಂದ ಬುಡಕಟ್ಟು ಪ್ರದೇಶಗಳನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಲು ಕೆಲವು ಬೇಡಿಕೆಗಳು ಬಂದಿವೆ ಎಂದರು"೧೧.

೩.೩.ಸರ್ಕಾರದ ಬುಡಕಟ್ಟು ಅಭಿವೃದ್ಧಿ ಯೋಜನೆಗಳು:

೩.೩.೧ ಗಿರಿಜನ ಸಮಗ್ರ ಅಭಿವೃದ್ಧಿ ಯೋಜನೆ (ITDP)

೧ "ಗಿರಿಜನ ಉಪಯೋಜನೆಯ ಅನುಷ್ಠಾನಕ್ಕಾಗ ಭಾರತದ ಬುಡಕಟ್ಟುಗಳನ್ನು ಮೂರು ಹಂತಗಳಲ್ಲಿ ಈ ಕೆಳಗಿನಂತೆ ವಿಂಗಡಿಸಲಾಯಿತು.

೨. ಅಧಿಕ ಬುಡಕಟ್ಟು ಜನಸಂಖ್ಯೆಯುಳ್ಳ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು.

ಮಧ್ಯಮ ಬುಡಕಟ್ಟು ಜನಸಂಖ್ಯೆಯುಳ್ಳ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು. ಆದರೆ, ಹಲವು ಜಿಲ್ಲೆ ಅಥವಾ ತಾಲೂಕುಗಳಲ್ಲಿ ಅಧಿಕ ಜನರಿರಬಹುದು.

೩.ವಿರಳ ಅಥವಾ ಚದುರಿದ ಬುಡಕಟ್ಟು ಜನಸಂಖ್ಯೆಯುಳ್ಳ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು.

೪. ಅಧಿಕ ಬುಡಕಟ್ಟು ಜನಸಂಖ್ಯೆಯುಳ್ಳ ಅರುಣಾಚಲಪ್ರದೇಶ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ ರಾಜ್ಯಗಳಲ್ಲಿ ಮತ್ತು ಲಕ್ಷದ್ವೀಪ, ದಾದ್ರಾ ಮತ್ತು ನಗರ ಹವೇಲಿ ಕೇಂದ್ರಾಡಳಿತ ಪ್ರದೇಶಗಳಲ್ಲಿ ಗಿರಿಜನ ಉಪ ಯೋನೆಯ ಅಗತ್ಯವನ್ನು ತಳ್ಳಿ ಹಾಕಲಾಯಿತು. ಕಾರಣ ಅಲ್ಲಿ ಆಯಾ ರಾಜ್ಯಗಳ ಮುಖ್ಯ ಯೋಜನೆಗಳೆಲ್ಲವೂ ಬುಡಕಟ್ಟು ಅಭಿವೃದ್ಧಿ ಪರವಾಗಿಯೇ ರಚನೆಗೊಂಡು ಅನುಷ್ಠಾನಗೊಳ್ಳುವವು. ಮಧ್ಯಮ ಹಾಗೂ ವಿರಳ ಬುಡಕಟ್ಟು ಜನಸಂಖ್ಯೆಯುಳ್ಳ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಗಿರಿಜನ ಉಪಯೋಜನೆ ಜಾರಿಗೊಳಿಸಲಾಯಿತು. ೭೫ ಆದಿಮ ಬುಡಕಟ್ಟುಗಳಿಗೆ ಪ್ರತ್ಯೇಕ ವಿಶೇಷ ಯೋಜನೆಗಳನ್ನು ಅವರ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ಕರ್ನಾಟಕ ಸರ್ಕಾರವು ಬುಡಕಟ್ಟುಗಳ ಸರ್ವತೋಮುಖ ಅಭಿವೃದ್ಧಿಗಾಗಿ ಗಿರಿಜನ ಉಪ ಯೋಜನೆಯನ್ನು ೧೯೭೬-೭೭ರಿಂದ ಪ್ರಾರಂಭಿಸಿತು. ರಾಜ್ಯದಲ್ಲಿ ಬುಡಕಟ್ಟು ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದ ಪ್ರದೇಶಗಳಾದ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಮತ್ತು ಈ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದ ಉಡುಪಿಯಲ್ಲಿ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ (ITDP) ಕೇಂದ್ರಗಳ ಆರಂಭವಾದವು. ಆದರೆ ಈ ಜಿಲ್ಲೆಗಳಲ್ಲಿ

ರಾಜ್ಯದ ಒಟ್ಟು ಗಿರಿಜನರ ಜನಸಂಖ್ಯೆಯ ಶೇ.೧೪ ರಷ್ಟು ಬುಡಕಟ್ಟು ಜನರು ಮಾತ್ರ ಇದ್ದು ಉಳಿದ ಶೇ.೮೬ರಷ್ಟು ಬುಡಕಟ್ಟು ಜನರು ಈ ಜಿಲ್ಲೆಗಳ ಹೊರಗೆ ಇದ್ದುದರಿಂದ ಈ ಯೋಜನೆಯ ಉಪಯೋಗವನ್ನು ಎಲ್ಲಾ ಬುಡಕಟ್ಟಿನವರಿಗೆ ದೊರೆಯುವಂತೆ ಮಾಡಲು ಇದನ್ನು ೧೯೯೨ರಿಂದ ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಲಾಯಿತು.

೩.೩.೨. ಗಿರಿಜನ ಉಪಯೋಜನೆಯ ಧ್ಯೇಯೋದ್ದೇಶಗಳು:

"ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಪ್ರದೇಶಗಳು ಹಾಗೂ ಇತರೆ ಪ್ರದೇಶಗಳಲ್ಲಿರುವ ಪರಿಶಿಷ್ಟ ವರ್ಗದ ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲೆ ತರಲು ಸಹಕಾರಿಯಾಗುವಂತಹ ಸವಲತ್ತುಗಳನ್ನು ಒದಗಿಸುವುದು.

ಪರಿಶಿಷ್ಟ ವರ್ಗದವರ ಕಲೆ ಮತ್ತು ಸಂಸ್ಕೃತಿಗಳನ್ನು ಕಾಪಾಡಲು ಸಹಕಾರಿಯಾಗುವಂತಹ ನೀತಿ ನಿಯಮಗಳನ್ನು ಜಾರಿಗೊಳಿಸುವುದು.

೧ ಪರಿಶಿಷ್ಟ ವರ್ಗದ ಕಾಲೋನಿ, ಹಾಡಿಗಳಿಗೆ ಕನಿಷ್ಟ ಮೂಲಭೂತ ಸೌಲಭ್ಯ ಒದಗಿಸುವುದು.

೨ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನವನ್ನು ತೀವ್ರಗೊಳಿಸುವುದು ಮತ್ತು ಆ ದಿಸೆಯಲ್ಲಿ ಎದುರಾಗುವ ತೊಡಕುಗಳನ್ನು ನಿವಾರಿಸುವುದು.

೩. ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಆರ್ಥಿಕ ಸೌಲಭ್ಯಗಳು, ಶೈಕ್ಷಣಿಕ ಕಾರ್ಯಕ್ರಮಗಳು, ವಸತಿ, ಕುಡಿಯುವ ನೀರು, ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ, ರಸ್ತೆ, ಚರಂಡಿ ಕಾಮಗಾರಿಗಳು, ಆರೋಗ್ಯ ಕೇಂದ್ರ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದು.

೪. ಬುಡಕಟ್ಟು ಜನರ ಹಿತಾಸಕ್ತಿಗಳನ್ನು ರಕ್ಷಿಸಲು ಕಾನೂನು ಕಾಯ್ದೆಯ ಬೆಂಬಲ ಒದಗಿಸುವುದು.

೫. ಬುಡಕಟ್ಟು ಪ್ರದೇಶ ಮತ್ತು ಬುಡಕಟ್ಟು ಅಲ್ಲದ ಪ್ರದೇಶಗಳ ಅಭಿವೃದ್ಧಿ ಬಗ್ಗೆ ಇರುವ ಅಂತರವನ್ನು ಕಡಿಮೆ ಮಾಡುವುದು"[೨].

೩.೩.೩.ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಕಛೇರಿ (I.T.D.P)–ಮಂಗಳೂರು (ದ.ಕ):

ದಕ್ಷಿಣ ಕನ್ನಡ ಜಿಲ್ಲೆಯ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಕಛೇರಿಯು ಮಂಗಳೂರಿನಲ್ಲಿ ೧೯೮೦–೮೧ರಲ್ಲಿ ಪ್ರಾರಂಭಗೊಂಡಿತು. ಪ್ರಸ್ತುತ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಅಧಿಕಾರಿಯಾಗಿ ಶ್ರೀ ಸಾಬೀರ್ ಅಹಮ್ಮದ್ ಮುಲ್ಲಾ (K.A.S) ಅವರು ದಿನಾಂಕ: ೨೬.೦೪.೨೦೧೨ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೊರಗರು, ಮಲೆಕುಡಿಯರು ಮತ್ತು ಮರಾಠಿ ನಾಯ್ಕ ಈ ಮೂರು ಪರಿಶಿಷ್ಟ ಪಂಗಡದವರು ವಿವಿಧ ರೀತಿಯ ಪ್ರಯೋಜನಗಳನ್ನು ಪಡೆಯುತ್ತಿದ್ದರೂ, ಕೊರಗರು ಹೆಚ್ಚಿನ ಮತ್ತು ವಿಶೇಷ ಅನುದಾನಗಳು ಪಡೆಯುತ್ತಿದ್ದಾರೆ ಎಂದು ಹೇಳಬಹುದು. ಉಡುಪಿ ಜಿಲ್ಲೆಯ ಕೊರಗ ಸಮುದಾಯದ ಅಭಿವೃದ್ಧಿಗಾಗಿ "ಮೂಲನಿವಾಸಿ ಅಭಿವೃದ್ಧಿ

ಯೋಜನೆಯಡಿ" ೨೦೦೮ ರಿಂದ ೨೦೧೪ರ ವರೆಗೆ ರೂ. ೨೫.೧೧ ಕೋಟಿ ಹಣ ಬಿಡುಗಡೆಯಾಗಿದ್ದು, ನವೆಂಬರ್ ೨೦೧೫ರ ವರೆಗೆ ೧೫.೪೫ ಕೋಟಿ ರೂಗಳನ್ನು ಕೊರಗರ ಅಭಿವೃದ್ಧಿಗಾಗಿ ಬಳಸಲಾಗಿದೆ. ಕೊರಗರ ೩೬೧೨ ಫಲಾನುಭವಿಗಳು ಈ ಅಭಿವೃದ್ಧಿ ಯೋಜನೆಗಳ ನೆರವು ಪಡೆದಿದ್ದಾರೆಂಬ ಮಾಹಿತಿ ಉಡುಪಿ ಜಿಲ್ಲಾಧಿಕಾರಿಗಳ ಕಛೇರಿಯಿಂದ ತಿಳಿದು ಬರುತ್ತದೆ. ಆದರೆ, ಈ ಅಭಿವೃದ್ಧಿ ಅನುದಾನವನ್ನು ಕೇಂದ್ರ ಸರಕಾರ ೨೦೧೬ ರಿಂದ ನಿಲ್ಲಿಸಿ, ಕರ್ನಾಟಕದ ಮತ್ತೊಂದು ಮೂಲ ನಿವಾಸಿ ಸಮುದಾಯವಾದ ಜೇನು ಕುರುಬರ ಅಭಿವೃದ್ದಿಗಾಗಿ ಅನುದಾನ ಬಿಡುಗಡೆ ಮಾಡುತ್ತಿದೆಯಂದು ತಿಳಿದು ಬರುತ್ತದೆ.

೩.೩.೪. ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಇಲಾಖೆಯ ಕೊರಗ ಸಮುದಾಯಕ್ಕೆ ಸಂಬಂಧಿಸಿದ ವಿಶೇಷ ಅಭಿವೃದ್ಧಿ ಕಾರ್ಯಕ್ರಮಗಳು: ದಕ್ಷಿಣ ಕನ್ನಡ ಜಿಲ್ಲೆ

೩.೩.೪.೧. ಕೊರಗರಿಗೆ ಸಂಬಂಧಿಸಿದ ಅನುದಾನಗಳು:

ಕೇಂದ್ರ ಸರಕಾರದ ಮೂಲನಿವಾಸಿ ಅಭಿವೃದ್ದಿ ಯೋಜನೆಯಡಿಯಲ್ಲಿ ಐ.ಟಿ.ಡಿ.ಪಿ ಇಲಾಖೆಗಳಿಗೆ ವಿಶೇಷ ಅನುದಾನವನ್ನು ೨೦೦೮ರಿಂದ ಬಿಡುಗಡೆ ಮಾಡುತ್ತಿದ್ದು, ೨೦೧೩ನೇ ವರ್ಷದಿಂದ ಅನುದಾನವು ಸ್ಥಗಿತಗೊಂಡಿದೆ.. ೨೦೦೮ ರಿಂದ ೨೦೧೩ರವರೆಗೆ ದಕ್ಷಿಣ ಕನ್ನಡ ಐ.ಟಿ.ಡಿ.ಪಿಗೆ ಮೂಲನಿವಾಸಿ ಅಭಿವೃದ್ಧಿ ಯೋಜನೆಯಡಿ ಬಿಡುಗಡೆಗೊಂಡ ಅನುದಾನದ ವಿವರ

ವರ್ಷ	ಅನುದಾನ (ಲಕ್ಷಗಳಲ್ಲಿ)
೨೦೦೮-೦೯	೩೮೦.೦೦
೨೦೦೯-೧೦	-
೨೦೧೦-೧೧	೩೪೬.೦೮
೨೦೧೧-೧೨	೩೦೯.೧೮
೨೦೧೨-೧೩	೨೨೪.೭೬
ಒಟ್ಟು	೧,೨೬೦.೦೨

೩.೩.೪.೨. ಕೊರಗರ ವಿಶೇಷ ಆರೋಗ್ಯ ನಿಧಿ:

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ, ಜಿಲ್ಲೆಯ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಮತ್ತು ಜಿಲ್ಲಾಡಳಿತ ಮತ್ತು ಜಿಲ್ಲಾಸ್ಪತ್ರೆ ಇವುಗಳ ಸಹಯೋಗದೊಂದಿಗೆ, ಜಿಲ್ಲೆಯಲ್ಲಿರುವ ಕೊರಗ ಸಮುದಾಯದ ಜನರಿಗೆ ವಿಶೇಷ ಆರೋಗ್ಯ ನಿಧಿಯನ್ನು ಸ್ಥಾಪಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರ ಅಧ್ಯಕ್ಷತೆ ಮತ್ತು I.T.D.P ಮತ್ತು ಜಿಲ್ಲಾ

ಆಸ್ಪತ್ರೆಯ ಪದಾಧಿಕಾರಿಗಳ ವಿಶೇಷ ಸಮಿತಿಯು ಈ ವಿಶೇಷ ಆರೋಗ್ಯ ನಿಧಿಯನ್ನು ಸ್ಥಾಪಿಸಿದ್ದು ಮೂರು ಲಕ್ಷ ರೂಪಾಯಿಗಳ ಮೊತ್ತವನ್ನು ಈ ವಿಶೇಷ ಆರೋಗ್ಯ ನಿಧಿಗೆ ಮೀಸಲಿಟ್ಟಿದ್ದು, ಈ ಮೊತ್ತವನ್ನು, ಜಿಲ್ಲಾಸ್ಪತ್ರೆಯ ವೈದ್ಯಾಧಿಕಾರಿಯವರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಜಮಾ ಮಾಡಲಾಗಿರುತ್ತದೆ. ಈ ವಿಶೇಷ ಆರೋಗ್ಯ ನಿಧಿ ಸ್ಥಾಪನೆಯ ಉದ್ದೇಶ ಏನೆಂದರೆ ಜಿಲ್ಲೆಯಲ್ಲಿರುವ ಕೊರಗ ಸಮುದಾಯದ ಜನರು ಕೆಲವೊಂದು ದುಬಾರಿ ಚಿಕಿತ್ಸೆಯ ಕಾಯಿಲೆಗಳಿಗೆ ತುತ್ತಾದವರಿಗೆ, ಯಾವುದೇ ಆರ್ಥಿಕ ತೊಂದರೆಗಳಾಗದೆ ಉತ್ತಮ ಚಿಕಿತ್ಸೆ ಪಡೆಯುವುದು. ಮುಖ್ಯವಾಗಿ ಕ್ಯಾನ್ಸರ್, ಹೃದಯ ಸಂಬಂಧಿ ದುಬಾರಿ ಚಿಕಿತ್ಸೆಯ ಕಾಯಿಲೆಗಳು ಬಂದಾಗ ಅದರ ಚಿಕಿತ್ಸೆ ಸುಲಭವಾಗಿ ಮತ್ತು ಉತ್ತಮ ಗುಣಮಟ್ಟದಲ್ಲಿ ಈ ಸಮುದಾಯದ ಜನರಿಗೆ ಸಿಗಬೇಕು ಎಂಬ ಆಶಯದೊಂದಿಗೆ ಈ ವಿಶೇಷ ಆರೋಗ್ಯ ನಿಧಿಯನ್ನು ಸ್ಥಾಪಿಸಲಾಗಿದೆ. ಅಷ್ಟೇ ಅಲ್ಲದೆ, ಈ ಸೌಲಭ್ಯವು ಕೊರಗರಿಗೆ ಕೇವಲ ಜಿಲ್ಲಾ ಸರಕಾರಿ ಆಸ್ಪತ್ರೆಯಲ್ಲದೆ ಇತರ ಅತ್ಯಾಧುನಿಕ ಖಾಸಗಿ ಆಸ್ಪತ್ರೆಗಳಲ್ಲೂ ದೊರಕಬೇಕೆಂಬ ಉದ್ದೇಶದಿಂದ ಮಂಗಳೂರಿನ ಎನಪೋಯ ಆಸ್ಪತ್ರೆ, K.M.C ಆಸ್ಪತ್ರೆ, ಫಾದರ್ ಮುಲ್ಲರ್ ಆಸ್ಪತ್ರೆ, ಎ.ಜೆ. ಶೆಟ್ಟಿ ಆಸ್ಪತ್ರೆ ಹಾಗೂ ಬೆಳ್ತಂಗಡಿ, ಸುಳ್ಯ ಮತ್ತು ಪುತ್ತೂರು ತಾಲೂಕಿನ ಕೆಲವು ಖಾಸಗಿ ಆಸ್ಪತ್ರೆಗಳೊಂದಿಗೆ ಒಪ್ಪಂದ ಮಾಡಲಾಗಿದೆ. ಈ ಒಪ್ಪಂದದ ಪ್ರಕಾರ ಕೊರಗ ಸಮುದಾಯದ ಜನರಿಗೆ ಈ ಆಸ್ಪತ್ರೆಗಳಲ್ಲಿ ಕೆಲವೊಂದು ಕಾಯಿಲೆಗಳಿಗೆ ಉಚಿತ ಚಿಕಿತ್ಸೆಯನ್ನು ನೀಡಲಾಗುತ್ತದೆ. ನಂತರ ಈ ಚಿಕಿತ್ಸೆಗಳ ಪೂರ್ತಿ ಖರ್ಚಿನ ರಶೀದಿಯನ್ನು ಜಿಲ್ಲಾ ಆಸ್ಪತ್ರೆ ಮಂಗಳೂರಿಗೆ ಕಳುಹಿಸಿಕೊಡುತ್ತಾರೆ. ಅಲ್ಲಿನ ವೈದ್ಯಾಧಿಕಾರಿಗಳು ಅದನ್ನು ಪರಿಶೀಲಿಸಿದ ನಂತರ I.T.D.P ಕಛೇರಿಗೆ ಕಳುಹಿಸಿಕೊಡಲಾಗುತ್ತದೆ. ಅಲ್ಲಿ ಎಲ್ಲಾ ರಶೀದಿಗಳನ್ನು ಪ್ರಮಾಣೀಕರಿಸಿ ಅದನ್ನು ಜಿಲ್ಲಾಧಿಕಾರಿಯವರ ಕಛೇರಿಗೆ ಕಳುಹಿಸಿಕೊಡಲಾಗುತ್ತದೆ. ಅಲ್ಲಿ ಜಿಲ್ಲಾಧಿಕಾರಿಯವರು ಹಣದ ಚೆಕ್ಕನ್ನು ಮಂಜೂರುಗೊಳಿಸಿದ ನಂತರ ಸಬಂಧಪಟ್ಟ ರೋಗಿಗಳಿಗೆ ಅಥವಾ ಕುಟುಂಬದವರಿಗೆ ನೀಡಲಾಗುತ್ತದೆ.

೩.೩.೪. ೩ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಮತ್ತು ಸ್ವಯಂಸೇವಾ ಸಂಸ್ಥೆಗಳು:

ಸರಕಾರ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ ಮೂಲಕ ವಿವಿಧ ರೀತಿಯ ಪರಿಶಿಷ್ಟ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಮೂಲಕ ಪರಿಶಿಷ್ಟ ವರ್ಗದ ಜನರಿಗೆ ತಲುಪುತ್ತಿದೆ. ಈ ಕಾರ್ಯಕ್ರಮಗಳು, ಸೌಲಭ್ಯಗಳು ಜನರಿಗೆ ತಲುಪಲು ಸ್ಥಳೀಯ ಸ್ವಯಂಸೇವಾ ಸಂಸ್ಥೆಗಳಾದ ಸಮಗ್ರ ಗ್ರಾಮೀಣ ಆಶ್ರಮ ಮತ್ತು ಜನ ಶಿಕ್ಷಣ ಟ್ರಸ್ಟ್ ಎಂಬ ಸಂಸ್ಥೆಗಳು ಪ್ರಮುಖ ಪಾತ್ರವನ್ನು ವಹಿಸುತ್ತಿವೆ. ಕೆಲವೊಂದು ಪ್ರಮುಖ ಗಿರಿಜನ

ಕಲ್ಯಾಣ ಯೋಜನೆಗಳಾದ ಸ್ವಯಂ ಉದ್ಯೋಗ ಯೋಜನೆ, ಉದ್ಯಮಶೀಲತಾ ಅಭಿವೃದ್ಧಿ ಯೋಜನೆ, ನೇರ ಸಾಲ ಯೋಜನೆ, ಕಿರು ಸಾಲ ಯೋಜನೆ, ಭೂ ಒಡೆತನ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಸಾಮೂಹಿಕ ನೀರಾವರಿ ಯೋಜನೆ, ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ ಹೀಗೆ ಕೆಲವೊಂದು ಯೋಜನೆಗಳನ್ನು ಈ ಸ್ವಯಂಸೇವಾ ಸಂಸ್ಥೆಗಳೇ ನೇರವಾಗಿ ಪರಿಶಿಷ್ಟ ಜಾತಿಗಳಿಗೆ ಅದರಲ್ಲೂ ಮುಖ್ಯವಾಗಿ ಕೊರಗ ಸಮುದಾಯಕ್ಕೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಹೇಳಬಹುದು. ಅಷ್ಟೇ ಅಲ್ಲದೆ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಇಲಾಖೆಯ ಅಧಿಕಾರಿಗಳು, ಸ್ವಯಂಸೇವಾ ಸಂಸ್ಥೆಯ ಕಾರ್ಯಕರ್ತರು ಮತ್ತು ಪರಿಶಿಷ್ಟ ವರ್ಗಗಳ ಪ್ರಮುಖರು ಸಭೆ ಸೇರಿ ತಮ್ಮ ಬೇಕು ಬೇಡಗಳು, ಅಗತ್ಯತೆಗಳ ಬಗ್ಗೆ ಚರ್ಚಿಸುತ್ತಾರೆ. ಪ್ರತಿ ಮೂರು ತಿಂಗಳಿಗೊಮ್ಮೆ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಸಭೆ ನಡೆಸಿ ತಮ್ಮ ಅಗತ್ಯಾನುಸಾರವಾಗಿ ಒಂದು ಕ್ರಿಯಾ ಯೋಜನೆಯನ್ನು ತಯಾರಿಸುತ್ತಾರೆ. ನಂತರ ಆ ಕ್ರಿಯಾ ಯೋಜನೆಯನ್ನು ಸಂಪೂರ್ಣವಾಗಿ ಪರೀಕ್ಷಿಸಿ, ಅಗತ್ಯವಿದ್ದಲ್ಲಿ ತಿದ್ದುಪಡಿಗಳನ್ನು ಮಾಡಿ ಕೊನೆಗೆ ಜಿಲ್ಲಾಧಿಕಾರಿ ಮತ್ತು I.T.D.P ಯೋಜನಾ ಸಮನ್ವಯಾಧಿಕಾರಿಯವರ ಸಹಿಯೊಂದಿಗೆ ಆ ಕ್ರಿಯಾಯೋಜನೆಯನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ನಿರ್ದೇಶಕರಿಗೆ ಕಳುಹಿಸಿಕೊಡಲಾಗುತ್ತದೆ.

೨೦೧೦-೧೧ನೇ ಸಾಲಿನಲ್ಲಿ ಕೇಂದ್ರವಲಯದಿಂದ ಕೊರಗರ ಅಭಿವೃದ್ಧಿಗಾಗಿ ೨,೧೯,೯೨,೬೯೦.೦೦ (ಎರಡು ಕೋಟಿ ಹತ್ತೊಂಭತ್ತು ಲಕ್ಷದ ತ್ತೊಂಭತ್ತೆರಡು ಸಾವಿರದ ಆರುನೂರ ತೊಂಭತ್ತು) ರೂಪಾಯಿಗಳ ಅನುದಾನ ಬಿಡುಗಡೆಯಾಗಿದ್ದು, ಅದನ್ನು ಈ ಕೆಳಗಿನಂತೆ ಕಾರ್ಯಕ್ರಮಗಳಿಗೆ ವಿನಿಯೋಗಿಸಲು ನಿಗದಿಪಡಿಸಲಾಗಿದೆ.

ಕಾರ್ಯಕ್ರಮದ ವಿವರ	ನಿಗದಿತ ಅನುದಾನ
೧. ವಸತಿ ಸೌಲಭ್ಯ	೮೭,೦೦,೦೦೦.೦೦
೨. ಕೃಷಿ ನೀರಾವರಿ ಮತ್ತು ಭೂ ಅಭಿವೃದ್ಧಿ ಮತ್ತು ಸಮುದಾಯಭವನ	೮೧,೦೦,೦೦೦.೦೦
೩. ರಸ್ತೆ ಸಂಪರ್ಕ, ಚರಂಡಿ ಅಭಿವೃದ್ಧಿ	೨೨,೦೦,೦೦೦.೦೦
೪. ಆರೋಗ್ಯ ವಲಯ	೮,೦೦,೦೦೦.೦೦
೫. ಶೈಕ್ಷಣಿಕ ಅಭಿವೃದ್ಧಿ	೧,೦೦,೦೦೦.೦೦



ಚಿತ್ರ: ಗಿರಿಜನ ಉಪಯೋಜನೆ ಅಡಿಯಲ್ಲಿ ಕೊರಗರ ಕಾಲನಿಗೆ ನಿರ್ಮಾಣಗೊಂಡ ಕಾಂಕ್ರೀಟಿಕೃತ ರಸ್ತೆ.

೩.೩.೪.೪. ಕೊರಗರ ಸ್ಮಾರ್ಟ್ ಕಾರ್ಡ್ ಯೋಜನೆ:

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿರುವ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಕಛೇರಿಯ ಸಮನ್ವಯಾಧಿಕಾರಿಗಳು, ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಮತ್ತು ಇತರೆ ಸಂಸ್ಥೆಗಳ ಸದಸ್ಯರು. ಕೊರಗ ಸಂಘಟನೆಗಳು ಇವರೆಲ್ಲರ ಪರಿಶ್ರಮದಿಂದಾಗಿ ಕರ್ನಾಟಕ ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಮೂಲನಿವಾಸಿ (ಪಿಟಿಜಿ) ಕೊರಗರಿಗೆ ಸ್ಮಾರ್ಟ್ ಕಾರ್ಡ್ ಯೋಜನೆಯನ್ನು ಜಾರಿಗೊಳಿಸಿದೆ, ದಕ್ಷಿಣ ಕನ್ನಡ ಜಿಲೆಯಲ್ಲಿರುವ ಪ್ರತಿಯೊಬ್ಬ ಕೊರಗರಿಗೂ ಸ್ಮಾರ್ಟ್ ಕಾರ್ಡ್ ವಿತರಿಸುವ ಯೋಜನೆ ಇದಾಗಿದ್ದು, ಈಗಾಗಲೇ ಶೇ. ೮೦ರಷ್ಟು ಕಾರ್ಡ್‌ಗಳನ್ನು ವಿತರಿಸಲಾಗಿದ್ದು, ಉಳಿದ ಶೇ. ೨೦ರಷ್ಟು ಜನರಿಗೆ ಶೀಘ್ರವೇ ಕಾರ್ಡ್ ವಿತರಿಸಲಾಗುವುದು ಮತ್ತು ಈ ಯೋಜನೆಗೆ ಜಿಲ್ಲೆಯಾದ್ಯಂತ ಉತ್ತಮ ಸ್ಪಂದನೆ ದೊರೆತಿದೆ ಎಂದು I.T.D.P. ಸಮನ್ವಯಾಧಿಕಾರಿ ಶ್ರೀ ಸಾಬೀರ್ ಅಹಮ್ಮದ್ ಮುಲ್ಲಾ ಮಾಹಿತಿ ನೀಡಿದರು. ಮೂಲ ನಿವಾಸಿಗಳಾದ ಕೊರಗರಲ್ಲಿ ಹೆಚ್ಚಿನ ಜನರಿಗೆ ತಮ್ಮ ಬಳಿ ಸರಕಾರದ ಯಾವುದೇ ಗುರುತಿನ ಚೀಟಿಗಳು, ಭೂ ದಾಖಲೆಗಳು, ಪಡಿತರ ಚೀಟಿಗಳು ಇಲ್ಲ. ಕೆಲವರಲ್ಲಿ ಇದ್ದರೂ ಅವುಗಳಲ್ಲಿ ಅನೇಕ ಲೋಪದೋಷಗಳಿವೆ ಮತ್ತು ಗೊಂದಲಗಳಿವೆ. ಹಾಗಾಗಿ ಇಂತಹ ಕೊರಗರಿಗೆ ಸರಕಾರದ ಯೋಜನೆಗಳು ಅಥವಾ ಲಾಭಾಂಶಗಳು ಮತ್ತು ಸೌಲಭ್ಯಗಳನ್ನು ಒದಗಿಸುವಾಗ ಕೆಲವೊಂದು ತಾಂತ್ರಿಕ ಸಮಸ್ಯೆಗಳು ಎದುರುಗೊಳ್ಳುತ್ತವೆ ಮತ್ತು ಕೆಲವೊಂದು ಸಂದರ್ಭದಲ್ಲಿ ಕೊರಗರು ಈ ಸೌಲಭ್ಯಗಳಿಂದ ಅವಕಾಶ ವಂಚಿತರಾದ ಅನೇಕ ಉದಾಹರಣೆಗಳಿವೆ. ಹೀಗಾಗಿ ಈ ಎಲ್ಲಾ ಸಮಸ್ಯೆಗಳಿಗೆ ಕಡಿವಾಣ ಹಾಕಲು ಕೊರಗರ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳ ಸಂಪೂರ್ಣ ಮಾಹಿತಿ ಒಳಗೊಂಡಿರುವ ಸ್ಮಾರ್ಡ್ ಕಾರ್ಡ್ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಸದ್ಯಕ್ಕೆ ಈ ಸ್ಮಾರ್ಟ್ ಕಾರ್ಡ್‌ನ್ನು ಕೊರಗರು I.T.D.P

ಯೋಜನೆಗಳಿಗೆ ಮಾತ್ರ ಬಳಸಬಹುದಾಗಿದ್ದು, ಮುಂದಿನ ದಿನಗಳಲ್ಲಿ ಇತರೆ ಇಲಾಖೆ ಮತ್ತು ಯೋಜನೆಗಳಿಗೆ ಬಳಸಲು ಚಿಂತನೆ ನಡೆದಿದೆ. ಸ್ಮಾರ್ಟ್ ಕಾರ್ಡ್‌ಗಳು ಚೌಕಾಕರದಲ್ಲಿದ್ದು ಅದರಲ್ಲಿ ಕರ್ನಾಟಕ ಸರಕಾರ, ಜಿಲ್ಲಾ ಪಂಚಾಯತ್ ದಕ್ಷಿಣ ಕನ್ನಡ ಮತ್ತು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಮಂಗಳೂರು ಇದರ ಹೆಸರು ಮೇಲ್ಭಾಗದಲ್ಲಿದ್ದು ಸ್ಮಾರ್ಟ್ ಕಾರ್ಡ್‌ನ ಬಲಗಡೆಗೆ ವ್ಯಕ್ತಿಯ ಭಾವಚಿತ್ರವಿರುತ್ತದೆ. ಭಾವಚಿತ್ರದ ಕೆಳಗಡೆ ಒಂದು ಯುನಿಕ್ ಅಂಕೆಗಳಿದ್ದು, ಎಡಬದಿಯಲ್ಲಿ ವ್ಯಕ್ತಿಯ ಹೆಸರು, ತಂದೆ/ಗಂಡ/ ಪೋಷಕರ ಹೆಸರು, ವಯಸ್ಸು, ಲಿಂಗ, ವಿಳಾಸ, ಮನೆ ಸಂಖ್ಯೆ ವಿವಗಳನ್ನು ಮುದ್ರಿಸಲಾಗಿದೆ. ಕೆಳಗಿನ ಸಾಲಿನಲ್ಲಿ ಚಿಕ್ಕದಾಗಿ I.T.D.P. ಯ ಅಂತರ್‌ಜಾಲದ ವಿವರಣೆಯನ್ನು ಮುದ್ರಿಸಲಾಗಿದೆ. ಪ್ರತಿಯೊಬ್ಬ ಕೊರಗರ ವೈಯಕ್ತಿಕ ಮಾಹಿತಿಗಳು, ಶೈಕ್ಷಣಿಕ, ಆರ್ಥಿಕ ಸಾಮಾಜಿಕ ಸ್ಥಿತಿ–ಗತಿ ಸಂಪೂರ್ಣ ಮಾಹಿತಿ ಬಳಗೊಂಡಿರುವ ಈ ಸ್ಮಾರ್ಟ್ ಕಾರ್ಡ್‌ನಲ್ಲಿ ಯುನಿಕ್ ಅಂಕೆಗಳಿದ್ದು, ಅವುಗಳನ್ನು ಬಳಸಿ ಅಂತರ್‌ಜಾಲದಲ್ಲಿ ಅನ್ವೇಷಿಸಿದ್ದರೆ. ಆ ವ್ಯಕ್ತಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಗಳು ದೊರಕುತ್ತದೆ. ಇದರ ಜೊತೆಗೆ ಈ ಸ್ಮಾರ್ಟ್ ಕಾರ್ಡ್‌ನ್ನು ಬಳಸಿ ಪ್ರತಿಯೊಬ್ಬ ಕೊರಗರೂ ಎಲ್ಲಾ ರೀತಿಯ ವೈದ್ಯಕೀಯ ಸೌಲಭ್ಯಗಳನ್ನು ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಪಡೆಯಬಹುದಾಗಿದೆ. ಇದಕ್ಕೆ ಅನುಕೂಲವಾಗುವಂತೆ ದಕ್ಷಿಣ ಕನ್ನಡ ಜಿಲ್ಲೆಯ ೯ ಖಾಸಗಿ ಆಸ್ಪತ್ರೆ ಮತ್ತು ಜಿಲ್ಲಾ ಅಸ್ಪತ್ರೆಗಳೊಡನೆ I.T.D.P. ಇಲಾಖೆಯು ಒಡಂಬಡಿಕೆ ಮಾಡಿಕೊಂಡಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಇಲಾಖೆ ಮೂಲಕ ೫೪೫ ಜನರು ಒಟ್ಟು ೨೨.೦೩ ಲಕ್ಷ ರೂಪಾಯಿ ವೆಚ್ಚದ ವೈದ್ಯಕೀಯ ಚಿಕಿತ್ಸೆ ಪಡೆದಿದ್ದಾರೆ ಮತ್ತು ೪೦ ಜನರಿಗೆ ಅಮಲು ವರ್ಜನ ಕೇಂದ್ರಗಳಲ್ಲಿ ಚಿಕಿತ್ಸೆ ನೀಡಲಾಗಿದೆ.



ಛಾಯ ಚಿತ್ರ ಸಂ. ದಕ್ಷಿಣ ಕನ್ನಡ ಐ.ಟಿ.ಡಿ.ಪಿ ಜಾರಿಗೆ ತಂದ ಕೊರಗರ ಸ್ಮರ್ಟ್ ಕಾರ್ಡ್

"ಸ್ಮಾರ್ಟ್ ಕಾರ್ಡ ಯೋಜನೆಯ" ಹರಿಕಾರ, ಪ್ರಸ್ತುತ ರಾಜ್ಯ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕರಾದ ಡಾ। ಕೆ. ಎನ್ ವಿಜಯ್ ಪ್ರಕಾಶ್ ಅವರು. ಈ ಯೋಜನೆಯನ್ನು ರಾಜ್ಯದ ಇತರ ಜಿಲ್ಲೆಗಳಲ್ಲಿ ಜಾರಿಗೊಳಿಸಲು ಅಧ್ಯಯನ ನಡೆಸುವಂತೆ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಕುರಿತ ರಾಜ್ಯ ಮಟ್ಟದ ಸಭೆಯಲ್ಲಿ, ಎಲ್ಲಾ ಜಿಲ್ಲಾ ಮಟ್ಟದ I.T.D.P. ಯೋಜನಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಈ ಯೋಜನೆಗೆ ಕರ್ನಾಟಕದ ಮೂಲ ನಿವಾಸಿಗಳಾದ ಕೊರಗರು ಮತ್ತು ಜೇನು ಕುರುಬರು ವ್ಯಾಪ್ತಿಗೆ ಒಳಪಡಲಿದ್ದಾರೆ ಮತ್ತು ರಾಜ್ಯಾದ್ಯಂತ ಉಭಯ ಪಂಗಡಗಳಿಗೆ ಸೇರಿದ ಒಟ್ಟು ೪೩ ಸಾವಿರ ಜನರಿಗೆ ಈ ಯೋಜನೆ ತಲುಪಿಸುವುದು ಸದ್ಯದ ಗುರಿಯಾಗಿದೆ ಎಂದು ಮಾಹಿತಿ ನೀಡಿದರು.

೩.೩.೪.೫. ಕೊರಗ ಸಮುದಾಯದ ಮಕ್ಕಳ ಶೈಕ್ಷಣಿಕ ಪ್ರಗತಿಗೆ ೧೦ ಅಂಶಗಳ ಕಾರ್ಯಕ್ರಮಗಳ ಯೋಜನೆಗಳು:

ದಕ್ಷಿಣ ಕನ್ನಡ ಜಿಲ್ಲೆಯ ಆದಿವಾಸಿ ಮಕ್ಕಳ ಶೈಕ್ಷಣಿಕ ದಾಖಲಾತಿ: ೨೦೧೫-೧೬ ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬಂಟ್ವಾಳ, ಪುತ್ತೂರು, ಸೂಳ್ಯ ಹಾಗೂ ಬೆಳ್ತಂಗಡಿ ತಾಲೂಕುಗಳ ಒಟ್ಟು ೯ ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಒಟ್ಟು ೧೫೦ ವಿದ್ಯಾರ್ಥಿಗಳು ಪ್ರವೇಶ ಪಡೆದು, ೫ ರಿಂದ ೧೦ ನೇ ತರಗತಿಗಳಲ್ಲಿ ವಿದ್ಯಾಬ್ಯಾಸ ಮಾಡುತ್ತಿರುವ ಬಗೆಗೆ ಮಾಹಿತಿ ದೊರೆಯುತ್ತದೆ.

೨೦೧೫-೧೬ನೇ ಸಾಲಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಮಂಗಳೂರು, ಬಂಟ್ವಾಳ, ಪುತ್ತೂರು, ಸೂಳ್ಯ ಮತ್ತು ಬೆಳ್ತಂಗಡಿ ತಾಲೂಕಿನಲ್ಲಿ ಒಟ್ಟು ೧೨ ಆಶ್ರಮ ಶಾಲೆಗಳನ್ನು ಪ್ರಾರಂಭಿಸಿದ್ದು ಈ ಎಲ್ಲ ಶಾಲೆಗಳಲ್ಲಿ ಒಟ್ಟು ೧೦೫೦ ಬುಡಕಟ್ಟು ಸಮುದಾಯದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ವಿದ್ಯಾಬ್ಯಾಸ ಮಾಡಲು ಅವಕಾಶವಿದೆ. ಈ ಶಾಲೆಗಳಲ್ಲಿ ೨೦೧೫-೧೬ ನೇ ಸಾಲಿನಲ್ಲಿ ೧ನೇ ತರಗತಿಯಿಂದ ೧೦ನೇ ತರಗತಿಯವರೆಗೆ ಒಟ್ಟು ೭೮೯ ವಿದ್ಯಾರ್ಥಿಗಳು ಪ್ರವೇಶ ಪಡಿದಿದ್ದಾರೆ ಇದರಲ್ಲಿ ಗಂಡು ಮಕ್ಕಳು ೪೬೯ ಹಾಗೂ ಹೆಣ್ಣು ಮಕ್ಕಳು ೩೨೦ ಇರುವುದು ಕಂಡುಬರುತ್ತದೆ. ೧ನೇ ತರಗತಿಯಲ್ಲಿ ಗಂಡು ೪೫ ಹೆಣ್ಣು ೪೧ ಒಟ್ಟು ೮೬, ೨ನೇ ತರಗತಿಯಲ್ಲಿ ಗಂಡು ೬೨ ಹೆಣ್ಣು ೩೮ ಒಟ್ಟು ೧೦೦, ೩ನೇ ತರಗತಿಯಲ್ಲಿ ಗಂಡು ೬೫ ಹೆಣ್ಣು ೭೨ ಒಟ್ಟು ೧೩೭, ೪ನೇ ತರಗತಿಯಲ್ಲಿ ಗಂಡು ೬೩ ಹೆಣ್ಣು ೬೮ ಒಟ್ಟು ೧೩೧, ೫ನೇ ತರಗತಿಯಲ್ಲಿ ಗಂಡು ೮೨ ಹೆಣ್ಣು ೫೨ ಒಟ್ಟು ೧೩೪, ೬ನೇ ತರಗತಿಯಲ್ಲಿ ಗಂಡು ೩೦ ಹೆಣ್ಣು ೨೩ ಒಟ್ಟು ೫೩, ೭ನೇ ತರಗತಿಯಲ್ಲಿ ಗಂಡು ೨೯ ಹೆಣ್ಣು

೧೬ ಒಟ್ಟು ೪೫, ೮ನೇ ತರಗತಿಯಲ್ಲಿ ಗಂಡು ೧೨ ಹೆಣ್ಣು ೦೩ ಒಟ್ಟು ೧೫, ೯ನೇ ತರಗತಿಯಲ್ಲಿ ಗಂಡು ೯ ಹೆಣ್ಣು ೪ ಒಟ್ಟು ೧೩, ೧೦ನೇ ತರಗತಿಯಲ್ಲಿ ಗಂಡು ೨ ಹೆಣ್ಣು ೩ ಒಟ್ಟು ೫, ಮಕ್ಕಳು ದಾಖಲಾಗಿರುವ ಬಗೆಗೆ ಮಾಹಿತಿ ದೊರೆಯುತ್ತದೆ.

ಕೊರಗ ಸಮುದಾಯದಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಪ್ರಮಾಣ ಹೆಚ್ಚಿರುವ ಮತ್ತು ಶೈಕ್ಷಣಿಕ ನಿಪುಣತೆ ಕಡಿಮೆ ಇರುವುದನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಣ ಕ್ಷೇತ್ರದಲ್ಲಿ ಕೊರಗ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆಯು (I.T.D.P.)–ಮಂಗಳೂರು. ೧೦ ಅಂಶಗಳ ಕಾರ್ಯಕ್ರಮವೊಂದನ್ನು ರೂಪಿಸಿಗೊಂಡಿದೆ. ಈ ಯೋಜನೆಯ ಪ್ರಸ್ತಾವವನ್ನು ಆಗಷ್ಟ್ ೧೩ ವರ್ಷದಂದು ಬೆಂಗಳೂರಿನ ಗಿರಿಜನ ಅಭಿವೃದ್ಧಿ ನಿರ್ದೇಶನಾಲಯಕ್ಕೆ ಕಳುಹಿಸಿಕೊಡಲಾಗಿದ್ದು ಈ ಯೋಜನೆಗೆ ೬೪.೯೭ ಲಕ್ಷ ರೂಪಾಯಿ ವೆಚ್ಚವಾಗಲಿದೆ ಎಂದು ಅಂದಾಜಿಸಿದೆ. ಈ ಯೋಜನೆಯಡಿಯಲ್ಲಿ ಕೊರಗ ಸಮುದಾಯದ ಮಕ್ಕಳಿಗೆ ಬೇರೆ ಬೇರೆ ರೀತಿಯ ಪಠ್ಯ ಮತ್ತು ಪಠ್ಯೇತರ ಚಟುವಟಿಕೆ ಹಮ್ಮಿಕೊಳ್ಳಲಾಗಿದೆ ಮತ್ತು ಈ ಯೋಜನೆಗೆ ಹಸಿರು ನಿಶಾನೆ ದೊರೆತರೆ ಇಂತಹದೊಂದು ಯೋಜನೆ ರೂಪಿಸಿದ ಪ್ರಥಮ ಜಿಲ್ಲೆ ಎಂಬ ಖ್ಯಾತಿಗೆ ದಕ್ಷಿಣ ಕನ್ನಡ ಜಿಲ್ಲೆ ಸೇರುತ್ತದೆ ಎಂದು I.T.D.P. ಸಮನ್ವಯಧಿಕಾರಿ ಶ್ರೀ ಸಾಬೀರ್ ಅಹಮ್ಮದ್ ಮುಲ್ಲಾ ಮಾಹಿತಿ ನೀಡಿದರು. ಕೊರಗ ಸಮುದಾಯದ ಮಕ್ಕಳ ಶೈಕ್ಷಣಿಕ ಪ್ರಗತಿಗೆ ರೂಪಿಸಿದ ೧೦ ಅಂಶಗಳ ಈ ಕಾರ್ಯಕ್ರಮದ ರೂಪರೇಷೆಗಳು ಈ ಕೆಳಗಿನಂತಿವೆ.

೧. ಕೊರಗ ಸಮುದಾಯದ ಮಕ್ಕಳಿಗೆ ಕಠಿಣ ವಿಷಯಗಳಿಗೆ ಸಂಬಂಧಿಸಿದಂತೆ ಪೂರಕ ಭೋಧನೆ. ಅಂದರೆ ಕೊರಗ ಸಮುದಾಯದ ಮಕ್ಕಳಿಗೆ ಕಠಿಣ ವಿಷಯಗಳಾದ ಗಣಿತ, ಇಂಗ್ಲಿಷ್, ವಿಜ್ಞಾನ ವಿಷಯಗಳನ್ನು ಸರಳಗೊಳಿಸಿ ಅರ್ಥವಾಗುವ ರೀತಿಯಲ್ಲಿ ಭೋದನೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಇದಕ್ಕಾಗಿ ವಿಶೇಷ ಪುಸ್ತಕಗಳು, ವಿಶೇಷ ಪರಿಕರಣೆಗಳನ್ನು ಭೋಧನಾ ವಿಧಾನದಲ್ಲಿ ಬಳಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

೨. ಕಲಿಕಾ ಉಪಕರಣಗಳ ಇುಣ ವಿತರಣೆ. ಈ ಅಂಶದಲ್ಲಿ ಕೊರಗ ಮಕ್ಕಳಿಗೆ ಕಲಿಕೆಗೆ ಸಂಬಂಧ ಪಟ್ಟಂತೆ ಪೆನ್ನುಗಳು, ನೋಟ್ ಪುಸ್ತಕಗಳು, ಕಂಪಾಸು ಪೆಟ್ಟಿಗೆ, ಶಬ್ದಕೋಶ ಪುಸ್ತಕ ಹೀಗೆ ಕಲಿಕೆಗೆ ಸಂಬಂಧಪಟ್ಟ ಅವಶ್ಯಕ ಉಪಕರಣಗಳನ್ನು ವಿತರಿಸಲಾಗುವುದು.

೩. ಕೊರಗ ಸಮುದಾಯದ ಮಕ್ಕಳಿಗೆ ಇಂಗ್ಲೀಷ್ ಭಾಷೆಯನ್ನು ಸುಲಭಗೊಳಿಸಲು ಮತ್ತು ಸರಳವಾಗಿಸಲು ಇಂಗ್ಲೀಷ್ ಸ್ಪೀಕಿಂಗ್ ಕೋರ್ಸ್ ಸಂಸ್ಥೆಯದ (VETA) ವಿವೇಕಾನಂದ ಇಂಗ್ಲಿಷ್ ಸ್ಪೀಕಿಂಗ್ ಸಂಸ್ಥೆ ಜೊತೆ ಒಪ್ಪಂದ ಮಾಡುವ ಯೋಜನೆ

೪. ಕೊರಗ ಸಮುದಾಯದ ಮಕ್ಕಳಿಗೆ ಈಜು ತರಬೇತಿಯನ್ನು ನೀಡುವುದರ ಮೂಲಕ ಈಜು ಕಲಿಕೆಗೆ ಪ್ರೋತ್ಸಾಹ ನೀಡುವುದು.

೫. ಕೊರಗ ಸಮುದಾಯದ ಮಕ್ಕಳು S.S.L.C ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರೆ ಅಂತಹ ಮಕ್ಕಳನ್ನು ಗುರುತಿಸಿ ಅವರಿಗೆ ಉಚಿತ ಟ್ಯಾಬ್ಲೆಟ್‌ಗಳನ್ನು ವಿತರಿಸುವುದು. ೬. ಕೊರಗ ಸಮುದಾಯದ ಹೆಣ್ಣು ಮಕ್ಕಳಲ್ಲಿ ಆರೋಗ್ಯ ಮತ್ತು ವೈಯಕ್ತಿಕ ಶುಚಿತ್ವ ಸುಧಾರಣೆಯ ದೃಷ್ಟಿಯಿಂದ ೬ನೇ ತರಗತಿಯಿಂದ ೧೦ನೇ ತರಗತಿವರೆಗಿನ ಹೆಣ್ಣು ಮಕ್ಕಳಿಗೆ ಉಚಿತ ನ್ಯಾಪ್ಕಿನ್‌ಗಳನ್ನು ವಿತರಿಸುವುದು.

೭. ಹಾಜರಾತಿ ಪ್ರೋತ್ಸಾಹ ಧನ ಅಂದರೆ ಶೇಕಡಾ ೯೦% ಕ್ಕಿಂತ ಮೇಲ್ಪಟ್ಟು ಹಾಜರಾತಿಯನ್ನು ಹೊಂದಿದ ಕೊರಗ ಸಮುದಾಯದ ಮಕ್ಕಳನ್ನು ಶಾಲೆಯಲ್ಲಿ ಗುರುತಿಸಿ, ಆ ಮಕ್ಕಳಿಗೆ ಹಣವನ್ನು ವಿತರಿಸುವುದು.

೮. ಶೈಕ್ಷಣಿಕ ಪ್ರವಾಸ. ಈ ಅಂಶದಲ್ಲಿ ಕೊರಗ ಮಕ್ಕಳಿಗೆ ರಾಜ್ಯಾದ್ಯಂತ ಐತಿಹಾಸಿಕ ಪ್ರೇಕ್ಷಣೀಯ ಸ್ಥಳಗಳಿಗೆ ಉಚಿತವಾಗಿ ಶೈಕ್ಷಣಿಕ ಪ್ರವಾಸಗಳನ್ನು ಹಮ್ಮಿಕೊಳ್ಳುವುದು.

೧೦. ವಿಶೇಷ ಟ್ಯೂಷನ್ ತರಗತಿ. ಈ ಅಂಶದಲ್ಲಿ ಬೇರೆ ಬೇರೆ ಕಾರಣಗಳಿಂದ ಶಾಲೆ ಬಿಟ್ಟು, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಅವರಿಗೆ ಅನುಕೂಲವಾಗುವ ಸ್ಥಳದಲ್ಲಿಯೇ ವಿಶೇಷ ತರಗತಿಗಳನ್ನು ಪ್ರಾರಂಭಿಸುವುದು. ಅಂದರೆ ಇಲ್ಲಿ ಈ ಮಕ್ಕಳಿಗೆ ಉಚಿತ ವಸತಿ, ಭೋಜನ ಮತ್ತು ಶಿಕ್ಷಣಗಳನ್ನು ನೀಡಲಾಗುವುದು.

೧೧. ಸುರತಲ್ ಬಳಿ ಮಧ್ಯಪದವಿನಲ್ಲಿರುವ ಕೊರಗ ಮಕ್ಕಳ ಕೇಂದ್ರಿಯ ಮಾದರಿ ವಸತಿ ಶಾಲೆಯನ್ನು ಸಂಪೂರ್ಣವಾಗಿ ಡಿಜಿಟಲ್‌ಗೊಳಿಸಿ ಇತ್ಯಾದಿ ವಿದ್ಯುನ್ಮಾನ ಪರಿಕರಣೆಗಳನ್ನು ಉಪಯೋಗಿಸಿ ಸ್ಮಾರ್ಟ್ ತರಗತಿಗಳನ್ನು ಪರಿಚಯಿಸುವುದು.

ಚಿಣ್ಣರ ಜಿಲ್ಲಾದರ್ಶನ ಪ್ರವಾಸ, ಶಿಕ್ಷಣಕ್ಕೆ ಸಹಾಯಧನ, ವಿದ್ಯಾರ್ಥಿಗಳ ಬೇಸಿಗೆ ಶಿಬಿರ.

೭ನೇ ಮತ್ತು ೧೦ನೇ ತರಗತಿ ಪಾಸದ ವಿದ್ಯಾರ್ಥಿಗೆ ರೂ ೨೫೦೦, ೫೦೦೦ ಪ್ರೋತ್ಸಾಹ ಧನ ವಿದ್ಯಾರ್ಥಿಗಳ ಪೋಷಕರಿಗೆ ರೂ ೨೦೦ ಪ್ರೋತ್ಸಾಹ ಧನ.

೭ನೇ ತರಗತಿಯಲ್ಲಿ ಉತ್ತೀರ್ಣರಾದ ೩೭ ವಿದ್ಯಾರ್ಥಿಗಳಿಗೆ ರೂ.೯೨,೫೦೦ ಮಂಜೂರು ಮಾಡಿದೆ.

೧೦ನೇ ತರಗತಿಯಲ್ಲಿ ಉತ್ತೀರ್ಣರಾದ ೨೦ ವಿದ್ಯಾರ್ಥಿಗಳಿಗೆ ರೂ.೧.೦೦ ಲಕ್ಷ ಮಂಜೂರು ಮಾಡಿದೆ.

ಕೊರಗ ವಸತಿ ಶಾಲೆ ಮಂಗಳೂರು, ಕೇಂದ್ರೀಯ ಮಾದರಿ ವಸತಿ ಶಾಲೆ ಮಧ್ಯ, ಸುರತ್ಕಲ್ ವಸತಿ ಶಾಲೆಯಲ್ಲಿ ೧ ರಿಂದ ೧೦ನೇ ತರಗತಿವರೆಗೆ ವಿದ್ಯಾರ್ಥಿಗಳಿಗೆ ಊಟ, ವಸತಿ, ಸಮವಸ್ತ್ರ, ಲೇಖನ ಸಾಮಾಗ್ರಿ ಶಿಕ್ಷಣ ಸವಲತ್ತುಗಳನ್ನು ಉಚಿತವಾಗಿ ನೀಡಲಾಗುತ್ತದೆ.

೨೦೧೪-೧೫ನೇ ಸಾಲಿನ ಶೈಕ್ಷಣಿಕ ಪ್ರವಾಸ ಯೋಜನೆಯಲ್ಲಿ ಪ್ರಯೋಜನೆ ಪಡೆದ ಕೊರಗ ಮಕ್ಕಳ ವಿವರ

ಕ್ರಸಂ.	ಗ್ರಾಮದ ಹೆಸರು	ವಿದ್ಯಾರ್ಥಿಗಳ ಸಂಖ್ಯೆ
೧	ಕಲ್ಲಮುಂಡ್ಕೂರು	೧೩
೨	ತೆಂಕಮಿಜಾರು ಗುಂಡೀರು	೧೫
೩	ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕೆರೆಕಾಡು	೧೦
೪	ಉರ್ವ ಗಾಂಧಿನಗರ	೧೩
೫	ಕೋಡಿಕಲ್ ಮಂಗಳೂರು	೨೭
೬	ಎನ್.ಐ.ಟಿ.ಕೆ ಸುರತ್ಕಲ್	೧೨
೭	ಗುತ್ತಕಾಡು	೧೦
೮	ಮುಲ್ಕಿ ಮಾನಂಪಾಡಿ	೧೦
	ಒಟ್ಟು	೧೧೦





(ಛಾಯಾ ಚಿತ್ರ ಐ.ಟಿ.ಡಿ.ಪಿ) ಕೊರಗರ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳು

೩.೩.೪.೬. ೨೦೧೫-೧೬ ನೇ ಸಾಲಿನಿಂದ ಐ.ಟಿ.ಡಿ.ಪಿ. ಕೊರಗರಿಗೆ ಪ್ರತಿ ತಿಂಗಳು ನೀಡುತ್ತಿರುವ ಪೌಷ್ಟಿಕ ಆಹಾರದ ವಿವರಗಳು:

ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ನೀಡಿದ ವಿವರ						ಸೆಪ್ಟೆಂಬರ್ ತಿಂಗಳಿಂದ ಡಿಸೆಂಬರ್ ವರೆಗೆ ಬದಲಾಯಿಸಿ ನೀಡುತ್ತಿರುವ ವಿವರ			
ಕ್ರ.ಸಂ	ಒಟ್ಟು ಕೊರಗ ಕುಟುಂಬಗಳು	ಪೌಷ್ಟಿಕ ಆಹಾರ ಸಾಮಾಗ್ರಿಗಳು	ಪರಿಮಾಣ	ದರ	ಮೊಬಲಗು	ಪೌಷ್ಟಿಕ ಆಹಾರ ಸಾಮಾಗ್ರಿಗಳು	ಪರಿಮಾಣ	ದರ	ಮೊಬಲಗು
೧	೧೧೭೦	ಕುಚ್ಚಲು ಅಕ್ಕಿ	೧೫ ಕೆ.ಜಿ	೩೩.೦೦	೪೯೫.೦೦	ಕುಚ್ಚಲು ಅಕ್ಕಿ	೨೫ ಕೆ.ಜಿ	೩೩.೦೦	೮೨೫.೦೦
೨		ತೊಗರಿ ಬೇಳೆ	೫ ಕೆ.ಜಿ	೧೨೪.೦೦	೬೨೦.೦೦	ತೊಗರಿ ಬೇಳೆ	೨ ಕೆ.ಜಿ	೧೨೪.೦೦	೨೪೮.೦೦
೩		ಹೆಸರು ಕಾಳು	೫ ಕೆ.ಜಿ	೯೮.೦೦	೪೯೦.೦೦	ಹೆಸರು ಕಾಳು	೩ ಕೆ.ಜಿ	೯೮.೦೦	೨೯೪.೦೦
೪		ಬೆಲ್ಲ	೪ ಕೆ.ಜಿ	೩೯.೫೦	೧೫೮.೦೦	ಬೆಲ್ಲ	೨ ಕೆ.ಜಿ	೩೯.೫೦	೭೯.೦೦
೫		ಪಾಮೋಲಿನ್ ಎಣ್ಣೆ	೨ ಲೀ	೬೮.೦೦	೧೩೬.೦೦	ಪಾಮೋಲಿನ್ ಎಣ್ಣೆ	೨ ಲೀ	೬೮.೦೦	೧೩೬.೦೦
೬		ಮೊಟ್ಟೆ	೯೦	೪೮೦.೦೦	೪೩೨.೦೦	ಮೊಟ್ಟೆ	೬೦	೪.೮೦	೨೮೮.೦೦
						ಸಕ್ಕರೆ	೨ ಕೆ.ಜಿ	೩೪.೦೦	೬೮.೦೦
						ಕೆಂಪು ಕಡ್ಲೆ ಾಳು	೨ ಕೆ.ಜಿ	೭೦.೦೦	೧೪೦.೦೦
						ಅಲಸಂದೆ ಕಾಳು	೨ ಕೆ.ಜಿ	೭೨.೦೦	೧೪೪.೦೦
						ರಾಗಿ	೧ ಕೆ.ಜಿ	೨೪.೦೦	೨೪.೦೦
		ಒಟ್ಟು			೨೩೩೧.೦೦				೨೨೪೬.೦೦
		ಸಾಗಾಣಿಕ ವೆಚ್ಚ		೬.೫೦%	೧೫೧.೫೦			೬.೫೦%	೧೪೫.೯೯
		ಅಂತೂ ಒಟ್ಟು			೨೪೮೨.೫೦				೨೩೯೧.೯೯

೩.೩.೪.೭. ೨೦೧೫–೧೬ನೇ ಸಾಲಿನಲ್ಲಿ ಐ.ಟಿ.ಡಿ.ಪಿಯಿಂದ ಕೊರಗರಿಗೆ ಮನೆ ಹಾಗೂ ನಿವೇಶನ ನೀಡಿರುವ ಮಾಹಿತಿ

ಕ್ರ.ಸಂ	ತಾಲೂಕಿನ ಹೆಸರು	ಕುಟುಂಬಗ ಸಂಖ್ಯೆ	ಮನೆ ಹೊಂದಿರುವವರ ಸಂಖ್ಯೆ	ನಿರ್ಮಾಣ ಹಂತದಲ್ಲಿರುವ ಮನೆಗಳ ಸಂ	ಪೂರ್ಣಗೊಂಡ ಮನೆಗಳ ಸಂಖ	ಹಕ್ಕು ಪತ್ರಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಸಂ	ಮಂಜೂರಾದ ಹಕ್ಕು ಪತ್ರಗಳ ಸಂಖ್ಯೆ
೧	ಮಂಗಳೂರು (ನಗರ)	೨೭೧	೧೯೫	೦	೦೮	೪೫	೦
೨	ಮಂಗಳೂರು (ಗ್ರಾಮಂತರ)	೫೦೩	೧೭೦	೪೬	೧೦೮		
೩	ಬಂಟ್ವಾಳ	೧೮೫	೪೪	೨೧	೮೫	೪೨	೦೩
೪	ಪುತ್ತೂರು	೧೦೦	೧೫	೯	೫೭	೧೯	೦
೫	ಸುಳ್ಯ	೩೫	೨೪	೦೫	೦೩	೦೮	೦
೬	ಬೆಳ್ತಂಗಡಿ	೧೧೨	೨೬	೧೩	೩೬	೧೩	೦
	ಒಟ್ಟು	೧೨೦೬	೪೭೪	೯೪	೨೯೭	೧೨೭	೩



ಚಿತ್ರ: ಐ.ಟಿ.ಡಿ.ಪಿ ಶ್ರೀಮತಿ ಕಮಲ ಕೋಂ ತನಿಯ ಕೊರಗ, ಮೊಂಟೆಪದವು ಮಂಜನಾಡಿ, ಮಂಗಳೂರು ತಾಲೂಕು,

೩.೩.೪.೮. ಕೊರಗ ಸಮುದಾಯಕ್ಕೆ ಗಿರಿಜನ ಉಪಯೋಜನೆ ಅಡಿಯಲ್ಲಿ ನಿವೇಶನ ನೀಡಿದ ವಿವರಗಳು

ಕ್ರ ಸಂ.	ತಾಲೂಕು	ಮಂಜೂರಾತಿ ಮಾಡಿದ ಜಮೀನಿನ ವಿಸ್ತೀರ್ಣ (ಎಕ್ರೆಗಳಲ್ಲಿ)	ಫಲಾನುಭವಿಗಳ ಸಂಖ್ಯೆ
೧	ಮಂಗಳೂರು	೨೮.೨೭	೨೪
೨	ಬಂಟ್ವಾಳ	೩೨.೩೨	೩೦
೩	ಪತ್ತೂರು	೬.೩೩	೦೫
೪	ಬೆಳ್ತಂಗಡಿ	೧೬.೯೩	೨೧
೫	ಸುಳ್ಯ	೦.೭೦	೦೧
	ಒಟ್ಟು	೮೪.೫೫	೮೧

❖ "ಮಂಗಳೂರು ತಾಲೂಕು ಸುರತ್ಕಲ್ ಗ್ರಾಮದ ಸರ್ವೆ ನಂ.೨೧೧/೪ರಲ್ಲಿ ೪೧.೫೦ ಎಕ್ರೆ ಜಮೀನನ್ನು ಕೊರಗ ಸಮುದಾಯದ ವಾಜಪೇಯಿ ನಗರ ವಸತಿ ಯೋಜನೆಯಡಿ ಭೂ ರಹಿತ ಕೊರಗ ಜನಾಂಗದ ನಿವೇಶನ ರಹಿತರಿಗೆ ಹಂಚಿಕೆ ಮಾಡಲು ಕಾದಿರಿಸಿದೆ. ೨೦ ಕೊರಗ ಸಮುದಾಯದ ನಿವೇಶನ ರಹಿತರ ಪಟ್ಟಿಯನ್ನು ಆಯುಕ್ತರು, ಮಹಾನಗರಪಾಲಿಕೆ ಮಂಗಳೂರು ಇವರಿಗೆ ಕಳುಹಿಸಲಾಗಿದೆ.

❖ ಮಂಗಳೂರು ತಾಲೂಕು ಉಳ್ಯಾಬೆಟ್ಟು ಗ್ರಾಮದ ಸರ್ವೆ ನಂ.೧೧೬ ರಲ್ಲಿ ವಿಸ್ತೀರ್ಣ ೧.೭೨ ಎಕ್ರೆ ಜಮೀನನ್ನು ಕೊರಗ ಸಮುದಾಯದ ಅಭಿವೃದ್ಧಿಗಾಗಿ ಕಾದಿರಿಸಿದೆ.

❖ ಬಂಟ್ವಾಳ ತಾಲೂಕು ಸಾಲೆತ್ತೂರು ಗ್ರಾಮದ ಸರ್ವೆ ನಂ.೧೯೯/೧ ರಲ್ಲಿ ತಲಾ ೦.೮೦ ಎಕ್ರೆ ಜಮೀನನ್ನು ಗ್ರಾಮದ ಭಾಗಿ, ರೋಹಿಣಿ, ಲೀಲಾ ಇವರಿಗೆ ಮಂಜೂರು ಮಾಡಿದೆ.

❖ ಮಂಗಳೂರು ನಗರ ವ್ಯಾಪ್ತಿಯ ಪದವು ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ ಓಉ.೧೩ರ ಭೂ ಸ್ವಾಧೀನತೆ ಪ್ರಕ್ರಿಯೆ ಒಳಪಟ್ಟ ನಂತೂರು ಪದವಿನ ೬ ಕೊರಗ ಕುಟುಂಬಗಳಿಗೆ ಮತ್ತು ಕೈಕಂಬ ಪ್ಲೈ ಒವರ್ ಬಳಿಯ ೨ ಗುಡಿಸಲು ವಾಸಿ ನಿವೇಶನ ರಹಿತರಿಗೆ ನಗರ ಪ್ರದೇಶದಡಿ ಕಣ್ಣೂರು ಸರ್ವೆ ನಂ– ೧೮ ರಲ್ಲಿ ಜಿ+೨ ಮಾದರಿಯ ವಸತಿ ಸಂಕೀರ್ಣದಲ್ಲಿ ವಾಸಿಸಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಹಕ್ಕು ಪತ್ರ ನೀಡಲು ಆಯುಕ್ತರು ಮಹಾನಗರ ಪಾಲಿಕೆ ಇವರು ಕ್ರಮವಹಿಸುತ್ತಾರೆ."(ಮಾಹಿತಿ: ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಇಲಾಖೆ, ದಕ್ಷಿಣ ಕನ್ನಡ)

೩.೩.೪.೯. "ಕೊರಗ ಸಮುದಾಯ ಆಕ್ರಮ ಸಕ್ರಮ ಯೋಜನೆಯಡಿ (೯೪.ಸಿ) ಅರ್ಜಿ ಸಲ್ಲಿಸಿ ನಿವೇಶನಗಳನ್ನು ಸಕ್ರಮ ಮಾಡಿರುವ ವಿವರ

ಕ್ರ.ಸಂ.	ತಾಲೂಕು	ಸರಕಾರಿ ನಿವೇಶನದಲ್ಲಿರುವ ಕುಟುಂಬಗಳ ಸಂಖ್ಯೆ	ಆನ್‌ಲೈನ್‌ನ ಕೊರಗ ಸಮುದಾಯ ಕುಟುಂಬಗಳ	೯೪ ಸಿ ಯನ್ವಯ ಹಕ್ಕುಪತ್ರ ನೀಡಿದ ಫಲಾನುಭವಿಗಳ ಸಂಖ್ಯೆ	೯೪ ಸಿ ಹಕ್ಕುಪತ್ರ ನೀಡಲು ಬಾಕಿ ಇರುವ ಫಲಾನುಭವಿಗಳ ಸಂಖ್ಯೆ	ತಿರಸ್ಕೃತ ಅರ್ಜಿಗಳು	೯೪ ಸಿ ಯನ್ವು ಹಕ್ಕು ಪತ್ರ ನೀಡಲು ತಹಶೀಲ್ದಾರರಿಗೆ ಪಾವತಿಸಿದ ಅನುದಾನ
೧	ಮಂಗಳೂರು	೭೫	೭೩	೦	೭೩	೦	–
೨	ಮೂಡಬಿದ್ರೆ	೩೪	೩೪	೧	೭	೨೬	೫೦೮.೦೦
೩	ಬಂಟ್ವಾಳ	೭೨	೭೨	೩೧	೦	೪೧	೪೪,೨೩೫.೦೦
೪	ಪುತ್ತೂರು	೧೮	೧೬	೧೦	೬	೦	೧೩,೮೭೨.೦೦
೫	ಸುಳ್ಯ	೧೩	೧೩	೧೩	೦	೦	೨೫,೪೯೫.೦೦
೬	ಬೆಳ್ತಂಗಡಿ	೨೪	೨೪	೧೦	೧೪	೦	೧೧,೮೬೩.೦೦
	ಒಟ್ಟು	೨೩೬	೨೩೨	೬೫	೧೦೦	೬೭	೯೫೯೭೩.೦೦

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ತಾಲೂಕುಗಳ ಸರಕಾರಿ ಜಮೀನಿನಲ್ಲಿ ವಾಸಿಸುತ್ತಿರುವ ಕೊರಗ ಸಮುದಾಯದ ಕುಟುಂಬಗಳಿಗೆ ಅಕ್ರಮ ಸಕ್ರಮ ಯೋಜನೆಯಡಿ (೯೪ ಸಿ) ಅರ್ಜಿ ಸಲ್ಲಿಸಲು ಜಿಲ್ಲೆಯ ಎಲ್ಲಾ ತಾಲೂಕು ಸಮಾಜ ಕಲ್ಯಾಣಾಧಿಕಾರಿ, ವಿದ್ಯಾರ್ಥಿ ನಿಲಯದ ಮೇಲ್ವಿಚಾರಕರು ತಮ್ಮ ವ್ಯಾಪ್ತಿಯ ಕೊರಗ ಸಮುದಾಯದ ಕಾಲನಿಗಳಿಗೆ ಕೊರಗ ಪ್ರತಿನಿಧಿಗಳೊಂದಿಗೆ ಭೇಟಿ ನೀಡಿ ಮನೆ ಮತ್ತು ಸ್ಥಳದ ಛಾಯಾ ಚಿತ್ರವನ್ನು ಪಡೆದು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲಾಗಿದ್ದು, ಅರ್ಜಿ ಸಲ್ಲಿಸಿದ ಬಂಟ್ವಾಳ ಮತ್ತು ಸುಳ್ಯ ತಾಲೂಕಿನ ಫಲಾನುಭವಿಗಳು ಸರಕಾರಿ ಜಮೀನಿನ ಹಕ್ಕು ಪತ್ರ ಪಡೆಯಲು ನಿಗಧಿ ಪಡಿಸಿದ ಜಮೀನಿನ ಮೌಲ್ಯವನ್ನು ಐ.ಟಿ.ಡಿ.ಪಿ ಇಲಾಖೆಯಿಂದ ಮೇಲ್ಕಡಂತೆ ಭರಿಸಲಾಗಿದೆ" ."**(ಮಾಹಿತಿ: ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಇಲಾಖೆ, ದಕ್ಷಿಣ ಕನ್ನಡ)**

೩.೩.೪.೧೦. ಕೊರಗರು ಸ್ವಯಂ ಉದ್ಯೋಗ ಕಾರ್ಯಕ್ರಮ ಕೈಕೊಳ್ಳಲು ಐ.ಟಿ.ಡಿ.ಪಿ ರೂಪಿಸಿರುವ ಯೋಜನೆಗಳು ಮತ್ತು ಫಲಾನುಭವಿಗಳ ವಿವರ


ಕ್ರ.ಸಂ.	ವರ್ಷ	ಪ್ರವಾಸಿ ಕಾರು	ಆಟೋ ರಿಕ್ಷಾ	ಇತರೆ ಸೌಲಭ್ಯ ಹುಲ್ಲು ಕಾಟಾವು ಯಂತ್ರ	ಒಟ್ಟು	ಖರ್ಚಾದ ಅನುದಾನ
೧	೨೦೧೨-೧೩	೦೮	೧೩	೨	೨೩	೪೦.೯೮
೨	೨೦೧೩-೧೪	೦೪	೧೩	೦೧	೧೮	೨೯.೦೨
೩	೨೦೧೪-೧೫	೦೩	೦೩	೨೧	೨೭	೧೬.೬೮
೪	೨೦೧೫.೧೬	೦೩	೦೧	೦	೦೪	೧೧.೪೬
	ಒಟ್ಟು	೧೬	೩೦	೨೪	೭೨	೯೮.೧೪



(ಛಾಯಾ ಚಿತ್ರ ಐ.ಟಿ.ಡಿ.ಪಿ) ಐ.ಟಿ.ಡಿ.ಪಿ, ಸ್ವಯಂ ಉದ್ಯೋಗ ಯೋಜನೆಯಡಿ ಕೊರಗ ಯುವಕನಿಗೆ ಸಚಿವರಾದ ಸನ್ಮಾನ್ಯ ಶ್ರೀ ರಮಾನಾಥ ರೈ ಅವರು ಅಟೋ ರಿಕ್ಷಾ ನೀಡುತ್ತಿರುವುದು



(ಛಾಯಾ ಚಿತ್ರ ಐ.ಟಿ.ಡಿ.ಪಿ) ಐ.ಟಿ.ಡಿ.ಪಿ, ಸ್ವಯಂ ಉದ್ಯೋಗ ಯೋಜನೆಯಡಿ ಕೊರಗ ಯುವಕನಿಗೆ ಮಾರುತಿ ಓಮ್ನಿ ಕಾರು ನೀಡುತ್ತಿರುವುದು



(ಛಾಯಾ ಚಿತ್ರ ಐ.ಟಿ.ಡಿ.ಪಿ) ಐ.ಟಿ.ಡಿ.ಪಿ, ಸ್ವಯಂ ಉದ್ಯೋಗ ಯೋಜನೆಯಡಿ ಕೊರಗ ಯುವಕನಿಗೆ ಸಚಿವರಾದ ಸನ್ಮಾನ್ಯ ಶ್ರೀ ರಮಾನಾಥ ರೈ ಅವರು ಹುಲ್ಲು ಕಟಾವು ಯಂತ್ರ ನೀಡುತ್ತಿರುವುದು

೩.೩.೪.೧೧. ಪಶು ಸಂಗೋಪನೆ ಮತ್ತು ಸ್ವಯಂ ಉದ್ಯೋಗ ಯೋಜನೆಯಡಿ ಹೊಲಿಗೆ ಮತ್ತು ವಾಹನ ಚಾಲನೆ ತರಬೇತಿ ನೀಡಿರುವ ವಿವರಗಳು:

ಕ್ರ ಸಂ.	ವರ್ಷ	ಹೈನುಗಾರಿಕೆ	ಆಡು/ಕೋಳಿ ಸಾಕಣೆ	ಹೊಲಿಗೆ ತರಬೇತಿ	ವಾಹನ ಚಾಲನ ತರಬೇತಿ	ಒಟ್ಟು	ಖರ್ಚಾದ ಅನುದಾನ
೧	೨೦೧೦-೧೧	೧	೧೬	೩೦	೦	೪೭	೮.೭೯
೨	೨೦೧೧-೧೨	೧೭	೨೦	೦	೧	೩೮	೫.೪೨
೩	೨೦೧೨-೧೩	೩	೩	೩	೪೫	೫೪	೪.೨೫
೪	೨೦೧೩-೧೪	೨	೨	೦	೦	೪	೦.೮
೫	೨೦೧೪-೧೫	೪	೩	೩	೦	೭	೨.೬೬
	ಒಟ್ಟು	೨೭	೪೪	೩೬	೪೬	೧೫೦	೨೧.೯೨





(ಛಾಯಾ ಚಿತ್ರ ಐ.ಟಿ.ಡಿ.ಪಿ) ಐ.ಟಿ.ಡಿ.ಪಿ, ಸ್ವಯಂ ಉದ್ಯೋಗ ಯೋಜನೆಯಡಿ ಕೊರಗರಿಗೆ ಪಶುಸಂಗೋಪನೆಗೆ ಉತ್ತೇಜನ

೩.೩.೫. ಮಲೆಕುಡಿಯ ಸಮುದಾಯಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಕ್ರಮಗಳು:

೨೦೧೩-೧೪ ಮತ್ತು ೨೦೧೪-೧೫ ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸಿಸುತ್ತಿರುವ ಮಲೆಕುಡಿಯ ಸಮುದಾಯದವರ ವಿಶೇಷ ಅಭಿವೃದ್ಧಿಗಾಗಿ ಐ.ಟಿ.ಡಿ.ಪಿ ಇಲಾಖೆ ೨೨೭/- ಲಕ್ಷ ರೂಗಳ ಕ್ರಿಯಾ ಯೋಜನೆಯೊಂದನ್ನು ಸಿದ್ಧಪಡಿಸಿ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸಿತ್ತು. ಆ ಯೋಜನೆಯನ್ನು ದಿನಾಂಕ ೨೧.೧೧.೨೦೧೪ರಲ್ಲಿ ಅದಕ್ಕೆ ಅನುಮೋದನೆ ನೀಡಿದ ವಿವರ.

೩.೩.೫. ೧. ರಾಜ್ಯ ಸರಕಾರದಿಂದ ಮಲೆಕುಡಿಯ ಸಮುದಾಯಕ್ಕೆ ವಿಶೇಷ ಅಭಿವೃದ್ಧಿ ಯೋಜನೆಯಡಿ ೨೦೧೩-೧೪ ಮತ್ತು ೨೦೧೪-೧೫ನೇ ಸಾಲಿಗೆ ಬಿಡುಗಡೆಯಾದ ಅನುದಾನದ ವಿವರಗಳು (ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಯ ವಿವರ	ವರ್ಷ	ನಿಗದಿ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ಉಳಿಕೆ	ಷರಾ
೧	ಮಲೆಕುಡಿಯ ಜನಾಂಗದ ವಿಶೇಷ ಅಭಿವೃದ್ಧಿ ಯೋಜನೆ	೨೦೧೩-೧೪	೨೨೭.೦೦	೨೨೭.೦೦	೧೩೧.೩೦	೯೫.೭೦	-
೨	ಮಲೆಕುಡಿಯ ಜನಾಂಗದ ವಿಶೇಷ ಅಭಿವೃದ್ಧಿ ಯೋಜನೆ	೨೦೧೪-೧೫	೨೨೭.೦೦	೧೭೦.೦೦	೦	೦	ಕ್ರಿಯಾ ಯೋಜನೆ ತಯಾರಿಸಿ ಈ ಸಭೆಯಲ್ಲಿ ಅನುಮೋದನೆ ಪಡೆಯಬೇಕಾಗಿದೆ.
	ಒಟ್ಟು		೪೫೪.೦೦	೩೯೭.೦೦	೧೩೧.೩೦	೯೫.೭೦	

೨೦೧೩-೧೪ ಮತ್ತು ೨೦೧೪-೧೫ ನೇ ಸಾಲಿನಲ್ಲಿ ಮಲೆಕುಡಿಯರ ವಿಶೇಷ ಅಭಿವೃದ್ಧಿಗಾಗಿ ಒಟ್ಟು ೪೫೪ /- ಲಕ್ಷ ರೂಗಳ ಅನುಮೋದನೆಯನ್ನು ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರು ನೀಡಿದ್ದು, ೨೦೧೩-೧೪ನೇ ಸಾಲಿನ ಅಭಿವೃದ್ಧಿಗಾಗಿ ೨೨೭/- ಲಕ್ಷ ರೂ,ಗಳ ವೆಚ್ಚದಲ್ಲಿ ಮಲೆಕುಡಿಯರ ಅಭಿವೃದ್ಧಿಗೆ ಕೈಕೊಂಡ ಕಾರ್ಯಗಳ ವಿರಗಳು

೩.೩.೫. ೨. ಮಲೆಕುಡಿಯ ಸಮುದಾಯದವರ ವಿಶೇಷ ಅಭಿವೃದ್ಧಿ ಯೋಜನೆ (೨೦೧೩-೧೪) ರಾಜ್ಯ ವಲಯ ೨೨೭.೦೦/- ಲಕ್ಷ ರೂ.ಗಳು. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು, ಇವರಿಂದ ಕ್ರಿಯಾ ಯೋಜನೆ ಅನುಮೋದನೆಗೊಂಡ ದಿನಾಂಕ ೨೧.೧೧.೨೦೧೪ (ಲಕ್ಷಗಳಲ್ಲಿ) ಮತ್ತು ಅಭಿವೃದ್ಧಿ ಕಾರ್ಯಗಳ ವಿವರ

ಕ್ರ.ಸಂ.	ಕಾರ್ಯಕ್ರಮಗಳ ವಿವರ	ನಿಗದಿಪಡಿಸಿದ ಅನುದಾನ		ಹಿಂದಿನ ತಿಂಗಳ ವರೆಗೆ		ಈ ತಿಂಗಳ ಖರ್ಚು		ಒಟ್ಟು ಖರ್ಚು		ಉಳಿಕೆ ಅನುದಾನ
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
೧	ಮನೆಗಳ ದುರಸ್ತಿ (ಗರಿಷ್ಟ ರೂ.೨೫೦೦೦.೦೦) ೧೦೦ ಮನೆ	೨೫.೦೦	೧೦೦	೨೩.೭೫	೯೫	೦	೦	೨೩.೭೫	೯೫	೧.೨೫
೨	ರಸ್ತೆ ಮತ್ತು ಚರಂಡಿಗಳ ನಿರ್ಮಾಣ	೧೧೧.೫೦	೧೪	೯೯.೭೫	೧೧	೦	೦	೯೯.೭೫	೧೧	೧೧.೭೫
೩	ಸಮುದಾಯ ಭವನ ನಿರ್ಮಾಣ (ಘಟಕವೆಚ್ಚ : ೨೦.೦೦ ಲಕ್ಷ) ೨ ಸಮುದಾಯ ಭವನ	೪೦.೦೦	೨	೦	೦	೦	೦	೦	೦	೪೦
೪	ಸೋಲಾರ್ ಬೀದಿ ದೀಪ (ಯುನಿಟ್ ೧೦೦)	೨೫.೦೦	೧೦೦	೦.೦೦	೦	೦	೦	೦.೦೦	೦	೨೫.೦೦
೫	ಶೈಕ್ಷಣಿಕ ಅಭಿವೃದ್ಧಿ (ಪ್ರೋತ್ಸಾಹಧನ)	೧೭.೫೦	೨೦೦	೦.೦೦	೦	೭.೮೦	೯೪	೭.೮೦	೯೪	೯.೭೦
೬	ಸ್ವ ಉದ್ಯೋಗ (ಟೈಲರಿಂಗ್, ಕಂಪ್ಯೂಟರ್ ತರಬೇತಿ, ೩ ಮತ್ತು ೪ ಚಕ್ರ ವಾಹನ ಹಾಗೂ ಭಾರಿ ವಾಹನ ಚಾಲನಾ ತರಬೇತಿ, ಇತರೆ ತರಬೇತಿ)	೮.೦೦	೨೪೦	೦	೦	೦	೦	೦	೦	೮.೦೦
	ಒಟ್ಟು	೨೨೭.೦೦	೬೫೬	೧೨೩.೫೦	೧೦೬	೭.೮೦	೯೪	೧೩೧.೩೦	೨೦೦	೯೫.೭೦

೨೦೧೩-೧೪ನೇ ಸಾಲಿನಲ್ಲಿ ಮಲೆಕುಡಿಯ ಸಮುದಾಯದ ವಿಶೇಷ ಅಭಿವೃದ್ಧಿ ಯೋಜನೆಯಡಿ ವಿವಿಧ ಕಾಮಗಾರಿಗಳನ್ನು ಹಮ್ಮಿಕೊಳ್ಳಲು ೨೨೭/- ಲಕ್ಷ ರೂ.ಗಳಿಗೆ ಅನುದಾನವನ್ನು ಬಿಡುಗಡೆ ಮಾಡಿದೆ. ಆದರೆ ಆ ಅನದಾನದಲ್ಲಿ ೯೫.೭೦/- ಲಕ್ಷ ರೂ.ಗಳು ಬಳಕೆಯಾಗದೇ ಉಳಿದಿರುವುದನ್ನು ಗಮನಿಸಿದಾಗ, ಮಲೆಕುಡಿಯರಿಗಾಗಿ ರೂಪಿಸಿರುವ ಅಭಿವೃದ್ಧಿ ನಿಧಾನಗತಿಯಲ್ಲಿ ಸಾಗುತ್ತಿದೆ ಎಂದು ಹೇಳಬಹುದು. ಇದರಿಂದ ನಿರೀಕ್ಷಿತ ಪ್ರಮಾಣದ ಗುರಿ ಮುಟ್ಟಲು ಬಹಳ ಕಾಲಾವಕಾಶ ಬೇಕಾಗುತ್ತದೆ ಎಂದು ಭಾವಿಸಬೇಕಾಗುತ್ತದೆ.

ಮಲೆಕುಡಿಯರ ವಸತಿ ವ್ಯವಸ್ಥೆ:


೨೦೧೩-೧೪ನೇ ಸಾಲಿನಲ್ಲಿ ಮಲೆಕುಡಿಯರ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಲೆಕುಡಿಯರ ಹಳೆಯ ಮತ್ತು ಹಾಳಾಗಿರುವ ಮನೆಗಳ ದುರಸ್ತಿಗಾಗಿ ಪ್ರತಿ ಫಲಾನುಭವಿಗೆ ರೂ. ೨೫,೦೦೦/-ಗಳಂತೆ ಒಟ್ಟು ೯೫ ಫಲಾನುಭವಿಗಳಿಗೆ, ಒಟ್ಟು ೨೫ /- ಲಕ್ಷ ರೂ.ಗಳನ್ನು ನಿಗದಿ ಪಡಿಸಿ ಅದರ ಅನುಮೋದನೆಯನ್ನು ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಂದ ಪಡೆದು, ೨೦೧೩-೧೪ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ೯೫ ಮಲೆಕುಡಿಯರ ಫಲಾನುಭವಿಗಳು ಈ ಯೋಜನೆಯಲ್ಲಿ ಪ್ರಯೋಜನೆ ಪಡೆದುಕೊಂಡಿದ್ದಾರೆ.

೩.೩.೫. ೩. ಮಲೆಕುಡಿಯ ಸಮುದಾಯ ೨೦೧೩-೧೪ ನೇ ಸಾಲಿನಲ್ಲಿ ಮನೆಗಳ ದುರಸ್ತಿ ಯೋಜನೆಯಲ್ಲಿ ಪ್ರಯೋಜನೆ ಪಡೆದವರ ತಾಲೂಕಾವಾರು ವಿವರಗಳು

ಕ್ರಸಂ	ತಾಲೂಕಿನ ಹೆಸರು	ಫಲಾನುಭವಿಗಳ ಸಂಖ್ಯೆ	ಒಟ್ಟು ವೆಚ್ಚ
೧	ಮಂಗಳೂರು	೦೦	೦.೦೦
೨	ಬಂಟ್ವಾಳ	೧೦	೨.೫೦
೩	ಪುತ್ತೂರು	೧೦	೨.೫೦
೪	ಸುಳ್ಯ	೧೫	೩.೭೫
೫	ಬೆಳ್ತಂಗಡಿ	೬೦	೧೫.೦೦
	ಒಟ್ಟು	೯೫	೨೩.೭೫



(ಛಾಯಾ ಚಿತ್ರ ಐ.ಟಿ.ಡಿ.ಪಿ) ಮನೆ ದುರಸ್ತಿ ಯೋಜನೆಯಲ್ಲಿ ಆಯ್ಕೆಯಾದ ಮಲೆಕುಡಿಯರ ಫಲಾನುಭವಿ



(ಛಾಯಾ ಚಿತ್ರ ಐ.ಟಿ.ಡಿ.ಪಿ) ಮನೆ ದುರಸ್ತಿ ಯೋಜನೆಯಲ್ಲಿ ಆಯ್ಕೆಯಾದ ಮಲೆಕುಡಿಯರ ಫಲಾನುಭವಿ

೩.೩.೫. ೪. ಮಲೆಕುಡಿಯರು ವಾಸಸುತ್ತಿರುವ ಪ್ರದೇಶಗಳ ಮೂಲಭೂತ ಸೌಲಭ್ಯಗಳ ವಿವರ:


೨೦೧೩-೧೪ ನೇ ಸಾಲಿನಲ್ಲಿ ಮಲೆಕುಡಿಯರ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಲೆಕುಡಿಯರು ವಾಸಿಸುತ್ತಿರುವ ೧೪ ಪ್ರದೇಶಗಳಲ್ಲಿ ರಸ್ತೆ, ಒಳಚರಂಡಿ, ಕಾಂಕ್ರೇಟ ರಸ್ತೆ ಮುಂತಾದ ಸೌಲಭ್ಯಗಳಿಗಾಗಿ ಒಟ್ಟು ೧೧೧.೫೦ /- ಲಕ್ಷ ರೂಗಳನ್ನು ನಿಗದಿ ಪಡಿಸಿದ್ದು ಸದರಿ ಕಾಮಗಾರಿಗಳನ್ನು ೧೧೧.೫೦/- ಲಕ್ಷ ರೂಗಳಲ್ಲಿ ಪೂರ್ಣಗೊಳಿಸಿದ ವಿವರ

೩.೩.೫. ೫. ನಿರ್ಮಿತಿ ಕೇಂದ್ರದ ವತಿಯಿಂದ ಮಲೆಕುಡಿಯರ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳ ಪ್ರಗತಿ ವಿವರ

ಆಗಸ್ಟ್ ೨೦೧೫							
ಕ್ರ ಸಂ.	ತಾಲೂಕು	ಒಟ್ಟು ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಮುಗಿದ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಪ್ರಾರಂಭಿಸ ಬೇಕಾಗಿರುವ ಕಾಮಗಾರಿಗಳು	ಈವರೆಗಿನ ಖರ್ಚು
೧	ಮಂಗಳೂರು	೦	೦.೦೦	೦	೦	೦	೦.೦೦
೨	ಬಂಟ್ವಾಳ	೨	೧೨.೦೦	೧	೧	೦	೯.೦೦
೩	ಪುತ್ತೂರು	೨	೧೨.೦೦	೨	೦	೦	೧೨.೦೦
೪	ಸುಳ್ಯ	೪	೩೦.೦೦	೪	೦	೦	೩೦.೦೦
೫	ಬೆಳ್ತಂಗಡಿ	೬	೫೭.೫೦	೪	೨	೦	೪೮.೨೫
	ಒಟ್ಟು	೧೪	೧೧.೫೦	೧೧	೩	೦	೯೯.೨೫

೩.೩.೫. ೬. ಮಲೆಕುಡಿಯ ಸಮುದಾಯದ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ,ಚರಂಡಿ, ಕಿರುಸೇತುವೆ, ಮೋರಿ ಇತ್ಯಾದಿ ಕಾಮಗಾರಿಗಳನ್ನು ಕೈಕೊಳ್ಳಲು ಅನುಮೋದನೆಯಾಗಬೇಕಾದ ಅನುದಾನದ ವಿವರ

ಕ್ರ. ಸಂ.	ತಾಲೂಕು	ಕಾಲನಿಯ ಹೆಸರು	ರಸ್ತೆ ಕಾಂಕ್ರೀಟೀಕರಣ/ಕಿರುಸೇತುವೆ/ಚರಂಡಿ/ಮೋರಿ ರಚಿಸಲು ವಿವರ	ಕಿ.ಮೀ	ಬೇಕಾಗುವ ಅಂದಾಜು ಮೊತ್ತ ('ರೂ ಲಕ್ಷಗಳಲ್ಲಿ)
೧	ಬೆಳ್ತಂಗಡಿ	ಕೊಲೊಡಿ, ನೆರಿಯ ಗ್ರಾಮ ಪಂಚಾಯತ್	೧.ಕೊಲೊಡಿ ಪ.ಪಂ.ಕಾಲನಿಯ ಪಿಲತ್ತಕಜೆ ನಾಗನಕಟ್ಟೆ ಬಳಿ ಕಿರು ಸೇತುವೆ		೬೫.೦೦
			೨.ಚಾಮುಂಡೇಶ್ವರಿ ದೇವಸ್ಥಾನ ಬಳಿ ಸೇತುವೆ ನಿರ್ಮಾಣ		೯೫.೦೦
			೩.ಮಾಪಲಾಜೆ ಎಂಬಲ್ಲಿ ಕಿರು ಸೇತುವೆ ನಿರ್ಮಾಣ		೩೫.೦೦
೨		ಶಿಶಿಲ ಗ್ರಾಮ ಪಂಚಾಯತ್	೧.ಗುಡ್ಡೆ ತೋಟದಿಂದ ವೈಕುಂಟಪುರ ಎಳ್ಳುಮಜಲು ವರೆಗೆ ರಸ್ತೆ ಅಭಿವೃದ್ಧಿ	೪	೧೦೦.೦೦
			೨.ಗುಡ್ಡೆತೋಟ ಗಂಗು ಹೆಂಗ್ಸು ಮನೆ ಪಕ್ಕ ಕಿರುಸೇತುವೆ ನಿರ್ಮಾಣ		೨೦.೦೦
			೩.ಮೀನಗುಂಡಿ ಎಂಬಲ್ಲಿ ಕಿರುಸೇತುವೆ ನಿರ್ಮಾಣ		೨೫.೦೦
			೪.ಪೇರಿಕೆ ಎಂಬಲ್ಲಿ ಕಿರು ಸೇತುವೆ ನಿರ್ಮಾಣ		೨೫.೦೦
೩		ನಿಡ್ಲೆ ಗ್ರಾಮ ಪಂಚಾಯತ್	೧.ಜನಾರ್ಧನ ಮಲೆಕುಡಿಯ ಮನೆಯಿಂದ ಕೈರೋಳಿವರೆಗೆ ರಸ್ತೆ ಅಭಿವೃದ್ಧಿ (ಕಾಂಕ್ರೀಟೀಕರಣ)	೦.೫	೩೨.೦೦
೪		ನಾರಾವಿ	೧.ಹೊಳೆಹೊದ್ದುವಿನಿಂದ ಅಡ್ಕರಪಲ್ಕೆ ನೂಜೋಡಿ ಕಾಲನಿಗೆ ಕಾಂಕ್ರೀಟೀಕರಣ	೮೭೫ಮೀ.	೫೦.೦೦
			೨.ನೂಜೋಡಿ ಅಂಗನವಾಡಿಯಿಂದ ಪಿಲಿಯೊಟ್ಟು ಶ್ರೀಧರ ಮಲೆಕುಡಿಯ ಮನೆತನಕ ೧.೦೦ಕಿ.ಮೀ. ಡಾಮರೀಕರಣ	೧ ಕಿ.ಮೀ.	೨೫.೦೦
			೩.ನಾರಾವಿ ಆಶ್ರಮ ಶಾಲೆಯಿಂದ ಕುಕ್ಕಾಜೆ ಕ್ರಾಸ್ ವರೆಗೆ ೨೦೦ಮೀ. ಡಾಮರೀಕರಣ	೨೦೦ಮೀ.	೧೩.೫೦
			೪.ಫಾರೆಸ್ಟ್ ಗೇಟನಿಂದ ಅಲಂಬ ಬಸ್‌ಸ್ಟ್ಯಾಂಡ್‌ವರೆಗೆ ರಸ್ತೆ ಅಭಿವೃದ್ಧಿ	೨ಕಿ.ಮೀ.	೫೦.೦೦
			೫.ನಾರಾವಿ ಶಾಲೆಯ ಎದುರುಗಡೆ ೨೪ ಮಲೆಕುಡಿಯ ಕುಟುಂಬಗಳಿಗೆ ಬೋರ್‌ವೆಲ್, ಟ್ಯಾಂಕ್, ಪೈಪ್‌ಲೈನ್ ವಿಸ್ತರಣೆ		೧೦.೦೦
೫	ಸುಳ್ಯ	ಸುಬ್ರಹ್ಮಣ್ಯ ಪಂಚಾಯತ್	೧.ದೇವರಗದ್ದೆ ಕೋಡಿಕಜೆ ಸಂಪರ್ಕ ಮುಳುಗು ಸೇತುವೆ	೧೫.ಮೀ	೨೦.೦೦
			೨.ಮಾನಾಡು ಸೇತುವೆ ಬಳಿ ರಸ್ತೆ ಕಾಂಕ್ರೀಟೀಕರಣ	೩೦೦.ಮೀ	೧೫.೦೦
೬	ಬಂಟ್ವಾಳ	ಕನ್ಯಾನ ಗ್ರಾಮ ಪಂಚಾಯತ್	೧.ಅಕ್ಕರೆಕೋಡಿ ಮಲೆಕುಡಿಯ ಕಾಲನಿ ರಸ್ತೆ ಕಾಂಕ್ರೀಟೀಕರಣ	೩೦೦.ಮೀ	೧೫.೦೦





(ಛಾಯಾ ಚಿತ್ರ ಐ.ಟಿ.ಡಿ.ಪಿ) ರಸ್ತೆ ಮತ್ತು ಚರಂಡಿ ವ್ಯವಸ್ಥೆಯ ಚಿತ್ರಣ

೩.೩.೫. ೬. ಸಮುದಾಯ ಭವನ: ೨೦೧೩-೧೪ ನೇ ಸಾಲಿನಲ್ಲಿ ಮಲೆಕುಡಿಯರ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಲೆಕುಡಿಯರು ವಾಸಿಸುತ್ತಿರುವ ೨ ಸ್ಥಳಗಳಲ್ಲಿ ಸಮುದಾಯ ಭವನಗಳನ್ನು ೪೦/- ಲಕ್ಷ ರೂ.ಗಳಲ್ಲಿ ನಿರ್ಮಿಸಲು ಮಲೆಕುಡಿಯ ಸಮುದಾಯದವರ ವಿಶೇಷ ಅಭಿವೃದ್ಧಿ ಯೋಜನೆಯಲ್ಲಿ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು, ಇವರಿಂದ ಅನುಮೋದನೆ ಪಡೆಯಲಾಗಿತ್ತು. ಬೆಳ್ತಂಗಡಿ ತಾಲೂಕು, ಕೊಯ್ಯೂರು ಗ್ರಾಮದ ಕುಳ್ಳಾಜೆಯ ಮಲೆಕುಡಿಯರ ಕಾಲೋನಿಯಲ್ಲಿ ಸಮುದಾಯ ಭವನ ನಿರ್ಮಿಸಲು ಸಿದ್ಧತೆ ನಡೆಸಲಾಗಿದೆ. ಆದರೆ ಸೂಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಕುಲ್ಕುಂದದ ಮಲೆಕುಡಿಯರ ಕಲೋನಿಯಲ್ಲಿ ಸಮುದಾಯ ಭವನ ನಿರ್ಮಿಸಲು ಸೂಕ್ತ ಸ್ಥಳಾವಕಾಶ ಇಲ್ಲದಿರುವುದರಿಂದ ಸದ್ರಿ ಕಾಮಗಾರಿಯ ಅನುದಾನವನ್ನು ದೇವರಗದ್ದೆ ಮನಾಡುಗೆ ಹೋಗುವ ರಸ್ತೆಯನ್ನು ಕಾಂಕ್ರೀಟೀಕರಣಗೊಳಿಸಲು ಅನುಮತಿ ನೀಡುವಂತೆ ಮಲೆಕುಡಿಯರ ಸಂಘ, ಸುಬ್ರಹ್ಮಣ್ಯ ಗ್ರಾಮ ಇವರು ಕೋರಿಕೆ ಸಲ್ಲಿಸಿರುವುದರಿಂದ ಸಮುದಾಯ ಭವನ ನಿರ್ಮಾಣವನ್ನು ಸ್ಥಗಿತಗೊಳಿಸಲಾಗಿದೆ.

೨೦೧೪-೧೫ನೇ ಸಾಲಿಗೆ ಮಲೆಕುಡಿಯರ ಸಮುದಾಯ ಭವನ ನಿರ್ಮಾಣಕ್ಕೆ ಬಂದ ಪ್ರಸ್ತಾವನೆಗಳು

ಆಗಸ್ಟ್ ೨೦೧೫				
ಕ್ರ. ಸಂ.	ತಾಲೂಕು	ಕಾಲನಿಯ ಹೆಸರು	ನಿಗದಿ ಪಡಿಸಿದ ಅನುದಾನ	ಷರಾ
೧	ಬೆಳ್ತಂಗಡಿ	ಶಿಶಿಲ ಗ್ರಾ.ಪಂ ವೈಕುಂಠಪುರ ಮಲೆಕುಡಿಯ ಕಾಲನಿ	೨೦.೦೦ಲಕ್ಷ	ಶಿಶಿಲ ಗ್ರಾಮದ ಸರ್ವೆ ನಂ. ೭೪/೧ಪಿ೧ರಲ್ಲಿ ೦.೧೦ ಎಕ್ರೆಯನ್ನು ನಾರ್ಣ ಮಲೆಕುಡಿಯ ಇವರು ಶ್ರೀ ದುರ್ಗಾಪರಮೇಶ್ವರಿ ಯುವಕ ಮಂಡಲ ರಿ.ಇವರಿಗೆ ಸಮುದಾಯ ಭವನ ಕಟ್ಟಲು ಒಪ್ಪಿಗೆ ನೀಡಿರುತ್ತಾರೆ.
೨		ನಾರಾವಿ ಗ್ರಾ.ಪಂ ನಾರಾವಿ ಪ.ವರ್ಗ ಕಾಲನಿ	೨೦.೦೦ಲಕ್ಷ	ಕುತ್ಲೂರು ಗ್ರಾಮದ ಸರ್ವೆ ನಂ.೨೪೩/೧ಪಿ೧ರಲ್ಲಿ ೨ಎಕ್ರೆ ಜಾಗವನ್ನು ಮಲೆಕುಡಿಯ ಜನಾಂಗದ ಭಜನಾ ಮಂದಿರಕ್ಕಾಗಿ ಕಾದಿರಿಸಲಾಗಿದೆ.

೩.೩.೫. ೮. ಮಲೆಕುಡಿಯರ ಮಕ್ಕಳ ಶೈಕ್ಷಣಿಕ ಯೋಜನೆಗಳು:

೨೦೧೩-೧೪ ನೇ ಸಾಲಿನಲ್ಲಿ ಮಲೆಕುಡಿಯರ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಲೆಕುಡಿಯರ ಮಕ್ಕಳು ೧೦ ನೇ ತರಗತಿ, ದ್ವಿತೀಯ ಪಿ.ಯು.ಸಿ ಮತ್ತು ಪದವಿ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿ/ ವಿದ್ಯಾರ್ಥಿನಿಯರು, ಶೈಕ್ಷಣಿಕ ಅಭಿವೃದ್ಧಿ ಸಾಧಿಸುವ ಸಲುವಾಗಿ ಪ್ರೋತ್ಸಾಹ ಧನ ನೀಡುವ ಯೋಜನೆಯನ್ನು ಹಾಕಿಕೊಳ್ಳಲಾಗಿದ್ದು, ಈ ಯೋಜನೆಗಾಗಿ ೧೭.೫೦/- ಲಕ್ಷ ರೂ. ಗಳನ್ನು ನಿಗದಿಪಡಿಸಿದ್ದು, ೨೦೧೩-೧೪ನೇ ಸಾಲಿನಲ್ಲಿ ಈ ಯೋಜನೆಯಲ್ಲಿ ಪ್ರತಿಫಲ ಪಡೆದ ವಿದ್ಯಾರ್ಥಿ/ ವಿದ್ಯಾರ್ಥಿನಿಯರ ವಿವರಗಳು.

೧೦ನೇ ತರಗತಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಐ.ಟಿ.ಡಿ.ಪಿ. ಪ್ರೋತ್ಸಾಹ ಧನ ಪಡೆದ ಮಲೆಕುಡಿಯ ಸಮುದಾಯದ ವಿದ್ಯಾರ್ಥಿಗಳು **(ಛಾಯಾ ಚಿತ್ರ ಮತ್ತು ಮಾಹಿತಿ ಐ.ಟಿ.ಡಿ.ಪಿ.)**



ಸುಪ್ರೀತಾ ಕೆ, ಬಿನ್ ಗಂಗಯ್ಯ
ಮಲವಂತಿಗೆ ಗ್ರಾಮ (೯೫.೫೨ %)



ಶ್ರಾವ್ಯ ಬಿನ್ ರಾಮಣ್ಣ, ಕುತ್ತಾರು ಪದವು ಮನೆ
ಮುನ್ನೂರು ಗ್ರಾಮ, (೯೧.೩೬ %)

ದ್ವಿತೀಯ ಪಿಯುಸಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಐ.ಟಿ.ಡಿ.ಪಿ. ಪ್ರೋತ್ಸಾಹ ಧನ ಪಡೆದ ಮಲೆಕುಡಿಯ ಸಮುದಾಯದ ವಿದ್ಯಾರ್ಥಿಗಳು



ರೋಹಿತ್ ಬಿನ್ ವೆಂಕಪ್ಪ,
ಕುತ್ಲೂರು ಗ್ರಾಮ (೯೧.೮೩ %)




ಸುಜಾತ ಆರ್, ಬಿನ್ ರಾಮ

ಪದವಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಐ.ಟಿ.ಡಿ.ಪಿ. ಪ್ರೋತ್ಸಾಹ ಧನ ಪಡೆದ ಮಲೆಕುಡಿಯ ಸಮುದಾಯದ ವಿದ್ಯಾರ್ಥಿಗಳು



ದಯಾಳಿನಿ ಕೆ, ಬಿನ್ ನೀಲಯ್ಯ
ಕುಕ್ಕಳ ಗ್ರಾಮ, ಬೆಳ್ತಂಗಡಿ (೮೮.೨೨ %)



ಮೋಹನ್ ಬಿನ್ ಕುಕ್ಕಯ್ಯ ,
ನಿಡ್ಲೆ ಗ್ರಾಮ (೬೬.೭೮%)













೩.೩.೫. ೮.೧. ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ಧನ ನೀಡಿದ ವಿವರ

ಕ್ರ ಸಂ.	ತಾಲೂಕು	ಹತ್ತನೇ ತರಗತಿ		ದ್ವಿತೀಯ ಪಿಯುಸಿ		ಪದವಿ		ಬಿಡುಗಡೆ ಮಾಡಿದ ಮೊತ್ತ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
೧	ಮಂಗಳೂರು	೧	೫೦೦೦	೩	೩೦೦೦೦	೨	೩೦೦೦೦	೬	೬೫೦೦೦
೨	ಬಂಟ್ವಾಳ	೪	೨೦೦೦೦	೩	೩೦೦೦೦	೦	೦	೭	೫೦೦೦೦
೩	ಪುತ್ತೂರು	೧	೫೦೦೦	೦	೦	೦	೦	೧	೫೦೦೦
೪	ಸುಳ್ಯ	೫	೨೫೦೦೦	೬	೬೦೦೦೦	೪	೬೦೦೦೦	೧೫	೧೪೫೦೦೦
೫	ಬೆಳ್ತಂಗಡಿ	೩೧	೧೫೫೦೦೦	೩೦	೩೦೦೦೦೦	೪	೬೦೦೦೦	೬೫	೫೧೫೦೦೦
	ಒಟ್ಟು	೪೨	೨೧೦೦೦೦	೪೨	೪೨೦೦೦೦	೧೦	೧೫೦೦೦೦	೯೪	೭೮೦೦೦೦

ಕ್ರ ಸಂ.	ತಾಲೂಕು	ಹತ್ತನೇ ತರಗತಿ		ದ್ವಿತೀಯ ಪಿಯುಸಿ		ಪದವಿ		ಒಟ್ಟು	
		ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
೧	ಮಂಗಳೂರು	-	೧	-	೩	೧	೧	೧	೫
೨	ಬಂಟ್ವಾಳ	೩	೧	೧	೨	-	-	೪	೩
೩	ಪುತ್ತೂರು	-	೧	-	-	-	-	೧	೦
೪	ಸುಳ್ಯ	೨	೩	-	೬	-	೪	೨	೧೩
೫	ಬೆಳ್ತಂಗಡಿ	೧೧	೨೦	೧೨	೧೮	೨	೨	೨೫	೪೦
	ಒಟ್ಟು	೧೬	೨೬	೧೩	೨೯	೩	೭	೩೩	೬೧

೩.೩.೫.೯. ಪೌಷ್ಟಿಕ ಆಹಾರ: ೨೦೧೫-೧೬ನೇ ಸಾಲಿನಲ್ಲಿ ಮಲೆಕುಡಿಯರ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಲೆಕುಡಿಯರ ೧೧೭೦ ಕುಟುಂಬಗಳಿಗೆ ಪ್ರತಿ ತಿಂಗಳು ಈ ಕೆಳಗೆ ನೀಡಿರುವ ಟೇಬಲ್‌ನಲ್ಲಿರುವಂತೆ ಆಹಾರ ಧಾನ್ಯಗಳನ್ನು ನೀಡಲಾಗುತ್ತಿದೆ.

೩.೩.೫.೯.೧. ಐ.ಟಿ.ಡಿ.ಪಿಯಿಂದ ಮಲೆಕುಡಿಯರಿಗೆ ಪ್ರತಿ ತಿಂಗಳು ನೀಡುತ್ತಿರುವ ಪೌಷ್ಟಿಕ ಆಹಾರದ ವಿವರಗಳು (೨೦೧೫-೧೬ ನೇ ಸಾಲಿನಿಂದ)

ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ನೀಡಿದ ವಿವರ						ಸೆಪ್ಟೆಂಬರ್ ತಿಂಗಳಿಂದ ಡಿಸೆಂಬರ್ ವರೆಗೆ ಬದಲಾಯಿಸಿ ನೀಡುತ್ತಿರುವ ವಿವರ			
ಕ್ರ.ಸಂ	ಒಟ್ಟು ಮಲೆಕುಡಿಯ ಕುಟುಂಬಗಳು	ಪೌಷ್ಟಿಕ ಆಹಾರ ಸಾಮಾಗ್ರಿಗಳು	ಪರಿಮಾಣ	ದರ	ಮೊಬಲಗು	ಪೌಷ್ಟಿಕ ಆಹಾರ ಸಾಮಾಗ್ರಿಗಳು	ಪರಿಮಾಣ	ದರ	ಮೊಬಲಗು
೧	೧೧೭೦	ಕುಚ್ಚಲು ಅಕ್ಕಿ	೧೫ ಕೆ.ಜಿ	೩೩.೦೦	೪೯೫.೦೦	ಕುಚ್ಚಲು ಅಕ್ಕಿ	೨೫ ಕೆ.ಜಿ	೩೩.೦೦	೮೨೫.೦೦
೨		ತೊಗರಿ ಬೇಳೆ	೫ ಕೆ.ಜಿ	೧೨೪.೦೦	೬೨೦.೦೦	ತೊಗರಿ ಬೇಳೆ	೨ ಕೆ.ಜಿ	೧೨೪.೦೦	೨೪೮.೦೦
೩		ಹೆಸರು ಕಾಳು	೫ ಕೆ.ಜಿ	೯೮.೦೦	೪೯೦.೦೦	ಹೆಸರು ಕಾಳು	೩ ಕೆ.ಜಿ	೯೮.೦೦	೨೯೪.೦೦
೪		ಬೆಲ್ಲ	೪ ಕೆ.ಜಿ	೩೯.೫೦	೧೫೮.೦೦	ಬೆಲ್ಲ	೨ ಕೆ.ಜಿ	೩೯.೫೦	೭೯.೦೦
೫		ಪಾಮೋಲಿನ್ ಎಣ್ಣೆ	೨ ಲೀ	೬೮.೦೦	೧೩೬.೦೦	ಪಾಮೋಲಿನ್ ಎಣ್ಣೆ	೨ ಲೀ	೬೮.೦೦	೧೩೬.೦೦
೬		ಮೊಟ್ಟೆ	೯೦	೪೮೦.೦೦	೪೩೨.೦೦	ಮೊಟ್ಟೆ	೬೦	೪.೮೦	೨೮೮.೦೦
						ಸಕ್ಕರೆ	೨ ಕೆ.ಜಿ	೩೪.೦೦	೬೮.೦೦
						ಕೆಂಪು ಕಡ್ಲೆ ಕಾಳು	೨ ಕೆ.ಜಿ	೭೦.೦೦	೧೪೦.೦೦
						ಅಲಸಂದೆ ಕಾಳು	೨ ಕೆ.ಜಿ	೭೨.೦೦	೧೪೪.೦೦
						ರಾಗಿ	೧ ಕೆ.ಜಿ	೨೪.೦೦	೨೪.೦೦
		ಒಟ್ಟು			೨೩೩೧.೦೦				೨೨೪೬.೦೦
		ಸಾಗಾಣಿಕ ವೆಚ್ಚ		೬.೫೦%	೧೫೧.೫೦			೬.೫೦%	೧೪೫.೯೯
		ಅಂತೂ ಒಟ್ಟು			೨೪೮೨.೫೦				೨೩೯೧.೯೯

೩.೩.೫.೧೦. ಮಲೆಕುಡಿಯರ ವಿಶೇಷ ಅಭಿವೃದ್ಧಿ ಯೋಜನೆಯ ಅನುದಾನದ ಹಂಚಿಕೆ: ವಿವರ:

೨೦೧೪-೧೫ನೇ ಸಾಲಿನ ಪ.ಪಂಗಡ ಉಪಯೋಜನೆಯಡಿ ಕ್ರೋಢೀಕರಿಸಿದ ಅನುದಾನದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಪಂಗಡವಾದ ಮಲೆಕುಡಿಯ ಸಮುದಾಯದವರಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ.೨೨೭.೦೦ಲಕ್ಷ ಅನುದಾನ ನಿಗದಿ ಪಡಿಸಲಾಗಿದ್ದು, ಈ ಕೆಳಗಿನಂತೆ ಕಾರ್ಯಕ್ರಮವಾರು ಅನುದಾನವನ್ನು ಈ ಕೆಳಗಿನಂತೆ ಹಂಚಿಕೆ ಮಾಡಲಾಗಿದೆ.

ಮಲೆಕುಡಿಯ ಸಮುದಾಯದ ವಿಶೇಷ ಅಭಿವೃದ್ಧಿ ಯೋಜನೆಯ ಅನುದಾನದ ಹಂಚಿಕೆ ವಿವರಗಳು

ಕ್ರ. ಸಂ.	ಕಾರ್ಯಕ್ರಮದ ವಿವರ	ನಿಗದಿಪಡಿಸಿದ ಅನುದಾನ (ರೂ.ಲಕ್ಷಗಳಲ್ಲಿ)	
		ಭೌತಿಕ	ಆರ್ಥಿಕ
೧	ಮನೆ ದುರಸ್ಥಿ	೪೧೭	೧೦೪.೨೫
೨	ಹೈನುಗಾರಿಕೆ	೫೦	೨೦.೦೦
೩	ಸ್ವಯಂ ಉದ್ಯೋಗ (ಪ್ರವಾಸಿ ಕಾರು)	೭	೧೭.೫೦
೪	ಸ್ಪ್ರಿಂಕ್ಲರ್ ಸೆಟ್	೨೧	೫.೨೫
೫	ವಿದ್ಯುತ್ ಪಂಪ್‌ಸೆಟ್	೧೬	೩.೨೦
೬	ಸಮುದಾಯ ಭವನ ನಿರ್ಮಾಣ	೨	೪೦.೦೦
೭	ರಸ್ತೆ ಮತ್ತು ಚರಂಡಿಗಳ ನಿರ್ಮಾಣ	೧	೩೬.೮೦
	ಒಟ್ಟು	೫೧೪	೨೨೭.೦೦

೩.೩.೫.೧೧. ಮಲೆಕುಡಿಯರು ವಿಶೇಷ ಅಭಿವೃದ್ಧಿ ಯೋಜನೆಯಡಿ ವಿವಿಧ ಸೌಲಭ್ಯಗಳನ್ನು ಪಡೆಯಲು ಅರ್ಜಿ ಸಲ್ಲಿಸಿದವರ ವಿವರಗಳು: (೨೦೧೪-೧೫ ನೇ ಸಾಲಿನಲ್ಲಿ)

ಕ್ರ ಸಂ	ಕಾರ್ಯಕ್ರಮ	ಸಾಮಾನ್ಯ ಬೆಳ್ತಂಗಡಿ ತಾಲೂಕು	ನಿಡ್ಲೆ ಗ್ರಾ.ಪಂ	ಸಾರಾವಿ ಗ್ರಾ.ಪಂ	ಶಿಶಿಲ ಗ್ರಾ.ಪಂ	ನೆರಿಯ ಗ್ರಾ.ಪಂ ಕೋಲೋಡಿ	ಬೆಳ್ತಂಗಡಿ ತಾಲೂಕು ಒಟ್ಟು ಫಲಾನುಭವಿಗಳ ಸಂಖ್ಯೆ	ಸುಳ್ಯ	ಪುತ್ತೂರು	ಬಂಟ್ವಾಳ	ಮಂಗಳೂರು	ಒಟ್ಟು ಫಲಾನುಭವಿಗಳು
೧	ಮನೆ ದುರಸ್ಥಿ	೧೮೩	೧೧	೮	೪೪	೧೨	೨೫೮	೧೧೨	೨೫	೧೭	೫	೪೧೭
೨	ಹೈನುಗಾರಿಕೆ	೧೯	೬	೦	೧೬	೧	೪೨	೭	೦	೦	೧	೫೦
೩	ಸ್ವಯಂ ಉದ್ಯೋಗ (ಪ್ರವಾಸಿ ಕಾರು)	೫	೦	೦	೧	೦	೬	೦	೦	೧	೦	೭
೪	ಸ್ಪ್ರಿಂಕ್ಲರ್ ಸೆಟ್	೪	೮	೦	೦	೦	೧೨	೯	೦	೦	೦	೨೧
೫	ವಿದ್ಯುತ್ ಪಂಪ್‌ಸೆಟ್	೭	೦	೦	೦	೧	೮	೮	೦	೦	೦	೧೬
೬	ಸಮುದಾಯ ಭವನ ನಿರ್ಮಾಣ	೧	೦	೧	೦	೦	೨	೦	೦	೦	೦	೨
೭	ರಸ್ತೆ ಮತ್ತು ಚರಂಡಿಗಳ ನಿರ್ಮಾಣ	೦	೦	೦	೦	೧	೧	೦	೦	೦	೦	೧
	ಒಟ್ಟು	೨೧೯	೨೫	೯	೬೧	೧೫	೩೨೯	೧೩೬	೨೫	೧೮	೬	೫೧೪

೩.೩.೫.೧೨. ಮಲೆಕುಡಿಯರು ವಿಶೇಷ ಅಭಿವೃದ್ಧಿ ಯೋಜನೆಯಡಿ ವಿವಿಧ ಸೌಲಭ್ಯಗಳನ್ನು ಪಡೆದವರ ತಾಲೂಕುವಾರು ವಿವರಗಳು (೨೦೧೪-೧೫ನೇ ಸಾಲಿನಲ್ಲಿ)

ಕ್ರ ಸಂ.	ತಾಲೂಕು	ಮಂಗಳೂರು		ಬಂಟ್ವಾಳ		ಪುತ್ತೂರು		ಸುಳ್ಯ		ಬೆಳ್ತಂಗಡಿ		ಒಟ್ಟು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
೧	ಮನೆ ದುರಸ್ಥಿ	೫	೧.೨೫	೧೭	೪.೨೫	೨೫	೬.೨೫	೧೧೨	೨೮.೦೦	೨೫೮	೬೪.೫೦	೪೧೭	೧೦೪.೨೫
೨	ಹೈನುಗಾರಿಕೆ	೧	೦.೪೦	೦	೦.೦೦	೦	೦	೭	೨.೮೦	೪೨	೧೬.೮೦	೫೦	೨೦.೦೦
೩	ಸ್ವಯಂ ಉದ್ಯೋಗ (ಪ್ರವಾಸಿ ಕಾರು)	೦	೦.೦೦	೧	೨.೫೦	೦	೦	೦	೦	೬	೧೫	೭	೧೭.೫೦
೪	ಸ್ಪ್ರಿಂಕ್ಲರ್ ಸೆಟ್	೦	೦	೦	೦	೦	೦	೯	೨.೨೫	೧೨	೩.೦೦	೨೧	೫.೨೫
೫	ವಿದ್ಯುತ್ ಪಂಪ್‌ಸೆಟ್	೦	೦	೦	೦	೦	೦	೮	೧.೬೦	೮	೧.೬೦	೧೬	೩.೨೦
೬	ಸಮುದಾಯ ಭವನ ನಿರ್ಮಾಣ	೦	೦	೦	೦	೦	೦	೦	೦	೨	೪೦.೦೦	೨	೪೦.೦೦
೭	ರಸ್ತೆ ಮತ್ತು ಚರಂಡಿಗಳ ನಿರ್ಮಾಣ	೦	೦	೦	೦	೦	೦	೦	೦	೧	೩೬.೮೦	೧	೩೬.೮೦
	ಒಟ್ಟು	೬	೧.೬೫	೧೮	೬.೭೫	೨೫	೬.೨೫	೧೩೬	೩೪.೬೫	೩೨೯	೧೭೭.೭೦	೫೧೪	೨೨೭.೦೦

೩.೪. ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಉಡುಪಿ ಜಿಲ್ಲೆ

ಉಡುಪಿ ಜಿಲ್ಲೆಯ ಮೂಲನಿವಾಸಿಗಳಾಗಿರುವ ಕೊರಗ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಅತ್ಯುತ್ತಮ ಅಭಿವೃದ್ಧಿಪರ ಯೋಜನೆಗಳನ್ನು ಸರಕಾರ ಅನುಷ್ಠಾನಗೊಳಿಸುತ್ತಿದೆ. ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ವಾಸವಾಗಿರುವ ಈ ಸಮುದಾಯಕ್ಕೆ ಸರಕಾರದ ಸೌಲಭ್ಯಗಳ ಬಗ್ಗೆ ಸೂಕ್ತ ಮಾಹಿತಿಯನ್ನು ನೀಡಿ ಅವರು ಅಭಿವೃದ್ಧಿ ಪಥದತ್ತ ಸಾಗುವಲ್ಲಿ ನಾವೆಲ್ಲರೂ ಶ್ರಮಿಸೋಣ ಎಂಬ ಉದ್ದೇಶ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಇಲಾಖೆಯ ಉದ್ದೇಶ

೩.೪.೧. ಮೂಲನಿವಾಸಿ ಅಭಿವೃದ್ಧಿ ಯೋಜನೆಯಡಿ ಕೊರಗ ಸಮುದಾಯದ ಅಭಿವೃದ್ಧಿಗಾಗಿ ನೀಡಲಾಗುವ ಉಚಿತ ಸೌಲಭ್ಯಗಳ ವಿವರಗಳು:

ವಸತಿ ಸೌಲಭ್ಯ: ಮೂಲನಿವಾಸಿ ಅಭಿವೃದ್ಧಿ ಯೋಜನೆಯಡಿ ಕೊರಗ ಸಮುದಾಯದ ಅರ್ಹ ಫಲಾನುಭವಿಗಳಿಗೆ ವಸತಿ ಸೌಲಭ್ಯಕ್ಕಾಗಿ ಒಂದು ಲಕ್ಷದ ಎಪ್ಪತ್ತೈದು ಸಾವಿರ ಸಹಾಯ ಧನವನ್ನು ನಿಡಲಾಗುವುದು.

ಕುಡಿಯುವ ನೀರು ಮತ್ತು ನೀರಾವರಿ ಸೌಲಭ್ಯ: ಮೂಲನಿವಾಸಿ ಅಭಿವೃದ್ಧಿ ಯೋಜನೆಯಡಿ ಕೊರಗರ ಕಾಲೋನಿಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ನೀಡಲಾಗುವುದು. ಕೊರಗ ಕೃಷಿಕ ಕುಟುಂಬಗಳಿಗೆ ಕೃಷಿ ಅಭಿವೃದ್ಧಿಗಾಗಿ ನೀರಾವರಿ ಸೌಲಭ್ಯವನ್ನು ಒದಗಿಸಲಾಗುವುದು.

ಮೂಲಭೂತ ಸೌಕರ್ಯಗಳು: ಕೊರಗರ ಕಾಲೋನಿಗಳಿಗೆ ಅಗತ್ಯವಿರುವ ಸಮುದಾಯ ಭವನ, ರಸ್ತೆ, ಬೀದಿ ದೀಪ, ಚರಂಡಿ, ಕಾಲುಸಂಕ, ವಿದ್ಯುತ್ ಸಂಪರ್ಕ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ನೀಡಲಾಗುವುದು.

ಪೌಷ್ಠಿಕ ಆಹಾರ ವಿತರಣೆ: ಕೊರಗರ ಆರೋಗ್ಯದ ಗುಣಮಟ್ಟವನ್ನು ಸುಧಾರಿಸುವ ಸಲುವಾಗಿ ಮಳೆಗಾಲದ ಆರು ತಿಂಗಳು ಪ್ರತೀ ಕುಟುಂಬಕ್ಕೆ ಪೌಷ್ಟಿಕ ಆಹಾರವಾದ ಅಕ್ಕಿ, ಹೆಸರುಕಾಳು, ತೊಗರಿಬೇಳೆ, ಬೆಲ್ಲ, ಪಾಮೋಲಿನ್ ಎಣ್ಣೆ ಹಾಗೂ ಮೊಟ್ಟೆಯನ್ನು ವಿತರಿಸಲಾಗುವುದು.

ವೈದ್ಯಕೀಯ ವೆಚ್ಚ ಮರುಪಾವತಿ: ಕೊರಗರು ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ ಅವರ ಪೂರ್ತಿ ಚಿಕಿತ್ಸಾ ವೆಚ್ಚವನ್ನು ಇಲಾಖೆಯಿಂದ ಮರುಪಾವತಿಸಲಾಗುವುದು.

ಆರೋಗ್ಯ ಮಾಹಿತಿ ಕಾರ್ಯಾಗಾರ ಮತ್ತು ಶಿಬಿರಗಳು: ಕೊರಗರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಆರೋಗ್ಯ ಮಾಹಿತಿ ಕಾರ್ಯಾಗಾರ ಮತ್ತು ಆರೋಗ್ಯ ಶಿಬಿರಗಳನ್ನು ಆಯೋಜಿಸಲಾಗುವುದು.

ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಧನ ಸಹಾಯ: ಪದವಿ ಮತ್ತು ಪದವಿ ನಂತರದ ಉನ್ನತ ಶಿಕ್ಷಣವನ್ನು ಪಡೆಯಬಯಸುವ ಕೊರಗ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಪೂರ್ಣ ವೆಚ್ಚವನ್ನು ಇಲಾಖೆಯಿಂದ ಭರಿಸುವುದು.

ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಾಲೆಯಲ್ಲಿ ಅಧ್ಯಯನ ಮಾಡಲು ಧನ ಸಹಾಯ: ೬ನೇ ತರಗತಿಯಿಂದ ಪ್ರತಿಷ್ಠಿತ ಶಾಲೆಗಳಲ್ಲಿ ಅಧ್ಯಯನ ಮಾಡಲು ಇಚ್ಛಿಸುವ ಕೊರಗ ವಿದ್ಯಾರ್ಥಿಗಳ ಪೂರ್ಣ ಶೈಕ್ಷಣಿಕ ವೆಚ್ಚವನ್ನು ಇಲಾಖೆಯಿಂದ ನೀಡುವುದು.

ಸ್ಪೋಕನ್ ಇಂಗ್ಲೀಷ್ ತರಬೇತಿ: ಇಂಗ್ಲೀಷ್ ಭಾಷಾ ಕೌಶಲ್ಯವನ್ನು ಹೆಚ್ಚಿಸುವ ಸಲುವಾಗಿ ಆಸಕ್ತ ಕೊರಗ ವಿದ್ಯಾರ್ಥಿಗಳಿಗೆ ಸ್ಪೋಕನ್ ಇಂಗ್ಲೀಷ್ ತರಬೇತಿ.

ಸೇತುಬಂಧ ಕಾರ್ಯಕ್ರಮ: ಅರ್ಧದಲ್ಲಿ ಶಾಲೆ ಬಿಟ್ಟಿರುವ ಕೊರಗ ವಿದ್ಯಾರ್ಥಿಗಳು ನೇರವಾಗಿ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಪರೀಕ್ಷೆ ಬರೆಯುವ ಸಲುವಾಗಿ ಕೋಚಿಂಗ್ ವ್ಯವಸ್ಥೆ.

ಕಾನೂನು ಮಾಹಿತಿ ಶಿಬಿರಗಳು/ಅಜಲು ನಿಷೇಧ ಮಾಹಿತಿ ಶಿಬಿರಗಳು: ಕಾನೂನಿನ ಬಗ್ಗೆ ಮಾಹಿತಿಯನ್ನು ಒದಗಿಸುವ ಸಲುವಾಗಿ ಕೊರಗರಿಗೆ ಕಾನೂನು ಮಾಹಿತಿ ಕಾರ್ಯಾಗಾರ ಏರ್ಪಡಿಸುವುದು.

ಪೋಷಕರಿಗೆ ಮಾಹಿತಿ ಶಿಬಿರಗಳು: ಕೊರಗರ ಮಕ್ಕಳು ಅರ್ಧದಿಂದ ಶಾಲೆ ಬಿಡದೇ ಇರಲು ಪೋಷಕರಿಗೆ ಮಾಹಿತಿ ಕಾರ್ಯಾಗಾರಗಳನ್ನು ಏರ್ಪಡಿಸುವುದು.

ಕೊರಗ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರ: ಕೊರಗ ವಿದ್ಯಾರ್ಥಿಗಳಲ್ಲಿ ಹುದುಗಿರುವ ಪ್ರತಿಭೆಗಳಿಗೆ ಅವಕಾಶ ನೀಡುವ ಸಲುವಾಗಿ ಬೇಸಿಗೆ ರಜೆಯ ಸಂದರ್ಭದಲ್ಲಿ ನುರಿತ ರಂಗ ನಿರ್ದೇಶಕರಿಂದ ಬೇಸಿಗೆ ಶಿಬಿರಗಳನ್ನು ಆಯೋಜಿಸಲಾಗುತ್ತದೆ.

ಉದ್ಯಮಶೀಲತಾ ತರಬೇತಿ: ಕೊರಗರಿಗೆ ಸ್ವಯಂ-ಉದ್ಯೋಗ ಕೈಗೊಳ್ಳುವ ಸಲುವಾಗಿ ಉದ್ಯಮಶೀಲತಾ ತರಬೇತಿಯನ್ನು ಪ್ರತಿಷ್ಠಿತ ಸಂಸ್ಥೆಗಳ ಮೂಲಕ ನೀಡುವುದು.

ಕೊರಗ ಮಹಿಳಾ ಸ್ವ-ಸಹಾಯ ಸಂಘಗಳಿಗೆ ಸಹಾಯ ಧನ: ಕ್ರಿಯಾಶೀಲವಾಗಿರುವ ಕೊರಗ ಮಹಿಳಾ ಸ್ವ-ಸಹಾಯ ಸಂಘಗಳಿಗೆ ವಿವಿಧ ಉದ್ಯೋಗಗಳನ್ನು ಕೈಗೊಳ್ಳುವ ಸಲುವಾಗಿ ತಲಾ ಒಂದು ಲಕ್ಷದಂತೆ ಸಹಾಯ ಧನವನ್ನು ನೀಡುವುದು.

ವಿದ್ಯಾರ್ಥಿವೇತನ: ಜಿಲ್ಲೆಯ ವಿವಿಧ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಕೊರಗ ವಿದ್ಯಾರ್ಥಿಗಳಿಗೆ/ಪೋಷಕರಿಗೆ ವಿಶೇಷ ಪ್ರೋತ್ಸಾಹ ಧನ ೧ ರಿಂದ ೪ನೇ ತರಗತಿವರೆಗೆ ೧೦೦+೨೦೦=೩೦೦/- ೫ ರಿಂದ ೭ನೇ ತರಗತಿವರೆಗೆ ೧೫೦+೨೦೦=೩೫೦/-, ೮ ರಿಂದ ೧೦ನೇ ತರಗತಿವರೆಗೆ ೨೦೦+೨೦೦=೪೦೦/- ಮೆಟ್ರಿಕ್ ನಂತರದ ತಗತಿಗಳಿಗೆ ೨೫೦+೨೦೦=೪೫೦/- ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ಇದ್ದಲ್ಲದೆ ಸಮವಸ್ತ್ರ, ಲೇಖನ ಸಾಮಾಗ್ರಿಗಳನ್ನು ಒದಗಿಸಲಾಗುತ್ತಿದೆ. ಹಾಗೂ ೭ನೇ ತರಗತಿಯಲ್ಲಿ ಪ್ರಥಮ ಬಾರಿಗೆ ಉತ್ತೀರ್ಣರಾದ ಕೊರಗ ವಿದ್ಯಾರ್ಥಿಗಳಿಗೆ ತಲಾ ೨೫೦೦/- ಹಾಗೂ ೧೦ನೇ ತರಗತಿಯಲ್ಲಿ ಪ್ರಥಮ ಬಾರಿಗೆ ಉತ್ತೀರ್ಣರಾದ ಕೊರಗ ವಿದ್ಯಾರ್ಥಿಗಳಿಗೆ ತಲಾ ೫೦೦೦/- ದಂತೆ ಸಹಾಯಧನ ನೀಡಲಾಗುತ್ತಿದೆ. ಗ್ರಾಮ ಪಂಚಾಯತ್/ ನಗರ ಸಭೆ/ ಪುರಸಭೆ/ ಪಟ್ಟಣ ಪಂಚಾಯತ್‌ಗಳು ಅರ್ಹ ಫಲಾನುಭವಿಗಳನ್ನು ಗುರುತಿಸಿ ಈ ಎಲ್ಲಾ ಸೌಲಭ್ಯಗಳನ್ನು ಕೊರಗ ಸಮುದಾಯದವರು ಪಡೆದು ಆರ್ಥಿಕ ಉನ್ನತಿಯನ್ನು ಸಾಧಿಸುವಲ್ಲಿ ಹೆಚ್ಚಿನ ಪ್ರೋತ್ಸಾಹವನ್ನು ನೀಡಬೇಕು.

ಈ ಮೇಲಿನ ಉಚಿತ ಸೌಲಭ್ಯಗಳನ್ನು ಪಡೆಯಲು ಸಂಪರ್ಕಿಸಬಹುದಾದ ಅಧಿಕಾರಿಗಳು ಮತ್ತು ಕಛೇರಿಯ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳ ವಿವರಗಳು

೧.ಯೋಜನಾ ಸಮನ್ವಯಾಧಿಕಾರಿ,ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ(ಐ.ಟಿ.ಡಿ.ಪಿ) ಕಾಡಬೆಟ್ಟು, ಉಡುಪಿ, ಉಡುಪಿ ಜಿಲ್ಲೆ ೦೮೨೦-೨೫೭೪೪೮೧೪

೨. ತಾಲೂಕು ಸಮಾಜ ಕಲ್ಯಾಣ ಅಧಿಕಾರಿ, ಉಡುಪಿ,ತಾಲೂಕು ಪಂಚಾಯತ್ ಕಛೇರಿ ಆವರಣ, ಉಡುಪಿ, ಉಡುಪಿ ತಾಲೂಕು ೦೮೨೦-೨೫೨೮೮೮೪

೩. ತಾಲೂಕು ಸಮಾಜ ಕಲ್ಯಾಣ ಅಧಿಕಾರಿ, ಕುಂದಾಪುರ

ತಾಲೂಕು ಪಂಚಾಯತ್ ಕಛೇರಿ, ಕುಂದಾಪುರ, .ಕುಂದಾಪುರ ತಾಲೂಕು, ೦೮೨೫೪-೨೩೪೬೭೯

೪.ತಾಲೂಕು ಸಮಾಜ ಕಲ್ಯಾಣ ಅಧಿಕಾರಿ, ಕಾರ್ಕಳ ಬಂಡೀಮಠ ಆಶ್ರಮ ಶಾಲೆಯ ಬಳಿ, ಕಾರ್ಕಳ, ಕಾರ್ಕಳ ತಾಲೂಕು ೦೮೨೫೮-೨೩೨೧೩೩

೩.೪.೨. ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಕಛೇರಿ ಉಡುಪಿಯ ವಿಶೇಷ ಶೈಕ್ಷಣಿಕ ಕಾರ್ಯಕ್ರಮಗಳು

೩.೪.೨.೧. ಕುಂಭಾಸಿಯ ಮಕ್ಕಳ ಮನೆ: ಕೇಂದ್ರ ಸರಕಾರದ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕುಂಭಾಸಿಯಲ್ಲಿರುವ "ಮಕ್ಕಳ ಮನೆ" ಎಂಬುದು ಕೊರಗ ಮಕ್ಕಳಿಗಾಗಿಯೇ ನಿರ್ಮಿಸಲಾದ ವಿಶೇಷ ವಸತಿ ಶಾಲೆ. ಕುಂದಾಪುರ ತಾಲೂಕಿನ ಕುಂಭಾಸಿ ಆನೆಗುಡ್ಡೆ ಶ್ರೀ ವಿನಾಯಕ ದೇವಸ್ಥಾನಕ್ಕೆ ತೆರಳುವ ಮಾರ್ಗದಲ್ಲಿ ಸಿಗುವ ಗ್ರಾಮ ಪಂಚಾಯತ್ ಹಿಂಭಾಗದಲ್ಲಿ ಅಂಬೇಡ್ಕರ್ ಸಭಾ ಭವನದಲ್ಲಿ ಈ "ಮಕ್ಕಳ ಮನೆ" ಕಾರ್ಯನಿರ್ವಹಿಸುತ್ತಿದೆ, ಈ "ಮಕ್ಕಳ ಮನೆ" ಎಂಬ ಕೊರಗರ ವಿಶೇಷ ವಸತಿ ಶಾಲೆಯು ಕೊರಗ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಕೈಗೊಂಡ ಒಂದು ಪ್ರಯತ್ನ ಮತ್ತು ಪ್ರಯೋಗ ಎಂದರೆ ತಪ್ಪಾಗಲಾರದು. ಕೊರಗರು ವಾಸ ಮಾಡುವ ಜಿಲ್ಲೆಗಳಲ್ಲಿ ಇಂತಹ ಶಾಲೆ ಪ್ರಾರಂಭಿಸಿದ್ದು ಇದು ಮೊದಲ ಪ್ರಯತ್ನ. ಹಾಗೂ ಈ ಯೋಜನೆ ಯಶಸ್ಸು ಕಂಡಲ್ಲಿ ಮುಂದೆ ಉಳಿದ ಜಿಲ್ಲೆಗಳಿಗೆ ಜೊತೆಗೆ ಉಳಿದ ಬುಡಕಟ್ಟುಗಳಿಗೂ ವಿಸ್ತರಿಸುವ ಸಾಧ್ಯತೆ ಇದೆಯೆಂದು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯ ಅಧಿಕಾರಿಗಳ ಅಭಿಪ್ರಾಯ. ಕೊರಗ ಮಕ್ಕಳಲ್ಲಿ ಶಾಲೆಗೆ ಹೋಗದ ಮತ್ತು ಶಾಲೆಯನ್ನು ಅರ್ಧದಲ್ಲಿ ಬಿಟ್ಟವರ ಸಂಖ್ಯೆ ಹೆಚ್ಚಾಗಿದೆ. ಇದಕ್ಕೆ ಕಾರಣಗಳು ಹಲವಾರಿದ್ದರೂ ಕೊರಗ ಮಕ್ಕಳ ನಾಚಿಕೆ ಸ್ವಭಾವ ಮತ್ತು ಇತರ ಮಕ್ಕಳ ಜೊತೆ ಬೆರೆಯದ ಕಾರಣ ಇಂತಹ ಕೊರಗ ಮಕ್ಕಳಿಗೆ ಈ ವಿಶೇಷ ವಸತಿ ಶಾಲೆಯ ವ್ಯವಸ್ಥೆಯನ್ನು ಮಾಡಲಾಗಿದೆ.

ಅತ್ಯಂತ ಕೆಳಸ್ತರದಲ್ಲಿರುವ ಕೊರಗ ಸಮುದಾಯದ ಕುಟುಂಬಗಳ ಮಕ್ಕಳಿಗೆ ಮಾನಸಿಕ ಹಾಗೂ ಭೌದ್ಧಿಕ ಆತ್ಮಸ್ಥೈರ್ಯ ತುಂಬಿ, ವಿಭಿನ್ನ ಪರಿಕಲ್ಪನೆಯಲ್ಲಿ ತರಬೇತಿ ನೀಡಿ, ಕೊರಗ ಮಕ್ಕಳಲ್ಲಿ ಶೈಕ್ಷಣಿಕ ಅಭಿವೃದ್ಧಿಯನ್ನು ಸಾಧಿಸುವುದು ಈ "ಮಕ್ಕಳ ಮನೆ" ವಸತಿ ಶಾಲೆಯ ಉದ್ದೇಶ. ಕಳೆದ ಒಂದು ವರ್ಷದಿಂದ ಸ್ಥಳೀಯ ಕೊರಗ ಕುಟುಂಬಗಳ ಸುಮಾರು ೧೫ ವಿದ್ಯಾರ್ಥಿಗಳು ಇಲ್ಲಿ ಸೃಜನಾತ್ಮಕವಾಗಿ ಕಲಿಯುತ್ತಿದ್ದಾರೆ. ಕೊರಗ ಸಮುದಾಯದ ಮುಖಂಡರಾದ ಗಣೇಶ್ ಕೆದೂರು, ಗಣೇಶ್ ಬಾರ್ಕೂರು ಹಾಗೂ ಶಿಕ್ಷಕಿ ವಿನಿತಾ ಇವರು ವಿವಿಧ ಜವಾಬ್ದಾರಿಗಳನ್ನು ಹಂಚಿಕೊಳ್ಳುತ್ತಾ, ಈ ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ. ಈ ಶಾಲೆಯಲ್ಲಿ ಕೊರಗ ಮಕ್ಕಳಿಗೆ ಕಲಿಸುವ ಶಿಕ್ಷಣ ವಿಧಾನವು ಇತರ ಸರ್ಕಾರಿ ಶಾಲೆಗಳಂತೆ ಇರದೆ, ಸಂಪೂರ್ಣ ಭಿನ್ನವಾಗಿದ್ದು ಮುಖ್ಯವಾಗಿ ಕೊರಗ ಸಮುದಾಯದ ಹಿನ್ನೆಲೆ, ಸಂಸ್ಕೃತಿ, ಆಚರಣೆ, ಆಸಕ್ತಿಯ ಜೊತೆಗೆ ಸಮಾಜದ ಮುಖ್ಯವಾಹಿನಿಯ ಶಿಕ್ಷಣ ಪದ್ಧತಿಯನ್ನು ಮಕ್ಕಳಿಗೆ ಪೂರಕವಾಗಿ ಬೋಧಿಸಲಾಗುತ್ತದೆ. ಸಂಸ್ಕಾರಯುತ ಜೀವನಕ್ಕೆ ಪೂರಕವಾಗಿ ಸಾಂಸ್ಕೃತಿಕ ಚಟುವಟಿಕೆಯೊಂದಿಗೆ, ಕೊರಗ ಸಮುದಾಯದ ಭಾಷೆ, ಕಲೆ, ಸಂಸ್ಕೃತಿ ಹಾಗೂ ಕೊರಗರ ಕುಲಕಸುಬನ್ನು ಅತ್ಯಂತ ಪರಿಣಾಮಕಾರಿಯಾಗಿ ಇಲ್ಲಿ ಬೋಧಿಸಲಾಗುತ್ತಿದೆ. ಪ್ರತಿ ರವಿವಾರ ಉಡುಪಿ ಯಕ್ಷಗಾನ ಕಲಾಕೇಂದ್ರದ ಸಂಜೀವ ಸುವರ್ಣ ಅವರು ವಿದ್ಯಾರ್ಥಿಗಳಿಗೆ ಯಕ್ಷಗಾನ ತರಬೇತಿ ನೀಡುತ್ತಿದ್ದಾರೆ. ಜೊತೆಗೆ ಲಕ್ಷ್ಮಣ ಬೈಂದೂರು ಮತ್ತು ಶೇಖರ ಮರವಂತೆ ಇವರು ವಿದ್ಯಾರ್ಥಿಗಳಿಗೆ ನೃತ್ಯ, ನಾಟಕ, ಅಭಿನಯ, ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ವಿಶೇಷ ತರಬೇತಿಯನ್ನು ನೀಡುತ್ತಿದ್ದು, ಮಕ್ಕಳು ಕೂಡು ತುಂಬಾ ಉತ್ಸಾಹದಿಂದ ಪಾಲ್ಗೊಂಡು ಕಲಿಯುತ್ತಿದ್ದಾರೆ. ಇನ್ನು ಈ ಶಾಲೆಯಲ್ಲಿ ಕೊರಗ ಮಕ್ಕಳ ಆರೋಗ್ಯದ ಕಡೆಗೂ ಹೆಚ್ಚಿನ ಗಮನ ನೀಡಲಾಗುತ್ತಿದೆ. ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಂದ ತಿಂಗಳಿಗೊಮ್ಮೆ ಮಕ್ಕಳ ಆರೋಗ್ಯ ತಪಾಸಣೆ ನಡೆಯುತ್ತಿದ್ದು, ಅನಾರೋಗ್ಯ ಪೀಡಿತ ಮಕ್ಕಳಿಗೆ ಸೂಕ್ತ ಚಿಕಿತ್ಸೆಯನ್ನು ನೀಡುವುದರ ಜೊತೆಗೆ, ಮಕ್ಕಳಿಗೆ ಆರೋಗ್ಯ ಶಿಕ್ಷಣವನ್ನು ಭೋದಿಸುತ್ತಾ ಆರೋಗ್ಯ ಅರಿವನ್ನು ಮೂಡಿಸಲಾಗುತ್ತಿದೆ. ಈ ಶಾಲೆಯಲ್ಲಿ ಮಕ್ಕಳ ಆಹಾರದ ಕಡೆಗೂ ವಿಶೇಷ ಕಾಳಜಿ ವಹಿಸುತ್ತಿದ್ದು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯ ಅಧಿಕಾರಿಗಳ ನಿರ್ದೇಶನದಂತೆ, ಅಡುಗೆ ಭಟ್ಟರಾದ ಮಹಾಬಲರವರು ಮಕ್ಕಳಿಗೆ ಪ್ರತಿದಿನವೂ ಪೌಷ್ಟಿಕಾಂಶಯುಕ್ತ ವಿವಿಧ ಖಾದ್ಯಗಳನ್ನು ಮಾಡಿ ಬಡಿಸುತ್ತಾರೆ. ಒಟ್ಟಾರೆ ಕೊರಗ ಮಕ್ಕಳು ಯಾವುದೇ ಸೌಲಭ್ಯಗಳಿಂದ ವಂಚಿತರಾಗದಂತೆ ಇಲ್ಲಿ ನೋಡಿಕೊಳ್ಳಲಾಗುತ್ತದೆ. ಈ ಎಲ್ಲಾ ಪ್ರಯತ್ನಗಳ ಫಲವಾಗಿ ಸ್ಥಳೀಯ ೪ ಕೊರಗ ವಿದ್ಯಾರ್ಥಿಗಳು

ಮೊದಲ ಬಾರಿಗೆ ಹೈಸ್ಕೂಲ್ ಶಿಕ್ಷಣವನ್ನು ಪಡೆಯುತ್ತಿದ್ದಾರೆ ಮತ್ತು ಉಳಿದ ವಿದ್ಯಾರ್ಥಿಗಳು ಶಿಕ್ಷಣದ ಕಡೆಗೆ ಹೆಚ್ಚಿನ ಆಸಕ್ತಿ ವಹಿಸುತ್ತಿರುವುದು ಕಂಡುಬಂದಿದೆ.

೨೦೧೧-೧೨ ನೇ ಸಾಲಿನಲ್ಲಿ ಮೂಲನಿವಾಸಿ ಅಭಿವೃದ್ಧಿ ಯೋಜನೆಯಡಿ ಈ ಶಾಲೆಗೆ ೫ ಲಕ್ಷ ರೂ.ಗಳ ಅನುದಾನ ಬಿಡುಗಡೆ ಮಾಡಲಾಗಿದೆ.



ಚಿತ್ರ: ಐ.ಟಿ.ಡಿ.ಪಿ. ಅಡಿಯಲ್ಲಿ ನಿರ್ಮಾಣಗೊಂಡ ಕೊರಗ ಸಮುದಾಯ ಭವನ ಹೆಬ್ರಿ

೩.೪.೩. ಗಿರಿಜನ ಉಪಯೋಜನೆಯ ಅಭಿವೃದ್ಧಿ ಕಾರ್ಯಕ್ರಮಗಳು:

೩.೪.೩.೧. ಕೃಷಿ:

ಕೃಷಿ ಇಲಾಖೆಯ ವತಿಯಿಂದ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಕೆಳಕಂಡ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

ಕೃಷಿ ಉಪಕರಣಗಳು: (ಶೇ.೧೦೦ರ ಸಹಾಯಧನ, ಪ್ರತಿ ಹೆಕ್ಟೇರ್‌ಗೆ ರೂ.೨೮೦೦)

ಧಾನ್ಯ ಸಂಗ್ರಹಣಾ ಕಣಜಗಳು: (ಶೇ.೭೫ರ ಸಹಾಯಧನ, ಗರಿಷ್ಟ ಮಿತಿ ರೂ.೧೦೦೦)


ಆಧುನಿಕ ಕೃಷಿ ಉಪಕರಣಗಳು: (ಶೇ.೭೫ರ ಸಹಾಯಧನ, ಗರಿಷ್ಟ ಮಿತಿ ರೂ.೫೦,೦೦೦)

ಕೈಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು: (ಶೇ.೭೫ರ ಸಹಾಯಧನ, ಗರಿಷ್ಟ ಮಿತಿ ರೂ.೧೦೦೦)

ಡಿಸೇಲ್ ಅಥವಾ ಸೀಮೆಯೆಣ್ಣೆಯ ಪಂಪಸೆಟ್‌ಗಳು: (ಶೇ.೭೫ರ ಸಹಾಯಧನ, ಗರಿಷ್ಟ ಮಿತಿ ರೂ.೧೦,೦೦೦)

ಪವರ್ ಟಿಲ್ಲರ್‌ಗಳು: (ಶೇ.೭೫ರ ಸಹಾಯಧನ, ಗರಿಷ್ಟ ಮಿತಿ ರೂ.೫೦,೦೦೦)

ಜಲಂತರ್ಗ ಪಂಪಸೆಟ್‌ಗಳು (ಶೇ.೭೫ರ ಸಹಾಯಧನ, ಗರಿಷ್ಠ ಮಿತಿ ರೂ.೨೫,೦೦೦) ಅಲ್ಲದೆ ಎತ್ತಿನ ಗಾಡಿ ಮತ್ತು ಹಿನಿ ನೀರಾವರಿ ಘಟಕಗಳಿಗೂ ಧನಸಹಾಯ ಒದಗಿಸಲಾಗುತ್ತಿದೆ.



೨೦೦೮-೦೯ನೇ ಸಾಲಿನಲ್ಲಿ ಕೃಷಿ ಅಭಿವೃದ್ಧಿಗಾಗಿ ನೀರಾವರಿ ಸೌಲಭ್ಯ ಕಲ್ಪಿಸಿಕೊಡುವುದಕ್ಕಾಗಿ ೩೯/- ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿದ್ದು ಅದರಲ್ಲಿ ೧೯ರಷ್ಟು ಭೌತಿಕ ಪ್ರಗತಿ ಸಾಧಿಸಿದೆ ಎಂಬುದು ಐ.ಟಿ.ಡಿ.ಪಿ.ಅಧಿಕಾರಿಗಳ ಅಭಿಪ್ರಾಯ.

೩.೪.೩.೨. ಭೂ ಸಾರ ಮತ್ತು ಜಲ ಸಂರಕ್ಷಣೆ:

ಬುಡಕಟ್ಟು ಸಮುದಾಯದ ಹೊಲಗಳಲ್ಲಿ ನೀರು ಸಂಗ್ರಹಣೆ ಮಾಡಲು ನೀರು ತಡೆಯ ವಿನ್ಯಾಸಗಳನ್ನು ರಚಿಸಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುವಂತೆ ಸೌಲಭ್ಯ ಒದಗಿಸಲಾಗುತ್ತಿದೆ.

೩.೪.೩.೩. ತೋಟಗಾರಿಕೆ:

ಗ್ರಾಮೀಣ ಪ್ರದೇಶದ ಬುಡಕಟ್ಟು ಕುಟುಂಬದ ಆದಾಯವನ್ನು ಹೆಚ್ಚಿಸುವ ಸಲುವಾಗಿ ಅರ್ಧ ಎಕರೆ ತೆಂಗಿನ ತೋಟ, ಒಂದು ಎಕರೆ ಹಣ್ಣಿನ ತೋಟ, ಅರ್ಧ ಎಕರೆ ವಾಣಿಜ್ಯ ಬೆಳೆಯ ತೋಟ ಅಥವಾ ಕಾಲು ಎಕರೆ ಗುಲಾಬಿ ತೋಟವನ್ನು ನಿರ್ಮಾಣ ಮಾಡಿಕೊಡಲಾಗುತ್ತಿದೆ. ಪ್ರತಿ ವರ್ಷಕ್ಕೆ ರೂ.೨೪೬೫ ರಿಂದ ೨೭೦೦ರವರೆಗೆ ವೆಚ್ಚ ಮಾಡಲಾಗುತ್ತಿದೆ. ಅಲ್ಲದೆ ಹಳೆಯ ತೋಟಗಳನ್ನು ಎರಡು ವರ್ಷಗಳವರೆಗೆ ತೋಟಗಾರಿಕೆ ಇಲಾಖೆಯು ಪಾಲನೆ ಮಾಡುತ್ತಿದೆ. ತೋಟದ ಪಾಲನೆಗೆ ಮೊದಲನೇ ವರ್ಷದಲ್ಲಿ ರೂ.೨೫೦.೦೦ ಮತ್ತು ಎರಡನೇ ವರ್ಷದಲ್ಲಿ ರೂ.೩೫೦.೦೦ಗಳನ್ನು ನೀಡಲಾಗುತ್ತಿದೆ. ತೋಟಗಾರಿಕೆಯಲ್ಲಿ ಐದು ದಿನಗಳ ತರಬೇತಿಗೆ ಒಬ್ಬರಿಗೆ ರೂ.೨೫೦.೦೦ರಂತೆ ಶಿಷ್ಯವೇತನವನ್ನು ನೀಡಲಾಗುತ್ತಿದೆ. ಪ್ರತಿ ಬುಡಕಟ್ಟು ಮನೆಗೆ ಎರಡು ತೆಂಗಿನ ಸಸಿಗಳನ್ನು ಉಚಿತವಾಗಿ ಪೂರೈಸಲಾಗುತ್ತಿದೆ. ತುಂತುರು ನೀರಾವರಿ ಸೌಲಭ್ಯಕ್ಕಾಗಿ ಶೇ.೯೦ ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ.

೩.೪.೩.೪. ಮೀನುಗಾರಿಕೆ:

ಮೀನುಗಾರಿಕೆ ಇಲಾಖೆಯು ಗಿರಿಜನ ಮೀನುಗಾರರಿಗೆ ಸ್ವಾವಲಂಬನೆ ಜೀವನವನ್ನು ಸಾಗಿಸಲು ಸಹಕಾರಿಯಾಗುವಂತೆ ಮೀನುಗಾರಿಕೆಯಲ್ಲಿ ತರಬೇತಿಯನ್ನು ನೀಡುವುದರ ಜೊತೆಗೆ ರೂ.೩೦೦೦.೦೦ಗಳ ವೆಚ್ಚದಲ್ಲಿ ಮೀನುಗಾರಿಕೆಗೆ ಬೇಕಾಗುವ ಬಲೆ, ಹರಿಗೋಲು ಮತ್ತಿತರ ಉಪಕರಣಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ಇದಲ್ಲದೆ ಕೆರೆಗಳಲ್ಲಿ ಮೀನುಗಾರಿಕೆ ಮಾಡಲು ಬೇಕಾಗುವ ಸಹಾಯಧನ, ಕೊಳದಲ್ಲಿ ಮೀನುಮರಿ ಸಾಕಾಣಿಕೆಗೆ ಸಹಾಯಧನ, ಮೀನುಗಾರ ಮಹಿಳೆಯರಿಗೆ ಆರ್ಥಿಕ ನೆರವು ಇತ್ಯಾದಿ ಸೌಲಭ್ಯಗಳನ್ನು ನೀಡಲಾಗುತ್ತಿದೆ.

೩.೪.೩.೫. ಪಶುಸಂಗೋಪನೆ:

ಹೈನುಗಾರಿಕೆಯಲ್ಲಿ ಆಸಕ್ತಿ ಹೊಂದಿರುವ ಬುಡಕಟ್ಟು ಫಲಾನುಭವಿಗಳಿಗೆ ಪಶುಸಂಗೋಪನಾ ಇಲಾಖೆಯಿಂದ, ಹಾಲು ಕರೆಯುವ ಹಸು ಅಥವಾ ಎಮ್ಮೆ ಘಟಕ, ಕುರಿ

ಘಟಕ, ಹಂದಿ ಘಟಕಗಳನ್ನು ಶೇ.೭೫ರ ಸಹಾಯ ಧನ ಮತ್ತು ಶೇ.೨೫ರ ಸಾಲದ ನೆರವಿನಿಂದ ವಿತರಿಸಲಾಗುತ್ತಿದೆ. ಈ ಘಟಕದ ವೆಚ್ಚಗಳು ಕಾಲಕಾಲಕ್ಕೆ ಬದಲಾಗುತ್ತಿದ್ದು ನಬಾರ್ಡ ದರದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಒಟ್ಟಾರೆ ಯಾವುದೇ ಒಬ್ಬ ಫಲಾನುಭವಿಗೆ ರೂ.೧೦,೦೦೦.೦೦ ಕ್ಕಿಂತಲೂ ಹೆಚ್ಚಿನ ಸಹಾಯಧನ ದೊರೆಯುವುದಿಲ್ಲ.

೩.೪.೩.೬. ಅರಣ್ಯ:

ಅರಣ್ಯ ಇಲಾಖೆಯಿಂದ ಗಿರಿಜನ ಫಲಾನುಭವಿಗಳಿಗೆ ಭದ್ರತಾ ನೆಡುತೋಪು ನಿರ್ವಹಣೆಗಾಗಿ ಆರ್ಥಿಕ ಸಹಾಯ ನೀಡಲಾಗುತ್ತಿದೆ. ಅರ್ಧ ಹೆಕ್ಟೇರ್ ನೆಡುತೋಪು ನಿರ್ವಹಣೆಗೆ ರೂ.೨೫೦೦.೦೦ಗಳ ನೆರವು ನೀಡಲಾಗುತ್ತಿದೆ. ಗಿರಿಜನ ಕರಕುಶಲ ಕಸುಬುದಾರಿಗೆ ಬುಟ್ಟಿ ಹೆಣೆಯಲು ಮತ್ತು ಇತರೆ ಬಿದಿರಿನ ಕೆಲಸ ಮಾಡಲ ಬೇಕಾಗುವ ಬೆತ್ತ ಮತ್ತು ಬಿದಿರುಗಳನ್ನು ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ. ಪ್ರತಿ ಫಲಾನುಭವಿಗಳಿಗೆ ೫೦೦ ಬಿದಿರು, ೫೦೦ ಬೆತ್ತಗಳನ್ನು ನೀಡಲಾಗುತ್ತಿದೆ. ಮನೆಗಳ ನಿರ್ಮಾಣಕ್ಕೆ ಬೇಕಾಗುವ ತೊಲೆ, ಕಿಟಿಕಿ ಬಾಗಿಲುಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ. ಜೇನು ಕೃಷಿ ಕೈಗೊಳ್ಳುವಂತಹ ಬುಡಕಟ್ಟು ಫಲಾನುಭವಿಗಳಿಗೆ ರೂ.೩೫೦ರ ದರದಲ್ಲಿ ೫ ಜೇನು ಪೆಟ್ಟಿಗೆಗಳನ್ನು ಉಚಿತವಾಗಿ ನೀಡಿ ಜೇನು ಕೃಷಿಗೆ ಪ್ರೋತ್ಸಾಹ ನೀಡಲಾಗುತ್ತಿದೆ.

೩.೪.೩.೭. ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆ:

ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಆಸಕ್ತಿ ಇರುವ ಬುಡಕಟ್ಟು ನಿರುದ್ಯೋಗಿ ಯುವಕ-ಯುವತಿಯರಿಗೆ ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆ ಇಲಾಖೆ ವತಿಯಿಂದ ಜೇನು ಕೃಷಿ, ಬಡಗಿತನ, ಬಿದಿರು, ಬೆತ್ತದ ವೃತ್ತಿಗಳಲ್ಲಿ ಶಿಷ್ಯವೇತನದೊಂದಿಗೆ ತರಬೇತಿ ನೀಡಲಾಗುತ್ತಿದೆ. ತರಬೇತಿಯ ನಂತರ ರೂ.೨೦೦೦.೦೦ ಬೆಲೆ ಬಾಳುವ ವಿದ್ಯುತ್ ರಿಪೇರಿ, ಹೊಲಿಗೆ ಯಂತ್ರ, ಗಾರೆ ಕೆಲಸದ ಉಪಕರಣಗಳು, ಕಮ್ಮಾರಿಕೆ ಇನ್ನಿತರ ಉಪಕರಣಗಳನ್ನು ಉಚಿತವಾಗಿ ನೀಡಿ ಸ್ವತಂತ್ರವಾಗಿ ವೃತ್ತಿ ಕೈಗೊಳ್ಳಲು ನೆರವು ನೀಡಲಾಗುತ್ತಿದೆ. ಗಿರಿಜನರಿಗೆ ಗುಡಿ ಕೈಗರಿಕೆಗಳನ್ನು ಸ್ಥಾಪಿಸಲು ಲಿವಿಂಗ್-ಕಮ್-ವರ್ಕ್ ಶೆಡ್‌ಗಳನ್ನು ನಿರ್ಮಿಸಲು ಇಲಾಖಾವತಿಯಿಂದ ರೂ.೨೫,೦೦೦.೦೦ಗಳ ಸಹಾಯಧನ ನೀಡಲಾಗುತ್ತಿದೆ.

೩.೪.೩.೮. ರೇಷ್ಮೆ ಕೃಷಿ:

ರೇಷ್ಮೆ ಕೃಷಿಯು ಲಾಭದಾಯಕ ಆರ್ಥಿಕ ಚಟುವಟಿಕೆಯಾಗಿರುವುದರಿಂದ ಈ ವೃತ್ತಿಯನ್ನು ಅವಲಂಬಿಸಿರುವ ಗಿರಿಜನ ಫಲಾನುಭವಿಗಳಿಗೆ ವಿವಿಧ ಸವಲತ್ತುಗಳನ್ನು ನೀಡಲಾಗುತ್ತಿದೆ. ಹುಳು ಸಾಕಾಣಿಕೆ ಮನೆಕಟ್ಟಲು ಸಹಾಯ ಧನ, ಹಿಪ್ಪುನೇರಳೆ ಬೇಸಾಯಕ್ಕೆ

೨೦೦೦.೦೦ಗಳ ವರೆಗೂ ಪ್ರೋತ್ಸಾಹಧನ, ಹುಳು ಸಾಕಾಣಿಕೆ ಉಪಕರಣಗಳ ಸರಬುರಾಜು ಮತ್ತು ಐ ಪಿ ಸೆಟ್‌ಗಳ ಸರಬುರಾಜು ಇತ್ಯಾದಿಗಳಿಗೆ ಸಹಾಯಧನ ನೀಡಲಾಗುತ್ತಿದೆ.

೩.೪.೩.೯. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ:

ಈ ನಿಗಮದ ವತಿಯಿಂದ ಬುಡಕಟ್ಟುಗಳ ಕಾಲೋನಿಗಳಿಗೆ ವಿದ್ಯುದೀಕರಣಗೊಳಿಸಲು ಕಾಲೋನಿಯೊಂದಕ್ಕೆ ಸುಮಾರು ರೂ.೪೦,೦೦೦ಗಳ ವೆಚ್ಚದಲ್ಲಿ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಬುಡಕಟ್ಟು ಪಂಗಡದವರ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು. ಭಾಗ್ಯಜ್ಯೋತಿ ಯೋಜನೆ ಅಡಿ ಬುಡಕಟ್ಟುಗಳ ಮನೆಗಳಿಗೆ ವಿದ್ಯುತ್ ಸೌಲಭ್ಯ ಒದಗಿಸಲಾಗುತ್ತಿದೆ. ೨೦೦೮ -೦೯ ನೇ ಸಾಲಿನಲ್ಲಿ ಕೊರಗರು ವಾಸಿಸುತ್ತಿರುವ ಗ್ರಾಮಗಳಿಗೆ ವಿದ್ಯತ್ ಪೂರೈಕೆಯ ವ್ಯವಸ್ಥೆ ಕೈಗೊಳ್ಳಲು ೨೦/- ಲಕ್ಷ ರೂ.ಗಳ ಅನುದಾನ ನೀಡಲಾಗಿದೆ. ಈ ಅನುದಾನದಲ್ಲಿ ೨೧೩ ರಷ್ಟು ಭೌತಿಕ ಪ್ರಗತಿ ಸಾಧಿಸಲಾಗಿದೆ.



ಚಿತ್ರ: ಅರಣ್ಯ ಪ್ರದೇಶದ ಮಲೆಕುಡಿಯರಿಗೆ ಐ.ಟಿ.ಡಿ.ಪಿ.ಯಿಂದ ವಿತರಣೆಗೊಂಡ ಸೋಲಾರ್ ವಿದ್ಯುತ್ ಸೌಲಭ್ಯ

೩.೪.೩.೧೦. ಉದ್ಯೋಗ ಮತ್ತು ತರಬೇತಿ:

ಉದ್ಯೋಗ ಮತ್ತು ತರಬೇತಿ ಇಲಾಖೆಯ ವತಿಯಿಂದ ಬುಡಕಟ್ಟಿನವರಿಗೆ ಬಡಗಿತನ, ಟೈಲರಿಂಗ್ ಇತರೆ ವೃತ್ತಿಗಳಲ್ಲಿ ತರಬೇತಿ ನೀಡಲಾಗುತ್ತಿದೆ. ತರಬೇತಿ ಅವಧಿಯಲ್ಲಿ ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ.೫೦೦.೦೦ ರಂತೆ ಒಂದು ವರ್ಷ ಶಿಷ್ಯವೇತನ ನೀಡುವುದರ ಜೊತೆಗೆ ರೂ.೧೦೦.೦೦ ರಂತೆ ಪ್ರೋತ್ಸಾಹ ಹಣವನ್ನು ಪ್ರತಿ ಅಭ್ಯರ್ಥಿಯ ಪೋಷಕರಿಗೆ ಮತ್ತು ತರಬೇತಿಯಲ್ಲಿ ಯಶಸ್ವಿಯಾದ ಅಭ್ಯರ್ಥಿಗೆ ಟೂಲ್ ಕಿಟ್, ಹೊಲಿಗೆ ಯಂತ್ರ ಮತ್ತು ಕಚ್ಚಾ ಸಾಮಗ್ರಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ.



೩.೪.೩.೧೧. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ:

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

೧. ಗ್ರಾಮೀಣ ಪ್ರದೇಶದ ಬುಡಕಟ್ಟು ಪಂಗಡದ ಬಾಲಕಿಯರಿಗೆ ಹಾಜರಾತಿ ವಿದ್ಯಾರ್ಥಿವೇತನ.

೨. ಕಷ್ಟದಲ್ಲಿರುವ ಬುಡಕಟ್ಟು ಮಹಿಳೆಯರಿಗೆ ಸಹಾಯಧನ.

೩. ಬಾಲಕಾರ್ಮಿಕರಿಗೆ ಪುನರ್ ವಸತಿಗೆ ಸಹಾಯಧನ.

೪. ವಿಧವೆಯರಿಗೆ ಆರ್ಥಿಕ ಸೌಲಭ್ಯ ನೀಡಲು 'ನವಜೀವನ' ಕಾರ್ಯಕ್ರಮದಡಿಯಲ್ಲಿ ಸಹಾಯಧನ ನೀಡಲಾಗುವುದು.

೫. ಜಾಗೃತಿ ಕಾರ್ಯಕ್ರಮದಡಿ ಬುಡಕಟ್ಟು ವರ್ಗದ ಬಾಲಕೀಯರಿಗೆ ಸಹಾಯಧನವನ್ನು ಒದಗಿಸುವುದು.

೩.೪.೩.೧೨. ಪೌಷ್ಠಿಕಾಂಶಗಳ ನೀಡಿಕೆ:

ಗ್ರಾಮಾಂತರ ಪ್ರದೇಶದಲ್ಲಿರುವ, ಬುಡಕಟ್ಟು ಸಮುದಾಯಗಳು ವಾಸಿಸುವ ಹತ್ತಿರದಲ್ಲಿಯೇ ಅಂಗನವಾಡಿ ಕೇಂದ್ರಗಳನ್ನು ತೆರೆದು, ಬುಡಕಟ್ಟು ಮಕ್ಕಳಿಗೆ ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ. ಈ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಅಕ್ಷರ ಅಭ್ಯಾಸದ ಜೊತೆಗೆ ಅವರ ದೈಹಿಕ ಬೆಳವಣಿಗೆಗೆ ಬೇಕಾಗುವ ವಿಶೇಷ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ. ಈ ಯೋಜನೆಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಐ.ಟಿ.ಡಿ.ಪಿ. ಪ್ರದೇಶಗಳಲ್ಲಿ ಗಿರಿಜನ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

ಕೊರಗ ಸಮುದಾಯದ ಪ್ರತಿ ಕುಟುಂಬಕ್ಕೆ ಪ್ರತಿ ತಿಂಗಳು ಈ ಕೆಳಗೆ ಸೂಚಿಸಿದ ಆಹಾರ ಧಾನ್ಯಗಳನ್ನು ಪೂರೈಸುತ್ತಿದೆ ಎಂಬ ಮಾಹಿತಿಯನ್ನು ಐ.ಟಿ.ಡಿ.ಪಿ, ಉಡುಪಿಯ ಅಧಿಕಾರಿಗಳು ನೀಡಿದ್ದಾರೆ. ಈ ಕೆಳಗೆ ಸೂಚಿಸಿರುವ ಆಹಾರ ವಸ್ತುಗಳ ದರ ಆಹಾರ ಸರಬರಾಜು ಮಾಡಿದ ದಿನಕ್ಕೆ ಎಷ್ಟು ಇರುತ್ತದೆಯೋ ಆ ದರವನ್ನು ನಿಗದಿಪಡಿಸಿ ಸರಬರಾಜು ಮಾಡುತ್ತಾರೆ.

ಕ್ರ.ಸಂ.	ಪೌಷ್ಟಿಕ ಆಹಾರದ ವಿವರ	ಪ್ರತಿ ಕುಟುಂಬಕ್ಕೆ ಆಹಾರ ಸರಬರಾಜು ಮಾಡಿದ ಪ್ರಮಾಣ	ದರ	ಮೊತ್ತ ರೂ.
೧	ಕೆಂಪು ಕುಚ್ಚಲ ಅಕ್ಕಿ (ಪ್ರಥಮ ದರ್ಜೆ)	೧೫ ಕೆ. ಜಿ	೨೯	೪೩೫.೦೦
೨	ತೊಗರಿ ಬೇಳೆ (ಪ್ರಥಮ ದರ್ಜೆ)	೩ ಕೆ. ಜಿ	೧೩೮	೪೧೪.೦೦
೩	ಪಚ್ಚೆ ಹಸಿರು ಕಾಳು (ಪ್ರಥಮ ದರ್ಜೆ)	೨ ಕೆ. ಜಿ	೮೮	೧೭೬.೦೦
೪	ಹುರುಳಿಕಾಳು (ಪ್ರಥಮ ದರ್ಜೆ)	೧ ಕೆ. ಜಿ	೩೬	೩೬.೦೦
೫	ಅಲಸಂದೆ ಕಾಳು (ಪ್ರಥಮ ದರ್ಜೆ)	೨ ಕೆ. ಜಿ	೬೨	೧೨೪.೦೦
೬	ಉದ್ದಿನ ಬೇಳೆ (ಪ್ರಥಮ ದರ್ಜೆ)	೧.೫ ಕೆ. ಜಿ	೧೭೨	೨೫೮.೦೦
೭	ಎಫ್ಕೆಂಡ ಗೋಲ್ಡವಿನ್ನರ್ ಸೂರ್ಯಕಾಂತಿ ಎಣ್ಣೆ	೨ ಲೀಟರ್	೮೮	೧೭೬.೦೦
೮	ಸಕ್ಕರೆ (ಪ್ರಥಮ ದರ್ಜೆ)	೨ ಕೆ. ಜಿ	೩೭.೫೦	೭೫.೦೦
೯	ಬೆಲ್ಲ (ಪ್ರಥಮ ದರ್ಜೆ)	೨ ಕೆ. ಜಿ	೪೪	೮೮.೦೦
೧೦	ಕೋಳಿ ಮೊಟ್ಟೆ -೧ಕ್ಕೆ	೪೫ ಮೊಟ್ಟೆಗಳು	೪.೭೦	೨೧೧.೫೦
೧೧	ನಂದಿನಿ ತುಪ್ಪ	೧ ಕಿ ಜಿ.	೩೮೦	೩೮೦.೦೦
		ಒಟ್ಟು ಮೊತ್ತ ರೂ		೨೩೭೩.೫೦

೩.೪.೩.೧೩. ವಸತಿ:

ವಸತಿ ಇಲಾಖೆಯು ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ ಬುಡಕಟ್ಟಿನವರಿಗೆ ಶೇಕಡಾವಾರು ಗುರಿಯನ್ನು ನಿಗದಿಪಡಿಸಿಕೊಂಡು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯ ಅಡಿಯಲ್ಲಿ ನಗರ ಪ್ರದೇಶದಲ್ಲಿರುವ ಬುಡಕಟ್ಟಿನವರಿಗೆ ಆಶ್ರಯ ನೀವೇಶನ ವಿತರಣೆ, ಗ್ರಾಮಾಂತರ ಪ್ರದೇಶಗಳಲ್ಲಿರುವ ಬುಡಕಟ್ಟಿನವರಿಗೆ ಆಶ್ರಯ ನಿವೇಶನ ವಿತರಣೆ, ಗ್ರಾಮಾಂತರ ಪ್ರದೇಶಗಳಲ್ಲಿ ಆಶ್ರಯ ವಸತಿ ಯೋಜನೆಯಡಿ ನಿರ್ಮಾಣವಾಗುವ ಮನೆಗಳಿಗೆ ಸಹಾಯಧನ ನೀಡುವುದು. ನೆರಳಿನ ಭಾಗ್ಯ ಯೋಜನೆಯಡಿಯಲ್ಲಿ ತಲಾ ರೂ.೫೦೦೦.೦೦ ವೆಚ್ಚದಲ್ಲಿ ಹುಲ್ಲಿನ ಛಾವಣೆಯನ್ನು ಬದಲಾಯಿಸಿ ಹಂಚಿನ ಛಾವಣಿಯನ್ನು ಒದಗಿಸಲಾಗುತ್ತಿದೆ.

೩.೪.೩.೧೩.೧. ಡಾ. ಅಂಬೇಡ್ಕರ್ ವಸತಿ ಯೋಜನೆ:

ಈ ಯೋಜನೆಯ ಅಡಿಯಲ್ಲಿ ಬುಡಕಟ್ಟುಗಳಿಗೆ ರೂ.೨೦,೦೦೦.ಗಳನ್ನು ಬಳಸಿ ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ಇದರಲ್ಲಿ ರೂ.೧೯,೦೦೦.೦೦ ಗಿರಿಜನ ಕಲ್ಯಾಣ ಇಲಾಖೆ ಸಹಾಯ ಧನ ನೀಡುತ್ತಿದೆ. ಉಳಿದ ರೂ.೧೦೦೦.೦೦ ಗ್ರಾಮೀಣ ಅಭಿವೃದ್ಧಿ ಇಲಾಖೆಯು ನೀಡುತ್ತಿದೆ. ಈ ಯೋಜನೆಯ ೧೯೯೭-೯೮ನೇ ಸಾಲಿನಿಂದ ಜಾರಿಗೆ ಬಂದಿರುತ್ತದೆ.

೩.೪.೩.೧೩.೨. ಗಿರಿಜನರಿಗೆ ಗುಂಪು ಮನೆಗಳ ನಿರ್ಮಾಣ:

೧೯೯೭-೯೮ನೇ ಸಾಲಿನಿಂದ ಈ ವಸತಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ. ಈ ಮನೆಗಳ ನಿರ್ಮಾಣ ಕಾರ್ಯವನ್ನು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಉಸ್ತುವಾರಿಯಲ್ಲಿ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ. ಈಯೋಜನೆಯನ್ನು ಬುಡಕಟ್ಟಿನವರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಹಾಗೂ ವಸತಿ ಇಲ್ಲದ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.

೨೦೦೮-೦೯ ನೇ ಸಾಲಿನಲ್ಲಿ ಮೂಲನಿವಾಸಿಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೊರಗರಿಗೆ ಹೊಸ ನಿವೇಶನಗಳಲ್ಲಿ ಮನೆಗಳ ನಿರ್ಮಾಣ ಮತ್ತು ಹಳೆ ಮನೆಗಳ ರಿಪೇರಿ ಮತ್ತು ವಸತಿಗೆ ಸಂಬಂಧಿಸಿದ ಇತರೆ ಯೋಜನೆಗಳನ್ನು ಕೈಕೊಳ್ಳಲು ಒಟ್ಟು ೪ ಕೋಟಿ ರೂ.ಗಳ ಪ್ರಸ್ತಾವನಯನ್ನು ಸರಕಾರಕ್ಕೆ ಸಲ್ಲಿಸಲಾಗಿತ್ತು. ಇದರಲ್ಲಿ ಸರಕಾರ ೩ ಕೋಟಿ ರೂಗಳ ಬಿಡುಗಡೆ ಮಾಡಿದ್ದು, ಈ ಹಣವನ್ನು ಕೊರಗರಿಗೆ ವಸತಿ ಕಲ್ಪಿಸುವುದಕ್ಕಾಗಿ ಬಳಸಲಾಗುತ್ತಿದೆ. ಮತ್ತು ಕೊರಗರಿಗಾಗಿ ಸಮುದಾಯ ಭುವನ ನಿರ್ಮಾಣಕ್ಕಾಗಿ ೫/- ಲಕ್ಷ. ರೂಗಳನ್ನು ನಿಗದಿಪಡಿಸಲಾಗಿದ್ದು ಈ ಅನುದಾನದಲ್ಲಿ ೨೫ ರಷ್ಟು ಭೌತಿಕ ಪ್ರಗತಿ ಸಾಧಿಸಲಾಗಿದೆ.

೨೦೧೦-೧೧ ನೇ ಸಾಲಿನಲ್ಲಿ ಮೂಲನಿವಾಸಿಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೊರಗರಿಗೆ ವಸತಿ ಕಲ್ಪಿಸುವ ಸಲುವಾಗಿ ರೂ. ೪.೫೦ ಲಕ್ಷ ರೂಗಳಲ್ಲಿ ಸರಕಾರಿ ಭೂಮಿಯಲ್ಲಿ ವಸತಿಗಾಗಿ ಮನೆಗಳನ್ನು ನಿರ್ಮಾಣಮಾಡಲಾಗುತ್ತಿದೆ.ಈ ಕಾರ್ಯ ಜುಲೈ ೨೦೧೬ ರವರೆಗೆ ಮುಂದುವರೆದಿತ್ತು.

೨೦೧೧-೧೨ ನೇ ಸಾಲಿನಲ್ಲಿ ಮೂಲನಿವಾಸಿಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೊರಗರಿಗೆ ವಸತಿ ಕಲ್ಪಿಸುವ ಸಲುವಾಗಿ ರೂ. ೧೨.೫೦ ಲಕ್ಷ ರೂ.ಗಳ ಯೋಜನೆ ಸಿದ್ಧಪಡಿಸಲಾಗಿತ್ತು ಇದರಲ್ಲಿ ಹಾಳಾಗಿರುವ ಕೊರಗರ ಮನೆಗಳ ದುರಸ್ತಿಗಾಗಿ ಬಳಸಲಾಗಿದೆ. ಜನೆವರಿ ೨೦೧೨ ರಲ್ಲಿ ಕೊರಗರಿಗೆ ವಸತಿ ಸೌಲಭ್ಯ ಒದಗಿಸುವುದಕ್ಕಾಗಿ ರೂ. ೬೧೯.೨೭/- ಗಳ ಅನುದಾನ ನಿಗದಿಪಡಿಸಲಾಗಿತ್ತು. ಇದರಲ್ಲಿ ೧೧೨.೭೫ ರಷ್ಟು ಆರ್ಥಿಕ ಪ್ರಗತಿ ಸಾಧಿಸಲಾಗಿದೆ ಎಂದು ಐ.ಟಿ.ಡಿ.ಪಿ. ಅಧಿಕಾರಿಗಳ ಅಭಿಪ್ರಾಯ.

೩.೪.೩.೧೩.೩. ಉಡುಪಿ ಜಿಲ್ಲೆಯ ಕೊರಗರಿಗೆ ವಸತಿ ಸೌಲಭ್ಯಕ್ಕಾಗಿ ಬಿಡುಗಡೆಯಾದ ಅನುದಾನದ ವಿವರ

...ನೆಗ	ಮಂಜೂರಾದ ಮನೆಗಳು	ಖರ್ಚಾದ ಅನುದಾನ		ಉಳಿಕೆಯಾದ ಅನುದಾನ		ಉಳಿಕೆಯಾದ ಅನುದಾನ		ಪೂರ್ಣಗೊಂಡ ಮನೆಗಳ ಸಂಖ್ಯೆ	ಪ್ರಗತಿ ಹಂತದಲ್ಲಿರುವ ಮನೆಗಳ ಸಂಖ್ಯೆ			
		ರಾಜ್ಯ ವಲಯ	ಕೇಂದ್ರ ವಲಯ	ರಾಜ್ಯ ವಲಯ	ಕೇಂದ್ರ ವಲಯ	ರಾಜ್ಯ ವಲಯ	ಕೇಂದ್ರ ವಲಯ		ತಳಪಾಯ ಹಂತ	ಲಿಂಟಲ್ ಹಂತ	ಛಾವಣಿ ಹಂತ	ಮಂಜೂರಾತಿಯಾಗಿಯೂ ಇನ್ನೂ ಪ್ರಾರಂಭಿಸದಿರುವ ಮನೆಗಳ ಸಂಖ್ಯೆ
00	957	1182.00	1144.27	4,29,00,000.00	5,44,55,000.00	7,53,00,000.00	5,99,72,0000.00	567	64	83	85	158
00	957	2326.27		9,73,55,000.00		13,52,72,000.00		567	64	83	85	158

೩.೪.೩.೧೪. ಕ್ರೀಡೆ ಮತ್ತು ಯುವಜನ ಸೇವೆ:

೧. ಕ್ರೀಡಾ ಮತ್ತು ಯುವಜನ ಸೇವಾ ಇಲಾಖೆ ಬುಡಕಟ್ಟು ಸಮುದಾಯಗಳಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

೨. ಬುಡಕಟ್ಟು ಯುವಕ ಯುವತಿಯರಿಗೆ ಕ್ರೀಡಾ ಶಾಲೆಗಳು ಮತ್ತು ವಸತಿ ನಿಲಯಗಳ ನಿರ್ವಹಣೆ.

೩. ಕ್ರೀಡೆಗೆ ಪ್ರೋತ್ಸಾಹ ನೀಡುವುದು.

೩.೪.೩.೧೫. ಕನ್ನಡ ಮತ್ತು ಸಂಸ್ಕೃತಿ ಇಲಾಖೆ:

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬುಡಕಟ್ಟು ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

೧. ಬುಡಕಟ್ಟುಗಳಲ್ಲಿ ಇರುವ ಜಾನಪದ ಕಲೆಗಳನ್ನು ಪ್ರೋತ್ಸಾಹಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ.

೨. ಬುಡಕಟ್ಟುಗಳು ನೋಂದಾಯಿಸಿರುವ ಸಂಸ್ಥೆಗಳ ವತಿಯಿಂದ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಸಹಾಯ ಧನವನ್ನು ನೀಡಲಾಗುತ್ತಿದೆ.

೩. ಸಂಗೀತ ಪರಿಕರಗಳು ಹಾಗೂ ರಂಗ ಪರಿಕರಗಳನ್ನು ಖರೀದಿಸಲು ಸಹಾಯ ಧನವನ್ನು ನೀಡಲಾಗುತ್ತಿದೆ.

೪. ಕಲಾಮೇಳಗಳನ್ನು ಏರ್ಪಡಿಸಲು ಬುಡಕಟ್ಟುಗಳ ಸಂಸ್ಥೆಗಳಿಗೆ ಸಹಾಯ ಧನವನ್ನು ನೀಡಲಾಗುತ್ತಿದೆ.

೫. ಬುಡಕಟ್ಟು ಸಮುದಾಯದ ಸಾಹಿತಿಗಳು ಬರೆದಿರುವ ಪುಸ್ತಕಗಳ ಪ್ರಕಟಣೆಗೆ ಸಹಾಯ ಧನ ನೀಡಲಾಗುತ್ತಿದೆ.

೩.೪.೩.೧೬. ತಾಂತ್ರಿಕ ಶಿಕ್ಷಣ:

ತಾಂತ್ರಿಕ ಶಿಕ್ಷಣ ಇಲಾಖೆ ಬುಡಕಟ್ಟು ವಿದ್ಯಾರ್ಥಿಗಳ ಅಭಿವೃದ್ಧಿಗೆ ಸಹಾಯವಾಗುವಂತೆ ಡ್ರಾಯಿಂಗ್ ಉಪಕರಣಗಳನ್ನು ಪ್ರತಿ ವಿದ್ಯಾರ್ಥಿಗೆ ರೂ.೧೨೦೦.೦೦ ಮೀರದಂತೆ ಉಚಿತವಾಗಿ ವಿತರಿಸಲಾಗುತ್ತಿದೆ. ಬುಕ್ ಬ್ಯಾಂಕ್ ಯೋಜನೆಯಡಿಯಲ್ಲಿ ರೂ.೫೦೦.೦೦ ಮಿತಿಗೊಳಿಸಿ ಬೆಲೆ ಬಾಳುವ ಪುಸ್ತಕಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ರೂ.೫೦೦.೦೦ಗಳಿಗೆ ಮಿತಿಗೊಳಿಸಿ ಸಮವಸ್ತ್ರಗಳನ್ನು ನೀಡಲಾಗುತ್ತಿದೆ.

೩.೪.೩.೧೭. ಕಾಲೇಜು ಶಿಕ್ಷಣ ಇಲಾಖೆ:

ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬುಡಕಟ್ಟು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಹಾಗೂ ಮತ್ತಿತರ ಸಾಮಾಗ್ರಿಗಳನ್ನು ವಿತರಿಸಲಾಗುತ್ತಿದೆ. ಗಿರಿಜನ ವಿದ್ಯಾರ್ಥಿಗಳಿಗೆ ವಿಶೇಷ ಬೋಧನಾ ತರಗತಿಗಳನ್ನು ನಡೆಸಲಾಗುತ್ತಿದೆ.

೩.೪.೩.೧೮. ಸಾರ್ವಜನಿಕ ಶಿಕ್ಷಣ ಇಲಾಖೆ:

ಸಾರ್ವಜನಿಕ ಶಿಕ್ಷಣ ಇಲಾಖೆ ಬುಡಕಟ್ಟು ವಿದ್ಯಾರ್ಥಿಗಳಿಗೆ ಅವರ ಶೈಕ್ಷಣಿಕ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಿದೆ.

೧. ವಿದ್ಯಾವಿಕಾಸ ಕಾರ್ಯಕ್ರಮದಡಿ ೧ ರಿಂದ ೭ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಬುಡಕಟ್ಟು ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರಗಳನ್ನು ಒದಗಿಸಲಾಗುತ್ತಿದೆ.

೨. ೧ರಿಂದ ೭ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಬುಡಕಟ್ಟು ವಿದ್ಯಾರ್ಥಿನಿಯವರಿಗೆ ಉಚಿತವಾಗಿ ಶಾಲಾ ಬ್ಯಾಗ್‌ಗಳನ್ನು ವಿತರಿಸಲಾಗುತ್ತಿದೆ.

೩. ಹೆಚ್ಚುವರಿ ಶಾಲಾ ಕೊಠಡಿಗಳನ್ನು ನಿರ್ಮಿಸುವ ಕಾರ್ಯಕ್ರಮಗಳನ್ನು ಸಹ ರೂಪಿಸಿಕೊಂಡು, ಈ ಯೋಜನೆಯ ಅಡಿಯಲ್ಲಿ ಕೊಠಡಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

೩.೪.೩.೧೯. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆ:

ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಮುಖ್ಯ ಉದ್ದೇಶ ಗ್ರಾಮೀಣ ಪ್ರದೇಶದ ಜನರಿಗೆ ಆಯ್ದ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶ ಒದಗಿಸಿ ಅವರ ಜೀವನ ಮಟ್ಟವನ್ನು ಸುಧಾರಿಸುವುದಾಗಿದೆ. ಸಣ್ಣ ಮತ್ತು ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರು ಈ ಯೋಜನೆಗಳಿಂದ

ಪ್ರಯೋಜನ ಪಡೆಯುವರು. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಯು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಈ ಕೆಳಗಿನ ಸೌಲಭ್ಯಗಳನ್ನು ಕಲ್ಪಿಸುತ್ತಿದೆ.

೧.ಎಸ್.ಜಿ.ಎಸ್.ವೈ. ೨. ಎಸ್.ಜಿ.ಆರ್.ವೈ ೧ ಮತ್ತು ೨, ೩. ಇಂದಿರಾ ಆವಾಸ್ ಯೋಜನೆ, ೪. ಡಿ.ಪಿ.ಎ.ಪಿ, ೫. ಗ್ರಾಮ ಪಂಚಾಯತ್‌ಗಳಿಗೆ ಅನುದಾನ, ೬. ಪಂಚಾಯತ್ ರಾಜ್ಯ ಸಂಸ್ಥೆಗಳಿಗೆ ಅನುದಾನ, ೭. ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ, ೮. ಪಿ.ಎಂ.ಜಿ.ಎಸ್.ವೈ, ೯. ಸಣ್ಣ ನೀರಾವರಿ, ೧೦. ರಸ್ತೆ ಮತ್ತು ಸೇತುವೆಗಳು, ೧೧. ಗ್ರಾಮೀಣ ನೀರು ಪೂರೈಕೆ ಮತ್ತು ನೈರ್ಮಲ್ಯ. ಈ ಯೋಜನಗಳಲ್ಲಿ ಬುಡಕಟ್ಟಿನವರಿಗೆ ಉದ್ಯೋಗಗಳನ್ನು ಒದಗಿಸಿ ಅವರ ಜೀವನಕ್ಕೆ ನಿರಂತರ ಆದಾಯ ದೊರೆಯುವಂತೆ ಮಾಡಲಾಗುತ್ತಿದೆ.

೩.೪.೩.೨೦. ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್:

ಕ್ಯಾಸ್‌ಕಾರ್ಡ ಬ್ಯಾಂಕ್ ವತಿಯಿಂದ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೆ ಸಣ್ಣ ನೀರಾವರಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ ಮತ್ತು ಕೃಷಿ ಕಾರ್ಯಕ್ರಮಗಳಿಗೆ ನೀಡುವ ಸಾಲಕ್ಕೆ ಸಹಾಯಧನ ನೀಡುವ ಯೋಜನೆಯು ಜಾರಿಯಲ್ಲಿರುತ್ತದೆ.

೩.೪.೩.೨೧. ಸಹಕಾರ ಇಲಾಖೆ:

ಗಿರಿಜನರು ಕಾಡುಗಳಲ್ಲಿ ಸಂಗ್ರಹಿಸುವ ಅರಣ್ಯ ಉತ್ಪನ್ನಗಳನ್ನು ಯೋಗ್ಯ ಬೆಲೆಗೆ ಮಾರಲು ಹಾಗೂ ಜೀವನಕ್ಕೆ ಬೇಕಾಗುವ ಜೀವನಾವಶ್ಯಕ ಪದಾರ್ಥಗಳನ್ನು ಕಡಿಮೆ ಬೆಲೆಗೆ ಪಡೆಯುವ ಉದ್ದೇಶದಿಂದ "ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರ ಸಂಘಗಳನ್ನು" (LAMPS) ಸ್ಥಾಪಿಸಲಾಗಿದೆ. ಇವುಗಳನ್ನು ಬಲಪಡಿಸಲು ಸಹಕಾರ ಇಲಾಖೆಯ ವತಿಯಿಂದ ಸಹಾಯ ಧನ ನೀಡಲಾಗುತ್ತಿದೆ. ಇಂತಹ ಸಹಕಾರ ಸಂಘಗಳ ಸ್ಥಾಪನೆಯಿಂದ ಬುಡಕಟ್ಟು ಜನರ ಮೇಲೆ ಆಗುತ್ತಿದ್ದ ಲೇವಾದೇವಿದಾರರ ಮಧ್ಯವರ್ತಿಗಳ ಶೋಷಣೆಯನ್ನು ತಪ್ಪಿಸಿದಂತಾಗಿದೆ. ಇಂತಹ ಸಹಕಾರ ಸಂಘಗಳಲ್ಲಿ ಬುಡಕಟ್ಟಿನವರೇ ಸದಸ್ಯರಾಗಿದ್ದು ಅವರು ಅರಣ್ಯಗಳಲ್ಲಿ ಸಂಗ್ರಹಿಸುವಂತಹ ಹಾಗೂ ಉತ್ಪಾದಿಸುವಂತಹ ವಸ್ತುಗಳಿಗೆ ಸ್ಪರ್ಧಾತ್ಮಕ ಬೆಲೆಗೆ ಮಾರಾಟ ಮಾಡಿ ಇದರಿಂದ ಸಹಕಾರ ಸಂಘಕ್ಕೆ ಬರುವ ಲಾಭವು ಬುಡಕಟ್ಟು ಜನರಿಗೆ ತಲುಪಿಸುತ್ತಿದೆ.

ಈ ರೀತಿಯ ಸಹಕಾರ ಸಂಘಗಳು ಕರ್ನಾಟಕ ರಾಜ್ಯದಲ್ಲಿ ೧೯ ಸ್ಥಳಗಳಲ್ಲಿದ್ದು ೬೨,೨೯ ಬುಡಕಟ್ಟಿನವರನ್ನು ಸದಸ್ಯರನ್ನಾಗಿ ನೊಂದಾಯಿಸಿಕೊಂಡು ಅವರಿಗೆ ವಿವಿಧ ರೀತಿಯ ಸೌವಲತ್ತುಗಳನ್ನು ಒದಗಿಸಲಾಗುತ್ತಿದೆ. ಇಂತಹ ಸಹಕಾರ ಸಂಘಗಳಿಗೆ ಕೇಂದ್ರ ಸರ್ಕಾರದ "ಟ್ರೈಫೆಡ್" ಸಂಸ್ಥೆಯ ಮೂಲಕ ಹೆಚ್ಚಿನ ಸಹಾಯ ದೊರೆಯುತ್ತದೆ

೩.೪.೩.೨೨. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ:

ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಪಂಗಡದವರ ಉಪಯೋಗಕ್ಕಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ನೀರು ವಿತರಣಾ ಕೊಳವೆಗಳನ್ನು ಅವರು ವಾಸಿಸುವ ಕಾಲೋನಿಗಳಿಗೆ ಒದಗಿಸಿ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ.

೩.೪.೩.೨೩. ಆರೋಗ್ಯ:

ಗ್ರಾಮೀಣ ಮತ್ತು ಕಾಡಿನ ಮಧ್ಯದಲ್ಲಿ ವಾಸಿಸುವ ಬುಡಕಟ್ಟುಗಳಿಗೆ ಆರೋಗ್ಯ ಕಾರ್ಯಕ್ರಮಗಳನ್ನು ಈ ಯೋಜನೆಯ ಅಡಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಇದಕ್ಕಾಗಿಯೇ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಿ ಬುಡಕಟ್ಟನವರಿಗೆ ಉಚಿತ ಆರೋಗ್ಯ ತಪಾಸಣೆ ಮಾಡಿ ಚಿಕಿತ್ಸೆ ನೀಡುವುದರ ಜೊತೆಗೆ ಆರೋಗ್ಯದ ಬಗೆಗೆ ತಿಳುವಳಿಕೆ ನೀಡಲಾಗುತ್ತಿದೆ. ಬುಡಕಟ್ಟುಗಳು ವಾಸವಾಗಿರುವ ಪ್ರದೇಶಗಳಿಗೆ ಈ ಯೋಜನೆಯನ್ನು ಸರ್ಕಾರೇತರ ಸಂಸ್ಥೆಗಳು ಸಹ ಕೇಂದ್ರ ಸರ್ಕಾರದ ಅನುದಾನದ ಸಹಾಯದಿಂದ ಸಂಚಾರಿ ಆರೋಗ್ಯ ಘಟಕಗಳನ್ನು ತೆರೆದು ಸೇವೆ ಸಲ್ಲಿಸುತ್ತಿವೆ.

೩.೪.೩.೨೪. ಉದ್ಯೋಗ ಮತ್ತು ತರಬೇತಿ ಕೇಂದ್ರಗಳು:

ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ಚಿಕ್ಕಮಗಳೂರು ಜಿಲ್ಲೆಯ ಕಳಸ ಮತ್ತು ಜಯಪುರ, ಕೊಡಗು ಜಿಲ್ಲೆಯ ಬಸವನಹಳ್ಳಿಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಕನ್ಯಾನ ಮತ್ತು ಕುಪ್ಪೆಪದವು ಹಾಗೂ ಮೈಸೂರು ಜಿಲ್ಲೆಯ ವೀರನ ಹೊಸಹಳ್ಳಿಯಲ್ಲಿ ೬ ತರಬೇತಿ ಕೇಂದ್ರಗಳನ್ನು ಪರಿಶಿಷ್ಟ ವರ್ಗದವರಿಗೆ ಉದ್ಯೋಗ ಮತ್ತು ತರಬೇತಿ ಶಿಬಿರಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗುತ್ತಿದ್ದು, ಪ್ರತಿ ಕೇಂದ್ರಗಳಲ್ಲಿ ತಲಾ ೧೫ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ.

೩.೪.೩.೨೫. ರಸ್ತೆ ಮತ್ತು ಸೇತುವೆ:

ಬುಡಕಟ್ಟು ಜನರ ಕಾಲೋನಿಗಳಿಗೆ ಈ ಯೋಜನೆಯಡಿ ಸಂಪರ್ಕ ರಸ್ತೆ, ಸೇತುವೆಗಳನ್ನು ಜಿಲ್ಲಾ ಮಟ್ಟದಲ್ಲಿ ಲೋಕೋಪಯೋಗಿ ಇಲಾಖೆಯ ವತಿಯಿಂದ ಕಲ್ಪಿಸಲಾಗುತ್ತಿದೆ. ಕೂಡು ರಸ್ತೆ, ಹೊಸ ರಸ್ತೆ, ಡಾಂಬರೀಕರಣ, ಕಾಂಕ್ರೇಟ್ ರಸ್ತೆ ಮುಂತಾದ ಕಾಮಗಾರಿಗಳನ್ನು ಈ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದೆ.

೨೦೧೩-೧೪ನೇ ಸಾಲಿನಲ್ಲಿ ಬುಡಕಟ್ಟು ಸಮುದಾಯಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಯೋಜನೆಯಲ್ಲಿ ಉಡುಪಿ ಜಿಲ್ಲೆಯ ವಿಧಾನ ಸಭಾ ಕ್ಷೇತ್ರವಾರು ಕಾಂಕ್ರೀಟ ರಸ್ತೆ

ನಿರ್ಮಾಣ ಕಾಮಗಾರಿಗಳನ್ನು ಐ.ಟಿ.ಡಿ.ಪಿ. ಮೂಲಕ ಹಮ್ಮಿಕೊಳ್ಳಲಾಗಿದೆ. ಅದರ ವಿವರ ಈ ಕೆಳಗಿನಂತಿದೆ.

೨೦೦೮-೦೯ ನೇ ಸಾಲಿನಲ್ಲಿ ಕೊರಗ ಸಮುದಾಯದವರು ವಾಸಿಸುತ್ತಿರುವ ಪ್ರದೇಶಗಳ ರಸ್ತೆ ರಚನೆ ಮತ್ತು ರಸ್ತೆ ಅಭಿವೃದ್ಧಿಗಾಗಿ ೩೨/- ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿತ್ತು.

ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬುಡಕಟ್ಟುಗಳ ಕಾಲೋನಿಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿದ ವಿವರಗಳು: ಕೊರಗ ಸಮುದಾಯ ವಾಸಿಸುತ್ತಿರುವ ೩೮ ಕಳತ್ತೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಕುಕ್ಕುಂಜೆ ಬೈಲು ಕಾಲೋನಿಯ ರಸ್ತೆ, ಚಾಂತಾರು ಗ್ರಾಮ ಪಂಚಾಯತಿ ವ್ಯಾಪ್ತಿಯ ಸುಮತಿ ಫಾರ್ಮ ಬಳಿಯ ಕೊರಗರ ಕಾಲೋನಿ ರಸ್ತೆ, ಕುಂಜಾಲು ಗ್ರಾಮ ಪಂಚಾಯತಿ ವ್ಯಾಪ್ತಿಯ ಕುಂಲಾಲು ಜಡ್ಡು ಗ್ರಾಮದ ಕೊರಗ ಕಾಲೋನಿ ರಸ್ತೆ ಹಾಗೂ ನಾಲ್ಕೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಮಾರಾಳಿ ಕೊರಗ ಕಲೋನಿಯ ರಸ್ತೆಯನ್ನು ಕಾಂಕ್ರೇಟೀಕರಣ ಮಾಡಿದ್ದು ಈ ಕಾರ್ಯಕ್ಕೆ ಒಟ್ಟು ರೂ.೪೦ ಲಕ್ಷ ಮೀಸಲಿಡಲಾಗಿತ್ತು .ಇದರಲ್ಲಿ ರೂ.೪೦/-ಲಕ್ಷ ವೆಚ್ಚ ಮಾಡಿ ಕಾಂಕ್ರೀಟ ರಸ್ತೆ ನಿರ್ಮಾಣ ಮಾಡಲಾಗಿದೆ.

ಕಾಪು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬುಡಕಟ್ಟುಗಳ ಕಾಲೋನಿಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿದ ವಿವರಗಳು: : ಕೊರಗ ಸಮುದಾಯ ವಾಸಿಸುತ್ತಿರುವ ೮೦. ಬಡಗಬೆಟ್ಟು ಗ್ರಾಮ ಪಂಚಾಯತಿ ವ್ಯಾಪ್ತಿಯ ಕೊರಗ ಸಮುದಾಯ ವಾಸಿಸುತ್ತಿರುವ ಅರ್ಬಿ ಕಾಲೋನಿ ರಸ್ತೆ, ಬೊಮ್ಮರಬೆಟ್ಟು ಗ್ರಾಮ ಪಂಚಾಯತಿ ವ್ಯಾಪ್ತಿಯ ಸಾಣೆಕಲ್ಲು, ಉದ್ದಪಳ್ಳೆ ಕಾಲೋನಿ ರಸ್ತೆ, ಕುಕ್ಕೆಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕನಪಾಡಿ ಕೊರಗರ ಕಾಲೋನಿಯ ರಸ್ತೆ, ಉದ್ಯಾವರ ಗ್ರಾಮ ಪಂಚಾಯತಿ ವ್ಯಾಪ್ತಿಯ ಜನತಾ ಕೊರಗ ಕಾಲೋನಿಯ ರಸ್ತೆ ಮತ್ತು ಮಣಿಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ದೆಂದೂರು ಕೊರಗ ಕಲೋನಿಯ ರಸ್ತೆಯನ್ನು ಕಾಂಕ್ರೇಟೀಕರಣ ಮಾಡಿದ್ದು ಈ ಕಾರ್ಯಕ್ಕೆ ಒಟ್ಟು ರೂ.೪೦ ಲಕ್ಷ ಮೀಸಲಿಡಲಾಗಿತ್ತು .ಇದರಲ್ಲಿ ರೂ.೪೦/-ಲಕ್ಷ ವೆಚ್ಚ ಮಾಡಿ ಕಾಂಕ್ರೀಟ ರಸ್ತೆ ನಿರ್ಮಾಣ ಮಾಡಿದ್ದಾರೆ ಎಂಬ ಮಾಹಿತಿಯನ್ನು ಐ.ಟಿ.ಡಿ.ಪಿ

ಅಧಿಕಾರಿಗಳು ನೀಡಿದ್ದಾರೆ.



ಛಾಯ ಚಿತ್ರ ಸಂ. ಉಡುಪಿ ಐ.ಟಿ.ಡಿ.ಪಿ ವತಿಯಿಂದ ಕುಂಭಾಶಿ ಅಂಬೇಡ್ಕರ್ ಕೊರಗರ ಕಾಲೋನಿಯಲ್ಲಿ ನಿರ್ಮಾಣಗೊಂಡ ಕಾಂಕ್ರಿಟ್ ರಸ್ತೆ

ಕುಂದಾಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬುಡಕಟ್ಟುಗಳ ಕಾಲೋನಿಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿದ ವಿವರಗಳು: ಅಮಾಸೆಬೈಲು ಗ್ರಾಮ ಪಂಚಾಯತಿ ವ್ಯಾಪ್ತಿಯ ಕುಂದಾಪುರ ತಾಲೂಕು ಹಳೆ ಅಮಾಸೆಬೈಲು, ಕುಂಬ್ರಿಜೆಡ್ಡು ಕಾಲೋನಿಯ ರಸ್ತೆಯನ್ನು ಕಾಂಕ್ರೇಟು ಮಾಡಲು ರೂ. ೧೦/- ಲಕ್ಷ ಖರ್ಚು ಮಾಡಿರುವುದಾಗಿ, ಹೆಗ್ಗುಂಜಿ ಗ್ರಾಮ ಪಂಚಾಯತಿ ವ್ಯಾಪ್ತಿಯ ೩೩ ನೇ ಶಿರೂರು ಗ್ರಾಮದ ಶಿರೂರು ಹೊಳೆಬಾಗಿಲು ಮರಾಠಿ ನಾಯ್ಕ ಸಮುದಾಯದವರ ಕಾಲೋನಿಯಿಂದ ಹೆಬ್ಬಾಡಿ ಅಂಗಡಿಮಕ್ಕಿ ಮರಾಠಿ ನಾಯ್ಕ ಸಮುದಾಯದ ಕಾಲೋನಿವರೆಗೆ ಹೋಗುವ ರಸ್ತೆಯನ್ನು ಕಾಂಕ್ರೇಟು ಮಾಡಲು ರೂ. ೧೮/- ಲಕ್ಷ ಖರ್ಚು ಮಾಡಿರುವುದಾಗಿ ಐ.ಟಿ.ಡಿ.ಪಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬೈಂದೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬುಡಕಟ್ಟುಗಳ ಕಾಲೋನಿಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿದ ವಿವರಗಳು: ಹಕ್ಲಾಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹಕ್ಲಾಡಿ ಗುಡ್ಡೆಯಲ್ಲಿ ವಾಸಿಸುತ್ತಿರುವ ಆದಿವಾಸಿಗಳ ಕಾಲೋನಿಯ ರಸ್ತೆ, ಬೈಂದೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ದ್ಯಾವಪ್ಪನಡಿ ಕಾಲೋನಿಯ ರಸ್ತೆ, ಚಿತ್ತೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಹೊಸೂರು ಗ್ರಾಮ ಮಣ್ಮರಹರ ಕಾಲೋನಿಯ ರಸ್ತೆ, ಯಡ್ತರೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಹೊಸೂರು ಮುಲ್ಲಿಬಾರು ಆದಿವಾಸಿಗಳ ಕಾಲೋನಿ ರಸ್ತೆ, ಹಾಗೂ ಹೊಸಂಗಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಎಡಮೊಗೆ ಗ್ರಾಮದ ಮಂಗನಮಕ್ಕಿ ರತ್ನ ನಾಯ್ಕ ಇವರ ಮನೆಯಿಂದ ಅಂಗಳವಾನ್ ಜೆಡ್ಡುವರೆಗಿನ ಮರಾಠಿ ನಾಯ್ಕ ಸಮುದಾಯದ ಕಾಲೋನಿಯ ರಸ್ತೆಯನ್ನು ಕಾಂಕ್ರೇಟೀಕರಣ ಮಾಡಿದ್ದು ಈ ಕಾರ್ಯಕ್ಕೆ ಒಟ್ಟು ರೂ.೪೦ ಲಕ್ಷ



ಮೀಸಲಿಡಲಾಗಿತ್ತು. .ಇದರಲ್ಲಿ ರೂ.೪೦/-ಲಕ್ಷ ವೆಚ್ಚ ಮಾಡಿ ಕಾಂಕ್ರೀಟ ರಸ್ತೆ ನಿರ್ಮಾಣ ಮಾಡಿದ್ದಾರೆ ಎಂಬ ಮಾಹಿತಿಯನ್ನು ಐ.ಟಿ.ಡಿ.ಪಿ ಅಧಿಕಾರಿಗಳು ನೀಡಿದ್ದಾರೆ.

ಕಾರ್ಕಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬುಡಕಟ್ಟುಗಳ ಕಾಲೋನಿಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿದ ವಿವರಗಳು: ನಿಟ್ಟೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಕಲಂಬಾಡಿ ಪದವು ಹೇಳಕದ ಆದಿವಾಸಿಗಳ ಕಾಲೋನಿಯ ರಸ್ತೆ, ಮಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಪೇರಡ್ಕ ಮಲೆಕುಡಿಯ ಕಾಲೋನಿಯ ರಸ್ತೆ, ಮುದ್ರಾಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಬಲ್ಲಾಡಿ ನರರೋಲ್ ಪಲ್ಕೆಯಿಂದ ಗಾಳಿಪಡ್ಪು ಆದಿವಾಸಿಗಳ ಕಾಲೋನಿ ರಸ್ತೆ, ಸೂಡ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೊಬಲ್ಕೆ ಭೋಜ ನಾಯ್ಕ ಅವರ ಮನೆಯಿಂದ ಮರಾಠಿ ನಾಯ್ಕ ಸಮುದಾಯದ ಕಾಲೋನಿವರೆಗಿನ ಕಾಂಕ್ರೇಟ ರಸ್ತೆಯನ್ನು ಕೆ.ಆರ್.ಐ.ಡಿ.ಎಲ್ ಮೂಲಕ ನಿರ್ವಹಿಸಿದ್ದಾರೆ. ಮುನಿಯಾಲು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಮುನಿಯಾಲು ಗಾಂಧಿ ಮೈದಾನ, ವೀರ ಸಾವರ್ಕರ್ ನಗರದಲ್ಲಿ ವಾಸಿಸುತ್ತಿರುವ ೨೨ ಮನೆಗಳಿರುವ ಬುಡಕಟ್ಟುಗಳ ಕಾಲೋನಿ ರಸ್ತೆ ಹಾಗೂ ದುರ್ಗಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಬೆದ್ರಪಲ್ಕೆ ಶಾಲೆಯಿಂದ ಕಡೆಪೈರಾಲು ಆದಿವಾಸಿಗಳ ಕಾಲೋನಿವರೆಗಿನ ರಸ್ತೆಯನ್ನು ರಸ್ತೆಯನ್ನು ಕಾಂಕ್ರೇಟೀಕರಣ ಮಾಡಿದ್ದು ಈ ವಿಧಾನ ಸಭಾ ವ್ಯಾಪ್ತಿಯಲ್ಲಿ ಬರುವ ೬ ಗ್ರಾಮಗಳ ಬುಡಕಟ್ಟುಗಳ ಕಾಲೋನಿ ರಸ್ತೆಗಳನ್ನು ಕಾಂಕ್ರೀಟ ಮಾಡಲು ಒಟ್ಟು ರೂ.೬೦ ಲಕ್ಷ ಮೀಸಲಿಡಲಾಗಿತ್ತು .ಇದರಲ್ಲಿ ರೂ.೫೫/- ವೆಚ್ಚ ಮಾಡಿ ಕಾಂಕ್ರೀಟ ರಸ್ತೆ ನಿರ್ಮಾಣ ಮಾಡಿದ್ದಾರೆ ಎಂಬ ಮಾಹಿತಿಯನ್ನು ಐ.ಟಿ.ಡಿ.ಪಿ ಅಧಿಕಾರಿಗಳು ನೀಡಿದ್ದಾರೆ.

ಉಡುಪಿ ಜಿಲ್ಲೆಯ ಒಟ್ಟು ೫ ವಿಧಾನ ಸಭಾ ಕ್ಷೇತ್ರಗಳಲ್ಲಿಯ ಒಟ್ಟು ೨೩ ಸ್ಥಳಗಳಲ್ಲಿ ವಾಸಿಸುತ್ತಿರುವ ಆದಿವಾಸಿಗಳ ಕಾಲೋನಿಗಳ ರಸ್ತೆಗಳನ್ನು ಕಾಂಕ್ರೇಟಿಕರಣಗೊಳಿಸಲು ೨೦೧೩-೧೪ ನೇ ಸಾಲಿನಲ್ಲಿ ಒಟ್ಟು ರೂ. ೨೧೫/-ಲಕ್ಷ ರೂ ಗಳನ್ನು ಖರ್ಚು ಮಾಡಿದೆ. ಆದಿವಾಸಿಗಳು ವಾಸಿಸುತ್ತಿರುವ ಸ್ಥಳಗಳ ರಸ್ತೆಗಳ ಕಾಂಕ್ರೇಟ ಮಾಡಲು ಈ ಸಾಲಿನಲ್ಲಿ ಒಟ್ಟು ರೂ ೨೨೦/- ಲಕ್ಷ ಮೀಸಲಿಡಲಾಗಿತ್ತು ಎಂಬ ಮಾಹಿತಿಯನ್ನು ಜಿಲ್ಲಾ ಯೋಜನಾ ಸಮನ್ವಯಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಉಡುಪಿ ಇವರು ಮಾಹಿತಿ ನೀಡಿದ್ದಾರೆ.

೨೦೧೪-೧೫ ನೇ ಸಾಲಿನಲ್ಲಿ ಬುಡಕಟ್ಟು ಸಮುದಾಯಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಯೋಜನೆಯಲ್ಲಿ ಉಡುಪಿ ಜಿಲ್ಲೆಯ ವಿಧಾನ ಸಭಾ ಕ್ಷೇತ್ರವಾರು ಕಾಂಕ್ರೀಟ ರಸ್ತೆ ನಿರ್ಮಾಣ ಕಾಮಗಾರಿಗಳನ್ನು ಐ.ಟಿ.ಡಿ.ಪಿ. ಮೂಲಕ ಹಮ್ಮಿಕೊಳ್ಳಲಾಗಿದೆ. ಅದರ ವಿವರ ಈ ಕೆಳಗಿನಂತಿದೆ.

ಉಡುಪಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬುಡಕಟ್ಟುಗಳ ಕಾಲೋನಿಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿದ ವಿವರಗಳು: ಕೊರಗ ಸಮುದಾಯ ವಾಸಿಸುತ್ತಿರುವ ಉಪ್ಪೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಬೋಳ್ಮಾರು ಕಲೋನಿಯಲ್ಲಿ, ೩೮. ಕಳತ್ತೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಕಳತ್ತೂರು ಸಂತೆಕಟ್ಟೆ ಈಯಾಲು ಕಾಲೋನಿ ರಸ್ತೆ, ಕರ್ಜೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಹಲುವಳ್ಳಿ ಗ್ರಾಮದ ಕೊರಗರ ಕಾಲೋನಿ ಮತ್ತು ಕುಂಜಾಲ ಗ್ರಾಮ ಪಂಚಾಯತಿ ವ್ಯಾಪ್ತಿಯ ನೀಲಾವರ ಗ್ರಾಮದಲ್ಲಿ ವಾಸಿಸುತ್ತಿರುವ ಮರಾಠಿ ನಾಯ್ಕ ಸಮುದಾಯದ ಕಾಲೋನಿಯ ರಸ್ತೆಯನ್ನು ಕಾಂಕ್ರೇಟೀಕರಣ ಮಾಡಿದ್ದು ಈ ಕಾರ್ಯಕ್ಕೆ ಒಟ್ಟು ರೂ.೪೦ ಲಕ್ಷ ಮೀಸಲಿಡಲಾಗಿತ್ತು .ಇದರಲ್ಲಿ ರೂ.೩೯,೯೯೧೫/- ವೆಚ್ಚ ಮಾಡಿ ಕಾಂಕ್ರೀಟ ರಸ್ತೆ ನಿರ್ಮಾಣ ಮಾಡಲಾಗಿದೆ.

ಕಾಪು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬುಡಕಟ್ಟುಗಳ ಕಾಲೋನಿಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿದ ವಿವರಗಳು: ಕೊರಗ ಸಮುದಾಯ ವಾಸಿಸುತ್ತಿರುವ ಶಿರ್ವ ಗ್ರಾಮದಿಂದ ಗುಂಡ್ರಾಲುನಿಂದ ನಿಂಜೂರಿಗೆ ಹೋಗುವ ಕೊರಗರ ಕಾಲೋನಿಯ ರಸ್ತೆ, ಕುಕ್ಕೆಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಮರಾಠಿ ನಾಯ್ಕ ಸಮುದಾಯ ವಾಸಿಸುತ್ತಿರುವ ಅಂಜಾರು ದುರ್ಗಾನಗರದಿಂದ ಮರಾಠಿ ಸಭಾ ಭವನಕ್ಕೆ ಹೋಗುವ ರಸ್ತೆ, ಮಣಿಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಕುಂತಲನಗರದ ಕಾಲೋನಿ ರಸ್ತೆ, ಬೊಮ್ಮರ ಬೆಟ್ಟು ಗ್ರಾಮ ಪಂಚಾಯತಿ ವ್ಯಾಪ್ತಿಯ ಪುತ್ತಿಗೆಯಿಂದ ಪಾಪುಜೆವರೆಗಿನ ರಸ್ತೆ ಮತ್ತು ಕೂಡಿಬೆಟ್ಟು ಗ್ರಾಮ ಪಂಚಾಯತಿ ವ್ಯಾಪ್ತಿಯ ೮೨ನೇ ಕುದಿ ದೇವರಗುಂಡ ಕಾಲೋನಿಯ ರಸ್ತೆಯನ್ನು ಕಾಂಕ್ರೇಟೀಕರಣ ಮಾಡಿದ್ದು ಈ ಕಾರ್ಯಕ್ಕೆ ಒಟ್ಟು ರೂ.೪೦ ಲಕ್ಷ ಮೀಸಲಿಡಲಾಗಿತ್ತು .ಇದರಲ್ಲಿ ರೂ.೩೯,೯೪೮೬/- ವೆಚ್ಚ ಮಾಡಿ ಕಾಂಕ್ರೀಟ ರಸ್ತೆ ನಿರ್ಮಾಣ ಮಾಡಿದ್ದಾರೆ ಎಂಬ ಮಾಹಿತಿಯನ್ನು ಐ.ಟಿ.ಡಿ.ಪಿ ಅಧಿಕಾರಿಗಳು ನೀಡಿದ್ದಾರೆ.

ಕುಂದಾಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬುಡಕಟ್ಟುಗಳ ಕಾಲೋನಿಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿದ ವಿವರಗಳು: ಕೋಣೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಂದಾವರ ಗ್ರಾಮದ ಅಂಬೇಡ್ಕರ ಕಾಲೋನಿಯ ರಸ್ತೆ, ಬಿಲ್ಲಾಡ ಗ್ರಾಮ ಪಂಚಾಯತಿ ವ್ಯಾಪ್ತಿಯ ವಂಡಾರು ಗ್ರಾಮದ ಗರನಕೋಡಿ ಕಾಲೋನಿ ರಸ್ತೆ, ಅಮಾಸೆಬೈಲ ಗ್ರಾಮ ಪಂಚಾಯತಿ ವ್ಯಾಪ್ತಿಯ ಜಡ್ಡಿನಗದ್ದೆ ಗಾಳಿಗುಡ್ಡೆ ಜೆಡ್ಡು ಕ್ರಾಸಿನಿಂದ ಆದಿವಾಸಿಗಳ ಕಾಲೋನಿಗೆ ಹೋಗುವ ರಸ್ತೆ ಮತ್ತು ಆವರ್ಸೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಹಿಲಿಯಾಣ ಗ್ರಾಮದ ಆಮ್ರಕಲ್ಲಿನಿಂದ ಕೊಟ್ಟೆ ಬಚ್ಚಲುಗೆ ಹೋಗುವ ಸಂಪರ್ಕ ರಸ್ತೆಯನ್ನು ಕಾಂಕ್ರೇಟೀಕರಣ ಮಾಡಿದ್ದು ಈ ಕಾರ್ಯಕ್ಕೆ ಒಟ್ಟು

ರೂ.೪೦ ಲಕ್ಷ ಮೀಸಲಿಡಲಾಗಿತ್ತು .ಇದರಲ್ಲಿ ರೂ.೩೯,೯೮೦೨೧/- ವೆಚ್ಚ ಮಾಡಿ ಕಾಂಕ್ರೀಟ ರಸ್ತೆ ನಿರ್ಮಾಣ ಮಾಡಿದ್ದಾರೆ ಎಂಬ ಮಾಹಿತಿಯನ್ನು ಐ.ಟಿ.ಡಿ.ಪಿ ಅಧಿಕಾರಿಗಳು ನೀಡಿದ್ದಾರೆ.

ಬೈಂದೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬುಡಕಟ್ಟುಗಳ ಕಾಲೋನಿಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿದ ವಿವರಗಳು: ಆಲೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಹರ್ಕೂರು ಗ್ರಾಮದ ನಾರ್ಕಳ್ಳಿ ಶಾಲೆ ಹತ್ತಿರವಿರುವ ಆದಿವಾಸಿ ಸಮುದಾಯಗಳು ವಾಶಸುತ್ತಿರುವ ಕಾಲೋನಿಯ ರಸ್ತೆ, ಚಿತ್ತೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಚಿತ್ತೂರು-ಕಿರಾಡಿ ರಸ್ತೆಯಿಂದ ಚಿತ್ತೂರು ದ್ಯಾಸಕೇರಿಯ ವರೆಗಿನ ರಸ್ತೆ, ಹೊಸಂಗಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಯಡಮೊಗೆ ಗ್ರಾಮದ ಶಾಲೆಗದ್ದೆ ಕಾಲೋನಿ ರಸ್ತೆ, ಜಡ್ಕಲ್ ಗ್ರಾಮ ಪಂಚಾಯತಿ ವ್ಯಾಪ್ತಿಯ ಬಸ್ಸಿಬೇರು ಕಾಲೋನಿಯ ರಸ್ತೆ, ಗೋಲಿಹೊಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಬಾಳೆಕೊಡ್ಲು ಕಾಲೋನಿಯ ರಸ್ತೆ ಹಾಗೂ ಕಾಲ್ತೋಡು ಗ್ರಾಮ ಪಂಚಾಯತಿ ವ್ಯಾಪ್ತಿಯ ಕೇರಿಜೆಡ್ಡು ಹ್ಯಾಗುಳಿ ದೇವಸ್ಥಾನಕ್ಕೆ ಹೋಗುವ ಮಾರ್ಗದ ರಸ್ತೆಯನ್ನು ಕಾಂಕ್ರೇಟೀಕರಣ ಮಾಡಿದ್ದು ಈ ಕಾರ್ಯಕ್ಕೆ ಒಟ್ಟು ರೂ.೪೦ ಲಕ್ಷ ಮೀಸಲಿಡಲಾಗಿತ್ತು. ಇದರಲ್ಲಿ ರೂ.೩೩,೯೯೪೯/- ವೆಚ್ಚ ಮಾಡಿ ಕಾಂಕ್ರೀಟ ರಸ್ತೆ ನಿರ್ಮಾಣ ಮಾಡಿದ್ದಾರೆ ಎಂಬ ಮಾಹಿತಿಯನ್ನು ಐ.ಟಿ.ಡಿ.ಪಿ ಅಧಿಕಾರಿಗಳು ನೀಡಿದ್ದಾರೆ.

ಕಾರ್ಕಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬುಡಕಟ್ಟುಗಳ ಕಾಲೋನಿಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿದ ವಿವರಗಳು: ಕುಚ್ಚೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಕುಚ್ಚೂರು ಗ್ರಾಮದ ಹುಡ್ರೆಬೈಲು ಕಾಲೋನಿಯ ಸಂಪರ್ಕ ರಸ್ತೆ, ಮಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಪೇರಡ್ಕ ಮಲೆಕುಡಿಯ ಕಾಲೋನಿಯ ಮೀನಗೌಡ್ರ ಮನೆಯ ಬಳಿ ಇರುವ ರಸ್ತೆ, ಕೌಡೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಶೇರಿಂಗಾರ ಬೆಟ್ಟ ಕಾಲೋನಿ ರಸ್ತೆ, ಕೇರ್ಬಾಣೀ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೇರ್ವಾಣಿ ಗ್ರಾಮದ ದೊಂದಬೈಲು ಪ್ರದೇಶದ ಸಂಪರ್ಕ ರಸ್ತೆ ಹಾಗೂ ಕಡ್ತಲ ಪಂಚಾಯತಿ ವ್ಯಾಪ್ತಿಯಲ್ಲಿರುವ ಎಳ್ಳಾರೆ ಗ್ರಾಮದ ಹೊಗ್ಯೆಜೆಡ್ಡುದಲ್ಲಿ ವಾಶಿಸುತ್ತಿರುವ ಬುಡಕಟ್ಟುಗಳ ಕಾಲೋನಿ ರಸ್ತೆಯನ್ನು ಕಾಂಕ್ರೇಟೀಕರಣ ಮಾಡಿದ್ದು ಈ ವಿಧಾನ ಸಭಾ ವ್ಯಾಪ್ತಿಯಲ್ಲಿ ಬರುವ ೬ ಗ್ರಾಮಗಳ ಬುಡಕಟ್ಟುಗಳ ಕಾಲೋನಿ ರಸ್ತೆಗಳನ್ನು ಕಾಂಕ್ರೀಟ ಮಾಡಲು ಒಟ್ಟು ರೂ.೬೦ ಲಕ್ಷ ಮೀಸಲಿಡಲಾಗಿತ್ತು .ಇದರಲ್ಲಿ ರೂ.೫೯,೯೭,೮೩೮/- ವೆಚ್ಚ ಮಾಡಿ ಕಾಂಕ್ರೀಟ ರಸ್ತೆ ನಿರ್ಮಾಣ ಮಾಡಿದ್ದಾರೆ ಎಂಬ ಮಾಹಿತಿಯನ್ನು ಐ.ಟಿ.ಡಿ.ಪಿ ಅಧಿಕಾರಿಗಳು ನೀಡಿದ್ದಾರೆ.

ಉಡುಪಿ ಜಿಲ್ಲೆಯ ಒಟ್ಟು ೫ ವಿಧಾನ ಸಭಾ ಕ್ಷೇತ್ರಗಳಲ್ಲಿಯ ಒಟ್ಟು ೨೬ ಸ್ಥಳಗಳಲ್ಲಿ ವಾಸಿಸುತ್ತಿರುವ ಆದಿವಾಸಿಗಳ ಕಾಲೋನಿಗಳ ರಸ್ತೆಗಳನ್ನು ಕಾಂಕ್ರೇಟಿಕರಣಗೊಳಿಸಲು ೨೦೧೪-೧೫ ನೇ ಸಾಲಿನಲ್ಲಿ ಒಟ್ಟು ರೂ. ೨,೧೩,೯೫,೨೦೯/- ಗಳನ್ನು ಖರ್ಚು ಮಾಡಿದೆ. ಆದಿವಾಸಿಗಳು ವಾಸಿಸುತ್ತಿರುವ ಸ್ಥಳಗಳ ರಸ್ತೆಗಳ ಕಾಂಕ್ರೇಟ ಮಾಡಲು ಈ ಸಾಲಿನಲ್ಲಿ ಒಟ್ಟು ರೂ ೨೨೦/- ಲಕ್ಷ ಮೀಸಲಿಡಲಾಗಿತ್ತು ಎಂಬ ಮಾಹಿತಿಯನ್ನು ಜಿಲ್ಲಾ ಯೋಜನಾ ಸಮನ್ವಯಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಉಡುಪಿ ಇವರು ಮಾಹಿತಿ ನೀಡಿದ್ದಾರೆ.

೩.೪.೩.೨೬. ಗ್ರಾಮೀಣ ನೀರು ಪೂರೈಕೆ:

ಈ ಯೋಜನೆ ಅಡಿಯಲ್ಲಿ ಬುಡಕಟ್ಟು ಸಮುದಾಯಗಳು ಹೆಚ್ಚಿಗೆ ಇರುವ ಸ್ಥಳಗಳಲ್ಲಿ ನೂರ ಐವತ್ತು ಜನಸಂಖ್ಯೆಗೆ ಒಂದು ಕೊಳವೆ ಬಾವಿಯನ್ನು ಕೊರೆಯಿಸಿ ಕಿರು ನೀರಿನ ಸೌಕರ್ಯವನ್ನು ಒದಗಿಸುವ ಯೋಜನೆಯಿದ್ದು ಬುಡಕಟ್ಟು ಜನರಿಗೆ ಕುಡಿಯುವ ನೀರಿನ ಪೂರೈಕೆಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ.

೨೦೦೮-೦೯ ನೇ ಸಾಲಿನಲ್ಲಿ ಕೊರಗ ಸಮುದಾಯದ ಜನರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿಕೊಡುವ ಯೋಜನೆಗೆ ೨೫/- ಲಕ್ಷ ರೂ.ಗಳನ್ನು ನಿಗದಿಪಡಿಸಿ ವಿನಿಯೋಗಿಸಲಾಗಿದೆ.

೨೦೧೩-೧೪ ನೇ ಸಾಲಿನಲ್ಲಿ ಐ.ಟಿ.ಡಿ.ಪಿ ವತಿಯಿಂದ ಕುಂದಾಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬುಡಕಟ್ಟುಗಳ ಕಾಲೋನಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ತೆರೆದ ನೀರಿನ ಬಾವಿ ಮಾಡಿದ ವಿವರಗಳು: ಅಮಾಸೆಬೈಲು ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆಳಸುಂಕಮಕ್ಕಿಯಲ್ಲಿ ವಾಸಿಸುತ್ತಿರುವ ಆದಿವಾಸಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಸಲುವಾಗಿ ರೂ. ೬/- ಲಕ್ಷ ವೆಚ್ಚದಲ್ಲಿ ತೆರೆದ ನೀರಿನ ಬಾವಿ ಹಾಗೂ ಬಿಲ್ಲಾಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಜಾನವಾರುಕಟ್ಟೆ ಶ್ರೀಮತಿ. ಗುಜ್ರಿ, ಬೆಳಿಯ. ನರ್ಸಿ. ಭಾಗಿ ಜ್ಯೋತಿ ಇವರ ಕುಟುಂಬಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಸಲುವಾಗಿ ರೂ. ೬/- ಲಕ್ಷ ವೆಚ್ಚದಲ್ಲಿ ತೆರೆದ ನೀರಿನ ಬಾವಿ ನಿರ್ಮಿಸಲಾಗಿದೆ ಎಂದು ಐ.ಟಿ.ಡಿ.ಪಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

೩.೪.೩.೨೭.ಸೀರೆ ಮತ್ತು ಧೋತಿ ಯೋಜನೆ:

ಗಿರಿಜನ ಪ್ರದೇಶದಲ್ಲಿ ವಾಸಿಸುವ ಬುಡಕಟ್ಟು ಜನರಿಗೆ ಹಸಿರು ಕಾರ್ಡ್‌ಗಳನ್ನು ವಿತರಣೆ ಮಾಡಿದ್ದು, ಈ ರೀತಿಯ ಕಾರ್ಡ್‌ಗಳನ್ನು ಹೊಂದಿರುವ ಬುಡಕಟ್ಟು ಜನರಿಗೆ ಕಡಿಮೆ ದರದಲ್ಲಿ ನ್ಯಾಯ ಬೆಲೆ ಅಂಗಡಿಗಳ ಮೂಲಕ ಸೀರೆ, ಧೋತಿ ಇತ್ಯಾದಿ ವಸ್ತುಗಳನ್ನು ವಿತರಿಸಲಾಗುತ್ತದೆ.

೩.೪.೩.೨೮. ಮೂಲನಿವಾಸಿ ಯೋಜನೆಯಡಿ (ಸಿಸಿಡಿ ಪ್ಲ್ಯಾನ್) ಬಿಡುಗಡೆಯಾದ ಅನುದಾನ(೦೭/೨೦೧೬ರ ಪ್ರಗತಿ) ವಿವರ (೨೦೦೮-೦೯ನೇ ಸಾಲಿನ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ) ಉಡುಪಿ ಜಿಲ್ಲೆ

ಕ್ರ. ಸಂ	ಪಿ.ಟಿ.ಜಿ ಕಾರ್ಯಕ್ರಮದಡಿ ಅನುಷ್ಠಾನಗೊಳಿಸಲು ಅನುಮೋದನೆಗೊಂಡ ಕಾರ್ಯಕ್ರಮಗಳ ವಿವರ	ನಿಗದಿಗುರಿ	ನಿಗದಿಪಡಿಸಿದ ಅನುದಾನ ರೂ.ಲಕ್ಷಗಳಲ್ಲಿ	ಭೌತಿಕ ಪ್ರಗತಿ	ಆರ್ಥಿಕ ಪ್ರಗತಿ
೧	ವಸತಿ ಸೌಲಭ್ಯ	೪೦೦	೩೦೦.೦೦	೩೮೧	೨೬೪.೦೫
೨	ಭೂಮಿ ಸಮತಟ್ಟು	೭೦	೭.೦೦	೩೫	೭.೦೦
೩	ಆರೋಗ್ಯ	೩೫೦	೩೦.೦೦	೩೬೫	೨೯.೮೮
೪	ಶಿಕ್ಷಣ	೯೩೬	೪೦.೦೦	೧೦೦೧	೩೭.೩೫
೫	ಸ್ವಉದ್ಯೋಗತರಬೇತಿ ಹಾಗೂಸಹಾಯ ಧನ	೪೬೯	೯೨.೦೦	೫೭೪	೯೨.೦೦
೬	ನೀರಾವರಿಕುಡಿಯುವ ನೀರಿನ ಸೌಲಭ್ಯ	೩೨	೧೮೮.೦೦	೩೭	೧೫೭.೬೩
ಒಟ್ಟು			೬೫೭.೦೦	೨೩೯೩	೫೮೭.೯೧

ವಸತಿ ಸೌಲಭ್ಯ : ೨೦೦೮-೦೯ ನೇ ಸಾಲಿನಲ್ಲಿ ಮೂಲನಿವಾಸಿ ಅಭಿವೃದ್ಧಿ ಯೋಜನೆಯಡಿ (ಸಿಸಿಡಿ ಪ್ಲಾನ್) ಬಿಡುಗಡೆಯಾದ ಅನುದಾನದಲ್ಲಿ ಕೊರಗರಿಗೆ ಮೀಸಲಾದ ವಸತಿ ವ್ಯವಸ್ಥೆಗೆ ಸಂಬಂಧಿಸಿದಂತೆ ಸರಕಾರದ ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆ ಈ ವಸತಿ ಯೋಜನೆಗೆ ಒಟ್ಟು ೩೦೦/- ಲಕ್ಷ ರೂ.ಗಳನ್ನು ಬಿಡುಗಡೆಮಾಡಿದ್ದು, ಇದರಲ್ಲಿ ೩೮೧ ಫಲಾನುಭವಿಗಳು ವಸತಿ ಯೋಜನೆಯ ಪ್ರತಿಫಲ ಪಡೆದುಕೊಂಡಿದ್ದಾರೆ. ಈ ಅಂಕಿ ಅಂಶಗಳನ್ನು ಗಮನಿಸಿ ಹೇಳುವುದಾದರೆ ವಸತಿಗೆ ಸಂಬಂಧಿಸಿದಂತೆ ೨೬೪.೦೫ ರಷ್ಟು ಪ್ರಗತಿ ಸಾಧಿಸಿದಂತಾಗಿದೆ ಎಂದು ತಿಳಿಯಬಹುದು.

ಭೂಮಿ ಸಮತಟ್ಟು :

ಅನೇಕ ಕೊರಗರು ಹೊಂದಿರುವ ಭೂಮಿಯ ಸ್ವರೂಪವನ್ನು ಪರಿಗಣಿಸಿ, ಏರು ಪೇರಾಗಿರುವ ಮತ್ತು ಕೃಷಿ ಚಟುವಟಿಕೆಗಳಿಗೆ ಅಡಚಣೆ ಉಂಟಾಗುವ ಭೂಮಿಯನ್ನು ಸಮತಟ್ಟು ಮಾಡಿಕೊಡಲು ಸರಕಾರದ ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆ ೭೦ ಲಕ್ಷ

ರೂ.ಗಳ ಅನುದಾನವನ್ನು ನಿರೀಕ್ಷಿಸಿತ್ತು. ಆದರೆ ಇದರಲ್ಲಿ ಸರಕಾರ ಕೇವಲ ೭ ಲಕ್ಷ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದ್ದು ಇದರಲ್ಲಿ ೩೫ ಕೊರಗ ಕೃಷಿಕರು ತಮ್ಮ ಭೂಮಿಯನ್ನು ಸಮತಟ್ಟು ಮಾಡಿಸಿಕೊಂಡಿದ್ದಾರೆ. ಕೇವಲ ೭ರಷ್ಟು ಮಾತ್ರ ಆರ್ಥಿಕ ಪ್ರಗತಿ ಸಾಧಿಸಿದಂತಾಗಿದೆ.

ಆರೋಗ್ಯ:

೨೦೦೮-೦೯ ನೇ ಸಾಲಿನಲ್ಲಿ ಮೂಲನಿವಾಸಿಗಳಾದ ಕೊರಗರ ಅನಾರೋಗ್ಯದಿಂದ ಬಳಲುತ್ತಿದ್ದರೆ ಅವರಿಗೆ ಸರಿಯಾದ ಮತ್ತು ಉತ್ತಮ ಹಾಗೂ ಅತ್ಯುತ್ತಮ ಆಸ್ಪತ್ರೆಗಳಲ್ಲಿ ಚಕಿತ್ಸೆ ಕೊಡಿಸುವ ಸಲುವಾಗಿ ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆ ೩೫೦/- ಲಕ್ಷ ರೂ.ಗಳ ನಿಗದಿತ ಗುರಿಯನ್ನು ಇಟ್ಟುಕೊಂಡಿತ್ತು ಆದರೆ ಇದರಲ್ಲಿ ಕೇವಲ ೩೦/- ಲಕ್ಷ ರೂ.ಗಳ ಅನುದಾನ ಮಂಜೂರಾಗಿದ್ದು, ೨೦೦೮-೦೯ ಸಾಲಿನಲ್ಲಿ ೩೬೫ ಅನಾರೋಗ್ಯ ಪೀಡಿತರಿಗೆ ಕೊರಗರಿಗೆ ಮಾತ್ರ ಈ ಯೋಜನೆಯ ಪ್ರತಿಫಲ ದೊರೆತಂತಾಗಿದೆ. ಈ ಯೋಜನೆಯಡಿಯಲ್ಲಿ ಕೇವಲ ೨೯.೮೮ರಷ್ಟು ಮಾತ್ರ ಆರ್ಥಿಕ ಪ್ರಗತಿ ಸಾಧಿಸಿದಂತಾಗಿದೆ.

ಶಿಕ್ಷಣ:

ಸರಕಾರದ ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆ ಮೂಲ ನಿವಾಸಿಗಳ ವಿವಿಧ ಶೈಕ್ಷಣಿಕ ಕ್ಷೇತ್ರಗಳ ಅಭಿವೃದ್ಧಿಗಾಗಿ ೯೩೬/- ಲಕ್ಷ ರೂ.ಗಳ ಅನುದಾನ ನೀಡುವಂತೆ ಬಜೆಟ್‌ನಲ್ಲಿ ಸರಕಾರಕ್ಕೆ ಆಗ್ರಹಿಸಿತ್ತು. ಆದರೆ ಸರಕಾರ ಇದರಲ್ಲಿ ಕೇವಲ ೪೦/- ಲಕ್ಷ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದ್ದು, ಇದರಲ್ಲಿ ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆ ೨೦೦೮-೦೯ ರಲ್ಲಿ ರೂಪಿಸಿದ ಅನೇಕ ಶೈಕ್ಷಣಿಕ ಅಭಿವೃದ್ಧಿ ಯೋಜನೆಗಳನ್ನು ಮುಟುಕುಗೊಳಿಸಿ, ೪೦/- ಲಕ್ಷ ರೂ.ಗಳ ಅನುದಾನದಲ್ಲಿ ೧೦೦೧ರ ಪ್ರಮಾಣದಲ್ಲಿ ಗಿರಿಜನರ ಶೈಕ್ಷಣಿಕಪ್ರಗತಿಯಾಗಿದ್ದು, ೩೭.೩೫ರಷ್ಟು ಆರ್ಥಿಕ ಪ್ರಗತಿಯಾಗಿರುವುದಾಗಿ ಐ.ಟಿ.ಡಿ.ಪಿ ಹೇಳಿಕೊಂಡಿದೆ.

ಸ್ವ ಉದ್ಯೋಗ ತರಬೇತಿ ಹಾಗೂ ಫಲಾನುಭವಿಗಳಿಗೆ ಸಹಾಯ ಧನ ಕಲ್ಪಿಸುವ ಯೋಜನೆ:

ಕೊರಗ ಸಮುದಾಯದವರು ಸ್ವಂತ ಉದ್ಯೋಗ ಪ್ರಾರಂಭಿಸಿ ಸ್ವತಂತ್ರವಾದ ಬದುಕು ಕಂಡುಕೊಂಡು ಅವರನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಅನೇಕ ಸ್ವ ಉದ್ಯೋಗ ತರಬೇತಿಗಳನ್ನು ನೀಡಿ ಮತ್ತು ಅವರಿಗೆ ಸ್ವಂತ ಉದ್ಯೋಗ ಕೈಕೊಳ್ಳಲು ಆರ್ಥಿಕ ನೆರವು ನೀಡುವ ದೃಷ್ಟಿಯಿಂದ ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆ ೨೦೦೮-

೦೯ ನೇ ಸಾಲಿನ ಆಯವ್ಯಯದಲ್ಲಿ ೪೬೯/- ಲಕ್ಷ ರೂ.ಗಳ ಅನುದಾನ ನೀಡುವಂತೆ ಸರಕಾರಕ್ಕೆ ಕೇಳಿಕೊಂಡಿತ್ತು. ಆದರೆ ಸರಕಾರ ಈ ಸಾಲಿನಲ್ಲಿ ೬೨/- ಲಕ್ಷ ರೂ.ಗಳನ್ನು ಮಾತ್ರ ಈ ಅಭಿವೃದ್ಧಿ ಯೋಜನೆಗೆ ನಿಗದಿಪಡಿಸಿದ ಹಿನ್ನೆಲೆಯಲ್ಲಿ ಭೌತಿಕವಾಗಿ ಕೇವಲ ೫೭೪ ಕೊರಗರಿಗೆ ಮಾತ್ರ ಇದರ ಪ್ರಯೋಜನೆ ದೊರೆತಂತಾಗಿದೆ. ಸ್ವ ಉದ್ಯೋಗ ತರಬೇತಿ ಹಾಗೂ ಫಲಾನುಭವಿಗಳಿಗೆ ಸಹಾಯ ಧನ ಕಲ್ಪಿಸುವ ಯೋಜನೆಯ ಆರ್ಥಿಕ ಪ್ರಗತಿ ೬೨ ರಷ್ಟು ಮಾತ್ರ.

ನೀರಾವರಿ/ ಕುಡಿಯುವ ನೀರಿನ ಯೋಜನೆ:

ದಕ್ಷಿಣ ಕನ್ನಡ ಜಿಲ್ಲೆಯ ಕೊರಗರು ಇತ್ತಿತ್ತಲಾಗಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಆದಾಯ ನಿರೀಕ್ಷಿಸುತ್ತಿದ್ದಾರೆ. ಕೃಷಿಯಲ್ಲಿ ಆಶಕ್ತಿ ತೋರಿಸುವ ಕೊರಗರಿಗೆ ಸರಕಾರ ಭೂಮಿಯನ್ನು ನೀಡುತ್ತಿದೆ. ಕೃಷಿಯಲ್ಲಿ ನಿರತರಾದ ಕುಟುಂಬಗಳಿಗೆ ಅವರ ಎಲ್ಲ ಕೃಷಿ ಚಟುವಟಿಕೆಗಳಿಗೆ ಹಣಕಾಸಿನ ನೆರವು ನೀಡುವ ಅಗತ್ಯತೆಯನ್ನು ಮತ್ತು ಆದಿವಾಸಿಗಳು ವಾಸಿಸುತ್ತಿರುವ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ತೆರೆದ ಬಾವಿ ತೋಡುವ, ಬೋರ್‌ವೆಲ ಕೊರೆಸಿ ಪಂಪಸೆಟ್ ಅಳವಡಿಸಿ, ಪೈಪಲೈನ್ ಮಾಡುವ ಮುಂತಾದ ಕಾಮಗಾರಿಗಳನ್ನು ಕೈಕೊಳ್ಳಲು ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆ ೨೦೦೮-೦೯ ನೇ ಸಾಲಿನ ಸರಕಾರದ ಆಯವ್ಯಯದಲ್ಲಿ ೩೨/- ಲಕ್ಷ ರೂ.ಗಳನ್ನು ಕೇಳಿಕೊಂಡಿತ್ತು. ಸರಕಾರ ಈ ಯೋಜನೆಗೆ ೧೮೮/- ಲಕ್ಷ ರೂ.ಗಳ ನೆರವು ನೀಡಿದ್ದು ನೀರಾವರಿ/ ಕುಡಿಯುವ ನೀರಿನ ಯೋಜನೆಯಲ್ಲಿ ೩೭ರಷ್ಟು ಭೌತಿಕ ಹಾಗೂ ೧೫೭ ರಷ್ಟು ಆರ್ಥಿಕ ಪ್ರಗತಿಯನ್ನು ಸಾಧಿಸಿದಂತಾಗಿದೆ ಎಂದು ಐ.ಟಿ.ಡಿ.ಪಿ ಹೇಳಿಕೊಂಡಿದೆ.

೨೦೦೮-೦೯ ನೇ ಸಾಲಿನಲ್ಲಿ ಮೂಲ ನಿವಾಸಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೊರಗರ ಸಮಗ್ರ ಅಭಿವೃದ್ಧಿಗಾಗಿ ೬೫೭/- ಲಕ್ಷ ರೂ.ಗಳ ಅನುದಾನ ಬಿಡುಗಡೆಯಾಗಿದ್ದು ಅದರಲ್ಲಿ ೨೪೩ ರಷ್ಟು ಭೌತಿಕ ಹಾಗೂ ೫೯೭.೯೧ ರಷ್ಟು ಆರ್ಥಿಕ ಪ್ರಗತಿ ಸಾಧಿಸಿದಂತಾಗಿದೆ ಎಂದು ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳ ಅಭಿಪ್ರಾಯವಾಗಿದೆ. ಆದರೆ ೨೦೦೮-೦೯ ನೇ ಸಾಲಿನಲ್ಲಿ ಮೂಲ ನಿವಾಸಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೊರಗರ ಸಮಗ್ರ ಅಭಿವೃದ್ಧಿಗಾಗಿ ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆ ಒಟ್ಟು ೨೨೫೭/-ಲಕ್ಷ ರೂ.ಗಳ ಕ್ರಿಯಾ ಯೋಜನೆ ಸಿದ್ಧಪಡಿಸಿ, ಅನುದಾನ ನೀಡುವಂತೆ ಸರಕಾರವನ್ನು ಕೇಳಿಕೊಂಡಿತ್ತು.

೩.೪.೩.೨೯. ಕೊರಗ ಸಮುದಾಯದವರಿಗೆ ೨೦೦೮-೦೯ನೇ ಸಾಲಿನ ಆಯವ್ಯಯದಲ್ಲಿ ಬಿಡುಗಡೆಯದ ಅನುದಾನದ(೦೭/೨೦೧೬ರ) ಪ್ರಗತಿ ವಿವರ

ಕ್ರ ಸಂ	ಕಾರ್ಯಕ್ರಮದ ವಿವರ	ನಿಗದಿಪಡಿಸಿದ ಗುರಿ	ನಿಗದಿಪಡಿಸಿದ ಅನುದಾನ	ಭೌತಿಕ ಪ್ರಗತಿ	ಆರ್ಥಿಕ ಪ್ರಗತಿ ರೂ.ಲಕ್ಷಗಳಲ್ಲಿ
೧	ಕೊರಗ ಸಮುದಯದ ಕೃಷಿ ಅಭಿವೃದ್ಧಿಗಾಗಿ ನೀರಾವರಿ ಸೌಲಭ್ಯ ಹಾಗೂ ಕುಡಿಯುವ ನೀರು (೩೯.೦೦+೨೫.೦೦) =೬೪.೦೦	೧೨	೬೪.೦೦	೧೯	೫೭.೯೪
೨	ಮೂಲಭೂತ ಸೌಕರ್ಯಗಳು – ೧೦೨.೦೦	೫	೨೫.೦೦	೪	೧೯.೧೪
೩	ಸಮುದಾಯ ಭವನ				
೪	ವಿದ್ಯುತ್ ಸಂಪರ್ಕ	೦	೨೦.೦೦	೨೧೩	೧೭.೫೦
೫	ರಸ್ತೆ ರಚನೆ ಮತ್ತು ಅಭಿವೃದ್ಧಿ	೫	೩೨.೦೦	೬	೩೧.೯೧
೬	ಮಹಿಳಾ ಸ್ವಸಹಾಯ ಸಂಘಗಳಿಗೆ ಸಹಾಯಧನ ೩೦.೦೦ (೨೮.೦೦ಲಕ್ಷ. ಅನುದಾನವನ್ನು ವೈದ್ಯಕೀಯ ವೆಚ್ಚಕ್ಕೆ ವರ್ಗಾಹಿಸಲಾಗಿದೆ)	೩೦	೨.೦೦	೨	೨.೦೦
	ವೈದ್ಯಕೀಯ ವೆಚ್ಚ ಮರುಪಾವತಿ		೨೮.೦೦	೧೨೩	೨೮.೦೦
ಒಟ್ಟು			೧೭೧.೦೦	೩೬೭	೧೫೬.೪೯

೨೦೦೮-೦೯ ನೇ ಸಾಲಿನ ಆಯವ್ಯಯದಲ್ಲಿ ಕರ್ನಾಟಕ ಸರಕಾರ ಕೊರಗರ ಅಭಿವೃದ್ಧಿಗಾಗಿ ಒಟ್ಟು ೧೭೧/- ಲಕ್ಷ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಅನುದಾನದ ಹಣವನ್ನು ೦೭.೨೦೧೬ರ ವರೆಗೆ ಯಾವ ಯಾವ ಯೋಜನೆಗಳಿಗೆ ಆ ಹಣವನ್ನು ಉಪಯೋಗಿಸಿದ್ದೇವೆ, ಆಯಾ ಯೋಜನೆಗಳ ಮೂಲಕ ಕೊರಗರ ಭೌತಿಕ ಹಾಗೂ ಆರ್ಥಿಕ ಪ್ರಗತಿ ಯಾವ ಪ್ರಮಾಣದಲ್ಲಿ ಉಂಟಾಗಿದೆ ಎಂಬುದರ ವಿವರಣೆಯನ್ನು ಈ ಮೇಲಿನ ಟೇಬಲ್‌ನ ಅಂಕಿ ಅಂಶಗಳ ಮೂಲಕ ಕಂಡುಕೊಳ್ಳಬಹುದು.

೩.೪.೩.೩೦. ಮೂಲನಿವಾಸಿ ಅಭಿವೃದ್ದಿ ಯೋಜನೆಯಡಿ (ಸಿಸಿಡಿ ಪ್ಲ್ಯಾನ್) ೨೦೧೦-೧೧ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನದ ಮತ್ತು ೨೦೧೬ರ ಪ್ರಗತಿ ವಿವರ

ಕ್ರ ಸಂ	ಕಾರ್ಯಕ್ರಮಗಳ ವಿವರ	ನಿಗದಿತ ಭೌತಿಕ ಗುರಿ	ನಿಗದಿಪಡಿಸಿದ ನುದಾನ	ಭೌತಿಕ ಪ್ರಗತಿ	ಆರ್ಥಿಕ ಪ್ರಗತಿ ರೂ ಲಕ್ಷಗಳಲ್ಲಿ	ಷರಾ
	ವಸತಿ ಸೌಲಭ್ಯ	೩೦೦	೨೨೫.೦೦	೨೩೪	೧೬೭.೭೫	ಕಾಮಗಾರಿಅನುಷ್ಠಾನಗೊಳ್ಳುತ್ತಿದೆ.
೧	ವಸತಿ ಸೌಲಭ್ಯ (ಸರಕಾರಿ ಭೂಮಿ)			೬	೪.೫೦	ಕಾಮಗಾರಿಅನುಷ್ಠಾನಗೊಳ್ಳುತ್ತಿದೆ.
೨	ರಸ್ತೆಅಭಿವೃದ್ಧಿ(ಕಾಂಕ್ರೀಟೀಕರಣ)	೧೧	೭೦.೦೦	೧೨	೬೭.೪೯	ಕಾಮಗಾರಿ ಅನಿಷ್ಠಾನಗೊಂಡಿದೆ.
೩	ಕುಡಿಯುವ ನೀರಿನ ಸೌಲಭ್ಯ	೨೩	೧೧೫.೦೦	೨೩	೯೯.೬೮	ಕಾಮಗಾರಿ ನುಷ್ಠಾನಗೊಳ್ಳುತ್ತಿದೆ.
೪	ಪ್ರವಾಸಿ ಕಾರು ವಿತರಣೆ	೩೦	೫೦.೦೦	೨೯	೪೮.೮೭	೨೯ಲಾನುಭವಿಗಳಿಗೆ ಚೆಕ್ ಮೂಲಕ ಅನುದಾನ ಪವತಿಸಲಾಗಿದೆ.
೫	ಕೊರಗರಸಾಂಸ್ಕೃತಿಕಕಲೆಯಾದ ಡೋಲು ವಿತರಣೆ ಹಾಗೂ ಸಾಂಸ್ಕೃತಿಕ ಉತ್ಸವಗಳು	೨೦	೫.೦೦	೬	೨.೭೧	ಕಾರ್ಯಕ್ರಮ ಅನುಷ್ಠಾನದ ಹಂತದಲ್ಲಿದೆ.
೬	ಕೊರಗಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯ ಬಗ್ಗೆ ಸಮೀಕ್ಷೆ (ಡಾ.ಟಾ ಎಂಟ್ರಿ ಸಮೀಕ್ಷೆ ೨೫೮.೦೦)	೨೫೧೮	೧.೩೫	-	೦.೮೫	
ಒಟ್ಟು			೪೬೬.೩೫	೩೧೦	೩೯೧.೮೫	

೩.೪.೩.೩೧. ಮೂಲನಿವಾಸಿ ಯೋಜನೆಯಡಿ ಬಿಡುಗಡೆಯಾದ ೨೦೧೧-೧೨ ಮತ್ತು ೨೦೧೩-೧೪ನೇ ಸಾಲಿನ ವರೆಗೆ ಬಿಡುಗಡೆಯಾದ ಅನುದಾನದ ಮತ್ತು ೨೦೧೬ರ ಪ್ರಗತಿ ವಿವರ (ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಉಡುಪಿ ಜಿಲ್ಲೆ)

ಕ್ರಸಂ	ಕಾರ್ಯಕ್ರಮಗಳ ವಿವರ	ನಿಗದಿಪಡಿಸಿದ ಅನುದಾನ	ಆರ್ಥಿಕ ಪ್ರಗತಿ ರೂ.ಲಕ್ಷಗಳಲ್ಲಿ	ಭೌತಿಕ ಪ್ರಗತಿ
೧	ಆರೋಗ್ಯ ವಲಯ	೪೦.೬೭	೪೦.೬೭	೧೦೦
೨	ಸ್ವ ಉದ್ಯೋಗ ತರಬೇತಿ ಹಾಗೂ ಸಹಾಯ ಧನ	೨೮.೦೦	೧೨.೪೫	೧೬
೩	ಕುಡಿಯುವನೀರಿನಸೌಲಭ್ಯ.ಸಮುದಾಯ	೭೩.೫೦	೪೧.೫೬	೧೧
೪	ರಸ್ತೆ ಕಾಂಕ್ರೀಟೀಕರಣ	೧೦೪.೦೦	೮೪.೩೫	೧೮
೫	ಸಮುದಾಯ ಭವನ	೩.೦೦	೨.೧೦	೧
೬	ಕೊರಗ ಕುಟುಂಬ ಸಮೀಕ್ಷೆ ಹಾಗೂ ಸ್ಮಾರ್ಟ್ ಕಾರ್ಡ್ ಕಾರ್ಯಕ್ರಮ	೫.೦೦	೦.೦೦	೦
೭	ಕುಂಭಾಶಿ ಕೊರಗ ಮಕ್ಕಳ ಶಿಕ್ಷಣ (ಮಕ್ಕಳ ಮನೆ) ಕಾರ್ಯಕ್ರಮ	೪.೦೦	೪.೦೦	೧೧
	ಒಟ್ಟು	೨೫೮.೧೭	೧೮೫.೧೩	೧೫೭

೩.೪.೩.೩.೨. ಮೂಲನಿವಾಸಿ ಅಭಿವೃದ್ಧಿ ಯೋಜನೆಯಡಿ (ಸಿಸಿಡಿ ಪ್ಲ್ಯಾನ್) ೨೦೧೧-೧೨ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನದ ಮತ್ತು ೨೦೧೬ರ ಪ್ರಗತಿ ವಿವರ (ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ)

ಕ್ರ ಸಂ	ಅನುದಾನ ಬಿಡುಗಡೆಯಾದ ವರ್ಷ	ಪಿ.ಟಿ.ಜಿ ಕಾರ್ಯಕ್ರಮದಡಿ ಅನುಷ್ಠಾನಗೊಳಿಸಲು ಅನುಮೋದನೆಗೊಂಡ ಕಾರ್ಯಕ್ರಮಗಳ ವಿವರ	ನಿಗದಿಪಡಿಸಿದ ನುದಾನ	ಆರ್ಥಿಕ ಪ್ರಗತಿ	ಭೌತಿಕ ಪ್ರಗತಿ
೧	ಜನವರಿ – ೨೦೧೩	ವೈದ್ಯಕೀಯ ವೆಚ್ಚ	೭೪.೭೫	೬೭.೦೯	೩೨೦
೨		ಶೈಕ್ಷಣಿಕ ಅಭಿವೃದ್ಧಿ	೩೫.೫೮೨	೨೩.೪೩	೩೪೦
೩		ಕೊರಗ ಮಕ್ಕಳ ಸಾಂಸ್ಕೃತಿಕ, ರಂಗ ತಂಡಕ್ಕೆ ಸಹಾಯ ಧನ (೩.೦೦ ವೈದ್ಯಕೀಯ ವೆಚ್ಚ ಮರುಪಾವತಿ)	೩.೦೦	೦.೦೦	೦
೪		ಸೌಲಭ್ಯ ವಂಚಿತ ಕೊರಗ ಕುಟುಂಬಗಳಿಗೆ ಮೂಲಭೂತ ಸೌಕರ್ಯ	೧೨.೫೦	೫.೦೦	೨೦
		ಸೌಲಭ್ಯ ವಂಚಿತ ಕೊರಗ ಕುಟುಂಬಗಳಿಗೆ ಮೂಲಭೂತ ಸೌಕರ್ಯ (ಮನೆ ದುರಸ್ಥಿ ೩೦.೦೦ ದಲ್ಲಿ ೧೭.೫೦ ಮರುಹೊಂದಾಣಿಕೆ) ೧೨.೫೦ ವೈದ್ಯಕೀಯ ವೆಚ್ಚ	೧೨.೫೦	೦.೦೦	೦
		ಕುಂಭಾಶಿ ಮಕ್ಕಳ ಮನೆ ೫.೦೦	೫.೦೦	೧.೦೭	೧೪
೫		ಕೊರಗ ಸಮುದಾಯದವರಿಗೆ ಕುಡಿಯುವ ನೀರಿನ ಸೌಲಭ್ಯ	೧೦೬.೦೦	೮೩.೬೦	೨೦
೬		ಬಾವಿ ಆಳಪಡಿಸುವುದು, ಪಂಪ್ ಸೆಟ್ ಸಿಸ್ಟರ್ನ್ ಹಾಗೂ ಕಾಂಕ್ರೀಟ್‌ರಿಂಗ್ ಅಳವಡಿಸುವುದು	೧೨.೦೦	೭.೬೫	೬
೭		ತರಬೇತಿ ಕಾರ್ಯಕ್ರಮ	೩.೦೦	೧.೬೬	೫೫
೮		ಕೊರಗ ಸಮುದಾಯ ಭವನಕ್ಕೆ ವಿದ್ಯುತ್ ಸಂಪರ್ಕ ಹಾಗೂ ಶೌಚಾಲಯ ರಚನೆ	೩.೭೫	೦	೦
೯		ರಸ್ತೆ ಕಾಂಕ್ರೀಟೀಕರಣ	೫೦	೪೮.೭೮	೦
೧೦			೬.೦೦	೫.೭೧	೧೩
೧೧			೨.೦೦	೦.೮೦	೨
೧೨			೨.೦೦	೦	೦
ಒಟ್ಟು			೩೩೯.೫೮೨	೨೪೪.೭೯	೮೦೮
೧	ಜನವರಿ/೨೦೧೨	ವಸತಿ ಸೌಲಭ್ಯ	೬೧೯.೨೭	೧೧೨.೭೫	೧೭೫
ಒಟ್ಟು ಮೊತ್ತ			೯೫೮.೮೫೨	೩೫೭.೫೪	೯೮೩

೧.ವೈದ್ಯಕಿಯ ವೆಚ್ಚ :

ಸರ್ಕಾರವು ಮೂಲ ನಿವಾಸಿಗಳ ಅಭಿವೃದ್ಧಿ ಮಾಡಲು ವೈದ್ಯಕೀಯ ಸೌಲಭ್ಯ ನೀಡಿ ಅವರನ್ನು ಆರೋಗ್ಯದಿಂದಿರಲು ಸರಕಾರ ಯೋಚಿಸಿ, ಅನಾರೋಗ್ಯ ಪೀಡಿತರಾದ ಮತ್ತು ಆರ್ಥಿಕವಾಗಿ ಹಿಂದುಳಿದ ಕೊರಗರು ಉತ್ತಮವಾದ ಚಿಕಿತ್ಸೆ ಪಡೆಯಲು ೭೪.೭೫ ಲಕ್ಷ ರೂ.ಗಳನ್ನು ನಿಗದಿ ಪಡಿಸಿದ್ದು, ಈ ಅನುದಾನದಲ್ಲಿ ೩೨೦ ಅನಾರೋಗ್ಯ ಪೀಡಿತ ಕೊರಗರು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ ಮತ್ತು ಈ ನಿಟ್ಟಿನಲ್ಲಿ ಆರ್ಥಿಕ ೬೭.೦೯ ಪ್ರಗತಿಯು ಆಗಿದೆ ಎಂಬ ಮಾಹಿತಿ ಇದೆ.

೨.ಶೈಕ್ಷಣಿಕ ಅಭಿವೃದ್ಧಿ :

ಕೊರಗರು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಸರಕಾರವು ೩೨,೫೮೨ ಲಕ್ಷ ರೂ.ಗಳ ಅನುದಾನ ನಿಗದಿಪಡಿಸಿದ್ದು ಅದರಲ್ಲಿ, ೨೩,೪೩ ಆರ್ಥಿಕವಾಗಿ ಪ್ರಗತಿ ಪಡೆದಿದ್ದು ೩೮೪ ಭೌತಿಕ ಪ್ರಗತಿಯನ್ನು ಹೊಂದಲಾಗಿದೆ.

೩.ಕೊರಗ ಮಕ್ಕಳ ಸಾಂಸ್ಕೃತಿಕ ರಂಗ ತಂಡಕ್ಕೆ ಸಹಾಯ ಧನ:

ಕೊರಗರ ಮಕ್ಕಳು ತಮ್ಮ ಸಾಂಪ್ರದಾಯಕ ಕಲೆ, ಸಾಹಿತ್ಯ ಮುಂತಾದ ವಿಶೇಷ ಕಾರ್ಯಕ್ರಮಗಳನ್ನು ಪ್ರಯೋಗಿಸಲು ಮತ್ತು ಆ ನಿಟ್ಟಿನಲ್ಲಿ ತರಬೇತಿ ಪಡೆಯಲು ಸರಕಾರ ೩ ಲಕ್ಷ ರೂ.ಗಳ ಸಹಾಯಧನ ನೀಡಲು ನಿಗದಿಪಡಿಸಿತ್ತು. ಆದರೆ ಈ ಹಣವನ್ನು ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ವಿನಿಯೋಗಿಸಲಾಯಿತು.

೪.ಸೌಲಭ್ಯ ವಂಚಿತ ಕೊರಗ ಕುಟುಂಬಗಳಿಗೆ ಮೂಲಭೂತ ಸೌಕರ್ಯ:

ಈ ಯೋಜನೆಗೆ ಸರಕಾರ ನಿಗದಿಪಡಿಸಿದ ಅನುದಾನ ೧೨.೫೦ ಲಕ್ಷ ರೂ.ಗಳಾಗಿದ್ದು ಇದರ ಪ್ರಯೋಜನವನ್ನು ಕೊರಗರ ೨೦ ಫಲಾನುಭವಿಗಳು ಪಡೆದುಕೊಂಡಿದ್ದಾರೆ. ಇದರಿಂದ ೫ ರಷ್ಟು ಪ್ರಮಾಣದಲ್ಲಿ ಆರ್ಥಿಕ ಪ್ರಗತಿಯನ್ನು ಸಾಧಿಸಿದಂತಾಗಿದೆ. ಇದೇ ಯೋಜನೆಯಡಿ ಕೊರಗರು ತಮ್ಮ ಹಾಳಾದ ಮನೆಗಳನ್ನು ರಿಪೇರಿ ಮಾಡಿಸಿಕೊಳ್ಳಲು ೩೦/- ಲಕ್ಷ ರೂಗಳನ್ನು ನಿಗದಿಪಡಿಸಿದ್ದು, ಅದರಲ್ಲಿ ೧೭.೫೦/- ಲಕ್ಷ ರೂ.ಗಳನ್ನು ಮರುಹೊಂದಾಣಿಕೆ ಮತ್ತು ೧೨.೫೦/- ಲಕ್ಷ ರೂ.ಗಳನ್ನು ಕೊರಗರಿಗೆ ವೈದ್ಯಕೀಯ ವೆಚ್ಚ ಭರಿಸಲು ವರ್ಗಾಯಿಸಲಾಗಿದೆ ಎಂದು ತಿಳಿದುಬಂದಿದೆ.

೫.ಕುಂಬಾಸಿ ಮಕ್ಕಳ ಮನೆ:

ಕೊರಗರ ಮಕ್ಕಳಿಗಾಗಿ ವಿಶೇಷವಾದ ಶಿಕ್ಷಣ ನೀಡಲು ಕುಂಬಾಸಿಯಲ್ಲಿ ಶಾಲೆಯನ್ನು ಪ್ರಾರಂಭಿಸಿದ್ದು, ಅದರ ಖರ್ಚು ವೆಚ್ಚ ಮತ್ತು ಶಾಲೆಯ ಅಭಿವೃದ್ಧಿಗಾಗಿ ೫.ಲಕ್ಷ ರೂ.ಗಳನ್ನು

ವ್ಯಯಿಸಿದೆ. ಅದರಲ್ಲಿ ೧೪ರಷ್ಟು ಭೌತಿಕ ಹಾಗೂ ೧.೦೭ ದಷ್ಟು ಆರ್ಥಿಕ ಪ್ರಗತಿ ಆಗಿದೆ ಎಂದು ಹೇಳಲಾಗಿದೆ.

೬.ಕುಡಿಯುವ ನೀರಿನ ಸೌಲಭ್ಯ:

ಕೊರಗ ಸಮುದಾಯದವರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದಕ್ಕಾಗಿ ೧೦೬ /- ಲಕ್ಷ ರೂ.ಗಳನ್ನು ನಿಗದಿಪಡಿಸಿದ್ದು ಅದರಲ್ಲಿ ಕೊರಗರ ೨೦ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದ್ದು, ಶೇ. ೨೦ರಷ್ಟು ಆರ್ಥಿಕ ಪ್ರಗತಿಯನ್ನೂ ಹಾಗೂ ಬಾವಿ ತೋಡಿಸಿ ಅದಕ್ಕೆ ಕಾಂಕ್ರೀಟ್ರಿಂಗ್ ಪಂಪ್‌ಸೆಟ್ ಹಾಗೂ ಪೈಪ ಲೈನ ಸಿಸ್ಟರ್ನ್ ಅಳವಡಿಸಲು ೧೨/-ಲಕ್ಷ ರೂ.ಗಳನ್ನು ನಿಗದಿಪಡಿಸಿದ್ದು, ಇದರಲ್ಲಿ ೬ ಸ್ಥಳಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ರಚಿಸಿದ್ದು ೭.೬೫ ರಷ್ಟು ಆರ್ಥಿಕಪ್ರಗತಿ ಸಾಧಿಸಿದೆ ಎಂಬ ಮಾಹಿತಿ ದಾಖಲಾಗಿದೆ.

೭. ತರಬೇತಿ ಕಾರ್ಯಕ್ರಮ :

ಕೊರಗ ಸಮುದಾಯದ ತರುಣ ತರುಣಿಯರು ಹಾಗೂ ವಯಸ್ಕರ ಸ್ವಯಂ ಉದ್ಯೋಗ ತರಬೇತಿ ಪಡೆಯಲು ಈ ಯೋಜನೆಯಲ್ಲಿ ಸರಕಾರ ನಿಗದಿಮಾಡಿದ ಅನುದಾನ ೩.೦೦ ಲಕ್ಷ ರೂ.ಗಳಾಗಿದ್ದು ಇದರ ಪ್ರಯೋಜನವನ್ನು ೫೫ ಕೊರಗರು ಪಡೆದುಕೊಂಡಿದ್ದು, ೧,೬೬% ಪ್ರಮಾಣದಲ್ಲಿ ಆರ್ಥಿಕ ಪ್ರಗತಿ ಸಾಧಿಲಾಗಿದೆ ಎಂಬ ಮಾಹಿತಿ ಇದೆ.

೮. ಕೊರಗ ಸಮುದಾಯ ಭವನಕ್ಕೆ ವಿದ್ಯುತ್ ಸಂಪರ್ಕ ಹಾಗೂ ಶೌಚಾಲಯ ರಚನೆ :

ಈ ಕಾಮಗಾರಿಗಾಗಿ ಸರಕಾರ ನಿಗದಿ ಪಡಿಸಿದ ಅನುದಾನ ೩.೭೫ ಲಕ್ಷ ರೂಗಳಾಗಿದ್ದು, ಈ ಯೋಜನೆಗೆ ಸಂಬಂಧಿಸಿದ ಹಣವನ್ನು ಬಳಕೆ ಮಾಡದೇ ಇರುವುದು ತಿಳಿದುಬರುತ್ತದೆ. ಹೀಗಾಗಿ ಶೂನ್ಯ ಪ್ರಮಾಣದಲ್ಲಿ ಆರ್ಥಿಕ ಹಾಗೂ ಭೌತಿಕ ಪ್ರಗತಿ ಸಾಧಿಸಿದಂತಾಗಿದೆ.

೯. ರಸ್ತೆ ಕಾಂಕ್ರೀಟೀಕರಣ:

ಕೊರಗ ಸಮುದಾಯದವರು ವಾಸಿಸುತ್ತಿರುವ ಪ್ರದೇಶಗಳಲ್ಲಿ, ಕಾಲೋನಿಗಳಲ್ಲಿಯ ತಸ್ತೆಗಳನ್ನು ಕಾಂಕ್ರೀಟಿಕರಣಗೊಳಿಸಲು ಸರಕಾರ ನಿಗದಿಪಡಿಸಿದ ಒಟ್ಟು ಅನುದಾನ ೬೧.೫೦ ಲಕ್ಷ ರೂಗಳು. ಈ ಅನುದಾನದಲ್ಲಿ ೧೦ ಸ್ಥಳಗಳಲ್ಲಿ ರಸ್ತೆ ಕಾಂಕ್ರೇಟಿಕರಣಗೊಳಿಸಿದ್ದು, ಅದರ ಆರ್ಥಿಕ ಪ್ರಗತಿ ೪೮.೭೮ರ ಪ್ರಮಾಣದಲ್ಲಿದೆ.

೧೦. ಕೃಷಿ ಉಪಕರಣ ಒದಗಿಸಲು ಕಾರ್ಯಕ್ರಮ:

ಕೃಷಿಯಲ್ಲಿ ನಿರತರಾದ ಕೊರಗರಿಗೆ ಕೃಷಿ ಉಪಕರಣಗಳನ್ನು ಒದಗಿಸುವ ಸಲುವಾಗಿ ಸರಕಾರ ೬.೦೦ ಲಕ್ಷ ರೂಗಳ ಅನುದಾನ ನಿಗದಿಪಡಿಸಿದ್ದು ಅದರಲ್ಲಿ ೧೩ ಜನ ಕೊರಗರು

ಪ್ರಯೋಜನ ಪಡೆದುಕೊಂಡಿದ್ದಾರೆ ಈ ಯೋಜನೆಯ ಆರ್ಥಿಕ ಪ್ರಗತಿಯ ಫಲ ೫.೭೧ ಪ್ರಮಾಣದಲ್ಲಿದೆ.

೧೧. ಇಲಾಖೆ ಕಾರ್ಯಕ್ರಮಗಳ ಸಮೀಕ್ಷೆ :

ಸರಕಾರವು ನಿಗದಿ ಪಡಸಿದ ಕೊರಗ ಸಮುದಾಯದ ಅನುದಾನ ಹೇಗೆ ಅನುಷ್ಠಾನಗೊಂಡಿದೆ ಮತ್ತು ಅದರ ಉಪಯೋಗಗಳು ವಸ್ತುಸ್ಥಿತಿ ಹೇಗಿದೆ ಎಂಬುದನ್ನು ಕಂಡುಕೊಳ್ಳಲು ಸರಕಾರದ ವಿವಿಧ ಇಲಾಖೆಗಳ ಮುಖಾಂತರ ಸಮೀಕ್ಷೆ ನಡೆಸಲು ೨.೦೦ ಲಕ್ಷ ರೂ.ಗಳನ್ನು ನಿಗದಿ ಪಡಿಸಿ ಆ ಕಾರ್ಯ ಕೈಗೊಂಡಿದೆ. ಈ ಸಮೀಕ್ಷೆಯ ಪ್ರಕಾರ ಕೊರಗರ ಅಭಿವೃದ್ಧಿಯಲ್ಲಿ ಆರ್ಥಿಕ ಪ್ರಗತಿ ೦.೮೦ ಪ್ರಮಾಣದಲ್ಲಿ ಭೌತಿಕ ಪ್ರಗತಿ ೨% ಪ್ರಮಾಣದಲ್ಲಿರುವುದು ಕಂಡು ಬಂದಿದೆ ಎಂದು ಐ.ಟಿ.ಡಿ.ಪಿ ಅಧಿಕಾರಿಗಳು ಹೇಳಿಕೊಂಡಿದ್ದಾರೆ.

೧೨. ಇತರೆ ಇಲಾಖೆಗಳ ಮೂಲಕ ವಿವಿಧ ಕಾರ್ಯಕ್ರಮಗಳ ಅನುಷ್ಠಾನದ ವೆಚ್ಚ:

ಕೊರಗರ ಅಭಿವೃದ್ಧಿಗಾಗಿ ಐ.ಟಿ.ಡಿ.ಪಿ ಸರಕಾರದ ಇತರೆ ಇಲಾಖೆಗಳ ಮೂಲಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ಅನುಷ್ಠಾನದ ವೆಚ್ಚಕ್ಕಾಗಿ ೨/- ರೂ.ಗಳನ್ನು ನಿಗದಿಪಡಿಸಿದೆ.

೧೩. ವಸತಿ ಸೌಲಭ್ಯ:

ಮನೆ, ನಿವೇಶನ ಇಲ್ಲದ ಕೊರಗರಿಗೆ ಮನೆ ಹಾಗೂ ನಿವೇಶನ ಪೂರೈಸಲು ಜನವರಿ ೨೦೧೨ರಲ್ಲಿ ಸರಕಾರ ೬೧೯.೨೭/- ಲಕ್ಷ ರೂ.ಗಳನ್ನು ಬಿಡುಗಡೆಮಾಡಿದ್ದು ಇದರಲ್ಲಿ ೧೭೫ ಕೊರಗರ ಫಲಾನುಭವಿಗಳು ಪ್ರಯೋಜನ ಪಡೆದುಕೊಂಡಿದ್ದಾರೆ ಮತ್ತು ಇದರ ಆರ್ಥಿಕ ಪ್ರಗತಿ ೧೧೨.೭೫ರಷ್ಟು ಆಗಿದೆ ಎಂಬುದು ಐ.ಟಿ.ಡಿ.ಪಿ ಅಧಿಕಾರಿಗಳ ಹೇಳಿಕೆ.

೩.೫. ಮಲೆಕುಡಿಯರ ಅಭಿವೃದ್ಧಿ ಕಾರ್ಯಕ್ರಮಗಳು: ಉಡುಪಿ ಜಿಲ್ಲೆ

೩.೫.೧. ಪರಿಶಿಷ್ಟ ಪಂಗಡದ ಉಪಯೋಜನೆಯಡಿ ಮಲೆಕುಡಿಯರಿಗೆ ೨೦೧೧-೧೨ನೇ ಸಾಲಿನಲ್ಲಿ ಕ್ರೋಢೀಕರಿಸಿದ ಅನುದಾನ ಮತ್ತು ೨೦೧೬ರ ಪ್ರಗತಿ ವಿವರ (ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ)

ಕ್ರ ಸಂ	ಕಾರ್ಯಕ್ರಮಗಳ ವಿವರ	ನಿಗದಿಪಡಿಸಿದ ಅನುದಾನ	ಆರ್ಥಿಕ ಪ್ರಗತಿ	ಭೌತಿಕ ಪ್ರಗತಿ
೧	ಸ್ವಉದ್ಯೋಗ ತರಬೇತಿ.ಪ್ರವಾಸಿ ಕಾರು	೧೦.೦೦	೩.೫೬	೨
೨	ಮನೆ ದುರಸ್ಥಿ	೮.೦೦	೭.೭೫	೩೧
೩	ಲಘು ವಾಹನಾ ಚಾಲನಾ ತರಬೇತಿ	೧.೦೦	೦.೫೬	೧೫
೪	ಕುಡಿಯುವ ನೀರು	೧೫.೦೦	೭.೦೦	೨
೫	ಕಾಂಕ್ರೀಟ್ ರಸ್ತೆ	೨೦.೦೦	೧೯.೮೪	೪
ಒಟ್ಟು		೫೪.೦೦	೩೮.೭೧	೫೪

೩.೫.೨. ಪರಿಶಿಷ್ಟ ಪಂಗಡದ ಉಪಯೋಜನೆಯಡಿ (ಮಲೆಕುಡಿಯ ೨೦೧೧-೧೨ನೇ ಸಾಲಿನಲ್ಲಿ ಕ್ರೋಢೀಕರಿಸಿದ ಅನುದಾನದ ಮತ್ತು ೨೦೧೬ರ ಪ್ರಗತಿ ವಿವರ (ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ) ಉಡುಪಿ ಜಿಲ್ಲೆ

ಕ್ರ ಸಂ	ಕಾರ್ಯಕ್ರಮಗಳ ವಿವರ	ನಿಗದಿಪಡಿಸಿದ ಅನುದಾನ	ಆರ್ಥಿಕ ಪ್ರಗತಿ	ಭೌತಿಕ ಪ್ರಗತಿ
೧	ಮನೆ ದುರಸ್ಥಿ	೧೨.೦೦	೧೧.೫೦	೪೬
೨	ಕುಡಿಯುವ ನೀರು (ಬಾವಿ ರಚನೆ ಹಾಗೂ ಪಂಪ್ ಸೆಟ್ ಅಳವಡಿಕೆ)	೨೫.೦೦		
೩	ಸ್ವಯಂ.ಉದ್ಯೋಗ(ಪ್ರವಾಸಿ ಕಾರು)	೮.೦೦		
೪	ಶೈಕ್ಷಣಿಕ ಕಾರ್ಯಕ್ರಮ (ಉನ್ನತ ಶಿಕ್ಷಣ)	೪.೦೦		
೫	ಮಾರಣಾಂತಿಕ ಕಾಯಿಲೆಗೆ ವೈದ್ಯಕೀಯ ವೆಚ್ಚ ಪವತಿ (ಕ್ಯಾನ್ಸರ್, ಕಿಡ್ನಿ ವೈಫಲ್ಯ, ಹೃದಯ ಶಸ್ತ್ರ ಚಿಕಿತ್ಸೆ)	೪.೦೦		
೬	ಮಲೆಕುಡಿಯ ಸಮುದಾಯ ಭವನಗಳಿಗೆ ಪೀಠೋಪಕರಣ ಒದಗಿಸುವ ಬಗ್ಗೆ	೧.೦೦		
	ಒಟ್ಟು	೫೪.೦೦	೧೧.೫೦	೪೬

೩.೫.೩. ಮಲೆಕುಡಿಯ ಸಮುದಾಯದ ವಿಶೇಷ ಅಭಿವೃದ್ಧಿ ಯೋಜನೆ (೨೦೧೪-೧೫) ರಾಜ್ಯ ವಲಯ ೨೨೭.೦೦/- ಲಕ್ಷಗಳು. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು, ಇವರಿಂದ ಕ್ರಿಯಾ ಯೋಜನೆ ಅನುಮೋದನೆಗೊಂಡ ದಿನಾಂಕ ೧೭.೧೧.೨೦೧೪ ಮತ್ತು ಅಭಿವೃದ್ಧಿ ಕಾರ್ಯಗಳ ವಿವರ ದಿನಾಂಕ ೧೮.೦೫.೨೦೧೬ ರವರೆಗೆ

ಕ್ರಸಂ.	ಕಾರ್ಯಕ್ರಮಗಳ ವಿವರ (ರೂ.ಲಕ್ಷಗಳಲ್ಲಿ)	ನಿಗದಿಪಡಿಸಿದ ಅನುದಾನ		ಹಿಂದಿನ ತಿಂಗಳ ವರೆಗೆ		ಈ ತಿಂಗಳ ಖರ್ಚು		ಒಟ್ಟು ಖರ್ಚು		ಉಳಿಕೆ ಅನುದಾನ
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
೧	ಮನೆಗಳ ದುರಸ್ತಿ (ಗರಿಷ್ಟ ರೂ.೨೫೦೦೦.೦೦) ೪೧೭ ಮನೆ	೧೦೪.೨೫	೪೧೭	೪.೫೦	೧೮	೨೨.೨೫	೮೯	೨೬.೭೫	೧೦೭	೭೭.೫೦
೨	ಹೈನುಗಾರಿಕೆ	೨೦.೦೦	೫೦	೧೯.೬೦	೪೯	೦.೦೦	೦	೧೯.೬೦	೪೯	೦.೪೦
೩	ಸ್ವಯಂ ಉದ್ಯೋಗ ಉದ್ಯೋಗ ಯೋಜನೆಯಡಿ ಪ್ರವಾಸಿ ಕಾರಿನ ಸೌಲಭ್ಯ(ಇಲಾಖಾ ಸಹಾಯಧನ ೫೦% ಮತ್ತು ಉಳಿಕೆ ಬ್ಯಾಕ ಸಾಲ)	೧೭.೫೦	೭	೧೦.೦೦	೫	೦.೦೦	೦	೧೦.೦೦	೫	೭.೫೦
೪	ಸ್ಪಿಂಕ್ಲರ್ ಸೆಟ್	೫..೨೫	೨೧	೦.೦೦	೦	೦	೦	೦.೦೦	೦	೫.೨೫
೫	ವಿದ್ಯುತ್ ಪಂಪ್‌ಸೆಟ್	೩.೨೦	೧೬	೦.೦೦	೦	೦.೦೦	೦	೦.೦೦	೦	೩.೨೦
೬	೨ ಸಮುದಾಯ ಭವನ (ಘಟಕ ವೆಚ್ಚ ರೂ ೧೨.೦೦ ಲಕ್ಷ)	೪೦.೦೦	೩	೦.೦೦	೦	೦.೦೦	೦	೦	೦	೪೦.೦೦
೭	ರಸೆ ಅಭಿವೃದ್ಧಿ ಮತ್ತು ಕಿರು ಸೇತುವೆ ನಿರ್ಮಾಣ	೩೬.೮೦	೩	೦.೦೦	೦	೩೦.೪೦	೩	೩೦.೪೦	೩	೬.೪೦
	ಒಟ್ಟು	೨೨೭.೦೦	೫೧೭	೩೪.೧೦	೭೨	೫೨.೬೫	೯೨	೮೬.೭೫	೧೬೪	೧೪೦.೨೫

೩.೬. ಸಮಾಜ ಕಲ್ಯಾಣ ಇಲಾಖೆ:

ಸಮಾಜ ಕಲ್ಯಾಣ ಇಲಾಖೆ ಮೂಲಕ ಅರ್ಹ ಬುಡಕಟ್ಟು ಫಲಾನುಭವಿಗಳಿಗೆ ನಿರಂತರ ಆದಾಯ ತರುವಂತಹ ವೃತ್ತಿಗಳಾದ ಕಿರಾಣಿ ವ್ಯಾಪಾರ, ಬಟ್ಟೆ ವ್ಯಾಪಾರ, ತರಕಾರಿ ಅಂಗಡಿ, ಹೋಟೇಲ್, ಖಾರ ಕುಟ್ಟುವ ಯಂತ್ರ, ಇಟ್ಟಿಗೆ ಭಟ್ಟಿ, ಬಡಗಿತನ, ಸೈಕಲ್ ಶಾಪ್, ಸೆಂಟ್ರಿಂಗ್ ವರ್ಕ್ಸ್, ಧಾನ್ಯ ಒಕ್ಕುವ ಯಂತ್ರ, ಹೈನುಗಾರಿಕೆ, ಮೈಕಸೆಟ್, ಎಸ್‌ಟಿಡಿ ಬೂತ್, ಹೊಲಿಗೆಯಂತ್ರ, ಹಿಟ್ಟಿನ ಗಿರಣಿ ಇತ್ಯಾದಿಗಳನ್ನು ಸಹಾಯಧನ ಮತ್ತು ಸಾಲದ ವತಿಯಿಂದ ಸ್ವತ್ತುಗಳನ್ನು ನೀಡಲಾಗುತ್ತದೆ.

೩.೬.೧. ತಾಲೂಕುವಾರು ಸಮಾಜ ಕಲ್ಯಾಣ ಇಲಾಖೆಯ ಅಭಿವೃದ್ಧಿ ಕಾರ್ಯಕ್ರಮಗಳು:

ಗಿರಿಜನ ಅಭಿವೃದ್ದಿ ಯೋಜನ ಜಿಲ್ಲಾ ಸಮನ್ವಯ ಅಧಿಕಾರಿಯವರ ಆದೇಶದಂತೆ ಉಡುಪಿ ಜಿಲ್ಲೆಯ ಅರ್ಹ ಕೊರಗ ಫಲಾನುಭವಿಗಳಿಗೆ ವಸತಿ ನಿರ್ಮಾಣಕ್ಕೆ ನಾಲ್ಕು ಹಂತದಲ್ಲಿ ತಲಾ ೨೫ ಸಾವಿರದಂತೆ ಒಟ್ಟು ಒಂದು ಲಕ್ಷ ರೂ. ಸಹಾಯ ಧನ ವಿತರಣೆ ಮಾಡಲಾಗುತ್ತಿದೆ. ಸ್ವಂತ ಜಾಗವಿದ್ದರೂ ಇದಕ್ಕೆ ಅರ್ಜಿ ಸಲ್ಲಿಸಬಹುದು. ಉಡುಪಿ ಜಿಲ್ಲೆಯಲ್ಲಿ ೮೦೦ ಮನೆ ನಿರ್ಮಾಣಕ್ಕೆ ತಲಾ ಲಕ್ಷ ರೂ. ಸಹಾಯ ಧನ ವಿತರಿಸುವ ಗುರಿ ಹೊಂದಲಾಗಿದ್ದು, ಈವರೆಗೆ ೩೯೦ ಫಲಾನುಭವಿಗಳು ಇದರ ಪ್ರಯೋಜನ ಪಡೆದಿದ್ದಾರೆ.

ಇತರೇ ಉದ್ದೇಶಗಳಿಗಾಗಿ ಮೀಸಲಿರಿಸಿದ ಸರಕಾರಿ ಜಾಗದಲ್ಲಿ (ಕುಮ್ಕಿ, ಗೋಮಾಳ ಇತ್ಯಾದಿ) ಮನೆ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಕುಟುಂಬಗಳಿಗೆ ವಸತಿ ನಿರ್ಮಾಣಕ್ಕೆ ಸಹಾಯ ಧನ ನೀಡಲಾಗುತ್ತಿಲ್ಲ. ಸರಕಾರಿ ಜಾಗದಲ್ಲಿ ನೆಲೆಸಿರುವ ಕೊರಗರಿಗೆ ಹಕ್ಕು ಪತ್ರ ನೀಡಿಕೆಗಾಗಿಯೇ ಯೋಜನಾ ಸಮನ್ವಯಾಧಿಕಾರಿ ಊರ್ಮಿಳಾ ಅವರು ಶ್ರಮ ವಹಿಸಿ ವಿಶೇಷ ವರದಿ ಸಿದ್ಧಪಡಿಸಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಯೋಜನೆ ರೂಪಿಸಿದ್ದಾರೆ.

೩.೬.೧.೧. ಸ್ವ-ಸಹಾಯ ಸಂಘಕ್ಕೆ ೧ ಲಕ್ಷ ರೂಗಳ ಸಹಾಯ:

ಕ್ರೀಯಾಶೀಲರಾಗಿ ಕೆಲಸ ಮಾಡುವ ಕೊರಗ ಮಹಿಳಾ ಸ್ವ-ಸಹಾಯ ಸಂಘಗಳಿಗೆ ವಿವಿಧ ಸ್ವ ಉದ್ಯೋಗಗಳನ್ನು ಕೈಗೊಳ್ಳುವ ಸಲುವಾಗಿ ತಲಾ ಒಂದು ಲಕ್ಷ. ರೂಪಾಯಿ. ಸಹಾಯ ಧನವನ್ನು ಇಲಾಖೆ ನೀಡುತ್ತದೆ. ೨೦೦೮-೦೯ ನೇ ಸಾಲಿನಲ್ಲಿ ಕೊರಗ ಮಹಿಳಾ ಸ್ವ ಸಹಾಯ ಗುಂಪುಗಳ ಅಭಿವೃದ್ಧಿಗಾಗಿ ೨/- ಲಕ್ಷ ರೂ.ಗಳ ಅನುದಾನ ನೀಡಲಾಗಿದೆ. ಈ ಅನುದಾನದ ಭೌತಿಕ ಪ್ರಗತಿ ೨ರಷ್ಟು.

೩.೬.೧.೨. ಸ್ವ-ಉದ್ಯೋಗಕ್ಕೆ ಸಹಾಯ ಧನ

ಆಡು, ದನ, ಕೋಳಿ ಸಾಕಣಿಗೆ, ಮಲ್ಲಿಗೆ, ಬಾಳೆ, ಮಾವು ಕೃಷಿ ಬೆಳೆಯಲು, ಸಲೂನ್, ಇಸ್ತ್ರಿ, ಫ್ಯಾಷನ್ ಡಿಸೈನಿಂಗ್, ಗ್ಯಾರೇಜ್, ಜೆರಾಕ್ಸ್, ಜಾಬ್ ಟೈಪಿಂಗ್, ಲ್ಯಾಮಿನೇಶನ್ ಅಂಗಡಿ ಮಾಡಲು, ನರ್ಸರಿ, ಕೈಮಗ್ಗ, ಕುಲಕಸುಬಿನ ಉತ್ಪನ್ನ ಮತ್ತು ಮಾರಾಟ ಇತ್ಯಾದಿಗಳಿಗೆ ಸಹಾಯ ಧನ ಸಿಗುತ್ತದೆ.



ಚಿತ್ರ ಸ್ವ ಉದ್ಯೋಗ ತರಬೇತಿ ಪಡೆಯುತ್ತಿರುವ ಮಲೆಕುಡಿಯರ ಮಹಿಳೆಯರು

೩.೬.೧.೩. ಪ್ರವಾಸಿ ಟ್ಯಾಕ್ಸಿ ವಿತರಣಾ ಯೋಜನೆ

ಪರಿಶಿಷ್ಟ ವರ್ಗದ ಕಲ್ಯಾಣ ಇಲಾಖೆಯ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯಡಿಯಲ್ಲಿ ಶೇ.೫೦ರ ಪ್ರೋತ್ಸಾಹ ಧನದಲ್ಲಿ ಕೊರಗರಿಗೆ ಶೀಘ್ರವೇ ಪ್ರವಾಸಿ ಟ್ಯಾಕ್ಸಿ ಒಲಿದು ಬರಲಿದೆಯಂತೆ..! ಸರಕಾರ ನೀಡುತ್ತಿರುವ ಅನುದಾನಗಳನ್ನು ಸಮಗ್ರವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಉಡುಪಿ ಜಿಲ್ಲೆಯ ಕೊರಗರಿಗಾಗಿ ಐಟಿಡಿಪಿ ಜಿಲ್ಲಾ ಯೋಜನೆ ಪ್ರವಾಸಿ ಟ್ಯಾಕ್ಸಿ ವಿತರಣೆಗೆ ಮುತುವರ್ಜಿ ವಹಿಸಿದೆ. ಒಂದೆರಡು ತಿಂಗಳ ಹಿಂದೆಯಷ್ಟೇ ಜಿಲ್ಲೆಯ ೩೪ ಮಂದಿ ಕೊರಗ ಫಲಾನುಭವಿಗಳಿಗೆ ೧,೦೦,೦೦೦ ರೂ. (೮೦,೦೦೦ ಇಲಾಖೆ, ೨೦,೦೦೦ ಡೊನೇಶನ್ ಮೂಲಕ) ಸಹಾಯ ಧನದೊಂದಿಗೆ ಆಟೋ ರಿಕ್ಷಾ ವಿತರಿಸಲಾಗಿತ್ತು.

೩.೬.೧.೪. ಸಂಪೂರ್ಣ ವೈದ್ಯಕೀಯ ವೆಚ್ಚ:

ಕೊರಗ ಸಮುದಾಯದ ಯಾರೇ ಅನಾರೋಗ್ಯಕ್ಕೀಡಾಗಿ ಆಸ್ಪತ್ರೆಗೆ ದಾಖಲಾದರೆ ಅವರ ಚಿಕಿತ್ಸೆಯ ಸಂಪೂರ್ಣ ವೆಚ್ಚವನ್ನು ಇಲಾಖೆಯೇ ಭರಿಸುತ್ತದೆ. ಉದಾ: ಒಬ್ಬ ವ್ಯಕ್ತಿ ಅಪಘಾತದಿಂದ ಅಥವಾ ಇನ್ನಾವುದೋ ಕಾರಣದಿಂದ ಆಸ್ಪತ್ರೆಗೆ ದಾಖಲಾಗಿ ಆತನಿಗೆ ಚಿಕಿತ್ಸೆಗಾಗಿ ರೂ. ೯೦,೦೦೦ ಖರ್ಚು ವೆಚ್ಚವಾಯಿತು ಎಂದಾದರೆ ಆತನ ಆ ಎಲ್ಲ ರೂ. ೯೦,೦೦೦ ಖರ್ಚನ್ನು ಇಲಾಖೆಯೇ ನೀಡುತ್ತದೆ. ಮುಖ್ಯವೆಂದರೆ ಆಸ್ಪತ್ರೆಯ ಎಲ್ಲ ಬಿಲ್ಲುಗಳನ್ನು



ಇಲಾಖಾಧಿಕಾರಿ ಅವರಿಗೆ ಕಡ್ಡಾಯವಾಗಿ ನೀಡಬೇಕು. ಆ ಬಳಿಕ ಇಲಾಖೆ ಹಣವನ್ನು ಚೆಕ್ ಮೂಲಕ ಫಲಾನುಭವಿಗಳಿಗೆ ಪಾವತಿ ಮಾಡುತ್ತದೆ. ಹಾಗೆಯೇ ರಕ್ತದೊತ್ತಡ, ಡಯಾಬಿಟಿಸ್ ಹಾಗೂ ಇನ್ನಿತರ ಯಾವುದೇ ಕಾಯಿಲೆಗಳಿಗೂ ಅಗತ್ಯವಿರುವ ಎಲ್ಲ ಔಷಧಗಳ ವೆಚ್ಚವನ್ನು ಕೂಡಾ ಇಲಾಖೆ ಭರಿಸುತ್ತದೆ.

೨೦೦೮-೦೯ ನೇ ಸಾಲಿನಲ್ಲಿ ಕೊರಗ ಸಮುದಾಯದ ಜನರು ಅನಾರೋಗ್ಯ ಪೀಡಿತರಾಗಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ನೆರವಿಗಾಗಿ ೨೮/- ಲಕ್ಷ ರೂ.ಗಳ ಅನುದಾನ ನಿಗದಿಪಡಿಸಿದ್ದು ಅದರಲ್ಲಿ ೧೨೫ರಷ್ಟು ಭೌತಿಕ ಪ್ರಗತಿ ಸಾಧಿಸಲಾಗಿದೆ ಎಂಬುದು ಐ.ಟಿ.ಡಿ.ಪಿ ಅಧಿಕಾರಿಗಳ ಅಭಿಪ್ರಾಯ.

೩.೬.೧.೫. ಪೌಷ್ಟಿಕ ಆಹಾರ ವಿತರಣೆ:

ಆರೋಗ್ಯದ ಗುಣಮಟ್ಟ ವೃದ್ಧಿಸಲು ಮಳೆಗಾಲದ ೪ ತಿಂಗಳು (ಜೂನ್, ಜುಲೈ, ಆಗಸ್ಟ್, ಸೆಪ್ಟಂಬರ್) ಪ್ರತಿ ಕೊರಗ ಕುಟುಂಬಗಳಿಗೆ ಉಚಿತವಾಗಿ ಪೌಷ್ಟಿಕ ಆಹಾರ (ಹೆಸರು ಕಾಳು, ಕಡಲೆಕಾಳು, ರಾಗಿ, ಬೆಲ್ಲ, ಎಣ್ಣೆ, ಮೊಟ್ಟೆ ಇತ್ಯಾದಿ) ವಿತರಣೆ ಮಾಡಲಾಗುತ್ತದೆ. ಈ ಎಲ್ಲ ಪೌಷ್ಟಿಕ ಆಹಾರಗಳನ್ನು ಎಲ್ಲ ಅಂಗನವಾಡಿ ಕೇಂದ್ರಗಳ ಮೂಲಕ ವಿತರಣೆ ಮಾಡಲಾಗುತ್ತದೆ.

೩.೬.೧.೬. ಶಿಕ್ಷಣಕ್ಕೆ ಪ್ರೋತ್ಸಾಹ ಧನ:

ಪಿಯುಸಿಯಿಂದ ಪದವಿ, ಉನ್ನತ ವಿದ್ಯಾಭ್ಯಾಸದವರೆಗೆ ಕಲಿಯುವ ಎಲ್ಲ ಕೊರಗ ಮಕ್ಕಳಿಗೂ ಶಿಕ್ಷಣದ ಸಂಪೂರ್ಣ ವೆಚ್ಚವನ್ನು ಇಲಾಖೆಯೇ ನೀಡುತ್ತದೆ. ಪ್ರತಿಷ್ಠಿತ ಕಾಲೇಜುಗಳಲ್ಲಿ ಅಧ್ಯಯನಕ್ಕೂ ಅವಕಾಶ ಕಲ್ಪಿಸಲಾಗುತ್ತದೆ. ಕಳೆದ ಸಾಲಿನಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ೧೬ ವಿದ್ಯಾರ್ಥಿಗಳಿಗೆ ೬ ಲಕ್ಷ ರೂ. ವಿತರಿಸಲಾಗಿತ್ತು. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೂ ವಿವಿಧ ಮಜಲುಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಸಾವಿರಾರು ರೂ. ಪ್ರೋತ್ಸಾಹ ಧನ, ವಿದ್ಯಾರ್ಥಿ ವೇತನ ವಿತರಣಾ ಯೋಜನೆ ಕಾರ್ಯರೂಪದಲ್ಲಿದೆ. ಶಿಕ್ಷಾ ಸಹಯೋಗ ಎಂಬ ಕಾರ್ಯಕ್ರಮದಡಿ ಪ್ರೌಢ ಶಿಕ್ಷಣದ ೯ ಮತ್ತು ೧೦ನೇ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ವಾರ್ಷಿಕ ೧,೨೦೦ ರೂ. ವಿದ್ಯಾರ್ಥಿ ವೇತನ ನೀಡುವ ಯೋಜನೆ ಚಾಲ್ತಿಯಲ್ಲಿದೆ. ಹಾಗೆಯೇ ಸ್ನಾತಕೋತ್ತರ, ಎಂಜನಿಯರಿಂಗ್, ವೈದ್ಯಕೀಯ, ಕಾನೂನು ಮುಂತಾದ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ಧನವೂ ಇಲಾಖೆಯಿಂದ ಲಭ್ಯವಿದೆ. ಅದರಲ್ಲೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ಧನವೂ ಇಲಾಖೆಯಿಂದ ಲಭ್ಯವಿದೆ. ಅದರಲ್ಲೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ವಿದ್ಯಾರ್ಥಿವೇತನ ಇಲಾಖೆಯ ಮೂಲಕ ಸಿಗುತ್ತದೆ.

೩.೬.೧.೭. ಆದಿವಾಸಿ ಮಹಿಳಾ ಸಶಕ್ತೀಕರಣ ಯೋಜನೆ :

ಎನ್.ಎಸ್.ಟಿ.ಎಫ್.ಡಿ.ಸಿ.ಯವರು ಪರಿಶಿಷ್ಟ ವರ್ಗದ ಮಹಿಳಾ ಫಲಾನುಭವಿಗಳಿಗೆ ಅವಧಿ ಸಾಲವನ್ನು ಗರಿಷ್ಠ ರೂ. ೫೦,೦೦೦ ಗಳ ಮಿತಿಯಲ್ಲಿ ವಿವಿಧ ಚಟುವಟಿಕೆಗಳನ್ನು ಪ್ರಾರಂಭಿಸಲು ಯೋಜನೆಯನ್ನು ಹಮ್ಮಿಕೊಂಡಿರುತ್ತಾರೆ. ಎನ್.ಎಸ್.ಟಿ.ಎಫ್.ಡಿ.ಸಿ.ಯವರು ಯೋಜನಾ ವೆಚ್ಚದ ಶೇ. ೯೦ರಷ್ಟು ಅವಧಿ ಸಾಲ ಮಂಜೂರಾತಿ ನೀಡಿ ಉಳಿದದ್ದನ್ನು ಸಹಾಯ ಧನವಾಗಿ ನಿಗಮದಿಂದ ನೀಡಬೇಕಾಗಿದೆ. ಅವಧಿ ಸಾಲಕ್ಕೆ ಶೇ.೪ರಷ್ಟು ಬಡ್ಡಿ ವಿಧಿಸಲಾಗುವುದು. ಜಿಲ್ಲಾ ವ್ಯವಸ್ಥಾಪಕರು ಸರಿ ಯೋಜನೆಗೆ ಪರಿಶಿಷ್ಟ ವರ್ಗದವರು (Tribes) ಜಾಸ್ತಿ ಇರುವ ಸ್ಥಳಗಳಿಂದ ಪ್ರಸ್ತಾವನೆ ಪಡೆದು ಕೇಂದ್ರ ಕಛೇರಿಗೆ ಕಳುಹಿಸುವುದು.

೩.೬.೧.೮. ನರ್ಸಿಂಗ್ ತರಬೇತಿ:

ನರ್ಸಿಂಗ್ ತರಬೇತಿಗೆ ಸರ್ಕಾರದಿಂದ ಯಾವುದೇ ಅನುದಾನ ಲಭ್ಯವಿರುವುದಿಲ್ಲ. ಆದರೆ ಸರ್ಕಾರವು ಸ್ವಯಂ ಉದ್ಯೋಗ ಯೋಜನೆಯಡಿ ಪರಿಶಿಷ್ಟ ಜಾತಿಗೆ ರೂ.೧೫. ಕೋಟಿ ಹಾಗೂ ಪರಿಶಿಷ್ಟ ವರ್ಗಕ್ಕೆ ರೂ.೧೦ ಕೋಟಿ ಅನುದಾನ ನಿಗದಿಪಡಿಸಿದೆ. ಸದರಿ ಹಣದಲ್ಲಿ ಪರಿಶಿಷ್ಟ ಜಾತಿಗೆ ರೂ. ೨೭೦. ಲಕ್ಷ ಹಾಗೂ ಪರಿಶಿಷ್ಟ ವರ್ಗಕ್ಕೆ ರೂ.೫೦ ಲಕ್ಷವನ್ನು ನರ್ಸಿಂಗ್ ತರಬೇತಿಗಾಗಿ ಉಪಯೋಗಿಸಿಕೊಳ್ಳುವ ಬಗ್ಗೆ ದಿನಾಂಕ ೨೯.೦೪.೨೦೦೫ರಂದು ನಡೆದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ.

ಈ ತರಬೇತಿಗೆ ೧೦+೨ ಪಾಸಾದ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ. ತರಬೇತಿಗೆ ಭರಿಸಬಹುದಾದ ವಾರ್ಷಿಕ ಶುಲ್ಕ, ಊಟ ವಸತಿಗಾಗಿ ತಗಲುವ ನಿರ್ವಹಣಾ ವೆಚ್ಚ, ಸಮವಸ್ತ್ರ, ಪುಸ್ತಕ ಇತ್ಯಾದಿಗಳಿಗೆ ತಗಲುವ ವೆಚ್ಚವನ್ನು ನಿಗಮವೇ ಭರಿಸುವುದು.

೩.೬.೧.೯. ನೇರಸಾಲ ಯೋಜನೆ:

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ನೇರ ಸಾಲ ಯೋಜನೆಯನ್ನು ೧೯೯೨-೯೩ರಿಂದ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯಡಿಯಲ್ಲಿ ನಿಗದಿಪಡಿಸಿದ ಘಟಕದ ವೆಚ್ಚವು ರೂ. ೩೫,೦೦೦/- ರಿಂದ ರೂ. ೩೦.೦೦ ಲಕ್ಷಗಳವರೆಗಿದ್ದು. ಅವಧಿ ಸಾಲವನ್ನು ರಾಷ್ಟ್ರೀಯ ಪರಿಶಿಷ್ಟ ಜಾತಿ ಹಾಗೂ ರಾಷ್ಟ್ರೀಯ ಪರಿಶಿಷ್ಟ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ (ಎನ್.ಎಸ್.ಎಫ್.ಡಿ.ಸಿ. / ಎನ್.ಎಸ್.ಟಿ.ಎಫ್.ಡಿ.ಸಿ) ಪಡೆದು ಸೌಲಭ್ಯ ಕಲ್ಪಿಸಲಾಗುವುದು.

೩.೬.೧.೧೦. ಭೂ ಒಡೆತನ ಯೋಜನೆ:

ಪರಿಶಿಷ್ಟ ವರ್ಗದ ಭೂ ರಹಿತ ಕೃಷಿ ಕಾರ್ಮಿಕರಿಗೆ ಎರಡು ಎಕರೆ ಖುಷ್ಕಿ ಅಥವಾ ಒಂದು ಎಕರೆ ತರಿ ಜಮೀನು ಖರೀದಿಸಲು ಸಹಾಯ ಧನ ಮತ್ತು ಸಾಲ ಸೌಲಭ್ಯ ಒದಗಿಸಲಾಗುವುದು. ಯೋಜನಾ ವಿವರಗಳು.

ಯೋಜನಾ ವೆಚ್ಚ ರೂ. ೬೦,೦೦೦.೦೦ ನಿಗದಿಪಡಿಸಿದ್ದು, ಶೇ. ೫೦ ಭಾಗ ಸಹಾಯ ಧನ ಮತ್ತು ಶೇ. ೫೦ ಭಾಗ ಅವಧಿ ಸಾಲವಾಗಿರುತ್ತದೆ. ಅವಧಿ ಸಾಲಕ್ಕೆ ಶೇ.೬ ವಾರ್ಷಿಕ ಬಡ್ಡಿ ವಿಧಿಸಲಾಗುವುದು. ಇದಕ್ಕೆ ಬರಬೇಕಾದ ಅವಧಿ ಸಾಲವನ್ನು ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆರ್ಥಿಕ ಹಾಗೂ ಅಭಿವೃದ್ಧಿ ನಿಗಮದಿಂದ ಪಡೆಯಲಾಗುವುದು. ಯೋಜನೆಯ ಯಶಸ್ವಿ ಅನುಷ್ಠಾನ ಮರುಪಾವತಿಯನ್ನು ಅವಲಂಭಿಸಿದೆ.

೩.೬.೧.೧೦.೧. ಅರ್ಹತೆಗಳು:

೧. ಫಲಾನುಭವಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗದ ಭೂ ರಹಿತ ಕೃಷಿ ಕಾರ್ಮಿಕ ಮಹಿಳಾ ಅಭ್ಯರ್ಥಿಯಾಗಿರಬೇಕು.ಸುಸ್ತಿದಾರರಾಗಿರಬಾರದು.

೨. ಭೂ ಮಾಲೀಕರು ಪರಿಶಿಷ್ಟ ಜಾತಿ ಅಥವಾ ವರ್ಗಕ್ಕೆ ಸೇರಿರಬಾರದು.

೩. ಜಮೀನಿನ ಮೇಲೆ ತಂಟೆ ತಕರಾರು, ಪಿ.ಟಿ.ಸಿ.ಎಲ್. ಕಾಯ್ದೆ ಉಲ್ಲಂಘನೆ, ಭೂ ಸುಧಾರಣೆ ಕಾಯ್ದೆ, ಲ್ಯಾಂಡ್ ಗ್ರಾಂಟ್ ಕಾನೂನು, ಅರಣ್ಯ ಕಾಯ್ದೆ ಇತ್ಯಾದಿ ಕಾಯ್ದೆಗಳ ಉಲ್ಲಂಘನೆಯಾಗಬಾರದು. ಕೃಷಿಗೆ ಯೋಗ್ಯವಾಗಿರಬೇಕು.

೪. ಜಮೀನಿನ ಮೂಲಭೂತ ದಾಖಲಾತಿಗಳಾದ ಪಹಣಿ, ಇ.ಸಿ., ಬ್ಯಾಂಕಿನಿಂದ ಎನ್.ಓ.ಸಿ., ಮ್ಯುಟೇಷನ್, ಸೇಲ್‌ಡೀಡ್, ಟೈಟಲ್ ಡೀಡ್ ಪಡೆದು ಫಲವತ್ತತೆ ಬಗ್ಗೆ ಪರಿಶೀಲಿಸಿ, ಜಿಲ್ಲಾ ವ್ಯವಸ್ಥಾಪಕರ ವರದಿಯೊಂದಿಗೆ ಜಿಲ್ಲಾ ಖರೀದಿ ಸಮಿತಿಗೆ ಮಂಡಿಸಬೇಕು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಈ ಸಮಿತಿಗೆ ಸಮಾಜ ಕಲ್ಯಾಣ ಅಧಿಕಾರಿ, ಪ್ರಧಾನ ಕೃಷಿ ಅಧಿಕಾರಿ, ಉಪ ವಿಭಾಗಾಧಿಕಾರಿ ಸದಸ್ಯರಿದ್ದು, ಜಿಲ್ಲಾ ವ್ಯವಸ್ಥಾಪಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಜಿಲ್ಲಾ ವ್ಯವಸ್ಥಾಪಕರು ಎಲ್ಲಾ ಜಮೀನುಗಳನ್ನು ಉಪ ವಿಭಾಗಾಧಿಕಾರಿ, ತಹಶೀಲ್ದಾರರು, ಕೃಷಿ ಅಧಿಕಾರಿ, ತೋಟಗಾರಿಕಾ ಅಧಿಕಾರಿಗಳೊಂದಿಗೆ ಜಂಟಿಯಾಗಿ ಪರಿಶೀಲಿಸಬೇಕಾಗಿರುತ್ತದೆ.

೫. ಅರ್ಜಿಯಲ್ಲಿ ಭೂ ಮಾಲೀಕರ ಮತ್ತು ಫಲಾನುಭವಿಗಳ ಭಾವಚಿತ್ರ ಕಡ್ಡಾಯವಾಗಿ ಪಡೆಯಬೇಕು.

೬. ಜಮೀನನ್ನು ಫಲಾನುಭವಿಗೆ ತೋರಿಸಬೇಕು. ಫಲವತ್ತತೆ ಹಾಗೂ ಅಂತರ್ಜಲದ ಲಭ್ಯತೆ, ಉಪ ನೋಂದಾಣಾಧಿಕಾರಿಗಳ ಮಾರುಕಟ್ಟೆ ಬೆಲೆ, ಅಕ್ಕಪಕ್ಕದ ಜಮೀನಿನ ಬೆಲೆಗಳನ್ನು ಆಧರಿಸಿ ಜಮೀನಿನ ದರವನ್ನು ಜಿಲ್ಲಾ ಸಮಿತಿ ನಿಗದಿಪಡಿಸುತ್ತದೆ.

೭. ಜಮೀನಿನ ಕ್ರಯಪತ್ರ ನೋಂದಣಿಯ ಸಮಯದಲ್ಲಿಯೇ ಅಡಮಾನ ಪತ್ರವನ್ನು ಸಹ ನೋಂದಣಿ ಮಾಡಿಸಿ ನಿಗಮಕ್ಕೆ ಒತ್ತೆಯಾಗಿರುವ ಬಗ್ಗೆ ದಾಖಲೆ ಮಾಡಿಸಿ ಪಹಣಿ ಪಡೆದು ಫಲಾನುಭವಿಯ ಕಡತದಲ್ಲಿಡಬೇಕು.

೮. ಜಮೀನನ್ನು ಖರೀಧಿಸಿದ ನಂತರ, ಇತರೆ ಇಲಾಖೆಗಳಾದ ಕೃಷಿ, ತೋಟಗಾರಿಕೆ, ಪಶು ಸಂಗೋಪನೆ, ರೇಷ್ಮೆ ಇಲಾಖೆ ಇತ್ಯಾದಿ ಇಲಾಖೆಗಳಿಂದ ದೊರೆಯುವ ಸೌಲಭ್ಯಗಳನ್ನು ಈ ಫಲಾನುಭವಿಗಳಿಗೆ ಒದಗಿಸಿ ಹೆಚ್ಚಿನ ಉತ್ಪನ್ನ ಪಡೆಯಲು ಅನುಕೂಲ ಮಾಡಿಕೊಡಬೇಕು.

೩.೬.೧.೧೦.೨. ಉಡುಪಿ ಜಿಲ್ಲೆ ಕೊರಗರಿಗೆ ಜಿಲ್ಲಾಡಳಿತ ಭೂಮಿ ಹಂಚಿಕೆ ಮಾಡಿದ ವಿವರ

ಉಡುಪಿ ತಾಲೂಕು:

ಕೊರಗರು ಭೂಮಿಗಾಗಿ ಹೋರಾಟ ಮಾಡಿದ ಮೇಲೆ ಉಡುಪಿ ತಾಲೂಕಿನಲ್ಲಿ ಒಟ್ಟು ೧೧೧ ಕೊರಗರ ಕುಟುಂಬಗಳಿಗೆ ಒಟ್ಟು ೧೭೫.೮೮ ಎಕರೆ ಭೂಮಿಯನ್ನು ಹಂಚಲಾಗಿದೆ. ಹಿಲಿಯಾಣ ಗ್ರಾಮದಲ್ಲಿ ೩ ಕುಟುಂಬಗಳಿಗೆ, ನೀರಾವರಿ ಗ್ರಾಮದಲ್ಲಿ ೫ ಕುಟುಂಬಗಳಿಗೆ, ಚೇರ್ಕಾಡಿ ಗ್ರಾಮದಲ್ಲಿ ೧ ಕುಟುಂಬಕ್ಕೆ, ಹಲುವಳ್ಳಿ ಗ್ರಾಮದಲ್ಲಿ ೪ ಕುಟುಂಬಗಳಿಗೆ. ಬೈರಂಪಳ್ಳಿ ಗ್ರಾಮದಲ್ಲಿ ೬ ಕುಟುಂಬಗಳಿಗೆ, ೪೧. ಶಿರೂರು ಗ್ರಾಮದಲ್ಲಿ ೩ ಕುಟುಂಬಗಳಿಗೆ, ಬೆಳ್ಳಂಪಲ್ಲಿ ಗ್ರಾಮದಲ್ಲಿ ೮ ಕುಟುಂಬಗಳಿಗೆ, ಕುದಿ ಗ್ರಾಮದಲ್ಲಿ ೫ ಕುಟುಂಬಗಳಿಗೆ, ಪೆರ್ಡೂರು ಗ್ರಾಮದಲ್ಲಿ ೧೪ ಕುಟುಂಬಗಳಿಗೆ, ಶಿರ್ವಾ ಗ್ರಾಮದಲ್ಲಿ ೧೦ ಕುಟುಂಬಗಳಿಗೆ, ಪಾದೂರು ಗ್ರಾಮದಲ್ಲಿ ೧ ಕುಟುಂಬಕ್ಕೆ ಹಾಗೂ ಬೊಮ್ಮರಬೆಟ್ಟು ಗ್ರಾಮದಲ್ಲಿ ೨೨ ಕುಟುಂಬಗಳಿಗೆ ಭೂಮಿ ಹಂಚಲಾಗಿದೆ. ಒಟ್ಟು ೧೧೧ ಕುಟುಂಬಗಳಲ್ಲಿ ೨೫ ಗಂಡಸರಿದ್ದು ೮೬ ಹೆಂಗಸರ ಹೆಸರಿನಲ್ಲಿ ಭೂಮಿ ಹಂಚಲಾಗಿದೆ.

ಕಾರ್ಕಳ ತಾಲೂಕು:

ಕಾರ್ಕಳ ತಾಲೂಕಿನಲ್ಲಿ ಒಟ್ಟು ೯೪ ಕೊರಗರ ಕುಟುಂಬಗಳಿಗೆ ಒಟ್ಟು ೯೯.೮೦ ಎಕರೆ ಭೂಮಿಯನ್ನು ಹಂಚಲಾಗಿದೆ ಕಾರಾಡಿ ಗ್ರಾಮದಲ್ಲಿ ೧೩ ಕುಟುಂಬಗಳಿಗೆ, ನಿಡ್ಡದೆಪಾದೆ ಗ್ರಾಮದಲ್ಲಿ ೩೧ ಕುಟುಂಬಗಳಿಗೆ, ಕುಂಬಾಡಿ ಗ್ರಾಮದಲ್ಲಿ ೮ ಕುಟುಂಬಗಳಿಗೆ, ಕೊಕ್ರೈಲ

ಗ್ರಾಮದಲ್ಲಿ ೫ ಕುಟುಂಬಗಳಿಗೆ. ಸಾಂಡೂತುಕೊಪ್ಪ ಗ್ರಾಮದಲ್ಲಿ ೫ ಕುಟುಂಬಗಳಿಗೆ, ಕುಂಜರಕಟ್ಟೆ ಗ್ರಾಮದಲ್ಲಿ ೩ ಕುಟುಂಬಗಳಿಗೆ, ಬಂಗ್ಲೆಗಡ್ಡೆ ಗ್ರಾಮದಲ್ಲಿ ೩ ಕುಟುಂಬಗಳಿಗೆ, ಬಂಡು ಕುಮೇರಿ ಗ್ರಾಮದಲ್ಲಿ ೪ ಕುಟುಂಬಗಳಿಗೆ, ಹಾಗೂ ಗುಡ್ಡೆಅಂಗಡಿ ಗ್ರಾಮದಲ್ಲಿ ೨೨ ಕುಟುಂಬಗಳಿಗೆ ಭೂಮಿ ಹಂಚಲಾಗಿದೆ. ಒಟ್ಟು ೯೪ ಕುಟುಂಬಗಳಲ್ಲಿ ೪೩ ಜನ ಗಂಡಸರಿಗೆ ಹಾಗೂ ೫೧ ಹೆಂಗಸರ ಹೆಸರಿನಲ್ಲಿ ಭೂಮಿ ಹಂಚಲಾಗಿದೆ.

ಕುಂದಾಪುರ ತಾಲೂಕು:

ಕುಂದಾಪುರ ತಾಲೂಕಿನಲ್ಲಿ ಒಟ್ಟು ೩೧ ಕೊರಗರ ಕುಟುಂಬಗಳಿಗೆ ಒಟ್ಟು ೩೧.೬೪ ಎಕರೆ ಭೂಮಿಯನ್ನು ಹಂಚಲಾಗಿದೆ. ೭೬ನೇ ಹಾಲಾಡಿ ಗ್ರಾಮದ ೨೬ ಸ್ಥಳಗಳಲ್ಲಿ ೨೬ ಕುಟುಂಬಗಳಿಗೆ, ಕನ್ಯಾನ್ ಗ್ರಾಮದಲ್ಲಿ ೩ ಕುಟುಂಬಗಳಿಗೆ ಹಾಗೂ ನಾಡ ಗ್ರಾಮದಲ್ಲಿ ೨ ಕುಟುಂಬಗಳಿಗೆ ಒಟ್ಟು ೩೧ ಕುಟುಂಬಗಳ ಹೆಣ್ಣು ಮಕ್ಕಳ ಹೆಸರಿನಲ್ಲಿ ಭೂಮಿ ಹಂಚಲಾಗಿದೆ. (ಸಂಪೂರ್ಣ ವಿವರಗಳಿಗೆ ಅನುಬಂಧ ನೋಡಿ)

೩.೬.೧೧. ಗಂಗಾ ಕಲ್ಯಾಣ ಯೋಜನೆ: (ಏತ ನೀರಾವರಿ)

ಗಂಗಾ ಕಲ್ಯಾಣ ಸಾಮೂಹಿಕ ನೀರಾವರಿ ಕೊಳವೆ ಬಾವಿಗಳ ಬದಲಿಗೆ ೨೦೧೫-೦೬ನೇ ಸಾಲಿನಲ್ಲಿ ಸಾಮೂಹಿಕ ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅದರಂತೆ ಪರಿಶಿಷ್ಟ ಜಾತಿಗೆ ರೂ.೨೫೦.೦೦ ಲಕ್ಷ ಮತ್ತು ಪರಿಶಿಷ್ಟ ವರ್ಗಕ್ಕೆ ರೂ. ೨೫೦.೦೦ ಲಕ್ಷಗಳ ಗುರಿಯನ್ನು ನಿಗದಿಪಡಿಸಲಾಗಿದೆ. ನಿಗದಿಪಡಿಸಿದ ಗುರಿಯಂತೆ ಸಂಬಂಧಿಸಿದ ವಿಧಾನಸಭಾ ಕ್ಷೇತ್ರಗಳ ಫಲಾನುಭವಿಗಳ ಆಯ್ಕೆ ಸಮಿತಿಯನ್ನು ಏತ ನೀರಾವರಿ ಯೋಜನೆಯ ಪ್ರಸ್ತಾವನೆಯನ್ನು ಅನುಮೋದಿಸಿ ಕೇಂದ್ರ ಕಛೇರಿಗೆ ಸಲ್ಲಿಸಲು ಜಿಲ್ಲಾ ವ್ಯವಸ್ಥಾಪಕರಿಗೆ ಆದೇಶ ನೀಡಲಾಗಿದೆ.

೩.೬.೧೨. ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳು:

- ಪರಿಶಿಷ್ಟ ಪಂಗಡದ ವಿಧ್ಯಾರ್ಥಿಗಳಿಗೆ ವಸತಿ ಶಾಲೆಗಳು
- ಪರಿಶಿಷ್ಟ ಪಂಗಡದ ವಿಧ್ಯಾರ್ಥಿಗಳಿಗೆ ವಸತಿ ರಹಿತ ಶಾಲೆಗಳು
- ಹತ್ತು ಹಾಸಿಗೆಗಳ ಆಸ್ಪತ್ರೆ.
- ಸಂಚಾರಿ ಆರೋಗ್ಯ ಘಟಕ
- ಪರಿಶಿಷ್ಟ ಪಂಗಡದ ನಿರುದ್ಯೋಗಿ ಅಭ್ಯರ್ಥಿಗಳಿಗೆ ವಿವಿಧ ವೃತ್ತಿ ತರಬೇತಿ ಕಾರ್ಯಕ್ರಮಗಳು.

೩.೬.೧೩. ಕಾರ್ಕಳ ಪುರಸಭೆ ಹಮ್ಮಿಕೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳು:

ಕಾರ್ಕಳ ಪುರಸಭೆಯು ಕಾರ್ಕಳ ಮತ್ತು ಸುತ್ತಮುತ್ತಲಿನ ಕೊರಗರ ಅಭಿವೃದ್ಧಿಗಾಗಿ ವಿಶೇಷವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕಾರ್ಕಳ ಪುರಸಭೆ ಜೊತೆಗೆ ಕಾರ್ಕಳದ ಸರಕಾರಿ ಸಮುದಾಯ ಆಸ್ಪತ್ರೆ ಹಾಗೂ ತಾಲೂಕು ಅರೋಗ್ಯ ಕಛೇರಿ ಜಂಟಿಯಾಗಿ ಅನೇಕ ಆರೋಗ್ಯಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೊರಗರಿಗಾಗಿಯೆ ಸಿದ್ದಪಡಿಸಿದ್ದಾರೆ. ೨೦೧೨ನೇ ಇಸವಿಯಲ್ಲಿ ಕಾರ್ಕಳದ ರಾಣೇರ್ ಕಾಲೋನಿ, ಉಚ್ಚಂಗಿನಗರ, ಮಹಾಲಿಂಗೇಶ್ವರ ವಟಾರ, ಪೆರ್ವಾಜೆ, ಮಾರಿಗುಡಿ ವಟಾರ ಕಾರ್ಕಳ. ಈ ಸ್ಥಳಗಳಲ್ಲಿ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಂಡಿದ್ದು ನೂರಕ್ಕೂ ಹೆಚ್ಚು ಜನರು ಇದರ ಪ್ರಯೋಜನೆ ಪಡೆದಿದ್ದಾರೆ. ಅಷ್ಟೆ ಅಲ್ಲದೆ ಉಚಿತ ಕನ್ನಡಕ ವಿತರಣಾ ಕಾರ್ಯಕ್ರಮ ಉಚಿತ ದಂತ ಚಿಕಿತ್ಸಾ ಶಿಬಿರ ಹಾಗೂ ಮಲೇರಿಯ ನಿಯಂತ್ರಣ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಈ ೨೦೧೬-೧೭ ನೇ ವರ್ಷದ ಯೋಜನೆಗಳನ್ನು ಮುಂದಿನ ತಿಂಗಳ ಪುರಸಭೆಯಲ್ಲಿ ನಿರ್ಧರಿಸಲಾಗುತ್ತದೆ ಎಂದು ಪುರಸಭೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

೩.೭. ಶೈಕ್ಷಣಿಕ ಸಂಕೀರ್ಣ (ಎಜುಕೇಶನಲ್ ಕಾಂಪ್ಲೆಕ್ಸ್) ಯೋಜನೆ:

ಈ ಯೋಜನೆ ಅಡಿಯಲ್ಲಿ ಪರಿಶಿಷ್ಟ ಪಂಗಡದವರ ಹೆಣ್ಣು ಮಕ್ಕಳ ಸಾಕ್ಷರತಾ ಮಟ್ಟವನ್ನು ಸುಧಾರಿಸಲು ಕೇಂದ್ರ ಸರಕಾರವು ಎಜುಕೇಶನಲ್ ಕಾಂಪ್ಲೆಕ್ಸ್‌ಗಳನ್ನು ಪ್ರಾರಂಭಿಸುವ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಈ ಯೋಜನೆಯಡಿಯಲ್ಲಿ ದೇಶಾದ್ಯಂತ ೧೮೩ ಎಜುಕೇಶನಲ್ ಕಾಂಪ್ಲೆಕ್ಸ್‌ಗಳನ್ನು ಸ್ಥಾಪಿಸಿ ಪ್ರತಿ ವರ್ಷ ೨೦,೦೦೦ ವಿದ್ಯಾರ್ಥಿನಿಯರು ದಾಖಲಾಗುತ್ತಿದ್ದಾರೆ. ಈ ಶೈಕ್ಷಣಿಕ ಕಾಂಪ್ಲೆಕ್ಸ್‌ಗಳ ಸ್ಥಾಪನೆಯಿಂದ ೯೧೫ ಶಿಕ್ಷಕರಿಗೆ ಹಾಗೂ ಅಷ್ಟೇ ಪ್ರಮಾಣದ ಭೋದಕೇತರ ಸಿಬ್ಬಂದಿಗಳಿಗೆ ಉದ್ಯೋಗಾವಕಾಶ ಒದಗಿಸಿಕೊಡಲಾಗಿದೆ. ರಾಜ್ಯದಲ್ಲಿ ರಾಯಚೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಈ ಎಜುಕೇಶನಲ್ ಕಾಂಪ್ಲೆಕ್ಸ್‌ಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಇಂತಹ ಶಿಕ್ಷಣ ಕೇಂದ್ರಗಳಲ್ಲಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಸತಿ ಸಹಿತ ಪೂರಕವಾಗುವಂತಹ ಪಠ್ಯೇತರ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು. ಈ ಶಾಲೆಗಳಲ್ಲಿ ಪ್ರಾರಂಭಕ್ಕೆ ೧ ರಿಂದ ೫ರ ವರಗೆ ತರಗತಿಗಳು ಇದ್ದು, ನಂತರ ಮೇಲ್ದರ್ಜೆಗೇರಿಸಿ ಹನ್ನೆರಡನೇ ತರಗತಿಯವರೆಗೆ ಶಿಕ್ಷಣ ನೀಡಲು ಅವಕಾಶವಿರುತ್ತದೆ. ಪ್ರತಿ ತರಗತಿಯಲ್ಲಿ ೩೦ ಹೆಣ್ಣು ಮಕ್ಕಳಿಗೆ ಅವಕಾಶವಿರುತ್ತದೆ. ಪ್ರತಿ ವಿದ್ಯಾರ್ಥಿಗೆ ಸುಮಾರು

೯,೦೦೦. ರೂಪಾಯಿಗಳವರೆಗೆ ಅವರ್ತ ವೆಚ್ಚವನ್ನು ಭರಿಸಲು ಅನುದಾನ ನೀಡಲಾಗುತ್ತಿದೆ. ಈ ಶಾಲೆಗಳಲ್ಲಿ ಕೆಳಕಂಡ ಸೌಲಭ್ಯವನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ.

ಪ್ರತಿ ವಿದ್ಯಾರ್ಥಿಗೆ ಪ್ರತಿ ವರ್ಷ ೧. ಜೊತೆ ಸಮವಸ್ತ್ರ, ೨. ಪಠ್ಯ ಪುಸ್ತಕಗಳು, ೩. ಉಚಿತ ಊಟ ಮತ್ತು ವೈದ್ಯಕೀಯ ಸೌಲಭ್ಯ ೪. ಪ್ರತಿ ವಿದ್ಯಾರ್ಥಿಯ ಪೋಷಕರಿಗೆ ರೂ.೫೦. ರಂತೆ ಮಾಹೆಯಾನ ವಿಶೇಷ ಭತ್ಯೆ, ೫. ಪ್ರತಿ ವಿದ್ಯಾರ್ಥಿಗಳಿಗೆ ಅನಾವರ್ತ ವೆಚ್ಚಗಳಾದ ಹಾಸಿಗೆ, ಮಂಚ, ಪಾತ್ರೆ ಇತ್ಯಾದಿಗಳಿಗಾಗಿ ೧,೦೦೦.ರೂ. ಗಳವರೆಗೆ ವೆಚ್ಚವನ್ನು ಭರಿಸಲಾಗುವುದು.

೩.೮. ಕೇಂದ್ರೀಯ ಮಾದರಿ ವಸತಿ ಶಾಲೆಗಳು:

ಭಾರತ ಸಂವಿಧಾನ ಅನುಚ್ಛೇದ ೨೭೫(೧)ರಡಿಯಲ್ಲಿ ೧೯೯೭-೯೮ನೇ ಸಾಲಿನಲ್ಲಿ ರಾಜ್ಯದಲ್ಲಿ ಪರಿಶಿಷ್ಟ ಪಂಗಡದವರಿಗೆ ಕೇಂದ್ರೀಯ ವಸತಿ ಶಾಲೆಗಳು ಮಂಜೂರಾಗಿದ್ದು ೨ ವಸತಿ ಶಾಲೆಗಳನ್ನು ಸ್ಥಾಪಿಸಲು ರೂ.೨೦೦ ಲಕ್ಷ ಮಂಜೂರಾಗಿದ್ದು ಪರಿಶಿಷ್ಟ ವರ್ಗದ ಮೀಸಲು ಕ್ಷೇತ್ರದ ಬಳಗಾವಿ ಜಿಲ್ಲೆಯ ಗೋಕಾಕ್ ತಾಲೂಕಿನ ತವಗ ಗ್ರಾಮದಲ್ಲಿ ಮತ್ತು ಕೊಡುಗು ಜಿಲ್ಲೆಯ ವಿರಾಜಪೇಟೆ ತಾಲೂಕಿನಲ್ಲಿ ೧೯೯೯-೨೦೦೦ನೇ ಸಾಲಿನಲ್ಲಿ ಕಾರ್ಯಾರಂಭಗೊಳಿಸಲಾಗಿದೆ. ಈ ವಸತಿ ಶಾಲೆಗಳಲ್ಲಿ ೫ ರಿಂದ ೧೦ರವರೆಗೆ ತರಗತಿಗಳು ಇರುತ್ತವೆ. ಆಂಧ್ರ ಪ್ರದೇಶದಲ್ಲಿ ಅಸ್ತಿತ್ವದಲ್ಲಿರುವಂತೆ ಈ ಶಾಲೆಗಳನ್ನು ಒಂದು ವಸತಿ ಶಾಲೆಯ ಸಂಘದ ಮೂಲಕ ನಿರ್ವಹಿಸಲಾಗುವುದು. ಅನಾವರ್ತ ವೆಚ್ಚಗಳಿಗಾಗಿ ಕೇಂದ್ರ ಸರ್ಕಾರವು ಪ್ರತಿ ವಸತಿ ಶಾಲೆಗೆ ರೂ.೨೫೦ ಕೋಟಿ ಅನುದಾನವಾಗಿ ನೀಡುತ್ತದೆ.

೩.೯. ವೃತ್ತಿ ತರಬೇತಿ ಕೇಂದ್ರಗಳು:

ಪರಿಶಿಷ್ಟ ಪಂಗಡದ ನಿರುದ್ಯೋಗಿ ವಿದ್ಯಾವಂತ ಯುವಕ ಯುವತಿಯರಿಗೆ ವಿವಿಧ ವೃತ್ತಿಗಳಲ್ಲಿ ನೈಪುಣ್ಯತೆ ಪಡೆಯಲು ಸಹಾಯವಾಗುವಂತೆ, ವೃತ್ತಿ ತರಬೇತಿ ಕೇಂದ್ರಗಳನ್ನು ಕೇಂದ್ರ ಯೋಜನೆಯಡಿಯಲ್ಲಿ ಪ್ರಾರಂಭಿಸಲು ಸರಕಾರವು ಯೋನೆಯನ್ನು ಹಾಕಿಕೊಂಡಿದ್ದು ಚಾಮರಾಜ ನಗರ ಜಿಲ್ಲೆಯ ಯಳಂದೂರು ತಾಲೂಕಿನ ಬಿಳಿಗಿರಿ ರಂಗನ ಬೆಟ್ಟದಲ್ಲಿ ವೃತ್ತಿ ತರಬೇತಿ ಕೇಂದ್ರವನ್ನು ಆರಂಭಿಸಲಾಗಿದೆ. ಇಲ್ಲಿ ವೆಲ್ಡರ್, ಎಲೆಕ್ಟ್ರಿಕಲ್ ಹೊಂ ಅಪ್ಲಯನ್ಸ್‌ಸ್, ಬುಕ್ ಬೈಂಡಿಂಗ್, ಸೆಕ್ರೆಟೆರಿಯಲ್ ಪ್ರಾಕ್ಟೀಸ್, ಗಣಕಯಂತ್ರ ತರಬೇತಿ ನೀಡಲಾಗುತ್ತಿದೆ.

೩.೧೦. ಕೆನಡಾ ಇಂಡಿಯಾ ಪ್ರಾಜೆಕ್ಟ್:

ಸರಕಾರಿ ಪಾಲಿಟೆಕ್ನಿಕ್‌ಗಳು, ಕೆನಡಾ ಇಂಡಿಯಾ ಇನ್ಸಿಟ್ಯೂಷನಲ್ ಕೋ ಆಪರೇಷನ್ ಪ್ರಾಜೆಕ್ಟ್ ಕಂಟಿನ್ಯೂಯಿಂಗ್ ಎಜುಕೇಶನ್ ಸೆಲ್ ಅಡಿಯಲ್ಲಿ ನಿರುದ್ಯೋಗಿ ಯುವಕರಿಗೆ ವಿವಿಧ ವೃತ್ತಿಗಳಲ್ಲಿ ತರಬೇತಿಯನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ೧೯೯೯-೨೦೦೦ನೇ

ಸಾಲಿನಿಂದ ಪರಿಶಿಷ್ಟ ಪಂಗಡದ ನಿರುದ್ಯೋಗಿ ಅರ್ಹ ಯುವಕರಿಗೆ ನವಚೇತನ ಕಾರ್ಯಕ್ರಮದಡಿಯಲ್ಲಿ ಕಡಿಮೆ ಅವಧಿಯ ಡಿಪ್ಲೊಮ ಇನ್ ನರಲ್ ಇಂಜಿನಿಯರಿಂಗ್, ಮೋಟಾರ್ ರಿವೈಂಡಿಂಗ್, ಗೃಹಬಳಕೆ ವೈರಿಂಗ್, ಗೃಹಬಳಕೆ ವಿದ್ಯುತ್ ಉಪಕರಣಗಳ ದುರಸ್ತಿ, ಕಟ್ಟಡ ನಿರ್ಮಾಣ ತಂತ್ರಜ್ಞಾನದಲ್ಲಿ ತರಬೇತಿ, ಟಿವಿ ರೇಡಿಯೋ ಮತ್ತು ಟೇಪ್ ರೆಕಾರ್ಡರ್ ದುರಸ್ತಿ, ಮಹಿಳೆಯರಿಗೆ ಟೈಲರಿಂಗ್ ತರಬೇತಿ, ಸಿದ್ಧಪಡಿಸಿದ ಆಹಾರ ಪದಾರ್ಥಗಳ ತಯಾರಿಕೆ ಮತ್ತು ಮಾರ್ಕೆಟಿಂಗ್, ರೆಫ್ರಿಜರೇಷನ್ ಮತ್ತು ಏರ್‌ಕಂಡೀಶನಿಂಗ್, ಪೈಪಿಂಗ್ ಮತ್ತು ಕಸೂತಿ, ಟ್ರಾಕ್ಟರ್ ಮೆಕಾನಿಕ್, ಬ್ಯೂಟಿಷಿಯನ್ ಕೋರ್ಸ್ ಮತ್ತು ಡಿಟಿಪಿ ಕೋರ್ಸ್‌ಗಳ ಮೂಲಕ ತರಬೇತಿ ನೀಡಲಾಗುತ್ತಿದೆ. ತರಬೇತಿ ಅವಧಿಯಲ್ಲಿ ಶಿಷ್ಯವೇತನ ನೀಡಲಾಗುತ್ತದೆ.

೩.೧೧. ಮೂಲನಿವಾಸಿಗಳಿಗೆ ವಿಶೇಷ ಯೋಜನೆ:

ಬುಡಕಟ್ಟುಗಳಲ್ಲಿಯೇ ಕೆಲವು ಬುಡಕಟ್ಟುಗಳು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ತೀರಾ ಹಿಂದುಳಿದಿವೆ. ಇದನ್ನು ಮನಗಂಡು ಸರ್ಕಾರ ಅಂತಹ ಬುಡಕಟ್ಟುಗಳನ್ನು ಮೂಲನಿವಾಸಿ ಬುಡಕಟ್ಟುಗಳೆಂದು ಗುರುತಿಸಲು ೧೯೬೧ರಲ್ಲಿ ದೇಬರ್ ಆಯೋಗ ರಚಿಸಿತು. ಆಯೋಗವು ದೇಶದಲ್ಲಿ ೭೨ ಮೂಲನಿವಾಸಿ ಪಂಗಡಗಳನ್ನು ಈ ಕೆಳಕಂಡ ಮಾನದಂಡದಿಂದ ಗುರುತಿಸಿತು.

೧. ಪ್ರಾಚೀನ ಕಾಲದ ಹಳೆಯ ವ್ಯವಸಾಯ ಪದ್ಧತಿ.

೨. ಅತಿ ಕಡಿಮೆ ಸಾಕ್ಷರತೆ.

೫ ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಗೃಹವ್ಯವಹಾರಗಳ ಸಚಿವಾಲಯ ೫೨ ಆದಿವಾಸಿ ಪಂಗಡಗಳನ್ನು ಗುರುತಿಸಿದೆ. ಅವುಗಳ ಒಟ್ಟು ಜನಸಂಖ್ಯೆ ಸುಮಾರು ೧೦ ಲಕ್ಷ ಇರಬಹುದೆಂದು ವಿವರಿಸಿದೆ. ೬ನೇ ಪಂಚವಾರ್ಷಿಕ ಯೋಜನೆಯ ಅಡಿಯಲ್ಲಿ ಮತ್ತೆ ೨೦ ಆದಿವಾಸಿ ಪಂಗಡಗಳನ್ನು ಗುರುತಿಸಿ ಅವುಗಳ ಸಂಖ್ಯೆ ೭೨ಕ್ಕೆ ಏರಿದೆ. ಇವುಗಳ ಜನಸಂಖ್ಯೆ ೧೪ ಲಕ್ಷಕ್ಕೆ ಏರಿದೆ. ಈಗ ದೇಶದಲ್ಲಿ ಒಟ್ಟು ೭೫ ಮೂಲನಿವಾಸಿ ಪಂಗಡಗಳನ್ನು ಗುರುತಿಸಲಾಗಿವೆ. ಆ ಪಟ್ಟಿಯಲ್ಲಿ ಕರ್ನಾಟಕದ ಜೇನುಕುರುಬ ಮತ್ತು ಕೊರಗ ಬುಡಕಟ್ಟುಗಳನ್ನು ಆದಿವಾಸಿ ಪಂಗಡಗಳೆಂದು ಗುರುತಿಸಲಾಗಿದೆ.

ರಾಜ್ಯ ಸರ್ಕಾರಗಳು ಆ ರಾಜ್ಯದಲ್ಲಿರುವ ಆದಿವಾಸಿ ಪಂಗಡಗಳ ಅಭಿವೃದ್ಧಿಗಾಗಿ ರೂಪಿಸಿಕೊಂಡಿರುವ ಯೋಜನೆಗಳಿಗೆ ಭಾರತ ಸರ್ಕಾರವು ೧೯೭೫–೭೬ ರಿಂದ ೧೯೮೪–೮೫ ರವರೆಗೆ ಈ ಯೋಜನೆಯನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಗಳಿಗೆ ರೂ.೨೨.೯೩ ಕೋಟಿ ನೀಡಿರುವುದು ವರದಿಯಲ್ಲಿ ಧೃಢಪಟ್ಟಿದೆ. ಆ ಪ್ರಕಾರ ಕರ್ನಾಟಕಕ್ಕೆ ೧೯೭೭–೭೮ರಲ್ಲಿ ೫

ಲಕ್ಷ, ೧೯೭೮-೭೯ರಲ್ಲಿ ೪ ಲಕ್ಷ, ೧೯೭೯-೮೦ರಲ್ಲಿ ೪ ಲಕ್ಷ, ೧೯೮೦-೮೧ರಲ್ಲಿ ೪ ಲಕ್ಷ, ೧೯೮೧-೮೨ರಲ್ಲಿ ೪ ಲಕ್ಷ, ೧೯೮೨-೮೩ರಲ್ಲಿ ೪ ಲಕ್ಷ, ೧೯೮೩-೮೪ರಲ್ಲಿ ೩.೮೪ ಲಕ್ಷ, ೧೯೮೪-೮೫ರಲ್ಲಿ ೩.೮೪ ಲಕ್ಷ ನೀಡಲಾಗಿದೆ.

ಇದರ ಜೊತೆಗೆ ಮೂಲನಿವಾಸಿಗಳ ಅಭಿವೃದ್ಧಿಗಾಗಿ ರೂಪಿಸಿರುವ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಬೇಕಾಗಿರುವ ಸಿಬ್ಬಂದಿಗಳ ಮಂಜೂರಾತಿಯನ್ನು ನೀಡಿ ಹುದ್ದೆಗಳನ್ನು ಸೃಷ್ಟಿಸಿದೆ. ಈ ವಿಶೇಷ ಯೋಜನೆಗಳನ್ನು ಐ.ಟಿ.ಡಿ.ಪಿ. ಬುಡಕಟ್ಟು ಸಂಶೋಧನಾ ಕೇಂದ್ರ, ಸರ್ಕಾರೇತರ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ. ೨೦೦೨-೦೩ರಲ್ಲಿ ಈ ಯೋಜನೆಗಾಗಿ ರೂ.೧೩.೭೫ ಕೋಟಿ ಬಿಡುಗಡೆ ಮಾಡಲಾಗಿದೆ.

೩.೧೧. ೧. ಲ್ಯಾಂಪ್ ಸಹಕಾರ ಸಂಘಗಳ ಸ್ಥಾಪನೆ:

ಲ್ಯಾಂಪ್ ಸಹಕಾರ ಸಂಘಗಳಿಗೆ ಆರ್ಥಿಕ ಚೈತನ್ಯವನ್ನು ತುಂಬಲು ಭಾರತ ಸರ್ಕಾರ ೧೯೮೨ರಲ್ಲಿ ಟ್ರೈಫೆಡ್ (Tribal co-operative marketing development federation of India) ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಯ ಮುಖ್ಯ ಉದ್ದೇಶ ಬುಡಕಟ್ಟು ಜನರು ಉತ್ಪಾದಿಸುವ ವಸ್ತುಗಳಿಗೆ ಸ್ಪರ್ಧಾತ್ಮಕ ಬೆಲೆಗಳನ್ನು ನೀಡುವುದರ ಜೊತೆಗೆ ಮಾರುಕಟ್ಟೆ ಒದಗಿಸಿಕೊಡುವುದಾಗಿದೆ. ಬುಡಕಟ್ಟು ಸಮುದಾಯಗಳಿಗೆ ಬೇಕಾಗುವ ಅವಶ್ಯಕ ವಸ್ತುಗಳನ್ನು ರಿಯಾಯ್ತಿ ದರದಲ್ಲಿ ಪೂರೈಸುವುದು. ಈ ಸಂಸ್ಥೆ ಮಧ್ಯವರ್ತಿಗಳ ಸಹಕಾರ ಸಂಘದ ಆಫೆಕ್ಸ್ ಸಂಸ್ಥೆಯಾಗಿದೆ. ಈ ಸಂಸ್ಥೆಯು ಬುಡಕಟ್ಟು ಜನರು ಸ್ಥಾಪಿಸಿಕೊಳ್ಳುವ ಸಹಕಾರ ಸಂಘಗಳಿಗೆ ಸ್ವತ್ತಿನ ನಿಧಿಯನ್ನೊದಗಿಸುತ್ತಿದೆ.

೩.೧೧. ೨. ಸಾಮಾಜಿಕ ಭದ್ರತಾ ಯೋಜನೆ:

ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಪ್ರದೇಶಗಳಲ್ಲಿ ವಾಸಿಸುವ ಪರಿಶಿಷ್ಟ ಪಂಗಡದವರಿಗಾಗಿ ಸಾಮಾಜಿಕ ಭದ್ರತಾ ಯೋಜನೆಯನ್ನು ೧೯೯೨-೯೩ ರಿಂದ ಆರಂಭಿಸಲಾಗಿದೆ. ಈ ಯೋಜನೆಯ ಅಡಿಯಲ್ಲಿ ೧೮ ರಿಂದ ೬೦ ವರ್ಷದ ಎಲ್ಲಾ ಪರಿಶಿಷ್ಟ ಪಂಗಡದ ಅರ್ಹ ಅರಣ್ಯ ಕೂಲಿಗಾರರಿಗೆ ಜೀವವಿಮಾ ಸೌಲಭ್ಯ ಒದಗಿಸಲಾಗುತ್ತಿದೆ. ಈ ಯೋಜನೆಯಡಿ ಪ್ರೀಮಿಯಂ ದರ ತಲಾ ರೂ.೨೪ ಆಗಿದ್ದು ಇದರಲ್ಲಿ ೧೨ ರೂಪಾಯಿಗಳನ್ನು ಭಾರತೀಯ ಜೀವ ವಿಮಾ ನಿಗಮ ಭರಿಸುತ್ತಿದೆ. ಇನ್ನುಳಿದ ೧೨ ರೂಪಾಯಿಗಳನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನೀಡುತ್ತದೆ.

ಪಾಲಿಸಿದಾರರು ಮರಣ ಹೊಂದಿದ್ದ ಸಂದರ್ಭದಲ್ಲಿ ಅವರು ನಾಮನಿರ್ದೇಶನ ಮಾಡಿದ ಕುಟುಂಬದ ಸದಸ್ಯರಿಗೆ ೩೦೦೦ ರೂಪಾಯಿಗಳನ್ನು ನೀಡಲಾಗುತ್ತದೆ. ಪಾಲಿಸಿದಾರರು ಆಕಸ್ಮಿಕ

ಅಘಘಾತದಿಂದಾಗಿ ಮೃತ ಹೊಂದಿದಲ್ಲಿ ಅವರಿಗೆ ೨೫,೦೦೦ ರೂಪಾಯಿಗಳ ಪರಿಹಾರ ನೀಡುತ್ತದೆ.

೩.೧೧.೩. ವಿಶೇಷ ಕೇಂದ್ರೀಯ ಸಹಾಯ ಗಿರಿಜನ ಉಪಯೋಜನೆ: (Special Central Assistence to Tribal Sub-Plan)

ಈ ಕಾರ್ಯಕ್ರಮದ ಹಿನ್ನೆಲೆ ಮತ್ತು ಉದ್ದೇಶ ಗ್ರಾಮೀಣ ಪ್ರದೇಶದ ಬುಡಕಟ್ಟು ಅಭಿವೃದ್ಧಿಗಾಗಿ ವಿಶೇಷ ಕೇಂದ್ರೀಯ ಸಹಾಯವನ್ನು ಗಿರಿಜನ ಉಪ ಯೋಜನೆ ಅಡಿಯಲ್ಲಿ ಕೃಷಿ, ತೋಟಗಾರಿಕೆ, ಪಶಸಂಗೋಪನೆ, ರೇಷ್ಮೆ, ನೀರಾವರಿ ಪಂಪ್‌ಸೆಟ್, ಸಹಕಾರ, ಸ್ವಯಂ ಉದ್ಯೋಗ ಮತ್ತು ಗ್ರಾಮೀಣ ಮತ್ತು ಸಣ್ಣ ಉದ್ಯಮ ಇಲಾಖೆಯ ಮೂಲಕ ಕಾರ್ಯಕ್ರಮಗಳನ್ನು ಅನುಷ್ಠಾನಗಳಿಸುವುದಕ್ಕಾಗಿ ವಿಶೇಷ ಸಹಾಯಧನವನ್ನು ಕೇಂದ್ರ ಸರ್ಕಾರ ನೀಡುತ್ತದೆ.

ವಿವಿಧ ಇಲಾಖೆಗಳಿಂದ ಅನುಷ್ಠಾನಗೊಳಿಸುತ್ತಿರುವ ಈ ಕಾರ್ಯಕ್ರಮಗಳು, ಬಡತನ ರೇಖೆಯ ಕೆಳಗೆ ಇರುವ ಕುಟುಂಬಗಳ ಫಲಾನುಭವಿಗಳನ್ನು ಆಯ್ಕೆ ಮಾಡಿ ಅವರಿಗೆ ಸ್ವತ್ತುಗಳನ್ನು ವಿತರಿಸಿ, ಅವುಗಳ ಸಹಾಯದಿಂದ ನಿರಂತರ ಆದಾಯ ಬರುವ ಆರ್ಥಿಕ ಚಟುವಟಿಕೆಗಳನ್ನು ಕೈಗೊಂಡು ಬಡತನ ರೇಖೆಯಿಂದ ಮೇಲಕ್ಕೆತ್ತುವುದೇ ಈ ಯೋಜನೆಯ ಉದ್ದೇಶವಾಗಿದೆ.

ಈ ಯೋಜನೆಗಳಲ್ಲದೆ ಬುಡಕಟ್ಟು ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರ ೧೯೭೫ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿದ್ದು, ಇದರ ವತಿಯಿಂದ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

೩.೧೧.೪. ಸಂವಿಧಾನಾತ್ಮಕ ಅಭಿವೃದ್ಧಿ ನೀತಿಗಳು: ಅನುಚ್ಛೇದ ೨೭೫ (೧)ರ ಅಡಿಯಲ್ಲಿ ಅನುದಾನ:

ಭಾರತ ಸಂವಿದಾನದ ಅನುಚ್ಛೇದ ೨೭೫ (೧)ರ ಪ್ರಕಾರ ದೇಶದ ೨೧ ರಾಜ್ಯಗಳಲ್ಲಿ ಹಾಗೂ ೪ ಕೇಂದ್ರಾಡಳಿತ ಪ್ರದೇಶದಲ್ಲಿರುವ ಗಿರಿಜನ ಉಪ ಯೋಜನೆಯ ಕಾರ್ಯಕ್ರಮಗಳಿಗೆ ಭಾರತ ಸರ್ಕಾರವು ಅನುದಾನ ಬಿಡುಗಡೆ ಮಾಡುತ್ತಿದೆ. ಈ ಅನುದಾವನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ ಅನುಮೋದಿತವಾದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಉಪಯೋಗಿಸಲಾಗುತ್ತಿದೆ. ಈ ಅನುದಾನದಲ್ಲಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಬೇಕಾಗಿರುವ ಮೂಲಭೂತ ಸೌಕರ್ಯಗಳಾದ ರಸ್ತೆ ಮತ್ತು ಸೇತುವೆ, ಸೌರಶಕ್ತಿಯ ವಿದ್ಯುದೀಕರಣ, ಶಾಲೆಗಳ ನಿರ್ಮಾಣ, ವಸತಿ ನಿಲಯಗಳ ನಿರ್ಮಾಣ, ನೀರಾವರಿ ಸೌಲಭ್ಯ,

ಇತ್ಯಾದಿ ಯೋಜನೆಗಳನ್ನು ಕೈಗೊಳ್ಳಬಹುದಾಗಿದೆ. ಈ ಉದ್ದೇಶಕ್ಕಾಗಿ ೨೦೦೨-೦೫ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ರೂ.೨೮೦ ಕೋಟಿ ಬಿಡುಗಡೆ ಮಾಡಿದೆ.

ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿಗಾಗಿ ಗಿರಿಜನ ಉಪ ಯೋಜನೆಯ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಸುಮಾರು ೨೮ ಅಭಿವೃದ್ಧಿ ಇಲಾಖೆ, ನಿಗಮ, ಮಂಡಳಿಗಳು ತಮ್ಮ ಯೋಜನಾ ಆಯವ್ಯಯದಲ್ಲಿ ಶೇ.೩ನ್ನು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಮೀಸಲಾಗಿಟ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಹಲವಾರು ಆರ್ಥಿಕ ಸವಲತ್ತುಗಳ ಜೊತೆಗೆ ಶೈಕ್ಷಣಿಕ ಮತ್ತು ಸಾಮಾಜಿಕ ಸೌಲಭ್ಯಗಳನ್ನು ಒದಗಿಸುತ್ತಿದೆ. ಅಲ್ಲದೆ ಕುಡಿಯುವ ನೀರಿನ ಪೂರೈಕೆ, ವಿದ್ಯುದ್ದೀಕರಣ, ವೈದ್ಯಕೀಯ ಸೌಲಭ್ಯ, ವಸತಿ, ಸಂಪರ್ಕ ರಸ್ತೆ ಮುಂತಾದ ಮೂಲಭೂತ ಸೌಕರ್ಯಗಳಿಗೆ ಆದ್ಯತೆ ನೀಡಲಾಗುತ್ತಿದೆ. ಬುಡಕಟ್ಟು ಪರ ಯೋಜನೆಗಳನ್ನು ನೇರವಾಗಿ ಫಲಾನುಭವಿಗಳಿಗೆ ಮುಟ್ಟಲು ಹಾಗೂ ಅನಾವಶ್ಯಕ ವಿಳಂಬವನ್ನು ತಪ್ಪಿಸಲು ಮತ್ತು ಪರಿಣಾಮಕಾರಿಯಾಗಿ ಯೋಜನೆಗಳನ್ನು ಪರೀಕ್ಷಿಸಲು ಅನುಕೂಲವಾಗುವಂತೆ ಜಿಲ್ಲಾ ಪಂಚಾಯತ್, ತಾಲೂಕ್ ಪಂಚಾಯತ್ ಮೂಲಕ ಕೇಂದ್ರ ಪುರಸ್ಕೃತ ಯೋಜನೆಗಳೆಂದು ವಿಭಜಿಸಿ ಅನುಷ್ಠಾನಗೊಳಿಸಲಾಗುತ್ತಿವೆ. ಈ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು, ಇದರ ಮೇಲುಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೋಸ್ಕರ ೦೭.೦೧.೧೯೯೯ ರಿಂದ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯವನ್ನು ಪ್ರಾರಂಭಿಸಲಾಗಿದೆ.

೩.೧೨. ಶೈಕ್ಷಣಿಕ ಅಭಿವೃದ್ಧಿ ಯೋಜನೆಗಳು:

೩.೧೨.೧. ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು:

ಬುಡಕಟ್ಟು ಮಕ್ಕಳಿಗೆ ಪ್ರಾರಂಭದಲ್ಲಿಯೇ ಶಾಲೆಗೆ ಹೋಗುವ ಅಭ್ಯಾಸ ಬೆಳೆಸಲು ಈ ಯೋಜನೆ ರೂಪಿಸಲಾಗಿದೆ. ಇಲ್ಲಿ ೫ ವರ್ಷದ ಹೆಣ್ಣು ಮಕ್ಕಳನ್ನು ದಾಖಲಿಸಿಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಳ್ಳಲು ಪ್ರತಿ ಕೇಂದ್ರದಲ್ಲಿ ಒಬ್ಬ ಸಂಚಾಲಕಿ ಹಾಗೂ ನಿರ್ವಾಹಕಿ ಇರುತ್ತಾರೆ. ಈ ಸಂಚಾಲಕಿ ಪ್ರತಿದಿನ ಮಕ್ಕಳನ್ನು ಮನೆಯಿಂದ ಶಾಲೆಗೆ ಮತ್ತು ಶಾಲೆಯಿಂದ ಮನೆಗೆ ಕರೆದುಕೊಂಡು ಬಂದು ಹೋಗುವುದರ ಜೊತೆಗೆ, ಆ ಮಕ್ಕಳಿಗೆ ಪ್ರತಿದಿನ ಒಂದು ಮಗುವಿಗೆ ಒಂದು ರೂಪಾಯಿ ಮೌಲ್ಯದ ಮಧ್ಯಾಹ್ನದ ಉಪಾಹಾರ ನೀಡುತ್ತಾಳೆ. ಕರ್ನಾಟಕ ರಾಜ್ಯದಲ್ಲಿ ಮಹಿಳಾ ಮಕ್ಕಳ ಕೇಂದ್ರಗಳು ಸುಮಾರು ೭೦ ಇದ್ದು, ಪ್ರತಿ ಕೇಂದ್ರದಲ್ಲಿ ೫೦ ಮಕ್ಕಳಿಗೆ ಪ್ರವೇಶಾವಕಾಶವಿದೆ. ಪರಿಶಿಷ್ಠ ವರ್ಗಗಳ ಕಲ್ಯಾಣ ಇಲಾಖೆಯ ೨೦೦೧ರ ದಾಖಲಾತಿಯ ಪ್ರಕಾರ ೩೨೮೮ ಮಕ್ಕಳು ಇಲ್ಲಿ ಕಲಿಯುತ್ತಿದ್ದಾರೆ.

೩.೧೨.೨. ಆಶ್ರಮ ಶಾಲೆಗಳು:

ಆಶ್ರಮ ಶಾಲೆಗಳ ಪರಿಕಲ್ಪನೆ ಕೇಂದ್ರ ಸರ್ಕಾರದ್ದು. ಈ ಯೋಜನೆಯನ್ನು ೧೯೯೦-೯೧ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ರಾಜ್ಯಗಳಿಗೆ ಶೇ.೫೦ ರಷ್ಟು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಶೇ.೧೦೦ರಷ್ಟು ಅನುದಾನವನ್ನು ಬಿಡುಗಡೆ ಮಾಡಿತು. ೨೦೦೧-೦೨ನೇ ಸಾಲಿನಲ್ಲಿ ದೇಶದಾದ್ಯಂತ ೧೩೫ ಆಶ್ರಮ ಶಾಲೆಗಳ ನಿರ್ಮಾಣಕ್ಕಾಗಿ ರೂ.೯.೫೦ ಕೋಟಿ ಮಂಜೂರು ಮಾಡಲಾಗಿದೆ. ಬುಡಕಟ್ಟು ಸಮುದಾಯಗಳ ಮಕ್ಕಳ ಶೈಕ್ಷಣಿಕ ಅನುಕೂಲಕ್ಕಾಗಿ ಹಾಗೂ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ವ ಕೊಡುವ ಉದ್ದೇಶದಿಂದ ಸರ್ಕಾರ ಈ ಆಶ್ರಮ ಶಾಲೆಗಳನ್ನು ತೆರೆದಿದೆ. ಈ ಆಶ್ರಮ ಶಾಲೆಗಳಲ್ಲಿ ಒಂದರಿಂದ ಐದನೇ ತರಗತಿಯವರೆಗೆ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳುವುದರ ಜೊತೆಗೆ, ಅಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ವಸತಿ ನಿಲಯದ ಸೌಕರ್ಯ ಒದಗಿಸಲಾಗಿದೆ. ಬೋಧನೆಗೆ ಶಿಕ್ಷಕರನ್ನು ಅಡುಗೆ ಹಾಗೂ ಇತರೆ ಸಿಬ್ಬಂದಿಗಳನ್ನು ಊಟ ಉಪಚಾರಕ್ಕಾಗಿ ನೇಮಕ ಮಾಡಲಾಗಿದೆ. ಈ ಶಾಲೆಗಳಲ್ಲಿ ಶೇ.೭೫ ರಷ್ಟು ಬುಡಕಟ್ಟು ಮಕ್ಕಳಿಗೆ ಹಾಗೂ ಶೇ.೨೫ ರಷ್ಟು ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ಮಕ್ಕಳಿಗೆ ಪ್ರವೇಶ ಮೀಸಲಾತಿಯನ್ನು ಕಾಯ್ದಿರಿಸಲಾಗಿದೆ. ಪ್ರತಿಯೊಂದು ಶಾಲೆಯ ಪ್ರತಿ ತರಗತಿಗೆ ೨೫ರಂತೆ ೧.೨೫ ಮಕ್ಕಳನ್ನು ದಾಖಲಿಸಲು ಅವಕಾಶವಿರುತ್ತದೆ. ಆ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಸುಮಾರು ೯೧ ಆಶ್ರಮ ಶಾಲೆಗಳು ಬುಡಕಟ್ಟು ಮಕ್ಕಳ ಶಿಕ್ಷಣಕ್ಕಾಗಿಯೇ ತೆರೆದಿದ್ದು ಅವುಗಳಲ್ಲಿ ಸುಮಾರ ೫೭೨೫ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

೩.೧೨.೩. ವಿದ್ಯಾರ್ಥಿ ನಿಲಯಗಳು: (ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು)

ಈ ಕಾರ್ಯಕ್ರಮದ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ, ಬಡತನ ರೇಖೆಗಿಂತ ಕೆಳಮಟ್ಟದಲ್ಲಿ ಜೀವಿಸುತ್ತಿರುವ ಬುಡಕಟ್ಟು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿಕೊಂಡು ಹೋಗಲು ಈ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸರ್ಕಾರ ಜಾರಿಗೆ ತಂದಿದೆ. ದೂರದ ಹಳ್ಳಿಗಳಲ್ಲಿ ವಾಸಿಸುವ ಮಕ್ಕಳು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಲು ಶಾಲೆಗಳು ಲಭ್ಯವಿಲ್ಲದ ಕಾರಣ, ಹಲವು ಬುಡಕಟ್ಟು ವಿದ್ಯಾರ್ಥಿಗಳು ಶಾಲೆ ಬಿಡುವ ಪ್ರವೃತ್ತಿಯಿರುವುದರಿಂದ, ಇವುಗಳನ್ನು ತಪ್ಪಿಸಲು ಈ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ. ಇದರಲ್ಲಿ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ. ಈ ವಿದ್ಯಾರ್ಥಿನಿಲಯಗಳಲ್ಲಿ ೫ ರಿಂದ ೧೦ನೇ ತರಗತಿಯವರೆಗೆ ಅಭ್ಯಾಸ ಮಾಡುತ್ತಿರುವ ಬುಡಕಟ್ಟು ಬಾಲಕರಿಗೆ ಮತ್ತು ೩ ರಿಂದ ೧೦ನೇ ತರಗತಿಯಲ್ಲಿ ಓದುತ್ತಿರುವ ಬಾಲಕಿಯರಿಗೆ ಅವಕಾಶ ನೀಡಲಾಗುತ್ತಿದೆ. ಈ ವಿದ್ಯಾರ್ಥಿನಿಲಯಗಳಲ್ಲಿ ಗ್ರಾಮಾಂತರ

ಪ್ರದೇಶಗಳಿಂದ ಬರುವಂತಹ ವಿದ್ಯಾರ್ಥಿಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ. ಈ ವಿದ್ಯಾರ್ಥಿನಿಲಯದ ನಿರ್ವಹಣೆ ನೋಡಿಕೊಳ್ಳಲು ಪ್ರತಿಯೊಂದು ವಿದ್ಯಾರ್ಥಿನಿಲಯದಲ್ಲಿ ಒಬ್ಬ ಮೇಲ್ವಿಚಾರಕರು, ಇಬ್ಬರು ಅಡಿಗೆಯವರು, ಒಬ್ಬ ಅಡಿಗೆ ಸಹಾಯಕರು ಇರುತ್ತಾರೆ. ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ಮೇಲಿನ ಸಿಬ್ಬಂಧಿಗಳ ಜೊತೆಗೆ ಒಬ್ಬ ರಾತ್ರಿ ಕಾವಲುಗಾರರು ಕೆಲಸ ನಿರ್ವಹಿಸುತ್ತಿದ್ದಾರೆ. ಈ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾಹಿಸುವುದರ ಮೂಲಕ ಅರ್ಜಿ ಪಡೆದು, ಪಟ್ಟಿಮಾಡಿ ಅವುಗಳನ್ನು ತಾಲೂಕು ಮಟ್ಟದಲ್ಲಿರುವ ಆಯ್ಕೆ ಸಮಿತಿಯ ಮುಂದೆ ಇಟ್ಟು ಆಯ್ಕೆ ಮಾಡುತ್ತಾರೆ. ಈ ವಿದ್ಯಾರ್ಥಿ ನಿಲಯಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಉಚಿತ ಊಟ ಮತ್ತು ವಸತಿಯನ್ನು ಕಲ್ಪಿಸಲಾಗುತ್ತಿದೆ.

ಬುಡಕಟ್ಟು ವಿದ್ಯಾರ್ಥಿಗಳಿಗಾಗಿ ಕರ್ನಾಟಕ ರಾಜ್ಯದಾದ್ಯಂತ ೬೧ ಮೆಟ್ರಿಕ್ ಪೂವ್ ಬಾಲಕ, ಬಾಲಕಿಯರ ವಿದ್ಯಾರ್ಥಿನಿಲಯಗಳಿದ್ದು, ಪ್ರತಿವರ್ಷ ೩೦೦೦ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ಈ ವಿದ್ಯಾರ್ಥಿನಿಲಯಗಳಲ್ಲಿ ಶೇ.೭೫ರಷ್ಟು ಬುಡಕಟ್ಟು ವಿದ್ಯಾರ್ಥಿಗಳಿಗೆ ಉಳಿದ ಶೇ.೨೫ ಪರಿಶಿಷ್ಠ ಜಾತಿ ಹಾಗೂ ಹಿಂದುಳಿದ ವರ್ಗಗಳಿಗೆ ಕಾಯ್ದಿರಿಸಲಾಗಿದೆ.

೨೦೧೫-೧೬ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯ ಉಡುಪಿ, ಕುಂದಾಪುರ ಮತ್ತು ಕಾರ್ಕಳ ತಾಲೂಕುಗಳ ಪರಿಶಿಷ್ಟ ವರ್ಗಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ೫೫ ಬುಡಕಟ್ಟು ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಂಡಿದ್ದಾರೆ. ಹಾಗೂ ಈ ತಾಲೂಕುಗಳ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಒಟ್ಟು ೭೬ ಬುಡಕಟ್ಟು ವಿದ್ಯಾರ್ಥಿಗಳು ಪ್ರವೇಶ ಪಡೆದು ಪ್ರಥಮ ಹಾಗೂ ದ್ವಿತೀಯ ಪಿ.ಯು.ಸಿಗಳಲ್ಲ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

೨೦೧೬-೧೭ ನೇ ಸಾಲಿನಲ್ಲಿ ಬುಡಕಟ್ಟು ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಸರಕಾರ ಬಿಡುಗಡೆ ಮಾಡಿದೆ. ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲು ಐ.ಟಿ.ಡಿ.ಪಿ ಅಧಿಕಾರಿಗಳು ಒಟ್ಟು ೧೦೯/- ಲಕ್ಷ ರೂಗಳ ಅನುದಾನ ನಿಗದಿಪಡಿಸಿ ಸರಕಾರಕ್ಕೆ ಮನವಿ ಸಲ್ಲಿಸಿದ್ದರು ಆದರೆ ಸರಕಾರ ೩೦.೬೯/- ಲಕ್ಷ ರೂಗಳನ್ನು ಬಿಡುಗಡೆ ಮಾಡಿದೆ. ಹಾಗೆಯೇ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲು ಯೋಜನೆ ವಿಭಾಗದಲ್ಲಿ ೨೭೦/- ಲಕ್ಷ ರೂಗಳನ್ನು, ಯೋಜನೇತರ ವಿಭಾಗದಲ್ಲಿ ೧೪೩/- ಲಕ್ಷ ರೂ. ಒಟ್ಟು ೪೧೩/- ಲಕ್ಷ ರೂಗಳ ಅನುದಾನ ಕೋರಿ ಮನವಿ ಸಲ್ಲಿಸಿದ್ದರು. ಇದರಲ್ಲಿ ಸರಕಾರ ಕೇವಲ ೪೭.೧೯ ಲಕ್ಷ ರೂ.ಗಳ ಅನುದಾನ ನೀಡಿದೆ. ಈ ಅನುದಾನಕ್ಕೆ ಸಂಬಂಧಿಸಿದಂತೆ

ವಿಶ್ಲೇಷಣೆ ಮಾಡುವುದಾದರೆ, ಸರಕಾರ ಬುಡಕಟ್ಟುಗಳ ಶಯಕ್ಷಣಿಕ ಅಭಿವೃದ್ಧಿಗೆ ಹೇಗೆ ಸ್ಪಂಧಿಸುತ್ತಿದೆ ಎಂಬುವುದು ಅರ್ಥವಾಗುತ್ತದೆ.

೩.೧೨.೪. ನವೋದಯ ಶಾಲೆ:

ಬುಡಕಟ್ಟು ಮಕ್ಕಳಿಗೆ ೫ ರಿಂದ ೧೦ನೇ ತರಗತಿಯವರೆಗೆ ಉತ್ತಮ ವಿದ್ಯಾಭ್ಯಾಸವನ್ನು ನೀಡುವ ದೃಷ್ಟಿಯಿಂದ ನವೋದಯ ಶಾಲೆಗಳನ್ನು ಸ್ಥಾಪಿಸಲಾಗಿದೆ. ಇದು ರಾಜ್ಯದ ಕಾರ್ಯಕ್ರಮವಾಗಿದ್ದು, ಈ ಯೋಜನೆಯ ಅನುದಾನ ಪೂರ್ಣ ರಾಜ್ಯ ಸರಕಾರದ್ದಾಗಿದ್ದು, ಈ ಶಾಲೆಯಲ್ಲಿ ೫ ರಿಂದ ೧೦ ತರಗತಿಯವರೆಗೆ ಅವಕಾಶವಿದ್ದು, ವಿದ್ಯಾರ್ಥಿ, ವಿದ್ಯಾರ್ಥಿನಿಯರ ಪ್ರವೇಶ ಅನುಪಾತ ೫೦:೫೦ ಆಗಿದ್ದು ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪ್ರವೇಶ ನೀಡಲಾಗುವುದು. ಇಲ್ಲಿ ಉಚಿತ ಊಟ, ವಸತಿ ಸೌಲಭ್ಯವನ್ನು ನೀಡಲಾಗುತ್ತಿದೆ.

ರಾಜ್ಯದಲ್ಲಿ ಪರಿಶಿಷ್ಟರ ಮಕ್ಕಳಿಗಾಗಿ ೪ ನವೋದಯ ಶಾಲೆಗಳನ್ನು ಆರಂಭಿಸಲಾಗಿದೆ. ಅವುಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ, ದಕ್ಷಿಣ ಕನ್ನಡ ಜಿಲ್ಲೆಯ ಮುಂಡಾಜೆ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಹಾಗೂ ರಾಯಚೂರುಗಳಲ್ಲಿ ಸ್ಥಾಪಿಸಲಾಗಿದೆ. ಈ ಶಾಲೆಯಲ್ಲಿ ಪ್ರತಿ ವಿದ್ಯಾರ್ಥಿಗೆ ಆಹಾರಕ್ಕಾಗಿ ಮಾಸಿಕ ೫೦೦.೦೦ ರೂ.ಗಳನ್ನು ಸಮವಸ್ತ್ರಕ್ಕಾಗಿ ವಾರ್ಷಿಕ ೮೦೦ ರೂ ಗಳನ್ನು ಇತರೆ ಖರ್ಚುಗಳಿಗಾಗಿ ನೂರು ರೂಪಾಯಿಗಳನ್ನು ನೀಡಿ ಜೊತೆಗೆ ಊಟ ತಟ್ಟೆ, ಲೋಟ, ಮಂಚ, ಕುರ್ಚಿ, ಟೇಬಲ್, ಗ್ರಂಥಾಲಯ, ಪ್ರಯೋಗಾಲಯದ ಸೌಲತ್ತುಗಳನ್ನು ನೀಡಲಾಗುತ್ತಿದೆ.

೩.೧೨.೫. ಮುರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು:

ಪ್ರತಿಭಾವಂತ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುವುದು ಮತ್ತು ಓದಲು ಉತ್ತಮವಾದ ವಾತಾವರಣ ನಿರ್ಮಿಸುವುದು ಸರ್ಕಾದ ಉದ್ದೇಶವಾಗಿದೆ. ಆ ಕಾರಣದಿಂದ ಈ ಯೋಜನೆಯನ್ನು ಪ್ರಾರಂಭಿಸಿ ಇದರಲ್ಲಿ ೬ ರಿಂದ ೧೦ ತರಗತಿಯ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗುತ್ತಿದೆ. ಇಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪ್ರವೇಶದ ಅನುಪಾತ ೫೦:೫೦ ಆಗಿರುತ್ತದೆ. ಈ ಯೋಜನೆಯನ್ನು ರಾಜ್ಯ ಸರ್ಕಾರವು ೧೯೯೬-೯೭ನೇ ಸಾಲಿನಲ್ಲಿ ಪ್ರಾರಂಭಿಸಿದೆ. ಇಲ್ಲಿನ ವಸತಿ ಶಾಲೆಯ ಪ್ರವೇಶಕ್ಕಾಗಿ ವಿದ್ಯಾರ್ಥಿಗಳ ಪೂರ್ವ ಭಾವಿ ಪರೀಕ್ಷೆಯನ್ನು ಜಿಲ್ಲಾ ಮಟ್ಟದಲ್ಲಿ ನಡೆಸಿ, ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಮೀಸಲಾತಿ ಅನ್ವಯ ದಾಖಲು ಮಾಡಿಕೊಳ್ಳಲಾಗುತ್ತದೆ.

ಈ ವಸತಿ ಶಾಲೆಯಲ್ಲಿ ಇರುವ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣದ ಜೊತೆಗೆ ಉಚಿತ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಸರಕಾರ ಪ್ರತಿ ವಿದ್ಯಾರ್ಥಿಯ ಆಹಾರಕ್ಕಾಗಿ ಮಾಸಿಕ ರೂ.೫೦೦

ಗಳ ವೆಚ್ಚ ಮಾಡುತ್ತಿದೆ. ಉಚಿತ ಪಠ್ಯ ಪುಸ್ತಕದ ಜೊತೆಗೆ ರೂ.೫೦೦. ಗಳಲ್ಲಿ ೨ ಜೊತೆ ಸಮವಸ್ತ್ರಗಳನ್ನು ನೀಡಲಾಗುತ್ತಿದೆ. ಈ ವಸತಿ ಶಾಲೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಪ್ರವೇಶದಲ್ಲಿ ಮೀಸಲಾತಿಯನ್ನು ಕಾಯ್ದಿರಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಸುಮಾರು ೪೭ ಶಾಲೆಗಳಿದ್ದು ಇದರಲ್ಲಿ ೮೧೦೦ ವಿದ್ಯಾರ್ಥಿಗಳು ವಿದ್ಯೆ ಪಡೆಯುತ್ತಿದ್ದಾರೆ.

೩.೧೨.೬. ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು:

ಅರ್ಥಶಾಸ್ತ್ರಜ್ಞ ಡಾ. ಎಂ. ನಂಜುಂಡಪ್ಪ ಅವರ ವರದಿಯ ಮೇರೆಗೆ ಸರ್ಕಾರವು ೨೦೦೯-೧೦ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದ ಕುಟುಂಬದವರ ಹೆಣ್ಣು ಮಕ್ಕಳ ಶೈಕ್ಷಣಕ್ಕಾಗಿ ರಾಜ್ಯದ ಹಿಂದುಳಿದ ೧೧೪ ತಾಲೂಕುಗಳಲ್ಲಿ ತಲಾ ಒಂದೊಂದು 'ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ'ಗಳನ್ನು ಸರ್ಕಾರ ಆದೇಶ ಸ. ಕ. ಇ. ೫೩ ಎಂಡಿಎಸ್ ೨೦೦೯ ದಿನಾಂಕ:೧೯.೦೫.೨೦೦೯ರಲ್ಲಿ ಪ್ರಾರಂಭಿಸಲು ಆದೇಶಿಸಿದ್ದು ಅದರಂತೆ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

ಪ್ರತಿ ವಿದ್ಯಾರ್ಥಿಗೆ ವಸತಿ ಶಾಲೆಯಲ್ಲಿ ದೊರೆಯುವ ಸೌಲಭ್ಯಗಳ ವಿವರಗಳು

ಕ್ರಸಂ	ನೀಡುತ್ತಿರುವ ಸೌಲಭದಯ ವಿವರ	ವೆಚ್ಚದ ಬಾಬ್ತು
೧.	ಆಹಾರದ ವೆಚ್ಚ(ಪ್ರತಿ ಮಾಹೆ. ಪ್ರತಿ ವಿದ್ಯಾರ್ಥಿಗೆ)	೭೫೦/-
೨.	ಸಮವಸ್ತ್ರ ಶೂ, ಸಾಕ್ಸ್ (ಪ್ರತಿ ವರ್ಷ, ಪ್ರತಿ ವಿದ್ಯಾರ್ಥಿಗೆ	೮೦೦/-
೩.	ಪಠ್ಯ ಪುಸ್ತಕಗಳು ಮತ್ತು ಲೇಖನ ಸಾಮಾಗ್ರಿಗಳು	೫೦೦/-
೪.	ಇತರೆ ವೆಚ್ಚಗಳು (ಟೂತ್ ಪೇಸ್ಟ್, ಸೋಪು, ಬ್ರಷ್, ಎಣ್ಣೆ ಇತ್ಯಾದಿ ಪ್ರತಿ ಮಾಹೆಗೆ)	೧೦೦/-
೫.	ವೈದ್ಯಕೀಯ ವೆಚ್ಚ (ವಾರ್ಷಿಕ ಪ್ರತಿ ಶಾಲೆಗೆ)	೧೦,೦೦೦/-
	ಅನಾವರ್ತಕ ವೆಚ್ಚಗಳು:	
೬.	ಹಾಸಿಗೆ ಹೊದಿಕೆ (ಪ್ರತಿ ನೂತನ ವಿದ್ಯಾರ್ಥಿಗೆ)	೬೦೦/-
೭.	ಮಂಚ, ಟ್ರಂಕುಗಳು (ಪ್ರತಿ ನೂತನ ವಿದ್ಯಾರ್ಥಿಗೆ)	೩,೦೦೦/-

೩.೧೨.೭. ಶೈಕ್ಷಣಿಕ ವೈಶಿಷ್ಟ್ಯತೆಗಳು:

ಸದ್ಯಕ್ಕೆ ಜಿಲ್ಲೆಗೊಂದರಂತೆ ೨೯ ಜಿಲ್ಲೆಗಳಿಗೆ ಮಂಜೂರಾಗಿದ್ದು ಆಯಾ ಜಿಲ್ಲಾ ಕೇಂದ್ರಗಳಲ್ಲಿ ೨೦೦೯-೧೦ನೇ ಶೈಕ್ಷಣಿಕ ಸಾಲಿನಲ್ಲಿ ೧೧ನೇ ತರಗತಿ ಮಾತ್ರ ಪ್ರಾರಂಭವಾಗಿರುವುದು.ಈ ಪದವಿ ಪೂರ್ವ ವಸತಿ ಕಾಲೇಜುಗಳು ವಿಜ್ಞಾನ ವಿಷಯಕ್ಕೆ ಮಾತ್ರ ಸೀಮಿತ. ಎರಡು ವಿಷಯ ಸಂಯೋಗಗಳು (Combinations) ಲಭ್ಯ ಇವೆ. 1) ಭೌತಶಾಸ್ತ್ರ, ರಾಸಾಯನಶಾದಸ್ತ್ರ, ಗಣಿತ ಶಾಸ್ತ್ರ, ಜೀವಶಾಸ್ತ್ರ (Physics, Chemistry, Mathematics, Biology) (PCMB) 2) ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ ಶಾಸ್ತ್ರ, ಗಣಕ ಶಾಸ್ತ್ರ, (Physics, Chemistry, Mathematics, Computer Science)(PCMCs) ವಿದ್ಯಾರ್ಥಿಗಳ ಪ್ರವೇಶ ಮಿತಿ ಪ್ರತಿ ವಿಷಯದ ಸಂಯೋಗಕ್ಕೆ (For each combination) ೪೦ ವಿದ್ಯಾರ್ಥಿಗಳು, ಬಾಲಕರು/ಬಾಲಕಿಯರಿಗೆ ತಲಾ ಶೇ ೫೦ರಷ್ಟು ಸೀಟು ಮೀಸಲು. ೨೯ ಕಾಲೇಜುಗಳಲ್ಲಿ ೧೨ ಪರಿಶಿಷ್ಟ ಜಾತಿಯ, ೨ ಪರಿಶಿಷ್ಟ ವರ್ಗದ, ೧೨ ಹಿಂದುಳಿದ ವರ್ಗದ ಮತ್ತು ೩ ಅಲ್ಪಸಂಖ್ಯಾತ ವರ್ಗದ ಪದವಿ ಪೂರ್ವ ಕಾಲೇಜುಗಳಾಗಿರುತ್ತವೆ. ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿರುವ ಮೀಸಲಾತಿ ನಿಯಮಗಳು ಈ ಕಾಲೇಜುಗಳಿಗೂ ಅನ್ವಯವಾಗುತ್ತವೆ. ಭಾಷಾ ವಿಷಯಗಳು ಕನ್ನಡ ಮತ್ತು ಇಂಗ್ಲೀಷ್ ಆಗಿದ್ದು. ಉಳಿದ ವಿಷಯಗಳನ್ನು ಆಂಗ್ಲ ಮಾಧ್ಯಮದಲ್ಲಿ ಭೋದಿಸಲಾಗುತ್ತದೆ.

೩.೧೨.೮. ರಾಮಕೃಷ್ಣ ಆಶ್ರಮ, ಚೆನ್ನೆನಹಳ್ಳಿ ಮುಂತಾದ ಗೌರವಾನ್ವಿತ ವಿದ್ಯಾ ಸಂಸ್ಥೆಗಳಲ್ಲಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶ:

ಬುಡಕಟ್ಟು ಮಕ್ಕಳು ಉತ್ತಮವಾದ ಪರಿಸರದಲ್ಲಿ ವಿದ್ಯಾಭ್ಯಾಸ ಮಾಡಲು ಅನುಕೂಲವಾಗುವಂತೆ ಮೈಸೂರಿನ ರಾಮಕೃಷ್ಣ ಆಶ್ರಮ, ಜೆ.ಎಸ್.ಎಸ್. ಜನ ಸೇವಾ ವಿದ್ಯಾ ಕೇಂದ್ರ, ಚೆನ್ನೆನಹಳ್ಳಿಯಂತಹ ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ನೀಡಲು ಬುಡಕಟ್ಟು ವಿದ್ಯಾರ್ಥಿಗಳಿಗೆ ೨೦೦೦-೦೧ನೇ ಸಾಲಿನಿಂದ ಪ್ರವೇಶ ನೀಡಲಾಗುತ್ತಿದೆ. ಈ ಸಂಸ್ಥೆಗಳಿಗೆ ಪ್ರವೇಶ ಪಡೆಯಲು ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ಸಂಬಂಧಪಟ್ಟ ಶಿಕ್ಷಣ ಸಂಸ್ಥೆಯವರು ನಡೆಸುವ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಇದರ ಜೊತೆಗೆ ೭ನೇ ತರಗತಿಯಲ್ಲಿ ಪ್ರಥಮ ಬಾರಿ ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದ ಬುಡಕಟ್ಟು ವಿದ್ಯಾರ್ಥಿಗಳನ್ನು ೮ನೇ ತರಗತಿಗೆ ಸೇರುವುದಕ್ಕೆ ಪ್ರವೇಶ ಅವಕಾಶ ನೀಡಲಾಗುತ್ತಿದೆ. ಈ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುವ ಎಲ್ಲಾ

ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ತಗಲುವ ಎಲ್ಲಾ ಖರ್ಚುಗಳನ್ನು ಪರಿಶಿಷ್ಟ ವರ್ಗದ ಕಲ್ಯಾಣ ಇಲಾಖೆಯಿಂದ ಭರಿಸಲಾಗುತ್ತಿದೆ.

೩.೧೨.೯. ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಧನಸಹಾಯ:

ಸ್ವಯಂ ಸೇವಾ ಸಂಸ್ಥೆಗಳಿಗೆ ಉತ್ತೇಜನ ನೀಡಲು ಖಾಸಗಿ ವಿದ್ಯಾರ್ಥಿ ನಿಲಯಗಳಿಗೂ ಧನಸಹಾಯ ನೀಡಲಾಗುತ್ತದೆ. ಈ ಖಾಸಗಿ ಸಂಸ್ಥೆಗಳು ಸರ್ಕಾರದಿಂದ ಮಾನ್ಯತೆ ಪಡೆದು ನಡೆಸುವ ವಿದ್ಯಾರ್ಥಿನಿಲಯಗಳು. ಈ ವಿದ್ಯಾರ್ಥಿನಿಲಯಗಳಲ್ಲಿ ೫ ರಿಂದ ೧೦ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾಥಿಗಳಿಗೆ ಊಟ ಮತ್ತು ವಸತಿ ಕಲ್ಪಿಸಲಾಗುವುದು. ಈ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ ಬುಡಕಟ್ಟು ವಿದ್ಯಾರ್ಥಿಗಳಿಗಾಗಿ ೧೬ ಅನುದಾನಿತ ವಿದ್ಯಾರ್ಥಿನಿಲಯಗಳಿದ್ದು, ಅವುಗಳಲ್ಲಿ ೮೮೮ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ವಿದ್ಯಾರ್ಥಿನಿಲಯದಲ್ಲಿ ಪ್ರತಿ ವಿದ್ಯಾರ್ಥಿಗೆ ಮಾಸಿಕ ರೂ.೩೫೦.೦೦ಗಳನ್ನು ಆಹಾರಕ್ಕಾಗಿ ನೀಡಲಾಗುತ್ತಿದೆ. ಅನುದಾನಿತ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೂ ಸಹ ಅನುದಾನ ನೀಡಲಾಗುತ್ತಿದ್ದು ಗರಿಷ್ಠ ರೂ.೨೫,೦೦೦.ಗಳ ಅಂದಾಜು ನಕ್ಷೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲು ನಿರ್ದೇಶಕರು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯವರಿಗೆ ಅಧಿಕಾರವಿರುತ್ತದೆ. ಇದಕ್ಕೆ ಮೀರಿದ ಅಂದಾಜು ನಕ್ಷೆಗಳ ಮಂಜೂರಾತಿ ಅಧಿಕಾರ ಸರ್ಕಾರದ ಅಧೀನಕ್ಕೆ ಒಳಪಟ್ಟಿರುತ್ತದೆ.

೩.೧೨.೧೦. ಕಾಲೇಜು ವಿದ್ಯಾರ್ಥಿಗಳಿಗೆ ವಸತಿನಿಲಯಗಳ ಸ್ಥಾಪನೆ:

ಗ್ರಾಮಾಂತರ ಪ್ರದೇಶಗಳಿಂದ ವಿವಿಧ ಕಾಲೇಜುಗಳಿಗೆ ವ್ಯಾಸಾಂಗ ಮಾಡಲು ಬರುವ ಬಡ ಬುಡಕಟ್ಟು ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರೆಸಲು ಅನುಕೂಲವಾಗುವಂತೆ ಕಾಲೇಜು ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ ಉಚಿತ ಊಟ ಮತ್ತು ವಸತಿಯನ್ನು ಒದಗಿಸಲಾಗುತ್ತಿದೆ.

೩.೧೨.೧೧. ತಾಂತ್ರಿಕ ಶಿಕ್ಷಣದ ವಿದ್ಯಾರ್ಥಿಗಳಿಗೆ ವಸತಿನಿಲಯಗಳ ಸ್ಥಾಪನೆ:

ದೂರದ ಗ್ರಾಮೀಣ ಪ್ರದೇಶಗಳಿಂದ ವೈದ್ಯಕೀಯ ಮತ್ತು ತಾಂತ್ರಿಕ ಕೋರ್ಸ್‌ಗಳಿಗೆ ಪ್ರವೇಶ ಪಡೆದ ಬುಡಕಟ್ಟು ವಿದ್ಯಾರ್ಥಿಗಳಿಗೆ ಅವರ ಉನ್ನತ ಶಿಕ್ಷಣವನ್ನು ಮುಂದುವರಿಸಲು ಅನುಕೂಲ ಮಾಡಿ ಕೊಡಲು ಇಂತಹ ತಾಂತ್ರಿಕ ಶಿಕ್ಷಣ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲಾಗಿದೆ.

೩.೧೨.೧೨. ವಿದ್ಯಾರ್ಥಿ ನಿಲಯಗಳ ಬಲವರ್ಧನೆ :

ಈ ಕಾರ್ಯಕ್ರಮದಡಿಯಲ್ಲಿ ಈಗಾಗಲೇ ಪ್ರಾರಂಭವಾಗಿರುವ ವಿದ್ಯಾರ್ಥಿನಿಲಯಗಳಿಗೆ ಹಾಸಿಗೆ, ಹೊದಿಕೆ, ಪಿಠೋಪಕರಣ, ಸೋಲಾರ್ ಹೀಟರ್, ಸೋಲಾರ್ ಲೈಟ್, ಟಿ.ವಿ. ಹಾಗೂ ಇತರೆ ಉಪಯುಕ್ತ ಸಾಮಾಗ್ರಿಗಳನ್ನು ಒದಗಿಸುವ ಕಾರ್ಯಕ್ರಮವಿದ್ದು, ವಿದ್ಯಾರ್ಥಿನಿಲಯಗಳ ಬಲವರ್ಧನೆಗೆ ಶ್ರಮಿಸಲಾಗುತ್ತಿದೆ. ಇದು ರಾಜ್ಯ ಸರಕಾರದ ಕಾರ್ಯಕ್ರಮವಾಗಿದ್ದು, ಅನುದಾನ ಪೂರ್ಣ ರಾಜ್ಯದ್ದಾಗಿರುತ್ತದೆ.

೩.೧೩.೧ನೇ ತರಗತಿಯಿಂದ ಸ್ನಾತಕೋತ್ತರ ಪದವಿವರೆಗೂ ವಿವಿಧ ರೀತಿಯ ವಿದ್ಯಾರ್ಥಿ ವೇತನಗಳು:

೧.ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ನೀಡಿಕೆ: ಈ ಯೋಜನೆಯಲ್ಲಿ ಮೆಟ್ರಿಕ್ ಪೂರ್ವ ೧ರಿಂದ ೧೦ನೇ ತರಗತಿಯಲ್ಲಿ ಓದುತ್ತಿರುವ ಹಾಗೂ ಸರ್ಕಾರಿ ಅಥವಾ ಅನುದಾನಿತ ಶಾಲೆಗಳಲ್ಲಿ ಸೌಲಭ್ಯ ಪಡೆಯದ ಬುಡಕಟ್ಟು ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.

೨.ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ನಗದು ಬಹುಮಾನ: ಈ ಯೋಜನೆಯಲ್ಲಿ ಬುಡಕಟ್ಟು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳುವ ದೃಷ್ಟಿಯಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.೬೦ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದುವ ಎಲ್ಲಾ ವಿದ್ಯಾರ್ಥಿಗಳಿಗೆ ಬಹುಮಾನದ ರೂಪದಲ್ಲಿ ಹಣವನ್ನು ನೀಡಲಾಗುತ್ತಿದೆ.

೩. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಆಯಾ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ರೂ.೫೦೦೦.ಗಳ ಬಹುಮಾನ: ಇತ್ತೀಚಿನ ವರ್ಷಗಳಲ್ಲಿ ಬುಡಕಟ್ಟು ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ವಿದ್ಯಾಭ್ಯಾಸದ ಕಡೆಗೆ ಗಮನಹರಿಸಲು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಾಗವಹಿಸಲು ಹಾಗೂ ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ಮೂಡಿಸಲು ಈ ಯೋಜನೆಯನ್ನು ಕರ್ನಾಟಕ ಸರ್ಕಾರ ಜಾರಿಗೆ ತಂದಿದೆ.

೪, ಪ್ರತಿಭಾ ವಿದ್ಯಾರ್ಥಿ ವೇತನ ನೀಡಿಕೆ: ಈ ಯೋಜನೆಯಲ್ಲಿ ೫ ರಿಂದ ೧೦ನೇ ತರಗತಿಯವರೆಗೆ ಅಭ್ಯಾಸ ಮಾಡುತ್ತಿರುವ ಹಾಗೂ ಶೇ.೬೦ಕ್ಕಿಂತ ಹೆಚ್ಚು ಅಂಕ ಪಡೆದ ಬುಡಕಟ್ಟು ವಿದ್ಯಾರ್ಥಿಗಳಿಗೆ ಈ ಪ್ರತಿಭಾ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.

೫. ಮೆಟ್ರಿಕ್ ಪೂರ್ವ ಪ್ರೋತ್ಸಾಹ ವಿದ್ಯಾರ್ಥಿ ವೇತನ ವಿದ್ಯಾರ್ಥಿನಿಯರಿಗೆ:

ವಿದ್ಯಾರ್ಥಿನಿಯರಲ್ಲಿ ಶಾಲೆ ಬಿಡುವ ಪ್ರವೃತ್ತಿ ತಪ್ಪಿಸಿ, ಅವರಲ್ಲಿಯ ಸಾಕ್ಷರತೆಯನ್ನು

ಹೆಚ್ಚಿಸುವ ಸಲುವಾಗಿ ಮಾಧ್ಯಮಿಕ ಹಾಗೂ ಪ್ರೌಢ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರಿಗೆ ಈಗಾಗಲೇ ಸಾಮಾನ್ಯ ಕಾರ್ಯಕ್ರಮದಡಿಯಲ್ಲಿ ನೀಡುವ ರೂ.೧೦೦.ಗಳ ಜೊತೆಗೆ ರೂ.೫೦೦.ಗಳನ್ನು ಹೆಚ್ಚುವರಿಯಾಗಿ ನೀಡಲಾಗುತ್ತಿದೆ.

೬. **ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ವಿಶೇಷ ಬೋಧನೆ:** ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಪ್ರೌಢ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ವಿಶೇಷ ಬೋಧನೆ ಮಾಡಲಾಗುತ್ತಿದೆ. ವಿಜ್ಞಾನ, ಗಣಿತ, ಇಂಗ್ಲೀಷ್ ಮತ್ತು ಸಾಮಾನ್ಯ ವಿಷಯಗಳಲ್ಲಿ ನುರಿತ ಮತ್ತು ನಿವೃತ್ತಿ ಹೊಂದಿರುವ ಅರೆಕಾಲಿಕ ಅಧ್ಯಾಪಕರುಗಳ ಮೂಲಕ ವಿಶೇಷ ಬೋಧನೆ ಮಾಡಲು ಮಾಹೆಯಾನ ರೂ.೫೦೦. ಗೌರವ ಧನ ನೀಡಲಾಗುತ್ತಿದೆ.

೭. **ಬುಡಕಟ್ಟು ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ:** ಬುಡಕಟ್ಟು ವರ್ಗದ ಪ್ರೌಢಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟ ಇತರೆ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟಕ್ಕೆ ಹೋಲಿಸಿ ನೋಡಿದಾಗ ಅದು ಬಹಳ ಹಿಂದುಳಿದಿರುವುದನ್ನು ಗಮನಿಸಿ ಸರಕಾರ ಅವರಿಗೆ ವಿಶೇಷ ಬೋಧನಾ ತರಬೇತಿಯನ್ನು ರೂಪಿಸಿ, ವಾರ್ಷಿಕ ಪರೀಕ್ಷೆಯ ಮೊದಲು ೩ ತಿಂಗಳುಗಳ ಕಾಲ ತರಬೇತಿಯನ್ನು ನೀಡಲಾಗುತ್ತಿದೆ. ಇದನ್ನು ಶಿಕ್ಷಣ ಇಲಾಖೆಯ ಸಹಯೋಗದಿಂದ ಶಾಲೆಗಳಲ್ಲಿಯೇ ಬೋಧನಾ ಅವಧಿ ಮುಗಿದ ನಂತರ ವಿಶೇಷ ಬೋಧನೆ ನೀಡಲಾಗುತ್ತಿದೆ.

೩.೧೩.೧. ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಗಳು:

ಇದು ಪೂರ್ಣ ಪ್ರಮಾಣದ ಕೇಂದ್ರ ಪುರಸ್ಕೃತ ಯೋಜನೆಯಾಗಿದೆ. ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಲ್ಲಿ ಅವರ ವ್ಯಾಸಂಗಕ್ಕೆ ಅನುಕೂಲ ಕಲ್ಪಿಸುವ ಉದ್ದೇಶ ಹೊಂದಿದ್ದು, ವ್ಯಾಸಂಗವನ್ನು ಮಧ್ಯದಲ್ಲಿ ಹಲವಾರು ಕಾರಣದಿಂದ ಬಿಡುವುದನ್ನು ತಡೆಗಟ್ಟುವ ಉದ್ದೇಶದಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ.

೩.೧೩.೨. ರಾಜ್ಯ ಸರಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಹಾಗೂ ಇತರೆ ಸೌಲಭ್ಯಗಳು

ಭಾರತ ಸರ್ಕಾರದ ವಿದ್ಯಾರ್ಥಿ ವೇತನಕ್ಕೆ ಅನರ್ಹರಾದ ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಂದುವರಿಸಲು ಅನುಕೂಲವಾಗುವಂತೆ ರಾಜ್ಯ ಸರಕಾರ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನವನ್ನು ಮಂಜೂರು ಮಾಡುತ್ತಿದೆ.

೧. ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಅತಿ ಹೆಚ್ಚು ಅಂಕಗಳಿಸಿದ ೫ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ತಲಾ ರೂ.೧೦,೦೦೦. ಬಹುಮಾನ

ಇತ್ತೀಚಿನ ವರ್ಷಗಳಲ್ಲಿ ಬುಡಕಟ್ಟು ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನಹರಿಸಲು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಸ್ಫೂರ್ತಿ ಮೂಡಿಸಲು, ಈ ಯೋಜನೆಯನ್ನು ಇತ್ತೀಚೆಗೆ ಜಾರಿಗೆ ತರಲಾಗಿದೆ.

೨. ಎಂ.ಫಿಲ್ ಮತ್ತು ಪಿ.ಎಚ್.ಡಿ. ವಿದ್ಯಾರ್ಥಿಗಳಿಗೆ ಫೆಲೋಷಿಪ್

ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ವಿಷಯಗಳಲ್ಲಿ ಸಂಶೋಧನೆಯಲ್ಲಿ ತೊಡಗಿರುವ ಬುಡಕಟ್ಟು ವಿದ್ಯಾರ್ಥಿಗಳು ಸಂಶೋಧನೆ, ಮಾಹಿತಿ ಸಂಗ್ರಹಣೆ ಮುಂತಾದ ಕೆಲಸಗಳಿಗೆ ಹೆಚ್ಚಿನ ವೆಚ್ಚ ಭರಿಸಬೇಕಾಗಿರುವುದರಿಂದ, ಎಂ.ಫಿಲ್ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ.೮೦೦೦ ಹಾಗೂ ಪಿಹೆಚ್.ಡಿ. ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ.೧೦,೦೦೦. ನೀಡುವ ಯೋಜನೆಯನ್ನು ೨೦೦೦-೦೧ನೇ ಸಾಲಿನಿಂದ ಗಿರಿಜನ ಕಲ್ಯಾಣ ಇಲಾಖೆಯಿಂದ ಕಾರ್ಯಗತಗೊಳಿಸಲಾಗುತ್ತಿದೆ. ಇದಕ್ಕೂ ಹಿಂದೆ, ಈ ಕಾರ್ಯಕ್ರಮವನ್ನು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿತ್ತು.

೩. ವಿದೇಶಿ ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಧನಸಹಾಯ: ೨೦೦೧-೦೨ನೇ ಸಾಲಿನಲ್ಲಿ ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಆಯ್ಕೆಯಾಗುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಧನಸಹಾಯ ಮಾಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಪ್ರತಿ ವಿದ್ಯಾರ್ಥಿಗೆ ಗರಿಷ್ಠ ೧೦ ಲಕ್ಷ ಅಥವಾ ವಾಸ್ತವಿಕ ವೆಚ್ಚವನ್ನು ಸರ್ಕಾರದಿಂದ ಭರಿಸಲಾಗುವುದು.

೪. **ಕಾನೂನು ಪದವೀಧರರಿಗೆ ಆಡಳಿತದಲ್ಲಿ ತರಬೇತಿ:** ಕಾನೂನು ಪದವಿಯನ್ನು ಪಡೆದ ಬುಡಕಟ್ಟು ನಿರುದ್ಯೋಗಿ ಯುವಕ ಯುವತಿಯರಿಗೆ ನ್ಯಾಯಾಂಗ ಆಡಳಿತದಲ್ಲಿ ಹೆಚ್ಚು ಅನುಭವ ಹಾಗೂ ಜ್ಞಾನವನ್ನು ಪಡೆಯಲು ಅನುಕೂಲವಾಗುವಂತೆ ತರಬೇತಿ ನೀಡಲಾಗುತ್ತಿದೆ.

೫. **ಕಾನೂನು ಪದವೀಧರರಿಗೆ ಧನ ಸಹಾಯ:** ಈ ಯೋಜನೆಯಲ್ಲಿ ಬುಡಕಟ್ಟು ವರ್ಗಕ್ಕೆ ಸೇರಿದ ನಿರುದ್ಯೋಗಿ ಕಾನೂನು ಪದವೀಧರರು ಸ್ವತಂತ್ರವಾಗಿ ವಕೀಲ ವೃತ್ತಿ ಕೈಗೊಳ್ಳಲು ಹಾಗೂ ಬಾರ್ ಕೌನ್ಸಿಲ್‌ನಲ್ಲಿ ಅವರ ಹೆಸರನ್ನು ನೊಂದಾಯಿಸಿಕೊಳ್ಳಲು ರೂ.೫೦೦೦.ಗಳ ಧನ ಸಹಾಯವನ್ನು ನೀಡಲಾಗುತ್ತಿದೆ.

೬. **ಐ.ಟಿ.ಐ. ಮತ್ತು ಐ.ಟಿ.ಸಿ. ತರಬೇತಿ ಹೊಂದುವವರಿಗೆ ಸ್ಟೈಫಂಡ್ :** ಬುಡಕಟ್ಟು ನಿರುದ್ಯೋಗಿ ಯುವಕ ಯುವತಿಯರಿಗೆ ತರಬೇತಿಯನ್ನು ನೀಡಿ ಸ್ವತಂತ್ರವಾಗಿ ಉದ್ಯೋಗ ಕಲ್ಪಿಸಿಕೊಳ್ಳುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

೭. **ಸ್ವಯಂ ಉದ್ಯೋಗ ತರಬೇತಿ ಕೇಂದ್ರಗಳು:** ಇದರಲ್ಲಿ ಬುಡಕಟ್ಟು ನಿರುದ್ಯೋಗಿ ಯುವಕರಿಗೆ ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡಿ, ಸ್ವತಂತ್ರ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು.

೮. **ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಧನ ಸಲಕರಣೆಗಳ ಸರಬರಾಜು:** ತಾಂತ್ರಿಕ ಶಿಕ್ಷಣದಲ್ಲಿ ಅಭ್ಯಾಸ ಮಾಡುತ್ತಿರುವ ಬುಡಕಟ್ಟು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಬೇಕಾಗುವ ತಾಂತ್ರಿಕ ಸಲಕರಣೆಗಳನ್ನು ಪೂರೈಸುವ ಉದ್ದೇಶದಿಂದ ಈ ಕಾರ್ಯಕ್ರಮ ರೂಪಿಸಲಾಗಿದೆ. ಪದವಿ, ಡಿಪ್ಲೊಮಾ ತರಗತಿಯಲ್ಲಿ ಓದುತ್ತಿರುವ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಡ್ರಾಯಿಂಗ್ ಬೋರ್ಡ್, ಸೈಂಟಿಫಿಕ್ ಕ್ಯಾಲ್ಕುಲೇಟರ್, ಮುಂತಾದ ತಾಂತ್ರಿಕ ಸಲಕರಣೆಗಳನ್ನು ನೀಡಲಾಗುತ್ತಿದೆ.

೯. **ಪುಸ್ತಕ ಭಂಡಾರ ಸ್ಥಾಪಿಸುವ ಯೋಜನೆ:** ಈ ಯೋಜನೆಯ ಅಡಿಯಲ್ಲಿ ವೈದ್ಯಕೀಯ, ತಾಂತ್ರಿಕ, ವೃತ್ತಿಪರ ವಿಷಯಗಳಾದ ಕೃಷಿ, ಪಶುವಿಜ್ಞಾನ, ಪಾಲಿಟೆಕ್ನಿಕ್, ಕಾನೂನು ಮತ್ತು ಎಂ.ಬಿ.ಎ. ಕೋರ್ಸ್‌ನಲ್ಲಿ ಓದುತ್ತಿರುವ ಹಾಗೂ ಆ ಕೋರ್ಸ್‌ಗಳಿಗೆ ನಿಗದಿಪಡಿಸಿರುವ ಪುಸ್ತಕಗಳನ್ನು ಖರೀದಿಸಲು ಸಾಧ್ಯವಾಗದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ, ಹಾಗೂ ಪ್ರಸ್ತುತ ಇರುವ ಗ್ರಂಥಾಲಯಗಳಲ್ಲಿ ಎಲ್ಲಾ ಬಗೆಯ ಪುಸ್ತಕಗಳು ದೊರೆಯುವುದು ಅಸಾಧ್ಯವಾದ್ದರಿಂದ ಆಯಾ ಸರ್ಕಾರಿ, ಅನುದಾನಿತ, ಅಂಗೀಕೃತ ಕಾಲೇಜುಗಳಲ್ಲಿ ಈ ಪುಸ್ತಕ ಭಂಡಾರವನ್ನು ಸ್ಥಾಪಿಸುವುದಕ್ಕಾಗಿ, ಪುಸ್ತಕಗಳನ್ನು ಖರೀದಿಸಿ ಸಂಬಂಧಪಟ್ಟ ಕಾಲೇಜುಗಳಿಗೆ ಆರ್ಥಿಕ ಸಹಾಯ ನೀಡುತ್ತಿದೆ.

೧೦. **ಅಧ್ಯಯನ ಪ್ರವಾಸಕ್ಕೆ ನೆರವು :** ಈ ಯೋಜನೆಯ ಅಡಿಯಲ್ಲಿ ತಾಂತ್ರಿಕ ಮತ್ತು ಇನ್ನಿತರ ವೃತ್ತಿಪರ ವಿಷಯಗಳಲ್ಲಿ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ವರ್ಗದ ಬಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸ ಕಡ್ಡಾಯವಾಗಿದ್ದರೆ ಅಂತಹ ವಿದ್ಯಾರ್ಥಿಗಳಿಗೆ ಪ್ರವಾಸ ಕೈಗೊಳ್ಳಲು ರೂ.೧೦೦೦ ನೀಡಲಾಗುತ್ತಿದೆ.

೩.೧೪. ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮದ ವತಿಯಿಂದ ಜಾರಿಯಾಗುತ್ತಿರುವ ಕಾರ್ಯಕ್ರಮಗಳು:

೩..೧೪.೧. ಭೂ ಒಡೆತನ ಯೋಜನೆ :

ಬುಡಕಟ್ಟು ಸಮುದಾಯಗಳ ಬಹುಪಾಲು ಜನರು ಕೃಷಿ ಕೂಲಿಗಳಾಗಿದ್ದು, ವ್ಯವಸಾಯ ಮಾಡುವ ಆಸೆ ಹಾಗೂ ಅನುಭವ ಇರುವುದರಿಂದ, ಅವರಿಗೆ ನಿಗಮದ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿಲ್ಲದವರಿಂದ ಭೂಮಿಯನ್ನು ಖರೀದಿಸಿ ಅರ್ಹ ಫಲಾನುಭವಿಗಳಿಗೆ ಭೂಮಿ ಹಂಚುವ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯಲ್ಲಿ ಪ್ರತಿ ಕುಟುಂಬಕ್ಕೆ ಎರಡು ಎಕರೆ ಖುಷ್ಕಿ ಅಥವಾ ಒಂದು ಎಕರೆ ತರಿ ಜಮೀನನ್ನು ಒದಗಿಸಲಾಗುತ್ತದೆ. ಈ ಘಟಕದ ವೆಚ್ಚ ರೂ. ೬೦,೦೦೦.ಗಳು. ಇದರಲ್ಲಿ ಶೇ.೫೦ರಷ್ಟು ಸಹಾಯಧನ, ಉಳಿದ ಶೇ. ೫೦ ರಷ್ಟು ಸಾಲವನ್ನಾಗಿ ನೀಡುತ್ತಿದೆ. ಸಾಲವನ್ನು ೧೦ ವಾರ್ಷಿಕ ಸಮ ಕಂತುಗಳಲ್ಲಿ ಶೇ.೬ರ ವಾರ್ಷಿಕ ಬಡ್ಡಿಯ ಜೊತೆಗೆ ಮರುಪಾವತಿ ಮಾಡಬೇಕಾಗುತ್ತದೆ. ಈ ಯೋಜನೆಯನ್ನು ಮಲೆನಾಡು ಹಾಗೂ ಉತ್ತರ ಕರ್ನಾಟಕದ ಭಾಗದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಲ್ಲಿ ಆಯ್ಕೆಯಾಗುವ ಫಲಾನುಭವಿಗಳು ಬುಡಕಟ್ಟಿಗೆ ಸೇರಿ ಭೂ ರಹಿತ ಕೃಷಿ ಕೂಲಿಯ ಮಹಿಳಾ ಅಭ್ಯರ್ಥಿಯಾಗಿರಬೇಕು. ಫಲಾನುಭವಿಯು ಸುಸ್ತಿದಾರನಾಗಿರಬಾರದು. ಈ ಯೋಜನೆಗೆ ಒಂದು ಆಯ್ಕೆ ಸಮೀತಿಯಿದ್ದು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಇದರ ಅಧ್ಯಕ್ಷರಾಗಿರುತ್ತಾರೆ. ಈ ಯೋಜನೆಯಲ್ಲಿ ದುರುಪಯೋಗವಾಗುವುದನ್ನು ತಡೆಗಟ್ಟುವುದಕ್ಕೋಸ್ಕರ ಮಹಿಳಾ ಫಲಾನುಭವಿಯನ್ನು ಆಯ್ಕೆ ಮಾಡುತ್ತಾರೆ.

೩..೧೪.೨. ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ :

ಈ ಯೋಜನೆಯನ್ನು ೧೯೮೫ರಲ್ಲಿ ಕರ್ನಾಟಕ ಸರ್ಕಾರ ಕೇವಲ ಕೋಲಾರ, ವಿಜಾಪುರ, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿ ನಂತರ ಅದನ್ನು ೧೯೮೭-೮೭ ಮತ್ತು ೧೯೯೦-೯೧ ರಲ್ಲಿ ಇತರೆ ೮ ಜಿಲ್ಲೆಗಳಿಗೆ ವಿಸ್ತರಿಸಿತು. ೧೯೯೧-೯೨ರಲ್ಲಿ ಈ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲಾಯಿತು.

ಈ ಯೋಜನೆಯಲ್ಲಿ ನಿಗಮವು ಶೇ. ೭೫ ಭಾಗ, ಗರಿಷ್ಠ ೩೦ ಸಾವಿರ ರೂಪಾಯಿಗಳ ಸಹಾಯಧನವನ್ನು ನೀಡುತ್ತದೆ. ಉಳಿದ ಮೊತ್ತ ಬ್ಯಾಂಕುಗಳ ಸಾಲವಾಗಿರುವುದು. ಆದರೆ ದಿನಾಂಕ: ೧೨.೦೨.೧೯೯೯ ರಂದು ಕರ್ನಾಟಕ ಸರ್ಕಾರ ಈ ಯೋಜನೆಗೆ ಶೇ.೧೦೦ ರಷ್ಟು

ಸಹಾಯಧನ ಒದಗಿಸಲು ಆದೇಶ ನೀಡಿದೆ. ಈ ಯೋಜನೆಯನ್ನು ಪಡೆಯಲು ಫಲಾನುಭವಿಗಳು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

೧, ಬಾವಿ ಕೊರೆಯುವ ಸ್ಥಳದಲ್ಲಿ ಕನಿಷ್ಠ ೨ ಎಕರೆ ಜಮೀನು ಇರಬೇಕು. ಬಾವಿ ಕೊರೆಯುವ ಬಿಂದುವಿನಿಂದ ಸುತ್ತಲೂ ೮೨೫ ಅಡಿಗಳ ಅಂತರದಲ್ಲಿ ಯಾವುದೇ ನೀರಾವರಿ ಬಾವಿ ಇರಬಾರದು.

೨, ಅರ್ಜಿದಾರರು ಸ್ವಂತ ಖಾತೆದಾರರಾಗಿರಬೇಕು.

೩, ಅರ್ಜಿದಾರರು ಬುಡಕಟ್ಟಿಗೆ ಸೇರಿದವರಾಗಿರಬೇಕು.

೪. ಅರ್ಜಿದಾರರು ಸುಸ್ತಿದಾರರಾಗಿರಬಾರದು.

೩.೧೪.೩. ಸ್ವಯಂ ಉದ್ಯೋಗ ಯೋಜನೆ:

ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಬಹಳಷ್ಟು ಬುಡಕಟ್ಟು ಯುವಕರು ನಿರುದ್ಯೋಗಿಗಳಾಗಿರುವರು. ಅಂತವರಿಗೆ ಉದ್ಯೋಗ ಕಲ್ಪಿಸುವುದು ಈ ಯೋಜನೆಯ ಗುರಿಯಾಗಿದೆ. ಈ ಯೋಜನೆಯನ್ನು ರಾಷ್ಟ್ರೀಕೃತ ಬ್ಯಾಂಕ್ ಅಥವಾ ಗ್ರಾಮೀಣ ಬ್ಯಾಂಕುಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಯುವಕರಿಗೆ ಆಟೋರಿಕ್ಷಾ, ಹೈನುಗಾರಿಕೆ, ಸೈಕಲ್ ಶಾಪ್, ಪೆಟ್ಟಿಗೆ ಗೂಡು, ಸುಣ್ಣದ ಗೂಡು, ಕೈಗಾಡಿ ವ್ಯಾಪಾರ ಮುಂತಾದ ಉದ್ದೇಶಗಳಿಗೆ ಸಾಲ ನೀಡುವುದರ ಮೂಲಕ ನಿರುದ್ಯೋಗಿಗಳನ್ನು ಉದ್ಯೋಗದಲ್ಲಿ ತೊಡಗಿಸುವಂತೆ ಮಾಡಲಾಗುತ್ತಿದೆ. ಈ ಯೋಜನೆಯಲ್ಲಿ ವ್ಯಾಪಾರ ಘಟಕಗಳಿಗೆ ಹೆಚ್ಚಿನ ಆದ್ಯತೆ ನೀಡದೇ ಸ್ಥಿರ ಸ್ವತ್ತುಗಳನ್ನು ಸೃಷ್ಟಿಸುವ ಉದ್ದೇಶಗಳಿಗೆ ಮಾತ್ರ ಸಹಾಯ ಒದಗಿಸಲಾಗುತ್ತಿದೆ.

ಈ ಯೋಜನಾ ವೆಚ್ಚ ರೂ.೫೦,೦೦೦.ಗಳ ಒಳಗೆ ಇರುವ ಘಟಕಗಳಿಗೆ ಮಾತ್ರ ಸಹಾಯಧನವನ್ನು ಪಡೆಯಲು ಅರ್ಹತೆ ಇರುತ್ತದೆ. ಯೋಜನಾ ವೆಚ್ಚದ ಶೇ.೫೦ ರಷ್ಟು ಗರಿಷ್ಠ ರೂ.೧೦,೦೦೦.೦೦ ಸಹಾಯಧನ ಮಂಜೂರು ಮಾಡಲಾಗುತ್ತಿದೆ. ಈ ಯೋಜನ ವೆಚ್ಚ ರೂ.೧೫,೦೦೦.೦೦ಕ್ಕಿಂತ ಕಡಿಮೆ ಇರುವ ಘಟಕಗಳಿಗೆ ಸಹಾಯಧನ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದ ವತಿಯಿಂದ ತರಬೇತಿ ಪಡೆದ ಮಹಿಳೆಯರಿಗೆ ಆದ್ಯತೆಯ ಮೇರೆಗೆ ಈ ಸೌಲಭ್ಯ ಕಲ್ಪಿಸಲಾಗುತ್ತಿದೆ.

ಮಲೆಕುಡಿಯ ಸಮುದಾಯದ ವಿಸೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ೨೦೧೪-೧೫ ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ಯೋಜನೆಯಡಿ ಪ್ರವಾಸಿ ಕಾರಿನ ಸೌಲಭ್ಯದಡಿ (ಇಲಾಖಾ ಸಹಾಯಧನ ೫೦% ಫಲಾನುಭವಿ ೧೦% ಮತ್ತು ಉಳಿದ ಮೊತ್ತಕ್ಕೆ ಬ್ಯಾಂಕ್ ಸಾಲ) ೨೦೧೬ ರ ವರೆಗೆ ೧೭/- ಲಕ್ಷ ರೂ.ಗಳ ಅನುದಾನ ನಿಗದಿಪಡಿಸಲಾಗಿದ್ದು ಇದರಲ್ಲಿ ೧೮.೦೫.೨೦೧೬ ರ

ವರೆಗೆ ೧೦/- ಲಕ್ಷ ರೂ.ಗಳ ಅನುದಾನ ಬಿಡುಗಡೆ ಮಾಡಿದ್ದು ಇಂತಿಷ್ಟು ಭೌತಿಕ ಪ್ರಗತಿ ಸಾಧಿಸಲಾಗಿದೆ.

೩.೧೪.೪. ಉದ್ಯಮಶೀಲತಾ ಅಭಿವೃದ್ಧಿ ಯೋಜನೆ(ಐ.ಎಸ್.ಬಿ.):

ಈ ಯೋಜನೆಯಡಿ ಯಾವುದೇ ಸಣ್ಣ ಕೈಗಾರಿಕೆ, ಸರಕು ಸಾಗಾಣಿಕೆ, ಪ್ರಯಾಣ ವಾಹನ, ಟ್ರಾಕ್ಟರ್, ಇತ್ಯಾದಿಗಳನ್ನು ಖರೀದಿಸಲು ಅಥವಾ ಪ್ರಾರಂಭಿಸಲು ಸಾಲದ ಸೌಲಭ್ಯ ನೀಡಲಾಗುತ್ತಿದೆ. ಯೋಜನಾ ವೆಚ್ಚ ರೂ.೫೦,೦೦೦ ದಿಂದ ೧ ಲಕ್ಷದವರೆಗೆ ಇದ್ದು, ಇದರಲ್ಲಿ ಶೇ.೫ ಭಾಗವನ್ನು ಫಲಾನುಭವಿಯ, ಶೇ.೨೦ ಭಾಗವನ್ನು ನಿಗಮದಿಂದ ಅಂಚಿನ ಹಣ (Margin Money)ದ ಸಾಲವೆಂದು (ಗರಿಷ್ಠ ೧ ಲಕ್ಷ) ಹಾಗೂ ಉಳಿದ ಶೇ.೭೫ ಭಾಗ ಬ್ಯಾಂಕ್ ಸಾಲವಾಗಿ ಭರಿಸಲಾಗುತ್ತಿದೆ. ರೂ. ೫೦,೦೦೦. ದಿಂದ ೧ ಲಕ್ಷ ಒಳಗೆ ಬರುವ ಯೋಜನಾ ವೆಚ್ಚಕ್ಕೆ ಸಹಾಯಧನ ಗರಿಷ್ಠ ೧೦,೦೦೦.ದ ಜೊತೆಗೆ ಶೇ.೨೦ ಹಣ ಪಡೆಯಲು ಅರ್ಹರಿರುತ್ತಾರೆ. ಈ ಯೋಜನೆಯ ಸೌಲಭ್ಯ ಪಡೆಯುವವರು ಬುಡಕಟ್ಟು ಸಮುದಾಯಕ್ಕೆ ಸೇರಿದವರಾಗಿರಬೇಕು. ಫಲಾನುಭವಿಯ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದಲ್ಲಿ ರೂ.೪೦,೦೦೦. ಮತ್ತು ನಗರ ಪ್ರದೇಶದಲ್ಲಿ ರೂ.೫೫,೦೦೦.ರೂ ಗಳನ್ನು ಮೀರಿರಬಾರದು.

೩.೧೪.೫. ಗಂಗಾ ಕಲ್ಯಾಣ ಯೋಜನೆ:

ಶ್ರೀ ಮುರಾರ್ಜಿ ದೇಸಾಯಿಯವರ ಶತಮಾನೋತ್ಸವದ ಅಂಗವಾಗಿ ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟುಗಳ ಮತ್ತು ಹಿಂದುಳಿದ ವರ್ಗದ ಇತರೆ ಜನರು ತುಂಡು ಭೂಮಿಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಈ ಯೋಜನೆಯನ್ನು ಜಾರಿಗೆ ತಂದು ಅನುಷ್ಠಾನಗೊಳಿಸಲಾಗಿದೆ.

ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಗಿಂತ ಇದು ಭಿನ್ನವಾಗಿದ್ದು, ಬುಡಕಟ್ಟು ಪಂಗಡದ ಸಣ್ಣ, ಅತಿ ಸಣ್ಣ ಗುಂಪಿಗೆ ಸೇರಿದ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ. ಬುಡಕಟ್ಟು ವರ್ಗದವರಿಗೆ ಸೇರಿದ ೮ ರಿಂದ ೧೫ ಎಕರೆ ವರೆಗಿನ ಗುಂಪು ಜಮೀನುಗಳಿಗೆ ಒಂದು ಘಟಕವನ್ನಾಗಿ ಪರಿಗಣಿಸಿ ೨-೩ ಯಶಸ್ವಿ ಕೊಳವೆ ಬಾವಿಗಳನ್ನು ಕೊರೆಯಲಾಗುವುದು. ಈ ಯೋಜನೆಯಡಿ ನೀಡಲಾಗುವ ಎಕರೆಯ ಮಿತಿಯ ಘಟಕ ವೆಚ್ಚ ೨.೫೩ ಲಕ್ಷಗಳೆಂದು ನಿರ್ಧರಿಸಲಾಗಿದೆ. ಇಂತಹ ಘಟಕದಲ್ಲಿ ೨ ಯಶಸ್ವಿ ಕೊಳವೆ ಬಾವಿ ಕೊರೆಯಲು, ಪಂಪಸೆಟ್ ಜೋಡಣೆ, ವಿದ್ಯುತ್ತೀಕರಣ, ಪಂಪಹೌಸ್, ಪೈಪ್‌ಲೈನ್ ಇತ್ಯಾದಿ ಎಲ್ಲಾ ಸೌಲಭ್ಯದ ಖರ್ಚುಗಳು ಸೇರಿವೆ. ಈ ಯೋಜನೆಯಡಿ ನೀಡುವ ಸೌಲಭ್ಯ ಪೂರ್ತಿ

ಉಚಿತವಾಗಿದ್ದು, ಫಲಾನುಭವಿಗಳು ಯಾವುದೇ ಖರ್ಚನ್ನು ಭರಿಸಬೇಕಾಗಿಲ್ಲ. ಇದರ ನಿರ್ವಹಣೆಯನ್ನು ೩ ವರ್ಷಗಳವರೆಗೆ ನಿಗಮವೇ ನೋಡಿಕೊಳ್ಳುವುದು.

ಈ ಯೋಜನೆಯಡಿ ಒಳಗೊಳ್ಳುವ ಫಲಾನುಭವಿಗಳಿಗೆ ವೈಜ್ಞಾನಿಕವಾಗಿ ವ್ಯವಸಾಯ ಮಾಡುವ ಬಗ್ಗೆ ಹಾಗೂ ಇತರೆ ಬೆಳೆ ಬೆಳೆಯುವ ಕ್ರಮದ ಬಗ್ಗೆ ಹಾಗೂ ಹೆಚ್ಚಿನ ಜ್ಞಾನಕ್ಕಾಗಿ ಸೂಕ್ತ ತರಬೇತಿ ನೀಡಲಾಗುತ್ತಿದೆ.

೩.೧೪.೬. ಪಂಪ್‌ಸೆಟ್ ಯೋಜನೆ:

ಗಿರಿಜನರಿಗೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರು ತಮ್ಮ ಸ್ವಂತ ಖರ್ಚಿನಲ್ಲಿ ಕೊಳವೆ ಬಾವಿಗಳನ್ನು ಕೊರೆಸಿಕೊಂಡಿದ್ದು, ಅಂತಹ ಬಾವಿಗೆ ಪಂಪಸೆಟ್ ಹಾಕಿಸಿಕೊಳ್ಳಲು ಅಸಮರ್ಥರಾಗಿರುವವರಿಗೆ ನಿಗಮವು ಉಚಿತ ಪಂಪಸೆಟ್‌ಗಳನ್ನು ನೀಡಲು ಕಾರ್ಯಕ್ರಮಗಳನ್ನು ರೂಪಿಸಿದೆ. ಈ ರೀತಿ ನೀಡಲಾಗಿರುವ ಪಂಪಸೆಟ್‌ಗಳನ್ನು ಫಲಾನುಭವಿಗಳು ಯಾವುದೇ ಸಂದರ್ಭದಲ್ಲಿ ಪರಭಾರೆ ಮಾಡಲು ಬರುವುದಿಲ್ಲ.



ಚಿತ್ರ: ಅರಣ್ಯ ಪ್ರದೇಸದಲ್ಲಿರುವ ಮಲೆಕುಡಿಯರಿಗೆ ಕೇಂದ್ರ ಸರ್ಕಾರದಿಂದ ವಿಶೇಷ ಜಲ ವಿದ್ಯುತ್ ಯೋಜನೆ ಸೌಲಭ್ಯ

೩..೧೪.೭. ಆರೋಗ್ಯ ಯೋಜನೆ: ಈ ಯೋಜನೆಯಡಿಯಲ್ಲಿ ಗಿರಿಜನ ಕುಟುಂಬಗಳಿಗೆ ಉಚಿತ ಆರೋಗ್ಯ ಸೌಲಭ್ಯ ಒದಗಿಸಲು ಹಳದಿ ಕಾರ್ಡ್ ಯೋಜನೆ ಜಾರಿಗೆ ತರಲಾಗಿದ್ದು, ಈ ಯೋಜನೆಯಿಂದ ಗಿರಿಜನರ ಆರೋಗ್ಯ ತಪಾಸಣೆಯನ್ನು ವರ್ಷದಲ್ಲಿ ಅನಾರೋಗ್ಯಕ್ಕೆ ತುತ್ತಾದ ಆದಿವಾಸಿಗಳಿಗೆ ಎರಡು ಬಾರಿ ಸೂಕ್ಷ್ಮವಾಗಿ ತಪಾಸಣೆ ನಡೆಸಿ ಸೂಕ್ತ ಚಿಕಿತ್ಸೆಯನ್ನು ಒದಗಿಸುವುದು.



೩.೧೪.೮. ಹಸಿರು ಕಾರ್ಡ್ ಯೋಜನೆ: ಈ ಯೋಜನೆಯಡಿಯಲ್ಲಿ ಗಿರಿಜನ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಪಂಗಡದವರಿಗೆ ನ್ಯಾಯಬೆಲೆ ಅಂಗಡಿಗಳ ಮೂಲಕ ಸೀರೆ ಮತ್ತು ಧೋತಿಗಳನ್ನು ಕಡಿಮೆ ದರದಲ್ಲಿ ವಿತರಿಸಲಾಗುತ್ತಿದೆ.

೩.೧೪.೯.ಅಸ್ಪೃಶ್ಯತೆ ನಿವಾರಣೆ:

ದೌರ್ಜನ್ಯಕ್ಕೊಳಗಾದ ಗಿರಿಜನರಿಗೆ ರೂ.೨೫,೦೦೦. ಗಳವರೆಗೂ ನಷ್ಟದ ಪ್ರಮಾಣವನ್ನು ಆಧಾರವಾಗಿಟ್ಟುಕೊಂಡು ಪರಿಹಾರವನ್ನು ನೀಡಲಾಗುತ್ತಿದೆ. ಮೊದಲು ದೌರ್ಜನ್ಯದ ಪ್ರಕರಣದಲ್ಲಿ ನೊಂದ ಸಂತ್ರಸ್ಥರಿಗೆ ಪರಿಹಾರ ಧನ ಶೇ.೨೫ನ್ನು ಪ್ರಕರಣದ ತನಿಖೆ ಮುಗಿದು ದೋಷಾರೋಪಣ ಪಟ್ಟಿಯನ್ನು ಸಂಬಂಧಪಟ್ಟ ನ್ಯಾಯಾಲಯಕ್ಕೆ ಸಲ್ಲಿಸಿದ ನಂತರ ನೀಡಲಾಗುತ್ತಿತ್ತು. ಉಳಿದ ಶೇ.೭೫ರಷ್ಟು ಪರಿಹಾರ ಹಣವನ್ನು ಸದರಿ ಪ್ರಕರಣ ಶಿಕ್ಷೆಯೊಂದಿಗೆ ಮುಕ್ತಾಯವಾದಲ್ಲಿ ನೀಡಲಾಗುತ್ತಿತ್ತು. ಆದರೆ ದೌರ್ಜನ್ಯ ಪ್ರಕರಣದಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆ ಇದ್ದ ಕಾರಣ, ಸಂತ್ರಸ್ಥರಿಗೆ ಪೂರ್ಣ ಪ್ರಮಾಣದ ಪರಿಹಾರ ಸಿಗುತ್ತಿಲ್ಲವೆಂದು ಕರ್ನಾಟಕ ಸರ್ಕಾರ ಮನಗೊಂಡು ಪರಿಹಾರ ಧನ ನೀಡುವ ಹಿಂದಿನ ಸರ್ಕಾರಿ ಆದೇಶಕ್ಕೆ ತಿದ್ದುಪಡಿ ತಂದು ಶೇ.೧೦೦ ರಷ್ಟು ಪರಿಹಾರವನ್ನು ಸದರಿ ಪ್ರಕರಣದಲ್ಲಿ ದೋಷಾರೋಹಣ ಪಟ್ಟಿ ನ್ಯಾಯಾಲಯಕ್ಕೆ ಸಲ್ಲಿಸಿದ ಕೂಡಲೇ ವಿತರಣೆ ಮಾಡುವಂತೆ ವ್ಯವಸ್ಥೆ ಮಾಡಲಾಗಿದೆ.

೩.೧೪.೧೦. ಸ್ವಯಂ ಸೇವಾ ಸಂಸ್ಥೆಗಳು:

ಸರ್ಕಾರವು ಗಿರಿಜನರ ಅಭಿವೃದ್ಧಿಗೆ ಹಾಕಿಕೊಂಡಿರುವ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳ ಜೊತೆಗೆ ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳೂ ಕೂಡ ಹಲವಾರು ಕರ್ಯಕ್ರಮ ಅಥವಾ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿವೆ. ಇವುಗಳಿಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳ ಯೋಜನೆಯಡಿಯಲ್ಲಿ ಸಹಾಯಧನ ನೀಡಲು ಅವಕಾಶವಿರುತ್ತದೆ. ಭಾರತ ಸರಕಾರದ ಇತ್ತೀಚಿನ ಮಾರ್ಗಸೂಚಿಯ ಪ್ರಕಾರ ಸುಮಾರು ೨೦ ಯೋಜನೆ ಅಥವಾ ಕಾರ್ಯಕ್ರಮಗಳಿಗೆ ಕೇಂದ್ರ ಸರಕಾರದ ಸಹಾಯಧನ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.

೩.೧೫. ರಾಷ್ಟ್ರೀಯ ಪರಿಶಿಷ್ಟ ಪಂಗಡದ ಹಣಕಾಸು ಅಭಿವೃದ್ಧಿ ನಿಗಮ:

ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಣಕಾಸು ಅಭಿವೃದ್ಧಿ ನಿಗಮವನ್ನು ಬೇರ್ಪಡಿಸಿ ಈ ನಿಗಮವನ್ನು ಭಾರತ ಸರ್ಕಾರ ಏಪ್ರಿಲ್ ೨೦೦೧ರಲ್ಲಿ ಸ್ಥಾಪಿಸಿತು. ೨೦೦೨-೦೩ನೇ ಸಾಲಿನಲ್ಲಿ ಬುಡಕಟ್ಟು ಮಹಿಳೆಯರ ಅಭಿವೃದ್ಧಿಗಾಗಿ 'ಆದಿವಾಸಿ ಮಹಿಳಾ ಸ್ವಶಕ್ತಿಕರಣ ಯೋಜನೆಯನ್ನು' ಜಾರಿಗೊಳಿಸಲಾಯಿತು. ಈ ಯೋಜನೆಯಡಿಯಲ್ಲಿ ಬಡತನ

ರೇಖೆಗಿಂತ ಕೆಳಗೆ ಇರುವ ಬುಡಕಟ್ಟು ಮಹಿಳೆಯರ ಆರ್ಥಿಕ ಚಟುವಟಿಕೆಗಳಿಗಾಗಿ ರೂ.೫೦೦೦.ಗಳ ಸಾಲವನ್ನು ವಾರ್ಷಿಕ ಶೇ.೪ರ ಬಡ್ಡಿ ದರದಲ್ಲಿ ನೀಡಲಾಗುತ್ತಿದೆ.

೩.೧೬. ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ:

"ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ವರ್ಗದ ಜನರ ಸಮಗ್ರ ಅಭಿವೃದ್ಧಿ ಮತ್ತು ಹಿತರಕ್ಷಣೆಗೆ ಕುರಿತು ಕೆಲಸ ಮಾಡಲು ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಆಯೋಗದ ಮಾದರಿಯಲ್ಲಿಯೇ ಕರ್ನಾಟಕ ಸರ್ಕಾರವು ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗವನ್ನು ೧೦.೧೦.೨೦೦೨ ರಂದು ಕಾರ್ಯಾರಂಭ ಮಾಡಿದೆ. ಈ ಆಯೋಗವು ಅಧಿಕೃತವಾಗಿ ೧೦.೦೪.೨೦೦೩ ರಿಂದ ನಂ.೧೪:೩ ಸಿ.ಎಫ್.ಸಿ. ಕಟ್ಟಡ, ೨ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಕಾಯ್ದೆ ೨೦೦೨ರ ಪ್ರಕಾರ ಆಯೋಗವು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತದೆ.

೧. ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಕಲ್ಯಾಣ ಮತ್ತು ಇತರೆ ಸಂರಕ್ಷಣೆಗಾಗಿ ಭಾರತ ಸಂವಿಧಾನದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಅಥವಾ ಸರ್ಕಾರದ ಯಾವುದೇ ಆದೇಶದ ಅಡಿಯಲ್ಲಿ ಉಪಬಂಧಿಸಲಾದ ವಿವಿಧ ರಕ್ಷಾಕ್ರಮಗಳ ಕಾರ್ಯ ಕ್ಷಮತೆಯನ್ನು ಪರಿಶೋಧಿಸುವುದು ಮತ್ತು ಪರೀಕ್ಷಿಸುವುದು.

೨. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿರುವವರನ್ನು ಅವರ ಹಕ್ಕುಗಳಿಂದ ಮತ್ತು ಸಂರಕ್ಷಣೆಯಿಂದ ವಂಚಿತಗೊಳಿಸಿರುವುದಕ್ಕೆ ಸಂಬಂಧಿಸಿದ ನಿರ್ದಿಷ್ಟ ದೂರುಗಳನ್ನು ವಿಚಾರಿಸುವುದು ಮತ್ತು ಅಂತಹ ವಿಷಯದ ಬಗ್ಗೆ ಸೂಕ್ತ ಪ್ರಾಧಿಕಾರಗಳನ್ನು ಸಂಪರ್ಕಿಸುವುದು.

೩. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಯೋಜನಾ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಮತ್ತು ಸಲಹೆಗಳನ್ನು ನೀಡುವುದು. ರಾಜ್ಯದಲ್ಲಿ ಅವರ ಅಭಿವೃದ್ಧಿಯಲ್ಲಾದ ಪ್ರಗತಿಯ ಮೌಲ್ಯ ನಿರ್ಣಯ ಮಾಡುವುದು.

೪. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಸಂರಕ್ಷಣೆ, ಕಲ್ಯಾಣ ಮತ್ತು ಸಾಮಾಜಿಕ ಆರ್ಥಿಕ ಅಭಿವೃದ್ಧಿಗಾಗಿ ರಕ್ಷಾ ಕ್ರಮಗಳನ್ನು ಮತ್ತು ಇತರೆ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ

ಶಿಫಾರಸ್ಸು ಮಾಡಬಹುದು ಮತ್ತು ವಾರ್ಷಿಕವಾಗಿ ಆಯೋಗವು ತಾನು ಸೂಕ್ತವೆಂದು ಭಾವಿಸಬಹುದಾದಂತಹ ಇತರೆ ಸಮಯದಲ್ಲಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸುವುದು.

೫. ನಿಯಮಿಸಬಹುದಾದಂತಹ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಸಂರಕ್ಷಣೆ, ಕಲ್ಯಾಣ ಅಭಿವೃದ್ಧಿ ಮತ್ತು ಪ್ರಗತಿಗೆ ಸಂಬಂಧಪಟ್ಟಂತೆ ಇತರೆ ಪ್ರಕಾರ್ಯಗಳನ್ನು ನಿರ್ವಹಿಸುತ್ತದೆ.

೩.೧೬.೧. ಆಯೋಗದಿಂದ ಪಡೆಯಬಹುದಾದ ನೆರವುಗಳು:

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಯಾವುದೇ ರೀತಿಯಲ್ಲಿ ತೊಂದರೆಗೆ ಒಳಗಾದಲ್ಲಿ ಅಂದರೆ ಭೂ ವಿವಾದ, ಒತ್ತುವರಿ, ಸರ್ಕಾರಿ ಅಥವಾ ನಿಗಮ ಮಂಡಳಿಗಳಲ್ಲಿ ನಗರಪಾಲಿಕೆ, ಪುರಸಭೆಗಳಲ್ಲಿ ನೇಮಕಾತಿ ಹಾಗೂ ಬಡ್ತಿಯಲ್ಲಿ ಮೀಸಲಾತಿ ಉಲ್ಲಂಘನೆ, ದೌರ್ಜನ್ಯ, ಅಸ್ಪೃಶ್ಯತೆ ಆಚರಣೆ, ಪ್ರಕೃತಿ ವಿಕೋಪ ಮುಂತಾಧ ತೊಂದರೆಗೊಳಗಾದಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳು ಇವರನ್ನು ಕಛೇರಿ ವೇಳೆಯಲ್ಲಿ ಖುದ್ದಾಗಿ ಭೇಟಿ ಮಾಡಿ ಅಥವಾ ಲಿಖಿತ ಮೂಲಕ ಮನವಿ ಸಲ್ಲಿಸಬಹುದಾಗಿದೆ. ಇಂತಹ ಪ್ರಕರಣಗಳ ಬಗ್ಗೆ ಆಯೋಗವು ಸಂಬಂಧಪಟ್ಟ ಪ್ರಾಧಿಕಾರಗಳಿಂದ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ತೆಗೆದುಕೊಳ್ಳುವುದು. ಇದಲ್ಲದೆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ನೀಡುವ ಸೌಲಭ್ಯದಲ್ಲಿ ಯಾವುದೇ ರೀತಿಯ ದುರ್ಬಳಕೆ ಅಥವಾ ನಿಗಧಿತ ಶೇ.೧೮ರ ಮೀಸಲಾತಿ ಹಣವನ್ನು ಖರ್ಚು ಮಾಡದಿದ್ದಲ್ಲಿ ಆಯೋಗದ ಗಮನಕ್ಕೆ ತರಬಹುದಾಗಿದೆ. ಗ್ರಾಮೀಣ ಭಾಗದಲ್ಲಿ ಬಡತನ ನಿವಾರಣೆ ಆಗಬೇಕಾದರೆ ಜನರಿಗೆ ನಿರಂತರ ಆದಾಯ ತರುವಂತಹ ಉದ್ಯೋಗಗಳು ದೊರಕಬೇಕು. ಉದ್ಯೋಗ ದೊರಕಬೇಕಾದರೆ, ಗ್ರಾಮೀಣ ಭಾಗದಲ್ಲಿ ಹೆಚ್ಚು ಹೆಚ್ಚು ಗೃಹ ಕೈಗಾರಿಕೆಗಳು ಸ್ಥಾಪನೆಯಾಗಬೇಕು. ಈ ದಿಸೆಯಲ್ಲಿ ಗ್ರಾಮೀಣ ಮತ್ತು ಸಣ್ಣ ಉದ್ಯಮ ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ಗಿರಿಜನ ಉಪ ಯೋಜನೆ ಅಡಿಯಲ್ಲಿ ಗ್ರಾಮೀಣ ಭಾಗದ ಬುಡಕಟ್ಟು ಸ್ತ್ರೀ–ಪುರುಷರಿಗೆ ಸ್ವಯಂ ಉದ್ಯೋಗವಕಾಶ ಕಲ್ಪಿಸಿಕೊಡುವುದು, ಅಂದರೆ ಉದ್ಯೋಗ ಕೈಗೊಳ್ಳಲು ಮುಂದೆ ಬರುವವರಿಗೆ ಅವರು ಸ್ಥಾಪಿಸುವ ಚಿಕ್ಕ ಕೈಗಾರಿಕಾ ಘಟಕಗಳಿಗೆ ಯೋಜನಾ ವೆಚ್ಚದ ಶೇ.೬೦ ರಷ್ಟು ಸಹಾಯಧನ ನೀಡುವುದು"೦೩.

೩.೧೭. ಪಂಚವಾರ್ಷಿಕ ಯೋಜನೆಗಳು ಮತ್ತು ಬುಡಕಟ್ಟುಗಳ ಅಭಿವೃದ್ಧಿ:

"ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಪ್ರಾಮುಖ್ಯತೆ ಕೊಟ್ಟಿತ್ತಾದರೂ ಸ್ಪಷ್ಟ ಮತ್ತು ವಿಶೇಷ ಗಮನಹರಿಸಲು ಸಾಧ್ಯವಾಗಲಿಲ್ಲ. ಕೇವಲ ಅಲ್ಪಸ್ವಲ್ಪ

ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಯಿತು. ಈ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಒದಗಿಸಲಾದ ಹಣಕಾಸು ಶೇಕಡ ಒಂದರಷ್ಟು, ಎರಡನೇ ಯೋಜನೆಯಲ್ಲಿ ಕೆಲವು ಆಯ್ದು ಬುಡಕಟ್ಟು ಪ್ರದೇಶಗಳಿಗೆ ವಿಶೇಷ ವಿವಿಧೋದ್ದೇಶ ಯೋಜನೆಗಳನ್ನು ಜಾರಿಗೆ ತರಲಾಯಿತು. ಈ ಯೋಜನೆಗೆ ಮೀಸಲಿಟ್ಟ ಹಣ ಶೇಕಡ ೦.೯೦ರಷ್ಟು, ೩ನೇ ಯೋಜನೆಯ ಅಡಿಯಲ್ಲಿ ಬುಡಕಟ್ಟು ಪ್ರದೇಶಗಳ ಸ್ಥಿತಿಗತಿಗಳನ್ನು ಸುಧಾರಿಸುವುದರ ಜೊತೆಗೆ, ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಬುಡಕಟ್ಟುಗಳೂ ಪಾಲ್ಗೊಳ್ಳುವಂತೆ ಅನುವು ಮಾಡಿಕೊಡುವ ಬುಡಕಟ್ಟು ಅಭಿವೃದ್ಧಿಯ ಬ್ಲಾಕ್ ಪದ್ಧತಿಯನ್ನು ಅನುಷ್ಠಾನಕ್ಕೆ ತರಲಾಯಿತು. ಈ ಯೋಜನೆಗೆ ಖರ್ಚು ಮಾಡಿದ ಹಣ ಶೇಕಡ ೦.೬೦. ನಾಲ್ಕನೆಯ ಯೋಜನೆಯಲ್ಲಿ ಬುಡಕಟ್ಟು ಯೋಜನೆಯ ಮುಖ್ಯ ಆಯಾಮವೆಂದರೆ ಶಾಸನಾತ್ಮಕ ಮತ್ತು ಕಾರ್ಯಾತ್ಮಕ ಅಂಶಗಳ ಮೂಲಕ ಬುಡಕಟ್ಟು ಜನರನ್ನು ಹೊರಗಿನವರ ಶೋಷಣೆಯಿಂದ ಮುಕ್ತಿಪಡಿಸುವುದಾಗಿತ್ತು. ಶೇಕಡ ೦.೫೦ರಷ್ಟು ಹಣವನ್ನು ಈ ಯೋಜನೆಗೆ ವ್ಯಯಿಸಲಾಯಿತು. ನಾಲ್ಕನೇ ಯೋಜನೆಯು ಬುಡಕಟ್ಟು ಆರ್ಥಿಕತೆಯನ್ನು ಮುಖ್ಯ ವಾಹಿನಿಯ ಆರ್ಥಿಕತೆಯೊಡನೆ ವಿಲೀನ ಮಾಡಬೇಕೆನ್ನುವ ಕಡೆ ಒತ್ತು ಕೊಟ್ಟಿತು. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಇಡೀ ಬುಡಕಟ್ಟು ಅಭಿವೃದ್ಧಿಯ ಸಮಸ್ಯೆಯನ್ನು ವಿಮರ್ಶಾತ್ಮಕವಾಗಿ ಪರಾಮರ್ಶಿಸಲಾಯಿತು ಮತ್ತು ಬುಡಕಟ್ಟು ಅಭಿವೃದ್ಧಿಯನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಯಿತು. ಬುಡಕಟ್ಟುಗಳು ಹೆಚ್ಚಿಗೆ ಇರುವ ಪ್ರದೇಶ ಮತ್ತು ಬುಡಕಟ್ಟುಗಳು ಅಲ್ಲಲ್ಲಿ ಚದುರಿರುವ ಪ್ರದೇಶ. ಶೇಕಡ ೫೦ಕ್ಕಿಂತ ಹೆಚ್ಚು ಬುಡಕಟ್ಟುಗಳ ಪ್ರದೇಶದಲ್ಲಿ ಶೇಕಡ ೬೫ರಷ್ಟು ಬುಡಕಟ್ಟು ಜನರು ಇರುವವರಿಗೆ ೫ನೇ ಯೋಜನೆಯಲ್ಲಿ ಬುಡಕಟ್ಟು ಉಪಯೋಜನೆಯನ್ನು ತಯಾರಿಸಲಾಯಿತು. ಸಾಮಾನ್ಯವಾಗಿ ಬುಡಕಟ್ಟು ಉಪಯೋಜನೆಯು ರಾಜ್ಯ ಮತ್ತು ಕೇಂದ್ರದ ಯೋಜನೆಗಳಿಗಿಂತ ಹೆಚ್ಚು ವ್ಯಾಪ್ತಿಯುಳ್ಳದ್ದಾಗಿತ್ತು. ಈ ಯೋಜನೆಯು ಬುಡಕಟ್ಟು ಜನರನ್ನು ಭೂಮಿಗೆ ಸಂಬಂಧಿಸಿದ ವಿಷಯಗಳಲ್ಲಿ ಶೋಷಣೆಯನ್ನು ತಪ್ಪಿಸುವುದು, ಲೇವಾದೇವಿದಾರರಿಂದ ಮುಕ್ತಿ ಒಂದು ಕಡೆಯಾದರೆ, ಇನ್ನೊಂದೆಡೆ ಬುಡಕಟ್ಟುಗಳ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದರ ಕಡೆಗೆ ಪ್ರಾಮುಖ್ಯತೆ ಕೊಟ್ಟಿತು. ಈ ಯೋಜನೆಯ ಮೂಲ ಉದ್ದೇಶ ಬುಡಕಟ್ಟು ಜನರಲ್ಲಿ ಸಂಘಟನಾತ್ಮಕ ಸಾಮರ್ಥ್ಯ ಮತ್ತು ಸ್ವಸಾಮಾರ್ಥ್ಯದ ಮನೋಭಾವನೆ ಬೆಳೆಸಲ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯನ್ನು ತ್ವರಿತಗೊಳಿಸುವುದಾಗಿತ್ತು.

ಬುಡಕಟ್ಟು ಉಪಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ೧೮೪ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಗಳು ೨೭೭ ಬುಡಕಟ್ಟು ಪ್ಯಾಕೆಟ್ಸ್ ಅಂದರೆ

ಮಾರ್ಪಡಿಸಿದ ಪ್ರದೇಶ ಅಭಿವೃದ್ಧಿ ವಿಧಾನ ಮತ್ತು ೭೫ ಆದಿಮ ಬುಡಕಟ್ಟು ಗುಂಪುಗಳ ಸೂಕ್ಷ್ಮ ಯೋಜನೆಗಳನ್ನು ಸ್ಥಾಪಿಸಲಾಯಿತು. ಈ ವಿಶೇಷ ಯೋಜನೆಯಲ್ಲಿ ತೊಡಗಿಸಿದ ಹಣ ಶೇಕಡ ೩.೧ರಷ್ಟು, ಇದು ಕಳೆದ ಒಂದರಿಂದ ನಾಲ್ಕನೇ ಯೋಜನೆಗಳಲ್ಲಿ ವ್ಯಯಿಸಿದ ಹಣಕ್ಕಿಂತ ಹೆಚ್ಚಾಗಿರುವುದು ಗಮನಾರ್ಹ ಸಂಗತಿ. ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡ ೫.೬೭ರಷ್ಟು ಹಣವನ್ನು ಬುಡಕಟ್ಟು ಅಭಿವೃದ್ಧಿಗೆ ಮೀಸಲಿಡಲಾಯಿತು. ಬುಡಕಟ್ಟು ಉಪಯೋಜನೆಯ ವಿಧಾನವು ಬುಡಕಟ್ಟು ಯೋಜನೆಯ ಮುಖ್ಯ ಸಾಧನವಾಗಿ ಉಳಿದಾಗ್ಯೂ, ವಾಸ್ತವವಾಗಿ ಏಳನೇ ಯೋಜನೆಯಲ್ಲಿ ಗುಂಪು ಅಭಿವೃದ್ಧಿ ವಿಧಾನ ಅಥವಾ ಸಮುದಾಯ ಅಭಿವೃದ್ಧಿ ವಿಧಾನವನ್ನು ಬಳಸಿ ೭೫ ಆದಿಮ ಬುಡಕಟ್ಟುಗಳನ್ನು ಗುರುತಿಸಲಾಯಿತು. ಶೇಕಡ ೬.೬೭ರಷ್ಟು ಹಣವನ್ನು ಈ ಯೋಜನೆಗೆ ಖರ್ಚು ಮಾಡಲಾಯಿತು. ೮ನೇ ಯೋಜನೆಯಡಿಯಲ್ಲಿ ವಿಶೇಷ ಕಾರ್ಯತಂತ್ರ ರೂಪಿಸುವುದರ ಜೊತೆಗೆ ಬುಡಕಟ್ಟು ಜನರ ಪ್ರಗತಿಗೋಸ್ಕರ ಕೇಂದ್ರ ಸರ್ಕಾರವು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವನ್ನು ವಿಸ್ತರಿಸಿತು. ಈ ಯೋಜನೆಯ ಅಡಿಯಲ್ಲಿ ಬುಡಕಟ್ಟು ಯೋಜನೆಗೆ ರಾಷ್ಟ್ರೀಯ ಆದಾಯದ ಶೇಕಡ ೮ರಷ್ಟನ್ನು ಖರ್ಚು ಮಾಡಲಾಯಿತು. ೯ನೇ ಯೋಜನೆಯಲ್ಲಿ ಬುಡಕಟ್ಟು ಜನರನ್ನು ಸಶಕ್ತರನ್ನಾಗಿಸುವುದರ ಜೊತೆಗೆ ಸಮಾಜದ ಇನ್ನುಳಿದ ದುರ್ಬಲ ವರ್ಗಗಳನ್ನು ಗಣನೆಗೆ ತೆಗೆದುಕೊಂಡು ಸರ್ಕಾರೇತರ ಸಂಸ್ಥೆಗಳ ಸಹಕಾರದಿಂದ ಅಭಿವೃದ್ಧಿಯ ಕಾರ್ಯಗಳನ್ನು ಕೈಗೊಳ್ಳಲಾಯಿತು. ಈ ಯೋಜನೆಗೆ ವ್ಯಯಿಸಿದ ಹಣ ಶೇಕಡ ೯.೯೭ರಷ್ಟು ೧೦ನೇ ಯೋಜನೆಯಲ್ಲಿ ಬುಡಕಟ್ಟು ಅಭಿವೃದ್ಧಿಯ ವಿಧಾನವೆಂದರೆ ಬುಡಕಟ್ಟು ಆರ್ಥಿಕತೆಯನ್ನು ಹೊರಗಿನ ಮಾರುಕಟ್ಟೆಗಳಿಂದ ರಕ್ಷಿಸುವುದು ಮತ್ತು ಪ್ರೋತ್ಸಾಹಿಸುವುದು. ಅಲ್ಲದೆ ಕಿರು ಪ್ರಮಾಣದ ಅರಣ್ಯ ಉತ್ಪನ್ನಗಳಾದ ಔಷಧ ಸಸ್ಯಗಳನ್ನು ಬುಡಕಟ್ಟು ಜನರು ಉಪಯೋಗಿಸಿಕೊಳ್ಳಲು ಬೌದ್ಧಿಕ ಆಸ್ತಿಯ ಹಕ್ಕುಗಳಲ್ಲಿರುವ ಸೌಲಭ್ಯಗಳನ್ನು ಒದಗಿಸುವುದು"[೦೪].

೩.೧೭.೧. ಒಂದನೆಯ ಪಂಚವಾರ್ಷಿಕ ಯೋಜನೆ (೧೯೫೧-೧೯೫೬):

ಭಾರತದ ಮೊದಲನೇ ಪಂಚವಾರ್ಷಿಕ ಯೋಜನೆಯು ಸಮಾಜವಾದಕ್ಕೆ ಅಡಿಗಲ್ಲು ಹಾಕಿದೆ. ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಹಾಗೂ ಬುಡಕಟ್ಟು ಪ್ರದೇಶದಲ್ಲಿ ಸರ್ವತೋಮುಖ ಬಲಾವಣೆಯನ್ನು ಸಮೂಹ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ತರಲು ಪ್ರಯತ್ನಿಸಲಾಗಿದೆ. ರಾಜ್ಯಗಳಲ್ಲಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ರೂಪಿಸಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ.

೧. ಶಿಕ್ಷಣ ಮತ್ತು ಸಂಸ್ಕೃತಿ ೨. ಬುಡಕಟ್ಟುಗಳ ಆರ್ಥಿಕ ಅಭಿವೃದ್ಧಿ ೩. ಸಾರಿಗೆ ಮತ್ತು ಸಂವಹನ ೪. ಸಮಾಜ ಕಲ್ಯಾಣ (ಆರೋಗ್ಯ, ನೈರ್ಮಲೀಕರಣ ಮತ್ತು ವಸತಿ) ಇತ್ಯಾದಿ ವಿನೂತನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಈ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳಲಾಗಿದೆ. ಈ ಯೋಜನಾವಧಿಯಲ್ಲಿಯ ಅಭಿವೃದ್ಧಿ ಕಾರ್ಯಗಳಿ ಹೀಗಿವೆ.

೧. ೪೦೦೦ ಶಾಲೆಗಳ ಸ್ಥಾಪನೆ. ಇದರಲ್ಲಿ ೧೦೦೦ ಆಶ್ರಮ ಶಾಲೆ ಮತ್ತು ಸೇವಾಶ್ರಮ ಶಾಲೆಗಳು ಸೇರಿರುತ್ತವೆ. ೪,೫೦,೦೦೦ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದರು. ೮೫೦೦ ಬುಡಕಟ್ಟು ವಿದ್ಯಾರ್ಥಿಗಳು ಹೆಚ್ಚಿನ ವ್ಯಾಸಾಂಗಕ್ಕಾಗಿ ವಿದ್ಯಾರ್ಥಿ ವೇತನವನ್ನು ಪಡೆದುಕೊಂಡಿರುತ್ತಾರೆ.

೨. ೨೪೦೦ ಮೈಲಿ ಉದ್ದದ ರಸ್ತೆ ಮತ್ತು ಸೇತುವೆಗಳು ಹಾಗೂ ಬೆಟ್ಟಗಳಲ್ಲಿ ಕಾಲು ದಾರಿಗಳ ನಿರ್ಮಾಣ.

೩. ಹೊಸದಾದ ಬೇಸಾಯ ಪದ್ಧತಿಯನ್ನು ಅಳವಡಿಸಲು ೫೦ ಕೃಷಿ ಫಾರಂಗಳ ಸ್ಥಾಪನೆ. ೮೦೦೦ ಬುಡಕಟ್ಟು ಕುಟುಂಬಳ ಶಾಶ್ವತ ನೆಲೆ. ಇವರಿಗಾಗಿ ೨೫೦ ಆಹಾರ ಬ್ಯಾಂಕುಗಳ ಸಂಘಟನೆ.

೪. ೩೧೦ ವಿವಿದ್ಧೋದ್ದೇಶ ಸಹಕಾರಿ ಸಂಘಗಳ ಸ್ಥಾಪನೆ.

೫. ೨೫೦ ಬುಡಕಟ್ಟು ಕುಟುಂಬಗಳಿಗೆ ಸಣ್ಣ ವ್ಯಾಪಾರ ವೃದ್ಧಿಗೋಸ್ಕರ ಸಹಾಯಧನ.

೬. ೧೧೦ ಗೃಹ ಕೈಗಾರಿಕೆ, ೩.೨೦೦ ವೈದ್ಯಕೀಯ, ೨೫ ಮಲೇರಿಯಾ ನಿಯಂತ್ರಣ, ೨೯ ಹೆರಿಗೆ ಆಸ್ಪತ್ರೆ ಮ್ತು ಮಕ್ಕಳ ಕಲ್ಯಾಣ ಕೇಂದ್ರಗಳ ಸ್ಥಾಪನೆ.

೭. ಬುಡಕಟ್ಟು ಪ್ರದೇಶದಲ್ಲಿ ಕುಡಿಯುವ ನೀರಿನ ವ್ಯವಸ್ಥೆ.

೮. ಬಿಹಾರ, ಮಧ್ಯಪ್ರದೇಶ, ಪಶ್ಚಿಮ ಬಂಗಾಳಗಳಲ್ಲಿ ಬುಡಕಟ್ಟು ಸಂಶೋಧನಾ ಕೇಂದ್ರಗಳ ಸ್ಥಾಪನೆ. ಒರಿಸ್ಸಾದಲ್ಲಿ ಬುಡಕಟ್ಟು ಬ್ಯೂರೋ ಪ್ರಾರಂಭ.

ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಸಹಜವಾಗಿಯೇ ಶಿಕ್ಷಣ, ಆರ್ಥಿಕ ಅಭಿವೃದ್ಧಿ, ಸಾರಿಗೆ ಮತ್ತು ಸಂವಹನಕ್ಕೆ ಹೆಚ್ಚಿನ ಪ್ರಧಾನ್ಯತೆ ನೀಡಿ ರೂ.೪೦೦ ರಿಂದ ೫೦೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ತದನಂತರ ಆರೋಗ್ಯ ಕ್ಷೇತ್ರಕ್ಕೆ ಪ್ರಾಮುಖ್ಯತೆ ನೀಡಿ ನಂತರ ಆಡಳಿತಕ್ಕೆ ಹೆಚ್ಚಿನ ಗಮನ ನೀಡಿರುವುದು ವ್ಯಕ್ತವಾಗುತ್ತದೆ. ಸ್ವಾತಂತ್ರ ಪೂರ್ವದ ಕಾಲಕ್ಕೆ ಹೋಲಿಸಿದಲ್ಲಿ ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಅಭಿವೃದ್ಧಿಗಾಗಿ ಖರ್ಚು ಮಾಡಿರುವ ಆಯವ್ಯಯ ತೃಪ್ತಿಕರವಾಗಿದೆ.

೩.೧೭.೨. ಎರಡನೆಯ ಪಂಚವಾರ್ಷಿಕ ಯೋಜನೆ (೧೯೫೬-೫೭ ರಿಂದ ೧೯೬೦-೬೧):

ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಬೃಹತ್ ಪ್ರಮಾಣದ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳು ಅನುಷ್ಠಾನಗೊಂಡವು. ಸರಾಸರಿ ೨೫೦೦೦ ಬುಡಕಟ್ಟು ಜನರನ್ನು ಹೊಂದಿರುವ ಬುಡಕಟ್ಟು ಪ್ರದೇಶಗಳಲ್ಲಿ ಎನ್.ಇ.ಎಸ್. ಬ್ಲಾಕ್‌ಗಳನ್ನು ಗುರುತಿಸಲಾಯಿತು. ಕೇಂದ್ರ ಸರ್ಕಾರವು ಬುಡಕಟ್ಟು ಜನರ ಹಾಗೂ ಬುಡಕಟ್ಟು ಪ್ರದೇಶಗಳ ಅಭಿವೃದ್ಧಿಗಾಗಿ ಕೆಲವು ವಿಶೇಷ ಯೋಜನೆಗಳನ್ನು ಜಾರಿಗೊಳಿಸಿತು. ಇವುಗಳಲ್ಲಿ ಅತಿ ಮುಖ್ಯವಾದದ್ದು ವಿಶೇಷ ವಿವಿಧೋದ್ದೇಶ ಬುಡಕಟ್ಟುಗಳ ಗುಂಪು (Special Multipurpose Tribal Blocks). ಈ ಗುಂಪುಗಳ ಮುಖ್ಯ ಉದ್ದೇಶ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಮತ್ತಷ್ಟು ಹೆಚ್ಚಿನ ಗಮನ ಹರಿಸುವುದಾಗಿತ್ತು. ಈ ವಿಶೇಷ ವಿವಿದೋದ್ದೇಶ ಬುಡಕಟ್ಟು ಗುಂಪುಗಳ ಪ್ರಗತಿಯನ್ನು ಪರಿಶೀಲಿಸಲು ವೆರಿಯರ್ ಎಲ್ವಿನ್‌ರವರ ನೇತೃತ್ವದಲ್ಲಿ ಅನೇಕ ತಂಡಗಳನ್ನು (Composite team) ರಚಿಸಲಾಗಿತ್ತು. ಈ ತಂಡಗಳು ಬುಡಕಟ್ಟು ಜನರ ಸಮಸ್ಯೆಗಳನ್ನು ಬಗೆಹರಿಸಲು ಬಹು ಹೆಚ್ಚು ಫಲಕಾರಿಯಾಗುವ ಶಿಫಾರಸ್ಸುಗಳನ್ನು ಬುಡಕಟ್ಟು ಅಭಿವೃದ್ಧಿ ಬ್ಯಾಂಕ್ (Tribal Development Blocks) ಗಳೆಂದು ಕರೆಯಲ್ಪಟ್ಟವು. ಪ್ರತಿ ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳು ೨೫,೦೦೦ ಬುಡಕಟ್ಟುಗಳನ್ನು ಹೊಂದಿದ್ದವು.

ಎರಡನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಅಭಿವೃದ್ಧಿಯನ್ನು ಎರಡು ಪ್ರತ್ಯೇಕ ಯೋಜನೆಯಲ್ಲಿ ಕೈಗೊಳ್ಳಲಾಗಿತ್ತು. ಅವುಗಳೆಂದರೆ ರಾಜ್ಯ ಯೋಜನೆ ಮತ್ತು ಕೇಂದ್ರ ಯೋಜನೆ. ರಾಜ್ಯ ಯೋಜನೆಯ ಅಡಿಯಲ್ಲಿ ಕೈಗೊಂಡ ಕಾರ್ಯಕ್ರಮಗಳಿಗೆ ವಿನಿಯೋಗಿಸಿದ ಅನುದಾನವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ೫೦:೫೦ ಅನುಪಾತದಲ್ಲಿ ಭರಿಸಿದವು. ಕೇಂದ್ರ ಯೋಜನೆಯ ಅಡಿಯಲ್ಲಿ ರಾಜಯ್ ಸರ್ಕಾರ ಕೈಗೊಂಡ ಕಾರ್ಯಕ್ರಮಗಳಿಗೆ ವಿನಿಯೋಗಿಸಿದ ಪೂರ್ಣ ಅನುದಾನವನ್ನು ಭಾರತ ಸರ್ಕಾರ ಭರಿಸಿತು. ಈ ಯೋಜನೆಯ ಅವಧಿಯಲ್ಲಿ ಒಟ್ಟು ರೂ.೮೨.೯೨ ಕೋಟಿ ಖರ್ಚು ಮಾಡಲಾಯಿತು.

ಈ ಯೋಜನೆಯ ಅವಧಿಯಲ್ಲಿ ಆರ್ಥಿಕ ಅಭಿವೃದ್ಧಿಗಾಗಿ ಹೆಚ್ಚಿನ ಪ್ರಾಮುಖ್ಯತೆ ನೀಡಿ ರೂ.೧೬.೮೬ ಕೋಟಿ ಖರ್ಚು ಮಾಡಲಾಯಿತು. ೪೩ ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳನ್ನು ತೆರೆಯಲಾಯಿತು. ಬುಡಕಟ್ಟು ಜನರಿಗೆ ಪುನರ್ವಸತಿಯನ್ನು ಕಲ್ಪಿಸಲು ರೂ.೨೦ ಲಕ್ಷ ಖರ್ಚು ಮಾಡಿ ೨೨೧೨ ಮನೆಗಳನ್ನು ನಿರ್ಮಿಸಲಾಯಿತು. ರಾಜ್ಯ ಯೋಜನೆಯ ಅಡಿಯಲ್ಲಿ ಬುಡಕಟ್ಟು ವಿದ್ಯಾರ್ಥಿಗಳಿಗಾಗಿ ೩೧೮೭ ಶಾಲೆಗಳು, ೩೯೮ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಹಾಗೂ

೩ ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಲು ರೂ.೮೨೧.೫೧ ಲಕ್ಷ ಖರ್ಚು ಮಾಡಲು ಯೋಜನೆಗಳನ್ನು ಕೈಗೊಳ್ಳಲಾಗಿತ್ತು. ಸಾರಿಗೆ ಸಂವಹನ ಕ್ಷೇತ್ರದಲ್ಲಿ ಮೊದಲನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಖರ್ಚು ಮಾಡಿದ ಅನುದಾನಕ್ಕಿಂತ ಎರಡರಷ್ಟು ಹೆಚ್ಚು ಖರ್ಚು ಮಾಡಲಾಯಿತು. ಬುಡಕಟ್ಟು ಜನರ ವಸತಿ ಪರಿಸ್ಥಿತಿ ಸಂಪೂರ್ಣ ಅತೃಪ್ತಿದಾಯಕವಾಗಿದ್ದರಿಂದ ರೂ.೬೦ ಲಕ್ಷ ಖರ್ಚುಮಾಡಿ ೧೮ ಸಾವಿರ ಮನೆಗಳನ್ನು ನಿರ್ಮಿಸಲಾಯಿತು.

೩.೧೭.೩. ಮೂರನೆಯ ಪಂಚವಾರ್ಷಿಕ ಯೋಜನೆ (೧೯೬೧-೬೨ ರಿಂದ ೧೯೬೫-೬೬):

ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಜಾರಿಗೆ ತಂದಿದ್ದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು ಹಿಂದುಳಿದ ಪರಿಶಿಷ್ಟ ವರ್ಗಗಳ ಜನರ ಸಮಸ್ಯೆಗಳನ್ನು ಕಿಂಚಿತ್ತೂ ಬಗೆಹರಿಸದ ಕಾರಣ ಬುಡಕಟ್ಟು ಜನರ ಅತೃಪ್ತಿಗೆ ಕಾರಣವಾಯಿತು. ಇದರಿಂದ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗದ ಕಲ್ಯಾಣ ಅಧ್ಯಯನ ಸಮಿತಿಗಳು, ಬುಡಕಟ್ಟು ಜನರ ಅಭಿವೃದ್ಧಿಗಾಗಿ ಇರುವ ಅಭಿವೃದ್ಧಿ ಯೋಜನೆಗಳನ್ನು ಪರಿಶೀಲಿಸಿ ಬುಡಕಟ್ಟು ಜನರನ್ನು ಅಭಿವೃದ್ಧಿ ಪಡಿಸಲು ಕೆಲವು ಜಾಗರೂಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಲಹೆಗಳನ್ನು ನೀಡಿತು.

ಬುಡಕಟ್ಟು ಕೃಷಿ ಕಾರ್ಮಿಕ ಹಾಗೂ ಕುಶಲಕರ್ಮಿಗಳಿಗೆ ಬೇಕಾಗಿರುವ ಸಕಲ ಹಾಗೂ ಇನ್ನಿತರ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ವಿವಿಧೋದ್ದೇಶ ಸಹಕಾರ ಸಂಘಗಳ ಸ್ಥಾಪನೆಗೆ ಶಿಫಾರಸು ಮಾಡಿದ ಹಿನ್ನೆಲೆಯಲ್ಲಿ, ಈ ಯೋಜನೆಯ ಅವಧಿಯಲ್ಲಿ ಭೂ ಅಭಿವೃದ್ಧಿ, ಭೂ ಸಂರಕ್ಷಣೆ, ಸಣ್ಣ ನೀರಾವರಿ ಇತ್ಯಾದಿಗಳಿಗೆ ಹೆಚ್ಚು ಒತ್ತು ಕೊಡಲಾಯಿತು. ಶೈಕ್ಷಣಿಕ ಕ್ಷೇತ್ರಕ್ಕೂ ಹೆಚ್ಚಿನ ಆದ್ಯತೆ ನೀಡಿ ಪ್ರಾಥಮಿಕ ಶಾಲೆಯ ಜೊತೆಗೆ ಫ್ರೀಶಿಪ್, ವಿದ್ಯಾರ್ಥಿವೇತನ ಮಾಧ್ಯಮಿಕ ಹಾಗೂ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ಸೌಲಭ್ಯ ಜೊತೆಗೆ ತಾಂತ್ರಿಕ ತರಬೇತಿ ವಿದ್ಯಾರ್ಥಿಗಳಿಗೆ ಫ್ರೀಶಿಪ್ ಹಾಗೂ ವಿದ್ಯಾರ್ಥಿವೇತನವನ್ನು ನೀಡಲಾರಂಭಿಸಲಾಯಿತು.

ಈ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಆರ್ಥಿಕ ಅಭಿವೃದ್ಧಿಗಾಗಿ ಹೆಚ್ಚಿನ ಆಧ್ಯತೆ ನೀಡಿದ್ದು, ಅದೇ ರೀತಿ, ಶಿಕ್ಷಣ, ಆರೋಗ್ಯ, ವಸತಿ, ಸಾರಿಗೆ ಮತ್ತು ಸಂವಹಕ್ಕೆ ಆಧ್ಯತೆ ನೀಡಲಾಯಿತು. ೨ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಖರ್ಚು ಮಾಡಿದ ಹಣವನ್ನು ಲೆಕ್ಕಾಚಾರ ಮಾಡಿ ನೋಡಿದಾಗ, ೩ನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡ ೨೧.೫೬ ರಷ್ಟು ಹೆಚ್ಚಾಗಿದ್ದು ದಾಖಲೆಗಳಿಂದ ಧೃಢಪಟ್ಟಿದೆ.

ಈ ಯೋಜನೆಯ ಅವಧಿಯಲ್ಲಿ ಒಟ್ಟು ರೂ.೮೫೭೭ ಕೋಟಿ ಖರ್ಚು ಮಾಡಲಾಗಿದೆ. ಅದರಲ್ಲಿ ರೂ.೫೦.೫೩ ಕೋಟಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಖರ್ಚು ಮಾಡಲಾಯಿತು. ಬುಡಕಟ್ಟು ಅಭಿವೃದ್ಧಿ ಬ್ಲಾಕ್ ಕಡೆಗೆ ಹೆಚ್ಚಿನ ಗಮನ ನೀಡಿ ೨ನೇ ಪಂಚವಾರ್ಷಿಕ ಯೋಜನೆಯಲ್ಲಿದ್ದ ४३ ಬ್ಲಾಕ್‌ಗಳನ್ನು ४೫೮ ಬ್ಲಾಕ್‌ಗಳಿಗೆ ಹೆಚ್ಚಿಸಲಾಯಿತು. ೨ನೇ ಆದ್ಯತೆಯನ್ನು ಶಿಕ್ಷಣ ಕ್ಷೇತ್ರಕ್ಕೆ ನೀಡಲಾಗಿದ್ದು ಇದರಿಂದ ಬುಡಕಟ್ಟು ಜನರ ಸಾಕ್ಷರತಾ ಪ್ರಮಾಣ ೯.೧೬ಕ್ಕೆ ಏರಿತು.

ವಾರ್ಷಿಕ ಯೋಜನೆ (೧೯೬೬-೧೯೬೭): ಈ ಯೋಜನೆಯ ಅವಧಿಯಲ್ಲಿ ಒಟ್ಟು ರೂ.೬೭೫೬ ಕೋಟಿ ಖರ್ಚು ಮಾಡಲಾಗಿದೆ. ಅದರಲ್ಲಿ ರೂ.೩೨.೩೨ ಕೋಟಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಖರ್ಚುಮಾಡಲಾಯಿತು.

೩.೧೭.४. ನಾಲ್ಕನೆಯ ಪಂಚವಾರ್ಷಿಕ ಯೋಜನೆ (೧೯೬೯-೭४):

ಕಳೆದ ಮೂರು ಪಂಚವಾರ್ಷಿಕ ಮತ್ತು ಒಂದು ವಾರ್ಷಿಕ ಯೋಜನೆ ಅವಧಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಜಾರಿಗೆ ತಂದಿದ್ದ ಯೋಜನೆಗಳು ಕೇವಲ ತುಣಕಾಗಿದ್ದು, ಯಾವುದೇ ಪರಿಪೂರ್ಣ ಯೋಜನೆಗಳಾಗಿರಲಿಲ್ಲ. ಬುಡಕಟ್ಟು ಜನರ ಮತ್ತು ಪ್ರದೇಶದ ಸಮಸ್ಯೆಗಳನ್ನು ಬಗೆಹರಿಸಲು ಯಾವುದೇ ಪ್ರಾಮಾಣಿಕ ಪ್ರಯತ್ನ ನಡೆಯದ ಕಾರಣ ಈ ಯೋಜನೆಯ ಅವಧಿಯಲ್ಲಿ ಸಮುದಾಯ ಅಭಿವೃದ್ಧಿ ಬ್ಲಾಕ್‌ಗಳನ್ನು ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳಾಗಿ ಪರಿವರ್ತಿಸಲು ಸಾಧ್ಯವಾಯಿತು. ೧೯೬೧ರಲ್ಲಿ ಯಾವುದೇ ಸಮುದಾಯ ಅಭಿವೃದ್ಧಿ ಬ್ಲಾಕ್‌ಗಳನ್ನು ಶೇ.೫೦ರಷ್ಟು ಬುಡಕಟ್ಟುಗಳಿದ್ದಲ್ಲಿ ಅಂತಹ ಬ್ಲಾಕ್‌ಗಳನ್ನು ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳಾಗಿ ಪರಿವರ್ತಿಸಲು ಅರ್ಹತೆ ಹೊಂದಿದ್ದವು. ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳಲ್ಲಿ ಜಾರಿಗೆ ತಂದಿದ್ದ ಹಿಂದುಳಿದ ವರ್ಗದ ಕಲ್ಯಾಣ ಯೋಜನೆಗಳು ಮತ್ತು ತುಣುಕುಗಳು ಸಾಕಷ್ಟು ಪ್ರಮಾಣದಲ್ಲಿ ಫಲಕಾರಿಯಾಗಲಿಲ್ಲ. ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ೬ ಫೈಲೆಟ್ ಪ್ರಾಜೆಕ್ಟ್‌ಗಳನ್ನು ಪ್ರಾರಂಭಿಸಿತು. ಈ ಫೈಲೆಟ್ ಪ್ರಾಜೆಕ್ಟ್‌ಗಳನ್ನೇ ಅನಂತರದಲ್ಲಿ ಬುಡಕಟ್ಟು ಅಭಿವೃದ್ಧಿ ಏಜೆನ್ಸಿಗಳೆಂದು ಕರೆಯಲಾಯಿತು.

ಈ ಯೋಜನೆಯ ಅವಧಿಯಲ್ಲಿ ಒಟ್ಟು ರೂ.೧೫೯೦೨ ಕೋಟಿ ಖರ್ಚು ಮಾಡಲಾಗಿದೆ. ಅದರಲ್ಲಿ ರೂ. ೭೫ ಕೋಟಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಖರ್ಚು ಮಾಡಲಾಯಿತು. ಆರ್ಥಿಕ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಕ್ರಷಿ, ಸಹಕಾರ, ನೀರಾವರಿ, ಸಣ್ಣ ಕೈಗಾರಿಕೆ ಇತ್ಯಾದಿ ಕ್ಷೇತ್ರಗಳಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಯಿತು. ಬುಡಕಟ್ಟು ಜನರಿಗೆ ಸುಧಾರಿತ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡಲಾಯಿತು. ಗ್ರಹ ಕೈಗಾರಿಕೆ

ಯೋಜನೆಯ ಅಡಿಯಲ್ಲಿ ಬುಡಕಟ್ಟು ಕುಶಲಕರ್ಮಿಗಳಿಗೆ ತಮ್ಮ ವೃತ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳು ಧನಸಹಾಯವನ್ನು ನೀಡಲಾಯಿತು. ಇದರ ಜೊತೆಗೆ ಅವರು ತಯಾರಿಸುವ ವಸ್ತುಗಳಿಗೆ ಮಾರುಕಟ್ಟೆಯ ವ್ಯವಸ್ಥೆಯನ್ನು ಒದಗಿಸಲಾಯಿತು. ಸ್ಟೈಫಂಡ್ ಸಹಿತ ತರಬೇತಿ ಜೊತೆಗೆ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಈ ರೀತಿ ತರಬೇತಿ ಪಡೆದ ಬುಡಕಟ್ಟು ಜನರಿಗೆ ಬಡ್ಡಿ ರಹಿತ ಸಾಲ ಸೌಲಭ್ಯ ಕಲ್ಪಿಸಲಾಯಿತು.

ಆರೋಗ್ಯ ಮತ್ತು ವಸತಿ ಕ್ಷೇತ್ರದಲ್ಲಿ ರಾಜ್ಯ ಯೋಜನೆಯಡಿಯಲ್ಲಿ ಬುಡಕಟ್ಟು ಜನರಿಗೆ ವಸತಿಗಾಗಿ ಸಹಾಯಧನ ಹಾಗೂ ಅವರ ಗ್ರಾಮಗಳಿಗೆ ಅಥವಾ ಪ್ರದೇಶಗಳಿಗೆ ವಿದ್ಯುದೀಕರಣ, ಕುಡಿಯುವ ನೀರಿನ ಪೂರೈಕೆ, ಪೌಷ್ಠಿಕ ಆಹಾರ ಮತ್ತು ಕಾನೂನು ಸಲಹೆಗಳನ್ನು ಒದಗಿಸಲಾಯಿತು. ಈ ಯೋಜನೆಯ ಅವಧಿಯಲ್ಲಿ ಪ್ರಾರಂಭವಾದ ಆರು ಪೈಲೆಟ್ ಪ್ರಾಜೆಕ್ಟ್‌ಗಳಿಗೆ ರೂ.೧೨ ಕೋಟಿಗಳನ್ನು ನೀಡಲಾಯಿತು. ಈ ಪೈಲೆಟ್ ಪ್ರಾಜೆಕ್ಟ್‌ಗಳು ಆರ್ಥಿಕ ಅಭಿವೃದ್ಧಿ, ರಸ್ತೆಗಳ ನಿರ್ಮಾಣ ಕಾರ್ಯಗಳನ್ನು ಒಳಗೊಂಡಿದ್ದವು. ಈ ಯೋಜನೆಯ ಅವಧಿಯಲ್ಲಿ ೬ ಪೈಲೆಟ್ ಪ್ರಾಜೆಕ್ಟ್‌ಗಳಿಗೆ ರೂ.೪೪೦ ಲಕ್ಷ ಅನುದಾನಿತ ಸಹಾಯಧನವನ್ನು ನೀಡಲಾಯಿತು. ಇವು ೫ನೇ ಪಂಚವಾಷಿಕ ಯೋಜನೆಯ ಅವಧಿಯಲ್ಲಿಯೂ ಮುಂದುವರೆದವು.

೩.೧೭.೫. ಐದನೆಯ ಪಂಚವಾರ್ಷಿಕ ಯೋಜನೆ (೧೯೭೪-೧೯೭೯):

ಈ ಯೋಜನೆ ಬುಡಕಟ್ಟು ಜನರ ಅಭಿವೃದ್ಧಿ ದಿಸೆಯಲ್ಲಿ ಒಂದು ಮುಖ್ಯ ಮೈಲುಗಲ್ಲಾಗಿದ್ದು, ರಾಜ್ಯದ ಆದಾಯವನ್ನು ದ್ವಿಗುಣಗೊಳಿಸಿ. ಬುಡಕಟ್ಟುಗಳ ಜೀವನ ಮಟ್ಟವನ್ನು ಸುಧಾರಿಸಿ ಪ್ರಾಂತೀಯ ಅಸಮತೋಲನವನ್ನು ಹೋಗಲಾಡಿಸುವುದು ಉದ್ದೇಶವಾಗಿತ್ತು. ಈ ಯೋಜನೆಯಲ್ಲಿ ಬಡತನ ನಿರ್ಮೂಲನೆ ಮತ್ತು ಸ್ವಾವಲಂಬನೆ ಸಹ ಅತಿ ಮುಖ್ಯ ಉದ್ದೇಶವಾಗಿತ್ತು. ಕಳೆದ ೪ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಂಡ ಯೋಜನೆಗಳಿಂದ ಬುಡಕಟ್ಟು ಜನರ ಜೀವನ ಮಟ್ಟ ಪರಿಣಮಕಾರಿಯಾಗಿ ಸುಧಾರಿಸಿರಲಿಲ್ಲ. ಈ ಯೋಜನೆಯ ಅವಧಿಯಲ್ಲಿ ಕೇಂದ್ರ ಸರ್ಕಾರ ಬುಡಕಟ್ಟುಗಳ ಸಮಸ್ಯೆಗಳನ್ನು ಹೋಗಲಾಡಿಸಲು ಒಂದು ಹೊಸ ಯೋಜನೆಯ ಹುಟ್ಟಿಗೆ ದಾರಿ ಮಾಡಿಕೊಟ್ಟಿತ್ತು. ಅದನ್ನೇ 'ಉಪ-ಯೋಜನೆ" ಎನ್ನುವರು. ಈ ಯೋಜನೆಯು ಬುಡಕಟ್ಟು ಜನರ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಟ್ಟಿದೆ. ಹಾಗೆಯೇ ಈ ಉಪ ಯೋಜನೆಯು ಪ್ರದೇಶ ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಟ್ಟಿದೆ. ಗಿರಜನ ಉಪ ಯೋಜನೆಯ ಪರಿಕಲ್ಪನೆ ಅಂದರೆ ಲಭ್ಯವಿರುವ ಎಲ್ಲಾ ಆರ್ಥಿಕ ಹಾಗೂ ಮಾನವ

ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಒಂದೆಡೆ ಕಲೆಹಾಕಿ ಅದನ್ನು ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿಗಾಗಿ ಉಪಯೋಗಿಸಿಕೊಳ್ಳುವುದಾಗಿರುವುದು.

ಪರಿಶಿಷ್ಟ ಜಾತಿಯ ಜನರ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಅಭಿವೃದ್ಧಿಗಾಗಿ ಕೇವಲ ರಾಜ್ಯ ಸರ್ಕಾರಗಳು ಅಯಾ ಇಲಾಖೆಯಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು ಸಾಕಾಗದ ಕಾರಣ, ಇದಕ್ಕೆ ಹೆಚ್ಚು ಒತ್ತು ಕೊಡಲು ಕೇಂದ್ರ ಸರ್ಕಾರ "ವಿಶೇಷ ಘಟಕ ಯೋಜನೆ" ಎಂಬ ಹೊಸ ಹೆಸರಿನ, ಹೊಸ ಯೋಜನೆಯನ್ನು ರೂಪಿಸಿ, ಪರಿಶಿಷ್ಟ ಜಾತಿಯ ಸರ್ವಾಂಗೀಣ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವ ರೀತಿಯಲ್ಲಿಯೇ ಬುಡಕಟ್ಟು ಜನರ ಅಭಿವೃದ್ಧಿಗಾಗಿಯೂ ಸಹ ೧೯೭೪-೭೫ನೇ ಸಾಲಿನಲ್ಲಿ "ಗಿರಿಜನ ಉಪ ಯೋಜನೆ" ಎಂಬ ಹೊಸ ಯೋಜನೆಯಡಿಯಲ್ಲಿ ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಜೊತೆಗೆ ಅವರ ಜೀವನ ಮಟ್ಟವನ್ನು ಸುಧಾರಿಸಲು, ಹಲವಾರು ರಾಜ್ಯಗಳು ಕೇಂದ್ರಾಡಳಿತ ಪ್ರದೇಶಗಳು ಕ್ರಮಕೈಗೊಂಡವು. ಈ ಯೋಜನೆಯ ಅವಧಿಯಲ್ಲಿ ಗಿರಿಜನ ಉಪ ಯೋಜನೆಯ ಅಡಿಯಲ್ಲಿ ಬುಡಕಟ್ಟು ಪ್ರದೇಶ ಮತ್ತು ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿಯಲ್ಲಿ ಅನಿಕ್ಷಿತ ಪ್ರಗತಿಯಾಗಿರುವುದು ಗಮನಾರ್ಹ.

ಬಹಳಷ್ಟು ಬುಡಕಟ್ಟು ಜನರ ಮುಖ್ಯ ವೃತ್ತಿ ವ್ಯವಸಾಯಾವಾಗಿದ್ದು, ಅದು ಅವರ ಆದಾಯದ ಮೂಲವಾಗಿದೆ. ಬುಡಕಟ್ಟು ಜನರ ಆರ್ಥಿಕ ಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೋಸ್ಕರ ಅವರ ವ್ಯವಸಾಯದ ಅಭಿವೃದ್ಧಿಗಾಗಿ ಹೆಚ್ಚಿನ ಬಂಡವಾಳವನ್ನು ಹೂಡಲಾಯಿತು. ಕಾರಣ ಬುಡಕಟ್ಟು ಪ್ರದೇಶದ ಕೃಷಿ ಕ್ಷೇತ್ರದಲ್ಲಿ ಬರುತ್ತಿದ್ದ ಆದಾಯ ಈ ಕೆಳಕಂಡ ಕಾರಣಗಳಿಂದ ಬಹಳ ಕಡಿಮೆಯಾಗಿತ್ತು.

೧. ಬೆಟ್ಟಗುಡ್ಡಗಳಿಂದ ಕೂಡಿದ ಕಡಿಮೆ ಫಲವತ್ತತೆಯ ತುಂಡು ಭೂಮಿ

೨. ಪ್ರಾಚೀನ ವ್ಯವಸಾಯ ಪದ್ಧತಿಯ

೩. ಮಳೆ ಆಧಾರಿತ ವ್ಯವಸಾಯ ಹಾಗೂ ನೀರಾವರಿ ಸೌಕರ್ಯಗಳ ಕೊರತೆ

ಈ ಕಾರಣದಿಂದ ೫ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಪ್ರದೇಶದಲ್ಲಿ ವ್ಯವಸಾಯದ ಅಭಿವೃದ್ಧಿಗೋಸ್ಕರ ಹಾಗೂ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ದೃಷ್ಟಿಯಿಂದ ವ್ಯವಸಾಯದಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಲಾಯಿತು. ನೀರಾವರಿ ಸೌಕರ್ಯಗಳನ್ನು ಒದಗಿಸುವುದಕಕ್ಕೋಸ್ಕರ ಹೆಚ್ಚಿನ ಭಂಡವಾಳವನ್ನು ಹೂಡಲಾಯಿತು. ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದ ಹಳೆಯ ಉಪಕರಣಗಳನ್ನು ಬದಲಾಯಿಸಿ, ಹೊಸ ವೈಜ್ಞಾನಿಕ

ಉಪಕರಣಗಳ ಬಳಕೆಗೆ ಪ್ರೋತ್ಸಾಹಿಸಲಾಯಿತು. ವ್ಯವಸಾಯ ಕ್ಷೇತ್ರದಲ್ಲಿ ಬುಡಕಟ್ಟು ಮಹಿಳೆಯರು ಪ್ರಮುಖ ಪಾತ್ರವಹಿಸಿದ್ದರು.

೩.೧೭.೬. ಆರನೆಯ ಪಂಚವಾರ್ಷಿಕ ಯೋಜನೆ (೧೯೮೦-೮೫):

೪ನೇ ಪಂಚವಾರ್ಷಿಕ ಯೋಜನೆಯ ಹೊತ್ತಿಗೆ ಕೇವಲ ಶೇ.೪೦ ರಷ್ಟು ದೇಶದ ಬುಡಕಟ್ಟು ಜನರು ಮಾತ್ರ ಪ್ರಯೋಜನ ಪಡೆದಿದು, ಹಲವಾರು ವಿಶೇಷ ಉಪಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದರಿಂದ, ೫ನೇ ಪಂಚವಾರ್ಷಿ ಯೋಜನೆ ಅವಧಿಯಲ್ಲಿ ಶೇ.೬೫ ರಷ್ಟು ಬುಡಕಟ್ಟಿನವರು ಪ್ರಯೋಜನ ಪಡೆದಿರುತ್ತಾರೆ. ದೇಶದ ಉಳಿದ ಶೇ.೩೫ ರಷ್ಟು ಹರಿದು ಹಂಚಿ ಹೋಗಿರುವ ಬುಡಕಟ್ಟು ಜನರ ಸಮಸ್ಯೆಗಳಿಗೆ ಯಾವುದೇ ವಿಶೇಷ ಆಸಕ್ತಿಯನ್ನು ನೀಡಿರುವುದಿಲ್ಲ.

೬ನೇ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಶೇಕಡ ೫೦ಕ್ಕಿಂತ ಹೆಚ್ಚು ಬುಡಕಟ್ಟು ಜನರು ಬಡತನ ರೇಖೆಯನ್ನು ದಾಟಿ ಉತ್ತಮ ಜೀವನ ನಡೆಸುವ ವ್ಯವಸ್ಥೆಯನ್ನು ಕಲ್ಪಿಸುವ ಗುರಿಯನ್ನು ಹೊಂದಿತ್ತು. ಆ ಕಾರಣಕ್ಕಾಗಿ ದೇಶಾದ್ಯಂತ ಬುಡಕಟ್ಟು ಪ್ರದೇಶಗಳಲ್ಲಿ ಗಿರಿಜನ ಉಪ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸುಮಾರು ೧೮೦ ಸಮಗ್ರ ಬುಡಕಟ್ಟು ಯೋಜನೆ (ಐ.ಟಿ.ಡಿ.ಪಿ.) ಕೇಂದ್ರಗಳನ್ನು ಸ್ಥಾಪಿಸಲಾಯಿತು.

ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಜನರ ಮೇಲೆ ಆಗುತ್ತಿದ್ದ ಎಲ್ಲಾ ರೀತಿಯ ಶೋಷಣೆಯನ್ನು ನಿಲ್ಲಿಸುವುದಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ. ಇದರ ಜೊತೆಯಲ್ಲಿ ಕೃಷಿ ಮತ್ತು ಕೃಷಿಗೆ ಸಂಬಂಧಪಟ್ಟ ಸಣ್ಣ ನೀರಾವರಿ, ಸಹಕಾರ, ಮಾರುಕಟ್ಟೆ ಮತ್ತು ಇತರೆ ಸಾಮಾಜಿಕ ಸೇವೆಗಳಗೂ ಆದ್ಯತೆ ನೀಡಲಾಯಿತು.

೫ ನೇ ಪಂಚವಾರ್ಷಿಕ ಯೋಜನೆಯಲ್ಲಿ ದೇಶದ ೧೬ ರಾಜ್ಯಗಳು ಮತ್ತು ೨ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಾತ್ರ ಗಿರಿಜನ ಉಪ ಯೋಜನೆಯ ಕಾರ್ಯಕ್ರಮಗಳು ಅನುಷ್ಠಾನಗೊಂಡಿದ್ದವು. ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಿಕ್ಕಿಂ ರಾಜ್ಯವನ್ನು ಸೇರಿಸಿದ್ದಲ್ಲದೇ ಈ ಅವಧಿಯಲ್ಲಿ ೨ ಎಂ.ಎ.ಡಿ.ಎ. ಪಾಕೇಟ್‌ಗಳನ್ನು ಗುರುತಿಸಿರುವುದು ಪ್ರಮುಖ ಸಾಧನೆಯಾಗಿತ್ತು. ಇದರ ಜೊತೆಗೆ ಇನ್ನೂ ೨೦ ಆದಿವಾಸಿ ಪಂಗಡಗಳನ್ನು ಗುರುತಿಸಲಾಯಿತು. ಈ ಯೋಜನೆಯ ೪ನೇ ವರ್ಷದ ಕೊನೆಯಲ್ಲಿ ೧೮೧ ಐ.ಟಿ.ಡಿ.ಪಿ.ಗಳು ಹಾಗೂ ೨೪೫ ಎಂ.ಎ.ಡಿ.ಎ. ಪಾಕೇಟ್‌ಗಳು ಮತ್ತು ೭೨ ಆದಿವಾಸಿ ಪಂಗಡಗಳ ವಿಶೇಷ ಯೋಜನೆಗಳು ದೇಶಾದ್ಯಂತ ಕಾರ್ಯಗತವಾದವು.

೩.೧೭.೭. ಏಳನೆಯ ಪಂಚವಾರ್ಷಿಕ ಯೋಜನೆ (೧೯೮೫-೯೦):

೧ ರಿಂದ ೭ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ೧೭ ರಾಜ್ಯಗಳಲ್ಲಿ ೨ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸುಮಾರು ಶೇ. ೭೫ ರಷ್ಟು ಬುಡಕಟ್ಟು ಜನರು ಗಿರಿಜನ ಉಪ ಯೋಜನೆಯ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಉಳಿದ ಶೇ.೨೫ರಷ್ಟು ಬುಡಕಟ್ಟು ಜನರು ಈ ಗಿರಿಜನ ಉಪ ಯೋಜನೆಯಿಂದ ಹೊರಗೆ ಉಳಿದಿದ್ದು ಅವರ ಸ್ಥಿತಿಗತಿಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿದೆ. ಉತ್ತರ ಪ್ರದೇಶದಲ್ಲಿರುವ ಬಹುಸಂಖ್ಯಾತ ಬುಡಕಟ್ಟು ಜನರು ಈ ಗಿರಿಜನ ಉಪ ಯೋಜನೆಯಿಂದ ಹೊರಗೆ ಉಳಿದಿರುತ್ತಾರೆ (ಶೇ.೮೭.೯೪). ಸಿಕ್ಕಿಂ (ಶೇ೮೯.೯೨), ಕೇರಳ (ಶೇ.೮೨.೪೯), ಪಶ್ಚಿಮ ಬಂಗಾಳ (ಶೇ.೬೧.೧೯), ಇನ್ನುಳಿದ ರಾಜ್ಯಗಳಲ್ಲಿ ಶೇ. ೫೦ಕ್ಕಿಂತ ಹೆಚ್ಚು ಬುಡಕಟ್ಟು ಜನರು ಗಿರಿಜನ ಉಪ ಯೋಜನೆಯಿಂದ ಪ್ರಯೋಜನ ಪಡೆಯದೆ ಹೊರಗೆ ಉಳಿದಿರುತ್ತಾರೆ.

ವಾರ್ಷಿಕ ಯೋಜನೆ ೧೯೯೦-೯೧ ರಿಂದ ೧೯೯೧-೯೨, ೮ನೇ ಪಂಚವಾರ್ಷಿಕ ಯೋಜನೆ (೧೯೯೨-೯೭), ೯ನೇ ಪಂಚವಾರ್ಷಿಕ ಯೋಜನೆ (೧೯೯೭-೨೦೦೨) ಮತ್ತು ೧೦ನೇ ಪಂಚವಾರ್ಷಿಕ ಯೋಜನೆ (೨೦೦೨-೦೭)ಗಳಲ್ಲಿಯೂ ಬುಡಕಟ್ಟುಗಳ ಅಭಿವೃದ್ಧಿಗಾಗಿ ವಿಶೇಷ ಕಾಳಜಿ ವಹಿಸಲಾಗಿದೆ. ಶೇಕಡ ೫೦ಕ್ಕಿಂತ ಹೆಚ್ಚಿಗೆ ಜನಸಂಖ್ಯೆ ಹೊಂದಿರುವ ಬುಡಕಟ್ಟು ಜನರ ಪ್ರದೇಶವನ್ನು ಗುರುತಿಸಿ, ಅವರ ಅಭಿವೃದ್ಧಿಗಾಗಿ ಗಿರಿಜನರ ಉಪಯೋಜನೆಯನ್ನು ಎಲ್ಲೆಡೆ ವಿಸ್ತರಿಸಲಾಯಿತು. ಈ ಯೋಜನೆಯಿಂದ ದೇಶದ ೨/೩ ಭಾಗದ ಬುಡಕಟ್ಟು ಜನರು ಮಾತ್ರ ಅಭಿವೃದ್ಧಿ ಹೊಂದಲು ಸಾಧ್ಯವಾಯಿತು. ಉಳಿದ ೧/೩ ಭಾಗದ ಬುಡಕಟ್ಟಿನವರು ಈ ಯೋಜನೆಯ ಹೊರಗೆ ಉಳಿದಿರುವುದು ದಾಖಲಾತಿಗಳಿಂದ ದೃಢಪಟ್ಟಿದೆ. ಭಾರತ ಸ್ವತಂತ್ರ ಹೊಂದಿ ಅರ್ಧ ಶತಮಾನ ಕಳೆದರೂ ಬುಡಕಟ್ಟುಗಳ ಅಭಿವೃದ್ಧಿಯ ಕಾರ್ಯ ಕುಂಟುತ್ತಾ ಸಾಗಿರುವುದನ್ನು ಮನಗಂಡು ಭಾರತ ಸರ್ಕಾರ ಬುಡಕಟ್ಟುಗಳ ಅಭಿವೃದ್ಧಿಗೆಂದೇ ಪ್ರತ್ಯೇಕ ಬುಡಕಟ್ಟು ವ್ಯವಹಾರಗಳ ಸಚಿವಾಲಯ (Ministry of Tribal Affairs) ಒಂದನ್ನು ೧೯೯೯ನೇ ಅಕ್ಟೋಬರ್ ತಿಂಗಳಲ್ಲಿ ಹೊಸದಾಗಿ ರಚಿಸಿತು. ಈ ಹಿಂದೆ ಈ ಖಾತೆಯನ್ನು ಸಾಮಾಜಿಕ ನ್ಯಾಯ ಮತ್ತು ಸ್ವಾಧಿಕಾರ ಸಚಿವಾಲಯ (Ministry of Social Justice and empowerment) ನೋಡಿಕೊಳ್ಳುತ್ತಿತ್ತು. ಬುಡಕಟ್ಟು ಜನರ ಸರ್ವತೋಮುಖ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಲ್ಲಿ ಪ್ರತ್ಯೇಕ ಸಚಿವಾಲಯ ಮತ್ತು ನಿರ್ದೇಶನಾಲಯಗಳಿದ್ದು, ಇವು ಇತ್ತೀಚಿನ ದಿನದಲ್ಲಿ ಬುಡಕಟ್ಟುಗಳ ಸಮಸ್ಯೆಗಳನ್ನು ಬಗೆಹರಿಸಲು ಅವರ ಜೀವನ ಮಟ್ಟವನ್ನು ಸುಧಾರಿಸಲು ಹಲವಾರು ವಿನೂತನ ಯೋಜನೆಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಈ ತರಹದ ಪ್ರತ್ಯೇಕ

ಬುಡಕಟ್ಟುಗಳ ವ್ಯವಹಾರಗಳ ಖಾತೆಯನ್ನು ನೋಡಿಕೊಳ್ಳಲು ಬುಡಕಟ್ಟುಗಳಿರುವ ಪ್ರತಿ ರಾಜ್ಯಗಳಲ್ಲಿಯೂ ಸಚಿವಾಲಯ ರಚಿಸುವುದು ಅವಶ್ಯಕ. ೧೯೯೦ರಲ್ಲಿ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಆಯೋಗವನ್ನು ಪರಿಶಿಷ್ಟರ ಅಭಿವೃದ್ಧಿಗಾಗಿ ನವದೆಹಲಿಯಲ್ಲಿ ಸ್ಥಾಪಿಸಲಾಗಿದೆ. ಆದರೂ, ಗಣನೀಯ ಪ್ರಮಾಣದಲ್ಲಿ ಬುಡಕಟ್ಟು ಅಭಿವೃದ್ಧಿ ಸಾಧಿಸದೇ ಇರುವುದು ದಾಖಲೆಗಳಿಂದ ದೃಢಪಟ್ಟಿರುವುದರಿಂದ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಹೆಚ್ಚು ಒತ್ತು ಕೊಡಲು ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಆಯೋಗವನ್ನು ಬೇರ್ಪಡಿಸಿ, ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿಯೇ ಪ್ರತ್ಯೇಕ ರಾಷ್ಟ್ರೀಯ ಆಯೋಗ ಸ್ಥಾಪನೆಯಾಗಿರುವುದು ಸ್ವಾಗತಾರ್ಹ.

೩.೧೪. ಕಾನೂನು ನೆರವಿನ ಯೋಜನೆಗಳು

೩.೧೪.೧. ನಾಗರಿಕ ಹಕ್ಕು ಸಂರಕ್ಷಣೆ ಕಾಯ್ದೆ:

ಅಸ್ಪೃಶ್ಯತೆ ಆಚರಣೆ ಅಪರಾಧ ಮತ್ತು ಶಿಕ್ಷಾರ್ಹ, ಇಂತಹ ಪ್ರಕರಣ ಕಂಡು ಬಂದಲ್ಲಿ ಸಮೀಪದ ಆರಕ್ಷಕ ಠಾಣೆ ಸಂಪರ್ಕಿಸುವುದು.

೩.೧೪.೨. ದೌರ್ಜನ್ಯಕ್ಕೆ ಒಳಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಸಂತ್ರಸ್ತರಿಗೆ ಪರಿಹಾರ:

ದೌರ್ಜನ್ಯ ಕಾಯ್ದೆ ೧೯೮೯ ಹಗೂ ೧೯೯೫ರ ನಿಯಮದ ಅನ್ವಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಗಳವರ ದೌರ್ಜನ್ಯ ಪ್ರಕರಣಗಳಲ್ಲಿ ನೊಂದ ಸಂತ್ರಸ್ತರಿಗೆ ಪರಿಹಾರ, ಪುನರ್ವಸತಿ ಕಲ್ಪಿಸುವ ಸಲುವಾಗಿ ಈ ಯೋಜನೆಯನ್ನು ರೂಪಿಸಿದೆ.

ಪರಿಹಾರ ಮಂಜೂರು ಮಾಡುವ ಪೂರ್ಣ ಅಧಿಕಾರವು ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ನೀಡಲಾಗಿದ್ದು, ಪರಿಹಾರ ನೀಡುವಾಗ ಜೀವ/ಆಸ್ತಿಗಳ ನಷ್ಟವನ್ನು ಜಿಲ್ಲಾ ಆರಕ್ಷಕ ಅಧಿಕಾರಿಗಳಿಂದ ಅಂದಾಜು ಪಡೆದು ಜಿಲ್ಲಾಧಿಕಾರಿಗಳು ಮಂಜೂರು ಮಾಡುವರು.

೩.೧೪.೩. ಪರಿಹಾರದ ವಿವರಗಳು:

೧. **ಅಧಿನಿಯಮದ ಸೆಕ್ಷನ್ (ಸೆ.3(1) (i)** :ಖಾದ್ಯವಲ್ಲದ ಅಥವಾ ಅಸಹ್ಯಕರವಾದ ಯಾವುದೇ ಪದಾರ್ಥಗಳನ್ನು ತಿನ್ನುವುದಕ್ಕೆ ಅಥವಾ ಕುಡಿಯುವುದಕ್ಕೆ ಬಲಾತ್ಕರಿಸುವುದು.

೨. **ಅಧಿನಿಯಮದ ಸೆಕ್ಷನ್ (ಸೆ. 3 (1) (ii):**ಗಾಯ ಗೊಳಿಸುವುದು, ಅವಮಾನ, ಕಿರುಕುಳ ನೀಡುವುದು.

೩. **ಅಧಿನಿಯಮದ ಸೆಕ್ಷನ್ (ಸೆ. 3. (1) (iii):** ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಸದಸ್ಯರ ಮೈಮೇಲಿನ ಬಟ್ಟೆಯನ್ನು ಬಲ್ಕಾರವಾಗಿ ಕಳಚಿದರೆ, ಮುಖಕ್ಕೆ ಅಥವಾ ಶರೀರಕ್ಕೆ ಬಣ್ಣ ಬಳಿದು ಮೆರೆಸಿದರೆ ಹಾಗೂ ಘನತೆಗೆ ಕುಂದುಂಟು ಮಾಡಿದರೆ.

೪. **ಅಧಿನಿಯಮದ ಸೆಕ್ಷನ್ (ಸೆ. 3 (1) (iv)** :ಜಮೀನು ಇತ್ಯಾದಿಗಳ ಅಕ್ರಮ ಸ್ವಾಧಿನ ಮತ್ತು ಸಾಗುವಳಿಯನ್ನು ತಡೆಗಟ್ಟಿದರೆ ಹಾಗೂ ಕಿರುಕುಳದಿಂದ ಆಕ್ರಮಿಸಿಕೊಂಡರೆ.

೫. **ಅಧಿನಿಯಮದ ಸೆಕ್ಷನ್(ಸೆ.3(1)(v)**:ಜಮೀನು, ಆವರಣ ಮತ್ತು ನೀರು ಅನುಭೋಗದ ಹಕ್ಕನ್ನು ಅಡ್ಡಿಪಡಿಸಿದರೆ.

೬. **ಅಧಿನಿಯಮದ ಸೆಕ್ಷನ್ (ಸೆ. 3 (1) (vi)**:ಬೇಗಾರ್ ಅಥವಾ ಜೀತಕ್ಕೆ ಒತ್ತಾಯಿಸುವುದು.

೭. **ಅಧಿನಿಯಮದ ಸೆಕ್ಷನ್ (ಸೆ. 3 (1) (vii)** :ಮತ ಚಲಾಯಿಸುವುದಕ್ಕೆ ಸಂಬಂಧಪಟ್ಟಂತೆ ಅಡ್ಡಿಪಡಿಸುವುದು, ಬೆದರಿಸುವುದು.

೮. **ಅಧಿನಿಯಮದ ಸೆಕ್ಷನ್(ಸೆ. 3 (1) (viii)**:ಸುಳ್ಳಿನ ಕೃತ್ರಿಮ ಅಥವಾ ಕಿರುಕುಳದಿಂದ ಕೂಡಿದ ಕಾನೂನು ವ್ಯವಹಾರಗಳು.

೯. **ಅಧಿನಿಯಮದ ಸೆಕ್ಷನ್ (ಸೆ. ೩ (೧) (ix)**:ಸುಳ್ಳು ಅಥವಾ ತಿರುಳಿಲ್ಲದ ಮಾಹಿತಿ ಸೃಷ್ಟಿ.

೧೦. **ಅಧಿನಿಯಮದ ಸೆಕ್ಷನ್ (ಸೆ. 3 (1) (x)**:ಅವಮಾನ, ತೇಜೋವಧೆ. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರ ಮೇಲೆ, ಕ್ರಮ ಸಂಖ್ಯೆ (೭) ಮತ್ತು (೮)ನ್ನು ಹೊರತುಪಡಿಸಿ ಕ್ರ.ಸಂ. ೧ರಿಂದ ೧೦ರವರೆಗೆ ಅಪರಾಧವನ್ನೆಸಗಿರುವುದು ಕಂಡುಬಂದಲ್ಲಿ ದೌರ್ಜನ್ಯದ ಸ್ವರೂಪ ಮತ್ತು ತೀವ್ರತೆಯನ್ನನುಸರಿಸಿ ಸಂತ್ರಸ್ತರಿಗೆ ರೂ. ೨೫,೦೦೦ಗಳವರೆಗೆ ಪರಿಹಾರವನ್ನು ಜಿಲ್ಲಾಧಿಕಾರಿಗಳು ಮಂಜೂರು ಮಾಡುವರು. ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ತರುವಾಯ ನಂತರದ ಭಾಗ ಪಾವತಿಸಲಾಗುವುದು.

೧೧. **ಅಧಿನಿಯಮದ ಸೆಕ್ಷನ್ (ಸೆ. 3 (1) (xi)**:ಮಹಿಳೆಯನ್ನು ಲೈಂಗಿಕ ಶೋಷಣೆಗೆ ಒಳಪಡಿಸುವುದು. ದೌರ್ಜನ್ಯಕ್ಕೊಳಪಟ್ಟ ಮಹಿಳೆಯರಿಗೆ ರೂ. ೫೦,೦೦೦ ಪರಿಹಾರ ದೃಢಪಟ್ಟಾಗ ಶೇ. ೫೦ ಭಾಗ ಹಾಗೂ ಬಾಕಿ ಶೇ. ೫೦ ಭಾಗ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿದ ನಂತರ ನೀಡಲಾಗುವುದು.

೧೨. **ಅಧಿನಿಯಮದ ಸೆಕ್ಷನ್ (ಸೆ. 3 (1) (xiii)**:ನೀರನ್ನು ಮಲೀನಗೊಳಿಸುವುದು. ರೂ. ೧,೦೦,೦೦೦ಗಳ ಪರಿಹಾರ ಅಥವಾ ಪೂರ್ಣ ನೀರಿನ ಶುದ್ಧೀಕರಣಕ್ಕಾಗಿ ಹಾಗೂ ಮೊದಲಿನ ಸ್ಥಿತಿಗೆ ತರಲು ತಗಲುವ ವೆಚ್ಚವನ್ನು ಜಿಲ್ಲಾಡಳಿತವು ಸೂಕ್ತವೆಂದು ನಿರ್ಧರಿಸುವ ಹಂತದಲ್ಲಿ ಪಾವತಿಮಾಡಲಾಗುವುದು.

೧೩. **ಅಧಿನಿಯಮದ ಸೆಕ್ಷನ್ (ಸೆ. 3 (1) (xiv):** ಸಾಂಪ್ರದಾಯಿಕವಾಗಿ ಇರುವ ದಾರಿಯ ಹಕ್ಕಿನ ನಿರಾಕರಣೆ. ರೂ.೧,೦೦,೦೦೦ಗಳ ವರೆಗೆ ಅಥವಾ ಕ್ರಮಿಸುವ ಮಾರ್ಗವನ್ನು ಪುನರ್‌ವ್ಯವಸ್ಥೆ ಮಾಡಲು ಹಾಗೂ ನಷ್ಟವನ್ನು ತುಂಬಲು ಅವಶ್ಯಕವಾದಷ್ಟು ಸಂಪೂರ್ಣ ಪರಿಹಾರ ಮೊತ್ತವನ್ನು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಭರಿಸಲಾಗುವುದು.

೧೪. **ಅಧಿನಿಯಮದ ಸೆಕ್ಷನ್ (ಸೆ. 3 (1) (xv):**ವಾಸಸ್ಥಳವನ್ನು ನಾಶಪಡಿಸುವುದು. ನಿವೇಶನ, ವಾಸಿಸುವ ವ್ಯವಸ್ಥೆಯನ್ನು ಪುನಃ ಕಲ್ಪಿಸುವುದು ಮತ್ತು ದೌರ್ಜನ್ಯಕ್ಕೆ ಒಳಪಟ್ಟಿದ್ದರೆ ಒಬ್ಬರಿಗೆ ರೂ. ೨೫,೦೦೦ ಪರಿಹಾರ ಮತ್ತು ಮನೆಯನ್ನು ನಾಶಪಡಿಸಿದ್ದರೆ ಸರ್ಕಾರಿ ವೆಚ್ಚದಲ್ಲಿ ಪುನಃ ಮನೆ ನಿರ್ಮಿಸಿಕೊಡುವುದು. ಕೆಳಗಿನ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ ನಂತರ ಪೂರ್ಣ ಹಣ ನೀಡುವುದು.

೧೫. **ಅಧಿನಿಯಮದ ಸೆಕ್ಷನ್ (ಸೆ. 3 (2) (i) ಮತ್ತು (ii):**ಸುಳ್ಳು ಸಾಕ್ಷಿ ನೀಡಿದಲ್ಲಿ ಕನಿಷ್ಠ ರೂ.೧,೦೦,೦೦೦ ಅಥವಾ ನಷ್ಟ ಸಂಭವಿಸಿದಷ್ಟು ಪ್ರಮಾಣದ ನ್ಯಾಯಾಲಯಕ್ಕೆ ಸಲ್ಲಿಸಿದ ನಂತರ ಸಂಪೂರ್ಣ ಮೊತ್ತ ನೀಡಲಾಗುವುದು.

೧೬. **ಅಧಿನಿಯಮದ ಸೆಕ್ಷನ್ (ಸೆ. 3 (2) (v):**ಭಾತೀಯ ದಂಡ ಸಂಹಿತೆಯ ಮೇರೆಗೆ ೧೦ವರ್ಷ ಅಥವಾ ಅದಕ್ಕೂ ಹೆಚ್ಚು ಕಾರಾಗೃಹ ವಾಸ ಶಿಕ್ಷೆಗೆ ಒಳಪಟ್ಟ ಘಟನೆ. ದೌರ್ಜನ್ಯಕ್ಕೆ ಗುರಿಯಾದ ಪ್ರತಿಯೊಬ್ಬ ವ್ಯಕ್ತಿ ಅಥವಾ ಅವಲಂಭಿತರಿಗೆ, ಅಪರಾದದ ಸ್ವರೂಪ ಮತ್ತು ತೀವ್ರತೆ ಅನುಸರಿಸಿ, ಕನಿಷ್ಠ ರೂ. ೫೦,೦೦೦ ಪಾವತಿ, ಅನುಸೂಚಿಯಲ್ಲಿ ನಿರ್ಧಿಷ್ಟವಾಗಿ ವ್ಯತ್ಯಾಸದ ಮೊಬಲಗು ತಿಳಿಸಿದ್ದಲ್ಲಿ ಪರಿಹಾರ ಮೊತ್ತವು ವ್ಯತ್ಯಾಸಗೊಳ್ಳುವುದು.

೧೭. **ಅಧಿನಿಯಮದ ಸೆಕ್ಷನ್ (ಸೆ. 3 (2) (vii):** ಸರ್ಕಾರಿ ಸೇವಕನಿಂದ ಕಿರುಕುಳ ಸಂಭವಿಸಿದ ಹಾನಿ ಮತ್ತು ನಷ್ಟಕ್ಕೆ ಪೂರ್ಣ ಪರಿಹಾರ ಮೊತ್ತವನ್ನು ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಕ್ಕೆ ಸಲ್ಲಿಸಿದ ನಂತರ ನೀಡಲಾಗುವುದು.

೧೮. **ಅಸಮರ್ಥತೆ:**ದೈಹಿಕ ಮತ್ತು ಮಾನಸಿಕ ಅಸಮರ್ಥತೆಯ ಪರಿಭಾಷೆಯನ್ನು ಭಾರತ ಸರ್ಕಾರದ ಕಲ್ಯಾಣ ಮಂತ್ರಾಲಯ ಕಾಲಕಾಲಕ್ಕೆ ಹೊರಡಿಸುವ ಅಧಿಸೂಚನೆಯಂತೆ (ಎ) ಶೇ. ೧೦೦ರಷ್ಟು ಅಸಮರ್ಥತೆ ಉಂಟಾದರೆ (i) ದುಡಿಯದೆ ಇರುವ ಸದಸ್ಯ ಆಗಿದ್ದಲ್ಲಿ: ಅಸಮರ್ಥತೆಗೆ ತುತ್ತಾದ ಪ್ರತಿಯೊಬ್ಬನಿಗೆ ಕನಿಷ್ಠ ೧,೦೦,೦೦೦ ರೂ. (ii)

ಕುಟುಂಬದಲ್ಲಿ ದುಡಿಯುವ ಸದಸ್ಯ ಆಗಿದ್ದಲ್ಲಿ: ಅಸಮರ್ಥತೆಗೆ ತುತ್ತಾದ ಸಂತ್ರಸ್ತರಲ್ಲಿ ಪ್ರತಿಯೊಬ್ಬರಿಗೂ ಕನಿಷ್ಠ ೨,೦೦,೦೦೦. (i) ಮತ್ತು (ii)ರ ಪ್ರಕರಣಗಳಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ನಂತರ ಶೇ. ೧೦೦ ಹಣ ಪಾವತಿಸಲಾಗುವುದು. (ಬ) ಅಸಮರ್ಥತೆಯು ಶೇ. ೧೦೦ಕ್ಕಿಂತ ಕಡಿಮೆಯಾಗಿರುವಾಗ: ದುಡಿಯದೇ ಇರುವ ಸದಸ್ಯನಿಗೆ ರೂ. ೧೫,೦೦೦ಕ್ಕಿಂತ ಕಡಿಮೆ ಇಲ್ಲದಂತೆ ಇರುವ ಸದಸ್ಯನಿಗೆ ರೂ.೧೫,೦೦೦ಕ್ಕಿಂತ ಕಡಿಮೆ ಇಲ್ಲದಂತೆ ಮತ್ತು ದುಡಿಯುವ ಸದಸ್ಯರಿಗೆ ರೂ. ೩೦,೦೦೦ಕ್ಕಿಂತ ಕಡಿಮೆ ಇಲ್ಲದಂತೆ ಮೇಲೆ ಎ-(i) ಮತ್ತು (ii)ರಲ್ಲಿ ತಿಲಿಸಿರುವ ನಿಬಂಧನೆಯಂತೆ ಸಂದಾಯ ಮಾಡಲಾಗುವುದು.

೧೯. **ಕೊಲೆ/ಸಾವು**ಕುಟುಂಬದ ದುಡಿಯದೇ ಇರುವ ಸದಸ್ಯನಾಗಿದ್ದಲ್ಲಿ: ಪ್ರತಿಯೊಂದು ಪ್ರಕರಣದಲ್ಲಿ ಕನಿಷ್ಠ ರೂ. ೧,೦೦,೦೦೦ಗಳು ಪರಿಹಾರ (ಬಿ) ಕುಟುಂಬದ ದುಡಿಯುವ ಸದಸ್ಯನಾಗಿದ್ದಲ್ಲಿ: ಕನಿಷ್ಠ ರೂ. ೨,೦೦,೦೦೦ಗಳ ಪರಿಹಾರ. ಮೇಲಿನ (ಎ) ಮತ್ತು (ಬಿ) ಮರಣೋತ್ತರ ಪರೀಕ್ಷೆಯ ನಂತರ ಶೇ. ೭೫% ರಷ್ಟು ಮತ್ತು ನ್ಯಾಯಾಲಯದಲ್ಲಿ ದೋಷಾರೋಪನ ಪಟ್ಟಿ ಸಲ್ಲಿಸಿದ ನಂತರ ಶೇ.೨೫% ಪಾವತಿಸಲಾಗುವುದು.

೨೦. **ಮರಣ, ಕೊಲೆ, ಕಗ್ಗೊಲೆ, ಅತ್ಯಾಚಾರ, ಸಾಮೂಹಿಕ ಅತ್ಯಾಚಾರ, ಗುಂಪಿನ ಅತ್ಯಚಾರದಿಂದ ಶಾಶ್ವತ ಸಮರ್ಥತೆ ಮತ್ತು ದರೋಡೆ ಉಂಟಾದಲ್ಲಿ:**ಮೇಲ್ಕಾಣಿಸಿದ ಬಾಬುಗಳಲ್ಲಿ ಸೂಚಿಸಿದಂತಹ ಪರಿಹಾರ ಮೊತ್ತವನ್ನು ಪಾವತಿಸುವುದರ ಜೊತೆಗೆ ದೌರ್ಜನ್ಯ ನಡೆದ ದಿನದಿಂದ ೩ ತಿಂಗಳ ಒಳಗಾಗಿ ಪರಿಹಾರವನ್ನು ಈ ಕೆಳಗಿನಂತೆ ನೀಡುವುದು.

೧.ಪರಿಶಿಷ್ಟ ಜಾತಿ ಬುಡಕಟ್ಟುಗಳ ಮೃತನ ವಿಧವೆಗೆ ಮತ್ತು ಇತರೆ ಅವಲಂಬಿತರಿಗೆ ಪ್ರತಿ ತಿಂಗಳು ರೂ.೧,೦೦೦.ಗಳ ಪಿಂಚಣಿ ಅಥವಾ ಮೃತನ ಕುಟುಂಬದ ಒಬ್ಬ ಸದಸ್ಯನಿಗೆ ಉದ್ಯೋಗ ಅಥವಾ ಕೃಷಿ, ಜಮೀನು, ಒಂದು ಮನೆ ಹಂಚಿಕೆ ಅಗತ್ಯವಿದ್ದಲ್ಲಿ ಖರೀದಿಸಿ ನೀಡುವುದು.

೨.ಸಂತ್ರಸ್ತರ ಮಕ್ಕಳಿಗೆ ಪೂರ್ಣ ರಕ್ಷಣೆ ಮತ್ತು ಪೋಷಣೆ, ಮಕ್ಕಳನ್ನು ಆಶ್ರಮ ಶಾಲೆಗೆ ಅಥವಾ ವಸತಿ ಶಾಲೆಗಳಿಗೆ ಸೇರಿಸಿಕೊಳ್ಳಬಹುದು.

೩.೩ ತಿಂಗಳ ಅವಧಿ ವರೆಗೆ ಪಾತ್ರೆ, ಅಕ್ಕಿ, ಬೇಳೆ, ಗೋಧಿ, ಧಾನ್ಯ ಇತ್ಯಾದಿಗಳ ಪೂರೈಕೆ. ಮೇಲಿನ ಪ್ರಕರಣಗಳಲ್ಲಿ ಆರೋಪಿತರಿಗೆ ಕಾರಗೃಹ ವಾಸ ಹಾಗೂ ಜುಲ್ಮಾನೆಯನ್ನು ನಿಯಮಾನುಸಾರ ದಂಡನೆಗೆ ಗುರಿಪಡಿಸಲಾಗುತ್ತದೆ."

ಈ ಮೇಲಿನ ವಿಷಯಗಳಿಗೆ ಸಂಪರ್ಕಾಧಿಕಾರಿಗಳು, ಜಿಲ್ಲಾಧಿಕಾರಿಗಳು, ಉಪ ಆರಕ್ಷಕ ಅಧೀಕ್ಷಕರು, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ತಾಲೂಕು ಸಮಾಜ ಕಲ್ಯಾಣಾಧಿಕಾರಿಗಳನ್ನು ಭೇಟಿ ಮಾಡಬಹುದು.

೩.೧೮.೪. ಉನ್ನತ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ:

ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ (ದೌರ್ಜನ್ಯ ನಿಯಂತ್ರಣ) ನಿಯಮ ೧೯೯೫ರಡಿಯ ಈ ಸಮಿತಿಯಲ್ಲಿ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿದ್ದು ೨೫ ಜನ ಸದಸ್ಯರನ್ನೊಳಗೊಂಡ ಉನ್ನತ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯನ್ನು ಆದೇಶ ಸಂಖ್ಯೆ: ಸಕಇ೧೩ ಪಕರ್ವಿ೮, ದಿನಾಂಕ:೨೦.೦೨.೨೦೦೦ರಂದು ರಚಿಸಲಾಗಿದೆ. ಸದರಿ ಸಮಿತಿಯ ಪ್ರತಿ ಸಮಿತಿಯ ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ೨ ಬಾರಿ ಜನವರಿ ಮತ್ತು ಜುಲೈ ತಿಂಗಳುಗಳಲ್ಲಿ ಸಭೆ ಸೇರಿ ದೌರ್ಜನ್ಯ ನಿಯಂತ್ರಣ ಕಾಯ್ದೆಯ ಅನುಷ್ಠಾನ, ದೌರ್ಜನ್ಯದಲ್ಲಿ ನೊಂದ ಸಂತ್ರಸ್ತರಿಗೆ ಪರಿಹಾರ ಮತ್ತು ಪುನರ್ವಸತಿ ಮತ್ತು ಇದಕ್ಕೆ ಸಂಬಂಧಿಸಿದ ಇತರ ವಿಷಯಗಳ ಬಗ್ಗೆ ಚರ್ಚಿಸುತ್ತದೆ. ಹಾಗೂ ಈ ನಿಯಮದಡಿ ಆಪಾದಿತ ವ್ಯಕ್ತಿಗಳಿಗೆ ನೀಡುವ ಶಿಕ್ಷೆ, ಇತರೇ ಅಧಿಕಾರಿಗಳ ಪಾತ್ರ, ನಿಯಮದ ಅನುಷ್ಠಾನದ ಬಗ್ಗೆ ಸಕ್ಷಮ ಪ್ರಾಧಿಕಾರಗಳಿಂದ ಬರುವ ಅನೇಕ ವರದಿಗಳ ಬಗ್ಗೆ ವಿಸ್ತೃತವಾದ ಚರ್ಚೆಯಾಗುತ್ತದೆ.

೩.೧೮.೫. ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ:

ಅನಿಸೂಚಿತ ಜಾತಿ/ ಅನುಸೂಚಿತ ಪಂಗಡಗಳ (ದೌರ್ಜನ್ಯ ನಿಯಂತ್ರಣ) ನಿಯಮ ೧೯೯೫ರ ನಿಯಮ ೧೭ರಡಿಯಲ್ಲಿ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯನ್ನು ರಚಿಸಲಾಗಿದ್ದು, ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಈ ಸಭೆ ೩ ತಿಂಗಳಿಗೊಮ್ಮೆ ನಡೆಯುತ್ತದೆ. ಈ ಸಭೆಯಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು ಸಂಸತ್ತಿನ ಚುನಾಯಿತ ಪ್ರತಿನಿಧಿಗಳು/ರಾಜ್ಯ ವಿಧಾನಸಭಾ ಹಾಗೂ ವಿಧಾನಪರಿಷತ್ತಿನ ಚುನಾಯಿತ ಸದಸ್ಯರು, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು, ೩ ಜನ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಎ ವೃಂದದ ಅಧಿಕಾಗಳು, ಪರಿಶಿಷ್ಟ ಜಾತಿ/ವರ್ಗಕ್ಕೆ ಸೇರದೇ ಇರುವ ಇತರೇ ವರ್ಗದ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳೊಡನೆ ಸಂಪರ್ಕ ಹೊಂದಿದ ಅಧಿಕಾರೇತರ ಸದಸ್ಯರು ಸೇರಿ ೩ ಜನ ಹಾಗೂ ಸಂಬಂಧಿಸಿದ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಸದರಿ ಸಭೆಯಲ್ಲಿ ಕಾಯ್ದೆಯ ಅನುಷ್ಠಾನ, ಕಾನೂನಿನಡಿ ಪರಿಹಾರ, ಸಂತ್ರಸ್ತರ ಪುನರ್ವಸತಿ ಕಾಯ್ದೆ ಅನುಷ್ಠಾನಗೊಳಿಸುತ್ತಿರುವ ಜವಾಬ್ದಾರಿ ಹೊಂದಿರುವ ಅಧಿಕಾರಿಗಳು, ಸಂಸ್ಥೆಗಳು ನಿರ್ವಹಿಸಬೇಕಾದ ಪಾತ್ರ, ಶಾಂತಿಸಭೆ ನಡೆಸುವುದು ಇತ್ಯಾದಿಗಳ ಬಗ್ಗೆ ಚರ್ಚಿಸಲಾಗುತ್ತದೆ.

೩.೧೮.೫. ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ:


ಸರ್ಕಾರಿ ಆದೇಶ ಸಂಖ್ಯೆ:ಎಸ್‌ಡಬ್ಲೂಡಿ/೧೩೫ ಎಸ್.ಎಸ್.ಸಿ./೭೪ ದಿನಾಂಕ: ೦೭.೦೮.೧೯೭೪ರ ಆದೇಶದಲ್ಲಿ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯವನ್ನು ಸ್ಥಾಪಿಸಿದ್ದು, ಈ ನಿರ್ದೇಶನಾಲಯವು ಮುಖ್ಯವಾಗಿ ರಾಜ್ಯದಲ್ಲಿ ಅಸ್ಪೃಶ್ಯತೆ ಜಾರಿ ಪ್ರಕರಣಕಕ್ಕೆ ಸಂಬಂಧಿಸಿದ ಪ್ರಕರಣಗಳು ಸುಳ್ಳು ಜಾತಿ ಪತ್ರ ಪರಿಶೀಲನೆ ಹಾಗೂ ದೌರ್ಜನ್ಯ ನಡೆಯುವ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸುವುದು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೆಲಸ ಮಾಡುವ ಉದ್ದೇಶದಿಂದ ತೆರೆಯಲಾಗಿದೆ.

ಆಯಾ ತಾಲೂಕು ಮತ್ತು ಆಯಾ ಜಿಲ್ಲಾಗಳ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು. ಸಂಪರ್ಕಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಾರೆ.

೩.೧೯. ಕೇಂದ್ರ ಸರಕಾರದ ಸುವರ್ಣ ವಸ್ತ್ರ ಯೋಜನೆ:

ಬುಡಕಟ್ಟು ಸಮುದಾಯದವರು ಸ್ವಾಭಿಮಾನಿ ಬದುಕು ರೂಪಿಸಿಕೊಳ್ಳಲು ಹಾಗೂ ಸ್ವಂತ ಉದ್ಯೋಗ ಕೈಗೊಳ್ಳುವ ದಿಶೆಯಲ್ಲಿ ಕೇಂದ್ರ ಸರಕಾರದ 'ಸುವರ್ಣ ವಸ್ತ್ರ' ಯೋಜನೆಯಲ್ಲಿ ರಾಜ್ಯ ಸರ್ಕಾರ ಮಗ್ಗ ಘಟಕವನ್ನು ಬೆಳ್ತಂಗಡಿ ತಲೂಕಿನ ಕುತ್ಲೂರು ಗ್ರಾಮದಲ್ಲಿ ಸ್ಥಾಪಿಸಿದೆ. ಖಾದಿ ಜವುಳಿ ಇಲಾಖೆ ಇದರ ಉಸ್ತುವಾರಿ ನೋಡಿಕೊಳ್ಳುತ್ತಿದೆ. ಕೊರಗ ಕುಟುಂಬದ ಮನೆ ಅಂಗಳವನ್ನೇ ಮಗ್ಗ ಘಟಕಕ್ಕೆ ಬಳಸಿ, ತೆಂಗಿನ ಮಡಲಿನ ಚಪ್ಪರದ ಮೇಲೆ ಪ್ಲಾಸ್ಟಿಕ್ ಹೊದಿಸಲಾಗಿದೆ. ಇದರಡಿಯಲ್ಲಿ ೫ ಮಗ್ಗಗಳು, ಒಂದು ವಾರ್ಪ್, ಸುಮಾರು ರೂ. ೨.೫೦ ಲಕ್ಷ ಮೌಲ್ಯದ ಸೊತ್ತುಗಳನ್ನು ಒಳಗೊಂಡಿವೆ. ಅಲ್ಲಿ ಸುಮಾರು ೮೦ರಿಂದ ೧೧೦ ಯುವಕ ಯುವತಿಯರು ಮಗ್ಗದ ಮೂಲಕ ನೇಯ್ಗೆ ತರಬೇತಿಯನ್ನು ಈಗಾಗಲೆ ಪಡೆದಿರುತ್ತಾರೆ. ಒಂದು ದಿನದಲ್ಲಿ ಅವರ ನೇಯ್ಗೆಯಲ್ಲಿ ವಿವಿಧ ಉಡುಪುಗಳು ರೂಪುಗೊಳ್ಳುತ್ತವೆ. ಬೆಡ್‌ಶೀಟ್ ಆದರೆ ದಿನದಲ್ಲಿ ೩ರಿಂದ ೪ ಟವೆಲ್, ಪಂಚೆ ಕೂಡ ತಯಾರಿಸುತ್ತಾರೆ. ಬೆಳಗಿನಿಂದ ಸಂಜೆಯವರೆಗೆ ಅಭ್ಯರ್ಥಿಗಳ ಕೈಕಾಲಿಗೆ ನೇಯ್ಗೆ ಕೆಲಸ. ಕುತ್ಲೂರು ಮಾತ್ರವಲ್ಲದೇ ಮುಡಿಪು ಮತ್ತು ಸುಳ್ಯದ ದಾಸನಕಜೆಗಳಲ್ಲಿ ಇಂಥಹ ಮಗ್ಗದ ಘಟಕಗಳಿವೆ. ನಕ್ಸಲ್ ಕರಿ ನೆರಳು ಇರುವ ಕಾಡಿನಲ್ಲಿ ಈ ಘಟಕಗಳನ್ನು ಸ್ಥಾಪಿಲಾಗಿದೆ. ಎಂಬುದು ಈ ಘಟಕದ ಪ್ರಾಮುಖ್ಯತೆ. ಇಲ್ಲಿ ತಯಾರಾಗುವ ಉಡುಪು ಶೇಕಡಾ ನೂರರಷ್ಟು ಕಾಟನ್. ಟವೆಲ್ ರೂ.೬೦, ಪಂಚೆ ರೂ. ೧೨೦ ಹಾಗೂ ಬೆಡ್‌ಶೀಟ್‌ಗೆ ರೂ. ೧೬೦ ದರವಿದೆ. ಅರಣ್ಯಕ್ಕೆ ಆಗಮಿಸುವ ಪೋಲೀಸರು, ಅರಣ್ಯ ಇಲಾಖೆ ಸಿಬ್ಬಂದಿಗಳು ಘಟಕದಿಂದಲೇ ಬಟ್ಟೆಗಳನ್ನು ಖರೀಧಿಸುತ್ತಾರೆ. ಇಲ್ಲಿನ ಉತ್ಪಾದನೆಯನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಿರಿ ಹಾಗೂ ಮಿಜಾರು ವೀವರ್‍ಸ್ ಸೊಸೈಟಿ

ಶೇ.೨೦ರಷ್ಟು ಲಾಭಾಂಶದಲ್ಲಿ ಖರೀದಿಸುತ್ತದೆ. ಮುಂದೆ ಸೀರೆಗಳನ್ನು ಉತ್ಪಾದಿಸುವ ಯೋಜನೆ ಇದೆ. ಉಡುಪು ಉತ್ಪಾದಿಸುವ ಅಭ್ಯರ್ಥಿಗಳಿಗೆ ಮಾಸಿಕ ರೂ. ೨ ಸಾವಿರ ಸ್ಟೈಫಂಡ್ ನೀಡಲಾಗುತ್ತದೆ. ಮುಂದೆ ಸ್ವಂತ ಮಗ್ಗ ಘಟಕ ಸ್ಥಾಪಿಸುವುದಾದರೆ ಅದಕ್ಕೂ ಜವುಳಿ ಇಲಾಖೆಯಿಂದ ಶೇ.೯೦ರಷ್ಟು ಸಬ್ಸಿಡಿ ನೆರವು ಸಿಗುತ್ತದೆ ಎನ್ನುತ್ತಾರೆ ಇಲಾಖಾ ಸಹಾಯಕ ನಿರ್ದೇಶಕ ಯೋಗೀಶ್.



ಚಿತ್ರ ಐ.ಟಿ.ಡಿ.ಪಿ ವತಿಯಿಂದ ಅಭಿವೃದ್ಧಿ ಕಾಮಗಾರಿ

ಅಡಿ ಟಿಪ್ಪಣಿಗಳು:

೦೧.ಗುರುಲಿಂಗಯ್ಯ ಎನ್ ಬುಡಕಟ್ಟು ಅಧ್ಯಯನ, ಸಂಪುಟ ೩, ಸಂಚಿಕೆ ೧, ಬುಡಕಟ್ಟು ಸಮಸ್ಯೆ ಮತ್ತು ಅಭಿವೃದ್ಧಿ: ಸಮಾಜ ಶಾಸ್ತ್ರೀಯ ದೃಷ್ಟಿಕೋನ,., ಪು. ೨೯,೩೦, ೨೦೦೬

೦೨.ಮೈತ್ರಿ ಕೆ.ಎಂ.,ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಸರಕಾರದ ಬುಡಕಟ್ಟು ಅಭಿವೃದ್ಧಿ ಯೋಜನೆಗಳು, ಪು. ೧೮೯, ೧೯೦.

೦೩.ಮೈತ್ರಿ ಕೆ.ಎಂ.,ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಸರಕಾರದ ಬುಡಕಟ್ಟು ಅಭಿವೃದ್ಧಿ ಯೋಜನೆಗಳು, ಪು. ೨೧೬, ೨೧೭

೦೪.ಗುರುಲಿಂಗಯ್ಯ ಎನ್., ಬುಡಕಟ್ಟು ಅಧ್ಯಯನ, ಸಂಪುಟ ೩, ಸಂಚಿಕೆ ೧, ಬುಡಕಟ್ಟು ಸಮಸ್ಯೆ ಮತ್ತು ಅಭಿವೃದ್ಧಿ: ಸಮಾಜ ಶಾಸ್ತ್ರೀಯ ದೃಷ್ಟಿಕೋನ, ಪು. ೩೦, ೩೧, ೨೦೦೬

ಆಧಾರ ಗ್ರಂಥಗಳು:

೧. ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಪರಿಶಿಷ್ಟ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳ ವಿವರಗಳು.

೨. ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್, ಉಡುಪಿ ಜಿಲ್ಲೆ, ಇಲಾಖಾ ಕಾರ್ಯಕ್ರಮದ ಪರಿಚಯದ ಕಿರು ಹೊತ್ತಿಗೆ.ನೆಮ್ಮದಿ ಬದುಕಿಗೆ ಮಾರ್ಗದರ್ಶಿ (ಪರಿಶಿಷ್ಟ ಜನಾಂಗದವರ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದ ಚಿತ್ರಣ), ಕರ್ನಾಟಕ ಸರಕಾರ.

೩. ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪ್ರಭಾಕರ ಎ.ಎಸ್., ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೪. ಬುಡಕಟ್ಟು ಅಧ್ಯಯನ, ಸಂಪುಟ ೩, ಸಂಚಿಕೆ ೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.



ಅಧ್ಯಾಯ – ೪
ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ

ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ

೪.೧. ಸ್ವಯಂ ಸೇವಾ ಸಂಸ್ಥೆಗಳ ಇತಿಹಾಸ:

"ವಸಾಹತುಶಾಹಿ ನೀತಿ, ಸರ್ಕಾರದ ಅರಣ್ಯ ಅಭಿವೃದ್ಧಿ ನೀತಿ, ಬೃಹತ್ ಪ್ರಮಾಣದ ಔದ್ಯೋಗಿಕರಣದ ನೀತಿಗಳಿಂದ ಬುಡಕಟ್ಟು ಸಮುದಾಯಗಳು ಛಿದ್ರ ಛಿದ್ರವಾಗತೊಡಗಿದವು. ಈ ಸಂದರ್ಭದಲ್ಲಿ ಬುಡಕಟ್ಟುಗಳ ನೆರವಿಗೆ ಸ್ವಯಂ ಸೇವಾ ಸಂಸ್ಥೆಗಳು ತೊಡಗಿಸಿಕೊಂಡವು. 'ಎರಡನೆಯ ಮಹಾಯುದ್ಧದ ನಂತರ ವಿವಿಧ ಜಾಗತಿಕ ಶಕ್ತಿಗಳ ಸಮತೋಲನದಲ್ಲಿ ಬಲಾವಣೆಯಾಯಿತು. ಸಾಮ್ರಾಜ್ಯಶಾಹಿ ರಾಷ್ಟ್ರಗಳ ವಿವಿಧ ಏಜನ್ಸಿಗಳು ಸಮಾಜದ ಅತ್ಯಂತ ದುರ್ಬಲ ಮತ್ತು ಅಸಂಘಟಿತ ದುಡಿಯುವ ವರ್ಗದ ಸಮುದಾಯಗಳ ಜನರಿಗೆ ಸಹಾಯ ಮಾಡಲು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಹಣ ನೀಡಲು ಪ್ರಾರಂಭಿಸಿದವು'. ಅಭಿವೃದ್ಧಿ ಹೊಂದುತ್ತಿರುವ ತೃತೀಯ ರಾಷ್ಟ್ರಗಳ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಭೂರಹಿತರಿಗೆ, ಬುಡಕಟ್ಟು ಜನರಿಗೆ, ಮಹಿಳೆಯರಿಗೆ, ಕೊಳಗೇರಿ ವಾಸಿಗಳಿಗೆ ಮತ್ತು ಅಸಂಘಟಿತ ದುಡಿಯುವ ವರ್ಗದ ಸಹಾಯಕ್ಕೆಂದು ಅನೇಕ ಸ್ವಯಂ ಸೇವಾ ಸಂಸ್ಥೆಗಳು ಕಾರ್ಯನಿರ್ವಹಿಸಲು ಪ್ರಾರಂಭಿಸಿದವು. ಎಪ್ಪತ್ತರ ದಶಕದ ಆರಂಭದಲ್ಲಿ ಅಮೇರಿಕದ ಸಾಮ್ರಾಜ್ಯಶಾಹಿ ಆಳುವ ವಲಯಗಳು ಮತ್ತು ಅದರ ಮಿತ್ರ ಶಕ್ತಿಗಳು ವಿಶ್ವದ ತೃತೀಯ ರಾಷ್ಟ್ರಗಳಿಗಾಗಿ ನೀತಿ ನಿರ್ಣಯ ಮಾಡುವಾಗ ಒಂದು ಹೊಸ ದೃಷ್ಟಿಯನ್ನು ಅಳವಡಿಸಿಕೊಂಡವು. 'ಅಭಿವೃದ್ಧಿ ಹೊಂದಿರದ ರಾಷ್ಟ್ರಗಳ ಅಭಿವೃದ್ಧಿಗಾಗಿ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಹೊಸದೊಂದು ತಂತ್ರವನ್ನು ಸಿದ್ಧಪಡಿಸಿದವು. ಅದೇ ಸ್ವಯಂ ಸೇವಾ ಸಂಘಟನೆಗಳ ಆಂದೋಲನ. ವಿಶ್ವದ ಅಭಿವೃದ್ಧಿಯಲ್ಲಿ ಭಾರತವೂ ಸೇರಿದಂತೆ ಅದಕ್ಕೊಂದು ನಿರ್ಧಿಷ್ಟ ಜವಾಬ್ದಾರಿಯನ್ನು ವಹಿಸಿಕೊಡಲಾಯಿತು. ಇಂದು ಜಗತ್ತಿನಾದ್ಯಂತ ಇರುವ Non govt. Organization (NGO)ಗಳಿಗೆ ಸರಕಾರೇತರ ಸಂಘಟನೆಗಳಿಗೆ ಪ್ರಚೋದನೆ ನೀಡಿರುವ ಸಿದ್ಧಾಂತವೇ ಸ್ವಯಂ ಸೇವಾ ಸಂಘಟನೆಗಳ ಸಿದ್ಧಾಂತವೂ ಆಗಿದೆ. ರಾಬರ್ಟ್ ಮೆಕ್ನಮೇರಾ ವಿಶ್ವಬ್ಯಾಂಕ್ ಅಧ್ಯಕ್ಷರಾಗಿದ್ದಾಗ ಈ ಕೆಳಗಿನ ನಿರ್ಣಯಗಳನ್ನು ಅವರು ಕೈಕೊಂಡರು".

'ಅಪಾಯಕಾರಿಯಾಗಿ ಬೆಳೆಯುತ್ತಿರುವ ಅಸಮಾನತೆಗಳನ್ನು ನಿವಾರಿಸಲು ಮತ್ತು ಅದಕ್ಕೆ ಪರಿಹಾರವನ್ನು ಸೂಚಿಸುವುದರ ಜೊತೆಗೆ ಉತ್ಪಾದನೆಯನ್ನು ಹೆಚ್ಚಿಸುವ ಸಾಮಾಜಿಕ ಕ್ರಾಂತಿಯ ಅಪಾಯವನ್ನು ತಡೆಗಟ್ಟಲು ಅತ್ಯಂತ ತುರ್ತಿನ ಕ್ರಮಗಳನ್ನು ಕೈಕೊಳ್ಳಲೇಬೇಕು. ಈ ಎಲ್ಲ

ಕ್ರಮಗಳನ್ನು ಕೈಗೊಳ್ಳಲು ಆ ದೇಶವನ್ನು ಆಳುತ್ತಿರುವ ವರ್ಗಗಳನ್ನು ಪ್ರಚೋದಿಸಬೇಕು. ಆಳುವ ವರ್ಗಕ್ಕೆ ಈ ನೀತಿ ಹಿಡಿಸದಿದ್ದರೂ ಅಧಿಕಾರ ಶಾಹಿ ಮತ್ತು ಅಲ್ಪಸಂಖ್ಯಾತರ ಆಡಳಿತ ಸಂರಚನೆಯ ವ್ಯಾಪ್ತಿಯಿಂದಾಚೆಗೆ ಬುಡಕಟ್ಟು ಮಟ್ಟದಲ್ಲಿ ಬಡಜನರ ಮಧ್ಯೆ ಕೆಲಸ ಮಾಡುವ ಸ್ವಯಂ ಸೇವಾ ಸಂಘಟನೆಯನ್ನು ಸ್ಥಾಪಿಸಬೇಕು. ಈ ಸಂಸ್ಥೆಗಳು ಅಧಿಕಾರಶಾಹಿ ಮತ್ತು ರಾಜಕೀಯ ನಿಯಂತ್ರಣದಿಂದ ಮುಕ್ತವಾಗಿರಬೇಕು. ಈ ಸಂಘಟನೆಗಳ ಕಾರ್ಯ ಚಟುವಟಿಕೆಗಳನ್ನು ಸಮರ್ಥರಾದವರು ನೋಡಿಕೊಳ್ಳಬೇಕು. ಸ್ವಯಂ ಸೇವಾ ಸಂಸ್ಥೆಗಳು ರೂಪಿಸಿರುವ ಅಭಿವೃದ್ಧಿ ಕಾರ್ಯಗಳು ಅತ್ಯಂತ ದಯನೀಯ ಸ್ಥಿತಿಯಲ್ಲಿರುವವರೆಗೆ ಮತ್ತು ಸೌಲಭ್ಯದಿಂದ ವಂಚಿತರಾದವರಿಗೆ ತಲುಪುವಂತಾಗಬೇಕು. ಸ್ವಯಂ ಸೇವಾ ಸಂಘಟನೆಗಳ ನಡುವಣ ನಿಕಟ ಸಂಪರ್ಕವು ಭಾಗಿತ್ವದ ಭಾವನೆ ಸಹಕಾರಿಯಾಗಿದೆ. ಇದಕ್ಕಿಂತಲೂ ಹೆಚ್ಚಾಗಿ ಇವು ಸಾರ್ವಜನಿಕರಲ್ಲಿ ನ್ಯಾಯ ಪ್ರಜ್ಞೆಯನ್ನು ಮೂಡಿಸುವಂತಾಗಬೇಕು'.

ಸ್ವಯಂ ಸೇವಾ ಸಂಘಟನೆಗಳು ಸಮಾಜದ ವಿವಿಧ ಭಾಗಗಳ ಜನರ ಬವಣೆಗಳಿಗೆ ದನಿ ಕೊಡಬೇಕೆಂದೂ ಒಂದು ಆರೋಗ್ಯಕರ ರಹದಾರಿ ಕಲ್ಪಿಸಬೇಕೆಂದು ನಿರೀಕ್ಷಿಸಲಾಗಿತ್ತು. ಈ ಎಲ್ಲ ನಿಯಮಗಳನ್ನು ೬೦ರ ದಶಕದಲ್ಲಿಯೇ ಕಲ್ಪಿಸಲಾಯಿತು.

೪.೧.೧. ಸ್ವಯಂ ಸೇವಾ ಸಂಸ್ಥೆಗಳ ಕಾರ್ಯದ ಮೊದಲ ಹಂತ: ೧೯೭೫-೭೬ ರವರೆಗೆ ಸಾಮ್ರಾಜ್ಯಶಾಹಿ ರಾಷ್ಟ್ರಗಳಿಂದ ಧನಸಹಾಯ ಮತ್ತು ಮಾರ್ಗದರ್ಶನ ಪಡೆದ ಗ್ರಾಮೀಣಾಭಿವೃದ್ಧಿ, ಸಮುದಾಯ ಅಭಿವೃದ್ಧಿ ಉದ್ಯೋಗ, ಉತ್ಪಾದನೆ, ಕೊಳಗೇರಿ ಸುಧಾರಣೆ, ಜೀವನ ಮಟ್ಟದಲ್ಲಿ ಸುಧಾರಣೆ ಮುಂತಾದ ಅಭಿವೃದ್ಧಿಗಳಿಗೆ ಹೆಚ್ಚು ಒತ್ತು ನೀಡಿದವು. ಸರ್ಕಾರದಿಂದ ಈಗಾಗಲೇ ಹಣ ಪಡೆಯುತ್ತಾ ಬಂದಿರುವ ಅಭಿವೃದ್ಧಿ ಕಾರ್ಯಕ್ರಮಗಳ ಜೊತೆಗೆ ಈ ಬುಡಕಟ್ಟು ಅಭಿವೃದ್ಧಿ ಕಾರ್ಯ ಮತ್ತು ಅತಿಕ್ರಮಣ ನೀತಿಯನ್ನು ಅಳವಡಿಸಲಾಯಿತು. ಅಭಿವೃದ್ಧಿ ಕಾರ್ಯರೂಪಿಸುವಲ್ಲಿ ಒಂದು ಅಧಿಕೃತ ಇನ್ನೊಂದು ಸರಕಾರೇತರ ಎರಡು ವಲಯಗಳು ಹುಟ್ಟಿಕೊಂಡವು. ಈ ಎರಡೂ ಸಂಸ್ಥೆಗಳಿಗೆ ಸಾಮ್ರಾಜ್ಯಶಾಹಿಯೇ ಹಣಕಾಸು ಹಾಗೂ ಇನ್ನಿತರ ನೆರವು ನೀಡುತ್ತಿವೆ. ೬೦ರ ದಶಕದಲ್ಲಿ ಪರಿಹಾರ, ಪುನರ್‌ವಸತಿ ಮತ್ತು ಉದಾಯ ನೆರವಿಗೆ ಸಂಬಂಧಿಸಿದ ಯೋನೆಗಳಲ್ಲಿ ಸರಕಾರೇತರ ವಲಯವನ್ನು ಹೆಚ್ಚಾಗಿ ಬಳಸಿಕೊಳ್ಳಲಾಯಿತು. ವಿಶ್ವಬ್ಯಾಂಕ್ ಮತ್ತು ಇತರ ಸಾಮ್ರಾಜ್ಯಶಾಹಿ ರಾಷ್ಟ್ರಗಳ ವಿವಿಧ ಏಜನ್ಸಿಗಳು, ಸಂಸ್ಥೆಗಳು ಅಧ್ಯಯನ ನಡೆಸಿ ತೃತೀಯ ರಾಷ್ಟ್ರಗಳಲ್ಲಿ ಯಾರು ಕಡುಬಡವರು ಎಂದು ಗುರುತಿಸಿದರು. ಈ ಅಧ್ಯಯನದಲ್ಲಿ ಕೃಷಿ ಕಾರ್ಮಿಕರು, ಹರಿಜನರು, ಬುಡಕಟ್ಟುಗಳು, ನಗರದ ಬಡವರು, ಕೊಳಗೇರಿಗಳಲ್ಲಿ ವಾಸಿಸುವವರು, ಅಸಂಘಟಿತ ಕಾರ್ಮಿಕರು ಮತ್ತು ಮಹಿಳೆಯರೆಂದು ಗುರುತಿಸಿ ಇವರ

ಅಭಿವೃದ್ಧಿಗಾಗಿ ದುಡಿಯಲು ಸ್ವಯಂ ಸೇವಾ ಸಂಸ್ಥೆಗಳಿಗೆ ಜವಾಬ್ದಾರಿಯನ್ನು ವಹಿಸಿಕೊಡಲಾಯಿತು. ಈ ಎಲ್ಲ ಕ್ಷೇತ್ರಗಳನ್ನು ಅತ್ಯಂತ ಸೂಕ್ಷ್ಮ ವಲಯಗಳೆಂದು ಸಾಮ್ರಾಜ್ಯಶಾಹಿ ರಾಷ್ಟ್ರಗಳು ಗುರುತಿಸಿ ತಮ್ಮ ಆಧ್ಯತೆಯನ್ನು ಶಕ್ತಿಯನ್ನು ಅಲ್ಲಿಯೇ ಕೇಂದ್ರಿಕರಿಸಿದವು."೧

೪.೧.೨. ಸ್ವಯಂಸೇವಾ ಸಂಸ್ಥೆಗಳ ಕಾರ್ಯದ ಎರಡನೆಯ ಹಂತ: 'ಎರಡನೆಯ ಹಂತದಲ್ಲಿ ಸಾಮ್ರಾಜ್ಯವಾದಿ ಸಂಸ್ಥೆಗಳು ಮತ್ತು ಸ್ವಯಂಸೇವಾ ಸಂಸ್ಥೆಗಳು ಜನತೆಯ ನಡುವೆ ಮಧ್ಯೆ ಪ್ರವೇಶ ಮಾಡಲು ಮತ್ತು ಅಗತ್ಯ ಬಿದ್ದರೆ ರಾಜಕೀಯಕ್ಕೆ ದುಮುಕಲು ಅವಶ್ಯಕವಾದ ಸೈದ್ಧಾಂತಿಕ ತಳಹದಿಯನ್ನು ರೂಪಿಸಿಕೊಂಡವು. ಆನತಾ ಆಂದೋಲನ, ಜನಜಾಗೃತಿ ಮತ್ತು ಜನರ ಸಂಘಟನೆ ಮುಂತಾದ ಶಬ್ಧಗಳಿಂದ ಕಾರ್ಯನಿರ್ವಹಿಸಿದವು. ಇದರಿಂದ ಶಿಕ್ಷಣ ಪ್ರಜ್ಞೆ, ಸಂಘಟನೆ, ಹೋರಾಟ ಮುಂತಾದ ಕಲ್ಪನೆಗಳು ರೂಪಗೊಳ್ಳತೊಡಗಿದವು'. ಕಡುಬಡವರನ್ನು ಸಂಘಟಿಸಿ ಅವರಿಗೆ ಶಿಕ್ಷಣ ನೀಡಲು ಸ್ವಯಂ ಸೇವಾ ಸಂಸ್ಥೆಗಳು ಪ್ರಾರಂಭಿಸಿದವು. ಶೋಷಣೆಯ ವಿರುದ್ಧ ಹಾಗೂ ತಮ್ಮ ಹಕ್ಕುಗಳಿಗಾಗಿ ಹೋರಾಡಲೆಂದು ನಗರ ಮತ್ತು ಗ್ರಾಮೀಣ ಬಡವರನ್ನು ಸಂಘಟಿಸಲಿಕ್ಕಾಗಿ ಸಾಮ್ರಾಜ್ಯವಾದಿ ಸಂಸ್ಥೆಗಳು, ಸರ್ಕಾರಗಳು ಮತ್ತು ಧನಸಹಾಯ ನೀಡುವ ಸಂಘಟನೆಗಳು ಕಾರ್ಯನಿರ್ವಹಿಸಿದವು. ಇಂದು ಭಾರತದಲ್ಲಿ ನಾವು ಕಾಣುತ್ತಿರುವ ಸಂಘಟನೆಗಳು ಅಥವಾ ಸರಕಾರೇತರ ಸಂಘಟನೆಗಳ ಸಿದ್ಧಾಂತಗಳೆಲ್ಲ ಹೆಚ್ಚಾಗಿ ವಿದೇಶ ಮೂಲದ್ದು ಎಂಬುದನ್ನು ಗಮನಿಸಬೇಕಾಗುತ್ತದೆ.

೪.೧.೩. ಸ್ವಯಂ ಸೇವಾ ಸಂಘಟನೆಗಳ ವಿವಿಧ ಬಗೆಗಳು:

೧. "ಸಾಂಪ್ರದಾಯಿಕ ಸ್ವರೂಪದ ಸಂಘಟನೆಗಳು ಸಮಾಜಸೇವಾ ಮನೋಭಾವವಿರುವ ಹಳೆಯ ಸಂಸ್ಥೆಗಳಾಗಿದ್ದು ಇವು ಧಾರ್ಮಿಕ ಅಥವಾ ಧರ್ಮ ನಿರಪೇಕ್ಷ ಸಂಸ್ಥೆಗಳ ಅಧೀನದಲ್ಲಿವೆ. ಈ ಸಂಸ್ಥೆಗಳು ದೇಶೀಯರಿಂದ ಹಣ ಪಡೆದು ಕಾರ್ಯನಿರ್ವಹಿಸುತ್ತಿದ್ದವು.

೨. '೧೯೬೦ ರಿಂದ ೭೦ರಲ್ಲಿ ತಲೆ ಎತ್ತಿದ ಸ್ವಯಂಸೇವಾ ಸಂಸ್ಥೆಗಳು ಶಿಕ್ಷಣ ತರಬೇತಿ, ಅಭಿವೃದ್ಧಿ ಕಾರ್ಯದಿಂದ ಹಿಡಿದು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಲಯಗಳಲ್ಲಿ ಹಸ್ತಕ್ಷೇಪ ಮಾಡುವುದರೊಂದಿಗೆ, ಜನಸಂಘಟನೆ ಮಾಡುವುದನ್ನು ತಮ್ಮ ಗುರಿಯನ್ನಾಗಿಸಿಕೊಂಡವು. ಇದರಲ್ಲಿಯೇ ಕೆಲವು ಸ್ವಯಂಸೇವಾ ಸಂಸ್ಥೆಗಳು ದಾಖಲಾತಿ ಮತ್ತು ಸಂಶೋಧನೆಗೆ ಹೆಚ್ಚು ಒತ್ತು ನೀಡಿದವು'.

ಪಶ್ಚಿಮ ಜರ್ಮನಿ, ಅಮೇರಿಕ ಸಂಯುಕ್ತ ಸಂಸ್ಥಾನಗಳು, ಬ್ರಿಟನ್, ಆಸ್ಟ್ರೇಲಿಯ, ಹಾಲಂಡ್, ಇಟಲಿ, ಸ್ವೀಡನ್, ಸ್ವಿಡ್ಜರ್ಲಂಡ್, ನಾರ್ವೆ, ಬೆಲ್ಜಿಯಂ, ಆಸ್ಟ್ರೇಲಿಯ, ಫ್ರಾನ್ಸ್,

ಡೆನ್ಮಾರ್ಕ್, ನ್ಯೂಜಿಲ್ಯಾಂಡ್, ಫಿಲಿಪ್ಪೈನ್ಸ್, ಐರ್ಲೆಂಡ್, ಸೌದಿಅರೇಬಿಯ ಮತ್ತು ಕುವೈತ್ ಮುಂತಾದ ಅನೇಕ ರಾಷ್ಟ್ರಗಳು ೧೯೮೦ರಿಂದಲೇ ಹಣಕಾಸಿನ ನೆರವನ್ನು ಸ್ವಯಂಸೇವಾ ಸಂಸ್ಥೆಗಳಿಗೆ ನೀಡುತ್ತಲೇ ಬಂದಿವೆ ಎಂಬುದನ್ನು ಗಮನಿಸಬೇಕಾಗುತ್ತದೆ."

ಗಿರಿಜನರ ಅಭಿವೃದ್ಧಿಗಾಗಿ ರಾಜ್ಯ ಸರಕಾರ, ಕೇಂದ್ರ ಸರ್ಕಾರ, ಅನೇಕ ಸ್ವಯಂ ಸೇವಾ ಸಂಸ್ಥೆಗಳು ವಿವಿಧ ಯೋಜನೆಗಳನ್ನು ರೂಪಿಸಿ ಕಾಂಕ್ರೇಟ್ ಸಂಸ್ಕೃತಿಯನ್ನು ಗಿರಿಜನ ನಾಡಿಗೆ ಪರಿಚಯಿಸಿ ಕೊಟ್ಟವು. ಇದರಿಂದ ಗಿರಿಜನರ ಬೇರೆ ಬೇರೆ ಸ್ಥಳಗಳಿಗೆ ಸ್ಥಳಾಂತರಿಸಿತು. ಇದರಿಂದ ಅನೇಕ ಸಮಸ್ಯೆಗಳು ಉದ್ಭವಿಸಿದವು. ಆಧುನಿಕ ಸಮಾಜದಲ್ಲಿ ಗಿರಿಜನರ ಬದುಕು ಅತ್ಯಂತ ಜಟಿಲವಾಯಿತು. ಗಿರಿಜನರು ಆಧುನಿಕ ಸಮಾಜದಲ್ಲಿ ತಮ್ಮ ಬದುಕು ರೂಪಿಸಿಕೊಳ್ಳಲು ಅನುಕೂಲವಾಗುವಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ನಿರ್ಧರಿಸಿ ಯೋಜನೆಗಳನ್ನು ಸರ್ಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಪ್ರಕಟಿಸಿದವು. ಗಿರಿಜನರಿಗೆ ವಸತಿ, ಶಿಕ್ಷಣ, ಆರೋಗ್ಯ, ಕೃಷಿ, ಗೃಹ ಕೈಗಾರಿಕೆ, ಕಾಡಿನ ಉತ್ಪನ್ನಗಳ ಸಂಗ್ರಹ, ಪರಿಷ್ಕರಣೆ, ಮಾರಾಟ ಮುಂತಾದವುಗಳ ಬಗೆಗೆ ಅನೇಕ ಆಲೋಚನೆಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಅನೇಕ ತರಬೇತಿಗಳನ್ನು ನೀಡಿ ಸ್ವಾವಲಂಬಿಗಳಾಗಿ ಬದುಕಲು ಅನುಕೂಲ ಮಾಡಿಕೊಡುತ್ತಿವೆ. ಆದರೆ ಈ ಯೋಜನೆಗಳು ಗಿರಿಜನರಿಗೆ ಮುಟ್ಟುತ್ತಿಲ್ಲ. ಈ ಅಭಿವೃದ್ಧಿ ಯೋಜನೆಗಳನ್ನು ಪಡೆದುಕೊಂಡ ಕೆಲ ಗಿರಿಜನ ಫಲಾನುಭವಿಗಳು ತಮ್ಮ ಬದುಕನ್ನು ರೂಪಿಸಿಕೊಳ್ಳಲಾಗದೆ ಮತ್ತೆ ಮೊದಲಿನ ವ್ಯವಸ್ಥೆಯಲ್ಲಿಯೇ ಮುಂದುವರೆಯುತ್ತಿವೆ. ಇದಕ್ಕೆ ಕಾರಣಗಳೇನು? ಸರ್ಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ರೂಪಿಸಿರುವ ಅಭಿವೃದ್ಧಿ ಯೋಜನೆಗಳ ಫಲಿತಾಂಶ ಮಾತ್ರ ಶೂನ್ಯ. ಸರ್ಕಾರ ಮತ್ತು ಎನ್.ಜಿ.ಓ. ಗಳು ಜಾರಿಗೆ ತಂದಿರುವ ಯೋಜನೆಗಳ ಲಾಭಗಳನ್ನು ಗಿರಿಜನ ಸಮುದಾಯಗಳು ಎಷ್ಟರ ಮಟ್ಟಿಗೆ ಪಡೆದುಕೊಂಡಿವೆ ಎಂಬುದನ್ನು ಅರಿತುಕೊಳ್ಳಬೇಕಾದರೆ ಆಯಾ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳ ಹತ್ತಿರ ನೋಡಿದಾಗ ಅರಿವಾಗುತ್ತದೆ.

ಸರ್ಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ರೂಪಿಸಿರುವ ಅಭಿವೃದ್ಧಿ ಯೋಜನೆಗಳು ಎಲ್ಲ ಗಿರಿಜನರಿಗೂ ಸಮ ಪ್ರಮಾಣದಲ್ಲಿ ದೊರೆಯುತ್ತಿಲ್ಲ. ಇದಕ್ಕೆ ಕಾರಣಗಳೇನು? ಈ ಯೋಜನೆಗಳ ಸೋರಿಕೆ ಎಲ್ಲಿ ಯಾವ ಹಂತದಲ್ಲಿ ನಡೆಯುತ್ತಿದೆ ಎಂಬುದರ ಸೂಕ್ಷ್ಮ ಅಧ್ಯಯನ ನಡೆಯಬೇಕಾಗಿದೆ. ಗಿರಿಜನ ಸಮುದಾಯದ ಪ್ರತಿಯೊಂದು ಮನೆಗೆ ಭೇಟಿ ನೀಡಿ ಆ ಸಮುದಾಯಕ್ಕೆ ಇಲ್ಲಿಯವರೆಗೆ ಸರ್ಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಜಾರಿ ಮಾಡಿರುವ ಯೋಜನೆಗಳು ಯಾವುವು? ಆ ಯೋಜನೆಗಳಿಂದ ಪ್ರಯೋಜನ ಪಡೆದ ಕುಟುಂಬಗಳು ಎಷ್ಟು?

ಎಂಬುದನ್ನು ಅರಿತುಕೊಳ್ಳಬೇಕಾಗಿದೆ. ಯೋಜನೆಗಳಿಂದ ಆ ಕುಟುಂಬದಲ್ಲಾದ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಆರ್ಥಿಕ ಬದಲಾವಣೆಗಳೇನು? ಮುಂತಾದವುಗಳ ಸೂಕ್ಷ್ಮ ಅಧ್ಯಯನ ಅವಶ್ಯವಾಗಿ ನಡೆಯಬೇಕಾಗಿದೆ.

ಇಂದು ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಅನೇಕ ಸ್ವಯಂಸೇವಾ ಸಂಸ್ಥೆಗಳು ಆದಿವಾಸಿಗಳ ಅಭಿವೃದ್ಧಿಗಾಗಿ ತಮ್ಮದೇ ಆದ ಪರಿಕಲ್ಪನೆಗಳನ್ನಿಟ್ಟುಕೊಂಡು ಅನೇಕ ಯೋಜನೆಗಳನ್ನು ಘೋಷಿಸಿವೆ"೨.

ಆದರೆ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಶ್ರಮಿಸುವ ಸ್ವಯಂಸೇವಾ ಸಂಸ್ಥೆಗಳು ಕೇವಲ ಬೆರಳೆಣಿಕೆಯಷ್ಟು ಮಾತ್ರ ಕಂಡು ಬಂದಿವೆ. ಅವುಗಳಲ್ಲಿ ಪ್ರಮುಖವಾದುವುಗಳನ್ನು ಇಲ್ಲಿ ವಿವರಿಸಲಾಗಿದೆ.

೪.೨. ಸಮಗ್ರ ಗ್ರಾಮೀಣ ಆಶ್ರಮ

೪.೨.೧ ಹಿನ್ನೆಲೆ:

ಗುಜರಾತ್ ಹಾಗೂ ಬರೋಡ ರಾಜ್ಯಗಳಲ್ಲಿ ಕಂಡುಬರುವ ದುಂಗ್ರಾಬಿಲ್ ಬುಡಕಟ್ಟು ಸಮುದಾಯದ ಜೊತೆಗೆ ಹಲವು ದಶಕಗಳಿಂದ ಕಾರ್ಯನಿರ್ವಹಿಸುತ್ತಿದ್ದ ಸಮಾಜ ಸೇವಕರಾದ ಶ್ರೀ ದೇವಿದಾಸ್ ಶೆಟ್ಟಿಯವರು ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ಕೊರಗ ಸಮುದಾಯದ ಶೋಚನೀಯ ಸ್ಥಿತಿಯನ್ನು ಕಂಡು, ೧೯೮೭ರಲ್ಲಿ ಉಡುಪಿ ತಾಲೂಕಿನ ಕಾಪು ಸಮೀಪದ ಮೂಳೂರಿನಲ್ಲಿ "ಸಮಗ್ರ ಗ್ರಾಮೀಣ ಆಶ್ರಮ" ಎಂಬ ಸ್ವಯಂ ಸೇವಾ ಸಂಸ್ಥೆಯನ್ನು ಸ್ಥಾಪಿಸಿದರು. ಈ ಮೂಲಕ ಕಾಪು ಪರಿಸರದ ಸುತ್ತಮುತ್ತ ಇದ್ದಂತಹ ಕೊರಗ ಸಮುದಾಯದ ಯುವಜನರನ್ನು ಸಂಘಟಿಸಿ ಅಜಲು ಪದ್ಧತಿಯ ವಿರುದ್ಧ ಚಳವಳಿ, ಭೂಮಿ ಚಳವಳಿಗಳನ್ನು ಹಮ್ಮಿಕೊಂಡು ಕೊರಗರಿಗೆ ಸಾಮಾಜಿಕ ನ್ಯಾಯ, ಸಮಾನತೆ, ಸ್ಥಾನಮಾನಗಳನ್ನು ದೊರಕಿಸಿಕೊಡುವುದರಲ್ಲಿ ಸಂಸ್ಥೆಯು ಪ್ರಮುಖ ಪಾತ್ರವನ್ನು ವಹಿಸಿದೆ. ಪ್ರಸ್ತುತ ಸಂಸ್ಥೆಯ ಕಛೇರಿಯು ಉಡುಪಿಯ ಶಿರ್ವ ಸಮೀಪ ಪೆರ್ನಾಲ್ ಎಂಬಲ್ಲಿ ಕಾರ್ಯ ನಿರ್ವಹಿಸುತ್ತಿದೆ. "ಕೊರಗರು ಘನತೆ, ಸ್ವಾವಲಂಬನೆ ಮತ್ತು ಸಮಾನತೆಯ ಬದುಕನ್ನು ನಡೆಸಲು ಸಹಕರಿಸುವುದು" ಎಂಬ ಧ್ಯೇಯದೊಂದಿಗೆ ಕೆಲಸ ಮಾಡುತ್ತಿರುವ ಸಂಸ್ಥೆಯು ತನ್ನ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಕೊರಗ ಸಮುದಾಯದೊಳಗೆ ಸಂಘಟನೆಗಳನ್ನು ನಿರ್ಮಿಸಿ ಅಭಿವೃದ್ಧಿಯ ಕಾರ್ಯಗಳಿಗೆ ಪ್ರೋತ್ಸಾಹ ನೀಡುತ್ತಿದೆ.

೪.೨.೨. ಸಮಗ್ರ ಗ್ರಾಮೀಣ ಆಶ್ರಮದ ಸಾಮಾನ್ಯ ವಿವರಗಳು:

ಸಮಸ್ಥೆಯ ಹೆಸರು	:	ಸಮಗ್ರ ಗ್ರಾಮೀಣ ಆಶ್ರಮ
ಸ್ಥಾಪನೆಯಾದ ವರ್ಷ	:	೧೯೮೭
ನೋಂದಾವಣೆ	:	ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್ – ೧೯೬೦
ನೋಂದಾವಣೆ	:	೧೪೫೧೮೭೮೮
ಸಂಸ್ಥೆಯ ಮುಖ್ಯ ಕಾರ್ಯಾಲಯ ಪಿಲಾರು	:	ಸಮಗ್ರ ಗ್ರಾಮೀಣ ಆಶ್ರಮ ಪೆರ್ನಾಲು ಅಂಚೆ, ಗ್ರಾಮ ಉಡುಪಿ ತಾಲೂಕು ಮತ್ತು ಜಿಲ್ಲೆ
ಸಂಸ್ಥೆಯಧ್ಯೇಯಗಳು:		ಸಮಗ್ರ ಗ್ರಾಮೀಣ ಆಶ್ರಮ ರಾಜಕೀಯ ಉದ್ದೇಶವಿಲ್ಲದ, ಲಾಭಗಳಿಸುವ ಉದ್ದೇವಿಲ್ಲದ ಸ್ವಯಂ ಸೇವಾ ಸಂಸ್ಥೆಯಗಿದ್ದು ಹಿಂದುಳಿದ ಗ್ರಾಮ,ಪ್ರದೇಶ, ವಿಸ್ತಾರಗಳಲ್ಲಿ ಬಡತನ, ಅಜ್ಞಾನ ನಿರುದ್ಯೋಗ ನಿವಾರಣೆಗೆ ಶ್ರಮಿಸುವುದು. ಇದುಸೇವೆಯನ್ನು ಜಾತಿ, ಧರ್ಮ ಭೇದವಿಲ್ಲದೆ ನೀಡಲಾಗುವುದು. ಸಂಸ್ಥೆಯ ಉದ್ದೇಶಗಳು

* ಕೃಷಿ ಉತ್ಪಾದನೆ ಹೆಚ್ಚಿಸಲು ಮತ್ತು ಲಾಭದಾಯಕವಾಗುವಂತೆ ಮಾಡಲು, ಸಂಪನ್ಮೂಲಗಳ ವೈಜ್ಞಾನಿಕ ಬಳಕೆ, ಮಾರಾಟ ವ್ಯವಸ್ಥೆ ಮೊದಲಾದವುಗಳನ್ನು ಕೈಗೊಳ್ಳುವುದು.
* ಕೃಷಿಗೆ ಸಂಬಂಧಿಸಿದ ಇತರೆ ಉದ್ಯೋಗಗಳಾದ ತೋಟಗಾರಿಕೆ, ಹೈನುಗಾರಿಕೆ, ಕೋಳಿ ಸಾಕಾಣೆ, ಇತ್ಯಾದಿಗಳಿಗೆ ಪ್ರೇರಣೆ, ಪ್ರೋತ್ಸಾಹ ಕೊಡುವುದು ಮತ್ತು ಅಗತ್ಯ ವ್ಯವಸ್ಥೆಯನ್ನು ಏರ್ಪಡಿಸುವುದು
* ರಾಷ್ಟ್ರೀಯ ಭಾವನೆ ಬೆಳೆಸುವ ಮತ್ತು ಆ ದೃಷ್ಟಿಯಿಂದ ಸುಗಮ ಜೀವನ ನಡೆಸಲು ನಾಗರಿಕ ಕರ್ತವ್ಯಗಳು, ಸಹನ ಶೀಲತೆ, ಸ್ತ್ರೀಪರುಷ ಸಮಾನತೆ, ಜಾತೀಯ ಸಮಭಾವ ಇತ್ಯಾದಿ ಕ್ಷೇತ್ರಗಳಲ್ಲಿ ಅಗತ್ಯ ಶಿಕ್ಷಣ ಕಾರ್ಯಕ್ರಮಗಳನ್ನು ಕೈಗಿತ್ತಿಕೊಳ್ಳಲಾಗುವುದು.
* ಗ್ರಾಮೀಣ ಕುಶಲಕರ್ಮಿಗಳ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸಲು ತಾಂತ್ರಿಕ ವಿಧಾನಗಳ ಶೋಧನೆ, ಪ್ರಚಲಿತವಾಗಿರುವ ತಾಂತ್ರಿಕ ವಿಧಾನಗಳ ಬಳಕೆ, ತಮ್ಮ ಉತ್ಪಾದನೆಗಳ ಪೂರ್ಣ ಲಾಭ ಪಡೆಯಲು ಸಾಧ್ಯವಾಗುವಂತೆ ಮಾರಾಟದ ವ್ಯವಸ್ಥೆ ಇತ್ಯಾದಿಗಳನ್ನು ಮಡುವುದು.

* ಗ್ರಾಮ, ಪ್ರದೇಶ, ವಿಸ್ತಾರಗಳಲ್ಲಿ ಉದ್ಯೋಗಾವಕಾಶ ಹೆಚ್ಚುವಂತೆ ಮಡುವುದು. ಇದಕ್ಕಾಗಿ ಜೀವನ ಶಿಕ್ಷಣ, ವೃತ್ತಿಪರ ಶಿಕ್ಷಣ, ಕಾರ್ಯಕ್ರಮಗಳನ್ನು ನಡೆಸುವುದು. ಶಿಕ್ಷಣ ಪಡೆದವರಿಗೆ ಉದ್ಯೋಗ ನಡೆಸುವರ ಉಪಯುಕ್ತ ಮಾಹಿತಿ ಮತ್ತು ಪ್ರೋತ್ಸಾಹ ಕೊಡುವುದು. ಹೀಗೆ ಇನ್ನಿತರ ಉದ್ದೇಶಗಳನ್ನು ಸಂಸ್ಥೆಯು ಹೊಂದಿದೆ. ಸಂಸ್ಥೆಯ ಸದಸ್ಯತ್ವ ಗ್ರಾಮೀಣ ಅಭಿವೃದ್ಧಿ ಕಾರ್ಯಗಳಲ್ಲಿ ಆಶಕ್ತಿಯಿರುವ ೧೮ವರ್ಷ ಪೂರೈಸಿದ ಯವುದೇ ವ್ಯಕ್ತಿ ಸಂಸ್ಥೆಯ ವ್ಯವಸ್ಥಾಪಕ ಸಮಿತಿಯು ಆಯಾ ಸಮಯಕ್ಕೆ ನಿಗದಿಪಡಿಸಿದ ನಿಯವಗಳಿಗನುಸಾರವಾಗಿ ಸದಸ್ಯರಾಗಬಹುದು ಸದಸ್ಯತ್ವ ಶುಲ್ಕ ಪ್ರವೇಶ ಶುಲ್ಕವಾದ ರುಪಾಯಿ ೧೦೦/- ಮತ್ತು ವಾರ್ಷಿಕ ಚಂದಾ ರುಪಾಯಿ ೧೦೦/- ಕೊಡುವವರು ಸಾಮಾನ್ಯ ಸದಸ್ಯರಾಗುತ್ತಾರೆ.

ಸಂಸ್ಥೆಯ ಸಿಬ್ಬಂದಿಗಳ ವಿವರಗಳು :

ಯೋಜನಾ ಸಮನ್ವಯಾಧಿಕಾರಿ	: ಅಶೋಕ್ ಕುಮಾರ್ ಶೆಟ್ಟಿ
ಯೋಜನಾ ಕಾರ್ಯಕ್ರಮ ಸಮನ್ವಯಾಧಿಕಾರಿ	: ವಿನಯ್ ಕುಮಾರ್
ಕರಣಿಕರು	: ಸಿಜಾತ ಭಂಡಾರ್ಕಲ್
ಪ್ರಾಯೋಜಕತ್ವ ಸಮನ್ವಯಾಧಿಕಾರಿ	: ಅನಿತಾ
ಸದಸ್ಯರು ಆಶ್ರಮ ಶಾಲೆ ವಿಭಾಗ	: ಶ್ರೀ ಪ್ರಕಾಶ್. ಕೆ. ಆರ್
ಕ್ಷೇತ್ರ ಸಂಘಟಕರು	: ಉಷ ಲತಾ
ಸಮಸ್ಥೆಗೆ ಸಂದ ಪ್ರಶಸ್ತಿ ಮತ್ತು ವರ್ಷ	: ಬಾಬು ಜಗಜೀವನ್‌ರಾವ್ ಪ್ರಶಸ್ತಿ ೨೦೧೨

೪.೨.೩ ಕೊರಗ ಸಂಘಟನೆಗಳ ರಚನೆ:

ಸಮಗ್ರ ಗ್ರಾಮೀಣ ಆಶ್ರಮ ಸ್ವಯಂ ಸೇವಾ ಸಂಸ್ಥೆಯ ನೆರವಿನಿಂದ ಸ್ಥಾಪನೆಗೊಂಡ ಪ್ರಮುಖ ಸಂಘಟನೆಗಳಲ್ಲಿ ಈ ಕೆಳಗಿನವು ಪ್ರಮುಖವಾದವು:



ಚಿತ್ರ: ಸಮಗ್ರ ಗ್ರಾಮೀಣ ಆಶ್ರಮ ಕಛೇರಿ, ಪೆರ್ನಾಲ್, ಶಿರ್ವ.

೪.೨.೩.೧. ಕೊರಗ ಸ್ವ-ಸಹಾಯ ಸಂಘ

ಸಮಗ್ರ ಗ್ರಾಮೀಣ ಆಶ್ರಮ ಸ್ವಯಂ ಸೇವಾ ಸಂಸ್ಥೆಯ ನೆರವಿನಿಂದ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಅನೇಕ ಕಡೆಗಳಲ್ಲಿ ಕೊರಗ ಸ್ವಸಹಾಯ ಸಂಘಗಳು ಸ್ಥಾಪನೆಗೊಂಡಿದ್ದು, ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ೫೩ ಸ್ವಸಹಾಯ ಸಂಘಗಳು ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದ್ದು ಒಟ್ಟು ೫೩೦ ಮಹಿಳಾ ಸದಸ್ಯರನ್ನು ಹೊಂದಿದ್ದು ೫೦ ಪುರುಷ ಸದಸ್ಯರನ್ನು ಒಳಗೊಂಡಿದೆ. ಹೆಚ್ಚಿನ ಕಡೆಗಳಲ್ಲಿ ಕೊರಗ ಸ್ವಸಹಾಯ ಸಂಘಗಳು ತಿಂಗಳ ಮೂರನೇ ಆದಿತ್ಯವಾರ ಸೇರಿ ಸಭೆಗಳನ್ನು ನಡೆಸುತ್ತಾರೆ. ಪ್ರತಿಯೊಂದು ಸ್ವಸಹಾಯ ಸಂಘಗಳು ಪದಾಧಿಕಾರಿಗಳನ್ನು ಹೊಂದಿದ್ದು, ತಮ್ಮಲ್ಲಿಯೇ ಅಧ್ಯಕ್ಷರು, ಕಾರ್ಯದರ್ಶಿಗಳು, ಕೋಶಾಧಿಕಾರಿಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ ಮತ್ತು ಸ್ಥಳೀಯ ಅಂಗನವಾಡಿ ಕಾರ್ಯಕರ್ತೆಯರು ಮಾರ್ಗದರ್ಶನವನ್ನು ಒದಗಿಸುತ್ತಾರೆ. ಕೊರಗ ಸ್ವಸಹಾಯ ಸಂಘಗಳಲ್ಲಿ ಮಹಿಳೆಯರು ಹೆಚ್ಚಿನ ಆಸಕ್ತಿಯಿಂದ ಪಾಲ್ಗೊಂಡು ವಿವಿಧ ರೀತಿಯ ಜವಾಬ್ದಾರಿಗಳನ್ನು ವಹಿಸಿಕೊಳ್ಳುತ್ತಾರೆ. ಅಲ್ಲದೆ ಸಮಗ್ರ ಗ್ರಾಮೀಣ ಆಶ್ರಮ ಸ್ವಯಂ ಸೇವಾ ಸಂಸ್ಥೆಯ ಕಾರ್ಯಕರ್ತರು ನಿರ್ಧರಿತ ಸಭೆಗಳಿಗೆ ತೆರಳಿ ಹೊಸ ಕಾರ್ಯಕ್ರಮಗಳ ಬಗ್ಗೆ, ಸೌಲಭ್ಯಗಳ ಬಗ್ಗೆ, ಉದ್ಯೋಗ ಮತ್ತು ಆರ್ಥಿಕತೆಯ ಬಗ್ಗೆ ಹಲವಾರು ಮಾಹಿತಿ ಮತ್ತು ಮಾರ್ಗದರ್ಶನ ನೀಡುತ್ತಾರೆ. ಅಷ್ಟೇ ಅಲ್ಲದೆ ಕೊರಗ ಅಭಿವೃದ್ಧಿ ಸಂಘಗಳ ಸಕ್ರೀಯ ನಾಯಕರುಗಳು ಇವರ ಸಭೆಗಳಿಗೆ ಭೇಟಿ ನೀಡಿ ಸ್ವಸಹಾಯ ಸಂಘಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಕೊರಗರನ್ನು ಸೇರಿಸಿ, ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ನೆರವು ನೀಡುತ್ತಾರೆ. ಕೊರಗ ಸ್ವಸಹಾಯ ಸಂಘಗಳ ಸಭೆಯಲ್ಲಿ ಪ್ರತಿಯೊಬ್ಬರೂ ಕೂಡ ಗೈರುಹಾಜರಾಗದೆ ಭಾಗವಹಿಸುತ್ತಾರೆ.



ಸಭೆಯು ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ. ನಂತರ ಹಿಂದಿನ ಸಭೆಯ ವರದಿ ಮತ್ತು ಇತರ ವರದಿಗಳನ್ನು ಓದಲಾಗುತ್ತದೆ. ನಂತರ ಕೋಶಾಧಿಕಾರಿ ಲೆಕ್ಕ ಪತ್ರಗಳ ವಿವರಗಳನ್ನು ನೀಡುತ್ತಾರೆ. ಮತ್ತು ಸಭೆಯಲ್ಲಿ ಮುಂದಿನ ಕಾರ್ಯಕ್ರಮಗಳ ಯೋಜನೆಗಳನ್ನು ತಯಾರಿಸಲಾಗುತ್ತದೆ. ಅನಂತರ ಕೆಲವೊಮ್ಮೆ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಕಾರ್ಯಕ್ರಮಗಳನ್ನು ಕೂಡ ಹಮ್ಮಿಕೊಳ್ಳುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶಗಳೆಂದರೆ ಸ್ವಸಹಾಯ ಸಂಘದ ಎಲ್ಲಾ ಸದಸ್ಯರು ಸೇರಿಕೊಂಡು ಸ್ವ-ಉದ್ಯೋಗಗಳು/ಆದಾಯ ಉತ್ಪತ್ತಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಜೊತೆಗೆ ತಮ್ಮ ಸಮುದಾಯದ ಇತರ ಸದಸ್ಯರನ್ನು ತೊಡಗಿಕೊಳ್ಳುವಂತೆ ಮಾಡುತ್ತಾರೆ. ಒಟ್ಟಾರೆಯಾಗಿ ಈ ಕೊರಗ ಸ್ವಸಹಾಯ ಸಂಘಟನೆಗಳು ಕೊರಗರಲ್ಲಿ ಅದರಲ್ಲೂ ವಿಶೇಷವಾಗಿ ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಿತಿ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದರೆ ತಪ್ಪಗಲಾರದು. ಕೊರಗರ ಸ್ವಸಹಾಯ ಸಂಘದ ನೆರವಿನಿಂದ ಕೊರಗರು ತಮ್ಮ ಮೂಲ ಕುಲ ಕಸುಬುಗಳಾದ ಬುಟ್ಟಿ ನೇಯ್ಗೆ ಇತ್ಯಾದಿಗಳನ್ನು ಬಿಟ್ಟು, ಉತ್ತಮ ಆದಾಯ ತರುವ ಉದ್ದಿಮೆಗಳಾದ ಹೈನುಗಾರಿಕೆ, ಬೀಡಿ ಕಟ್ಟುವಿಕೆ, ಮಲ್ಲಿಗೆ ಕೃಷಿಗಳಲ್ಲೂ ಈ ದಿನಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಜೊತೆಗೆ ಸರಕಾರದಿಂದ ಸಿಗುವ ಕೈಗಾರಿಕಾ ತರಬೇತಿಗಳು, ಉದ್ಯೋಗಾವಕಾಶಗಳ ಬಗ್ಗೆಯೂ ಮಾಹಿತಿಗಳನ್ನು ನೀಡಲಾಗುತ್ತದೆ.

೪.೨.೩.೨. ಕೊರಗಾಭಿವೃದ್ಧಿ ಸಂಘಟನೆಗಳ ಒಕ್ಕೂಟ (ರಿ.)

ಕರ್ನಾಟಕ ಮತ್ತು ಕೇರಳ ರಾಜ್ಯದ ಕೆಲವು ಭಾಗಗಳಲ್ಲಿ ಕೊರಗಾಭಿವೃದ್ಧಿ ಸಂಘಟನೆಗಳು ತುಂಬಾ ಸಕ್ರೀಯವಾಗಿ ಕಾರ್ಯಗಳನ್ನು ನಿರ್ವಹಿಸುತ್ತಿದ್ದೆ. ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟ(ರಿ) ಒಂದು ನೋಂದಾಯಿತ ಸಂಘಟನೆಯಾಗಿದ್ದು, ಕಾಸರಗೋಡುನಿಂದ ಹಿಡಿದು ಕುಂದಾಪುರದವರೆಗೆ ಅನೇಕ ಭಾಗಗಳಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ಮುಖ್ಯವಾಗಿ ಈ ಕೊರಗಾಭಿವೃದ್ಧಿ ಸಂಘಟನೆಗಳು ಅನೇಕ ಊರುಗಳನ್ನು ಸೇರಿಸಿ ಅವುಗಳನ್ನು ಒಂದು ವಲಯಗಳನ್ನಾಗಿ ವಿಂಗಡಿಸಿ, ಪ್ರತಿಯೊಂದು ವಲಯಗಳಲ್ಲೂ ಸಂಘಟನಾ ಪದಾಧಿಕಾರಿಗಳನ್ನು ಆಯ್ಕೆ ಮಾಡಿಕೊಂಡು ಯೋಜನಾಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಕೊರಗರ ಸಂಘಟನೆಗೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ಕೆಲಸಗಳನ್ನು ಮಾಡುತ್ತಿದೆ. ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟ(ರಿ) ಇದರ ಗೌರವ ಅಧ್ಯಕ್ಷರಾದ ಶ್ರೀ ಗೋಕುಲ್‌ದಾಸ್ ಪಳ್ಳಿ ಇವರ ಮಾರ್ಗದರ್ಶನದಲ್ಲಿ ಮತ್ತು ಹಿರಿಯ ಪದಾಧಿಕಾರಿಗಳಾದ ಶ್ರೀ ಸಂಜೀವ ಕೋಡಿಕಲ್, (ಕಾರ್ಯದರ್ಶಿಗಳು), ಶ್ರೀಮತಿ ಸುಶೀಲ ನಾಡ (ಅಧ್ಯಕ್ಷರು) ಹೀಗೆ ಅನೇಕ ಸಕ್ರೀಯ

ಕಾರ್ಯಕರ್ತರು ಸೇರಿಕೊಂಡು ಸಂಘಟನೆಯನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ. ಪ್ರತಿ ವರ್ಷವೂ ಕೊರಗಾಭಿವೃದ್ಧಿ ಸಂಘಗಳ ಒಕ್ಕೂಟದ ವಾರ್ಷಿಕ ಮಹಾಸಭೆಯನ್ನು ಯಾವುದಾದರೊಂದು ಹಾಡಿಯನ್ನು ಗುರುತಿಸಿ ಅಲ್ಲಿ ನಡೆಸುತ್ತಾರೆ. ಮತ್ತು ವಾರ್ಷಿಕ ಮಹಾಸಭೆಯ ಸೂಚನೆಯನ್ನು ಎಲ್ಲಾ ವಲಯಗಳ ಸಂಘಟನೆಗಳಿಗೆ ಮುಂಚಿತವಾಗಿ ತಿಳಿಸಲಾಗುತ್ತದೆ. ಕೊರಗರ ಧ್ಯೇಯ ಗೀತೆಯೊಂದಿಗೆ ವಾರ್ಷಿಕ ಮಹಾಸಭೆಯು ಪ್ರಾರಂಭವಾಗುತ್ತದೆ. ನಂತರ ಆ ವರ್ಷದ ವಾರ್ಷಿಕ ವರದಿಯನ್ನು ಕಾರ್ಯದರ್ಶಿಗಳು ವಾಚಿಸುತ್ತಾರೆ. ನಂತರ ಕೋಶಾಧಿಕಾರಿಗಳು ಲೆಕ್ಕ ಪತ್ರಗಳ ವಿವರಣೆಗಳನ್ನು ಕೊಡುತ್ತಾರೆ. ನಂತರ ನೂತನ ಪದಾಧಿಕಾರಿಗಳ ಆಯ್ಕೆ, ಭಾಷಣ, ಸಾಂಸ್ಕೃತಿಕ ಕಾರ್ಯಕ್ರಮಗಳು ಹೀಗೆ ಒಂದು ದಿನ ಪೂರ್ತಿಯಾಗಿ ಕಾರ್ಯಕ್ರಮಗಳು ಜರಗುತ್ತವೆ. ಅಷ್ಟೇ ಅಲ್ಲದೇ ಪ್ರತಿಯೊಂದು ವಲಯಗಳಲ್ಲೂ ನಿರ್ಧರಿತ ದಿನಾಂಕದಂದು ಮಹಾಸಭೆಗಳನ್ನು ನಡೆಸಲಾಗುತ್ತದೆ ಮತ್ತು ಮಹಾಸಭೆಗಳಲ್ಲಿ ಸಮುದಾಯದ ನಾಯಕರನ್ನು ಕರೆಯಿಸಿ ಭಾಷಣ ವಿಚಾರಗೋಷ್ಠಿಗಳನ್ನು ಏರ್ಪಡಿಸಲಾಗುತ್ತದೆ.

ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಈ ಕೊರಗ ಅಭಿವೃದ್ಧಿ ಸಂಘಟನೆಗಳ ಸ್ಥಾಪನೆಗೆ ಮುಖ್ಯ ಕಾರಣ ಸಮಗ್ರ ಗ್ರಾಮೀಣ ಆಶ್ರಮ ಎಂಬ ಸ್ವಯಂ ಸೇವಾ ಸಂಸ್ಥೆ ಕೊರಗರನ್ನು ಒಗ್ಗೂಡಿಸಬೇಕೆಂಬ ದೃಷ್ಟಿಯನ್ನಿಟ್ಟುಕೊಂಡು ಸಂಘಟನೆ ಮುಖಾಂತರವೇ ಅಭಿವೃದ್ಧಿ ಸಾಧ್ಯ ಎಂದು ನಂಬಿರುವ ಈ ಸ್ವಯಂ ಸೇವಾ ಸಂಸ್ಥೆಯ ಪದಾಧಿಕಾರಿಗಳ ಮತ್ತು ಕಾರ್ಯಕರ್ತರ ನಿರಂತರ ಪರಿಶ್ರಮದ ಮೂಲಕ ಈ ಸಂಘಟನೆ ಹುಟ್ಟಿಕೊಂಡಿತು ಎಂದರೆ ತಪ್ಪಾಗಲಾರದು.



ಚಿತ್ರ: ಸಮಗ್ರ ಗ್ರಾಮೀಣ ಆಶ್ರಮ ಸಂಸ್ಥೆಯು ಹಮ್ಮಿಕೊಂಡ ಮಹಿಳೆಯರ ಹಕ್ಕುಗಳ ಕುರಿತಾದ ವಿಚಾರ ಸಂಕಿರಣ.



ಇವತ್ತು ಈ ಸಂಘಟನೆ ನಾನಾ ಕಡೆಗಳಲ್ಲಿ ಕೊರಗರಲ್ಲಿ ಸಾಮಾಜಿಕ ಅರಿವು ಮೂಡಿಸುವ ಕಾರ್ಯಕ್ರಮಗಳು, ಕೊರಗ ಮಕ್ಕಳಿಗೆ ರಜಾ ಶಿಬಿರಗಳು, ಶಿಕ್ಷಣ ಅರಿವು ಮೂಡಿಸುವ ಕಾರ್ಯಕ್ರಮಗಳು ಕೊರಗ ಸಾಂಸ್ಕೃತಿಕ ಕೂಟಗಳು, ಬೀದಿ ನಾಟಕಗಳು, ಕಾನೂನು ಅರಿವು ಕಾರ್ಯಕ್ರಮಗಳು, ಆರೋಗ್ಯ ಅರಿವು ಕಾರ್ಯಕ್ರಮಗಳು, ಸೌಲಭ್ಯ ಮತ್ತು ತರಬೇತಿ ಕಾರ್ಯಕ್ರಮಗಳು ಹೀಗೆ ಹತ್ತು ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ, ಕರಾವಳಿ ಪ್ರದೇಶಗಳಲ್ಲಿ ಕೊರಗರ ಸಂಘಟನೆಯನ್ನು ಉತ್ತಮಗೊಳಿಸುತ್ತಿದೆ. ಪ್ರಸ್ತುತ ೧೮೦೦ಕ್ಕಿಂತಲೂ ಹೆಚ್ಚು ಸದಸ್ಯರನ್ನು ಹೊಂದಿರುವ ಕೊರಗ ಅಭಿವೃದ್ಧಿ ಸಂಘಟನೆಗಳ ಒಕ್ಕೂಟ ೨೪ ಹೋಬಳಿ ವಲಯಗಳಲ್ಲಿ ಕಾರ್ಯಚರಣೆ ಮಾಡುತ್ತಿದೆ.

೪.೨.೩.೩. ಕೊರಗ ಕೃಷಿ ಸಂಘ

ಸಮಗ್ರ ಗ್ರಾಮೀಣ ಆಶ್ರಮ ಸ್ವಯಂ ಸೇವಾ ಸಂಸ್ಥೆಯ ನೆರವಿನಿಂದ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ೬ ಭಾಗಗಳಲ್ಲಿ ಕೊರಗ ಕೃಷಿ ಸಂಘ ಸ್ಥಾಪನೆಗೊಂಡಿದ್ದು ೧೫೦ಕ್ಕೂ ಅಧಿಕ ಕೊರಗ ಪುರುಷರು ಮತ್ತು ಮಹಿಳೆಯರು ಈ ಸಂಘಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಕ್ರೀಯವಾಗಿ ಕೆಲಸ ಮಾಡುತ್ತಿದ್ದಾರೆ. ಕೊರಗರಲ್ಲಿ ಕೆಲವೇ ಜನರು ಸ್ವಂತ ಜಾಮೀನು ಹೊಂದಿದ್ದು, ಹೀಗಾಗಿ ಕೊರಗ ಕೃಷಿ ಸಂಘ ಹೆಚ್ಚು ಸಕ್ರಿಯವಾಗಿ ಮತ್ತು ವ್ಯಾಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಆದರೆ ಪ್ರಸ್ತುತ ಸರಕಾರದ ಕೆಲವು ಯೋಜನೆಗಳಿಂದ ಕೆಲವು ಕೊರಗರಿಗೆ ಅಲ್ಪ ಪ್ರಮಾಣದ ಭೂಮಿ ದೊರೆತಿದ್ದು, ದೊರೆತ ಭೂಮಿಯನ್ನು ಲಾಭದಾಯಕವಾಗಿ ಪರಿವರ್ತಿಸಲು ಈ ಕೊರಗ ಕೃಷಿ ಸಂಘಗಳು ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುತ್ತಿದೆ. ಮುಖ್ಯವಾಗಿ ಕೊರಗ ಕೃಷಿ ಸಂಘದ ಸದಸ್ಯರುಗಳಿಗೆ ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರಗಳಲ್ಲಿ ಸರಕಾರದಿಂದ ಸಿಗುವ ಸೌಲಭ್ಯಗಳ ಮಾಹಿತಿಗಳು, ಮತ್ತು ಅದಕ್ಕೆ ಸಂಬಂಧಪಟ್ಟ ಆರ್ಥಿಕ ವಿವರಗಳನ್ನು ಮತ್ತು ಸೂಕ್ತ ತರಬೇತಿಗಳನ್ನು ಕೊರಗ ಕೃಷಿ ಸಂಘದ ಅಧಿಕಾರಿಗಳಿಗೆ ನೀಡಲಾಗುತ್ತದೆ. ತೆಂಗು, ಅಡಿಕೆ, ಬಾಳೆ, ಮಲ್ಲಿಗೆ, ರಬ್ಬರ್ ಇತ್ಯಾದಿ ಆದಾಯ ತರುವ ಕೃಷಿಗಾರಿಕೆ ಬಗ್ಗೆ ಮತ್ತು ಉಳುಮೆ ಯಂತ್ರಗಳು, ಹುಲ್ಲು ತೆಗೆಯುವ ಯಂತ್ರಗಳು, ಟ್ರ್ಯಾಕ್ಟರ್ ಇತ್ಯಾದಿ ಕೃಷಿ ಯಂತ್ರೋಪಕರಣಗಳ ಬಳಕೆ ಮತ್ತು ನಿರ್ವಹಣೆ ಬಗ್ಗೆ ಕೊರಗ ಕೃಷಿ ಸಂಘದ ಸದಸ್ಯರುಗಳಿಗೆ ತರಬೇತಿ ನೀಡಲಾಗುತ್ತದೆ. ಪ್ರತಿ ತಿಂಗಳ ಕೊನೆಯ ಆದಿತ್ಯವಾರ ಕೊರಗ ಕೃಷಿ ಸಂಘದ ಸದಸ್ಯರುಗಳ ಸಭೆ ನಡೆಸಲಾಗುತ್ತದೆ. ಪ್ರತಿ ಸಂಘಗಳಲ್ಲೂ ಆಯ್ಕೆಗೊಂಡ ಪದಾಧಿಕಾರಿಗಳು ಇರುತ್ತಾರೆ. ಅಲ್ಲದೇ ಪ್ರತೀ ಸಭೆಗಳಲ್ಲಿ ಸಮಗ್ರ ಗ್ರಾಮೀಣ ಆಶ್ರಮ ಸ್ವಯಂ ಸೇವಾ ಸಂಸ್ಥೆಯ ಕಾರ್ಯಕರ್ತರು ಹಾಜರಿದ್ದು ಮಾರ್ಗದರ್ಶನ ಮಾಹಿತಿಗಳನ್ನು ನೀಡುತ್ತಾರೆ. ಜೊತೆಗೆ

ಸರಕಾರದಿಂದ ಸಿಗುವ ಕೈಗಾರಿಕಾ ತರಬೇತಿಗಳು, ಉದ್ಯೋಗವಕಾಶಗಳ ಬಗ್ಗೆಯೂ ಮಾಹಿತಿಗಳನ್ನು ನೀಡಲಾಗುತ್ತದೆ. ಪ್ರಸ್ತುತ ಕೊರಗ ಕೃಷಿ ಸಂಘದಲ್ಲಿ ಕೊರಗ ಯುವಕರು ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡು ಕೃಷಿ ಯಂತ್ರೋಪಕರಣಗಳನ್ನು ಖರೀದಿಸಿ ಉತ್ತಮ ಆದಾಯವನ್ನು ಪಡೆಯುತ್ತಿದ್ದಾರೆ ಮತ್ತು ಇತರರಿಗೂ ಮಾದರಿಯಾಗಿದ್ದಾರೆ.

೪.೨.೩.೪. ಕೊರಗರ ಭೂಮಿ ಚಳುವಳಿ:

ಕೊರಗರಲ್ಲಿ ಸಂಘಟನೆಯ ಪರಿಕಲ್ಪನೆ ಯಾರಿಗೂ ಇರಲಿಲ್ಲ. ಈ ಪರಿಕಲ್ಪನೆಯನ್ನು ಅವರಲ್ಲಿ ಬಿತ್ತಿದವರು ಸಮಗ್ರ ಗ್ರಾಮೀಣಾಶ್ರಮದ ಶ್ರೀ ದೇವದಾಸ ಶೆಟ್ಟಿಯವರು. ೧೯೮೭ ರಿಂದ ಕೊರಗರ ಮನೆಗಳಿಗೆ ಭೇಟಿ ನೀಡಿ ಅವರ ಪರಿಸ್ಥಿತಿಯ ಅಧ್ಯಯನ ನಡೆಸಿದ ಶೆಟ್ಟರು ಪಂಚವಾರ್ಷಿಕ ಯೋಜನೆಗಳು, ಕೊರಗರನ್ನು ತಲಪಿಯೇ ಇಲ್ಲವೆಂಬ ಅಂಶವನ್ನು ಮನದಟ್ಟುಮಾಡಿಕೊಂಡು, ಅವರನ್ನು ಸಂಘಟಿಸುವ ಸಾಹಸಕ್ಕೆ ಕೈಹಾಕಿದರು. ಈ ಪ್ರಯತ್ನದ ಫಲವಾಗಿ ಕಿಲ್ಪಾಡಿ, ಮೂಲ್ಕಿ, ಕಾರ್ನಾಡು, ಬಳ್ಕುಂಜ್ಞ, ಶಿರ್ವಾ, ಕಟಪಾಡಿ, ಹೆಬ್ರಿ ಮುಂತಾದ ಸ್ಥಳಗಳ ಕೊರಗರು ಮೊಟ್ಟ ಮೊದಲು ಸಂಘಟನೆಯಲ್ಲಿ ಪಾಲ್ಗೊಳ್ಳುವಂತಾಯಿತು. ಮುಂದೆ ೧೯೮೮-೮೯ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕೊರಗರ ಅಭಿವೃದ್ಧಿ ಸಂಘ ಹುಟ್ಟಿಕೊಂಡಿತು.

ಕೊರಗರು ಸಂಘಟಿತರಾದ ಮೇಲೆ ಮೊದಲು ಭೂಮಿಯ ಅವಶ್ಯಕತೆಯ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಸಿದರು. ನಂತರ ಕೊರಗರು ಬೃಹತ್ ರ್‍ಯಾಲಿಯೊಂದಿಗೆ ತೆರಳಿ ಪ್ರತಿ ವ್ಯಕ್ತಿಗೆ ಐದು ಎಕರೆ ಜಮೀನು ನೀಡಬೇಕು ಹಾಗೂ ಕೊರಗರ ಸಮಗ್ರ ಅಧ್ಯಯನ ನಡೆಯಬೇಕು ಎಂಬ ಮನವಿಯನ್ನು ಸರಕಾರಕ್ಕೆ ನೀಡಲಾಯಿತು. ಈ ರ್‍ಯಾಲಿಯಲ್ಲಿ ೬೦% ಮಹಿಳೆಯರು ಪಾಲ್ಗೊಂಡಿದ್ದರು. ಈ ಹೋರಾಟದ ಸ್ವರೂಪ ಹೇಗಿತ್ತು ಎಂದರೆ, ಕೊರಗರ ಹೆಣ್ಣು ಮಕ್ಕಳು ಅವರು ಉಟ್ಟ ಸೀರೆಯಲ್ಲಿಯೇ ಬಂದು ಹೋರಾಟದಲ್ಲಿ ಭಾಗವಹಿಸಿದ ಅನೇಕ ಮಹಿಳೆಯರ ಚಿತ್ರಣ ಅಲ್ಲಿ ಎದ್ದು ಕಾಣುತ್ತಿತ್ತು ಎಂದು ಕೊರಗರ ಮಾಹಿತಿದಾರರು ವಿವರಣೆ ನೀಡಿದರು. ಕೊರಗರು ಬೀದಿಗಿಳಿದು ಸುರಿಯುವ ಮಳೆಯನ್ನೂ ಲೆಕ್ಕಿಸದೆ ಗುಡುಗಿದ ಪರಿಣಾಮ ಸರಕಾರ, ಕೊರಗರ ಬಗ್ಗೆ ಸಮಗ್ರ ಅಧ್ಯಯನ ನಡೆಸಿ ವರದಿ ನೀಡಲು ಶಿಫಾರಸು ಮಾಡಿತು. ಅಂದು ಮಂಗಳೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದ ಶ್ರೀ ಮಹಮ್ಮದ್ ಪೀರ್ ಅವರ ನೇತೃತ್ವದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೪೦೦ ಕುಟುಂಬಗಳನ್ನು ಮಾದರಿ ಸಮೀಕ್ಷೆಗೆ ಅಳವಡಿಸಿಕೊಂಡು ಒಂದು ವರ್ಷದವರೆಗೆ ಅಧ್ಯಯನ ನಡೆಸಲಾಯಿತು. ಮಹಮ್ಮದ ಪೀರ ಸಮಿತಿಯು ಮುಖ್ಯವಾಗಿ ಕೊರಗರಲ್ಲಿ ಶಿಕ್ಷಣದ ಮತ್ತು ಅಪೌಷ್ಟಿಕತೆಯ ಕೊರತೆ ಇದೆ. ಅವರಿಗೆ ತಲಾ ಎರಡೂವರೆ ಎಕರೆ ಜಮೀನು ನೀಡಿ ಅವರಿಗೆ ಪುನರ್ವಸತಿ

ಕಳ್ಪಿಸಿಕೊಡಬೇಕು ಎಂಬ ವರದಿಯನ್ನು ೧೯೯೪ರ ಮಾರ್ಚ್‌ನಲ್ಲಿ ಸರಕಾರಕ್ಕೆ ಸಿಫಾರಸ್ಸು ಮಾಡಿತು. ಅದೆ ವರ್ಷದ ಸಪ್ಟೆಂಬರ್‌ನಲ್ಲಿ ಜಿಲ್ಲಾ ಪಂಚಾಯತಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಪಂಚಾಯತಿ ಅಧ್ಯಕ್ಷರಾಗಿದ್ದ ಶ್ರೀ. ಸಂಕಪ್ಪ ರೈ ಅವರ ನೇತೃತ್ವದಲ್ಲಿ ಕೊರಗರಿಗೆ ಎರಡೂವರೆ ಎಕರೆ ಜಮೀನು ನೀಡಬೇಕೆಂಬ ನಿರ್ಣಯ ಮಾಡಲಾಯಿತು. ಆದರೆ, ಅದೇ ವರ್ಷ ಅಕ್ಟೋಬರ್ ತಿಂಗಳಲ್ಲಿ ರಾಜಕೀಯ ಪಕ್ಷ ಬದಲಾದಾಗ ಆ ನಿರ್ಣಯ ಮೂಲೆ ಗುಂಪಾಯಿತು. ಇದರಿಂದ ನೊಂದ ಕೊರಗರು ಅದೇ ನವೆಂಬರ್ ತಿಂಗಳಲ್ಲಿ ಭೂಮಿ ಚಳವಳಿ ಆರಂಭಿಸುವ ನಿರ್ಧಾರ ಕೈಕೊಂಡರು.

ಕಾಪುವಿನ ಶ್ರೀ ಲಕ್ಷ್ಮೀ ಜನಾರ್ದನ ದೇವಸ್ಥಾನದ ಸಭಾಭವನದಲ್ಲಿ ಕೊರಗರು ಬೃಹತ್ ಸಮಾವೇಶ ಹಮ್ಮಿಕೊಂಡು, ಶ್ರೀ. ಜಯಪ್ರಕಾಶ್ ಹೆಗ್ಗಡೆಯವರಿಗೆ ಈ ಸಂಬಂಧ ಮನವಿ ನೀಡಿದರು. ಅವರಿಂದ ಯಾವುದೇ ಪ್ರತಿಕ್ರಿಯೆ ಬರದಿದ್ದಾಗ ಸರಕಾರಿ ಜಮೀನು ಇರುವ ಸ್ಥಳಗಳನ್ನು ಗುರುತಿಸಿ ಅಲ್ಲಿ ಬೇಲಿ ಹಾಕಿ ಅಲ್ಲಿಯೇ ಪ್ರತಿಭಟಿಸುತ್ತ ಕುಳಿತು ಸರಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡಿದರು. ಗುತ್ತಕಾಡಿನಲ್ಲಿ ಮೊದಲು ಬೇಲಿ ಹಾಕಿ ಕೊರಗರು ತಮ್ಮ ಹಕ್ಕು ಸ್ಥಾಪನೆ ಮಾಡಿದರು. ಹೀಗೆ ೧೯೯೫ ರಿಂದ ೧೯೯೭ರವರೆಗೆ ಸರಕಾರಿ ಜಮೀನಿಗೆ ಬೇಲಿ ಹಾಕುವ ಕೆಲಸ ಮುಂದುವರಿಯಿತು.

೧೯೯೭ ರಲ್ಲಿ ಭೂಮಿ ಚಳವಳಿ ಆಂದೋಲನಕ್ಕೆ ಸುರಾಲದಲ್ಲಿ ನಾಂದಿ ಹಾಡಿದರು. ೧೦ ದಿನಗಳ ಕಾಲ ಹೋರಾಟ ನಡೆಯಿತು. ಕೊಕ್ಕರ್ಣೆಯೂ ಸೇರಿದಂತೆ ಸುಮಾರು ೨೦೦ ಎಕರೆ ಅರಣ್ಯ ಇಲಾಖೆಯ ಭೂಮಿಯನ್ನು ನೂರಾರು ಕೊರಗ ಸಮುದಾಯದ ಚಳುವಳಿಗಾರರು ಪ್ರವೇಶಿಸಿದರು. ಆದರೆ, ಅಲ್ಲಿ ಆಗಲೇ ಪೋಲೀಸರು ಗನ್ ಹಿಡಿದು ನಿಂತಿದ್ದರು. ಅವರಿಗೆ ಹೆದರದೆ ನಿಂತ ಹೆಂಗಸರು ಮತ್ತು ಗಂಡಸರ ಕೆಚ್ಚಿಗೆ ಬೆದರಿದ ಸರಕಾರ ಸುರಾಲ ದೇವಸ್ಥಾನದಲ್ಲಿ ಆಗಿನ ಶಾಸಕರಾದ ಜಯಪ್ರಕಾಶ ಹೆಗ್ಡೆಯವರ ನೇತೃತ್ವದಲ್ಲಿ ಮಾತುಕತೆಗೆ ಪ್ರತಿಭಟನೆಯಲ್ಲಿ ನಿರತ ಕೊರಗರನ್ನು ಆಹ್ವಾನಿಸಿದರು.ಬೀ ಸಭೆಯಲ್ಲಿ ಎಲ್ಲೆಲ್ಲಿ ಸರಕಾರದ ಭೂಮಿ ಇದೆ ಎಂದು ಪರಿಶೀಲಿಸಿದ ಬಳಿಕ ಕೊರಗರು ಅರ್ಜಿ ಹಾಕಬಹುದು ಎಂಬ ತೀರ್ಮಾನದ ನಂತರ ಕೊರಗರ ಹೋರಾಟವು ಸ್ಥಗಿತಗೊಂಡಿತು. ಅದೇ ಸುರಾಲ ಚಳುವಳಿ. ಮೂರು ವರ್ಷ ಕಳೆದರೂ ಸರಕಾರ ಕೊರಗರಿಗೆ ಭೂಮಿಯನ್ನು ನೀಡುವ ವಿಷಯದಲ್ಲಿ ನಿರ್ಲಕ್ಷ ತೋರಿದ್ದರ ಪರಿಣಾಮ ಕೊರಗರು ಮತ್ತೆ ಭೂಮಿ ಹೋರಾಟಕ್ಕೆ ಇಳಿಯಬೇಕಾಯಿತು ಮುಂದೆ ಕಳತ್ತೂರು ಚಳವಳಿ ಪ್ರಾರಂಭವಾಯಿತು.

ಕೊರಗರ ಈ ಚಳುವಳಿ ಶ್ರೀ ಪಿ. ಗೋಕುಲ್‌ದಾಸ್ ಅವರ ನೇತೃತ್ವದಲ್ಲಿ ಜನ ಜಾಗೃತಿ ಪಾದಯಾತ್ರೆ ಆರಂಭವಾಯಿತು. ಉಡುಪಿಯಿಂದ ಆರಂಭವಾದ ಈ ಜನ ಜಾಗ್ರತಿ ಪಾದಯಾತ್ರೆ ಮಂಗಳೂರಿನಿಂದ ಕಾರ್ಕಳದ ಮೂಲಕ ಕಳತ್ತೂರಿಗೆ ಈ ಜಾಥಾ ತಲುಪಿತು. ೨೦೦೦ನೇ ಇಸವಿಯಲ್ಲಿ ಉಡುಪಿಯ ಕಳತ್ತೂರಿನ ಗೇರುಬೀಜದ ಹಾಡಿಯಲ್ಲಿ ಇವರು ಭೂಮಿ ಚಳುವಳಿಯನ್ನು ಆರಂಭಿಸಿದರು. ಪ್ರತಿ ಸಲ ಕೊರಗರು ತಮ್ಮ ಚಳುವಳಿಯ ಬಗ್ಗೆ ಮಾಹಿತಿ ನೀಡುತ್ತಿದ್ದ ಕೊರಗರು ಈ ಸಲ ಯಾವುದೇ ಮುನ್ಸೂಚನೆ ನೀಡದೆ ರಹಸ್ಯವಾಗಿ ಈ ಕಾರ್ಯಾಚರಣೆ ಆರಂಭಿಸಿದರು. ಇದ್ದಕ್ಕಿದ್ದಂತೆ ೧೦೦೦ಕ್ಕೂ ಹೆಚ್ಚು ಕೊರಗರು ಸರಕಾರದ ಭೂಮಿಯನ್ನು ವಶಪಡಿಸಿ ರಾತ್ರೋರಾತ್ರಿ ೨೦೦ ಮನೆಗಳನ್ನು ನಿರ್ಮಿಸಿ, ಅಲ್ಲಿಯೇ ನೆಲೆಸಿದರು. ಆ ವರ್ಷ ೨೦೦ ಎಕರೆ ಪ್ಲಾಟಿನಲ್ಲಿ ಅವರು ಗೇರು ಬೀಜ ಕೊಯ್ದರು. ಗೇರುಬೀಜವನ್ನು ಕೊಯ್ಯಲು ಹೋದಾಗ ಅರಣ್ಯ ಇಲಾಖೆಯವರು ಹೆಂಗಸರಿಗೆ ಬಾಸುಂಡೆ ಬರುವ ಹಾಗೆ ಹೊಡೆದರು. ಕೇಸ್ ದಾಖಲಾಯಿತು. ಕೊರಗರನ್ನು ಕಾಣಲು ಬಂದ ಸಚಿವೆ ಮೋಟಮ್ಮನವರರಿಗೆ ಕೊರಗರು "ನಮಗೆ ಭಿಕ್ಷೆ ನೀಡಬೇಡಿ, ಭೂಮಿ ಕೊಡಿ" ಎಂದು ಹೆಂಗಸರು ಅವರನ್ನು ಒತ್ತಾಯಿಸಿದರು. ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು "ಭೂಮಿ ಕೊಟ್ಟರೆ ಏನು ಮಾಡುತ್ತೀರಿ?" ಎಂದು ಪ್ರಶ್ನಿಸಿದರು. ಆಗ "ನೀವು ಎಷ್ಟು ಭೂಮಿ ಕೊಟ್ಟಿದ್ದೀರಿ?" ಎಂದು ಮಹಿಳೆಯರು ತಿರುಗೇಟು ನೀಡಿದರು. ಕೊನೆಗೆ ಕಾಗೋಡು ತಿಮ್ಮಪ್ಪನವರು ಬಂದು ಕೊರಗರಿಗೆ ಭೂಮಿ ನೀಡಬೇಕೆಂದು ಸೂಚಿಸಿದ ಹಿನ್ನೆಲೆಯಲ್ಲಿ, ಕೊರಗರಿಗೆ ಅಲ್ಲಲ್ಲಿ ಭೂಮಿ ನೀಡುವ ಪ್ರಕ್ರಿಯೆ ಆರಂಭವಾಯಿತು.

ನಂತರ ಮೂಡಬಿದ್ರೆಯ ಪಾಲಡ್ಕದಲ್ಲಿ, ಬಂಟ್ವಾಳ, ಪುತ್ತೂರಿನಲ್ಲಿ ಇಂತಹ ಧರಣಿಗಳು ನಡೆದವು. ಈ ಎಲ್ಲ ಚಳುವಳಿಗಳಲ್ಲೂ ಕೊರಗರ ಹೆಂಗಸರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಎಂಬುದು ವಿಶೇಷ. ಈ ಚಳುವಳಿಯಿಂದ ಸುಮಾರು ೧೦೦೦ ಸಾವಿರ ಎಕರೆ ಭೂಮಿ ಈ ಸಮುದಾಯದ ಸುಮಾರು ೪೦೦ ಕೊರಗ ಕುಟುಂಬಗಳಿಗೆ ಭೂಮಿ ಸಿಗುವಂತಾಯಿತು. ಕೊರಗ ಸಂಘಟನೆಯ ಒಕ್ಕೂಟದ ಅಧ್ಯಕ್ಷೆಯಾದ ಸುಶೀಲಾ ನಾಡ ಅವರು ಈ ಸಂಘಟನೆಯನ್ನು ಹೆಚ್ಚು ಕ್ರಿಯಾಶೀಲವಾಗಿರಿಸಿದ್ದಾರೆ.ಎಂದು ಹೇಳಬಹುದು.

೪.೨.೩.೫. ಭೂಮಿ ಚಳುವಳಿ ಬಗ್ಗೆ ಕೊರಗ ಸಂಘಟನೆಯ ನಾಯಕಿ ಗೌರಿ ಕೆಂಜೂರು ಅವರ ಅಭಿಪ್ರಾಯಗಳು:

ಭೂಮಿ ಚಳುವಳಿಯನ್ನು ನಾವು ಮೊದಲು ಆರಂಭಿಸಿದ್ದು ಕಿನ್ನಿಗೋಳಿಯಲ್ಲಿ. ಸುರಾಲ ಚಳುವಳಿ ನಮ್ಮ ದೊಡ್ಡ ಚಳುವಳಿ. ಸುಮಾರು ೨೦೦ ಎಕರೆ ಅಕೇಶಿಯಾ ಪ್ಲಾಂಟೇಶನ್

ಅತಿಕ್ರಮಿಸುವ ಪ್ಲಾನ್ ನಮ್ಮದಾಗಿತ್ತು. ಅಲ್ಲಿ ಪೊಲೀಸರು ಗನ್ ಹಿಡಿದು ನಿಂತಿದ್ದರೂ ನಾವು ಹೆದರಲಿಲ್ಲ. ಮತ್ತೆ ಜಯಪ್ರಕಾಶ ಹೆಗ್ಡೆಯವರೊಂದಿಗೆ ಮಾತುಕತೆ ನಡೆದಾಗ ಅವರು ಸರಕಾರಿ ಜಾಗ ಹುಡುಕಿ ಅರ್ಜಿ ಹಾಕಬಹುದು ಎಂದರು. ನಾವು ಜಾಗ ಹುಡುಕಿಕೊಂಡೆವು. ಆ ನಂತರ ಸರಕಾರದಿಂದ ಫಾಲೋ ಆಪ್ ಸಿಗಲಿಲ್ಲ. ಮುಂದೆ ಕಳಚ್ಚೂರು ಚಳುವಳಿ ಮಾಡಿದೆವು. ಅದು ನಡೆದದ್ದು ೨೦೦೦ನೇ ಇಸವಿಯಲ್ಲಿ. ಅದು ದೊಡ್ಡ ಮಟ್ಟದಲ್ಲಿ ಆಯಿತು. ೨೦೦ ಎಕರೆ ಜಾಗದಲ್ಲಿ ರಾತ್ರಿಯೇ ೨೦೦ ಮನೆಗಳನ್ನು ಕಟ್ಟಿ ಅಲ್ಲೇ ನೆಲೆಸಿದೆವು. ಆ ಊರಿನವರು, ಅಧಿಕಾರಗಳು ನಮ್ಮ ವಿರುದ್ಧ ತಿರುಗಿಬಿದ್ದರು. ಊರಿನ ಫೋನ್ ಕಟ್ ಮಾಡಿ ಯಾರನ್ನೂ ಸಂಪರ್ಕ ಮಾಡದಂತೆ ತಡೆದರು. ಆರನೇ ದಿನ ಅಧಿಕಾರಿಗಳು ಬಂದಾಗ ನಾಮಗೆ ಭೂಮಿ ಕೊಡದೇ ಇದ್ದರೆ ಇಲ್ಲಿಂದ ಕದಲಲಾರೆವು ಎಂದಾಗ, ಹೆಬ್ರಿಯ ರೇಂಜರ್ ಆಫೀಸಿಗೆ ನಮ್ಮನ್ನು ಹೊತ್ತೊಯ್ದರು. ನಾವು ಸುಮಾರು ೪೦ ಮಹಿಳೆಯರಿದ್ದೆವು. ಅಲ್ಲಿ ಯಾವ ಬೇಡಿಕೆಗೂ ಒಪ್ಪದ ಕಾರಣ ರಾತ್ರಿ ಒಂದು ಗಂಟೆಗೆ ನಮ್ಮನ್ನು ಉಡುಪಿ ಜೈಲಿಗೆ ಹಾಕಿದರು. ಗರ್ಭಿಣಿ ಹೆಂಗಸರು, ವೃದ್ಧೆಯರು, ಚಿಕ್ಕ ಮಗುವಿನ ತಾಯಂದಿರು ಅಲ್ಲಿದ್ದರು.

ನಾವು ದಲಿತರು ಎಂಬ ಕಾರಣಕ್ಕೆ ಜೈಲಿನಲ್ಲಿದ್ದ ಇತರೆ ಕೈದಿಗಳು ನಮ್ಮನ್ನು ಶೋಷಣೆ ಮಾಡುತ್ತಿದ್ದರು. ಶೌಚಾಲಯವೂ ಸೇರಿದಂತೆ ಎಲ್ಲಾ ಶುಚಿಗೊಳಿಸುವ ಕೆಲಸಗಳನ್ನು ನಮ್ಮಿಂದಲೇ ಮಾಡಿಸುತ್ತಿದ್ದರು. ಕಾರಣವಿಲ್ಲದೆ ನಮ್ಮ ಮೇಲೆ ಸಿಟ್ಟಿಗೇಳುವುದು, ಮೂದಲಿಸುವುದು ಸಾಮಾನ್ಯವಾಗಿತ್ತು. ಒಮ್ಮೆ ಶೌಚಾಲಯದಲ್ಲಿ ಮುಟ್ಟಿನ ಕಲೆಗಳು ಕಂಡುಬಂದಾಗ ಅದನ್ನು ಕೊರಗ ಹೆಂಗಸರೇ ಮಾಡಿದ್ದು ಎಂಬ ಆರೋಪ ಕೇಳಿಬಂತು. ಇದರಿಂದ ರೋಷ ಉಕ್ಕಿದ ಈ ಮಹಿಳೆಯರು ಆರೋಪ ಮಾಡಿದವರನ್ನು ಶೌಚಾಲಯಕ್ಕೆ ಕರೆದುಕೊಂಡು ಹೋಗಿ ಬಟ್ಟೆ ಎತ್ತಿ ತೋರಿಸಿ ಅದು ನಮ್ಮದಲ್ಲಿ ಎಂದು ಸಾಧಿಸಿ ತೋರಿಸಿದ ಪ್ರಸಂಗವೂ ನಡೆಯಿತು. ಜೈಲಿನ ಒಳಗೆ ಬಳೆ, ಸರ ಎಲ್ಲವನ್ನೂ ತೆಗೆಯಬೇಕಾದ ಪ್ರಸಂಗದಲ್ಲಿ ಅಕ್ಕಣಿ, ಬಾಬಿ, ಬೊಮ್ಮಿ ಮುಂತಾದ ಮಹಿಳೆಯರು ತುಂಬಾ ಗಲಾಟೆ ಮಾಡಿದರು. ಮಕ್ಕಳಿದ್ದವರಿಗೆ ಜೈಲಿನಲ್ಲಿ ತುಂಬಾ ಕಷ್ಟವಾಯಿತು. ಒಬ್ಬಳಿಗೆ ಮೂರು ತಿಂಗಳ ಮಗುವಿತ್ತು. ಅದಕ್ಕೆ ಉಬ್ಬಸ ಕೂಡಾ ಇತ್ತು. ಆ ಮಗುವಿಗೆ ಔಷಧಿ ಕೂಡಾ ಸರಿಯಾಗಿ ಕೊಡಲಾಗಲಿಲ್ಲ.

ನಮ್ಮಲ್ಲಿ ಗರ್ಭಿಣಿ ಹೆಂಗಸರಿದ್ದರು ಎಂಬ ಕಾರಣಕ್ಕೆ ೧೫ ದಿವಸದಲ್ಲಿ ನಮಗೆ ಜಾಮೀನು ಸಿಕ್ಕಿತು. ಬಳಿಕ ಬಿಡುಗಡೆಯಾಗಿ ಬಂದಾಗ ಮೊದಲು ಕೋಡಿಕಲ್‌ನಲ್ಲಿ, ಬಳಿಕ ಉಡುಪಿಯಲ್ಲಿ ನಮ್ಮನ್ನು ಸಮುದಾಯದವರು ಪ್ರೀತಿಯಿಂದ ಸ್ವಾಗತಿಸುವ ಸಮಾರಂಭ ಮಾಡಿದರು. ಆದರೆ ಉಡುಪಿಯಲ್ಲಿ ಇಡೀ ಊರೇ ಕೊರಗ ಸಮುದಾಯಕ್ಕೆ ಬಹಿಷ್ಕಾರ ಹಾಕಿತು. ಯಾವ ಸಾಮಾನು

ತರಬೇಕಾದರೂ, ಹೆಬ್ರಿಗೆ ಹೋಗಬೇಕಾಗಿತ್ತು. ಬಸ್‌ಗಳಲ್ಲಿ ಕೂಡಾ ಪೋಸ್ಟರ್‌ಗಳಲ್ಲಿ ಹಾಕಿ ಪ್ರಚಾರ ಮಾಡಿ ಬಹಿಷ್ಕಾರದ ಶಿಕ್ಷೆ ನೀಡಿದ್ದರು.

ಆ ವರ್ಷ ಗೇರು ಬೀಜವನ್ನು ಕೊಯ್ಯಲು ಹೋದಾಗ ನಮಗೆ ಏನೂ ತೊಂದರೆಯಾಗಲಿಲ್ಲ. ನಂತರದ ವರ್ಷದಲ್ಲಿ ಅರಣ್ಯ ಇಲಾಖೆಯವರು ನಮಗೆ ಚೆನ್ನಾಗಿ ಹೊಡೆದರು. ಮೈಮೇಲೆಲ್ಲ ಬಾಸುಂಡೆ ಬಂತು. ಕೇಸ್ ಹಾಕಿದೆವು. ಡಿಸಿ ಆಫೀಸಿನೆದುರು ಧರಣಿ ಕುಳಿತೆವು. ಡಿಸಿ ಕೇರ್ ಮಾಡಲಿಲ್ಲ. ೪೫ ದಿನ ಸತ್ಯಾಗ್ರಹ ಮಾಡಿದೆವು. ಬಹುತೇಕ ಮಹಿಳೆಯರೇ ಈ ಹೋರಾಟದಲ್ಲಿದ್ದದ್ದು. ದಿನಕ್ಕೆ ೫೦ ಜನರಂತೆ ತಂಡ ತಂಡವಾಗಿ ಧರಣಿ ಕುಳಿತೆವು. ಕೊನೆಗೆ ಕಾಗೋಡು ತಿಮ್ಮಪ್ಪನವರ ಆದೇಶದಂತೆ ೧೦೦೦ ಎಕರೆಯಷ್ಟು ಭೂಮಿ ನಮಗೆ ಸಿಕ್ಕಿತು. ಇಷ್ಟೆಲ್ಲ ಹೋರಾಟ ಮಾಡಿದ್ದರಿಂದಲೇ ನಮಗೆ ಭೂಮಿ ಸಿಕ್ಕಿದ್ದು ಎಂದು ನಾನು ಖಂಡಿತವಾಗಿಯೂ ಹೇಳಬಲ್ಲೆ.

೪.೨.೩.೬. ಕೊರಗ ಬುಟ್ಟಿ ನೇಯ್ಗೆಗಾರರ ಸಂಘ:

ಸಮಗ್ರ ಗ್ರಾಮೀಣ ಆಶ್ರಮ ಸ್ವಯಂ ಸೇವಾ ಸಂಸ್ಥೆಯು, ಕೊರಗ ಸಮುದಾಯದ ಮೂಲ ಕುಲ ಕಸುಬಾದ ಬುಟ್ಟಿ ನೇಯುವಿಕೆಯ ಪರಂಪರೆಯನ್ನು ಮುಂದುವರಿಸುವ ದೃಷ್ಟಿಯಿಂದ, ಬುಟ್ಟಿ ನೇಯುವಿಕೆಯ ಮಾರುಕಟ್ಟೆ ವಿಸ್ತಾರ ಹಾಗೂ ಬುಟ್ಟಿ ನೇಯ್ಗೆಗಾರರ ಆರ್ಥಿಕತೆಯನ್ನು ಪ್ರಬಲಗೊಳಿಸುವ ಉದ್ದೇಶದಿಂದ ಕೊರಗ ಬುಟ್ಟಿ ನೇಯ್ಗೆಗಾರರ ಸಂಘವನ್ನು ಸ್ಥಾಪಿಸಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಒಟ್ಟು ೪ ಕೊರಗ ಬುಟ್ಟಿ ನೇಯ್ಗೆಗಾರರ ಸಂಘಗಳು ಸಕ್ರೀಯವಾಗಿ ಕಾರ್ಯನಿರ್ವಹಿಸುತ್ತಿವೆ. ತಿಂಗಳಿಗೊಮ್ಮೆ ಸಂಘದ ಸಭೆಗಳು ನಡೆಯುತ್ತವೆ. ಸಭೆಗಳಲ್ಲಿ ಬುಟ್ಟಿ ನೇಯ್ಗೆಗಾರರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿ ಅದಕ್ಕೆ ಬೇಕಾದ ಪರಿಹಾರ ಯೋಜನೆಗಳನ್ನು ಸಿದ್ಧಪಡಿಸುತ್ತಾರೆ. ಅಷ್ಟೇ ಅಲ್ಲದೆ ಬುಟ್ಟಿ ನೇಯುವಿಕೆಯಲ್ಲಿ ಅದರ ವಿನ್ಯಾಸ, ಕೌಶಲ್ಯ ಹೆಚ್ಚುವಿಕೆಯ ಬಗ್ಗೆ ಮಾಹಿತಿಗಳನ್ನು ನೀಡಲಾಗುತ್ತದೆ ಜೊತೆಗೆ ಸಭೆಗಳಲ್ಲಿ ಬಿದಿರಿನ ಸರಕುಗಳ ಪೂರೈಕೆಯನ್ನು ಗಮನದಲ್ಲಿರಿಸಿಕೊಂಡು, ಎಲ್ಲಾ ಕಡೆಗಳಲ್ಲಿ ಏಕರೀತಿಯ ಬೆಲೆಗಳನ್ನು ನಿರ್ಧರಿಸಲಾಗುತ್ತದೆ. ಕೊರಗ ಬುಟ್ಟಿ ನೇಯ್ಗೆಗಾರರ ಸಂಘ ಪ್ರಾರಂಭವಾದ ಬಳಿಕ, ಬುಟ್ಟಿ ನೇಯುವ ಕೊರಗ ಜನರಲ್ಲಿ ಹೊಸ ಚೈತನ್ಯ ಬಂದಿದೆ ಎಂದರೆ ತಪ್ಪಾಗಲಾರದು. ಯಾಕೆಂದರೆ ಒಂದು ಹಂತದಲ್ಲಿ ಬಿದಿರಿನ ಬುಟ್ಟಿಗಳು ನಾನಾ ಕಾರಣಗಳಿಂದ ಜನಾಕರ್ಷಣೆ ಕಳೆದುಕೊಂಡಿದ್ದವು ಮತ್ತು ಬುಟ್ಟಿ ನೇಯುವವರ ಸ್ಥಿತಿ ಕೂಡ ಶೋಚನೀಯವಾಗಿತ್ತು. ಆದರೆ ಪ್ರಸ್ತುತ, ಅವರ ಆರ್ಥಿಕ ಸ್ಥಿತಿ ನಿಧಾನವಾಗಿ ಸುಧಾರಿಸತೊಡಗಿದೆ. ಅದರಲ್ಲೂ ಮುಖ್ಯವಾಗಿ ಕೊರಗ ಸಮುದಾಯದ ಹಿರಿಯ ನಾಗರೀಕರು ಬುಟ್ಟಿ ನೇಯುವುದರ ಮೂಲಕ ತಮ್ಮ ಜೀವನಕ್ಕೆ

ಬೇಕಾದ ಆದಾಯವನ್ನು ಕ್ರೋಢೀಕರಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಕೊರಗರ ಬುಟ್ಟಿ ನೇಯ್ಗೆಗಾರರ ಸಂಘವು ಕೊರಗರ ಮೂಲ ಕುಲಕಸುಬು ನಶಿಸಿ ಹೋಗುವುದನ್ನು ತಡೆಗಟ್ಟುವುದರ ಜೊತೆಗೆ ಅದಕ್ಕೆ ಹೊಸ ರೂಪು ಕೊಟ್ಟು ಕೊರಗರ ಆರ್ಥಿಕ ಮಟ್ಟ ಸುಧಾರಣೆ ಮಾಡುವಲ್ಲಿ ಯಶಸ್ವಿಯಾಗಿದೆ.

೪.೨.೪.. ಸಮಗ್ರ ಗ್ರಾಮೀಣ ಆಶ್ರಮದ ನೆರವಿನಿಂದ ಕೊರಗರ ವಿವಿಧ ಕ್ಷೇತ್ರಗಳ ಅಭಿವೃದ್ಧಿ:-

ಸಮಗ್ರ ಗ್ರಾಮೀಣ ಆಶ್ರಮ ಸ್ವಯಂ ಸೇವಾ ಸಂಸ್ಥೆಯು ದಕ್ಷಿಣ ಕನ್ನಡ, ಉಡುಪಿ ಹಾಗೂ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಗಳಲ್ಲಿ ೨೦೦೩ನೇ ವರ್ಷದಿಂದ ತನ್ನ ಯೋಜನೆಯನ್ನು ಪ್ರಾರಂಭಿಸಿತು. ಅಲ್ಲಿಂದ ಇಲ್ಲಿಯವರೆಗೆ ಕೊರಗ ಸಮುದಾಯಕ್ಕೆ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ಕೊರಗ ಸಂಘಟನೆಗಳನ್ನು ಸ್ಥಾಪಿಸಿ ಕೊರಗರನ್ನು ಒಗ್ಗೂಡಿಸಿ, ಕೊರಗ ಸಮುದಾಯದ ಅಭಿವೃದ್ಧಿಯಲ್ಲಿ ಸ್ವತಃ ಕೊರಗರೇ ಪಾಲ್ಗೊಳ್ಳುವಂತೆ ಸಫಲವಾಗಿದೆ.

೪.೨.೪.೧. ಪ್ರಮುಖ ಅಭಿವೃದ್ಧಿಗಳು:

೧) ಕರ್ನಾಟಕ ರಾಜ್ಯ ಸರಕಾರದ ವಿಶೇಷ ಉಚಿತ ಪೌಷ್ಟಿಕಾಂಶ ಆಹಾರ ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ೯೮೪ ಕುಟುಂಬಗಳಿಗೆ ಮತ್ತು ಉಡುಪಿ ಜಿಲ್ಲೆಯ ೨೩೮೪ ಕುಟುಂಬಗಳಿಗೆ ದೊರಕಿಸಿಕೊಟ್ಟು, ಮುಖ್ಯವಾಗಿ ಮಹಿಳೆಯರ ಮತ್ತು ಮಕ್ಕಳ ಪೌಷ್ಟಿಕಾಂಶ ಮಟ್ಟದಲ್ಲಿ ಸುಧಾರಣೆ ಕಂಡು ಬಂದಿದೆ.

೨) ೭೪೦ ಕುಟುಂಬಗಳಿಗೆ ತಮ್ಮ ಜಮೀನಿನಲ್ಲಿ ತರಕಾರಿ, ಹಣ್ಣು ಹಂಪಲುಗಳನ್ನು ಬೆಳೆಸಲು ತರಬೇತಿ ಮತ್ತು ಮಾರ್ಗದರ್ಶನ ನೀಡುವುದರ ಮೂಲಕ ದೈನಂದಿನ ಖರ್ಚುಗಳಲ್ಲಿ ಉಳಿತಾಯ ಕಂಡು ಬಂದಿದೆ.

೩) ಉಡುಪಿ ಜಿಲ್ಲೆಗಳಲ್ಲಿ ೩೦೦ ಎಕರೆಗಳಿಗೂ ಅಧಿಕ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ೫೦ ಎಕರೆಗಳಿಗೂ ಅಧಿಕ ಭೂಮಿಗಳನ್ನು ಕರ್ನಾಟಕ ಸರಕಾರದ ವಿಶೇಷ ಯೋಜನೆಯಡಿ ಕೊರಗ ಕುಟುಂಬಗಳಿಗೆ ದೊರಕಿಸಿ, ಕೃಷಿ ಚಟುವಟಿಕೆಗೆ ಪ್ರೋತ್ಸಾಹ ಮಾರ್ಗದರ್ಶನ ನೀಡಿ ಲಕ್ಷಕ್ಕಿಂತಲೂ ಹೆಚ್ಚು ಕುಟುಂಬಗಳು ಉತ್ತಮ ಜೀವನ ನಡೆಸುತ್ತಿವೆ.

೪) ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟ(ರಿ) ಕೊರಗ ಕೃಷಿಕರ ಸಂಘ, ಕೊರಗ ಸ್ವಸಹಾಯ ಸಂಘ, ಕೊರಗ ಮಹಿಳಾ ಸಹಕಾರಿ ಸಂಘ, ಕೊರಗ ಸಹಕಾರಿ ಸಂಘ, ಕೊರಗ ಮಕ್ಕಳ ಸಂಘ ಹೀಗೆ ಅನೇಕ ಸಂಘಗಳನ್ನು ಪ್ರಾರಂಭ ಮಾಡಿ ಕೊರಗ ಸಮುದಾಯವನ್ನು ಬಲಗೊಳಿಸುವಲ್ಲಿ ಸಫಲವಾಗಿದೆ.

೫) ಮದ್ಯಪಾನ ವಿರೋಧಿ ಕಾರ್ಯಕ್ರಮಗಳು, ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ತಡೆ ಶಿಬಿರಗಳು, ಮಹಿಳಾ ದಿನಾಚರಣೆ ಹೀಗೆ ಅನೇಕ ಸಾಮಾಜಿಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಬೀದಿನಾಟಕಗಳು, ಪಾದಯಾತ್ರೆ, ಜಾಥಾ, ಸಾಮೂಹಿಕ ಸಭೆಗಳ ಮೂಲಕ ಕೊರಗ ಸಮುದಾಯಕ್ಕೆ ತಿಳಿಸುವುದರ ಮೂಲಕ ಒಳ್ಳೆಯ ವಾತಾವರಣ ನಿರ್ಮಾಣವಾಗಿದೆ. ಈವರೆಗೂ ೧೫೦ಕ್ಕಿಂತಲೂ ಅಧಿಕ ಮಂದಿ ಮದ್ಯಪಾನದಿಂದ ಮುಕ್ತರಾಗಿದ್ದಾರೆ.

೬) ಐ.ಟಿ.ಡಿ.ಪಿ. ಸಂಸ್ಥೆಯ ನೆರವಿನಿಂದ ೫೦ಕ್ಕೂ ಹೆಚ್ಚು ಮಹಿಳೆಯರಿಗೆ ೫ ಲಕ್ಷ ರೂಪಾಯಿ ಧನಸಹಾಯದ ಮೂಲಕ ಸ್ವಂತ ಉದ್ಯೋಗದಲ್ಲಿ ತೊಡಗಿಕೊಳ್ಳುವಂತೆ ಮಾಡಿ, ಮಹಿಳೆಯರ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳಲ್ಲಿ ಸುಧಾರಣೆ ಕಂಡು ಬಂದಿದೆ.

೭) ಕೊರಗ ಮಕ್ಕಳಿಗೆ ಉತ್ತಮ ಶಿಕ್ಷನ ಒದಗಿಸುವ ದೃಷ್ಟಿಯಿಮದ "ಆದಿವಾಸಿ ಜೀವನ ಶಿಕ್ಷಣ ತರಬೇತಿ ಕೇಂದ್ರ"ವನ್ನು ಪ್ರಾರಂಭಿಸಿ ಪ್ರೌಢ ಶಿಕ್ಷಣವನ್ನು ಅರ್ಧದಲ್ಲಿಯೇ ನಿಲ್ಲಿಸಿದ ೧೫ ಮಕ್ಕಳನ್ನು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಪಾಸು ಮಾಡಿಸಿ, ಅದರಲ್ಲಿ ೧೩ ಮಕ್ಕಳು ಪಿ.ಯು.ಸಿ. ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಹಾಗೆನೇ ೩೦ಕ್ಕಿಂತಲೂ ಹೆಚ್ಚು ವಿದ್ಯಾರ್ಥಿನಿಯರು ತಮ್ಮ ವಿದ್ಯಾಭ್ಯಾಸವನ್ನು ಪುನಃ ಪ್ರಾರಂಭಿಸಿದ್ದಾರೆ. ಜೊತೆಗೆ "ಕೊರಗ ಮಕ್ಕಳ ಶಿಕ್ಷಣ" ಅನ್ನುವಂತಹ ವಿಶೇಷ ಪುಸ್ತಕವನ್ನು ಕೂಡ ಬಿಡುಗಡೆ ಮಾಡಿದೆ.

೮) ಸಮಗ್ರ ಗ್ರಾಮೀಣ ಆಶ್ರಮ ಸ್ವಯಂಸೇವಾ ಸಂಸ್ಥೆಯು ಕೊರಗ ಮಕ್ಕಳಿಗಾಗಿ, ಕಾರ್ಕಳ ತಾಲೂಕಿನಲ್ಲಿ "ಕಾರಂಜಿ" ಮತ್ತು ಕುಂದಾಪುರ ತಾಲೂಕಿನಲ್ಲಿ "ಚಿಗುರು" ಎಂಬ ಮಕ್ಕಳ ಸಂಘಟನೆಗಳನ್ನು ಸ್ಥಾಪಿಸಿ, ಅವುಗಳ ಮೂಲಕ ಸ್ವತಂತ್ರವಾಗಿ ಮಕ್ಕಳ ಸಭೆ, ಮಕ್ಕಳ ರಜಾ ಶಿಬಿರಗಳು, ಶಿಕ್ಷಕ-ರಕ್ಷಕರ ಸಭೆಗಳು ಹೀಗೆ ಅನೇಕ ಚಟುವಟಿಕೆಗಳನ್ನು ನಡೆಸಿ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಸಹಾಯ ಮಾಡಿದೆ.

೯) ಕೊರಗ ಸಮುದಾಯದ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ಸಮಗ್ರ ಗ್ರಾಮೀಣ ಆಶ್ರಮ ಸ್ವಯಂಸೇವಾ ಸಂಸ್ಥೆಯು ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಆರೋಗ್ಯ ಜಾಗೃತಿ ಶಿಬಿರಗಳು, ಉಚಿತ ಆರೋಗ್ಯ ತಪಾಸಣಾ ಶಿಬಿರಗಳು ಮತ್ತು ಉಚಿತ ಚಿಕಿತ್ಸೆ, ಆರೋಗ್ಯ ಮಾಹಿತಿ ಮತ್ತು ತರಬೇತಿ ಶಿಬಿರಗಳು ಹೀಗೆ ಅನೇಕ ಕಾರ್ಯಕ್ರಮಗಳನ್ನು ಸ್ಥಳೀಯ ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಜೊತೆ ಸೇರಿಕೊಂಡು ನಿರಂತರ ಆರೋಗ್ಯ ಪೂರಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಸುಮಾರು ೫೦ಕ್ಕೂ ಹೆಚ್ಚು ಜನರಿಗೆ ಕ್ಷಯರೋಗಕ್ಕೆ ನಿರಂತರ

ಮದ್ದು ಚಿಕಿತ್ಸೆಯನ್ನು ನೀಡುವ ಜವಾಬ್ದಾರಿಯನ್ನು ಸ್ವಯಂ ಸೇವಾ ಸಂಸ್ಥೆಯ ಕಾರ್ಯಕರ್ತರು ವಹಿಸಿ ಆರೋಗ್ಯ ಸುಧಾರಣೆಗೆ ಕಾರಣಕರ್ತರಾಗಿದ್ದಾರೆ. ಅಷ್ಟೇ ಅಲ್ಲದೆ ಚಾರ್ಮಕ್ಕಿ ನಾರಾಯಣ ಶೆಟ್ಟಿ ಲಯನ್ಸ್ ಕಣ್ಣಿನ ಆಸ್ಪತ್ರೆ ಇವರ ಸಹಯೋಗದೊಂದಿಗೆ, ಸಂಸ್ಥೆಯು ಈ ವರೆಗೆ ಲಕ್ಕಿಂತಲೂ ಅಧಿಕ ಕಣ್ಣಿನ ತಪಾಸಣಾ ಶಿಬಿರಗಳನ್ನು ನಡೆಸಿ, ಚಿಕಿತ್ಸೆ ನೀಡಲಾಗಿದೆ. ಅಷ್ಟೇ ಅಲ್ಲದೆ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಇತರ ಆರೋಗ್ಯ ಸಂಘ ಸಂಸ್ಥೆಗಳ ನೆರವಿನಿಂದ ಕೊರಗ ಸಮುದಾಯದ ಜನರಿಗೆ ಪೌಷ್ಟಿಕಾಂಶ ಮತ್ತು ಹದಿಹರೆಯದ ಸಮಸ್ಯೆಗಳ ಬಗ್ಗೆ ಮಾಹಿತಿ ಕಾರ್ಯಕ್ರಮಗಳನ್ನು ಕೂಡ ನಡೆಸುತ್ತಾ ಬಂದಿದ್ದಾರೆ. ಈ ಮೂಲಕ ಕೊರಗ ಸಮುದಾಯದ ಆರೋಗ್ಯ ಸುಧಾರಣೆಯಲ್ಲಿ ಸಂಸ್ಥೆಯು ಪ್ರಮುಖ ಪಾತ್ರ ವಹಿಸಿದೆ ಎಂದು ಹೇಳಬಹುದು.

೪.೩. ನಾಗರಿಕ ಸೇವಾ ಟ್ರಸ್ಟ್ – ಗುರುವಾಯನಕೆರೆ, ಬೆಳ್ತಂಗಡಿ

೪.೩.೧.ಹಿನ್ನೆಲೆ:

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಗುರುವಾಯನಕೆರೆ ಎಂಬಲ್ಲಿ 1976ರಲ್ಲಿ ಒಂದು ಸಣ್ಣ ಸ್ವಯಂ–ಸೇವಾ ಸಂಸ್ಥೆಯಾಗಿ ಆರಂಭವಾದ ನಾಗರಿಕ ಸೇವಾ ಟ್ರಸ್ಟ್ ಇಂದು ದಕ್ಷಿಣ ಕನ್ನಡ ಜಿಲ್ಲೆಯ ಬುಡಕಟ್ಟು ಜನರ ಸಬಲೀಕರಣಕ್ಕಾಗಿ ಶ್ರಮಿಸುತ್ತಿರುವ ಮತ್ತು ವಿಶೇಷವಾಗಿ ಮಲೆಕುಡಿಯರ ಶ್ರೇಯೋಭಿವೃದ್ಧಿಗಾಗಿ ಪಣತೊಟ್ಟು ಕೆಲಸ ಮಾಡುತ್ತಿರುವ ಒಂದು ವಿಶಿಷ್ಟ ಸಂಸ್ಥೆಯಾಗಿ ಬೆಳೆದು ನಿಂತಿದೆ. ಮಲೆಕುಡಿಯರು ಮತ್ತು ಇತರ ದಲಿತರ ಅಭಿವೃದ್ಧಿಗೆ ಶ್ರಮಿಸುವುದರ ಜೊತೆಗೆ ಈ ಸಂಸ್ಥೆಯು ಅಂಚಿಗೆ ತಳ್ಳಲ್ಪಟ್ಟ ಬಡಜನರ ಬದುಕಿನ ಸಮಸ್ಯೆಗಳು ಹಾಗೂ ಪರಿಸರದ ಸಮಸ್ಯೆಗಳ ಕುರಿತು ಕೆಲಸ ಮಾಡುತ್ತಿದೆ. ಪ್ರಸ್ತುತ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ನಾಗರಿಕ ಸೇವಾ ಟ್ರಸ್ಟ್ ಮತ್ತು ಇದರ ಬಳಗದ ಸಂಘಟನೆಗಳು ಸುಮಾರು ಒಂದು ಲಕ್ಷ ಸದಸ್ಯರನ್ನು ಹೊಂದಿದೆ. ಸಂಸ್ಥೆಯು ಬಡವರ, ದಲಿತರ ಮತ್ತು ಆದಿವಾಸಿ ಸಮುದಾಯ (ಮಲೆಕುಡಿಯರು)ಗಳ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ಸ್ವಸಹಾಯ ಸಂಘಗಳ ಮೂಲಕ, ವಿವಿಧ ಸರಕಾರಿ ಮತ್ತು ಪಂಚಾಯತ್ ರಾಜ್ ಅಭಿವೃದ್ಧಿ ಕಾರ್ಯಕ್ರಮಗಳೊಂದಿಗೆ ಸಹಭಾಗಿತ್ವದ ಮೂಲಕ ಕೆಲಸ ಮಾಡುತ್ತಿದೆ. ಬಡವರು, ಶೋಷಿತರು ಮತ್ತು ಆದಿವಾಸಿ ಸಮುದಾಯಗಳನ್ನು ಸಂಘಟಿಸಿ ಅವರ ಪರ ಅನೇಕ ಹೋರಾಟ ಮತ್ತು ತಳ ಮಟ್ಟದ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಾ ಬಂದಿದ್ದು, 25 ಫೆಬ್ರವರಿ 2007ರಂದು ಸಂಸ್ಥೆಯು ತನ್ನ ತ್ರಿದಶಮಾನೋತ್ಸವನ್ನು ಆಚರಿಸಿಕೊಂಡಿತು.



ಛಾಯ ಚಿತ್ರ ಸಂ. ನಾಗರಿಕ ಸೇವಾ ಟ್ರಸ್ಟ್‌ನ ಆಡಳಿತ ಕಛೇರಿ

೪.೩.೨. ನಾಗರಿಕ ಸೇವಾ ಟ್ರಸ್ಟ್ ಸಂಸ್ಥೆಯ ಗುರಿ:

ಜಾತಿ, ವರ್ಗ, ಮತ ಪಂಥ, ಭಾಷೆ, ಲಿಂಗ ಮುಂತಾದ ಯಾವುದೇ ತಾರತಮ್ಯವಿಲ್ಲದ ಒಂದು ಶಾಂತಿಯುತ ಹಾಗೂ ಪರಿಸರ ಸ್ನೇಹಿ ಸಮಾಜದ ನಿರ್ಮಾಣ ಎಂಬ ಗುರಿಯನ್ನು ಈ ಸಂಸ್ಥೆ ಹೊಂದಿದೆ.

೪.೩.೩. ನಾಗರಿಕ ಸೇವಾ ಟ್ರಸ್ಟ್ ಸಂಸ್ಥೆಯ ಉದ್ದೇಶಗಳು:

ಸಣ್ಣ ಕೃಷಿಕರ ಹಾಗೂ ಕಾರ್ಮಿಕರ ಮೂಲಭೂತ ಅವಶ್ಯಕತೆಗಳನ್ನು ಗಮನದಲ್ಲಿರಿಸಿ ಗ್ರಾಮಾಭಿವೃದ್ಧಿ; ಪರಿಸರ ಸಂರಕ್ಷಣೆ; ಮಹಿಳೆಯರು, ದಲಿತರು ಹಾಗೂ ಬುಡಕಟ್ಟು ಜನರ ಸಬಲೀಕರಣ; ಆರೋಗ್ಯ ಮತ್ತು ವೈದ್ಯಕೀಯ ಸೇವೆ, ಬಡಜನರ ಸುಸ್ಥಿರ ಅಭಿವೃದ್ಧಿಗಾಗಿ ಸ್ವಸಹಾಯ ಕಾರ್ಯಕ್ರಮಗಳು; ಬಡ ಯುವ-ಜನತೆಗೆ ಉದ್ಯೋಗ ಉದ್ದೇಶಿತ ಕೌಶಲ್ಯ ತರಬೇತಿ; ಉತ್ತಮ ಆಡಳಿತಕ್ಕಾಗಿ ಹಕ್ಕೊತ್ತಾಯ; ನೀತಿ ನಿರೂಪಣೆ ಹಾಗೂ ನಿರ್ಧಾರ ಮಾಡುವ ಪ್ರಕ್ರಿಯೆಗಳಲ್ಲಿ ಬಡಜನ ಪರಿಣಾಮಕಾರಿ ಭಾಗವಹಿಸುವಿಕೆ, ಇತ್ಯಾದಿ.

೪.೩.೪. ನಾಗರಿಕ ಸೇವಾ ಟ್ರಸ್ಟ್‌ನ ಕಾನೂನು ಸ್ಥಾನಮಾನ:

ಸ್ಥಾಪನೆ:1976 ನೊಂದಾವಣೆ: ಟ್ರಸ್ಟ್ ಎಂದು 1-7-1987ರಂದು ಬೆಳ್ತಂಗಡಿಯ ಸಬ್ ರಿಜಿಸ್ಟ್ರಾರ್‌ರ ಕಛೇರಿಯಲ್ಲಿ ನೋಂದಾಯಿತ ದಾಖಲೆ ಸಂಖ್ಯೆ 40/1987-88 ಎಫ್.ಸಿ.ಆರ್.ಎ ನಂ :0946301331/17-10-95

ಆದಾಯ ತೆರಿಗೆ ವಿನಾಯ್ತಿ: ನಾಗರಿಕ ಸೇವಾ ಟ್ರಸ್ಟ್ ನೀಡುವ ದೇಣಿಗೆಗಳು 1961ರ ಆದಾಯ ತೆರಿಗೆ ಕಾಯಿದೆಯ ಸೆಕ್ಷನ್ 80 ಜಿ ಪ್ರಕಾರ ವಿನಾಯಿತಿ ಹೊಂದಿವೆ.

ನಾಗರಿಕ ಸೇವಾ ಟ್ರಸ್ಟ್‌ನ ವಿಶ್ವಸ್ಥ ಮಂಡಳಿ (ಬೋರ್ಡ್ ಆಫ್ ಟ್ರಸ್ಟೀಸ್)



ಶ್ರೀ. ಕೆ. ಸೋಮನಾಥ ನಾಯಕ್, ಶ್ರೀ ರಂಜನ್ ರಾವ್ ಯರ್ಡೂರು, ಶ್ರೀ. ಕೆ. ಸುಬ್ರಾಯ ಶೆಣೈ, ಶ್ರೀ. ಕೆ. ರಮಾನಂದ ಸಾಲಿಯಾನ್, ಶ್ರೀಮತಿ ವಿದ್ಯಾ ಎಸ್. ನಾಯಕ್, ಶ್ರೀ ಜಯಪ್ರಕಾಶ್ ಭಟ್ ಸಿ. ಹೆಚ್. ಕುಮಾರಿ ಶುಭವಾಣಿ, ಶ್ರೀ ದುಯಾನಂದ ಪೂಜಾರಿ, ಶ್ರೀ ಯಂ. ಮಧುಕರ್ ಹೆಬ್ಬಾರ್, ಶ್ರೀ.ವಿಠ್ಠಲ ಶೆಟ್ಟಿ ಪಾದೂರು, ಶ್ರೀಮತಿ ಮುಮ್ತಾಜ್, ಶ್ರೀ.ಉಮೇಶ್ ನಿರ್ಮಲ್, ಶ್ರೀ.ನಾರಾಯಣ ಕಿಲಂಗೋಡಿ, ಶ್ರೀಮತಿ ರತ್ನಾ ಹೊಸಳಿಕೆ, ಸ್ರೀ ಡೇನಿಯಲ್ ಜಾರ್ಜ್

೪.೩.೫. ನಾಗರಿಕ ಸೇವಾ ಟ್ರಸ್ಟ್‌ನ ಬೆಳವಣಿಗೆ ಮತ್ತು ವಿಸ್ತರಣೆ:

ನಾಗರಿಕ ಸೇವಾ ಟ್ರಸ್ಟ್ ಸಂಸ್ಥೆಯು ಪರದರ್ಶಕತೆ, ಸಾಮೂಹಿಕ ನಾಯಕತ್ವ, ಅಹಿಂಸೆ, ಸರ್ವಧರ್ಮ ಸಮಭಾವ, ಪ್ರಜಾಪ್ರಭುತ್ವಕ್ಕೆ ಮಾನ್ಯತೆಗಳೆಂಬ ಮೌಲ್ಯಗಳನ್ನು ಒಗ್ಗೂಡಿಸಿಕೊಂಡು ದಕ್ಷಿಣ ಕನ್ನಡ ಪರಿಸರಾಸಕ್ತರ ಒಕ್ಕೂಟ, ಕರಾವಳಿ ಮಹಿಳಾ ಜಾಗೃತಿ ವೇದಿಕೆ, ಕೃಷಿಕರ ವೇದಿಕೆ–ಕರ್ನಾಟಕ ಮತ್ತು ದಲಿತ ಅಭಿವೃದ್ದಿ ಸಮಿತಿ, ಅಭಿಯಾನ ಸಮಿತಿ, ಬೀಡಿ ಕಾರ್ಮಿಕರ ಸಮಿತಿಗಳೆಂಬ ಜನ ಸಂಘಟನೆಗಳು ಸಮಿತಿಗಳ ಮೂಲಕ ಪ್ರಸ್ತುತ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಎಂಟು ತಾಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಇದರ ಜೊತೆಗೆ ಸಂಸ್ಥೆಯು ಪ್ರತಿ ತಾಲೂಕುಗಳಲ್ಲಿ "ನಾಗರಿಕ ಸೇವಾ ಬಳಗ"ಗಳನ್ನು ಸ್ಥಾಪಿಸಿದ್ದು, ಈ ಕೇಂದ್ರವು ಒಬ್ಬ ಸಂಚಾಲಕರು ಮತ್ತು ಇಬ್ಬರು ಸಹಸಂಚಾಲಕರನ್ನು ಹೊಂದಿದ್ದು, ಇದರ ಮೂಲಕ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿವೆ. ಇದರ ಜೊತೆಗೆ ಬೀಡಿ ಕಾರ್ಮಿಕರ ರಕ್ಷಣೆಗಾಗಿ ಬೀಡಿ ಕಾರ್ಮಿಕರ ಹಿತ ರಕ್ಷಣಾ ವೇದಿಕೆ ಮತ್ತು ಕುದುರೆ ಮುಖ ಪಶ್ಚಿಮ ಘಟ್ಟದ ಬುಡಕಟ್ಟು ಸಮುದಾಯವಾದ ಮಲೆಕುಡಿಯರ ರಕ್ಷಣೆಗೋಸ್ಕರ ಸಮಿತಿ ಮತ್ತು ರಕ್ಷಿತಾರಣ್ಯ ಸಂತ್ರಸ್ತರ ಹೋರಾಟ ಸಮಿತಿ ಎಂಬ ಸಮಿತಿಗಳನ್ನು ರಚಿಸಿಕೊಂಡು ಸಂತ್ರಸ್ತರ ಪರ ಕಾರ್ಯವನ್ನಾಚರಿಸುತ್ತಿದೆ. ಪ್ರಸ್ತುತ ನಾಗರಿಕ ಸೇವಾ ಟ್ರಸ್ಟ್ ಸಂಸ್ಥೆಯು ಸರಕಾರದ ಅನೇಕ ಆಯೋಗ/ಸಮಿತಿಗಳಲ್ಲಿ ಸದಸ್ಯ ಸಂಸ್ಥೆಯಾಗಿ ಕೆಲಸ ಮಾಡುತ್ತಿದ್ದು ಮುಖ್ಯವಾಗಿ ಕೇಂದ್ರ ಸರಕಾರದ ಪಶ್ಚಿಮ ಘಟ್ಟ ಪರಿಸರ ತಜ್ಞರ ತಂಡ, ಮತ್ತು ರಾಜ್ಯ ಸರಕಾರದ ಪಶ್ಚಿಮ ಘಟ್ಟ ಟಾಸ್ಕ್ ಫೋರ್ಸ್, ಕೇಂದ್ರ ಸರಕಾರದ ಕೇಂದ್ರ ಯೋಜನಾ ಆಯೋಗ ಅರಣ್ಯ/ಪರಿಸರ ಸಮಿತಿ ಇವುಗಳಲ್ಲಿ ನಾಗರಿಕ ಸೇವಾ ಟ್ರಸ್ಟ್‌ನ ಟ್ರಸ್ಟಿಗಳು ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವುಗಳ ಜೊತೆಗೆ ಜಿಲ್ಲಾ ಸಮಾಲೋಚನಾ ಸಮಿತಿ, (DCC) ದ.ಕ ಮತ್ತು ಉಡುಪಿ ಜಿಲ್ಲೆ; ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ (DLRC) ದ.ಕ ಮತ್ತು ಉಡುಪಿ ಜಿಲ್ಲೆ; ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯ ಸಮಾಲೋಚನಾ ಸಮಿತಿ; ದಕ್ಷಿಣ ಗ್ರಾಮೀಣ ಶಕ್ತಿ ಕಾರ್ಯಕ್ರಮ

ಸಮಿತಿ, ದ.ಕ ಜಿಲ್ಲಾ ಪಂಚಾಯತ್; ಬೆಳ್ತಂಗಡಿ ತಾಲೂಕು ಕಾನೂನು ಸೇವೆಗಳ ಸಮಿತಿ; ಮಹಿಳಾ ದೌರ್ಜನ್ಯ ತಡೆ ತಾಲೂಕು ಸಲಹಾ ಸಮಿತಿ; ದ.ಕ ಜಿಲ್ಲಾ ಮಟ್ಟದ ಜಾಗೃತಿ ಉಸ್ತುವಾರಿ ಸಮಿತಿ (ಪ.ಜಾತಿ ಮತ್ತು ಪ.ಪಂಗಡಗಳ ದೌರ್ಜನ್ಯ ತಡೆ) ಇತ್ಯಾದಿ ಸರಕಾರಿ ಸೇವಾ ಟ್ರಸ್ಟ್ ಸಂಸ್ಥೆಯ ಕಾರ್ಯ ನಿರ್ವಹಿಸುತ್ತಿದೆ. ಜನಪರ ವೇದಿಕೆ ಕರ್ನಾಟಕ; ವೊಲಂಟರಿ ಏಕ್ಷನ್ ನೆಟ್‌ವರ್ಕ್ ಇಂಡಿಯಾ, ನವದೆಹಲಿ; ಮಾನವ ಮತ್ತು ಸಾಂಸ್ಥಿಕ ಅಭಿವೃದ್ಧಿ ಸಂಸ್ಥೆ (HRD FORUM) ಬೆಂಗಳೂರು; ಪಬ್ಲಿಕ್ ಅಫೇರ್ಸ್ ಸೆಂಟರ್ (FAC) ಬೆಂಗಳೂರು, ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನಾ ಸಂಸ್ಥೆ (ISEC) ಬೆಂಗಳೂರು; ಗ್ರೀನ್ ಫೌಂಡೇಶನ್ ಬೆಂಗಳೂರು; ಬ್ರೇಕ್‌ಕ್ರೂ ದೆಹಲಿ; ಬಳಕೆದಾರರ ವೇದಿಕೆ. ಉಡುಪಿ ಹೀಗೆ ಅನೇಕ ಸಂಸ್ಥೆಗಳ ಸದಸ್ಯತನ ಮತ್ತು ಸಂಪರ್ಕವನ್ನು ನಾಗರಿಕ ಸೇವಾ ಟ್ರಸ್ಟ್ ಸಂಸ್ಥೆಯು ಹೊಂದಿರುತ್ತದೆ.

೪.೩.೬. ನಾಗರಿಕ ಸೇವಾ ಟ್ರಸ್ಟ್‌ನ ಪ್ರಮುಖ ದಾನಿ ಸಂಸ್ಥೆಗಳು:

HIYOS ನೆದರ್‌ಲ್ಯಾಂಡ್; ನೋವಿಬ್, ನೆದರ್‌ಲ್ಯಾಂಡ್; CRS (ಹೈದರಾಬಾದ್), ಸ್ವಿಟ್ಜರ್‌ಲ್ಯಾಂಡ್; HEEKS(ಬೆಂಗಳೂರು), ಸ್ವಿಟ್ಜರ್‌ಲ್ಯಾಂಡ್; ಮೆಕಾರ್ಥರ್ ಫೌಂಡೇಶನ್, ಯುಎಸ್ಎ; ಕಪಾರ್ಟ್, ಧಾರವಾಡ; ನಬಾರ್ಡ್ ಹೀಗೆ ಒಟ್ಟು ೧೯ ಸರಕಾರಿ ಇಲಾಖೆಗಳು ಮತ್ತು ಖಾಸಗಿ ಸಂಸ್ಥೆಗಳು ನಾಗರಿಕ ಸೇವೆ ಟ್ರಸ್ಟ್‌ಗೆ ಆರ್ಥಿಕ ಬೆಂಬಲವನ್ನು ನೀಡುತ್ತಿವೆ.

೪.೩.೭. ಮಲೆಕುಡಿಯರ ಸಬಲೀಕರಣದಲ್ಲಿ ನಾಗರಿಕ ಸೇವಾ ಟ್ರಸ್ಟ್‌ನ ಪಾತ್ರ;

೧೯೮೭ರ ಸಮಯದಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ರಚನೆ ಮತ್ತು ಅದರ ಉದ್ದೇಶಗಳ ಬಗ್ಗೆ ಸರಕಾರದ ಅಧಿಸೂಚನೆಯಲ್ಲಿ ಪ್ರಕಟನೆಯಾಗುತ್ತದೆ ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಪ್ರದೇಶದೊಳಗೆ ಈ ಉಪವಿಭಾಗದ ಬೆಳ್ತಂಗಡಿ ತಾಲೂಕು ವ್ಯಾಪ್ತಿಯ ನಾವುರ, ಸವಣಾಲು, ಶಿರ್ಲಾಲು, ಸುಲ್ಕೇರಿ ಮೊಗ್ರು ಬಡಗಕಾರಂದೂರು, ಲ್ಯಾಲ, ನಡ, ನಾವೂರು, ಮಲವಂತಿಗೆ, ಮಿತ್ತ ಬಾಗಿಲು ಇತ್ಯಾದಿ ಗ್ರಾಮಗೊಳಪಟ್ಟಿರುವ ಕಾದಿಟ್ಟ ಅರಣ್ಯಗಳನ್ನು ಮಾತ್ರ ಒಳಪಡಿಸಿ ವನ್ಯಪ್ರಾಣಿ ಸಂರಕ್ಷಣಾ ಕಾಯ್ದೆಯ ಕಲಂ – ೨೧, ೩೫(೧) ಮತ್ತು ೩೫(೩)ರ ಅನ್ವಯ ಉದ್ಘೋಷಣೆ ಹೊರಡಿಸುತ್ತಾರೆ. ಪ್ರಸ್ತಾವಿತ ಉದ್ಯಾನವನ ಸ್ಥಳದೊಳಗೆ ಹೆಚ್ಚಾಗಿ ಮಲೆಕುಡಿಯ ಜನಾಂಗದವರು ವಾಸಿಸುತ್ತಿದ್ದ ಇವರು ತಲ ತಲಾಂತರದಿಂದ ಕಾಡು ಹಾಗೂ ಅರಣ್ಯ ಉತ್ಪಾದನೆಗಳನ್ನೇ ನಂಬಿಕೊಂಡು ಸಂಸಾರ ನಿರ್ವಹಿಸುತ್ತಿದ್ದರು. ಆದರೆ ಕರ್ನಾಟಕ ಸರಕಾರದ ಈ ಅಧಿಸೂಚನೆಯಿಂದ ಈ ಸ್ಥಳಗಳಲ್ಲಿ ವಾಸಮಾಡುತ್ತಿರುವ ಮಲೆಕುಡಿಯ ಸಮುದಾಯಗಳು

ಸಂಕಷ್ಟಕ್ಕೊಳಗಾಗುವುದರ ಜೊತೆಗೆ ತಮ್ಮ ಹಕ್ಕುಗಳನ್ನು ಕಳೆದುಕೊಳ್ಳುವ ಭೀತಿಯಲ್ಲಿದ್ದವು. ಇದೇ ಸಮಯದಲ್ಲಿ ಈ ವಿಷಯವನ್ನು ಅರಿತುಕೊಂಡ ನಾಗರಿಕ ಸೇವಾ ಟ್ರಸ್ಟ್ ಸಂಸ್ಥೆಯು ಈ ವ್ಯಾಪ್ತಿಯ ಅರಣ್ಯ ಪ್ರದೇಶಗಳಲ್ಲಿರುವ ಮಲೆಕುಡಿಯರನ್ನು ಸಂಘಟಿಸಿ ಈ ಅಧಿಸೂಚನೆಯಿಂದ ಅವರಿಗಾಗುವ ಅನ್ಯಾಯ, ಸಮಸ್ಯೆಗಳ ಬಗ್ಗೆ ಅರಿವು, ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಮತ್ತು ಈ ನಿಟ್ಟಿನಲ್ಲಿ ಸಂಸ್ಥೆಯು ೧೯೯೦ರಲ್ಲಿ ಮೊದಲ ಬಾರಿ ಮಲೆಕುಡಿಯರ ಸರ್ವೇ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುತ್ತದೆ. ನಂತರ ಸಂಸ್ಥೆಯು ಮಲೆಕುಡಿಯರನ್ನು ಸಂಘಟಿಸುವ ಕೆಲಸ ಕೈಗೆತ್ತಿಕೊಳ್ಳುತ್ತದೆ. ಈ ನಿಟ್ಟಿನಲ್ಲಿ "ಕುದುರೆ ಮುಖ ರಾಷ್ಟ್ರೀಯ ಉದ್ಯಾನವನ ವಾಸಿ ಸಂರಕ್ಷಣಾಸ ಸಮಿತಿ" ಮತ್ತು "ರಕ್ಷಿತಾರಣ್ಯ ಸಂತ್ರಸ್ತರ ಹೋರಾಟ ಸಮಿತಿ" ಎಂಬ ಸಂಘಟನೆಯನ್ನು ರಚಿಸಿ ವಿವಿಧ ಕಡೆಗಳಲ್ಲಿ ಸಭೆಗಳನ್ನು ಪ್ರತಿಭಟನಾ ಜಾಥಾಗಳನ್ನು ಹಮ್ಮಿಕೊಂಡು ಅಂದಿನ ಜಿಲ್ಲಾಧಿಕಾರಿಯವರಿಗೆ ಈ ಅಧಿಸೂಚನೆ (ಅರಣ್ಯವಾಸಿಗಳ ಒಕ್ಕಲೆಬಿಸುವಿಕೆ) ಬಗ್ಗೆ ಪ್ರಬಲವಾದ ಆಕ್ಷೇಪಣಾ ಪತ್ರವನ್ನು ಮತ್ತು ಆದೇಶ ಹಿಂಪಡೆಯಲು ಮನವಿ ಪತ್ರಗಳನ್ನು ಸಲ್ಲಿಸಲಾಗುತ್ತದೆ. ಕುದುರೆ ಮುಖ ರಾಷ್ಟ್ರೀಯ ಉದ್ಯಾನವನ ಕಾಯ್ದೆಯ ಮೊದಲ ಅಧಿಸೂಚನೆಯನ್ವಯ ಅರಣ್ಯವಾಸಿಗಳಿಗೆ ಕಾಡಿನ ಉತ್ಪನ್ನಗಳ ಸಂಗ್ರಹ, ನೀರು ಮತ್ತು ಮರ-ಮುಟ್ಟು ಬಳಕೆಗೆ ನಿರ್ಬಂಧ ಹೇರಲಾಗಿತ್ತು. ಆದರೆ ನಾಗರಿಕ ಸೇವಾ ಟ್ರಸ್ಟ್ ಮತ್ತು ಇತರ ಅನೇಕ ಜನ ಸಂಘಟನೆಗಳು ಸಾರ್ವಜನಿಕರ ತೀವ್ರ ಹೋರಾಟದ ಪರಿಣಾಮವಾಗಿ ಸರಕಾರವು ತನ್ನ ಎರಡನೆಯ ಅಧಿಸೂಚನೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಿ ಮಲೆಕುಡಿಯರಿಗೆ ಅನುಕೂಲಗಳನ್ನು ಕಲ್ಪಿಸಿದವು. ಆದರೆ ಈ ಸಂದರ್ಭದಲ್ಲಿ ಸಂಸ್ಥೆಯು ಸರಕಾರದಿಂದ, ಅರಣ್ಯ ಇಲಾಖೆಗಳಿಂದ, ಕೆಲವೊಂದು ಖಾಸಗಿ ವ್ಯಕ್ತಿಗಳಿಂದ ಅನೇಕ ಸವಾಲುಗಳನ್ನು ಎದುರಿಸಬೇಕಾಯಿತು. ಸಂಸ್ಥೆಯ ಮೇಲೆ ಅನೇಕ ಮೊಕದ್ದಮೆಗಳನ್ನು ದಾಖಲು ಮಾಡುತ್ತಾರೆ. ಒಂದು ಹಂತದಲ್ಲಿ ವನ್ಯಜೀವಿ ವಿಭಾಗದ ಅಧಿಕಾರಿಗಳು ಸಂಸ್ಥೆಯನ್ನು ನಕ್ಸಲರ ಪಟ್ಟಿಗೂ ಸೇರಿಸಲು ಪ್ರಯತ್ನಿಸುತ್ತಾರೆ. ಆದರೆ ಸಂಸ್ಥೆಯು ಅಹಿಂಸಾತ್ಮಕ ಹೋರಾಟದಿಂದ ಆ ಸವಾಲುಗಳನೆಲ್ಲಾ ಮೆಟ್ಟಿ ನಿಂತು ಇಂದಿಗೂ ಮಲೆಕುಡಿಯರ ಪರವಾಗಿ ಹೋರಾಟ ನಡೆಸುತ್ತಿದೆ. ಅರಣ್ಯವಾಸಿಗಳ ನೀತಿಗೆ ಸಂಬಂಧಿಸಿದಂತೆ ಸರಕಾರಿ ಅಧಿಕಾರಿಗಳಿಂದ ಭ್ರಷ್ಟಾಚಾರವನ್ನು ಪತ್ತೆ ಹಚ್ಚಿ ಅದರ ವಿರುದ್ಧ ಹೋರಾಡುವ ಕೆಲಸವನ್ನು ಸಂಸ್ಥೆಯು ಪರಿಣಾಮಕಾರಿಯಾಗಿ ಮಾಡುವುದರ ಜೊತೆಗೆ ಈ ವಿಷಯದಲ್ಲಿ ಮಲೆಕುಡಿಯ ಸಂಘಟನೆಗಳಿಗೆ ಮಾರ್ಗದರ್ಶನ ನೀಡುತ್ತಾ ಬೆನ್ನೆಲುಬಾಗಿ ನಿಂತಿದೆ. ಇದರ ಜೊತೆಗೆ ಸರಕಾರದ ಅನೇಕ ಯೋಜನೆಗಳಲ್ಲಿ ಮಲೆಕುಡಿಯ ಸಮುದಾಯದ ಜನರಿಗೆ ಅವಕಾಶವನ್ನು ನೀಡುತ್ತಾ ಮುಖ್ಯವಾಗಿ ಮಲೆಕುಡಿಯ

ಯುವಕ ಯುವತಿಯರಿಗೆ ಉದ್ಯೋಗ ತರಬೇತಿಗಳನ್ನು ನೀಡುತ್ತಾ ಮಲೆಕುಡಿಯ ಸಮುದಾಯದ ಅಭಿವೃದ್ಧಿಗೆ ಸಂಸ್ಥೆಯು ನಿರಂತರವಾಗಿ ಶ್ರಮಿಸುತ್ತಿದೆ.

೪.೩.೮. ಮಲೆಕುಡಿಯರ ಜೊತೆ ನಾಗರಿಕ ಸೇವಾ ಟ್ರಸ್ಟ್‌ನ ಪ್ರಮುಖ ಕಾರ್ಯಕ್ರಮಗಳು:

- ಸಂಸ್ಥೆಯು ದಿನಾಂಕ:೦೮.೦೨.೨೦೦೨ರಂದು ಬೆಳ್ತಂಗಡಿಯಲ್ಲಿ "ಹಿಂದುಳಿದವರ ಮುನ್ನಡೆಯ ಮಹಾಸಮ್ಮೇಳನ" ಎಂಬ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ಮಹಿಳೆಯರ, ದಲಿತರ, ಬಡ ಕಾರ್ಮಿಕ ಜನರ ಮತ್ತು ಆದಿವಾಸಿಗಳ ಸಮಸ್ಯೆಗಳು ಮತ್ತು ಪರಿಹಾರಗಳ ಬಗ್ಗೆ ಚಿಂತನ-ಮಂಥನ ನಡೆದವು. ಕಾರ್ಯಕ್ರಮದಲ್ಲಿ ಶ್ರೀ ಬಿ. ಎಂ. ಇದಿನಬ್ಬ, ಡಾ। ನಿ. ಮುರಾರಿ ಬಲ್ಲಾಳ್ ಇನ್ನಿತರ ಸಂಪನ್ಮೂಲ ವ್ಯಕ್ತಿಗಳು ಉಪಸ್ಥಿತರಿದ್ದರು.
- ಸಂಸ್ಥೆಯು ದಿನಾಂಕ:೧೦.೧೦.೨೦೦೫ರಂದು ಗುರುವಾಯನಕೆರೆಯಲ್ಲಿ ಪರಿಶಿಷ್ಟ ಜತಿ ಮತ್ತು ಪರಿಶಿಷ್ಟ ಪಂಗಡದ ಪಂಚಾಯತ್ ಸದಸ್ಯರ ರಾಜಕೀಯ ಸಶಕ್ತತೆಗಾಗಿ ತರಬೇತಿ ಮತ್ತು ಸಂವಾದ ಕಾರ್ಯಕ್ರಮವನ್ನು ಆಯೋಜಿಸಿತ್ತು. ಪಂಚಾಯತ್‌ರಾಜ್ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ. ವೀ. ಪಬಳಿಗಾರ್ ಮತ್ತು ಇನ್ನಿತರ ಸಂಪನ್ಮೂಲ ವ್ಯಕ್ತಿಗಳು ಉಪಸ್ಥಿತರಿದ್ದರು.
- ಸಂಸ್ಥೆಯು ೨೦೦೭ರ ಜೂನ್ ತಿಂಗಳಿನಲ್ಲಿ "ರಾಷ್ಟ್ರೀಯ ಉದ್ಯಾನವನ ಮತ್ತು ಆದಿವಾಸಿಗಳ ಹಕ್ಕುಗಳು" ಎಂಬ ವಿಷಯದ ಕುರಿತು ವಿಚಾರ ಸಂಕಿರಣವನ್ನು ಆಯೋಜಿಸಿತು. ಡಾ। ಯು. ಆರ್. ಅನಂತಮೂರ್ತಿ. ಡಾ। ರಾಮಚಂದ್ರ ಗುಹಾ, ಶ್ರೀ ರಂಜನ್ ರಾವ್ ಹಾಗೂ ಇನ್ನಿತರ ಸಂಪನ್ಮೂಲ ವ್ಯಕ್ತಿಗಳು ಉಪಸ್ಥಿತರಿದ್ದರು.
- ಸಂಸ್ಥೆಯು ದಿನಾಂಕ:೦೪.೧೨.೧೯೯೮ರಂದು ೮ ಬೆಳ್ತಂಗಡಿಯಲ್ಲಿ ಕೃಷಿ ಕಾರ್ಮಿಕರ, ಸಣ್ಣ ರೈತರ ಮತ್ತು ಗಿರಿಜನರ ಬೃಹತ್ ಸಮಾವೇಶವನ್ನು ಆಯೋಜಿಸಿತ್ತು. ಇದರಲ್ಲಿ ಪ್ರಮುಖ ರಾಜಕರಣಿಗಳು, ಸಾಮಾಜಿಕ ಹೋರಾಟಗಾರರು ಮತ್ತು ಕಾರ್ಯಕರ್ತರು ಪಾಲ್ಗೊಂಡಿದ್ದರು.
- ೨೦೦೪ರಲ್ಲಿ ಸಂಸ್ಥೆಯು ಬೆಳ್ತಂಗಡಿ ಹಾಗೂ ಇನ್ನಿತರ ಕಡೆಗಳಲ್ಲಿ ಕುದುರೆ ಮುಖ ರಾಷ್ಟ್ರೀಯ ಉದ್ಯಾನವಾಸಿಗಳನ್ನು ಒಕ್ಕಲೆಬ್ಬಿಸುವ ಮತ್ತು ಅಣ್ಯ ಇಲಾಖಾ ಸಿಬ್ಬಂದಿಗಳು ಅಲ್ಲಿ ವಾಸಿಸುವ ಆದಿವಾಸಿಗಳಿಗೆ ನೀಡುತ್ತಿರುವ ಕಿರುಕುಳದ ವಿರುದ್ಧ ಪ್ರತಿಭಟನಾ ಜಾಥಾ ಮತ್ತು ಸಭೆಗಳನ್ನು ಆಯೋಜಿಸಿತ್ತು.

- ಸಂಸ್ಥೆಯು ದಿನಾಂಕ:೩೦.೦೭.೨೦೦೫ ರಂದು ಮಂಗಳೂರಿನಲ್ಲಿ ಜಿಲ್ಲಾ ಮಟ್ಟದ ರಕ್ಷಿತಾರಣ್ಯ ಸಂತ್ರಸ್ತರ ಬೃಹತ್ ಪ್ರತಿಭಟನಾ ಸಭೆಯನ್ನು ಆಯೋಜಿಸುತ್ತದೆ. ಈ ಸಭೆಯಲ್ಲಿ ಸಂಸದರಾದ ಶ್ರೀ. ಖ. ವಿ ಸದಾನಂದ ಗೌಡ, ಶ್ರೀ. ಪಿ. ಎನ್. ರಾಜನ್, ಶ್ರೀ ಶಿವರಾಮ ಮಕ್ಕಿಗದ್ದೆ, ಶ್ರೀಮತಿ ವಸಂತಿ ಮತ್ತಿತರ ಉಪಸ್ಥಿತರಿದ್ದರು. ಅವುಗಳ ಜೊತೆಗೆ ದಿನಾಂಕ:೨೫.೦೨.೨೦೦೭ರಂದು ಬೆಳ್ತಂಗಡಿಯಲ್ಲಿ ನಾಗರಿಕ ಸೇವಾ ಟ್ರಸ್ಟ್‌ನ ತ್ರಿಜಶಮಾನೋತ್ಸವ ಪ್ರಯುಕ್ತ ಸಂಸ್ಥೆಯು "ಪ್ರಜಾಧಿಕಾರ ಪ್ರತಿಪಾದನಾ ಮಹಾಧಿವೇಶನ" ಎಂಬ ಬೃಹತ್ ಕಾರ್ಯಕ್ರಮವನ್ನು ಆಯೋಜಿಸಿತು ಮತ್ತು ಈ ಕಾರ್ಯಕ್ರಮದಲ್ಲಿ ಆದಿವಾಸಿಗಳ ಸಶಕ್ತತೆ ಮತ್ತು ಅಭಿವೃದ್ಧಿಗಾಗಿ ಸರಕಾರದ ನೀತಿಗಳು ಯೋಜನೆಗಳು ಹೇಗಿರಬೇಕು ಎಂಬ ವಿಷಯದ ಕುರಿತು ಪ್ರಬಂಧವನ್ನು ಮಂಡಿಸುತ್ತದೆ. ಪ್ರಬಂಧದ ಕೆಲವು ಪ್ರಮುಖ ಅಂಶಗಳು ಈ ರೀತಿಯಾಗಿವೆ.
- ಈಗಿರುವ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗೆ ಸಂಬಂಧಪಟ್ಟಂತೆ ಮೀಸಲು ಕ್ಷೇತ್ರಗಳನ್ನು ಪ್ರತಿ ೫ ವರ್ಷಗಳಿಗೊಮ್ಮೆ ಬದಲಾಯಿಸುವ ಮೂಲಕ ಇತರೆ ತಾಲೂಕುಗಳ ಪ.ಜಾತಿ/ಪ.ಪಂಗಡವರಿಗೂ ಚುನಾವಣೆಯಲ್ಲಿ ಭಾಗವಹಿಸುವ ಮತ್ತು ಆಡಳಿತದಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ನೀಡಬೇಕು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಪ್ರಸ್ತುತ ನೀಡಲಾಗುತ್ತಿರುವ ಮೀಸಲಾತಿ ಪದ್ದತಿಯ ಬದಲಿಗೆ ಒಳ ಮೀಸಲಾತಿ ಪದ್ದತಿಯನ್ನು ಜಾರಿಗೆ ತರಬೇಕು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಯಾವುದೇ ಕೇಸ್‌ಗಳನ್ನು ತುರ್ತು ಕಾಲಮಿತಿಯೊಳಗೆ ಇತ್ಯರ್ಥಗೊಳಿಸಲು ಸರಕಾರ ವಿಶೇಷ ನ್ಯಾಯಾಲಯವನ್ನು ಆರಂಭಿಸಬೇಕು.
- ಭೂಮಿಯ ಹಕ್ಕಿನಿಂದ ವಂಚಿತರಾಗಿರುವ SC/ST ಯವರಿಗೆ ಭೂಮಿ ನೀಡಲು ಮತ್ತೊಮ್ಮೆ ಭೂ ಮಸೂದೆ ಕಾನೂನನ್ನು ಜಾರಿಗೊಳಿಸಬೇಕು. ಕನಿಷ್ಟ 5 ಎಕರೆ ಮಿತಿಯಲ್ಲಿ ಕೃಷಿ ಯೋಗ್ಯ ನೀರಾವರಿ ಭೂಮಿಯನ್ನು ಹಂಚಬೇಕು. ಸ್ಥಳೀಯವಾಗಿ ಭೂಮಿ ಲಭ್ಯವಿರದಿದ್ದರೆ ಭೂಮಾಲೀಕರಲ್ಲಿರುವ ಹೆಚ್ಚುವರಿ ಭೂಮಿಯನ್ನು ಸರಕಾರ ವಶಪಡಿಸಿಕೊಳ್ಳಬೇಕು, ಅಥವಾ ಖರೀದಿಸಿ ಹಂಚಬೇಕು.
- ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಾತ್ರ ವಿಶೇಷವಾಗಿ ನಿಮ್ನವರ್ಗಕ್ಕೆ ಮೀಸಲಿರಿಸಿದ ಭೂಮಿ ಈಗಾಗಲೇ ಅರಣ್ಯ ಇಲಾಖೆ, ಗೇರು ಅಭಿವೃದ್ಧಿ ನಿಗಮ ಮತ್ತು

ಇತರೆ ಮೇಲು ವರ್ಗದ ಭೂಮಾಲೀಕರಿಂದ ಆಕ್ರಮಣಕ್ಕೊಳಪಟ್ಟಿದೆ. ಈ ಭೂಮಿಯನ್ನು ಸರಕಾರ ಹಿಂದಕ್ಕೆ ಪಡೆದು SC/STಯವರಿಗೆ ಹಂಚಲು ಕ್ರಮಕೈಗೊಳ್ಳಬೇಕು. ಮತ್ತು ಈ ಭೂಮಿಯ ಹಕ್ಕುಪತ್ರ ನೀಡುವ ಅಧಿಕಾರ ಈಗ ಜಿಲ್ಲಾಧಿಕಾರಿಗೆ ಮಾತ್ರವಿದ್ದು ಈ ಅಧಿಕಾರವನ್ನು ಸ್ಥಳೀಯ ತಹಶೀಲ್ದಾರರಿಗೆ ನೀಡಬೇಕು.

- ಪಡಿತರ ಚೀಟಿ ವಿತರಣೆಯಲ್ಲಿ ತುಂಬಾ ಗೊಂದಲಗಳಾಗುತ್ತಿವೆ. SC/ST ಯವರಿಗೆ ಬಿ.ಪಿ.ಎಲ್ ಪಡಿತರ ಚೀಟಿ ವಿತರಿಸಲು ೧೪ ಅಂಕ ಪದ್ಧತಿ ಸರಿಯಾದ ಕ್ರಮವಲ್ಲ. ಬಿ.ಪಿ.ಎಲ್ ವ್ಯಾಪ್ತಿಯಲ್ಲಿ ಬರಲು ನಿಗಧಿ ಪಡಿಸಿದ ವಾರ್ಷಿಕ ಆದಾಯ ಮಿತಿ ರೂ.೧೧,೮೦೦ ಯಾವ ಮಾನದಂಡದ ಆಧಾರದಲ್ಲಿ ಎಂಬುದೇ ಪ್ರಶ್ನೆಯಾಗಿದೆ. ಸರಕಾರವೇ ಕನಿಷ್ಠ ಕೂಲಿ ರೂ. ೭೦ ಎಂದು ನಿಗಧಿ ಪಡಿಸಿದೆ. ಒಂದು ಕುಟುಂಬದಲ್ಲಿ ಗಂಡ ಹೆಂಡತಿ ಇಬ್ಬರೂ ಕೂಲಿಗಾರರಾಗಿದ್ದರೆ ವರ್ಷ ಒಂದಕ್ಕೆ ಅವರ ವಾರ್ಷಿಕ ಆದಾಯ ರೂ.೫೦,೪೦೦/- ಆಗುತ್ತದೆ. ಇದನ್ನೇ ಕುಟುಂಬದ ವಾರ್ಷಿಕ ಆದಾಯಕ್ಕೆ ಮಿತಿಗೊಳಿಸಬೇಕು.
- ಪ್ರಸ್ತುತ ರಕ್ಷಿತಾರಣ್ಯ ಪ್ರದೇಶವೆಂದು ಹೇಳಲ್ಪಡುತ್ತಿರುವ (ಹಿಂದೆ ಕಂದಾಯ ಭೂಮಿ) ಭೂಮಿ ಹಾಗೂ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಸಹಿತ ಇತರ ಉದ್ಯಾನವನ, ಅಭಯಾರಣ್ಯ ಪ್ರದೇಶದಲ್ಲಿ ೫ ಎಕ್ರೆಯೊಳಗೆ ಅತಿಕ್ರಮಿಸಿ ಕೃಷಿ ಮಾಡಿ ಬದುಕುತ್ತಿರುವ ಬಡ ಕುಟುಂಬಗಳನ್ನು ಯಾವುದೇ ಕಾಣಕ್ಕೂ ಒಕ್ಕಲೆಬ್ಬಿಸಬಾರದು. ಅವರಿಗೆ ಅವರ ಭೂಮಿಯನ್ನು ಸಕ್ರಮೀಕರಿಸಿ ಹಕ್ಕುಪತ್ರ ನೀಡಬೇಕು. ಈಗಿರುವ ಹಕ್ಕು ಪತ್ರ ರದ್ದುಪಡಿಸಬಾರದು. ಅವರ ಮೂಲಭೂತ ಹಕ್ಕುಗಳಾದ ದಾರಿ ಹಕ್ಕು, ನೀರಿನ ಹಕ್ಕು, ದೈವಾರಾಧನೆ ಹಕ್ಕು, ಕಿರು ಅರಣ್ಯ ಉತ್ಪನ್ನ ಸಂಗ್ರಹದ ಹಕ್ಕು ಇತ್ಯಾದಿ ಊರ್ಜಿತದಲ್ಲಿರಿಸಬೇಕು.
- ಬೆಳ್ತಂಗಡಿ ತಾಲೂಕು ಮತ್ತು ಇತರೆಡೆಗಳಲ್ಲಿ ಬೆತ್ತ, ಬಿಳಲು ಇತ್ಯಾದಿ ಕಾಡುತ್ಪನ್ನ ಇವುಗಳನ್ನವಲಂಬಿಸಿ ಕರಕುಶಲ ವೃತ್ತಿ ಮಾಡಿ ಬದುಕುತ್ತಿರುವ ಹಲವಾರು ಬಡಕುಟುಂಬಗಳಿವೆ. ಇವರು ತಮ್ಮ ಕರಕುಶಲದ ಕಚ್ಚಾ ವಸ್ತುಗಳಿಗೆ ಸ್ಥಳೀಯ ರಕ್ಷಿತಾರಣ್ಯ, ರಾಷ್ಟ್ರೀಯ ಉದ್ಯಾನವನ ಇತ್ಯಾದಿ ಅರಣ್ಯಗಳನ್ನೇ ಅವಲಂಬಿಸಿದ್ದಾರೆ. ಅರಣ್ಯ ಇಲಾಖಾಧಿಕಾರಿಗಳು ಇವರಿಗೆ ನಿತ್ಯ ಕಿರುಕುಳ ಕೊಡಲಾರಂಭಿಸಿದ್ದರಿಂದ ಇವರ

ಬದುಕು ಶೋಚನೀಯವಾಗಿದೆ. ಇವರು ಕಚ್ಚಾ ವಸ್ತುಗಳನ್ನು ಪಡೆಯುವ ಹಕ್ಕನ್ನು ಕಾನೂನು ಬದ್ಧಗೊಳಿಸಬೇಕು.

- SC/ST ಜನರಿಗೆ ಸ್ವತಂತ್ರ ಉದ್ದಿಮೆಗಳನ್ನು ಸ್ಥಾಪಿಸಲು ಸರಕಾರವು ಆದ್ಯತೆಯಲ್ಲಿ ಸಂಪೂರ್ಣ ಆರ್ಥಿಕ ನೆರವನ್ನು ಬಡ್ಡಿ ರಹಿತ ಅಥವಾ ೨% ಬಡ್ಡಿದರದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಒದಗಿಸಬೇಕು ಮತ್ತು ಉದ್ದಿಮೆಗಳನ್ನು ಸ್ಥಾಪಿಸಲು ವಿಶೇಷ ತರಬೇತಿಗಳನ್ನು ನೀಡಬೇಕು.
- SC/STಗಳ ಅಗತ್ಯಗಳು, ವೃತ್ತಿ ಕೌಶಲ್ಯ ಮತ್ತು ತಂತ್ರಜ್ಞಾನ ಆಧಾರವಾಗಿಟ್ಟು ಕೊಂಡು ಅಭಿವೃದ್ಧಿಯ ಯೋಜನೆಯನ್ನು ರೂಪಿಸಬೇಕು.
- ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ SC/ST ಯವರ ಉನ್ನತ ಶಿಕ್ಷಣಕ್ಕೆ ಸರಕಾರದ ಪ್ರೋತ್ಸಾಹ ತೀರಾ ಕಡಿಮೆಯಿರುವ ಕಾರಣ ಇವತ್ತಿನವರೆಗೂ ಇವರ ಪೈಕಿ ಯರೊಬ್ಬರೂ IAS, IPS ಮಾಡಲು ಸಾಧ್ಯವಾಗಿಲ್ಲ. ಈಗಿರುವ ೧೪ ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ವ್ಯವಸ್ಥೆಯನ್ನು ದಲಿತರ ಮಟ್ಟಿಗೆ ಹೆಣ್ಣು-ಗಂಡು ಬೇಧವಿಲ್ಲದೆ ಉನ್ನತ ಮಟ್ಟದ ಶಿಕ್ಷಣಕ್ಕೂ ವಿಸ್ತರಿಸಬೇಕು. ಉನ್ನತ ಮಟ್ಟದ ಶಿಕ್ಷಣಕ್ಕೆ ಹೋಗಲು SC/ST ಮಕ್ಕಳಿಗೆ ಬಡ್ಡಿ ರಹಿತವಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ದೀರ್ಘಾವಧಿ ಸಾಲ ನೀಡಲು ಕ್ರಮ ಕೈಗೊಳ್ಳಬೇಕು. ಸಾಲ ನೀಡಲು ನಿರಾಕರಿಸುವ ಬ್ಯಾಂಕುಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತಿರಬೇಕು. (ಇದನ್ನು ಸಮಾಜ ಕಲ್ಯಾಣ ಅಧಿಕಾರಿಗಳು ನಿಭಾಯಿಸುವಂತಿರಬೇಕು.) SC/STಯವರ ಆಸಕ್ತಿಗನುಗುಣವಾಗಿ ಮತ್ತು ಆಸಕ್ತಿಯನ್ನು ಪ್ರಚೋದಿಸುವ ಪರಿಣಾಮಕಾರಿ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಜಿಲ್ಲಾ ಕ್ರೆಡಿಟ್ ಪ್ಲಾನ್‌ನಲ್ಲಿ SC/ST ಯವರ ಶಿಕ್ಷಣಕ್ಕೆ ಪ್ರತ್ಯೇಕ ಬಜೆಟ್ ಇಡಬೇಕು ಮತ್ತು ಇದರ ಮೇಲೆ ನಿಗಾ ಇಡುವ ಕಾವಲು ಸಮಿತಿಯೊಂದನ್ನು ರಚಿಸಬೇಕು.
- SC/ST ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಪ್ರಸ್ತುತ ನೀಡಲಾಗುತ್ತಿರುವ ವಿದ್ಯಾರ್ಥಿವೇತನ ರೂ.೭೫.೦೦ ರೂ.೨೫೦.೦೦ಕ್ಕೆ ಏರಿಸಬೇಕು.
- ಸರಕಾರಿ ಶಾಲೆಗಳ ಸ್ಥಿತಿ ತೀರಾ ದುಸ್ಥಿತಿಯಲ್ಲಿದೆ. ಶಿಕ್ಷಕರ ಕೊರತೆ, ಮೂಲಭೂತ ಸೌಲಭ್ಯಗಳ ಕೊರತೆ ಎದ್ದು ಕಾಣುತ್ತದೆ. ಶ್ರೀಮಂತರ ಮಕ್ಕಳು ಖಾಸಗಿ ಶಾಲೆಗಳಿಗೆ ಹೋಗುತ್ತಿದ್ದು ಅಲ್ಲಿಯ ಶಾಲಾ ಶುಲ್ಕ ಮತ್ತು ದೇಣಿಗೆ ಹಾವಳಿಯಿಂದ ಬಡವರ ಮಕ್ಕಳು

ಅಲ್ಲಿ ಓದುವುದು ಕನಸಾಗಿದೆ. ಸರಕಾರಿ ಶಾಲೆಗಳಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಉತ್ತಮಗೊಳಿಸಬೇಕು ಮತ್ತು ಒಂದನೇ ತರಗತಿಯಿಂದಲೇ ಆಂಗ್ಲ ಭಾಷೆಯನ್ನು ಒಂದು ವಿಷಯವಾಗಿ ಬೋಧಿಸಲು ಕ್ರಮಕೈಗೊಳ್ಳಬೇಕು. ಎಲ್ಲಾ ಸರಕಾರಿ ಪ್ರೌಢಶಾಲೆಗಳಲ್ಲಿ ಏಕ ರೀತಿಯ ಶುಲ್ಕ ವಿಧಿಸುವ ಪದ್ಧತಿ ಜಾರಿಗೆ ತರಬೇಕು. ಪ್ರಾಥಮಿಕ ಶಾಲೆಗಳಲ್ಲಿ ತರಗತಿಗೊಬ್ಬರಂತೆ ಶಿಕ್ಷಕರನ್ನು ನೇಮಕ ಮಾಡಬೇಕು.

- ದಲಿತ ಕಾಲೋನಿಗಳಿಗೆ ಹತ್ತಿರವಿರುವಂತೆ ಎಲ್ಲಾ ಸೌಲಭ್ಯಗಳನ್ನು ಒಳಗೊಂಡ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಬೇಕು. ಸರಕಾರದಿಂದ ನಡೆಸಲ್ಪಡುವ SC/ST ವಿದ್ಯಾರ್ಥಿ / ವಿದ್ಯಾರ್ಥಿನಿ ನಿಲಯಗಳಿಗೆ ಕನಿಷ್ಠ ವಾರಕ್ಕೊಂದು ಬರಿಯಂತೆ ತಜ್ಞವೈದ್ಯರು ಭೇಟಿ ನೀಡಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣಾ ಕಾರ್ಯ ಕೈಗೊಳ್ಳಬೇಕು.

೪.೩.೯. ನಾಗರಿಕ ಸೇವಾ ಟ್ರಸ್ಟ್ ಪಡೆದ ಪ್ರಶಸ್ತಿಗಳು:

- ಡಾ.ಟಿ.ಎಂ.ಎ.ಪೈ ಸ್ಮಾರಕ ಪ್ರಶಸ್ತಿ (ಉದಯವಾಣಿ ದಶಮಾನೋತ್ಸವ ಸಮಿತಿ)
- ಪರಿಸರ ರಕ್ಷಣಾ ಪ್ರಶಸ್ತಿ (ಕೆ.ಸೋಮನಾಥ ನಾಯಕ್) (ಚುಟುಕು ಸಾಹಿತ್ಯ ಸಮ್ಮೇಳನ)
- ಬೆಳ್ತಂಗಡಿ ತಾ. ಸಾರ್ವಜನಿಕ ಸನ್ಮಾನ (ತಾಲೂಕಿನ ಸಂಘಟನೆಗಳು)
- ಕರ್ನಾಟಕ ಕಲ್ಪವಲ್ಲಿ ಪ್ರಶಸ್ತಿ (ವಿದ್ಯಾ ನಾಯಕ್) (ಶಾಶ್ವತಿ ಪ್ರತಿಷ್ಠಾನ, ಬೆಂಗಳೂರು)
- ಗ್ರಾಮೀಣಾಭಿವೃದ್ಧಿ ಪ್ರಶಸ್ತಿ (KMJV) (ಫೆವಾರ್ಡ್ – ಕೆ)
- SHG ಪ್ರವರ್ತನೆ ಮತ್ತು ಲಿಂಕೇಜ್ (ನಬಾರ್ಡ್)
- ಯಶೋದರಮ್ಮ ದಾಸಪ್ಪ ಪ್ರಶಸ್ತಿ (ಕರ್ನಾಟಕ ರಾಜ್ಯ ಸ್ವಯಂಸೇವಾ ಸಂಸ್ಥೆಗಳ ಒಕ್ಕೂಟ, ಬೆಂಗಳೂರು)
- ರಾಜೀವ ಗಾಂಧಿ ಪರಿಸರ ಪ್ರಶಸ್ತಿ (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ)

೪.೪. "ಅಕ್ಷರ" ಸ್ವಯಂ ಸೇವಾ ಸಂಸ್ಥೆ, ಆನೆಗುಡ್ಡೆ – ಕುಂದಾಪುರ

೪.೪.೧. ಹಿನ್ನೆಲೆ

"ಅಕ್ಷರ" ಎಂಬ ಸ್ವಯಂಸೇವಾ ಸಂಸ್ಥೆಯ ಪೂರ್ಣ ಹೆಸರು ಮತ್ತು ವಿಳಾಸ "ಅಕ್ಷರ ಕೊರಗ ಅಭಿವೃದ್ಧಿ ಮತ್ತು ತರಬೇತಿ ಸಂಸ್ಥೆ, ಮಂಗಳದೀಪ, ಉಳ್ತೂರು ಗ್ರಾಮ ಮತ್ತು ಅಂಚೆ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ. ಈ ಸ್ವಯಂ ಸೇವಾ ಸಂಸ್ಥೆಯು ಮೇ ತಿಂಗಳ ೨೭ನೇ ೨೦೦೮ ರಂದು ಕರ್ನಾಟಕ ಸೊಸೈಟೀಸ್ ರಿಜಿಸ್ಟ್ರೇಶನ್ (೧೯೬೦) ಅಡಿಯಲ್ಲಿ

ನೋಂದಾವಣೆಯಾಗಿರುತ್ತದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೊರಗರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳಲ್ಲಿ "ಸಮಗ್ರ ಗ್ರಾಮೀಣ ಆಶ್ರಯ" ಬಿಟ್ಟರೆ ಅಕ್ಷರ ಸಂಸ್ಥೆಯು ಕೇವಲ ಎರಡನೆಯ ಸ್ವಯಂಸೇವಾ ಸಂಸ್ಥೆ ಎಂಬುದು ಗಮನಿಸಬೇಕಾದ ವಿಚಾರ. ಶ್ರೀ ವಿ. ಗಣೇಶ್, ಶ್ರೀ ಗಣೇಶ್ ಬಾರ್ಕೂರು, ಶ್ರೀ ಶೇಖರ ಮರವಂತೆ, ಶ್ರೀ ಸೂರ ಸಿದ್ಧ ಹೇರೂರು, ಶ್ರೀ ಲಕ್ಷ್ಮಣ್ ಬೈಂದೂರು, ಶ್ರೀ ಮಹಾಬಲ ಕೋಟ, ಶ್ರೀ ರವಿ, ಶ್ರೀ ಸಾಧು ಹಾಗೂ ವಿನೀತ ಇವರುಗಳು ಅಕ್ಷರ ಸಂಸ್ಥೆಯ ಟ್ರಸ್ಟ್ ಸದಸ್ಯರುಗಳಾಗಿದ್ದು, ಪ್ರತಿ ತಿಂಗಳಿಗೊಮ್ಮೆ ಸಭೆ ಸೇರಿ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಮಾತು ಕತೆಗಳನ್ನು ನಡೆಸುತ್ತಾರೆ.


೪.೪.೨. "ಅಕ್ಷರ" ಸ್ವಯಂ ಸೇವಾ ಸಂಸ್ಥೆಯ ಪ್ರಮುಖ ಧ್ಯೇಯೋದ್ದೇಶಗಳು:

ಕೊರಗ ಸಮುದಾಯದ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಅಭಿವೃದ್ಧಿ ಶ್ರಮಿಸುವುದು.



ಛಾಯ ಚಿತ್ರ ಸಂ. ಕುಂಭಾಶಿ ಕೊರಗ ಮಕ್ಕಳ ವಿಶೇಷ ವಸತಿ ಶಾಲೆ

ಇದರ ಜೊತೆಗೆ ಈ ಸ್ವಯಂ ಸೇವಾಸಂಸ್ಥೆಯು ಕೊರಗ ಸಮುದಾಯದವರನ್ನು ಒಳಗೊಂಡ ಸಾಂಸ್ಕೃತಿಕ ತಂಡಗಳನ್ನು ರಚಿಸಿ, ಕೊರಗರ ಪಾರಂಪರಿಕ ಡೋಲು ವಾದನವನ್ನು ಸಂರಕ್ಷಿಸುವುದರ ಜೊತೆಗೆ ಅದಕ್ಕೆ ವಿಶೇಷ ಸ್ಥಾನಮಾನ ನೀಡಲು ಶ್ರಮಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಹುಬಾಶಿಕ ಕೊರಗರ ಯುವ ಕಲಾವೇದಿಕೆ ಬಾರ್ಕೂರು, ಕೊರಗರ ಯುವ ಕಲಾವೇದಿಕೆ ಮರವಂತೆ, ಮಹಾತ್ಮ ಜ್ಯೋತಿ ಭಾಪುಲೆ ಯುವ ಕಲಾವೇದಿಕೆ ಬೈಂದೂರು ಹೀಗೆ 3 ಕಲಾ ತಂಡಗಳನ್ನು ರಚಿಸಿ ಅನೇಕ ಕಡೆಗಳಲ್ಲಿ ಪ್ರದರ್ಶನ ನೀಡುತ್ತಾ ಬಂದಿದ್ದಾರೆ. ಇದರ ಜೊತೆಗೆ ಮುಖ್ಯವಾಗಿ ತಮ್ಮ ಡೋಲು ಪ್ರದರ್ಶನಕ್ಕೆ ಅಸ್ಪೃತೆಯ ರೂಪವಾಗಿರುವ "ಅಜಲು ಪದ್ಧತಿ"ಯ ನೆರಳು ಬೀಳದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ ಸಮುದಾಯದೊಳಗೆ ಪರಸ್ಪರ ಅರಿವನ್ನೂ ಮೂಡಿಸುವ ಕೆಲಸವನ್ನೂ ಮಾಡುತ್ತಿದ್ದಾರೆ.



೪.೪.೩. "ಮಕ್ಕಳಮನೆ" – ಕೊರಗ ಮಕ್ಕಳ ವಿಶೇಷ ವಸತಿ ಶಾಲೆ:

ಪ್ರಸ್ತುತ "ಅಕ್ಷರ" ಸ್ವಯಂ ಸೇವಾ ಸಂಸ್ಥೆ ಇರುವ ಕುಂಭಾಶಿ ಕೊರಗರ ಕಾಲೋನಿಯಲ್ಲಿ ಈ ಹಿಂದೆ ಯಾವುದೇ ಕೊರಗ ಮಕ್ಕಳು ಎಷ್ಟೇ ಪ್ರಯತ್ನ ಮಾಡಿದರೂ ಶಾಲೆಗೆ ಹೋಗುತ್ತಿರಲಿಲ್ಲ. ಇದಕ್ಕೆ ಕೊರಗ ಮಕ್ಕಳಲ್ಲಿ ಸಂಕೋಚ ಪ್ರವೃತ್ತಿ, ಪೋಷಕರ ನಿರ್ಲಕ್ಷ್ಯ, ಮನೆಯ ವಾತಾವರಣ ಹೀಗೆ ಅನೇಕ ಕಾರಣಗಳಿದ್ದವು. ಇದನ್ನು ಮನಗಂಡ "ಅಕ್ಷರ" ಸ್ವಯಂ ಸೇವಾ ಸಂಸ್ಥೆಯ ಪ್ರಮುಖರು, ಆಗಿನ ಉಡುಪಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಎಸ್. ಎ ಪ್ರಭಾಕರ ಶರ್ಮಾ ಮತ್ತು ಆಗಿನ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಅಧಿಕಾರಿ ಡಾ। ಉದಯ್ ಶೆಟ್ಟಿ ಇವರೆಲ್ಲರೂ ಮಾತುಕತೆ ನಡೆಸಿ ಹಮ್ಮಿಕೊಂಡ ಕಾರ್ಯಕ್ರಮ/ಸಂಸ್ಥೆಯೇ "ಮಕ್ಕಳ ಮನೆ" ಎಂಬ ವಿಶೇಷ ಕೊರಗ ಮಕ್ಕಳ ವಸತಿ ಶಾಲೆ. ಪ್ರಾರಂಭದಲ್ಲಿ ೧೩ ಮಕ್ಕಳಿಂದ ಪ್ರಾರಂಭವಾದ ಮಕ್ಕಳ ಮನೆಯಲ್ಲಿ ಪ್ರಸ್ತುತ ೨೧ ಮಕ್ಕಳು ಇಲ್ಲಿದ್ದುಕೊಂಡು ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಬೆಳಿಗ್ಗೆಯಿಂದ ಸಂಜೆಯ ತನಕ ಹತ್ತಿರವಿರುವ ಸರಕಾರಿ ಶಾಲೆಯಲ್ಲಿ ಶಿಕ್ಷಣ ಪಡೆದರೆ ಉಳಿದ ಸಮಯದಲ್ಲಿ "ಮಕ್ಕಳ ಮನೆ" ವಸತಿ ಶಾಲೆಯಲ್ಲೇ ಇದ್ದು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಸಕಾರದ ವತಿಯಿಂದ ನಿರ್ಮಾಣಗೊಂಡ ಅಂಬೇಡ್ಕರ್ ಭವನದಲ್ಲೇ ಕೋಣೆಗಳನ್ನು ನಿರ್ಮಾಣ ಮಾಡಿ ಮಕ್ಕಳ ಭವನ ಕಟ್ಟಡ ನಿರ್ಮಿಸಲಾಗಿದೆ. ಹುಡುಗಿಯರಿಗೆ ಪ್ರತ್ಯೇಕ ಕೋಣೆ ಮತ್ತು ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಮಾಡಲಾಗಿದೆ. ಒಂದು ಪ್ರತ್ಯೇಕ ಅಡುಗೆ ಕೋಣೆ, "ಅಕ್ಷರ" ಸ್ವಯಂ ಸೇವಾ ಸಂಸ್ಥೆಯ ಕಛೇರಿ ಎಲ್ಲವು ಒಟ್ಟಾಗಿ ಒಂದೇ ಕಡೆ ಇವೆ. "ಅಕ್ಷರ" ಸಂಸ್ಥೆಯ ನಿರ್ದೇಶಕರಾದ ಗಣೇಶ್‌ರವರು "ಮಕ್ಕಳ ಮನೆ" ಕುರಿತು ಮಾತನಾಡುತ್ತಾ, "ಮಕ್ಕಳ ಮನೆ"ಯಲ್ಲಿ ಮಕ್ಕಳಿಗೆ ಕಲಿಕೆಯ ವಾತಾವರಣ ನಿರ್ಮಿಸುವುದು ತಮ್ಮ ಮೊದಲ ಆದ್ಯತೆ ಎಂದು ಹೇಳಿದರು. ಅವರು ಅಂಕಗಳನ್ನು ಗಳಿಸುವುದಕ್ಕಿಂತಲೂ ಮುಖ್ಯವಾಗಿ "ಮಕ್ಕಳಮನೆ"ಯಲ್ಲಿ ಉತ್ತಮ ಶಿಕ್ಷಣ ಪಡೆದು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು ಮುಖ್ಯ ಎಂದು ಹೇಳಿದರು. ಸರಿಯಾದ ಪೌಷ್ಠಿಕಾಂಶ ಆಹಾರ ಸಿಗದೆ, ವೈಯಕ್ತಿಕ ಸ್ವಚ್ಛತೆಯ ಅರಿವೇ ಇಲ್ಲದೇ ಸಣ್ಣ ಪ್ರಾಯದಲ್ಲೇ ದುಶ್ಚಟಗಳಿಗೆ ಹೊಂದಿಕೊಳ್ಳುವಂತಹ ವಾತಾವರಣದಿಂದ ಆ ಮಕ್ಕಳನ್ನು ಹೊರತಂದು, ಎಲ್ಲರೂ ಒಟ್ಟಾಗಿ ಒಂದೆ ಮನೆಯ ಮಕ್ಕಳಂತೆ ಒಳ್ಳೆಯ ಆಹಾರ, ಒಳ್ಳೆಯ ಆಟ–ಪಾಠಗಳಲ್ಲಿ ಸಂತೋಷದಿಂದ ತೊಡಗಿಸಿಕೊಳ್ಳುವಾಗ ನಮ್ಮ ಶ್ರಮ ಸಾರ್ಥಕ ಎಂದು ಅನಿಸುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. "ಮಕ್ಕಳ ಮನೆ"ಯಲ್ಲಿ ಇರುವ ತರಗತಿಯ ಎಲ್ಲಾ ಗೋಡೆಗಳ ಮೇಲೆ ವಿವಿಧ ಬಣ್ಣಗಳನ್ನು ಬಳಸಿ ಚಿತ್ರಗಳನ್ನು ಸಂಖ್ಯಾಚಿತ್ರಗಳನ್ನು, ಪ್ರಾಣಿಗಳ

ಚಿತ್ರಗಳನ್ನು ಬಿಡಿಸಲಾಗಿದೆ. ಕಲಿಕೆಯ ಜೊತೆಗೆ ಮಕ್ಕಳಿಗೆ ಕೃಷಿ ತರಬೇತಿಯನ್ನು ಕೂಡ ಕೊಡಲಾಗುತ್ತದೆ. ಮಕ್ಕಳಿಗೆ ಪಕ್ಕದಲ್ಲೇ ಇರುವ ಸಣ್ಣ ತುಂಡು ಭೂಮಿಯಲ್ಲಿ ತರಕಾರಿ ಸಸಿಗಳನ್ನು ಬೆಳೆಸುವುದರ ತರಬೇತಿಯನ್ನು ನೀಡಲಾಗುತ್ತಿದೆ. "ಮಕ್ಕಳ ಮನೆ" ಕೊರಗ ಮಕ್ಕಳ ವಿಶೇಷ ವಸತಿ ಶಾಲೆಗೆ ಇಬ್ಬರು ಸಿಬ್ಬಂದಿಗಳನ್ನು ಒದಗಿಸಲಾಗಿದೆ. ಒಬ್ಬರು ಶಿಲ್ಪಾ (ಶಿಕ್ಷಕಿ) ಮತ್ತು ಮಹಾಬಲ (ಅಡುಗೆ ತಯಾರಕರು). ಇವರಿಬ್ಬರಿಗೆ ಸಂಬಳ ಮತ್ತು ಊಟ ತಿಂಡಿಗಳ ಎಲ್ಲಾ ಖರ್ಚು-ವೆಚ್ಚಗಳನ್ನು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಇಲಾಖೆಯೇ ಭರಿಸುತ್ತದೆ. ಅಷ್ಟೇ ಅಲ್ಲದೆ ಸ್ಥಳೀಯ ಕುಂಭಾಶಿ ಗ್ರಾಮ ಪಂಚ್ಯಾತ್ ಕೂಡ ಮಕ್ಕಳ ಮನೆಗೆ ಡೆಸ್ಕು, ಬೆಂಚುಗಳನ್ನು ಕೊಡುಗೆ ರೂಪದಲ್ಲಿ ನೀಡಿದೆ. ಉಳಿದ ಖರ್ಚು-ವೆಚ್ಚಗಳಿಗೆ "ಅಕ್ಷರ" ಸ್ವಯಂಸೇವಾ ಸಂಸ್ಥೆಗೆ ಬರುವ ಕೊಡುಗೆಗಳೇ ಆಧಾರ.



ಛಾಯ ಚಿತ್ರ ಸಂ. ಕೊರಗ ಮಕ್ಕಳ ಬೌದ್ಧಿಕ ವಿಕಸನಕ್ಕೆ ಪೂರಕವಾದ ಕಲಿಕಾ ಕೊಠಡಿ

೪.೪.೪. ಮಕ್ಕಳ ರಜಾ ಶಿಬಿರ:

"ಅಕ್ಷರ" ಸ್ವಯಂಸೇವಾ ಸಂಸ್ಥೆಯು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಇಲಾಖೆಯ ಜಂಟಿ ಆಶ್ರಯದೊಂದಿಗೆ ಕೊರಗ ಮಕ್ಕಳಿಗೆ ಅಕ್ಟೋಬರ್ ರಜೆಯಲ್ಲಿ ೧೦ ದಿನಗಳ ಕಾಲ ವಿಶೇಷ ರಜಾ ಶಿಬಿರವನ್ನು ೨೦೧೩ ರಿಂದ ಆಯೋಜಿಸುತ್ತಾ ಬಂದಿದೆ. ಆದರೆ ಕೆಲವೊಂದು ಕಾರಣಗಳಿಂದ ಈ ಸಾಲಿನ (೨೦೧೫) ರಜಾ ಶಿಬಿರವನ್ನು ಮಾಡಲು ಸಾಧ್ಯವಾಗಲಿಲ್ಲ ಎಂದು "ಅಕ್ಷರ" ಸ್ವಯಂ ಸೇವಾ ಸಂಸ್ಥೆಯ ನಿರ್ದೇಶಕರಾದ ಗಣೇಶ್‌ರವರು ತಿಳಿಸಿದರು. ೨೦೧೩ರಲ್ಲಿ ಮಾತಾಡು ಎಂಬ ಘೋಷವಾಕ್ಯದೊಂದಿಗೆ ಅಕ್ಟೋಬರ್ ದಿನಾಂಕ ೧೫ರಿಂದ ೨೫ರ ವರೆಗೆ ನಡೆಯಿತು. ೨೦೧೪ರಲ್ಲಿ ಜೇರೆನೊ ಕೊಟ್ಟ ಎಂಬ ಘೋಷವಾಕ್ಯದೊಂದಿಗೆ ಅಕ್ಟೋಬರ್ ೧೨ ರಿಂದ ೨೧ ನೇ ದಿನಾಂಕದ ವರೆಗೆ ನಡೆಯಿತು.




ಹತ್ತು ದಿವಸಗಳ ಕಾಲ ನಡೆಯುವ ಈ ರಜಾ ಶಿಬಿರದಲ್ಲಿ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಕರೆಯಿಸಿ ವಿವಿಧ ವಿಷಯಗಳ ಬಗ್ಗೆ ಮಾಹಿತಿ ಮತ್ತು ತರಬೇತಿಯನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.



ಛಾಯ ಚಿತ್ರ ಸಂ. ಕೊರಗ ಮಕ್ಕಳ ರಜಾಶಿಬಿರ

೪.೪.೫. ಕೊರಗರ ಅಭಿವೃದ್ಧಿಯಲ್ಲಿ "ಅಕ್ಷರ" ಸ್ವಯಂ ಸೇವಾ ಸಂಸ್ಥೆ ಎದುರಿಸುತ್ತಿರುವ ಸಮಸ್ಯೆಗಳು:

ಈ ಬಗ್ಗೆ ಕುರಿತು ಮಾತನಾಡಿದಾಗ, ನಿರ್ದೇಶಕರಾದ ಗಣೇಶ್‌ರವರು ಕೊರಗ ಸಮುದಾಯದ ಸಮಸ್ಯೆಯೇ ನಮ್ಮ ಸಂಸ್ಥೆಯ ಸಮಸ್ಯೆ ಕೂಡ ಆಗಿದೆ ಎಂದು ಮಾರ್ಮಿಕವಾಗಿ ಉತ್ತರಿಸಿದರು. ಅದಕ್ಕೆ ಉದಾಹರಣೆಯನ್ನು ಕೊಡುತ್ತಾ "ಕೊರಗ ಸಮುದಾಯದಲ್ಲಿ ಹೆತ್ತವರಿಗೆ ತಮ್ಮ ಮಕ್ಕಳೆಂದರೆ ಅತೀವ ಪ್ರೀತಿ. ಎಷ್ಟರ ಮಟ್ಟಿಗೆ ಅಂದರೆ ತಾವು ಮದ್ಯ ಸೇವನೆ ಮಾಡುತ್ತಿದ್ದರೆ ಅದರಲ್ಲೂ ಸ್ವಲ್ಪ ಮದ್ಯವನ್ನು ಮಕ್ಕಳಿಗೆ ಕುಡಿಸುತ್ತಾರೆ ಎಂದು ತಿಳಿಸಿದರು." ಈ ಕಾರಣದಿಂದಾಗಿ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಬೇಕೆಂಬ ಸಂಸ್ಥೆಯ ಉದ್ದೇಶ ಮತ್ತು ಶ್ರಮಕ್ಕೆ ಪ್ರತಿಫಲ ಸಿಗುತ್ತಾ ಇಲ್ಲ ಎಂದು ತಿಳಿಸಿದರು. ಇನ್ನೊಂದು ಉದಾಹರಣೆ ಕೊಡುತ್ತಾ "ಹೆಣ್ಣು ಮಗಳು ಋತುಮತಿ ಆದಳು ಎಂಬ ಕಾರಣಕ್ಕೆ ಆರು ದಿನಗಳಿಂದ ಆಕೆಯನ್ನು ಶಾಲೆಗೆ ಕಳುಹಿಸಲಿಲ್ಲ" ಎಂದು ಹೇಳಿದರು. ಅಷ್ಟೇ ಅಲ್ಲದೆ ಸಂಸ್ಥೆ ನಿರ್ವಹಿಸುತ್ತಿರುವ ಕೊರಗರ ಕಾಲೋನಿಯಲ್ಲಿ ಕೊರಗ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯದಿಂದ ಮತ್ತು ಸಮುದಾಯದಲ್ಲಿರುವ ಲೈಂಗಿಕ ಸ್ವೇಚ್ಛಾಚಾರದಿಂದ ೧೨ನೇ ವರ್ಷಕ್ಕೆ ಹೆಣ್ಣು ಮಗಳು ಬಸುರಿಯಾದ ಉದಾಹರಣೆ ನೀಡಿದರು. ಅಷ್ಟೇ ಅಲ್ಲದೆ ಆ ಕಾಲೋನಿಯಲ್ಲಿರುವ ಬಹುತೇಕ ಗಂಡಸರು ಮತ್ತು ಹೆಂಗಸರು ಕುಡಿತದ ಚಟಕ್ಕೆ ಒಳಗಾಗಿದ್ದು, ಇದರಿಂದಾಗಿ ತಾವು ದುಡಿದ ಹಣವನ್ನೆಲ್ಲಾ ಕುಡಿತಕ್ಕೆ ಖರ್ಚು ಮಾಡುತ್ತಿದ್ದು ಇದನ್ನು ನಿಯಂತ್ರಿಸುವುದೇ ಸವಾಲಿನ ಕೆಲಸವಾಗಿದೆ ಎಂದು ಹತಾಶೆ ವ್ಯಕ್ತಪಡಿಸಿದರು. ಈ ನಿಟ್ಟಿನಲ್ಲಿ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ



ಇಲಾಖೆಯು ಉಡುಪಿಯ ಡಾ। ಬಾಳಿಗಾ ಮಾನಸಿಕ ಆರೋಗ್ಯ ಸಂಸ್ಥೆಯ ಜೊತೆಗೆ ಸೇರಿಕೊಂಡು ಉಚಿತ ಕುಡಿತದ ಚಟ ಬಿಡಿಸುವ ಚಿಕಿತ್ಸೆಯನ್ನು ನೀಡುತ್ತಿದ್ದರೂ ಅದರಲ್ಲಿ ಯಾರೂ ಪಾಲ್ಗೊಳ್ಳುತ್ತಿಲ್ಲ. ಪಾಲ್ಗೊಂಡರೂ ಕೆಲವು ದಿನಗಳ ಬಳಿಕ ಮತ್ತೆ ಕುಡಿತವನ್ನು ಪ್ರಾರಂಭಿಸುತ್ತಾರೆ ಎಂದು ತಿಳಿಸಿದರು.

೪.೫ "ಸ್ಫೂರ್ತಿಧಾಮ" ಕೆದೂರು, ಉಡುಪಿ.

೧೯೯೫ರಲ್ಲಿ ಕೇಶವ್ ಕೋಟೇಶ್ವರ ಮತ್ತು ಅವರ ಸ್ನೇಹಿತರು ಸೇರಿಕೊಂಡು ಪ್ರಾರಂಭಿಸಿದ ಈ ಸಂಸ್ಥೆಯು ಪ್ರಾರಂಭದಲ್ಲಿ ಕೊರಗ ಮಕ್ಕಳಿಗೆ ಶಿಕ್ಷಣವನ್ನು ಕೊಡುವ ಉದ್ದೇಶದಿಂದ ಪ್ರಾರಂಭಿಸಿದರು. ಪ್ರಸ್ತುತ ಈ ಸಂಸ್ಥೆಯು ಕೊರಗ ಮಕ್ಕಳನ್ನು ಸೇರಿಸಿ ಎಲ್ಲಾ ರೀತಿಯ ಅನಾಥ ಬಡ ಮಕ್ಕಳಿಗೆ ಉಚಿತವಾದ ಶಿಕ್ಷಣವನ್ನು ಕೊಡುವಂತಹ ಸೇವೆಯನ್ನು ಮಾಡುತ್ತಿದೆ. ಪ್ರಾರಂಭದಲ್ಲಿ ಈ ಸಂಸ್ಥೆಯಲ್ಲಿ ಹತ್ತು ಕೊರಗ ಮಕ್ಕಳನ್ನು ಸೇರಿಸಲಾಯಿತು. ಅನೇಕ ಕಾರಣಗಳಿಂದ ಮಕ್ಕಳನ್ನು ಸೇರಿಸುವಲ್ಲಿ ವಿಫಲವಾದರೂ ನಂತರದ ವರ್ಷ ಕೊರಗ ಮಕ್ಕಳ ಸಂಖ್ಯೆ ಅರುವತ್ತರಿಂದ ಎಪ್ಪತ್ತರ ತನಕ ಮುಟ್ಟಿತು. ಪ್ರಾರಂಭದಲ್ಲಿ ಈ ಸಂಸ್ಥೆಯು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಕೊರಗರ ಮಕ್ಕಳು ಇದ್ದಾರೆ ಎಂಬ ಕಾರಣಕ್ಕಾಗಿ ಈ ಸಂಸ್ಥೆಗೆ ಜಾಗವನ್ನು ಕೊಡಲು ಯಾರೂ ಮುಂದೆ ಬರಲಿಲ್ಲ. ತದನಂತರ ಮಕ್ಕಳು ಸಂಸ್ಥೆಯನ್ನು ಅರ್ಧದಲ್ಲೇ ಬಿಟ್ಟು ಹೋಗುತ್ತಿದ್ದರು. ಅಷ್ಟೇ ಅಲ್ಲದೆ, ಇಲ್ಲಿನ ಸಿಬ್ಬಂದಿಗಳಿಗೆ ಭಾಷೆಯ ಸಮಸ್ಯೆ ಕೂಡ ಇದ್ದುದರಿಂದ ಮಕ್ಕಳನ್ನು ಸೆಳೆಯುವಲ್ಲಿ ವಿಫಲರಾದರು. ಕ್ರಮೇಣ ಕೊರಗ ಮಕ್ಕಳ ಸಂಖ್ಯೆ ವೃದ್ಧಿಸತೊಡಗಿದಾಗ ಶಿಕ್ಷಣದೊಟ್ಟಿಗೆ ಸ್ವ-ಉದ್ಯೋಗದ ತರಬೇತಿಯನ್ನು ಕೊಡಲು ಪ್ರಾರಂಭಿಸಿದರು. ಆದರೆ ಅಲ್ಲಿಯೂ ಊರಿನ ಜನರಿಂದ ಸಮಸ್ಯೆಗಳು ಬರತೊಡಗಿದವು. ಕೊರಗ ಮಕ್ಕಳು ಹಾಲನ್ನು ಮಾರಿದರು ಎಂಬ ಕಾರಣಕ್ಕೆ ಜನರು ಹಾಲನ್ನು ಕೊಳ್ಳುತ್ತಿರಲಿಲ್ಲ. ಸರಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಕೂಡ ಮಕ್ಕಳನ್ನು ದಾಖಲಾತಿ ಮಾಡುವಾಗ ವಿನಾ ಕಾರಣ ಸಮಸ್ಯೆಯನ್ನು ಒಡ್ಡುತ್ತಿದ್ದರು. ಆದರೂ ಕೂಡ ಸಂಸ್ಥೆ ಕಾನೂನಿನ ಮೂಲಕ ಹೋರಾಟ ಮಾಡಿ ಮಕ್ಕಳಿಗೆ ಸಿಗಬೇಕಾದ ಹಕ್ಕುಗಳು ಮತ್ತು ನ್ಯಾಯವನ್ನು ಕೊಡಿಸುವಲ್ಲಿ ಸಂಸ್ಥೆಯು ಸಫಲವಾಗಿತ್ತು. ೨೦೦೫ರಲ್ಲಿ ಈ ಸಂಸ್ಥೆಯು ಶಿಕ್ಷಣಕ್ಕಾಗಿ ಭಿಕ್ಷಾಟನೆ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಾಗ ಅದು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿತ್ತು ಮತ್ತು ಹದಿನೆಂಟು ದಿನದಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಸಾರ್ವಜನಿಕರಿಂದ ಸಂಗ್ರಹಿಸಿ ಕೊರಗರ ಶಿಕ್ಷಣಕ್ಕಾಗಿ ಮೀಸಲಿಟ್ಟಿತು. ಇವತ್ತಿನವರೆಗೆ ಇನ್ನೂರ ಐವತ್ತಕ್ಕೂ ಹೆಚ್ಚು ಕೊರಗ ವಿದ್ಯಾರ್ಥಿಗಳು ಈ ಸಂಸ್ಥೆಯಲ್ಲಿ ಪ್ರಾಥಮಿಕ ಮತ್ತು ಹೈಸ್ಕೂಲ್ ಶಿಕ್ಷಣವನ್ನು ಪೂರೈಸಿದರೆ. ಆರು ಮಂದಿ ಕೊರಗ ಮಕ್ಕಳು ನರ್ಸಿಂಗ್ ಮುಗಿಸಿ

ಕೆಲಸದಲ್ಲಿದ್ದಾರೆ. ಒಬ್ಬ ವಿದ್ಯಾರ್ಥಿ ಬಿಎಡ್ ಶಿಕ್ಷಣವನ್ನು ಪಡೆದು ಕೆಲಸದಲ್ಲಿದ್ದಾರೆ. ಅಲ್ಲದೆ ಈ ಸಂಸ್ಥೆಯು ಕುಡಿತದ ವಿರುದ್ಧ ಶಿಕ್ಷಣದ ಬಗ್ಗೆ ಜನಜಾಗೃತಿಯನ್ನು ಮೂಡಿಸುವಂತಹ ಬೀದಿ ನಾಟಕಗಳನ್ನು ಅನೇಕ ಕಡೆಗಳಲ್ಲಿ ಹಮ್ಮಿಕೊಂಡಿದ್ದವು.

ಪ್ರಸ್ತುತ ಈ ಸಂಸ್ಥೆಯು ಸರಕಾರದಿಂದ ಬಾಲಾಪರಾಧಿಗಳ ಮನಪರಿವರ್ತನಾ ಸಂಸ್ಥೆ (Fit Institution) ಎಂದು ಮಾನ್ಯತೆ ಪಡೆದಿದೆ. ಮತ್ತು ಪ್ರಸ್ತುತ ಈ ಸಂಸ್ಥೆಗೆ ದತ್ತು ಸ್ವೀಕಾರ ಕೇಂದ್ರ ಪರವಾನಿಗೆ ಕೂಡ ದೊರಕಿದೆ.

ಅಡಿ ಟಿಪ್ಪಣಿಗಳು:

೦೧ ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಬುಡಕಟ್ಟುಗಳ ಅಭಿವೃದ್ಧಿ ಮತ್ತು ಸ್ವಯಂಸೇವಾ ಸಂಸ್ಥೆಗಳು, ಗಂಗಾಧರ ದೈವಜ್ಞ, ಪು. ೧೩೦–೧೩೩.

೦೨ ಅದೇ ಪು ೧೩೨ ರಿಂದ ೧೩೪

ಆಧಾರ ಗ್ರಂಥಗಳು:

1.Samagra Grameena Ashrama, Reports of Plans and Budget, 2010.

೨.ಪ್ರಭಾಕರ ಎ.ಎಸ್., ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

3.Goel O.P., Role of NGOs in Development of Social System, Isha Books, Delhi, 2004.

4.Patel A.K.- Dubey M.V., NGOs and Social Work, Crescent Publishing Corporation, 2010.

ಅಧ್ಯಾಯ. ೫

ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಬುಡಕಟ್ಟುಗಳ ಪ್ರಸ್ತುತ ಸ್ಥಿತಿಗಳು

ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಬುಡಕಟ್ಟುಗಳ ಪ್ರಸ್ತುತ ಸ್ಥಿತಿಗಳು

ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಂಡು ಬರುವ ಪ್ರಮುಖ ಬುಡಕಟ್ಟುಗಳಾದ ಮಲೆಕುಡಿಯ, ಕೊರಗ ಮತ್ತು ಮರಾಠಿ ನಾಯ್ಕ ಸಮುದಾಯಗಳ ಅಭಿವೃದ್ಧಿಗಾಗಿ ಸರಕಾರದ ವಿವಿಧ ಇಲಾಖೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದರೂ ಅವರ ಅಭಿವೃದ್ಧಿ ನಿರೀಕ್ಷಿತ ಮಟ್ಟದಲ್ಲಿಲ್ಲ. ಇಂದು ಈ ಆದಿವಾಸಿ ಸಮುದಾಯಗಳ ಸ್ಥಿತಿಗಳು ಹೇಗಿವೆ ಅವು ಹೇಗೆ ಬದುಕನ್ನು ಸಾಗಿಸುತ್ತಿವೆ, ಅವರು ಎದುರಿಸುತ್ತಿರುವ ಸಮಸ್ಯೆಗಳೇನು ಎಂಬುದನ್ನು ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ವಿಷಯಗಳನ್ನು ಇಲ್ಲಿ ವಿವರಿಸುವ ಪ್ರಯತ್ನ ಮಾಡಿದ್ದೇನೆ.

೫.೧. ಮಲೆಕುಡಿಯರ ಸ್ಥಿತಿಗಳು:

ಮಲೆಕುಡಿಯರ ಕಾಲೋನಿಗಳಲ್ಲಿ ಎಷ್ಟರ ಮಟ್ಟಿಗೆ ಅಭಿವೃದ್ಧಿಯಾಗಿದೆಯೋ, ಅಷ್ಟೇ ಪ್ರಮಾಣದ ಸಮಸ್ಯೆಗಳೂ ಜೀವಂತವಾಗಿವೆ ಎಂದು ಹೇಳಬಹುದು. ಇಂದೂ ಸಹ ಮಲೆಕುಡಿಯರು ಅತ್ಯಂತ ಬಡ ಮತ್ತು ಶೋಚನೀಯ ಜೀವನವನ್ನು ನಡೆಸುತ್ತಿದ್ದಾರೆ ಮತ್ತು ಈ ಸಮುದಾಯದ ಜನರ ಅನಕ್ಷರತೆ ಮತ್ತು ಮುಗ್ದತೆಯಿಂದ ಮತ್ತು ಸರಕಾರಿ ಪ್ರತಿನಿಧಿಗಳ ನಿರುತ್ಸಾಹ, ನಿರ್ಲಕ್ಷ್ಯದಿಂದ ಅಭಿವೃದ್ಧಿ ಕಾರ್ಯಕ್ರಮಗಳು ಕುಂಟುತ್ತಿವೆ. ಎಂದು ಹೇಳಬಹುದು. ವಸತಿ ಮತ್ತು ವಾಸಸ್ಥಳದ ಸಮಸ್ಯೆ ಮಲೆಕುಡಿಯರ ಪ್ರಮುಖ ಸಮಸ್ಯೆಯಾಗಿದೆ. ಬಹುಸಂಖ್ಯೆಯ ಮನೆಗಳಿಗೆ ಮತ್ತು ಅವರ ನಿವೇಶನಗಳಿಗೆ ಯಾವುದೇ ಅಧಿಕೃತ ದಾಖಲೆಗಳಿಲ್ಲ ಮತ್ತು ಮಳೆಗಾಲದ ಸಮಯದಲ್ಲಿ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಕೆಲವು ಮನೆಗಳನ್ನು ಸಂಪರ್ಕಿಸಲು ಸೂಕ್ತವಾದ ಮಾರ್ಗಗಳೂ ಇಲ್ಲ. ಮಲೆಕುಡಿಯರಲ್ಲಿ ಕಂಡು ಬರುವ ಮತ್ತೊಂದು ಪ್ರಮುಖ ಸಮಸ್ಯೆಯೆಂದರೆ, ಪರಂಪರಾಗತವಾಗಿ ಬಂದಂತಹ ಕುಲ ಕಸಬಿವಿನ ಮೇಲೆ ಉಂಟಾಗಿರುವಂತಹ ತೊಂದರೆಗಳು. ಮಲೆಕುಡಿಯರಲ್ಲಿ ಹೆಚ್ಚಿನ ಜನರು ಇಂದೂ ಬುಟ್ಟಿ ಸಿದ್ಧಪಡಿಸುವ ಮತ್ತು ಬಿದಿರಿನ ಉತ್ಪನ್ನಗಳನ್ನು ತಯಾರಿಸುವುದರ ಮೂಲಕ ತಮ್ಮ ಜೀವನವನ್ನು ನಿರ್ವಹಿಸುತ್ತಿದ್ದಾರೆ. ಆದರೆ, ಕೆಲವೊಂದು ಕಾರಣಗಳಿಂದ ಬಿದಿರಿನ ಉತ್ಪನ್ನಗಳಿಗೆ ಬೇಡಿಕೆ ಕಡಿಮೆಯಾಗಿದೆ. ಅಷ್ಟೇ ಅಲ್ಲದೆ ದಲ್ಲಾಳಿಗಳು, ವ್ಯಾಪಾರಿಗಳು ಮಲೆಕುಡಿಯರಿಂದ ಕಡಿಮೆ ಬೆಲೆಗೆ ಉತ್ಪನ್ನಗಳನ್ನು ಖರೀದಿಸಿ ಹೆಚ್ಚು ಬೆಲೆಗೆ ಗ್ರಾಹಕರಿಗೆ ಮಾರುತ್ತಾರೆ. ಇದರಿಂದಲೂ ಸಹ

ಮಲೆಕುಡಿಯರು ನಷ್ಟ ಅನುಭವಿಸುತ್ತಿದ್ದಾರೆ. ಅಷ್ಟೇ ಅಲ್ಲದೆ ಕಾಡಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬಿದಿರಿಗಳ ಕೊರತೆ ಕಂಡು ಬಂದಿದೆ. ಇದರಿಂದಾಗಿ ಮಲೆಕುಡಿಯರು ಬಿದಿರು ಸಂಗ್ರಹಿಸಲು ಸಾಕಷ್ಟು ಕಷ್ಟಪಡಬೇಕಾಗುತ್ತಿದೆ. ಇದು ಮಲೆಕುಡಿಯರ ಆರ್ಥಿಕತೆಯ ಮೇಲೆ ವ್ಯತಿರಿಕ್ತವಾದ ಪರಿಣಾಮ ಬೀರಿದೆ ಎಂದು ಹೇಳಬಹುದು. ಅಪೌಷ್ಟಿಕತೆ ಮಲೆಕುಡಿಯರಲ್ಲಿ ಕಂಡು ಬಂದಂಹ ಮತ್ತೊಂದು ಪ್ರಮುಖ ಸಮಸ್ಯೆ. ಈ ಸಮುದಾಯದ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು, ಮಹಿಳೆಯರು ನಿಶ್ಯಕ್ತಿಯಿಂದ ಬಳಲುತ್ತಿದ್ದಾರೆ. ಇವರಿಗೆ ಪೌಷ್ಟಿಕಾಂಶಯುಕ್ತ ಆಹಾರ ಪೂರೈಕೆಯಾಗುತ್ತಿಲ್ಲ. ಕುಡಿತ ಮಲೆಕುಡಿಯರಲ್ಲಿನ ಮತ್ತೊಂದು ಪ್ರಮುಖವಾದ ಸಮಸ್ಯೆ. ಮಲೆಕುಡಿಯರಲ್ಲಿ ಗಂಡಸರು, ಹೆಂಗಸರು ಭೇದವಿಲ್ಲದೆ ಕುಡಿತದ ಚಟಕ್ಕೆ ಅಂಟಿಕೊಂಡಿದ್ದರೂ, ಮಹಿಳೆಯರ ಪ್ರಮಾಣ ಕಡಿಮೆ ಎಂದು ಹೇಳಬಹುದು. ಇಂದೂ ಸಹ ಮಲೆಕುಡಿಯರಲ್ಲಿ ಹೆಚ್ಚಿನ ಗಂಡಸರು ಅದರಲ್ಲೂ ಯುವಕರು ಮದ್ಯವ್ಯಸನಿಗಳಾಗಿದ್ದಾರೆ ಎಂಬುದು ಸತ್ಯ. ಹೀಗೆ ಮಲೆಕುಡಿಯರಲ್ಲಿ ಹತ್ತು ಹಲವು ಸಮಸ್ಯೆಗಳು ಕಂಡು ಬಂದಿದ್ದರೂ, ಅಭಿವೃದ್ಧಿ ಕಾರ್ಯಗಳು, ಮತ್ತು ಅದರ ಫಲಿತಾಂಶಗಳು ನಿರೀಕ್ಷಿತ ಮಟ್ಟದಲ್ಲಿಲ್ಲ ಎಂದು ಹೇಳಬಹುದು. ಮುಖ್ಯವಾಗಿ ಐ.ಟಿ.ಡಿ.ಪಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಸ್ವಯಂ ಸೇವಾ ಸಂಸ್ಥೆಗಳು, ಗ್ರಾಮ, ತಾಲೂಕು ಹಾಗೂ ಜಿಲ್ಲಾ ಪಂಚಾಯತ್ ಮೂಲಕ ಹಾಗೂ ಕೆಲ ಸಮುದಾಯ ಸಂಘಟನೆಗಳು ಅದರಲ್ಲೂ ಸ್ತ್ರೀ ಶಕ್ತಿ ಸಂಘ, ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸ್ವಸಹಾಯ ಸಂಘಗಳು ಮಲೆಕುಡಿಯರ ಅಭಿವೃದ್ಧಿಗೆ ನೇರವಾಗಿ ಮತ್ತು ಪರೋಕ್ಷವಾಗಿ ಶ್ರಮಿಸುತ್ತಿವೆ ಮತ್ತು ಸಹಕರಿಸುತ್ತಿವೆ. ಹೀಗಾಗಿ ಇಂದು ಈ ಸಮುದಾಯದ ಜನರ ಮೂಲಭೂತ ಸೌಕರ್ಯಗಳು, ಸೌಲಭ್ಯಗಳು ಅಲ್ಪ ಪ್ರಮಾಣದಲ್ಲಿ ದೊರೆಯುತ್ತಿವೆ ಎಂದು ಹೇಳಬಹುದು. ಮುಖ್ಯವಾಗಿ ಮಲೆಕುಡಿಯರಲ್ಲಿ ಶೈಕ್ಷಣಿಕ ಅಭಿವೃದ್ಧಿಯ ಬಗೆಗೆ ಜಾಗೃತಿ ಉಂಟಾಗಿ, ಅದರ ಪ್ರಭಾವದಿಂದ ಮಲೆಕುಡಿಯರ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳೀಯ ಶಾಲೆ, ಕಾಲೇಜುಗಳಿಗೆ ಹೋಗಿ ಶಿಕ್ಷಣ ಪಡೆಯುತ್ತಿರುವುದು ಕಂಡು ಬರುತ್ತದೆ. ಮಲೆಕುಡಿಯರಿಗೆ ಆರೋಗ್ಯದ ವಿಷಯದಲ್ಲೂ ಸಹ ಅಲ್ಪ ಪ್ರಮಾಣದ ಜಾಗೃತಿ ಉಂಟಾಗಿದ್ದು, ಅನಾರೋಗ್ಯದ ಸಂದರ್ಭಗಳಲ್ಲಿ ಹೆಚ್ಚಿನ ಜನರು ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಷ್ಟೇ ಅಲ್ಲದೆ ಇವರ ಕಾಲೋನಿಗಳಲ್ಲಿರುವ ಕೆಲ ಗಂಡಸರು ಮತ್ತು ಹೆಂಗಸರು ಮದ್ಯವರ್ಜನಾ ಶಿಬಿರದಲ್ಲಿ ಪಾಲ್ಗೊಂಡು ಕುಡಿತದ ಚಟದಿಂದ ಮುಕ್ತರಾಗಿದ್ದಾರೆ. ಉದ್ಯೋಗಕ್ಕೆ ಸಂಬಂಧಿಸಿದಂತೆ ಮಲೆಕುಡಿಯರಲ್ಲಿ ಪ್ರಮುಖವಾದ ಬದಲಾವಣೆ ಕಂಡುಬಂದಿದ್ದು, ಈ ತಲೆಮಾರಿನ ಯುವಕ ಯುವತಿಯರು ತಮ್ಮ ಮೂಲ ಕುಲಕಸುಬಾದ ಬಿದಿರು ಉತ್ಪನ್ನಗಳ ತಯಾರಿಸುವಿಕೆಯನ್ನು

ಬಿಟ್ಟು ಇತರೆ ಲಾಭದಾಯಕ ಉದ್ಯೋಗಗಳತ್ತ ಮತ್ತೆ ಕೆಲವರು ಸ್ವ-ಉದ್ಯೋಗಗಳನ್ನು ಮಾಡುತ್ತಾ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಮಲೆಕುಡಿಯರ ಯುವಕರು ಮುಖ್ಯವಾಗಿ ಕಟ್ಟಡಗಳ ನಿರ್ಮಾಣಗಳಲ್ಲಿ ಗಾರೆ ಕೆಲಸ, ಮೇಸ್ತ್ರಿ ಕೆಲಸ ಮಾಡುತ್ತಾ ಸಂಪಾದನೆ ಮಾಡುತ್ತಿದ್ದರೆ, ಗಂಡಸರು ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಹಿರಿಯರು ಮತ್ತು ವಯಸ್ಸಾದವರು ಜೀವನೋಪಾಯಕ್ಕೆ ಮೂಲ ಕುಲ ಕಸುಬನ್ನೇ ನೆಚ್ಚಿಕೊಂಡಿದ್ದಾರೆ. ಇನ್ನು ಮಹಿಳೆಯರು, ಅದರಲ್ಲೂ ಯುವತಿಯರು ಸ್ಥಳೀಯ ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಪ್ರಾಥಮಿಕ ಶಿಕ್ಷಣ ಮುಗಿಸಿದ ಯುವತಿಯರು ಟೈಲರಿಂಗ್, ಹೈನುಗಾರಿಕೆ, ಬೀಡಿ ಕಟ್ಟುವಿಕೆ ಇತ್ಯಾದಿ ಉದ್ಯೋಗಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇನ್ನುಳಿದ ಮಹಿಳೆಯರು ಕೃಷಿ ಕೂಲಿ ಕಾರ್ಮಿಕರಾಗಿ ದಿನಗೂಲಿ ಕೆಲಸದಲ್ಲಿ ನಿರತರಾಗಿರುವುದು ಕಂಡು ಬರುತ್ತದೆ.



ಛಾಯ ಚಿತ್ರ (ಸಂ.) ಪುನರ್‌ವಸತಿ ಯೋಜನೆಯಲ್ಲಿ ಮಲೆಕುಡಿಯರಿಗೆ ಕಟ್ಟಿದ ಮನೆ

೫.೨. ಮರಾಠಿನಾಯ್ಕ, ಮಲೆಕುಡಿಯ ಮತ್ತು ಕೊರಗ ಸಮುದಾಯಗಳ ಸಮಸ್ಯೆಗಳ ತೌಲನಿಕ ವಿವರ:

ಕ್ಷೇತ್ರಕರ್ಯದಲ್ಲಿ ನಾನು ಮರಾಠಿ ನಾಯ್ಕ, ಮಲೆಕುಡಿಯ ಮತ್ತು ಕೊರಗರ ಕಾಲೋನಿಗಳಿಗೆ ಭೇಟಿ ನೀಡಿದಾಗ, ಈ ಮೂರು ಸಮುದಾಯದ ಕಾಲೋನಿಗಳನ್ನು ತೌಲನಿಕವಾಗಿ ಗಮನಿಸಿದಾಗ ಕೆಲ ಅಂಶಗಳು ನನ್ನ ಗಮನಕ್ಕೆ ಬಂದವು. ಮೊದಲನೆಯದಾಗಿ, ಕೊರಗರ ಕಾಲೋನಿಗಳಲ್ಲಿ ಮನೆಗಳು ಒಂದಕ್ಕೊಂದು ಹತ್ತಿರದಲ್ಲಿದ್ದರೆ, ಮಲೆಕುಡಿಯರ ಮನೆಗಳು ಸ್ವಲ್ಪ ದೂರದಲ್ಲಿವೆ. ಎರಡನೆಯದಾಗಿ ಕೊರಗರ ಕಾಲೋನಿಗಳಲ್ಲಿ ರಸ್ತೆಗಳ ನಿರ್ಮಾಣವಾಗಿದ್ದರೆ, ಮಲೆಕುಡಿಯರ ಕಾಲೋನಿಗಳಲ್ಲಿ ಕೆಲವೊಂದು ಮನೆಗಳನ್ನು ಸಂಪರ್ಕಿಸಲು ಒಳ್ಳೆಯ ರಸ್ತೆಗಳಿಲ್ಲದಿರುವುದು ಕಂಡು ಬರುತ್ತದೆ.





ಚಿತ್ರ: ಅರಣ್ಯ ಪ್ರದೇಶದಲ್ಲಿರುವ ಮಲೆಕುಡಿಯರ ದುಸ್ಥರಗೊಂಡ ಸಂಪರ್ಕ ರಸ್ತೆ.

ಮೂರನೆಯದಾಗಿ ಮಲೆಕುಡಿಯರ ಕಾಲೋನಿಗಳು ಕೊರಗರ ಕಾಲೋನಿಗಳಿಗಿಂತ ಹೆಚ್ಚು ವ್ಯವಸ್ಥಿತವಾಗಿ ಮತ್ತು ಪರಿಸರದ ಸ್ವಚ್ಛತೆ ಉತ್ತಮವಾಗಿದೆ. ಆರ್ಥಿಕ ವಿಚಾರಕ್ಕೆ ಸಂಬಂಧಿಸಿದಂತೆ ಮಲೆಕುಡಿಯರು ಹೆಚ್ಚಿನ ಸಂಖ್ಯೆಯಲ್ಲಿ ಶ್ರಮಜೀವಿಗಳಾಗಿರುವುದರಿಂದ ಅವರ ಕುಟುಂಬಗಳ ಸದಸ್ಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದಾರೆ. ಮತ್ತು ಮಹಿಳೆಯರು ಸ್ವಸಹಾಯ ಗುಂಪುಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಮತ್ತು ಉಳಿತಾಯದ ಜವಾಬ್ದಾರಿಯನ್ನು ಮಹಿಳೆಯರೇ ನಿರ್ವಹಿಸುವುದು ಕಂಡುಬರುತ್ತದೆ. ಆದರೆ ಕೊರಗರ ಆರ್ಥಿಕ ವಿಚಾರಗಳನ್ನು ಗಮನಿಸಿದಾಗ, ಈ ಸಮುದಾಯದ ಜನರ ಉದ್ಯೋಗದ ಸ್ಥಿರತೆ ಮಟ್ಟ ಕನಿಷ್ಟವಾಗಿದ್ದು. ಉಳಿತಾಯದ ಪ್ರಮಾಣ ಕೂಡ ಕಡಿಮೆಯಾಗಿದೆ. ಕೊರಗರ ಕುಟುಂಬಗಳಲ್ಲಿ ಕೆಲ ಪುರುಷರು ಉದ್ದೇಶಪೂರ್ವಕವಾಗಿ ಕೆಲಸ ಮಾಡದೆ ಕುಡಿತದಲ್ಲೇ ಕಾಲ ಕಳೆಯುವ ಸ್ಥಿತಿ ಕಂಡು ಬಂದಿದೆ. ಇಂದಿನ ಶಿಕ್ಷಣ ಕ್ಷೇತ್ರದಲ್ಲಿ ಮಲೆಕುಡಿಯರನ್ನು ಮತ್ತು ಕೊರಗರನ್ನು ತುಲನೆ ಮಾಡಿದಾಗ ಮಲೆಕುಡಿಯರ ಪೋಷಕರು ಶಿಕ್ಷಣದ ಬಗ್ಗೆ ಹೆಚ್ಚು ಜಾಗೃತಿ ಹೊಂದಿದ್ದಾರೆ ಮತ್ತು ಕೊರಗರಿಗಿಂತ ಮಲೆಕುಡಿಯಲ್ಲಿ ಶಾಲೆಗೆ ಹೋಗುವ ಪ್ರಮಾಣ ಹೆಚ್ಚು ಇದೆ ಎಂದು ಹೇಳಬಹುದು. ಆದರೆ ಉನ್ನತ ಶಿಕ್ಷಣ ಮತ್ತು ಪ್ರೌಢಶಿಕ್ಷಣ ಪಡೆದವರ ಸಂಖ್ಯೆ ಕೊರಗರಿಗಿಂತ ಮಲೆಕುಡಿಯರಲ್ಲಿ ಸಂಖ್ಯೆ ಕಡಿಮೆ ಇದೆ ಎಂದು ಹೇಳಬಹುದು.





ಚಿತ್ರ ಸಂ. ಶಿಥಿಲ ಸ್ಥಿತಿಯಲ್ಲಿರುವ ಮಲೆಕುಡಿಯರ ಗುಡಿಸಲು

- ಶೈಕ್ಷಣಿಕವಾಗಿ ಹಿಂದುಳಿದಿರುವ ಕೊರಗ ಮತ್ತು ಮಲೆಕುಡಿಯರ ಶೈಕ್ಷಣಿಕ ಪ್ರಗತಿಗಾಗಿ ನಿರ್ದಿಷ್ಟ ಭಾಗಗಳಲ್ಲಿ ವಸತಿ ಶಾಲೆಗಳನ್ನು ತೆರೆದು, ಉಚಿತವಾಗಿ ಎಲ್ಲಾ ರೀತಿಯ ಮತ್ತು ಗುಣಮಟ್ಟದ ಶಿಕ್ಷಣಕ್ಕಾಗಿ ಅವಕಾಶಗಳನ್ನು ಕಲ್ಪಿಸುವುದು ತುರ್ತಾಗಿ ನಡೆಯಬೇಕಾಗಿದೆ. ಸದ್ಯ ಈಗಗಿರುವ ಇಲ್ಲಿಯ ವ್ಯವಸ್ಥೆಯನ್ನು ಬಲಪಡಿಸಬೇಕು. ಮರಾಠಿ ನಾಯ್ಕ ಸಮುದಾಯದ ವಿದ್ಯಾರ್ಥಿಗಳು ಇತರೆ ಎಲ್ಲ ಸಮುದಾಯಗಳ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವ ಶಾಲೆಗಳಿಗೆ ಹೋಗಿ ಶಿಕ್ಷಣ ಪಡೆಯುತ್ತಿರುವುದರಿಂದ ಇತರೆ ಸಮುದಾಯಗಳಂತೆ ಈ ಸಮುದಾಯ ಪ್ರತ್ಯೇಕ ವಸತಿ ಶಾಲೆಗಳಿಗೆ ಬೇಡಿಕೆ ಇಟ್ಟಿಲ್ಲ ಎಂಬುದನ್ನು ಗಮನಿಸಬಹುದು.

- ಕೊರಗ, ಮಲೆಕುಡಿಯ ಮತ್ತು ಮರಾಠಿ ನಾಯ್ಕ ಸಮುದಾಯಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರಗತಿಗೆ ನೀಡುವ ವಿಶೇಷ ಪ್ರೋತ್ಸಾಹ ಧನ ಮತ್ತು ವಿದ್ಯಾರ್ಥಿ ವೇತನ ಹಣವನ್ನು ಹೆಚ್ಚಿಸುವುದು ಮತ್ತು ಹಣ ವಿದ್ಯಾರ್ಥಿಗಳಿಗೆ ತಲುಪುವಲ್ಲಿ ಇರುವ ಅಡಚಣೆಗಳನ್ನು ಪರಿಹರಿಸಿ ಆ ಪ್ರಕ್ರಿಯೆಯನ್ನು ಸರಳಗೊಳಿಸಬೇಕಾಗಿದೆ.

- ಕೊರಗ, ಮಲೆಕುಡಿಯ ಮತ್ತು ಮರಾಠಿ ನಾಯ್ಕ ಸಮುದಾಯದ ಅನೇಕ ವಸತಿ ರಹಿತ ಕುಟುಂಬಗಳಿಗೆ ಸರಕಾರದಿಂದ ಶಾಶ್ವತವಾದ ಭೂಮಿ, ವಸತಿಗಳನ್ನು ಕೊಟ್ಟು, ವಿದ್ಯುತ್, ಶುದ್ಧ ಕುಡಿಯುವ ನೀರು, ಶೌಚಾಲಯ ಹಾಗೂ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಾಗಿದೆ.

- ಕೊರಗ, ಮಲೆಕುಡಿಯ ಸಮುದಾಯದ ಹೆಚ್ಚಿನ ಸಂಖ್ಯೆಯ ಜನರು ಕೂಲಿ ಕಾರ್ಮಿಕರಾಗಿದ್ದು ಜೊತೆಗೆ ಭೂರಹಿತರಾಗಿರುವುದು ಕಂಡುಬಂದಿದೆ. ಇಂತಹ ಕುಟುಂಬಗಳಿಗೆ ಸಾಧ್ಯವಾದಷ್ಟು ಕೃಷಿ ಭೂಮಿಯನ್ನು ಸರಕಾರ ಮಂಜೂರು ಮಾಡಿ ಆರ್ಥಿಕ ಪ್ರಗತಿ ಮತ್ತು ಸ್ವಾವಲಂಬಿ ಜೀವನ ನಡೆಸಲು ಅವಕಾಶಗಳನ್ನು ಒದಗಿಸಬೇಕಾಗಿದೆ.



▪ ಕೊರಗ, ಮಲೆಕುಡಿಯ ಮತ್ತು ಸ್ವಲ್ಪ ಪ್ರಮಾಣದಲ್ಲಿ ಮರಾಠಿನಾಯ್ಕ ಸಮುದಾಯದ ಕೆಲವು ಕುಟುಂಬಗಳು ಸರಕಾರಿ ಭೂಮಿಯಲ್ಲಿ ಹಲವಾರು ವರ್ಷಗಳಿಂದ ವಾಸ ಮಾಡುತ್ತಿದ್ದರೂ ಅವರಿಗೆ ಹಕ್ಕು ಪತ್ರಗಳು ದೊರಕಿರುವುದಿಲ್ಲ. ಇಂತಹ ಪ್ರಕರಣಗಳನ್ನು ಕಂದಾಯ ಇಲಾಖೆಯು ಪತ್ತೆ ಹಚ್ಚಿ ಹಕ್ಕು ಪತ್ರಗಳನ್ನು ಕೂಡಲೇ ಕೊಡಬೇಕಾಗಿದೆ.

▪ ಕೊರಗ, ಮಲೆಕುಡಿಯ ಮತ್ತು ಮರಾಠಿನಾಯ್ಕ ಸಮುದಾಯಗಳ ಅಭಿವೃದ್ಧಿಗಾಗಿ ಸರಕಾರವು ಸ್ಥಾಪಿಸಿರುವ 'ಲ್ಯಾಂಪ್ ಸೊಸೈಟಿಯು' ಕೆಲವು ನ್ಯೂನತೆಗಳನ್ನು ಹೊಂದಿದ್ದು, ಅವುಗಳನ್ನು ಸರಿಪಡಿಸಿ, ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡುವುದು ಮತ್ತು ಇದಕ್ಕಾಗಿ 'ಲ್ಯಾಂಪ್ ಸೊಸೈಟಿ' ಮತ್ತು ಇತರ ಸಹಕಾರಿ ಸಂಘಗಳ ನಡುವೆ ಅಭಿವೃದ್ಧಿಗೆ ಪೂರಕವಾದ ನೀತಿಗಳನ್ನು ಜಾರಿಗೆ ತರುವುದು. ಸರಕಾರ ಪ್ರಾಯೋಜಿತ ಸಹಕಾರ ಸಂಘ, ಲ್ಯಾಂಪ್ ಸೊಸೈಟಿಗಳಲ್ಲಿ ಸಮುದಾಯದ ಜನರು ಎಲ್ಲಾ ರೀತಿಯಲ್ಲಿ ಭಾಗವಹಿಸುವಂತೆ ಮಾಡಿ ಅವರ ಆರ್ಥಿಕ ವ್ಯವಹಾರಗಳನ್ನು ಅವರೇ ಸುಸ್ಥಿರಗೊಳಿಸುವತ್ತ ಪ್ರಯತ್ನವನ್ನು ಮಾಡುವುದು ಅವಶ್ಯವಾಗಿದೆ.

▪ ಕೊರಗ, ಮಲೆಕುಡಿಯ ಮತ್ತು ಮರಾಠಿ ನಾಯ್ಕ ಬುಡಕಟ್ಟು ಸಮುದಾಯಗಳ ಹೆಚ್ಚಿನ ಮಕ್ಕಳಲ್ಲಿ ಮತ್ತು ಮಹಿಳೆಯರಲ್ಲಿ ಅಪೌಷ್ಟಿಕತೆ ಕಂಡು ಬಂದಿದ್ದು, ಇದರ ದುಷ್ಪರಿಣಾಮ ಈ ಸಮುದಾಯಗಳ ಮುಂದಿನ ಪೀಳಿಗೆಯ ಮೇಲೂ ಆಗುವುದರಿಂದ ಸರಕಾರವು ಆರೋಗ್ಯದ ಅಭಿವೃದ್ಧಿಗೆ ಸೂಕ್ತ ವೈದ್ಯಕೀಯ ಸೇವೆಗಳನ್ನು ಕಲ್ಪಿಸುವುದರ ಜೊತೆಗೆ ಪೌಷ್ಟಿಕ ಆಹಾರದ ಪೂರೈಕೆಯನ್ನು ಮಾಡಲು ಕ್ರಮಗಳನ್ನು ಕೈಗೊಳ್ಳಬೇಕು. ಅದರಲ್ಲೂ ಮುಖ್ಯವಾಗಿ ಕೊರಗ ಮತ್ತು ಮಲೆಕುಡಿಯ ಸಮುದಾಯದ ಕುಲಕಸುಬುಗಳು ಮಹತ್ವವನ್ನು ಕಳೆದುಕೊಂಡ ಪರಿಣಾಮ ಕೆಲವು ಜನರು ಪೌರಕಾರ್ಮಿಕ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ದಿನ ನಿತ್ಯ ತ್ಯಾಜ್ಯ ವಸ್ತುಗಳ ನೈರ್ಮಲ್ಯೀಕರಣದ ಕೆಲಸ ಮಾಡುವುದರಿಂದ ಹೆಚ್ಚಿನ ಜನರು ಅನಾರೋಗ್ಯ ಪೀಡಿತರಾಗುತ್ತಿದ್ದಾರೆ. ಸರಕಾರ ಕೊರಗ ಮತ್ತು ಮಲೆಕುಡಿಯರು ವಾಸಮಾಡುವ ಸ್ಥಳಗಳಲ್ಲಿ ವಿಶೇಷ ವೈದ್ಯಕೀಯ ಶಿಬಿರಗಳನ್ನು ನಿಯಮಿತವಾಗಿ ಮಾಡಬೇಕು ಮತ್ತು ಸರಕಾರದ ವತಿಯಿಂದ ಉಚಿತ ಜೀವ ವಿಮೆ, ಅಪಘಾತ ವಿಮೆ, ವೈದ್ಯಕೀಯ ವಿಮೆಗಳನ್ನು ನೀಡುವುದರ ಜೊತೆಗೆ ಆರೋಗ್ಯ ಮತ್ತು ಸಾಮಾಜಿಕ ಭದ್ರತೆಗಳನ್ನು ಒದಗಿಸಬೇಕಾಗಿದೆ.

▪ ಕೊರಗ, ಮಲೆಕುಡಿಯ ಸಮುದಾಯದ ಜನರಿಗೆ ಸರಕಾರಿ ಉದ್ಯೋಗಗಳು ಇನ್ನೂ ಮರೀಚಿಕೆಯಾಗಿ ಉಳಿದಿದೆ. ಆದರೆ ಮರಾಠಿನಾಯ್ಕ ಸಮುದಾಯದ ಜನರು ಸ್ವಲ್ಪ ಪ್ರಮಾಣದಲ್ಲಿ ಸರಕಾರಿ ಹುದ್ದೆಗಳನ್ನು ಪಡೆದುಕೊಂಡಿದ್ದಾರೆ. ಆದುದರಿಂದ ಸರಕಾರ ಈ ಸಮುದಾಯಗಳ

ಜನರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಹುದ್ದೆಗಳನ್ನು ಪ್ರತಿನಿಧಿಸಲು ವಿಶೇಷ ಯೋಜನೆಗಳನ್ನು ಜಾರಿಗೆ ತಂದು, ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡಬೇಕು ಮತ್ತು ಪೌರಕಾರ್ಮಿಕ ವೃತ್ತಿಯಲ್ಲಿ ತೊಡಗಿಕೊಂಡಿರುವ ಕೊರಗ ಮತ್ತು ಮಲೆಕುಡಿಯರ ಸಮುದಾಯದ ಅರೆಕಾಲಿಕ ಕಾರ್ಮಿಕರನ್ನು ಖಾಯಂಗೊಳಿಸಿ ಅವರಿಗೆ ಎಲ್ಲಾ ರೀತಿಯ ಸರಕಾರಿ ಸೌಲಭ್ಯಗಳನ್ನು ಕಲ್ಪಿಸಬೇಕು ಮತ್ತು ಈ ಸಮುದಾಯಗಳ ಶೈಕ್ಷಣಿಕ ಮಟ್ಟ ತೀರ ಕೆಳಸ್ಥರದಲ್ಲಿರುವುದರಿಂದ ಈ ಸಮುದಾಯದ ಕುಟುಂಬಗಳ ಓರ್ವ ಸದಸ್ಯನಿಗೆ ಪ್ರಾಥಮಿಕ ಶಿಕ್ಷಣದ ಹಂತವನ್ನು ಮುಗಿಸಿರುವ "ಡಿ" ವರ್ಗದ ಹುದ್ದೆಯನ್ನು ನೀಡುವುದು. ಈ ರೀತಿ ಸರಕಾರವು ಕೆಲವೊಂದು ಕಾನೂನು ತಿದ್ದುಪಡಿಗಳನ್ನು ಮಾಡುವುದರ ಮೂಲಕ ಸರ್ಕಾರಿ ಹುದ್ದೆಗಳಲ್ಲಿ ಈ ಸಮುದಾಯಗಳ ಪ್ರತಿನಿಧಿಸುವಿಕೆಯನ್ನು ಹೆಚ್ಚಿಸಬೇಕಾಗಿದೆ.

- ಕೊರಗ ಮತ್ತು ಮಲೆಕುಡಿಯ ಸಮುದಾಯದ ಹೆಚ್ಚಿನ ಕುಟುಂಬಗಳು ಬಡತನ ರೇಖೆಗಿಂತ ಕೆಳಗಿದ್ದು ಜೊತೆಗೆ ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ತಮ್ಮ ಮೂಲ ನೆಲೆ, ಮೂಲ ವೃತ್ತಿಗಳನ್ನು ಕಳೆದುಕೊಂಡು ಸಂಕಷ್ಟಕ್ಕೊಳಗಾಗಿದ್ದಾರೆ. ಅಷ್ಟೇ ಅಲ್ಲದೆ ಅಸ್ಪ್ರಶ್ಯತೆಯಿಂದ ಕೂಡಿದ ಸಾಮಾಜಿಕ ವ್ಯವಸ್ಥೆ ಕೆಲವು ಕಡೆ ಇನ್ನೂ ಜೀವಂತವಾಗಿರುವುದರಿಂದ ಸಾಮಾಜಿಕ ಅಸಮಾನತೆ, ಅನ್ಯಾಯಕ್ಕೊಳಗಾಗಿ ನಿರಂತರವಾಗಿ ಶೋಷಣೆಗೊಳಪಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಸರಕಾರ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯಡಿಯಲ್ಲಿ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ರಸ್ತೆ, ಆರೋಗ್ಯ, ಶೌಚಾಲಯಗಳು, ವಿದ್ಯುತ್ ಇತ್ಯಾದಿಗಳನ್ನು ಕಲ್ಪಿಸುವುದರ ಜೊತೆಗೆ ಶಿಕ್ಷಣ, ಉದ್ಯೋಗ ಮೀಸಲಾತಿ, ರಾಜಕೀಯ ಕ್ಷೇತ್ರಗಳಲ್ಲಿ ವಿಶೇಷ ಮೀಸಲಾತಿ, ವಿಶೇಷ ಸಾಮಾಜಿಕ ಭದ್ರತೆಗಳನ್ನು ಕಲ್ಪಿಸುವುದು ಮತ್ತು ಈ ಸಮುದಾಯಗಳ ಮೇಲಿನ ಶೋಷಣೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಶೀಘ್ರ ಮತ್ತು ಪರಿಣಾಮಕಾರಿಯಾದ ಕಾನೂನು ನೀತಿಗಳನ್ನು ರೂಪಿಸಬೇಕಾಗಿದೆ.
- ಕೊರಗ, ಮಲೆಕುಡಿಯ ಮತ್ತು ಮರಾಠಿನಾಯ್ಕ ಸಮುದಾಯದಲ್ಲಿ ಮಹಿಳೆಯರು ಹೆಚ್ಚು ಆರ್ಥಿಕ ಸಂಕಷ್ಟವನ್ನು ಅನುಭವಿಸುತ್ತಿದ್ದಾರೆ. ಮರಾಠಿನಾಯ್ಕ ಸಮುದಾಯದಲ್ಲಿ ಕೂಲಿ ಕೆಲಸ ಮಾಡುವ ಮಹಿಳೆಯರ ಸಂಖ್ಯೆ ಕಡಿಮೆಯಿದ್ದರೆ, ಕೊರಗ ಮತ್ತು ಮಲೆಕುಡಿಯ ಸಮುದಾಯಯಗಳಲ್ಲಿ ಕೂಲಿ ಕೆಲಸ ಮಾಡುವ ಮಹಿಳೆಯರ ಸಂಖ್ಯೆ ಹೆಚ್ಚಿದೆ. ಹೀಗಾಗಿ ಈ ಮಹಿಳೆಯರ ಕೂಲಿಯು ಇತರ ಗಂಡಸರ ಕೂಲಿಗಿಂತ ತುಂಬಾ ಕಡಿಮೆಯಿದ್ದು, ಆ ಹಣದಲ್ಲಿಯೂ ಸ್ವಲ್ಪ ಪಾಲನ್ನು ಗಂಡಸರಿಗೆ ಕೊಡಬೇಕಾದ ಅನಿವಾರ್ಯ ಸ್ಥಿತಿಯಿದೆ. ಜೊತೆಗೆ ಈ ಮಹಿಳೆಯರು ಉದ್ಯೋಗ ನಿರ್ವಹಿಸುವ ಸ್ಥಳಗಳಲ್ಲಿ ಈ ಸಮುದಾಯದ ಮಹಿಳೆಯರು ವಿವಿಧ ರೀತಿಯ ದೌರ್ಜನ್ಯ ಮತ್ತು ಶೋಷಣೆಗೆ ಒಳಪಟ್ಟ ಪ್ರಕರಣಗಳು ಸಾಕಷ್ಟು ಸಂಖ್ಯೆಯಲ್ಲಿ

ಕಂಡುಬಂದಿದೆ. ಈ ನಿಟ್ಟಿನಲ್ಲಿ ಸರಕಾರ ಮಹಿಳೆಯರ ಆರ್ಥಿಕ ಸ್ವಾತಂತ್ರ್ಯ, ಆರ್ಥಿಕ ಸ್ವಾವಲಂಬನೆ ಮತ್ತು ಪ್ರಗತಿಗೆ ನೀತಿ ರೂಪಿಸಿ, ವಿಶೇಷ ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಈಗಾಗಲೇ ವಿವಿಧ ಸ್ವ ಉದ್ಯೋಗ ತರಬೇತಿಗಳನ್ನು ನೀಡುತ್ತಿದ್ದರೂ, ಅದರಲ್ಲಿ ಕೆಲ ಲೋಪದೋಷಗಳಿಂದ ಆ ಯೋಜನೆಗಳು ಪರಿಣಾಮಕಾರಿಯಾಗುತ್ತಿಲ್ಲ ಮತ್ತು ಅವು ಯಾವುದೇ ಬದಲಾವಣೆ ತರುವಲ್ಲಿ ಯಶಸ್ವಿಯಾಗಿಲ್ಲ ಎಂದು ಹೇಳಬಹುದು. ಮುಖ್ಯವಾಗಿ ಮಹಿಳೆಯರಲ್ಲಿ ಉತ್ಪಾದನೆ, ಮಾರುಕಟ್ಟೆ ನಿರ್ವಹಣೆ, ಲೆಕ್ಕಪತ್ರ, ಉಳಿತಾಯ ಇತ್ಯಾದಿ ವಿಷಯಗಳಲ್ಲಿ ಕೌಶಲ್ಯ ಅಭಿವೃದ್ಧಿ ಪಡಿಸುವುದು, ಸಮುದಾಯದ ಮಹಿಳೆಯರ ಸಾಮರ್ಥ್ಯಕ್ಕನುಗುಣವಾಗಿ ಸ್ವ ಉದ್ಯೋಗ ತರಬೇತಿಗಳನ್ನು ನೀಡುವುದು, ಬ್ಯಾಂಕ್ ಮತ್ತು ಸಹಕಾರಿ ಸಂಘಗಳ ಮೂಲಕ ಮಹಿಳೆಯರಿಗೆ ಪ್ರತ್ಯೇಕ ಕಿರು ಆರ್ಥಿಕತೆಯನ್ನು ಅಭಿವೃದ್ಧಿ ಪಡಿಸಿ ಅವರ ಆರ್ಥಿಕತೆಯ ಅಗತ್ಯತೆ, ಕುಂದು ಕೊರತೆಗಳನ್ನು ನೀಗಿಸುವಂತೆ ಮಾಡಬೇಕಾಗಿದೆ.

- ಕೊರಗ ಮತ್ತು ಮಲೆಕುಡಿಯ ಸಮುದಾಯಗಳು ತಮ್ಮ ಸಾಂಪ್ರದಾಯಿಕ ಕುಲಕಸುಬುಗಳಿಗೆ ನಿಧಾನವಾಗಿ ತೆರೆ ಎಳೆಯುತ್ತಿದ್ದು, ಸಮುದಾಯದ ಬಹುತೇಕ ಯುವ ಜನರು ಹೊಸ ಉದ್ಯೋಗಗಳತ್ತ ಮುಖ ಮಾಡುತ್ತಿದ್ದಾರೆ. ಈ ಸಮುದಾಯಗಳ ಯುವಕರು ಅನ್ಯ ಉದ್ಯೋಗಗಳನ್ನು ಆರಸಿ ನಗರ ಪ್ರದೇಶಗಳತ್ತ ವಲಸೆ ಹೋಗುವುದು ಸಾಮಾನ್ಯವಾಗಿದೆ. ಮುಖ್ಯವಾಗಿ ಈ ಸಮುದಾಯದ ಜನರು ಪೌರ ಕಾರ್ಮಿಕ ವೃತ್ತಿಗೆ, ಕಟ್ಟಡ ನಿರ್ಮಾಣ, ಗಾರೆ ಕೆಲಸಗಳಿಗೆ, ಕುಶಲಕರ್ಮಿಗಳಾಗಿ, ಸಣ್ಣ ಪುಟ್ಟ ವ್ಯಾಪಾರಸ್ಥರಾಗಿ, ಸಣ್ಣ ಕೈಗಾರಿಕೆಗಳಲ್ಲಿ ನೌಕರರಾಗಿ ಕೆಲಸ ಮಾಡುತ್ತಿದ್ದು, ನಗರ ಪ್ರದೇಶಗಳತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ವಿಶೇಷ ಯೋಜನೆಗಳನ್ನು ರೂಪಿಸುವುದು ಅವಶ್ಯಕವಾಗಿದೆ.
- ಈಗಾಗಲೇ ತಿಳಿಸಿದಂತೆ ಕೊರಗ, ಮಲೆಕುಡಿಯ ಮತ್ತು ಮರಾಠಿನಾಯ್ಕ ಸಮುದಾಯದ ಯುವಕರು ವಿವಿಧ ಕಾರಣಗಳಿಂದ ನಗರ ಪ್ರದೇಶಗಳತ್ತ ಹೆಚ್ಚೆಚ್ಚು ವಲಸೆ ಹೋಗುತ್ತಿದ್ದು, ಇದರ ಪರಿಣಾಮವಾಗಿ ಈ ಬುಡಕಟ್ಟು ಸಮುದಾಯಗಳ ವಿಶಿಷ್ಟ ಪಾರಂಪರಿಕ ಜ್ಞಾನಗಳು, ಸಂಸ್ಕೃತಿ, ಆಚಾರ ವಿಚಾರಗಳು, ಜಾನಪದ ಕಲೆ, ಸಾಹಿತ್ಯ ಮತ್ತು ಮುಖ್ಯವಾಗಿ ಭಾಷೆಗಳು ನಿಧಾನವಾಗಿ ಅಳಿವಿನಂಚಿನತ್ತ ಸಾಗುತ್ತಿದೆ. ಈ ನಿಟ್ಟಿನಲ್ಲಿ ಸರಕಾರ ಇವುಗಳ ರಕ್ಷಣೆಗೆ ವಿಶೇಷ ಯೋಜನೆಗಳನ್ನು ರೂಪಿಸಿ, ಈ ಸಂಸ್ಕೃತಿಗಳ ನಿರಂತರತೆಗೆ ಪ್ರೋತ್ಸಾಹ ಕೊಡುವುದು ಅವಶ್ಯಕವಾಗಿದೆ.
- ಕೊರಗ, ಮಲೆಕುಡಿಯ ಮತ್ತು ಮರಾಠಿನಾಯ್ಕ ಸಮುದಾಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಸ್ತುತ ಕಾಡುವ ಪ್ರಮುಖ ಸಮಸ್ಯೆ ಕೃಷಿಗೆ ಸಂಬಂಧ ಪಟ್ಟದ್ದು, ಅದು ಕೃಷಿ ಭೂಮಿ, ಕೃಷಿ ಕಾರ್ಮಿಕ, ಮತ್ತು ಅರಣ್ಯ, ಕೃಷಿ ಕಿರು ಉತ್ಪನ್ನಗಳಿಗೆ ಸಂಬಂಧ ಪಟ್ಟ ಹಾಗೆ

ಅನೇಕ ಸಮಸ್ಯೆಗಳನ್ನು ಈ ಸಮುದಾಯದ ಜನರು ಎದುರಿಸುತ್ತಿದ್ದಾರೆ. ಮುಖ್ಯವಾಗಿ ಈ ಸಮುದಾಯದ ಜನರಿಗೆ ಕೃಷಿ ಭೂಮಿಯ ಸಮಸ್ಯೆಯಿದ್ದರೂ ಸರಕಾರ ನೀಡಿದ ಕೃಷಿ ಭೂಮಿಯಲ್ಲೂ ಜನರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕೆಲವು ಕುಟುಂಬಗಳಿಗೆ ಕೃಷಿ ಭೂಮಿಯಿದ್ದರೂ ಸಹ ಕೃಷಿ ಮಾಡಲು ಕೃಷಿ ಜ್ಞಾನದ ಕೊರತೆ, ಬಂಡವಾಳದ ಕೊರತೆ, ಕೃಷಿ ಸಲಕರಣೆಗಳ ಅಲಭ್ಯತೆ, ಕೃಷಿಕಾರ್ಮಿಕರ ಸಮಸ್ಯೆಗಳಿಂದ ಎಷ್ಟೋ ಜನರು ತಮ್ಮ ಹೊಲದಲ್ಲಿ ದುಡಿಯುವುದನ್ನು ಬಿಟ್ಟು, ಇತರೆ ಸ್ಥಳಗಳಲ್ಲಿ ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇನ್ನು ಕೆಲವು ಕುಟುಂಬಗಳು ಅರಣ್ಯದಂಚಿನಲ್ಲಿರುವ ಗ್ರಾಮಗಳಲ್ಲಿ ವಾಸವಾಗಿರುವುದರಿಂದ, ವನ್ಯಮೃಗಗಳ ಕಾಟದಿಂದ ತಮ್ಮ ಬೆಳೆಗಳನ್ನು ಕಳೆದುಕೊಳ್ಳುತ್ತಾ ಆರ್ಥಿಕ ಸಂಕಷ್ಟ ಅನುಭವಿಸುತ್ತಿದ್ದಾರೆ. ಈ ಸಮುದಾಯಗಳ ಜನರು ಬೆಳೆಸಿದ ಕೃಷಿ ಉತ್ಪನ್ನಗಳು ಅಥವಾ ಕಿರು ಅರಣ್ಯೋತ್ಪನ್ನಗಳನ್ನು ಸ್ಥಳೀಯ ವ್ಯಾಪಾರಿಗಳು ಮತ್ತು ಮಧ್ಯವರ್ತಿಗಳು ಕಡಿಮೆ ಬೆಲೆಗೆ ಕೊಂಡು ಅದೇ ವಸ್ತುಗಳನ್ನು ಹೆಚ್ಚಿನ ಬೆಲೆಗೆ ಹೊರ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾರೆ. ಈ ನಿಟ್ಟಿನಲ್ಲಿ ಸರಕಾರವು ಈ ಸಮುದಾಯಗಳ ಜನರ ಕೃಷಿ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವ ಸಲುವಾಗಿ ಬ್ಯಾಂಕ್‌ಗಳ ಮೂಲಕ ಅತೀ ಕಡಿಮೆ ಬಡ್ಡಿ ದರದಲ್ಲಿ, ತ್ವರಿತವಾಗಿ ಸಾಲ ನೀಡುವ ಸೌಲಭ್ಯ ಕಲ್ಪಿಸಬೇಕು. ಭೂರಹಿತ ಕುಟುಂಬಗಳಿಗೆ ಫಲವತ್ತಾದ ಭೂಮಿಯನ್ನೇ ಮಂಜೂರು ಮಾಡಬೇಕು. ಜೊತೆಗೆ ನೀರಿನ ಸೌಲಭ್ಯಗಳನ್ನು ಕಲ್ಪಿಸಬೇಕು. ಸಬ್ಸಿಡಿಯೊಂದಿಗೆ ಅತ್ಯಾಧುನಿಕ ಕೃಷಿ ಉಪಕರಣಗಳನ್ನು ನೀಡುವುದರ ಜೊತೆಗೆ ಅವುಗಳನ್ನು ಬಳಸುವ ಬಗ್ಗೆ ಸೂಕ್ತ ತರಬೇತಿ ನೀಡುವ ವ್ಯವಸ್ಥೆ ಕಲ್ಪಿಸಬೇಕು. ಈ ಜನರು ಬೆಳೆದ ಕೃಷಿ ಹಾಗೂ ಅರಣ್ಯ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿ ಈ ಸಮುದಾಯಗಳ ಕೃಷಿಕರಿಗೆ ದಲ್ಲಾಳಿಗಳಿಂದ ಅಥವಾ ವ್ಯಾಪಾರಿಗಳಿಂದ ಆಗುವ ಶೋಷಣೆಗಳನ್ನು ತಡೆಗಟ್ಟಬೇಕು.

- ಕೊರಗ, ಮಲೆಕುಡಿಯ ಮತ್ತು ಮರಾಠಿ ನಾಯ್ಕ ಸಮುದಾಯದ ಹೆಚ್ಚಿನ ಗಂಡಸರು ಮದ್ಯವ್ಯಸನಿಗಳಾಗಿದ್ದು ಅದರಲ್ಲಿ ಕೊರಗ ಮತ್ತು ಮಲೆಕುಡಿಯ ಸಮುದಾಯಗಳಲ್ಲಿಯ ಮಹಿಳೆಯರೂ ಹೆಚ್ಚಿನ ಪ್ರಮಾಣದಲ್ಲಿ ಮದ್ಯವ್ಯಸನಿಗಳಾಗಿದ್ದು, ಅವರು ಸಂಪಾದಿಸಿದ ಹಣದಲ್ಲಿ ಶೇಕಡಾ ೩೦ರಷ್ಟು ಹಣವನ್ನು ಮದ್ಯ ಖರೀದಿಸಲು ಖರ್ಚು ಮಾಡುತ್ತಿದ್ದಾರೆ. ಇದರಿಂದ ಈ ಕುಟುಂಬಗಳ ಆರ್ಥಿಕ ಸ್ಥಿತಿ ಇನ್ನಷ್ಟು ಶೋಚನೀಯಗೊಳ್ಳುವುದರ ಜೊತೆಗೆ ಅನೇಕ ಆರೋಗ್ಯ ಸಮಸ್ಯೆಗಳಿಂದಲೂ ನೆರಳುವಂತಾಗಿದೆ. ಈ ನಿಟ್ಟಿನಲ್ಲಿ ಸರಕಾರ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಮದ್ಯಪಾನದ ದುಷ್ಪರಿಣಾಮಗಳನ್ನು ಕುರಿತು ಜನಜಾಗೃತಿ ಶಿಬಿರ, ಬೀದಿ ನಾಟಕ,

ಮದ್ಯ ವಿರೋಧಿ ಕಾರ್ಯಕ್ರಮದಂತಹ ಜಾಥಗಳ ಜೊತೆಗೆ ನಿಯಮಿತವಾಗಿ ಮದ್ಯವರ್ಜನಾ ಶಿಬಿರಗಳನ್ನು ಆಯೋಜಿಸುವತ್ತ ಗಮನ ಹರಿಸಬೇಕಿದೆ.

- ಕೊರಗ, ಮಲೆಕುಡಿಯ ಮತ್ತು ಮರಾಠಿ ನಾಯ್ಕ ಸಮುದಾಯಗಳು ವಾಸಮಾಡುವ ಭೌಗೋಳಿಕ ಪ್ರದೇಶಗಳ ಅಗತ್ಯತೆಗಳನ್ನು ಅಧ್ಯಯನ ಮಾಡಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನಗಳನ್ನು ಮಾಡಬೇಕಾಗಿದೆ. ನಂತರ ಇತರ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುವುದು ಉತ್ತಮ.

- ಕೊರಗ ಮತ್ತು ಮಲೆಕುಡಿಯ ಸಮುದಾಯಗಳಲ್ಲಿ ಕೆಲವೊಂದು ಸಾಂಕ್ರಾಮಿಕ ರೋಗಗಳು (ಉದಾ: ಕುಷ್ಠರೋಗ, ಕ್ಷಯರೋಗ) ಮತ್ತು ಮಳೆಗಾಲದಲ್ಲಿ ಮಲೇರಿಯಾ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬಂದಿದ್ದು, ಈ ನಿಟ್ಟಿನಲ್ಲಿ ಸರಕಾರವು ಈ ಸಾಂಕ್ರಾಮಿಕ ರೋಗಗಳ ಬಗ್ಗೆ ಆರೋಗ್ಯ ಶಿಕ್ಷಣ, ಸೂಕ್ತ ಚಿಕಿತ್ಸೆ ಮತ್ತು ತಡೆಗಟ್ಟುವಿಕೆಗೆ ಸಂಬಂಧಪಟ್ಟ ಸೇವೆಗಳನ್ನು ನೀಡಬೇಕಾಗಿದೆ.

- ಕೊರಗ ಮತ್ತು ಮಲೆಕುಡಿಯ ಸಮುದಾಯಗಳಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ನಂತರದ ಶಿಕ್ಷಣ ಮಟ್ಟ ತೀರ ಕೆಳಮಟ್ಟದಲ್ಲಿದೆ. ಈ ನಿಟ್ಟಿನಲ್ಲಿ ಸರಕಾರ ಈ ಸಮುದಾಯಗಳ ಮಕ್ಕಳಿಗೆ ಪ್ರೌಢ, ಪದವಿ ಪೂರ್ವ ಮತ್ತು ಪದವಿ ಶಿಕ್ಷಣಗಳನ್ನು ಪೂರೈಸಲು ವಿಶೇಷ ಯೋಜನೆಗಳನ್ನು ಹಮ್ಮಿಕೊಳ್ಳುವ ಅವಶ್ಯಕತೆಯಿದೆ (ಉದಾ: ವಿಶೇಷ ವೀಸಲಾತಿ, ಕಡ್ಡಾಯ ಅಂಕಗಳಲ್ಲಿ ಸಡಿಲಿಕೆ, ಉಚಿತ ಶಿಕ್ಷಣ, ಉಚಿತ ಕೋಚಿಂಗ್ ತರಗತಿಗಳು, ಉಚಿತ ಗ್ರಂಥಗಳು ಮತ್ತು ಪಠ್ಯ ಪುಸ್ತಕಗಳ ವಿತರಣೆ ಇತ್ಯಾದಿ)

- ಕೊರಗ ಮತ್ತು ಮಲೆಕುಡಿಯ ಸಮುದಾಯಗಳು ಅನೇಕ ಕಾರಣಗಳಿಂದಾಗಿ ಇಂದು ದಯನೀಯ ಬದುಕುನ್ನು ಸಾಗಿಸುತ್ತಿದ್ದಾರೆ ಮತ್ತು ಪ್ರಸ್ತುತ ಈ ಸ್ಥಿತಿಯಲ್ಲಿ ಅವರ ಸೇವಾ ಸೌಲಭ್ಯ ಪಡೆಯುವಿಕೆಯಲ್ಲಿನ ಲೋಪದೋಷಗಳಿಂದ ಅವರ ಆರ್ಥಿಕ, ಸಾಮಾಜಿಕ, ಆರೋಗ್ಯ, ಶೈಕ್ಷಣಿಕ, ಪೌಷ್ಠಿಕ ಆಹಾರದ ಕೊರತೆ ಹೀಗೆ ಒಟ್ಟಾರೆಯಾಗಿ ಅವರ ಜೀವನ ಗುಣಮಟ್ಟ ತೀರಾ ಕೆಳಹಂತದಲ್ಲಿದ್ದು, ಈ ನಿಟ್ಟಿನಲ್ಲಿ ಸರಕಾರ ಪರಿಣಾಮಕಾರಿಯಾದ ಆಡಳಿತ ನೀತಿಗಳ ಮೂಲಕ ಅವರಿಗೆ ಸಂಪನ್ಮೂಲಗಳನ್ನು ಪೋಲಾಗದ ರೀತಿಯಲ್ಲಿ ಒದಗಿಸಬೇಕು. ಜೊತೆಗೆ ಈ ಸಂಪನ್ಮೂಲಗಳು ಮತ್ತು ಸೇವೆಗಳು ನೇರವಾಗಿ ಅಗತ್ಯವಿರುವ ವ್ಯಕ್ತಿ/ಕುಟುಂಬವನ್ನು ತಲುಪುವ ವ್ಯವಸ್ಥೆ ಮಾಡಬೇಕು. ಈ ನಿಟ್ಟಿನಲ್ಲಿ ಸರಕಾರ ಯೋಜನೆ/ಕಾರ್ಯಕ್ರಮಗಳನ್ನು ರೂಪಿಸುವಾಗ ಮತ್ತು ಜಾರಿಗೊಳಿಸುವ ಸಂದರ್ಭಗಳಲ್ಲಿ, ಈ ಕ್ಷೇತ್ರಗಳಲ್ಲಿ ದುಡಿದು ಅನುಭವ ಇರುವ ಯೋಗ್ಯ ವ್ಯಕ್ತಿಗಳನ್ನು ಉಸ್ತುವಾರಿಗಾಗಿ ನೇಮಿಸಿಕೊಳ್ಳಬೇಕು. ಮತ್ತು ಇಂತಹ ಯೋಜನೆಗಳನ್ನು

ವಿನ್ಯಾಸಗೊಳಿಸುವ ಮತ್ತು ಅನುಷ್ಠಾನದ ಹಂತಗಳಲ್ಲಿ ಈ ಸಮುದಾಯದ ಜನರನ್ನು ಪರಿಗಣನೆಗೆ ತೆಗೆದುಕೊಂಡು ಯೋಜನೆಯ ಎಲ್ಲಾ ಹಂತಗಳಲ್ಲೂ ಅವರನ್ನು ಭಾಗಿಗಳನ್ನಾಗಿಸಿಕೊಳ್ಳಬೇಕಿದೆ.

- ಕೊರಗ ಮತ್ತು ಮಲೆಕುಡಿಯ ಸಮುದಾಯದ ಹೆಚ್ಚಿನ ಕುಟುಂಬಗಳು ಗ್ರಾಮೀಣ ಪ್ರದೇಶಗಳ ಸರಕಾರಿ ಜಾಗಗಳಲ್ಲಿ ವಾಸಿಸುತ್ತಿದ್ದರೂ ಬೆಳ್ತಂಗಡಿ, ಪುತ್ತೂರು, ಸುಳ್ಯ ಮತ್ತು ಕಾರ್ಕಳ ತಾಲೂಕಿನ ಕೆಲವು ಗ್ರಾಮಗಳು ಅರಣ್ಯ ಪ್ರದೇಶಗಳ ಅಂಚಿನಲ್ಲಿದ್ದು, ಈ ಪ್ರದೇಶಗಳಲ್ಲಿ ಕೊರಗ ಮತ್ತು ಮಲೆಕುಡಿಯ ಸಮುದಾಯದ ಕೆಲವು ಕುಟುಂಬಗಳು ಯಾವುದೇ ಸ್ವಂತ ಭೂಮಿ ಇಲ್ಲದೆ ಕಷ್ಟದಿಂದ ಜೀವನ ಸಾಗಿಸುತ್ತಿವೆ. ಈ ನಿಟ್ಟಿನಲ್ಲಿ ಸರಕಾರ ಇಂತಹ ಕುಟುಂಬಗಳನ್ನು ಗುರುತಿಸಿ ಈ ಕುಟುಂಬಗಳ ಜೀವನೋಪಾಯಕ್ಕಾಗಿ ಅರಣ್ಯದ ಸಮೀಪ ಇರುವ ಅರಣ್ಯೇತರ ಭೂಮಿಯನ್ನು ಸಾಗುವಳಿ ಮಾಡಲು ಅವಕಾಶ ಕೊಡುವುದರ ಜೊತೆಗೆ ಅರಣ್ಯ ಸಂರಕ್ಷಣೆ ಮತ್ತು ಅರಣ್ಯ ವಿಸ್ತರಣೆಯಲ್ಲಿ ಈ ಸಮುದಾಯದ ಜನರನ್ನು ಬಳಸಿಕೊಳ್ಳಬೇಕು. ಉದಾಹರಣೆಗೆ ಅರಣ್ಯ ಇಲಾಖೆಯು ಈ ಸಮುದಾಯದ ಜನರಿಗೆ ಹಣ್ಣುಗಳನ್ನು ನೀಡುವ ಮರಗಳು, ಇತರ ವಾಣಿಜ್ಯೋದ್ಯಮ ಪೂರಕ ಮರಗಳನ್ನು ಬೆಳೆಸುವ ಬಗ್ಗೆ, ಕಾಳ್ಗಿಚ್ಚು, ಅರಣ್ಯ ನಾಶ. ತಡೆಗಟ್ಟುವಿಕೆ, ವನ್ಯಜೀವಿಗಳ ಸಂರಕ್ಷಣೆ, ಅರಣ್ಯ ಸಂರಕ್ಷಣೆ ಮುಂತಾದ ವಿಷಯಗಳ ಬಗ್ಗೆ ಸೂಕ್ತ ತರಬೇತಿ ನೀಡಿದಾಗ ಪರಿಸರ ಸಂರಕ್ಷಣೆಯ ಜೊತೆಗೆ ಅರಣ್ಯ ಇಲಾಖೆಗೆ ಉಪಯೋಗವಾಗುತ್ತದೆ ಮತ್ತು ಈ ಬುಡಕಟ್ಟು ಸಮುದಾಯದ ಕುಟುಂಬಗಳ ಜೀವನ ಮಟ್ಟವು ನಿಧಾನವಾಗಿ ಸುಧಾರಣೆಗೊಳ್ಳುತ್ತದೆ.

- ಕೊರಗ ಮತ್ತು ಮಲೆಕುಡಿಯ ಸಮುದಾಯದ ಸ್ತ್ರೀಯರು ಮತ್ತು ಸಣ್ಣ ಮಕ್ಕಳಲ್ಲಿ ತೀವ್ರ ಪ್ರಮಾಣದಲ್ಲಿ ಪೌಷ್ಠಿಕಾಂಶದ ಕೊರತೆ ಕಂಡು ಬಂದಿದ್ದು ಇದರ ಪರಿಣಾಮವಾಗಿ ಈ ಸಮುದಾಯದ ಜನರಲ್ಲಿ ಸರಾಸರಿ ಜೀವಿತಾವಧಿ ಪ್ರಮಾಣ ಗಣನೀಯವಾಗಿ ಕುಸಿದಿದೆ ಎಂಬುದನ್ನು ಸ್ಥಳೀಯ ಆರೋಗ್ಯ ಇಲಾಖೆಯ ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜೊತೆಗೆ ಈ ಸಮುದಾಯಗಳಲ್ಲಿ ಗರ್ಭಿಣಿ ಮತ್ತು ಶಿಶು ಮರಣ ಪ್ರಮಾಣ ಕೂಡ ಅಧಿಕವಾಗಿದ್ದು, ಪ್ರತಿ ವರ್ಷ ಜನನ ಪ್ರಮಾಣ ಮತ್ತು ಜನಸಂಖ್ಯೆ ಪ್ರಮಾಣದಲ್ಲಿಯೂ ನಿಧಾನವಾದ ಇಳಿಮುಖ ಕಂಡುಬಂದಿದ್ದು ಕಳವಳಕಾರಿಯಾದ ಅಂಶವಾಗಿದೆ. ಈ ನಿಟ್ಟಿನಲ್ಲಿ ಸರಕಾರ ಪೌಷ್ಠಿಕಾಂಶ ಹೆಚ್ಚಳಕ್ಕೆ ವಿಶೇಷ ಮತ್ತು ತುರ್ತು ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಸರಕಾರವು ಅರ್ಹ ವ್ಯಕ್ತಿಗಳಿಗೆ ನಿರಂತರವಾಗಿ ಪೌಷ್ಠಿಕಾಂಶ ಆಹಾರದ ಪೂರೈಕೆ, ನಿಯಮಿತವಾದ ಆರೋಗ್ಯ ತಪಾಸಣೆ ಮತ್ತು ಪೌಷ್ಠಿಕಾಂಶ ಮತ್ತು

ಆರೋಗ್ಯದ ಕುರಿತು ಅರಿವು ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಇನ್ನೂ ವಿಸ್ತರಿಸುವ ಅವಶ್ಯಕತೆ ಇದೆ.

೫.೩. ಕೊರಗರ ಸಮಸ್ಯೆಗಳು:

ಕೊರಗರ ಕುರಿತ ವಿಶ್ಲೇಷಣಾತ್ಮಕ ಅಧ್ಯಯನದಲ್ಲಿ ಸಂದರ್ಭಕ್ಕನುಸಾರವಾಗಿ ಅಲ್ಲಲ್ಲಿ ಅವರ ಸಮಸ್ಯೆಗಳನ್ನು ಕುರಿತು ಮತ್ತು ಸಮಸ್ಯೆಗಳ ಜಾಲದಲ್ಲಿ ಸಿಗುವ ಬಗೆಯ ಕುರಿತು ಸೂಕ್ಷ್ಮವಾಗಿ ಗಮನಿಸಿ. ಅಂತಹ ಸಮಸ್ಯೆಗಳನ್ನೆಲ್ಲ ಕ್ರೋಢೀಕರಿಸಿ ಇಲ್ಲಿ ವಿವರಿಸಲಾಗಿದೆ.

೫.೩.೧. ಅಜಲಿನಲ್ಲಿ ಅಸ್ಪೃಶ್ಯತೆ ಮತ್ತು ಅಪಾಯಗಳು:

"ಕೊರಗರ ಅಜಲು ಚಾಕ್ರಿ ಎಂಬುವುದೇ ಒಂದು ಅಸ್ಪೃಶ್ಯತೆಯ ಕ್ರಿಯೆ. ಅಜಲಿನ ಯಾವ ಕೆಲಸಗಳೂ ಅಸ್ಪೃಶ್ಯತೆಯಿಂದ ಮುಕ್ತವಾಗಿಲ್ಲ. ಯಾವುದೇ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಗಳಲ್ಲಿ ಇವರಿಗೆ ಪ್ರವೇಶವಿರುವುದಿಲ್ಲ. ದಾನ ಸ್ವೀಕರಿಸುವಾಗಲೂ ಕೊರಗ ಮಹಿಳೆ ದೂರ ನಿಂತು ಅನ್ನ ತುಂಬಿದ ಗೆರಸೆಯನ್ನು ಎತ್ತಿ ನೀವಾಳಿಸಬೇಕು. ಜಾತ್ರೆ, ಉತ್ಸವ, ಆಚರಣೆಗಳಲ್ಲಿ ಕೊರಗರು ಅರ್ಧ ಕಿಲೋ ಮೀಟರ್‌ನಷ್ಟು ದೂರ ನಿಂತು ಚಾಕ್ರಿ ಮಾಡಬೇಕು. ಸತ್ತವರ ಹೆಣದ ಹತ್ತಿರವೂ ಇವರು ಸುಳಿಯುವಂತಿಲ್ಲ. ದೇವಸ್ಥಾನಗಳ ಎದುರಿನ ಗದ್ದೆಗಳಿಗೆ ಇಳಿಯುವಂತಿಲ್ಲ. ಊರವರು ದಾರಿಯಲ್ಲಿ ಹೋಗುತ್ತಿರುವಾಗ ಎದುರಾದರೆ, ಇವರು ದಾರಿಬಿಟ್ಟು ದೂರ ಸರಿದು ನಿಲ್ಲಬೇಕು. ನಡುಬಗ್ಗಿಸಿ, ಕೈ ಜೋಡಿಸಿ ಊರವರನ್ನು ಗೌರವಿಸಬೇಕು. ಈಗ ಅಸ್ಪೃಶ್ಯತೆ ಇಲ್ಲ ಎನ್ನುವ ಮಂದಿಯೂ ಇದನ್ನೆಲ್ಲಾ ಪ್ರತಿದಿನ ಎಂಬಂತೆ ಕಣ್ಣಾರೆ ಕಾಣುತ್ತಿರುವುದು ನಿತ್ಯ ಸತ್ಯ. ಅಜಲು ಚಾಕ್ರಿಯಲ್ಲಿ ಕೆಲವು ಅಪಾಯದ ಕೆಲಸಗಳಿವೆ. ಅವುಗಳಲ್ಲಿ ಕೆಲವುಗಳನ್ನು ಇಲ್ಲಿ ವಿವರಿಸಲಾಗಿದೆ.

೧. ಕದೊನಿ(ಖದನಿ–ಸಿಡಿಮದ್ದು) ಸ್ಫೋಟಿಸುವುದು ಬಹಳ ಅಪಾಯಕರವಾಗದದ್ದು. ಕಬ್ಬಿಣದಿಂದ ನಿರ್ಮಿಸಲ್ಪಟ್ಟಿರುವ ಸಿಲಿಂಡರಿನಾಕಾರದ ಕದೊನಿಗೆ ಸುಮಾರು ೫೦.ಗ್ರಾಂ ನಷ್ಟು ಯಾವುದೋ ರಾಸಾಯನಿಕ ತುಂಬಿಸಿ, ಮೇಲ್ಭಾಗದಲ್ಲಿ ಕೆಂಪುಕಲ್ಲು ಅಥವಾ ಹಂಚಿನ ತುಂಡುಗಳನ್ನು ಜಡಿಯಲಾಗುತ್ತದೆ. ಸುಮಾರು ನಾಲ್ಕರಿಂದ ಎಂಟು ಕಿಲೋ ಗ್ರಾಂ ತೂಕದ ಈ ಕದೊನಿಗೆ ಬೆಂಕಿ ತಗಲಿಸಿದ ಕೂಡಲೇ ಭಾರೀ ಸ್ಫೋಟಕ ಶಬ್ಧ ಇದರಿಂದ ಹೊರಬರುತ್ತದೆ. ಹೀಗೆ ಸ್ಫೋಟಗೊಂಡಾಗ, ಜಡಿಯಲ್ಪಟ್ಟ ಕಲ್ಲಿನ ಚೂರುಗಳು ಅತ್ಯಂತ ವೇಗದಿಂದ ಮೇಲ್ಮುಖವಾಗಿ ಚಿಮ್ಮಲ್ಪಡುತ್ತದೆ. ಕದೊನಿಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹರಿ ಬೀಳುತ್ತದೆ. ಕೆಲವೊಮ್ಮೆ ಬಿರುಕು ಬಿಟ್ಟಿರುವ ಕದೊನಿಗಳು ಸಿಡಿದು ಹೋಗುವುದೂ ಇದೆ. ಇಂತಹ ಸಂದರ್ಭಗಳಲ್ಲಿ ಅದೆಷ್ಟೊ ಕೊರಗರು ಕೈ, ಕಾಲು, ಕಣ್ಣುಗಳನ್ನು ಕಳೆದುಕೊಂಡು ಅಂಗಹೀನರಾಗಿದ್ದಾರೆ. ಒಂದೆರಡು ದಾರುಣ ರೀತಿಯ

ಸಾವುಗಳೂ ಸಂಭವಿಸಿದೆ. ಉಡುಪಿ ತಾಲೂಕು ಎಲ್ಲೂರು ಗ್ರಾಮದ ಬಂಡಸಾಲೆ ಕಾಫಿರ ಕೊರಗರ ಸಾವು ಇದಕ್ಕೊಂದು ಇತ್ತೀಚಿನ ನಿದರ್ಶನವಾಗಿದೆ.

೨. ರಾತ್ರಿ–ವೇಳೆ ಮಾರಿ ಓಡಿಸುವಾಗ ಕೆಲವೊಮ್ಮೆ ಕಾಡಿನ ನಡುವೆ ಕೊರಗರು ದೋಲಿನೊಂದಿಗೆ ಓಡಬೇಕಾಗುವುದು, ಹೆಚ್ಚಾಗಿ ಈ ಮಾರಿಗಳು ಮಳೆಗಾಲದಲ್ಲೇ ನಡೆಯುವುದು. ಆ ಸಂದರ್ಭಗಳಲ್ಲಿ ಕಲ್ಲು ಮುಳ್ಳುಗಳು ತಗಲುವ ಅಪಾಯವಿರುತ್ತದೆ.

೩. ಪಂಚಮದಾನದಲ್ಲಿ ಬೆರೆಸುವ, ಉಗುರು, ತಲೆಗೂದಲು ಇತ್ಯಾದಿಗಳು ಇವರ ಹೊಟ್ಟೆಯಲ್ಲಿ ಸಿಕ್ಕಿಕೊಂಡು ಅಪಾಯಕಾರಿಯಾಗಿ ಪರಿಣಮಿಸಬಹುದು.

೪. ಕಂಬಳದ ಗದ್ದೆಯಲ್ಲಿ ಕೊರಗ ಯುವಕರನ್ನು ಓಡಿಸುವಾಗ, ಗದ್ದೆಯಲ್ಲಿ ಇರಬಹುದಾದ ಕಸಕಡ್ಡಿಗಳು, ಗಾಜಿನ ಚೂರು, ಇಲ್ಲವೆ ಹೊಂಡಗಳು ಯುವಕರ ಬದುಕಿಗೇ ಮಾರಕವಾಗಬಹುದು.

೫.೩.೨. ಅಜಲು ಚಾಕ್ರಿ ಆಚರಣೆಯ ಪರಿಣಾಮಗಳು :

೫.೩.೨.೧.ಸಾಮಾಜಿಕ ಕೀಳರಿಮೆ:

ಶತಮಾನಗಳಿಂದ ಈ ಅಜಲು ಎಂಬ ವ್ಯವಸ್ಥೆಯಲ್ಲಿ ಶೋಷಣೆಗೊಳಪಟ್ಟ ಈ ಸಮುದಾಯ ಪರಂಪರಾನುಗತವಾಗಿ ಸಾಮಾಜಿಕ ಕೀಳರಿಮೆಯನ್ನು ಮೈಗೂಡಿಸಿಕೊಂಡಿದೆ. ಸಮಾಜದಲ್ಲಿ ತಾನು ತಲೆಯೆತ್ತಿ ನಡೆಯಲಾಗದವನು ಎಂಬ ಅವ್ಯಕ್ತ ಭಾವನೆ ಈ ಕೆಲಸ ನಿರ್ವಹಿಸುವ ಕೊರಗನಲ್ಲಿ ಅಂತರ್ಗತವಾಗಿದೆ. ಊರಿನ ಅನಿಷ್ಟಗಳನ್ನು ಹೊರುವುದು, ನೈರ್ಮಲ್ಯದ ಕೆಲಸಗಳನ್ನು ನಿರ್ವಹಿಸುವುದು ಹಾಗೂ ಊರವರಿಗೆ ವಿಧೇಯನಾಗಿರುವುದೇ ತನ್ನ ಧರ್ಮ ಎಂಬ ವಿಚಾರಗಳು ಆತನ ರಕ್ತದ ಕಣಕಣಗಳಲ್ಲೂ ಬೆರೆತು ಹೋದಂತಿದೆ. ಇವರನ್ನು ಸದಾ ತಿರಸ್ಕಾರ ದೃಷ್ಟಿಯಿಂದ ನೋಡುವುದು ಹಾಗೂ ಅತ್ಯಂತ ಕೆಳದರ್ಜೆಯ ಕೆಲಸಗಳನ್ನು ಬಲಾತ್ಕಾರವಾಗಿ ಮಾಡಿಸುವುದರಿಂದ ಇವರು ಮಾನಸಿಕವಾಗಿ ಅಂತರ್‌ಮುಖಿಗಳಾಗಿರುತ್ತಾರೆ. ದೇವರ ಹೆಸರು ಹೇಳಿ ಹೆದರಿಸುವುದು, ಈ ಮೂಲಕ ದೂರದಲ್ಲೇ ಉಳಿಯುವಂತೆ ಮಾಡುವುದು ಹಾಗೂ ಯಾವುದೇ ಬೇಡಿಕೆಗಳನ್ನು ಮುಂದೊಡ್ಡದಂತೆ ತಡೆಯುವುದರಿಂದ ಇವರು ಅನಿವಾರ್ಯವಾಗಿ ಅದಕ್ಕೆ ಒಗ್ಗಿಕೊಂಡಿದ್ದಾರೆ. ಅಜಲಿನಿಂದ ಹೊರ ಪ್ರಪಂಚದ ಬಗ್ಗೆ ಆಲೋಚಿಸುವುದಕ್ಕೂ ಅವಕಾಶ ನೀಡದ ಸಮಾಜ ಇವರನ್ನು ಬದಲಾವಣೆಗಳಿಗೆ ಒಗ್ಗದಂತೆ ತರಬೇತುಗೊಳಿಸಿದೆ. ಆದುದರಿಂದ ಮಂದಮತಿಗಳಂತೆ ವರ್ತಿಸುವ ಕೊರಗರು ಇಂದು ಯಾವ ಸರಕಾರದಿಂದಲೂ ಬದಲಾವಣೆಗೆ ಸಾಧ್ಯವಾಗದ ಸ್ಥಿತಿಗೆ ತಲುಪಿದ್ದಾರೆ.

೫.೩.೨.೨. ಮೂಢನಂಬಿಕೆಗಳು:

ಮೂಢನಂಬಿಕೆಗಳು ಮುಂದುವರಿದ ಇತರೆ ಸಮುದಾಯಗಳಲ್ಲಿಯೂ ಇವೆ. ಆದರೆ ಅಜಲಿನ ಕೆಲಸಗಳಿಂದಾಗಿ ಕೊರಗರು, ಈ ನಂಬಿಕೆಗಳಿಂದ ಬಿಡಿಸಿಕೊಳ್ಳಲಾಗದ ಹಂತವನ್ನು ತಲುಪಿದ್ದಾರೆ. ಇಲ್ಲಿ ವೈಜ್ಞಾನಿಕ ಮನೋಭಾವನೆಗೆ ಎಡೆಯೇ ಇಲ್ಲ. ಹುಟ್ಟಿಗೂ ಬಲ್ಮೆ, ಸಾವಿಗೂ ಬಲ್ಮೆ ಎಂಬಂತೆ ಮಾಟ ಮಂತ್ರಗಳೇ ಇವರ ಸಮಸ್ಯೆಗಳಿಗೆ ಪರಿಹಾರ ಎನ್ನುವಂತಾಗಿದೆ. ಯಾಕೆಂದರೆ ಅಜಲಿನಲ್ಲಿ ಇವರಿಗೆ ಕಾಣಸಿಗುವುದು ಮತ್ತು ಕೇಳಿಬರುವುದು ಇವುಗಳು ಮಾತ್ರ, ಭೂತಗಳ ಭಯ, ದೆವ್ವಗಳ ಕಾಟ ಇವೇ ಅಜಲಿನಲ್ಲಿ ಇವರು ಅನುಭವಿಸುವ ನಿತ್ಯ ಬದುಕಿನ ಮಾರ್ದನಿಗಳು. ಯಾವ ಕಾಯಿಲೆ ಬಂದರೂ ಕೆಲವು ದಿನಗಳವರೆಗೆ ಇವರು ಅದನ್ನು ನಿರ್ಲಕ್ಷಿಸುತ್ತಾರೆ. ಇವರ ಕಾಳಜಿ ಪೂರಾ ಅಜಲು ಚಾಕ್ರಿಯ ಮೇಲೆಯೇ ಇರುತ್ತದೆ. ಕಾಯಿಲೆ ಉಲ್ಬಣಗೊಂಡಾಗ ತಕ್ಷಣ ನೆನಪಿಗೆ ಬರುವುದು ಅಜಿಲಿನ ಅತಿಕಾರ್ನಿಕದ ಭೂತ ಅಥವಾ ಬಲಿಮೆ (ಜ್ಯೋತಿಷ್ಯ) ಹೇಳುವಾತ ಮಾತ್ರ. ಕಾಯಿಲೆಗೆ ನಿಜವಾದ ಕಾರಣ ಏನಿದ್ದರೂ, ಯಾವುದೋ ಭೂತದ ಸೇವೆ ಬಾಕಿಯಿರುವುದು ಅಥವಾ ಯಾರೋ ಮಾಟ ಮಾಡಿರುವುದು. ಆ ಮೂಲಕ ನಿರ್ಧಾರವಾಗುತ್ತದೆ. ಈ ತರದ ಮೂಢನಂಬಿಕೆಗಳಿಗೆ ಬಲಿಯಾಗಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಕೊರಗರು ಸಾಯುತ್ತಿರುವುದನ್ನು ನಾವು ಕಾಣುತ್ತೇವೆ.

೫.೩.೨.೩. ಗುಲಾಮಿತನ:

ದಾಸ್ಯ ಪ್ರವೃತ್ತಿ: ಈ ಚಾಕ್ರಿ ನಿರ್ವಹಿಸುವ ಕೊರಗನೊಬ್ಬನು ತನ್ನ ಸ್ವಾಭಿಮಾನವನ್ನು ಸಂಪೂರ್ಣವಾಗಿ ಕಳೆದುಕೊಂಡು, ಗುಲಾಮನಾಗಿಯೇ ಬದುಕುತ್ತಾನೆ. ಹೇಳಿದಷ್ಟು ಮಾಡುವುದು, ಕೊಟ್ಟಷ್ಟು ಪಡೆಯುವುದು ಆತನ ಅಧಿಕಾರವಾಗಿರುತ್ತದೆ. ಮಾಡಿದ ಕೆಲಸಕ್ಕೆ ತಕ್ಕ ಕೂಲಿ ಪಡೆಯುವುದಕ್ಕೂ ಅವನಿಗೆ ಹಕ್ಕಿಲ್ಲ. ಸ್ವತಂತ್ರ ಭಾರತವು ಅರವತ್ತು ವರ್ಷಗಳನ್ನು ಪೂರೈಸಿದ್ದರೂ ಹದಿನೇಳನೇ ಶತಮಾನದ ಊಳಿಗ ಮಾನ್ಯ ಪದ್ಧತಿಯನ್ನು ಅಜಲಿನ ಕೊರಗರು ಅನುಭವಿಸುತ್ತಿದ್ದಾರೆ. ಧಣಿಗಳ ಹಾಗೂ ದೈವ, ದೇವರುಗಳ ಹೆದರಿಕೆಗಳಿಂದಾಗಿ ಇವರು ಅನಿವಾರ್ಯವಾಗಿ ದಾಸ್ಯ ಪ್ರವೃತ್ತಿಯನ್ನು ಒಪ್ಪಿಕೊಂಡಿದ್ದಾರೆ. ತಮ್ಮ ಮಕ್ಕಳನ್ನೂ ಈ ಕ್ರಿಯೆಗೆ ಸಿದ್ಧಗೊಳಿಸುತ್ತಾರೆ. ಈ ಅಜಲು ಪದ್ಧತಿಯಿಂದ ಇವರು ಬೇಡಿಯೇ ತಿನ್ನಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ. ಹಬ್ಬ ಹರಿದಿನಗಳಲ್ಲಿ ಇವರು ಊರಿನ ತುಂಬ ತಿರುಗಿ ಬೇಡುವುದು ನಿತ್ಯ ಕಂಡುಬರುತ್ತದೆ. ಈ ಪದ್ಧತಿ ಕೊರಗರನ್ನು ದಾಸ್ಯ ಪ್ರವೃತ್ತಿಗೆ ಪ್ರೇರೇಪಿಸುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು.

೫.೩.೨.೪. ಶಿಕ್ಷಣ ಸಮಸ್ಯೆ:

ಈ ಅಜಲು ಪದ್ಧತಿಯಿಂದಾಗಿ ಕೊರಗರು ಶಿಕ್ಷಣದ ಬಗೆಗೆ ಆಲೋಚಿಸುವುದಕ್ಕೂ ಸಾಧ್ಯವಿಲ್ಲದಂತಾಗಿದೆ. ಈ ಬಿಟ್ಟಿ ಚಾಕರಿ ನಿರ್ವಹಿಸುವ ಕುಟುಂಬದ ಮಕ್ಕಳು ಪ್ರತಿ ದಿನ ನೋಡುವುದು, ತನ್ನ ಹೆತ್ತವರು ಬೇಡುವ ಭಂಗಿಯನ್ನು, ನಡೆಯುವ ರೀತಿಯನ್ನು ಹಾಗೂ ಅಮಲಿನ ವರ್ತನೆಯನ್ನು. ಇದರ ಹೊರತು ಆ ಮಗು ಬೇರಾವ ವಿಷಯಗಳನ್ನೂ ಕಾಣಲಾರದು. ಅದು ಹೆತ್ತವರನ್ನೇ ಅನುಸರಿಸಿ ಕರಗತ ಮಾಡಿಕೊಳ್ಳುತ್ತದೆ. ಆದುದರಿಂದ ಯಾವುದೇ ಶಿಕ್ಷಣ ಮಕ್ಕಳ ತಲೆಗೆ ಹಿಡಿಸುತ್ತಿಲ್ಲ. ಇದರ ಪರಿಣಾಮವಾಗಿ ಪ್ರಾಥಮಿಕ ಶಿಕ್ಷಣ ಪಡೆಯುವುದಕ್ಕೂ ಕೊರಗರ ಮಕ್ಕಳು ಪರದಾಡಬೇಕಾಗುತ್ತಿದೆ. ನೂರಕ್ಕೆ ಒಂದೆರಡು ಮಕ್ಕಳು ಹತ್ತನೇ ತರಗತಿ ದಾಟುವುದು ಸಾಧ್ಯವಾಗುತ್ತಿಲ್ಲ. ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ತಿದ್ದಿ ಬುದ್ಧಿ ಹೇಳಬೇಕಾದ ಶಿಕ್ಷಕರೇ ಈ ಮಕ್ಕಳನ್ನು ಸಹಪಾಠಿಗಳೆದುರು ನಿಂದಿಸುವುದು, ಹೆತ್ತವರ ಕುಲಗೋತ್ರಗಳನ್ನು ಕೆದಕುವುದು ಇತ್ಯಾದಿಗಳಿಂದ ಮನನೊಂದು, ಇವರು ಅರ್ಧದಲ್ಲೇ ಶಾಲಾ ಶಿಕ್ಷಣಕ್ಕೆ ಮಂಗಳ ಹಾಡುತ್ತಿರುವುದು ಅಲ್ಲಲ್ಲಿ ಕಂಡುಬರುತ್ತದೆ. ಈ ಸ್ಥಿತಿ ನಗರ ಪ್ರದೇಶಗಳಿಂದ ದೂರ ಇರುವ ಕೊರಗರ ಊರುಗಳಲ್ಲಿ ಹೆಚ್ಚಾಗಿದೆ. ಬೆಳೆಯಬೇಕಾದ ಎಳೆಯ ಮಕ್ಕಳ ಮನಸ್ಸಿನ ಮೇಲೆ ಉಂಟಾಗುವ ಇಂತಹ ಅಘಾತಗಳಿಂದಾಗಿ ಶಾಲಾ ಶಿಕ್ಷಣ ಎಂಬುವುದು ತಮಗಲ್ಲ ಎನ್ನುವಂತಹ ಪರಿಸ್ಥಿತಿ ಅನೇಕ ಕೊರಗರಲ್ಲಿ ನಿರ್ಮಾಣವಾಗಿದೆ. ಸಂಪೂರ್ಣವಾಗಿ ಈ ಅಜಲು ಚಾಕ್ರಿ ನಿಷೇಧವಾಗದಿದ್ದರೆ ಈ ಸಮುದಾಯದಲ್ಲಿ ಶಾಲಾ ಶಿಕ್ಷಣವೆನ್ನುವುದು ಮುಳ್ಳು ಬೇಳಿಯೊಳಗಿನ ನಿಧಿಯಾಗಿಯೇ ಇರುವುದರಲ್ಲಿ ಸಂಶಯವಿಲ್ಲ.

೫.೩.೨.೫. ಅನಾರೋಗ್ಯ ಸಮಾಜ ನಿರ್ಮಾಣ:

ಅಜಲು ಚಾಕ್ರಿ ನಿರ್ವಹಿಸುವ ಪ್ರತಿಯೊಬ್ಬ ಕೊರಗನು ಅನಾರೋಗ್ಯದಿಂದ ಬಳಲುತ್ತಿದ್ದಾನೆ. ಆಹಾರ, ನಿದ್ದೆ, ಮೈಥುನಗಳನ್ನು ಕಡೆಗಣಿಸಿ ಕಡ್ಡಾಯವಾಗಿ ಮಾಡಲೇಬೇಕಾದ ಈ ಚಾಕ್ರಿಯಲ್ಲಿ ಆರೋಗ್ಯದ ಬಗ್ಗೆ ಯಾವುದೇ ಭರವಸೆ ಇರುವುದಿಲ್ಲ. ಬದಲಾಗಿ ಇದು ಕುಡಿತ ಮುಂತಾದ ಕೆಟ್ಟ ಚಟಗಳನ್ನು ಪ್ರೇರೇಪಿಸುತ್ತದೆ. ಪರಿಣಾಮವಾಗಿ ಕ್ಷಯ, ರಕ್ತ ಹೀನತೆಯಂತಹ ಮಾರಕ ರೋಗಗಳು ಈ ಸಮುದಾಯದಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಇವರಿಗೆ ವೈಯಕ್ತಿಕ ನೈರ್ಮಲ್ಯಗಳೂ ಅಗತ್ಯವೆನಿಸುವುದಿಲ್ಲ. ಮಾನಸಿಕವಾಗಿ, ಆರ್ಥಿಕವಾಗಿ ಸಂಕಷ್ಟದಲ್ಲಿರುವುದರಿಂದ ಇವರು ಯಾವುದೇ ಕಾಯಿಲೆ ಬಂದರೂ ಚಿಕಿತ್ಸೆ ಪಡೆಯುವ ಸ್ಥಿತಿಯಲ್ಲಿ ಇರುವುದಿಲ್ಲ. ಇದರಿಂದ ಇವರು ಕಾಯಿಲೆಗಳನ್ನು ನಿರ್ಲಕ್ಷಿಸುತ್ತಾರೆ ಇಲ್ಲವೇ ಮೂಢನಂಬಿಕೆಗಳಿಗೆ ಬಲಿಯಾಗುತ್ತಿದ್ದಾರೆ ಮತ್ತು ಅವರಿಗೆ ಹುಟ್ಟುವ ಮಕ್ಕಳೂ ಅನಾರೋಗ್ಯವಾಗಿಯೇ ಹುಟ್ಟುತ್ತಿದ್ದಾರೆ ಹಾಗೂ ಮಕ್ಕಳು

ಹೆತ್ತವರನ್ನೇ ಅನುಸರಿಸುತ್ತಿರುವುದರಿಂದ ಇವರ ಆಯುಷ್ಯವೂ ಕಡಿಮೆಯಾಗುತ್ತ ಜನಸಂಖ್ಯೆಯಲ್ಲಿ ಗಣನೀಯ ಪ್ರಮಾಣದ ಕುಸಿತ ಉಂಟಾಗುತ್ತಿರುವುದು ಕಂಡುಬರುತ್ತಿದೆ.



ಚಿತ್ರ ಆರೋಗ್ಯ ಸೇವೆಗಳಿಗೆ ಹೊರಾಡುತ್ತಿರುವ ಕೊರಗ ಸಂಘಟನೆಗಳ ಸದಸ್ಯರು

೫.೩.೨.೬.ಆರ್ಥಿಕ ಮುಗ್ಗಟ್ಟು:

ಅಜಲು ಚಾಕ್ರಿ ಮಾಡುವ ಕೊರಗರು ಅತಿಯಾದ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಾರೆ. ಈ ಚಾಕ್ರಿಯು ಉಚಿತ ಸೇವೆಯಾಗಿದ್ದು ಯಾವುದೇ ಮೂಲದಿಂದ ಸಂಪಾದನೆ ಅಸಾಧ್ಯವಾಗಿರುತ್ತದೆ. ನಡು ಬಗ್ಗಿಸಿ, ಬೇಡಿ ಪಡೆದ ಭಿಕ್ಷೆಯೇ ಇವರ ಸಂಪಾದನೆ. ಸದ್ರಿ ಚಾಕ್ರಿ ನಿರ್ವಹಿಸಿ ನೊಂದ ಮನಸ್ಸಿಗೆ ಕ್ಷಣ ಕಾಲಕ್ಕಾದರೂ ತಂಪೆರೆಯಬಹುದಾದ ಅಮಲು ಸೇವನೆಗೆ ಆತ ಅದನ್ನು ಸರಿದೂಗಿಸುತ್ತಾನೆ. ಈತನ ಕುಟುಂಬ ನಿರ್ವಹಣೆಯು ಊರವರು ಕನಿಕರದಿಂದ ನೀಡುವ ಜುಜುಬಿ ಭಿಕ್ಷೆಯಿಂದಲೇ ಸಾಗಬೇಕಾಗುತ್ತದೆ. ಇದರಿಂದಾಗಿ ಎಲ್ಲಾ ತರದ ಆರ್ಥಿಕ ಮುಗ್ಗಟ್ಟುಗಳು ಉಂಟಾಗುತ್ತದೆ ಮತ್ತು ಗಂಭೀರ ಪರಿಣಾಮಗಳನ್ನು ಕೊರಗರು ಈ ಅಜಲು ಚಾಕ್ರಿಯಿಂದ ಕ್ಷಣ, ಕ್ಷಣವೂ ಅನುಭವಿಸುವಂತಾಗಿದೆ. ಇವರ ಪಾಲಿಗೆ ಸ್ವತಂತ್ರ ಬದುಕು ಎನ್ನುವುದು ಕೇವಲ ಗಾಳಿಯೊಡನೆ ಗುದ್ದಾಡಿದ ಅನುಭವ ಮಾತ್ರ ಎಂದು ಹೇಳಬಹುದು.

ಕೊರಗ ಸಮುದಾಯದ ಸಮಸ್ಯೆಗಳನ್ನು ಒಟ್ಟು ಅಧ್ಯಯನದ ಹಿನ್ನೆಲೆಯಲ್ಲಿ ಮೂರು ರೀತಿಯಲ್ಲಿ ಪ್ರತ್ಯೇಕವಾಗಿ ಗುರುತಿಸಿಕೊಳ್ಳಬಹುದು. ಈ ಬಗೆಯ ವರ್ಗೀಕರಣದ ವಿವರಣಾತ್ಮಕ ಪಟ್ಟಿ ಮುಂದೆ ಸಮಸ್ಯೆಗಳ ಪರಿಹಾರ ಕ್ರಮಗಳನ್ನು ಗುರುತಿಸಿಕೊಳ್ಳುವಲ್ಲಿ ಅನುಕೂಲವಾಗುತ್ತದೆ".೧೧

೫.೩.೨.೭. ಸಾಂಸ್ಕೃತಿಕ ಸಮಸ್ಯೆಗಳು:

ಸಾಂಸ್ಕೃತಿಕ ಸಮಸ್ಯೆಗಳಲ್ಲಿ ವ್ಯಕ್ತಿಗತ ಸಮಸ್ಯಗಿಂತ ಸಾರ್ವತ್ರಿಕವಾದ ಜನಾಂಗೀಯ ಮಟ್ಟದ ಸಮಸ್ಯೆ ಮಹತ್ವದ್ದಾಗುತ್ತದೆ. ಹೀಗಿರುವುದರಿಂದ ಪರಿಹಾರ ಸೂಚಕ



ಸಂಬಂಧವನ್ನಿಟ್ಟುಕೊಂಡೇ ಸಮಸ್ಯೆಗಳನ್ನು ನೀಡುವ ಪ್ರಯತ್ನ ಇಲ್ಲಿಯದ್ದಾಗಿದೆ. ಈ ಹಿಂದೆಯೇ ಪ್ರಸ್ತಾಪಿಸಿದಂತೆ ಅವರ ಸಂಗೀತ ಕುರಿತ ಸಮಸ್ಯೆ ಮಹತ್ವದ್ದೆನಿಸುತ್ತದೆ. ಹಲವು ಬಗೆಯ ವಾದ್ಯಗಳನ್ನು ನುಡಿಸುವಲ್ಲಿ ಪ್ರಾವೀಣ್ಯತೆ ಪಡೆದುಕೊಂಡ ಕೊರಗರ ಕಲೆಗೆ ಯಾವುದೇ ಬಗೆಯ ಮಹತ್ವ ದೊರಕಿಲ್ಲ. ಹೀಗೆಂದ ಮಾತ್ರಕ್ಕೆ ಅವರ ಕಲೆ ನಿಕೃಷ್ಟವಾದುದೆಂದೇನೂ ಅಲ್ಲ. ಉತ್ತಮವಾದ ಕೊಳಲುವಾದಕರು, ಡೋಲು ಬಾರಿಸುವವರು ಕೊರಗರಲ್ಲಿದ್ದಾರೆ. ಸಾರ್ವತ್ರಿಕವಾಗಿ ಇವರ ಕಲೆ ಬಳಕೆಯಾಗುತ್ತಿದ್ದರೂ ಅದು ಕೇವಲ ನೆಪ ಮಾತ್ರವಾಗಿದೆ. ಮನರಂಜನೆಗೆ ಸಂಬಂಧಪಟ್ಟಂತೆ ಕೊರಗರಿಗೆ ತಮ್ಮದೇ ಆದ ಯಾವುದೇ ವಿಶಿಷ್ಟ ಬಗೆಯ ಇತರೇ ಮಾರ್ಗಗಳಿರುವುದು ಕಂಡು ಬರುವುದಿಲ್ಲ. ಸಂಗೀತವೆಂಬುದು ಮನರಂಜನೆಗೆ ಮಾರ್ಗವಾಗಿದ್ದರೂ ದೈನಂದಿನ ಮನರಂಜನಾ ಚಟುವಟಿಕೆಯಲ್ಲಿ ಅದನ್ನು ಸೇರಿಸುವುದು ಸಮಂಜಸವೆನಿಸುವುದಿಲ್ಲ. ಜನಪದದ ಆಟಗಳು ಎನ್ನುವಂಥವು ತೀರಾ ವಿರಳವಾಗಿ ಪ್ರವೇಶಿಸಲ್ಪಟ್ಟಿದೆ. ಗ್ರಾಮಗಳ ಸಂಕರ್ಪವಿದ್ದವರಿಗೆ ಮಾತ್ರ ಇವುಗಳ ಪರಿಚಯ ಇದೆ. ಆದರೆ ಇವೂ ಕೂಡ ಅಧಿಕೃತವಾಗಿ ಮನರಂಜನೆಯನ್ನು ಒದಗಿಸುತ್ತವೆ ಎಂದು ಹೇಳಲಾಗುವುದಿಲ್ಲ.

೫.೩.೨.೮. ಸಾಮಾಜಿಕ ಸಮಸ್ಯೆಗಳು:

ಸಾಮಾಜಿಕ ಸಮಸ್ಯೆಯಲ್ಲಿ ವ್ಯಕ್ತಿಗತವಾದ ಸಮಸ್ಯೆಯೂ ಸಾಮಾಜಿಕ (ಸಾರ್ವತ್ರಿಕ) ಆಯಾಮ ಪಡೆದುಕೊಳ್ಳುತ್ತದೆ. ಸಾಮಾಜಿಕ ಸಮಸ್ಯೆಗಳು ಸಾಂಸ್ಕೃತಿಕ ಸಮಸ್ಯೆಗಳೊಂದಿಗೆ ನೇರವಾಗಿ ತಳುಕು ಹಾಕಿಕೊಂಡು ಅವರ ಜೀವನ ಪರಂಪರಾನುಗತವಾದ ಮಾರ್ಗ ಒಂದು ಘಟ್ಟವಾದರೆ ನಾಗರಿಕತೆಯ ಬದುಕಿಗೆ ಕೊರಗರು ಒಗ್ಗಿಕೊಳ್ಳಲು ಹವಣಿಸುತ್ತಿರುವುದು ಇನ್ನೊಂದು ಘಟ್ಟವಾಗುತ್ತದೆ. ಈ ಎರಡೂ ಘಟ್ಟಗಳ ಮಧ್ಯದಲ್ಲಿ ನಡೆಯುವ ಸಂಘರ್ಷವೇ ಕೊರಗರು ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳಿಗೆ ಕಾರಣವೂ ಆಗಿದೆ. ಕೊರಗ ಸಮುದಾಯದವರು ಮುಖ್ಯವಾಗಿ ಅವಿಭಕ್ತ ಕುಟುಂಬ ಹೊಂದಿದವರು. ಒಂದೊಂದು ಮನೆಯಲ್ಲಿ ಇಪ್ಪತ್ತೆರಡು ಕುಟುಂಬಗಳು ಒಟ್ಟಿಗೆ ವಾಸಿಸುವ ಉದಾಹರಣೆಗಳು ಸಿಗುತ್ತವೆ. ಇಂತಹ ಸಂದರ್ಭದಲ್ಲಿ ಕೊರಗರಿಗೆ ವಸತಿ ಸೌಕರ್ಯ ಒದಗಿಸುವುದು ತುಂಬಾ ಕಷ್ಟದಾಯಕವಾದುದು. ಅವಿಭಕ್ತ ಕುಟುಂಬವಾಗಿಯೇ ಇರಬೇಕೆನ್ನುವುದು ಕೊರಗರ ನಂಬಿಕೆ. ಅವಿಭಕ್ತ ಕುಟುಂಬ ಬೆಳವಣಿಗೆಯ ಲಕ್ಷಣವಲ್ಲವೆಂದು ಬಗೆದ ನಾಗರಿಕ ಸಂಪ್ರದಾಯದ ವ್ಯವಸ್ಥೆ. ಪ್ರತ್ಯೇಕ ಮನೆಗಳನ್ನು ಕಟ್ಟಿಸಿಕೊಡುವಂಥ ಯೋಜನೆ ರೂಪಿಸಿದ ಉದಾಹರಣೆಗಳಿವೆ. ಆದರೆ ಅಂತಹ ಮನೆಗಳನ್ನು ಬಳಸಿಕೊಳ್ಳಲಾಗದೆ ಹಾಗೆ ಉಳಿದಿರುವ ಉದಾಹರಣೆಗಳು ದೊರೆಯುತ್ತವೆ. ಕೆಲವೊಂದು ನಂಬಿಕೆ ಆಚರಣೆಗಳಿಂದಾಗಿ ಇವರ ಬದುಕು ಮತ್ತಷ್ಟು ಹಿಂದುಳಿಯಲು ಸಹಾಯಕವಾಗಿರುವುದನ್ನು ಈ

ಹಿಂದೆಯೇ ಚರ್ಚಿಸಿದ್ದೇವೆ. ಉದಾ: ವಸತಿಗಾಗಿ ನಿರ್ಮಿಸಿಕೊಟ್ಟ ಮನೆಯೊಂದರಲ್ಲಿ 'ಹಿರಿಯ' ಕೊರಗ ಮರಣ ಹೊಂದಿದರೆ ಉಳಿದವರು ಮಕ್ಕಳೊಂದಿಗೆ ತಾಯಿ ಮನೆಯಲ್ಲಿ ವಾಸಿಸುತ್ತಾರೆ. ಮೊದಲಿನ ಮನೆಯಲ್ಲಿ ಸೂತಕದ ಮನೆಯೆಂದು ತೊರೆದು ಬಿಡುತ್ತಾರೆ. ಮಾತೃ ಪ್ರಧಾನ ವ್ಯವಸ್ಥೆಯ ನಿಯಮಾಚರಣೆಗೆ ಬದ್ಧವಾದ ಕೆಲ ಕುಟುಂಬಗಳು ಪಿತೃ ಪ್ರಧಾನ ವ್ಯವಸ್ಥೆಯ ನಿಯಮಾಚರಣೆಗಳನ್ನು ಅರಿಯದೇ ಇರುವುದರಿಂದ ಸಮಸ್ಯೆಗೊಳಗಾಗುತ್ತಿದ್ದಾರೆ. ಸರ್ಕಾರದ ಹಾಗೂ ಸಮಾಜದ ಪಿತೃಪ್ರಧಾನ ನಿಯಮಗಳು, ಇವರ ಪರಂಪರೆಯ ಮಾತೃಪ್ರಧಾನ ನಿಯಮಗಳು ಪರಸ್ಪರ ಸಂಘರ್ಷಕ್ಕೊಳಪಟ್ಟು, ಸರ್ಕಾರ ಕೊಟ್ಟ ಸವಲತ್ತುಗಳು ಅರ್ಥಹೀನವಾಗುತ್ತವೆ. ಶಿಕ್ಷಣ ವ್ಯವಸ್ಥೆಗೆ ಸಂಬಂಧಿಸಿದಂತೆಯೂ ಕೊರಗರಲ್ಲಿ ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುತ್ತಲಿವೆ. ಮೊದಲ ತಲೆಮಾರಿನಲ್ಲಿ ಶಿಕ್ಷಣಕ್ಕೆ ಒಳಪಡಿಸುತ್ತಿರುವ ಪೀಳಿಗೆಯಲ್ಲಿ ಹೆಣ್ಣಿನದೊಂದು ಬಗೆಯ ಸಮಸ್ಯೆಯಾದರೆ, ಗಂಡಿನದೊಂದು ಬಗೆಯದು. ಕೊರಗರ ಒಂದು ಸಮಾಜದಲ್ಲಿ ಒಂದು ಅಥವಾ ಎರಡು ಮನೆತನಗಳು ಸ್ವಲ್ಪ ಮುಂದುವರಿದಿದ್ದು, ಹೆಚ್ಚಾಗಿ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣವನ್ನು ಪಡೆದಿದ್ದಾರೆ. ಬಳಿ ಪದ್ಧತಿಯ ಸಂಬಂಧಗಳು ಇರುವುದರಿಂದ (ಒಂದೇ ಬಳಿಯಲ್ಲಿ ವಿವಾಹ ನಿಶಿದ್ಧವಾದುದರಿಂದ) ಒಂದೇ ಬಳಿಯವರು ಶಿಕ್ಷಣ ಪಡೆದಾಗ ಆ ಕುಟುಂಬದೊಂದಿಗೆ ರಕ್ತ ಸಂಬಂಧ ಬೆಳೆಸುವುದಕ್ಕೆ ಇನ್ನುಳಿದವರು ಮನಸ್ಸು ಮಾಡದಿರುವುದು ಕಂಡು ಬರುತ್ತದೆ. ಕಲಿತ ಹೆಣ್ಣನ್ನು ಯಾರಿಗೆ ಕೊಟ್ಟು ಮದುವೆ ಮಾಡಬೇಕು ಎನ್ನುವುದು ತಂದೆಯ ಸಮಸ್ಯೆಯಾದರೆ, ಕಲಿತ ಹೆಣ್ಣನ್ನು ತಂದು ಸಾಕುವ ಸಾಮರ್ಥ್ಯ ನಮಗಿದೆಯೇ? ಎಂದು ಇನ್ನೊಂದು ಕುಟುಂಬ ಪ್ರಶ್ನಿಸಿಕೊಳ್ಳುತ್ತದೆ.

ಕೊರಗರು ಬಟ್ಟೆಯನ್ನು ತೊಡದಿರುವುದಕ್ಕೆ ಅವರಲ್ಲಿ ತಮ್ಮದೇ ಆದ ಕಥೆಗಳಿವೆ: ನಂಬಿಕೆಗಳಿವೆ. ಇವುಗಳನ್ನು ಮೀರಲು ಕೊರಗರಿಗೆ ಸಾಧ್ಯವಾಗುತ್ತಿಲ್ಲ. ಇದರಂತೆಯೇ ಎಂಜಲು ಅಥವಾ ಭಿಕ್ಷಾನ್ನ ತಿನ್ನುವುದಕ್ಕೆ ತಮ್ಮದೇ ಆದ ಪೌರಾಣಿಕ ಕಥೆಗಳಿರುವುದರಿಂದ ಇವುಗಳನ್ನು ಬಿಟ್ಟು ಹೊರಬಂದರೆ ನಮಗೆ ಕೇಡಾಗುವುದೆಂದು ನಂಬಿರುವುದರಿಂದ ಇಂಥ ನಂಬಿಕೆಗಳಿಂದ ಅವರು ಮುಕ್ತರಾಗುತ್ತಿಲ್ಲ. ಇದರೊಂದಿಗೆ ಸೇರಿಕೊಂಡು ಬಂದಿರುವ ಅಸ್ಪ್ರಶ್ಯತೆಯ ಪಿಡುಗು ಒಂದಾಗಿದೆ. ಈ ಬದುಕಿಗೆ ಪ್ರತ್ಯುತ್ತರವಾಗಿ ಕೊರಗರು ಜ್ವರದಡ್ಡೆ, ಕುಷ್ಠರೋಗ, ಆನೆಕಾಲು ಕ್ಷಯ-ಇಂತಹ ರೋಗಗಳಿಂದ ಬಳಲುವುದು ಕಂಡು ಬರುತ್ತವೆ. ಕೊರಗರು ದ್ವಿಭಾಷಿಗಳೂ ಮತ್ತು ಬಹುಮುಖ ಭಾಷಿಗಳೂ ಆಗಿರುವುದರಿಂದ ಅವರು ತಮ್ಮ ಕೊರಗ ಭಾಷೆಯನ್ನು ಮರೆಯುತ್ತಿದ್ದಾರೆ. ಈ ಅರ್ಥದಲ್ಲಿ ಕೊರಗ ಭಾಷೆ ತನ್ನ ಬೇರನ್ನೆ ಕಳಚಿಕೊಳ್ಳುತ್ತಿದೆ. ಇದು ಕೇವಲ ಭಾಷೆಯ ಸಮಸ್ಯೆಯಾಗದೆ ಇದರೊಂದಿಗೆ ಸಾಂಸ್ಕೃತಿಕ ಸಮಸ್ಯೆಗಳು ತಲೆ ಎತ್ತಿವೆ.

೫.೩.೨.೯. ಆರ್ಥಿಕ ಸಮಸ್ಯೆಗಳು:

ಕೊರಗರು ಆರ್ಥಿಕವಾಗಿ ಶೋಷಿಸಲ್ಪಟ್ಟವರು ಮತ್ತು ಶೋಷಿಸಲ್ಪಡುತ್ತಿರುವವರು. ಕೊರಗರ ಆರ್ಥಿಕ ಸಮಸ್ಯೆಗಳು ಅವರ ಸಾಮಾಜಿಕ ಸಾಂಸ್ಕೃತಿಕ ಹಿಂದುಳಿಯುವಿಕೆಯೊಂದಿಗೆ ತಳಕು ಹಾಕಿಕೊಂಡಿವೆ. ಹೀಗಾಗಿ ಕೊರಗರ ಆರ್ಥಿಕ ಅಭಿವೃದ್ಧಿ ಅವರ ಇತರೇ ಸಮಸ್ಯೆಗಳ ಪರಿಹಾರಕ್ಕೂ ಸಹಾಯಕವಾಗುವುದು. ಕೊರಗರ ಸರ್ವಾಂಗೀಣ ಹಿಂದುಳಿಯುವಿಕೆಯನ್ನು ಪರಿಹರಿಸಲು ಕೊರಗರಿಗೆ ಆರ್ಥಿಕ ಸ್ವಾತಂತ್ರ್ಯ ಲಭಿಸುವಂತೆ ಮಾಡಬೇಕು. ಕೊರಗರ ಆರ್ಥಿಕ ಸಮಸ್ಯೆಗಳೆಂದರೆ ನಿರುದ್ಯೋಗ, ಅರೆ-ಉದ್ಯೋಗ, ವಸತಿ ಹೀನತೆ, ನಿರಕ್ಷರತೆ, ಭೂಮಿ ಇಲ್ಲದಿರುವುದು, ಅನಾರೋಗ್ಯ, ನಾಗರಿಕ ಸವಲತ್ತುಗಳು ಕೊರಗರಿಗೆ ಲಭಿಸದಿರುವುದು. ಈ ಸಮಸ್ಯೆಗಳಿಗೆ ಸರ್ಕಾರ ಶೀಘ್ರ ಪರಿಹಾರಗಳನ್ನು ರೂಪಿಸಬೇಕಾಗಿದೆ. ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಪ್ರತಿಫಲ ಗ್ರಾಮಾಂತರ ಪ್ರದೇಶಗಳಲ್ಲಿರುವ ಕೊರಗರಿಗೆ ಇನ್ನೂ ತೃಪ್ತಿಕರವಾಗಿ ತಲುಪಿಲ್ಲ. ಈ ಸಮಸ್ಯೆಯನ್ನು ಪರಿಸರಿಸಲು ಇಂದು ಗಮನ ಹರಿಸಬೇಕಾಗಿದೆ. ಈ ಹಂತದಲ್ಲಿ ಆಗುವ ಸೋರಿಕೆಯನ್ನೂ ತಡೆಗಟ್ಟುವುದೇ ಸಮಸ್ಯೆಯ ಇನ್ನೊಂದು ಮುಖ. ಕೊರಗರಲ್ಲಿ ಆರ್ಥಿಕ ಆಧುನೀಕರಣ ತರಲು ಶಿಕ್ಷಣವನ್ನೇ ಆಶ್ರಯಿಸಬೇಕು. ಕೊರಗರ ಸಮಗ್ರ ಏಳ್ಗೆಗೆ ಶೈಕ್ಷಣಿಕ ಉದ್ಯೋಗ ಸಂಬಂಧಿ ಬದಲಾವಣೆಗಳನ್ನು ತರುವುದು ಅವಶ್ಯವಾಗಿದೆ.

೫.೪. ಕೊರಗರ ಭೂ ಸಮಸ್ಯೆ ಮತ್ತು ಹೋರಾಟ:

ಕುಂದಾಪುರ ತಾಲೂಕಿನ ಕೆಲವು ಗ್ರಾಮಗಳಲ್ಲಿ ಭೂ ಹಕ್ಕು ಪತ್ರಕ್ಕಾಗಿ ಕೊರಗರ ಹೋರಾಟವು ತೀವ್ರ ಸ್ವರೂಪವನ್ನು ಪಡೆದಿದ್ದು, ತಮ್ಮ ವಿರುದ್ಧ ಆಗುತ್ತಿರುವ ಅನ್ಯಾಯಗಳ ವಿರುದ್ಧ ಒಟ್ಟಾಗಿ ಸೇರಿಕೊಂಡು ಸಂಘಟನೆಯ ಮುಖಂಡರು ಪ್ರತಿಭಟನೆಯ ನೇತೃತ್ವ ವಹಿಸಿಕೊಂಡಿದ್ದು, ಸದ್ಯಕ್ಕೆ ಬೇಡಿಕೆ ಈಡೇರಿಸುವ ಆಶ್ವಾಸನೆ ಸ್ಥಳೀಯಾಡಳಿತ ಸರಕಾರಿ ಅಧಿಕಾರಿಗಳಿಂದ ದೊರೆತಿದ್ದು ಪ್ರತಿಭಟನೆಯನ್ನು ಹಿಂಪಡೆದಿದ್ದಾರೆ.

ಕೊಲ್ಲೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ೧೩ ಕೊರಗ ಕುಟುಂಬಗಳಿಗೆ ನಿವೇಶನ ಹಕ್ಕು ಪತ್ರ ಹಾಗೂ ನಿವೇಶನ ರಹಿತ ೭ ಕುಟುಂಬಗಳಿಗೆ ನೂತನ ನಿವೇಶನ ಹಕ್ಕುಪತ್ರ ನೀಡುವಂತೆ ಆಗ್ರಹಿಸಿ ಕೊಲ್ಲೂರು ಕೊರಗ ಅಭಿವೃದ್ಧಿ ಸಂಘಟನೆಯ ಮೂಲಕ ಕೊರಗರು ಪ್ರತಿಭಟಿಸಿದರು. ಕೊರಗ ಅಭಿವೃದ್ಧಿ ಸಂಘಟನೆಯ ಅಧ್ಯಕ್ಷರಾದ ಶೇಖರ ಕೊರಗ, ಕುಂದಾಪುರ ತಾಲೂಕು ಕೊರಗ ಅಭಿವೃದ್ಧಿ ಸಂಘದ ಅಧ್ಯಕ್ಷ ಸುರೇಶ, ಬೇಬಿ ವಂಡ್ಸೆ ಮುಂತಾದವರು ಪ್ರತಿಭಟನೆಯ ನೇತೃತ್ವವನ್ನು ವಹಿಸಿದರು. ಈ ಬಗ್ಗೆ ಕೊಲ್ಲೂರು ಕೊರಗ ಅಭಿವೃದ್ಧಿ ಸಂಘದ ಶೇಖರ್ ಕೊರಗ ಅವರು ಹೇಳುವುದೇನೆಂದರೆ "ಕೊಲ್ಲೂರು ಗ್ರಾಮ

ಪಂಚಾಯತ್ ವ್ಯಾಪ್ತಿಯಲ್ಲಿ ೨೦ ಕೊರಗ ಕುಟುಂಬಗಳು ಕಳೆದ ೩೦ ವರ್ಷಕ್ಕೂ ಹಿಂದಿನಿಂದ ಸರ್ಕಾರ ಭೂಮಿಯಲ್ಲಿ ಮನೆ ಕಟ್ಟಿಸಿಕೊಂಡು ಕುಲಕಸುಬು ಹಾಗೂ ದಿನಗೂಲಿ ಕಾರ್ಮಿಕರಾಗಿ ಜೀವನ ನಡೆಸುತ್ತಿದ್ದರೂ ಇನ್ನೂ ನಿವೇಶನ ಹಕ್ಕುಪತ್ರ ದೊರಕಿಲ್ಲ. ೧೯೯೪ರ ಡಾ. ಮಹಮ್ಮದ್ ಫೀರ್ ವರದಿಯಂತೆ ಸರ್ಕಾರ ಕೊರಗ ಸಮುದಾಯಕ್ಕೆ ಕೃಷಿ ಭೂಮಿಯನ್ನು ನೀಡುವುದರ ಮೂಲಕ ಸ್ವಾವಲಂಬಿ ಹಾಗೂ ಸ್ವಾಭಿಮಾನದ ಜೀವನ ನಡೆಸುವ ವ್ಯವಸ್ಥೆಯನ್ನು ಕಲ್ಪಿಸಲು ಒಪ್ಪಿಕೊಂಡಿದ್ದು ಇದಕ್ಕೆ ಪೂರಕವಾಗಿ ಉಡುಪಿ ಹಾಗೂ ಕಾರ್ಕಳ ತಾಲೂಕಿನಲ್ಲಿ ಕೊರಗರಿಗೆ ಭೂಮಿ ನೀಡುವ ವ್ಯವಸ್ಥೆ ಪ್ರಗತಿಯಲ್ಲಿದ್ದರೂ ಕುಂದಾಪುರ ತಾಲೂಕಿನಲ್ಲಿ ಈ ಪ್ರಕ್ರಿಯೆ ಆಶಾದಾಯಕವಾಗಿಲ್ಲ ಎಂದು ಪ್ರತಿಕ್ರಿಯಿಸಿದರು. ಕುಂದಾಪುರ ತಾಲೂಕಿನ ಕೆರಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ೪೨ ಕೊರಗ ಕುಟುಂಬಗಳು. ತಲ್ಲೂರು ಗ್ರಾಮ ಪಂಚಾಯತ್‌ನಲ್ಲಿ ೨೬ ಕುಟುಂಬಗಳು ವಾಸಿಸುತ್ತಿದ್ದು, ಇವರ ಪೈಕಿ ತಲ್ಲೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ೧೧ ಕುಟುಂಬಗಳಿಗೆ ನಿವೇಶನ ಹಂಚಿಕೆ ಮಾಡಲಾಗಿದ್ದರೂ ಹಕ್ಕು ಪತ್ರ ನೀಡಿಲ್ಲ. ಕೊರಗರಿಗೆ ಭೂಮಿಯ ಹಕ್ಕು ನೀಡುವುದು ಕಾನೂನು ಬದ್ಧವಾಗಿದ್ದರೂ ಕಂದಾಯ ಇಲಾಖೆ ಮತ್ತು ಜಿಲ್ಲಾಡಳಿತ ತೀವ್ರ ನಿರ್ಲಕ್ಷ್ಯ ವಹಿಸಿದೆ. ಅಲ್ಲದೆ ತಲ್ಲೂರಿನ ಕೊರಗ ಕುಟುಂಬಗಳು ಬಹಳ ಸಂಕಷ್ಟದಲ್ಲಿದ್ದಾರೆ. ಸರಕಾರಿ ಸವಲತ್ತು ಪಡೆಯಲಾಗದೆ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಕೊರಗ ಸಂಘಟನೆಯ ನಾಯಕಿ, ಹಾಗೂ ಕೊರಗಾಭಿವೃದ್ಧಿ ಒಕ್ಕೂಟದ ಮಾಜಿ ಅಧ್ಯಕ್ಷೆ ಗೌರಿಯವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು.

ಇನ್ನೊಂದೆಡೆ ವಂಡ್ಸೆಯ ಆತ್ರಾಡಿ ಸಮೀಪದ ಡಿಸಿ ಮನ್ನಾ ಭೂಮಿಯಲ್ಲಿ ವಾಸಿಸುತ್ತಿದ್ದ ಕೊರಗ ಕುಟುಂಬಗಳು ನಡೆಸುತ್ತಿರುವ ಧರಣಿ ಸತ್ಯಾಗ್ರಹವು ನಿರಂತರವಾಗಿ ೧೧ ದಿನಗಳ ಕಾಲ ನಡೆದಿದ್ದು ಕೊನೆಗೂ ಜಿಲ್ಲಾಡಳಿತ ಸಂಪೂರ್ಣ ಭೂಮಿಯ ಸರ್ವೆಯನ್ನು ನಡೆಸಲು ಒಪ್ಪಿಕೊಂಡಿದ್ದು, ಸರ್ವೆಯ ನಂತರ ಕಂದಾಯ, ಅರಣ್ಯ ಹಾಗೂ ಕೆಪಿಡಿಸಿ ಅಧಿಕಾರಿಗಳೊಡನೆ ಶಾಸಕರು ಹಾಗೂ ನೊಂದ ಸಂತ್ರಸ್ತರಾದ ಕೊರಗ ಸಮಾಜದ ಮುಖಂಡರ ಜೊತೆ ಮಾತುಕತೆ ನಡೆಯಲಿದೆ. ಇಲ್ಲಿನ ಸಮಸ್ಯೆಯ ಮೂಲವು ಅತ್ರಾಡಿಯ ಬೆಳಿಗೇರಿ ಗುಡ್ಡೆಯ ೮ ಎಕ್ರೆ ವಿಸ್ತೀರ್ಣದ ಜಾಗವಾಗಿದ್ದು. ಈ ಜಾಗದಲ್ಲಿ ಕೊರಗ ಕುಟುಂಬಗಳು ವಾಸಿಸುತ್ತಿದ್ದು, ಆದರೆ ಈ ಜಾಗವು ತಮ್ಮ ಇಲಾಖೆಯ ಸ್ವಾಮ್ಯದಲ್ಲಿದ್ದು ಆ ಜಾಗವನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ ಎಂದು ಅರಣ್ಯ ಇಲಾಖೆ ಹಾಗೂ ಕೆಸಿಡಿಸಿ ಪಟ್ಟು ಹಿಡಿದಿದ್ದು, ಅಲ್ಲಿ ವಾಸ್ತವ್ಯ ಹೂಡಿರುವ ಕೊರಗ ಕುಟುಂಬಗಳ ಗುಡಿಸಲುಗಳನ್ನು ತೆರವುಗೊಳಿಸುವ ಪ್ರಯತ್ನವನ್ನು ಕೂಡ ನಡೆಸಿತ್ತು. ಕಂದಾಯ ಇಲಾಖೆಯು ಆ ಪ್ರದೇಶವನ್ನು ಬಹಳಷ್ಟು ವರ್ಷಗಳ ಹಿಂದೆ ಅಂದರೆ ಸುಮಾರು

೧೯೩೦ರ ಕಾಲಘಟ್ಟದಲ್ಲಿ ಡಿಸಿ ಮನ್ನಾ ಭೂಮಿಯೆಂದು ಘೋಷಿಸಿತು. ಆದರೆ ಸುಮಾರು ೧೯೬೭ರ ಇಸವಿಯಲ್ಲಿ ಅರಣ್ಯ ಇಲಾಖೆ ಅದನ್ನು ತನ್ನ ಸ್ವಾಧೀನಕ್ಕೆ ಪಡೆದುಕೊಂಡು ಕೆಸಿಡಿಸಿಗೆ ಹಸ್ತಾಂತರಿಸಿದೆ. ಅತ್ತ ಡಿಸಿ ಮನ್ನಾ ಭೂಮಿ ಇತ್ತ ಅರಣ್ಯ ಇಲಾಖೆಯ ಸ್ವಾಧೀನ ಪ್ರದೇಶವಾಗಿ ಗೇರುಬೀಜ ಪ್ಲಾಂಟೇಷನ್ ಹೊಂದಿರುವ ಪ್ರದೇಶವನ್ನು ಕೊರಗ ಸಮುದಾಯಕ್ಕೆ ವಾಸ್ತವ್ಯ ಹೂಡಲು ಡಿಸಿ ಮನ್ನಾ ಭೂಮಿಯಾಗಿ ನಿಗಧಿಪಡಿಸಲಾಗಿದ್ದರೂ ದಾಖಲೆಗಳ ಮೂಲಕ ಅಲ್ಲಿ ನೆಲೆಸಿರುವ ಕೊರಗ ಕುಟುಂಬಗಳಿಗೆ ಹಕ್ಕುಪತ್ರ ನೀಡಲಾಗದಿರುವುದು ಕಂದಾಯ ಇಲಾಖೆಗೆ ದೊಡ್ಡ ಸಮಸ್ಯೆಯಾಗಿದೆ.

ಹಟ್ಟಿಯಂಗಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೆಲೆಸಿರುವ ದಲಿತ ಹಾಗು ಕೊರಗ ಕುಟುಂಬಗಳಿಗೆ ಭೂಮಿ ಹಕ್ಕು ನೀಡುವಂತೆ ಆಗ್ರಹಿಸಿ ಹಟ್ಟಿಯಂಗಡಿ ಪಂಚಾಯತ್ ಎದುರು ಕೊರಾಗಭಿವೃದ್ಧಿ ಸಂಘ, ಕೆಂಚನೂರು ವಲಯ ಮತ್ತು ಕರ್ನಾಟಕ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ನಡೆದ ಭೂಮಿ ಹಕ್ಕು ಆಗ್ರಹಿಸಿ ನಡೆದ ಪ್ರತಿಭಟನೆಯಲ್ಲಿ ತಾಲೂಕು ಆಡಳಿತ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕ ನಾರಾಯಣ ರಾವ್, ಕೊರಗಾಭಿವೃದ್ಧಿ ಸಂಘದ ತಾಲೂಕು ಮುಖಂಡ ಸುರೇಶ್, ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕ ಎ.ಕೆ. ಕುರಿಯನ್ ತಾಲೂಕು ಸಂಚಾಲಕ ಪ್ರಭಾಕರ ಮೊವಾಡಿ, ಕೊರಗಾಭಿವೃದ್ಧಿ ಸಂಘ ಕೆಂಚನೂರು ವಲಯ ಅಧ್ಯಕ್ಷೆ ಮಂಗಳಾ, ಮುಖಂಡರಾದ ಮಂಜುಹಳ್ಳಿ ಹೊಳೆ, ನಾಗರಾಜ ಸಲಗೇರಿ, ಪ್ರಕಾಶ್ ಹಳ್ಳಬೇರು, ಆನಂದ ಹಳ್ಳಿಬೇರು ಮುಂತಾದ ಮುಖಂಡರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಈ ಪ್ರತಿಭಟನೆಯ ಬಗ್ಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕ ನಾರಾಯಣ್ ರಾವ್ ಅವರನ್ನು ಮಾತನಾಡಿಸಿದಾಗ, "ಮಲ್ಲಾರಿ ಗ್ರಾಮದ ಕದ್ರಿಗುಡ್ಡೆ ಎಂಬಲ್ಲಿ ನೆಲೆಸಿರುವ ೧೦ ದಲಿತ ಕುಟುಂಬಗಳಿಗೆ ಭೂಮಿ ಹಕ್ಕು ನೀಡದೆ ಅನ್ಯಾಯವೆಸಗಲಾಗಿದೆ. ಇವರು ಭೂಮಿ ಹಕ್ಕಿಗೋಸ್ಕರ ಹಲವು ವರ್ಷಗಳಿಂದ ಅಲೆದಾಡುತ್ತಿದ್ದರೂ ತಾಲೂಕು ಆಡಳಿತ ಸರಿಯಾಗಿ ಸ್ಪಂದಿಸದೆ ನಿರ್ಲಕ್ಷ್ಯ ವಹಿಸಿದ್ದಾರೆ. ಇದರ ಪರಿಣಾಮ ಈ ಕುಟುಂಬಗಳು ತೀವ್ರ ಸಂಕಷ್ಟಕ್ಕೆ ಒಳಗಾಗಿದೆ" ಎಂದು ತಮ್ಮ ಅಸಮಧಾನವನ್ನು ವ್ಯಕ್ತಪಡಿಸಿದರು. ಕೊರಗಾಭಿವೃದ್ಧಿ ಸಂಘದ ತಾಲೂಕು ಮುಖಂಡ ಸುರೇಶ್ ಮಾತನಾಡಿ "ಕೆಂಚನೂರು ಗ್ರಾಮದ ೭ ಕೊರಗ ಕುಟುಂಬಗಳು ಕಳೆದ ಮೂರು ದಶಕಗಳಿಂದ ಸರಕಾರಿ ಭೂಮಿಯಲ್ಲಿ ನೆಲೆಸಿ ಭೂಮಿ ಹಕ್ಕಿಗಾಗಿ ಮನವಿ ಸಲ್ಲಿಸುತ್ತಿದ್ದರೂ ಅವರಿಗೆ ಹಕ್ಕು ಪತ್ರ ನೀಡುವ ಕೆಲಸ ಆಗಿಲ್ಲ. ಕೊರಗರಿಗೆ ಭೂಮಿ ಹಕ್ಕು ನೀಡುವುದು ಕಾನೂನುಬದ್ಧ ಎಂದಿದ್ದರೂ ಆಡಳಿತ

ವ್ಯವಸ್ಥೆ ಸ್ಪಂದಿಸುತ್ತಿಲ್ಲ. ಇದರಿಂದ ಬಡ ಕೊರಗ ಕುಟುಂಬಗಳು ಅಲೆದಾಡಿದರೂ ಪರಿಹಾರ ದೊರಕಿಲ್ಲ ಮತ್ತು ಈ ಕುಟುಂಬಗಳು ತಮ್ಮ ಮುಂದಿನ ಭವಿಷ್ಯದ ಬಗ್ಗೆ ಆತಂಕಕ್ಕೆ ಒಳಗಾಗಿದೆ ಎಂದು ಬೇಸರದಿಂದ ಪ್ರತಿಕ್ರಿಯಿಸಿದರು." ಕುಂದಾಪುರ ತಾಲೂಕಿನ ಬೇರೆ ಬೇರೆ ಕಡೆಗಳಲ್ಲಿ ಭೂ ಹಕ್ಕು ಪತ್ರ ಮತ್ತು ನಿವೇಶನ ಪತ್ರಕ್ಕಾಗಿ ಕೆಲವು ತಿಂಗಳಿನಿಂದ ನಿರಂತರ ಪ್ರತಿಭಟನೆಗಳು ನಡೆಯುತ್ತಿದ್ದರೂ, ಇನ್ನೂ ಎಚ್ಚೆತ್ತುಕೊಳ್ಳದ ಸರಕಾರದ ವಿರುದ್ಧ ತೀವ್ರ ಆಕ್ರೋಶಗೊಂಡ ಕೊರಗ ಸಂಘಟನೆಗಳು ಮತ್ತು ಮುಖಂಡರುಗಳು ಅಕ್ಟೋಬರ್ ೭ ರಂದು ಕುಂದಾಪುರದ ಉಪವಿಭಾಗಾಧಿಕಾರಿಗಳ ಕಚೇರಿ ಎದುರು ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದರು. ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟ. ಕರ್ನಾಟಕ, ಕೇರಳ, ಕೊರಗರ ತಾಲೂಕು ಸಮಿತಿ ಕುಂದಾಪುರ ಮುಂತಾದ ಸಂಘಟನೆಗಳು ಈ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಈ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ವಿವಿಧ ಮುಖಂಡರು, "ಮೂರು ತಿಂಗಳಿಂದ ಸತತವಾಗಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಹಾಗೂ ಕೆರಾಡಿ, ವಂಡ್ಸೆ, ಕೊಲ್ಲೂರು, ಹಟ್ಟಿಯಂಗಡಿ ಕರ್ಕುಂಜೆ, ತಲ್ಲೂರು, ಶಂಕರನಾರಾಯಣ, ಹಾರ್ದಳ್ಳಿ, ಮಂಡಳ್ಳಿ, ಕಾಳಾಪುರ ಗ್ರಾಮಗಳಲ್ಲಿ ಪ್ರತಿಭಟನೆ ನಡೆಸಲಾಗಿದ್ದರೂ ಹಾಗೂ ವಂಡ್ಸೆ ಗ್ರಾಮ ಪಂಚಾಯತ್ ಎದುರು ಮೂರು ತಿಂಗಳು ನಿರಂತರ ಧರಣಿ ಪ್ರತಿಭಟನೆ ನಡೆಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಮುಖಂಡರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು" ಸರಕಾರಿ ಜಾಗದಲ್ಲಿ ಕುಳಿತವರಿಗೆ ಹಕ್ಕುಪತ್ರ ನೀಡಬೇಕು, ಕುಂದಾಪುರ ತಾಲೂಕಿನಲ್ಲಿ ಭೂಮಿಗೆ ಸಂಬಂಧಿಸಿ ಕಂದಾಯ ಇಲಾಖೆಯಿಂದ ಸರ್ವೆ ನಡೆಸಿ ಕುಟುಂಬವೊಂದಕ್ಕೆ ಕನಿಷ್ಠ ಎರಡೂವರೆ ಎಕ್ರೆ ಭೂಮಿ ಮಂಜೂರು ಮಾಡಬೇಕು. ಇದಕ್ಕಾಗಿ ಕಾದಿರಿಸಿದ ಡಿಸಿ ಮನ್ನಾ ಭೂಮಿ, ಒತ್ತುವರಿ ಭೂಮಿ ತೆರವುಗೊಳಿಸಿ ಭೂ ಬ್ಯಾಂಕ್ ಮಾಡಿಕೊಳ್ಳಬೇಕು ಎಂದು ಪ್ರತಿಭಟನೆ ನೇತೃತ್ವ ವಹಿಸಿದ ವಿವಿಧ ಸಂಘಗಳ ಮುಖಂಡರುಗಳು ಉಪವಿಭಾಗಾಧಿಕಾರಿಗಳ ಮೂಲಕ ಸರಕಾರವನ್ನು ಒತ್ತಾಯಿಸಿದರು.





ಚಿತ್ರ ಸಂ. ಕಾಡಿನ ಮಧ್ಯ ಇರುವ ಕೊರಗರ ಪ್ಲಾಸ್ಟಿಕ್ ನಿರ್ಮಿತ ಗುಡಿಸಲು

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಪಡುಬಿದ್ರೆಯಲ್ಲಿ ಸುಜ್ಲಾನ್ ಉಷ್ಣವಿದ್ಯುತ್ ಸ್ಥಾವರ ಕೈಗಾರಿಕಾ ವಲಯದಲ್ಲಿ ವಾಸಿಸುತ್ತಿದ್ದ ಕೊರಗ ಕುಟುಂಬಗಳು ಸುಜ್ಲಾನ್ ಪುನರ್‌ವಸತಿ ನಿವಾಸಕ್ಕಾಗಿ ಹಲವು ವರ್ಷಗಳಿಂದ ಕಾದು ಕೊನೆಗೆ ಪ್ರತಿಭಟನೆಗಳನ್ನು ನಡೆಸಿದರು. ಕರ್ನಾಟಕ ಜನಪರ ವೇದಿಕೆಯು ಪ್ರತಿಭಟನೆಯನ್ನು ಹಮ್ಮಿಕೊಂಡಿತ್ತು. ಪ್ರತಿಭಟನೆಯ ನೇತೃತ್ವವನ್ನು ಕರ್ನಾಟಕ ಜನಪರ ವೇದಿಕೆಯ ಮುಖಂಡರಾದ ಶ್ರೀ ರಾಮ ದಿವಾಣ, ಮುಹಮ್ಮದ್ ಹಂದೊಟ್ಟು, ಶೇಖರ್ ಶೆಟ್ಟಿ, ಪವಿತ್ರಾ, ದಲಿತ ಸಂಘರ್ಷ ಸಮಿತಿಯ ನಾಯಕರಾದ ಶೇಖರ್ ಹೆಜ್ಮಾಡಿ, ಉಮಾನಾಥ್ ಕೋಟ್ಯಾನ್, ಹರೀಶ್, ಕೇಶವ ಸಾಲ್ಯಾನ್ ಮುಂತಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಪಡುಬಿದ್ರೆಯ ಸುಜ್ಲಾನ್ ಕಾಲೋನಿ ಬಳಿಯ ಕೊರಗರು ವಾಸ್ತವ್ಯ ಹೂಡಿರುವ ಅಂಬೇಡ್ಕರ್ ಕಾಲೋನಿಗೆ ಭೇಟಿ ನೀಡಿದ ಕರ್ನಾಟಕ ಜನಪರ ವೇದಿಕೆಯ ಮುಖಂಡರುಗಳು ಕೈಗಾರಿಕಾ ಮತ್ತು ಸ್ಥಳೀಯಾಡಳಿತದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಸುಜ್ಲಾನ್ ಕಾಲೋನಿ ಬಳಿಯ ಸರ್ಕಾರಿ ಜಾಗದಲ್ಲಿ ಗುಡಿಸಲು ಕಟ್ಟಿ ವಾಸ್ತವ್ಯ ಹೂಡಿರುವ ಕೊರಗ ಕುಟುಂಬಗಳಿಗೆ ಜುಲೈ ೩೦ರ ಒಳಗೆ ಜಾಗ, ಮನೆ ಸಹಿತ ಮೂಲ ಸೌಕರ್ಯ ಒದಗಿಸಲು ಜಿಲ್ಲಾಡಳಿತ ಮುಂದಾಗದೇ ಹೋದಲ್ಲಿ ಇದರ ಬಗ್ಗೆ ಅಂತರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಲಾಗುವುದು ಎಂದು ಎಚ್ಚರಿಸಿದರು. ಈ ಬಗ್ಗೆ ಕರ್ನಾಟಕ ಜನಪರ ವೇದಿಕೆಯ ಮುಖಂಡರಾದ ಶ್ರೀರಾಮ ದಿವಾಣರನ್ನು ಮಾತನಾಡಿಸಿದಾಗ, ಅವರು "ನಾವು ಕೇಳುತ್ತಿರುವುದು ಭಿಕ್ಷೆಯಲ್ಲ. ನಮ್ಮ ಹಕ್ಕು ಪ್ರತಿಯೊಂದು ಕುಟುಂಬಕ್ಕೂ ತಲಾ ೫೦ ಸೆಂಟ್ಸ್ ಜಾಗ ನೀಡಲೇಬೇಕು. ಈ ಪ್ರಕರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ವಿನಯ್‌ಕುಮಾರ್ ಸೊರಕೆ ಅವರ ನಿಲುವು ಖಂಡನೀಯ ಎಂದು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. ಪುನರ್‌ವಸತಿ ಸೌಲಭ್ಯಗಳನ್ನು ಕೊಡುತ್ತೇವೆ ಎಂದು ಆಮಿಷ ತೋರಿಸಿ ಕೊನೆಗೆ ಏನನ್ನೂ ನೀಡದೆ ವಂಚನೆ ಎಸಗಿ ಕೊರಗ ಕುಟುಂಬಗಳಿಗೆ ತೀವ್ರ ಸಂಕಷ್ಟಕ್ಕೆ ತಳ್ಳಿದ ಸುಜ್ಲಾನ್ ಕೈಗಾರಿಕಾ ಸಂಸ್ಥೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ಪ್ರತಿಭಟನೆಯ ಕಾವು ಏರುತ್ತಿರುವಾಗಲೇ ಸುಜ್ಲಾನ್ ಕೈಗಾರಿಕೋದ್ಯಮಿ ಸಂಸ್ಥೆ ಮತ್ತು ಕೆಲವೊಂದು ದಾನಿಗಳು ಕೊರಗ ಕುಟುಂಬಗಳಿಗೆ ಸಹಾಯ ಹಸ್ತ ನೀಡಲು ಮುಂದೆ ಬಂದಿದ್ದಾರೆ. ಪ್ರತಿಭಟನೆ ನಡೆದ ಬೆನ್ನಲ್ಲೇ ಸುಜ್ಲಾನ್ ಕಂಪೆನಿಯಿಂದ ನಿರ್ವಸಿತರಾಗಿದ್ದ ೨೦ ನಿರ್ವಸಿತ ಕೊರಗ ಕುಟುಂಬಗಳಿಗೆ ಮನೆ, ನಿವೇಶನ ಸಹಿತ ಮನೆ ಮಂಜೂರುಗೊಳಿಸುವುದಕ್ಕೆ ದಲಿತ ಸಂಘರ್ಷ ಸಮಿತಿ, ಕರ್ನಾಟಕ ಜನಪದ ವೇದಿಕೆ ಸಂಘಟನೆಗಳು ಹರ್ಷ ವ್ಯಕ್ತಪಡಿಸಿ, ಇದು ಸಂಘಟನೆಯ

ಹೋರಾಟಕ್ಕೆ ಸಂದ ಜಯ ಎಂದು ತಿಳಿಸಿದ್ದಾರೆ. ಮನೆ ನಿವೇಶನ ಮಂಜೂರು ಮಾಡುವುದಕ್ಕೆ ಸಹಕರಿಸಿದ ಜಿಲ್ಲಾಡಳಿತ, ತಹಶೀಲ್ದಾರ್, ಗ್ರಾಮ ಪಂಚಾಯತ್ ಹಾಗೂ ಪೋಲೀಸ್ ಇಲಾಖೆಗೆ ಮುಖಂಡರುಗಳಾದ ಶ್ರೀ ಸುಧಾಕರ್ ಪಲಿಮಾರು, ಹರೀಶ್ ಕಂಚಿನಡ್ಕ, ರವಿ ಪಲಿಮಾರು ಮುಂತಾದವರು ಕೃತಜ್ಞತೆಗಳನ್ನು ವ್ಯಕ್ತಪಡಿಸಿದರು. ಅಷ್ಟೇ ಅಲ್ಲದೆ ಸುಜ್ಲಾನ್ ಹೊರ ಆವರಣದಲ್ಲಿ ಕೆಐಎಡಿಬಿ ಹೆಸರಿನಲ್ಲಿ ದಾಖಲಾತಿ ಇಲ್ಲದ ೧೧.೬೩ ಎಕರೆ ಜಾಗವನ್ನೂ ಸುಜ್ಲಾನ್ ಕಂಪೆನಿ ಕಬಳಿಸುವ ಹುನ್ನಾರ ನಡೆಸಿದೆ ಎಂದು ತೀವ್ರ ಅಸಮಧಾನವನ್ನು ವ್ಯಕ್ತಪಡಿಸಿದರು. ಈ ಬಗ್ಗೆ ಸುಧಾಕರ್ ಪಲಿಮಾರ್ ಅವರ ಜೊತೆ ಮಾತನಾಡಿದಾಗ, ಕಳೆದ ೭ ವರ್ಷಗಳಿಂದ ಸುಜ್ಲಾನ್‌ಗಾಗಿ ಜಾಗ ನೀಡಿ ಆ ಕಂಪೆನಿಯ ಪೊಳ್ಳು ಮಾತಿಗೆ ಮರುಳಾಗಿ, ನಿರ್ವಸಿತರಾಗಿ ಬದುಕುತ್ತಿದ್ದ ೨೦ ಬಡ ಕೊರಗ ಕುಟುಂಬಗಳು ಇತ್ತೀಚೆಗೆ ಸುಜ್ಲಾನ್‌ಗೆ ಸೇರಿದ ಜಾಗದಲ್ಲಿ ಗುಡಿಸಲು ನಿರ್ಮಿಸಿ ಠಿಕಾಣಿ ಹೂಡಿದ್ದರು. ಕಂಪೆನಿಯು ಅವರನ್ನು ತೆರವುಗೊಳಿಸಲು ಕಸರತ್ತು ನಡೆಸಿದ್ದರೂ ಪ್ರಯೋಜನವಾಗಿಲ್ಲ ಎಂದು ತಮ್ಮ ಅಸಮಧಾನವನ್ನು ವ್ಯಕ್ತಪಡಿಸಿದರು. ಹಾಗೆಯೇ ಇನ್ನೊಂದು ಕಡೆ ೧೫ಕ್ಕೂ ಅಧಿಕ ಕೊರಗ ಕುಟುಂಬಗಳ ದಾನಿಗಳ ನೆರವಿನಿಂದ ೧೫ ತಗಡಿನ ಮನೆಗಳನ್ನು ಸುಜ್ಲಾನ್ ಕಂಪೆನಿಯ ಅಧೀನ ಜಾಗದಲ್ಲೇ ಜೋಪಡಿ ಕಟ್ಟಿ ವಾಸಿಸಲು ಆರಂಭಿಸಿದ್ದಾರೆ. ಆದರೆ ಅಲ್ಲಿ ಇನ್ನೂ ನೀರು, ವಿದ್ಯುತ್, ಶೌಚಾಲಯಗಳ ವ್ಯವಸ್ಥೆ ಇಲ್ಲದ ಕಾರಣ, ಸ್ಥಳೀಯ ತಾಲೂಕು ಪಂಚಾಯತ್ ಸದಸ್ಯ ಭಾಸ್ಕರ್ ಪಡುಬಿದ್ರಿ, ಪಡುಬಿದ್ರಿ ಗ್ರಾಮ ಪಂಚಾಯತ್ ಅಧ್ಯಕ್ಷ ವಿಜಯ ಎಂ. ಅಮೀನ್ ಇವರು ಸಂಬಂಧಪಟ್ಟ ಇಲಾಖೆ ಹಾಗೂ ಜಿಲ್ಲಾಡಳಿತ ಜತೆ ಸಮಾಲೋಚಿಸಿ ವ್ಯವಸ್ಥೆ ಕಲ್ಪಿಸಲಾಗುವುದು ಎಂದರು.



ಚಿತ್ರ ಸಂ. ಬೆಳ್ತಂಗಡಿ ತಾಲೂಕಿನ ನಾವುರ ಗ್ರಾಮದ ಜಾಲ ಬಳಿಯ ಕೊರಗರನ್ನು ತಲುಪುವ ಕಾಡಿನ ಮಧ್ಯದ ದುರ್ಗಮ ಮಾರ್ಗ



ಕೊರಗ ಕುಟುಂಬಗಳು ಸರಿಯಾದ ವ್ಯವಸ್ಥೆಯಿಲ್ಲದೆ ಸಂಕಷ್ಟದಲ್ಲಿದ್ದು ಈ ಬಗ್ಗೆ ಶ್ರೀಮತಿ ಎಂಬವರ ಬಳಿ ಮಾತನಾಡಿದಾಗ "ನಾವು ಪಂಚಕಾಡು ಎಂಬಲ್ಲಿ ವಾಸಿಸುತ್ತಿದ್ದೆವು. ಸುಜ್ಲಾನ್ ಕಂಪೆನಿಗಾಗಿ ನಮ್ಮಿಂದ ಜಾಗ ಪಡೆದಾಗ ಪುನರ್ವಸತಿ ಭರವಸೆ ನೀಡಲಾಗಿತ್ತು. ಆ ಬಳಿಕ ನಾವು ಕೆಲವು ಕುಟುಂಬಗಳಲ್ಲಿ ಒಕ್ಕಲುತನದೊಂದಿಗೆ ಕೇವಲ ಊಟೋಪಚಾರಕ್ಕಾಗಿ ಕೆಲಸ ಮಾಡಿಕೊಂಡಿದ್ದೆವು. ನಮಗೆ ಸ್ವಂತ ಜಾಗ ಬೇಕೆನ್ನುವ ಉದ್ದೇಶದಿಂದ ಹಾಗೂ ಜೀತಮುಕ್ತ ಜೀವನ ನಡೆಸಲು ನಾವು ಈಗ ಸುಜ್ಲಾನ್‌ಗೆ ಸೇರಿದ ಜಾಗದಲ್ಲಿ ದಾನಿಗಳ ನೆರವಿನಿಂದ ಮನೆ ನಿರ್ಮಿಸಿದ್ದೇವೆ. ಯಾವುದೇ ಒತ್ತಡ ಬಂದರೂ ನಾವು ಇಲ್ಲಿಂದ ಏಳುವುದಿಲ್ಲ. ನಾವು ಈ ಭೂಮಿಯ ಮೂಲ ನಿವಾಸಿಗಳು ನಮಗೂ ಬದುಕುವ ಹಕ್ಕಿದೆ ಎಂದು ತಿಳಿಸಿದರು.

ಕೊರಗ ಸಮುದಾಯದ ಸಮಸ್ಯೆಗಳನ್ನು ಅವಲೋಕಿಸಿದ ನಂತರ ಪರಿಹಾರಗಳನ್ನು ಸೂಚಿಸುವ ಮುಕ್ತಾಯದ ಹಂತಕ್ಕೆ ನಾವು ಬಂದಿದ್ದೇವೆ. ಪರಿಹಾರ ಎಂದಾಕ್ಷಣ ತಟ್ಟನೆ ಎದುರಾಗುವ ಪ್ರಶ್ನೆ ಯಾವ ಬಗೆಯದ್ದು ಎನ್ನುವುದು. ಇದರಲ್ಲಿಯೇ ಎರಡು ಬಗೆಗಳಿವೆ.

೧) ಸಾಂಪ್ರದಾಯಿಕ ವ್ಯವಸ್ಥೆಗೆ ಬದ್ಧವಾಗಿರುವಂಥ ಪರಿಹಾರಗಳನ್ನು ಕೊಡುವುದು.

೨) ಸಾಂಪ್ರದಾಯಿಕ ವ್ಯವಸ್ಥೆಯನ್ನು ಮೀರಿ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವಂಥದ್ದು. ಸಾಂಪ್ರದಾಯಿಕ ವ್ಯವಸ್ಥೆಗೆ ಬದ್ಧವಾಗುವಂಥ ಪರಿಹಾರಗಳನ್ನು ನೀಡಿದರೆ ಅವರನ್ನು ಮತ್ತೆ ವ್ಯವಸ್ಥೆಯ ಇನ್ನೊಂದು ಮುಖದಿಂದ ಹತ್ತಿಕ್ಕುವ ಪರಿಸರಕ್ಕೆ ಜೋಡಿಸಿದಂತಾಗುತ್ತದೆ. ಸಾಮಾನ್ಯವಾಗಿ ಇತ್ತೀಚಿನ ದಿನಗಳಲ್ಲಿ ಇಂತಹ ಪರಿಹಾರ ಕ್ರಮಗಳೇ ಜಾರಿಗೆ ಬರುತ್ತಿರುವುದು ಕಂಡುಬರುತ್ತದೆ. ಉದಾ: ದೇವಮಂದಿರಗಳನ್ನು ಕಟ್ಟಿಸಿಕೊಡುವುದು, ಭಜನೆಗಾಗಿ ದಲಿತರಿಗೆ ಭಜನಾ ಸಾಮಾಗ್ರಿಗಳನ್ನು ಕೊಡಿಸುವುದು ಇನ್ನುಳಿದ ಜನಗಳೊಂದಿಗೆ ಬೆರೆಯದಂತೆ ಪ್ರತ್ಯೇಕತಾ ನೀತಿಯನ್ನು ಸುಧಾರಣೆಗೆ ಕೈ ಹಾಕುವುದು, ಸಂಸ್ಕೃತಿ ಎನ್ನುವ ಹೆಸರಿನಲ್ಲಿ ರೂಢಿಗತವಾದ ಮೌಢ್ಯ ಮೌಲ್ಯಗಳನ್ನೇ ಎತ್ತಿ ಹಿಡಿಯುವಂಥ ಚಟುವಟಿಕೆಗಳಲ್ಲಿ ತೊಡಗುವುದು ಕಾಣುತ್ತದೆ. ಇಂಥವು ಹೊಸ ಬದುಕಿನ ಮೌಲ್ಯಗಳಿಗೆ ಒಗ್ಗಿಕೊಳ್ಳುವ ಜನತೆಗೆ ಅವಶ್ಯಕವಾದವುಗಳಲ್ಲ. 'ಏಕೆಂದರೆ ಆ ಚಟುವಟಿಕೆಗಳು ದೈನಂದಿನ ಬದುಕಿನ ಜ್ವಲಂತ ಸಮಸ್ಯೆಗಳನ್ನು ಮರೆಸಿ ಪಾರಮಾರ್ಥಿಕ ಲೋಕದೆಡೆಗೆ ಅವರನ್ನು ಕೊಂಡೊಯ್ಯುತ್ತವೆ. ಆಗ ಚಿಂತನೆಯ ಮಾರ್ಗಕ್ಕೆ ಗೋಡೆಕಟ್ಟಿದಂತಾಗುತ್ತದೆ. ಆದ್ದರಿಂದ ಇಂಥ ಪರಿಹಾರಗಳಿಂದ ಮನಃಶಾಂತಿ ಎನ್ನುವ ಭ್ರಮೆಯನ್ನು ಹೊರತುಪಡಿಸಿದರೆ ಬೇರೇನೂ ಲಾಭವಿಲ್ಲ.

ಕೊರಗರಿಗೆ ತಮ್ಮದೇ ಆದ ಸಂಗೀತವಿರುವುದರಿಂದ, ವಾದ್ಯಗಳಿರುವುದರಿಂದ ಅದೇ ಮಾದರಿಯ ಆಧುನಿಕ ಉಪಕರಣಗಳೂ ಬಂದಿರುವುದರಿಂದ ಇಂಥ ಉಪಕರಣಗಳನ್ನು ಒದಗಿಸಿಕೊಡಬೇಕು. ಈ ಸಂಗೀತವನ್ನು ಆರಾಧನೆ ಕ್ರಮದಿಂದ ಪ್ರತ್ಯೇಕಗೊಳಿಸಿ ಸಾರ್ವತ್ರಿಕತೆಯೆಡೆಗೆ ತಂದು ಕೊಟ್ಟಾಗ ಇವರು ಸಮಾಜದ ಇತರ ಜನರೊಂದಿಗೆ ತೀವ್ರವಾಗಿ ಬೆರೆಯಲು ಸಾಧ್ಯವಾಗುತ್ತದೆ. ಜೊತೆಗೆ ಕಲೆ ಸಾರ್ವತ್ರಿಕವಾಗುವುದರೊಂದಿಗೆ ಆರ್ಥಿಕವಾಗಿ ಆದಾಯ ತರುವಂತಹದ್ದಾಗುತ್ತದೆ. ಈ ಕ್ರಮವೇ ಅತ್ಯಂತ ಉತ್ಕೃಷ್ಟವಾದದ್ದೆಂದೇನೂ ಅಲ್ಲ, ಅವರ ವೃತ್ತಿಯನ್ನು ಬೆಳೆಸಿ ಅವರಿಗೇ ಅದನ್ನು ಮಾಡಲು ಹಚ್ಚಿದಂತಾಗುತ್ತದೆ. ಬೇರೆ ವೃತ್ತಿ ಮಾಡಬಾರದೇ? ಅವರ ವೃತ್ತಿ ಅವರೇ 'ಏಕೆ ಮಾಡಬೇಕು, ಎನ್ನುವ ಪ್ರಶ್ನೆಗಳು 'ಏಳುತ್ತವೆ. ಇಲ್ಲಿ ಬೇರೆ ವೃತ್ತಿಯನ್ನು ಅವರು ಮಾಡಬಾರದೆಂದೇನೂ ಇಲ್ಲ. ಒಂದು ವೃತ್ತಿಯಿಂದ ಇನ್ನೊಂದು ವೃತ್ತಿಗೆ ಒಗ್ಗಿ ಕೊಳ್ಳುವುದು ಬಹಳ ಕಷ್ಟದಾಯಕವಾದುದು. ಮೂಲದ ವೃತ್ತಿಯಿಂದ ಅದೇ ಮಾದರಿಯ ಆಧುನಿಕ ವೃತ್ತಿಗೆ ಹೊಂದಿಕೊಳ್ಳುವುದು ಬೆಳವಣಿಗೆಯ ಒಂದು ಘಟ್ಟವಾಗುತ್ತದೆ. ಎರಡನೆಯ ಘಟ್ಟದಲ್ಲಿ ಬೇರೆ ವೃತ್ತಿಗಳಿಗೆ ಹೊಂದಿಕೊಳ್ಳುವುದು ಮಾನಸಿಕ ಸಿದ್ಧತೆಯೂ ಆಗಿರುತ್ತದೆ. ಜೊತೆಗೆ ಆರ್ಥಿಕತೆಯ ಬೆನ್ನೆಲುಬು ಸಿಕ್ಕಾಗ ಅನ್ಯ ವೃತ್ತಿಗೆ ತಮ್ಮಷ್ಟಕ್ಕೆ ತಾವೇ ತಿರುಗಿಕೊಳ್ಳುತ್ತಾರೆ.

ಮನರಂಜನೆಗೆ ಸಂಬಂಧಪಟ್ಟಂತೆ ಭಜನೆ ಸಾಮಾಗ್ರಿ ಒದಗಿಸುವುದನ್ನು ಬಿಟ್ಟು ದೈಹಿಕ ಮತ್ತು ಬೌದ್ಧಿಕವಾಗಿ ಶ್ರಮವಹಿಸುವಂಥ ಮನರಂಜನೆಯ ಉಪಕರಣಗಳು ಹಾಗೂ ಸ್ಥಳಾವಕಾಶ ಕಲ್ಪಿಸಿಕೊಡಬೇಕು. ವೃತ್ತಿಯ ನೆಲೆಯಲ್ಲಿ ಗಮನಿಸುವುದಾದರೆ ಕೊರಗರು ಹೆಣೆದು ತಯಾರಿಸುವಂಥ ಬುಟ್ಟಿಗಳನ್ನು ಹಣವಂತರಾದವರು ಮಧ್ಯದಲ್ಲಿ ನಿಂತುಕೊಂಡು ಮಾರ್ಕೆಟ್ಟಿನಲ್ಲಿ ಮಾರುವವರಿಗೆ ಒದಗಿಸುವ ಪದ್ಧತಿ (ದಲ್ಲಾಳಿ ಪದ್ಧತಿ) ಇತ್ತೀಚೆಗೆ ಅಸ್ತಿತ್ವಕ್ಕೆ ಬರುತ್ತಿದೆ. ಈ ದಲ್ಲಾಳಿ ಪದ್ಧತಿಯನ್ನು ತಪ್ಪಿಸುವುದಕ್ಕೆ ಪ್ರಾರಂಭಿಕ ಹಂತದಲ್ಲಿ ಸರ್ಕಾರದ ಪ್ರತಿನಿಧಿ ಕೊರಗರ ಬುಟ್ಟಿ ಉತ್ಪನ್ನಗಳನ್ನು ಖರೀದಿಸಿ ಹಣ ಸಂದಾಯ ಮಾಡುವಂತಾಗಬೇಕು. ಕೊರಗರು ತಮ್ಮ ಆರ್ಥಿಕ ವಹಿವಾಟವನ್ನು ತಾವೇ ವ್ಯವಸ್ಥೆ ಮಾಡಿಕೊಳ್ಳುವ ಮಟ್ಟಕ್ಕೆ ಬೌದ್ಧಿಕವಾಗಿ, ಸಂಘಟನಾತ್ಮಕವಾಗಿ ಬೆಳೆದಾಗ ಸಹಕಾರಿ ಸಂಘಗಳನ್ನು ಸ್ಥಾಪಿಸುವುದು ಸೂಕ್ತ. ಅನೌಪಚಾರಿಕ ಶಿಕ್ಷಣದನ್ವಯ ಕೊರಗರ ಸಮಸ್ಯೆಗಳಿಗೆ ಅಲ್ಲೇ ಸ್ವಯಂ ಜನಜಾಗೃತಿ ಮೂಡುವಂತೆ ಮಾಡುವುದು. ಇಲ್ಲಿ ವಸತಿ, ಅನಾರೋಗ್ಯ ಅವಿಭಕ್ತ ಕುಟುಂಬದ ದುಷ್ಪರಿಣಾಮಗಳು ಇತ್ಯಾದಿಗಳ ಕುರಿತು ಕೊರಗರಿಗೆ ಪ್ರಜ್ಞೆ ಮೂಡಿಸುವ ಕಾರ್ಯವೂ ಆಗಬೇಕು. ಔಪಚಾರಿಕ ಶಿಕ್ಷಣ ಸೌಲಭ್ಯವನ್ನು ಹೆಚ್ಚಳಗೊಳಿಸಲು ವಸತಿ, ಶಾಲೆಗಳನ್ನು ಸ್ಥಾಪಿಸುವುದೂ ಅಗತ್ಯ. ನಾಗರಿಕ ಸೌಲಭ್ಯಗಳಾದ ವಸತಿ,

ವಿದ್ಯುಚ್ಛಕ್ತಿ, ಶೌಚಾಲಯ, ನೀರು, ರಸ್ತೆ, ಆಸ್ಪತ್ರೆ ಇತ್ಯಾದಿಗಳು ಹೆಚ್ಚಬೇಕು. ಕೊರಗ ಜನಾಂಗಕ್ಕೆ ಉಚಿತವಾಗಿ ವರ್ಷ ವರ್ಷಕ್ಕೆ ಸರ್ಕಾರ ಅಗತ್ಯವಿರುವಷ್ಟು ಉಡುಪನ್ನು ಪಾತ್ರೆಗಳಂತಹ ಅವಶ್ಯಕ ವಸ್ತುಗಳನ್ನು ಪೂರೈಸಬೇಕು. ಇಂದು ಕೊರಗರನ್ನು ಪರಿಶಿಷ್ಟ ಪಂಗಡದಲ್ಲಿ ಸರ್ಕಾರ ಸೇರಿಸಿದ್ದು ಈ ಕೊರಗರು ಅದೇ ಮೀಸಲಾತಿ ವರ್ಗದಲ್ಲಿ ಬರುವ ಇತರೆ ಸಮುದಾಯಗಳೊಂದಿಗೆ ಸ್ಪರ್ಧಿಸುವ ಮಟ್ಟದಲ್ಲಿಲ್ಲ. ಆದ್ದರಿಂದ ಪ್ರಾದೇಶಿಕ ನಿರ್ಬಂಧದೊಂದಿಗೆ ಕೊರಗರಿಗೆ ಶೇಕಡ ೩ರ ಪ್ರತ್ಯೇಕ ಮೀಸಲಾತಿಯನ್ನು ನೀಡುವುದು ಅಗತ್ಯ. ಈ ಪ್ರತ್ಯೇಕತೆ ಆಧರಿತ ಮೀಸಲಾತಿಯನ್ನು ರಾಷ್ಟ್ರೀಯ ಮೀಸಲಾತಿ ಚೌಕಟ್ಟಿನೊಳಗೇ ಕಲ್ಪಿಸುವುದು ಸಾಧ್ಯವಿದೆ. ಈ ದಿಸೆಯಲ್ಲಿ ಅಗತ್ಯವಾದ ಕ್ರಮಗಳನ್ನು, ವಿಧಿವಿಧಾನಗಳನ್ನು ಕರ್ನಾಟಕ ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರಕ್ಕೆ ಬೇಗನೆ ಕಳುಹಿಸಬೇಕಾಗಿದೆ.

೩.೩. ಕೊರಗರ ಭೂಮಿ ಚಳುವಳಿ:

ಕೊರಗರಲ್ಲಿ ಸಂಘಟನೆಯ ಪರಿಕಲ್ಪನೆ ಯಾರಿಗೂ ಇರಲಿಲ್ಲ. ಈ ಪರಿಕಲ್ಪನೆಯನ್ನು ಅವರಲ್ಲಿ ಬಿತ್ತಿದವರು ಸಮಗ್ರ ಗ್ರಾಮೀಣಾಶ್ರಮದ ಶ್ರೀ ದೇವದಾಸ ಶೆಟ್ಟಿಯವರು. ೧೯೮೭ ರಿಂದ ಕೊರಗರ ಮನೆಗಳಿಗೆ ಭೇಟಿ ನೀಡಿ ಅವರ ಪರಿಸ್ಥಿತಿಯ ಅಧ್ಯಯನವನ್ನು ನಡೆಸಿದ ಶೆಟ್ಟರು ಪಂಚವಾರ್ಷಿಕ ಯೋಜನೆಯು ಕೊರಗರನ್ನು ತಲುಪಿಯೇ ಇಲ್ಲವೆಂಬ ಅಂಶವನ್ನು ಮನದಟ್ಟು ಮಾಡಿಕೊಂಡು ಅವರನ್ನು ಸಂಘಟಿಸುವ ಸಾಹಸಕ್ಕೆ ಕೈಹಾಕಿದರು. ಪರಿಣಾಮವಾಗಿ ಕಿಲ್ಪಾಡಿ, ಮೂಲ್ಕಿ, ಕಾರ್ನಾಡು, ಬಳ್ಕುಣ್ಣು, ಶಿರ್ವಾ, ಕಟಪಾಡಿ, ಹೆಬ್ರಿ ಮುಂತಾದೆಡೆ ಕೊರಗರು ಮೊಟ್ಟ ಮೊದಲು ಸಂಘಟಿತರಾದರು. ಮುಂದೆ ೧೯೮೮–೮೯ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕೊರಗರ ಅಭಿವೃದ್ಧಿ ಸಂಘವು ಹುಟ್ಟಿಕೊಂಡಿತು.

ಹೀಗೆ ಸಂಘಟಿತರಾಗಿ ಭೂಮಿ ಅವಶ್ಯಕತೆಯ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದು ಈ ಚರ್ಚೆಯೇ ಮುಂದೆ ಭೂಮಿ ಬೃಹತ್ ರ್‍ಯಾಲಿಯೊಂದಿಗೆ ತೆರಳಿ ಪ್ರತಿ ವ್ಯಕ್ತಿಗೆ ಐದು ಎಕರೆ ಜಮೀನು ನೀಡಬೇಕು ಹಾಗೂ ಕೊರಗರ ಬಗ್ಗೆ ಸಮಗ್ರ ಅಧ್ಯಯನ ನಡೆಯಬೇಕು ಎಂಬ ಮನವಿಯನ್ನು ಆಡಳಿತಕ್ಕೆ ನೀಡಲಾಯಿತು. ಈ ರ್‍ಯಾಲಿಯಲ್ಲಿ ೯೦% ಮಹಿಳೆಯರೇ ತುಂಬಿದ್ದರು. ಉಟ್ಟ ಸೀರೆಯಲ್ಲಿಯೇ ಹೊರಟು ಬಂದ ಮಹಿಳೆಯರನೇಕರಿದ್ದು. ಕೊರಗರು ಬೀದಿಗಿಳಿದು ಸುರಿವ ಮಳೆಯನ್ನೂ ಲೆಕ್ಕಿಸದೆ ಗುಡುಗಿದ ಪರಿಣಾಮವಾಗಿ ಸರಕಾರವು ಕೊರಗರ ಬಗ್ಗೆ ಸಮಗ್ರ ಅಧ್ಯಯನವೊಂದನ್ನು ನಡೆಸಿ ವರದಿ ನೀಡಲು ಶಿಫಾರಸು ಮಾಡಿತು. ಅದರಂತೆ ಮಂಗಳೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದ ಡಾ. ಮಹಮದ್ ಪೀರ್ ಅವರ ನೇತೃತ್ವದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೪೦೦ ಮನೆಗಳನ್ನು ಸ್ಯಾಂಪಲ್ ಆಗಿ

ಆರಿಸಿಕೊಂಡು ಒಂದು ವರ್ಷದ ಕಾಲ ಅಧ್ಯಯನ ನಡೆಸಲಾಯಿತು. ಪೀರ್ ಸಮಿತಿಯು ಮುಖ್ಯವಾಗಿ ಕೊರಗರಲ್ಲಿ ಶಿಕ್ಷಣದ ಕೊರತೆ ಇದೆ. ಅಪೌಷ್ಟಿಕತೆಯ ಕೊರತೆ ಇದೆ. ಅವರಿಗೆ ತಲಾ ಎರಡೂವರೆ ಎಕ್ರೆ ಜಮೀನನ್ನು ನೀಡಿ ಅವರನ್ನು ಪುನರ್ವಸತಿಗೊಳಿಸಬೇಕು ಎಂಬ ಅಂಶದಲ್ಲಿದ್ದ ವರದಿಯನ್ನು ೧೯೯೪ರ ಮಾರ್ಚ್‌ನಲ್ಲಿ ಸರಕಾರಕ್ಕೆ ನೀಡಿತು. ಅದೆ ವರ್ಷದ ಸಪ್ಟೆಂಬರ್‌ನಲ್ಲಿ ಜಿಲ್ಲಾ ಪಂಚಾಯತ್‌ನಲ್ಲಿ ನಡೆದ ಸಭೆಯಲ್ಲಿ ಸಂಕಪ್ಪ ರೈಗಳು ಅಧ್ಯಕ್ಷರಾಗಿದ್ದು, ಕೊರಗರಿಗೆ ಎರಡೂವರೆ ಎಕ್ರೆ ಜಮೀನು ನೀಡಬೇಕೆಂಬ ನಿರ್ಣಯ ಮಾಡಲಾಯಿತು. ಆದರೆ, ಅದೇ ವರ್ಷ ಅಕ್ಟೋಬರ್ ತಿಂಗಳಲ್ಲಿ ರಾಜಕೀಯ ಪಕ್ಷ ಬದಲಾದಾಗ ಈ ನಿರ್ಣಯ ಮೂಲೆ ಗುಂಪಾಯಿತು. ಹಾಗಾಗಿಯೇ ಅದೇ ನವೆಂಬರ್ ತಿಂಗಳಲ್ಲಿ ಭೂಮಿ ಚಳವಳಿ ಆರಂಭಿಸುವ ನಿರ್ಧಾರ ತಳೆಯಲಾಯಿತು.

ಕಾಪುವಿನ ಲಕ್ಷ್ಮೀ ಜನಾರ್ದನ ದೇವಸ್ಥಾನದ ಸಭಾಭವನದಲ್ಲಿ ದೊಡ್ಡ ಸಮಾವೇಶವೊಂದನ್ನು ಹಮ್ಮಿಕೊಂಡು ಜಯಪ್ರಕಾಶ್ ಹೆಗ್ಗಡೆಯವರಿಗೆ ಈ ಸಂಬಂಧ ಮನವಿಯೊಂದನ್ನು ಕೊರಗರು ನೀಡಿದರು. ಅವರಿಂದ ಯಾವುದೇ ಪ್ರತಿಕ್ರಿಯೆ ಬರದಿದ್ದಾಗ ಸರಕಾರಿ ಜಮೀನು ಇರುವೆಡೆಯೆಲ್ಲೆಲ್ಲ ಬೇಲಿ ಹಾಕಿ ಕುಳಿತು ಸರಕಾಕ್ಕೆ ಲಿಖಿತವಾಗಿ ಮಾಹಿತಿ ನೀಡಿದರು. ಗುತ್ತಕಾಡಿನಲ್ಲಿ ಮೊಟ್ಟ ಮೊದಲು ಬೇಲಿ ಹಾಕಿ ಕೊರಗರು ತಮ್ಮ ಹಕ್ಕು ಸ್ಥಾಪನೆ ಮಾಡಿದರು. ಹೀಗೆ ೧೯೯೫ ರಿಂದ ೧೯೯೭ರವರೆಗೆ ಸರಕಾರಿ ಜಮೀನಿಗೆ ಬೇಲಿ ಹಾಕುವ ಕೆಲಸ ಮುಂದುವರೆಯಿತು.

೧೯೯೭ ರಲ್ಲಿ ಭೂಮಿ ಚಳವಳಿ ಆಂದೋಲನಕ್ಕೆ ಸುರಾಲದಲ್ಲಿ ನಾಂದಿ ಹಾಡಿದರು. ೧೦ ದಿನಗಳ ಕಾಲ ಹೋರಾಟ ನಡೆಯಿತು. ಕೊಕ್ಕರ್ಣೆಯೂ ಸೇರಿದಂತೆ ಸುಮಾರು ೨೦೦ ಎಕ್ರೆ ಅರಣ್ಯ ಇಲಾಖೆಯ ಭೂಮಿಯನ್ನು ನೂರಾರು ಮಂದಿ ಕೊರಗ ಸಮುದಾಯದ ಚಳುವಳಿಗಾರರು ಪ್ರವೇಶಿಸಿದರು. ಆದರೆ, ಅಲ್ಲಿ ಆಗಲೇ ಪೋಲೀಸರು ಗನ್ ಹಿಡಿದು ನಿಂತಿದ್ದರು. ಅವರಿಗೆ ಹೆದರದೆ ನಿಂತ ಹೆಂಗಸರು ಮತ್ತು ಗಂಡಸರ ಕೆಚ್ಚಿಗೆ ಬೆದರಿದ ಸರಕಾರ ಸುರಾಲ ದೇವಸ್ಥಾನದಲ್ಲಿ ಆಗಿನ ಶಾಸಕರಾದ ಜಯಪ್ರಕಾಶ ಹೆಗ್ಡೆಯವರ ನೇತೃತ್ವದಲ್ಲಿ ಮಾತುಕತೆಗೆ ಇವರನ್ನು ಆಹ್ವಾನಿಸಿತು. ಎಲ್ಲೆಲ್ಲಿ ದರ್ಕಾಸ್ತು ಭೂಮಿ ಇದೆ ಎಂದು ಪರಿಶೀಲಿಸಿದ ಬಳಿಕ ಕೊರಗರು ಅರ್ಜಿ ಹಾಕಬಹುದೆಂದು ತೀರ್ಮಾನವಾಗಿ ಹೋರಾಟವು ಸ್ಥಗಿತಗೊಂಡಿತು. ಅದುವೇ ಸುರಾಲ ಚಳುವಳಿ. ಮೂರು ವರ್ಷ ಕಳೆದರೂ ಆಡಳಿತ ಯಂತ್ರ ಇದರತ್ತ ಲಕ್ಷ್ಯವನ್ನೇ ಹರಿಸದಿದ್ದುದು ಮುಂದೆ ಕಳತ್ತೂರು ಚಳವಳಿಗೆ ಕಾರಣವಾಯಿತು.

ಮುಂದೆ ಪಿ. ಗೋಕುಲ್‌ದಾಸ್ ಅವರ ನೇತೃತ್ವದಲ್ಲಿ ಒಂದು ಜನ ಜಾಗೃತಿ ಪಾದಯಾತ್ರೆ ಆರಂಭವಾಯಿತು. ಉಡುಪಿಯಿಂದ ಆರಂಭವಾಗಿ ಮಂಗಳೂರಿಗಾಗಿ ಕಾರ್ಕಳದ ಮೂಲಕ ಕಳತ್ತೂರಿಗೆ ಈ ಜಾಥಾ ತಲುಪಿತು. ೨೦೦೦ನೇ ಇಸವಿಯಲ್ಲಿ ಉಡುಪಿಯ ಕಳತ್ತೂರಿನ ಗೇರುಬೀಜದ ಹಾಡಿಯಲ್ಲಿ ಇವರು ಭೂಮಿ ಚಳುವಳಿಯನ್ನು ಆರಂಭಿಸಿದರು. ಪ್ರತಿ ಸಲ ತಮ್ಮ ಚಳುವಳಿಯ ಕುರಿತು ಮುನ್ಸೂಚನೆಯನ್ನು ನೀಡುತ್ತಿದ್ದವರು. ಈ ಬಾರಿ ಯಾವುದೇ ಮುನ್ಸೂಚನೆಯನ್ನು ನೀಡದೆ ರಹಸ್ಯವಾಗಿ ಕಾರ್ಯಾಚರಣೆ ಆರಂಭಿಸಿದರು. ಇದ್ದಕ್ಕಿದ್ದಂತೆ ೧೦೦೦ಕ್ಕೂ ಹೆಚ್ಚು ಮಂದಿ ಭೂಮಿಯನ್ನು ವಶಪಡಿಸಿ ರಾತ್ರೋ ರಾತ್ರಿ ೨೦೦ ಮನೆಗಳನ್ನು ನಿರ್ಮಿಸಿ, ಅಲ್ಲೇ ನೆಲೆಸಿದರು. ಆ ವರ್ಷ ೨೦೦ ಎಕರೆ ಪ್ಲಾಟಿನಲ್ಲಿ ಅವರು ಗೇರು ಬೀಜವನ್ನು ಕೊಯ್ದರು. ಗೇರುಬೀಜವನ್ನು ಕೊಯ್ಯಲು ಹೋದಾಗ ಅರಣ್ಯ ಇಲಾಖೆಯವರು ಹೆಂಗಸರಿಗೆ ಬಾಸುಂಡೆ ಬರುವ ಹಾಗೆ ಹೊಡದರು. ಕೇಸ್ ದಾಖಲಾಯಿತು. ಕೇಸ್ ನಿಲ್ಲದೆ ಬಂದ ಸಚಿವೆ ಮೋಟಮ್ಮನವರನ್ನು "ನಮಗೆ ಭಿಕ್ಷೆ ನೀಡಬೇಡಿ, ಭೂಮಿ ಕೊಡಿ" ಎಂದು ಹೆಂಗಸರು ಅವರನ್ನು ಒತ್ತಾಯಿಸಿದರು. ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು "ಭೂಮಿ ಕೊಟ್ಟರೆ ಏನು ಮಾಡುತ್ತೀರಿ?" ಎಂದೇ ಮರುಪ್ರಶ್ನಿಸಿದರು. ಆಗ "ನೀವು ಎಷ್ಟು ಭೂಮಿ ಕೊಟ್ಟಿದ್ದೀರಿ?" ಎಂದು ಮಹಿಳೆಯರು ತಿರುಗೇಟು ನೀಡಿದರು. ಕಡೆಗೂ ಕಾಗೋಡು ತಿಮ್ಮಪ್ಪನವರು ಬಂದಾಗ ಕೊರಗರಿಗೆ ಭೂಮಿ ನೀಡಬೇಕೆಂದು ಅವರು ಸೂಚಿಸಿದ್ದರಿಂದ ಅಲ್ಲಲ್ಲಿ ಭೂಮಿ ನೀಡುವ ಪ್ರಕ್ರಿಯೆ ಆರಂಭವಾಯಿತು. ನಂತರದಲ್ಲಿ ಮೂಡಬಿದ್ರೆಯ ಪಾಲಡ್ಕದಲ್ಲಿ, ಬಂಟ್ವಾಳ, ಪುತ್ತೂರಿನಲ್ಲಿ ಇಂತಹ ಧರಣಿಗಳು ಆಗಾಗ ನಡೆದವು. ಎಲ್ಲಾ ಚಳುವಳಿಗಳಲ್ಲೂ ಹೆಂಗಸರು ಹಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಈ ಚಳುವಳಿಗಳ ಕಾರಣವಾಗಿಯೇ ಸುಮಾರು ೧೭ ಸಾವಿರದಷ್ಟಿರುವ ಈ ಸಮುದಾಯದ ಕುಟುಂಬಗಳಲ್ಲಿ ಸುಮಾರು ೪೦೦ ಕುಟುಂಬಗಳಿಗೆ ಭೂಮಿ ಸಿಗುವಂತಾಯಿತು.

ಕೊರಗ ಸಂಘಟನೆಯ ಒಕ್ಕೂಟದ ಅಧ್ಯಕ್ಷೆಯಾಗಿ ಸುಶೀಲಾ ನಾಡಾರವರು ಸಂಘಟನೆಯನ್ನು ಹೆಚ್ಚು ಕ್ರಿಯಾಶೀಲವಾಗಿ ಇರಿಸಿದ್ದಾರೆ.

೫.೫.೧. ಭೂಮಿ ಚಳುವಳಿ ಬಗ್ಗೆ ಕೊರಗ ಸಂಘಟನೆಯ ನಾಯಕಿ ಗೌರಿ ಕೆಂಜೂರು ಅವರ ಅಭಿಪ್ರಾಯ:

ಭೂಮಿ ಚಳುವಳಿಯನ್ನು ನಾವು ಮೊದಲು ಆರಂಭಿಸಿದ್ದ ಕಿನ್ನಿಗೋಳಿಯಲ್ಲಿ ಸುರಾಲ ಚಳುವಳಿ ನಮ್ಮ ದೊಡ್ಡ ಚಳುವಳಿ. ಸುಮಾರು ೨೦೦ ಎಕ್ರೆ ಅಕೇಶಿಯಾ ಪ್ಲಾಂಟೇಶನ್ ಅತಿಕ್ರಮಿಸುವ ಪ್ಲಾನ್ ನಮ್ಮದಾಗಿತ್ತು. ಅಲ್ಲಿ ಪೊಲೀಸರು ಗನ್ ಹಿಡಿದು ನಿಂತಿದ್ದರೂ ನಾವು ಹೆದರಲಿಲ್ಲ. ಮತ್ತೆ ಜಯಪ್ರಕಾಶ ಹೆಗ್ಡೆಯವರೊಂದಿಗೆ ಮಾತುಕತೆ ನಡೆದಾಗ ಅವರು ಸರಕಾರಿ

ಜಾಗ ಹುಡುಕಿ ಅರ್ಜಿ ಹಾಕಬಹುದು ಎಂದರು. ಅದರಂತೆಯೇ ನಾವು ಜಾಗ ಹುಡುಕಿಕೊಂಡೆವು. ನಂತರ ಸರಕಾರದಿಂದ ಫಾಲೋ ಆಪ್ ಸಿಗಲಿಲ್ಲ. ಮುಂದೆ ಕಳಚ್ಚೂರು ಚಳುವಳಿ ಮಾಡಿದೆವು. ಅದು ನಡೆದದ್ದು ೨೦೦೦ನೇ ಇಸವಿಯಲ್ಲಿ. ಅದೂ ದೊಡ್ಡ ಮಟ್ಟದಲ್ಲಿ ಆಯಿತು. ೨೦೦ ಎಕ್ರೆ ಜಾಗದಲ್ಲಿ ರಾತ್ರಿಯೇ ೨೦೦ ಮನೆಗಳನ್ನು ಕಟ್ಟಿ ಅಲ್ಲೇ ನೆಲೆಸಿದೆವು. ಊರಿನವರು ಅಧಿಕಾರಗಳೆಲ್ಲ ನಮ್ಮ ವಿರುದ್ಧ ತಿರುಗಿಬಿದ್ದರು. ಊರಿನ ಫೋನ್ ಕಟ್ ಮಾಡಿ ಯಾರನ್ನೂ ಸಂಪರ್ಕ ಮಾಡದಂತೆ ತಡೆದರು. ಆರನೇ ದಿನ ಅಧಿಕಾರಿಗಳು ಬಂದಾಗ ಭೂಮಿ ಕೊಡದೆ ಇದ್ದರೆ ನಾವು ಇಲ್ಲಿಂದ ಕದಲಲಾರೆವು ಎಂದಾಗ, ಹೆಬ್ರಿಯ ರೇಂಜರ್ ಆಫೀಸಿಗೆ ನಮ್ಮನ್ನು ಹೊತ್ತೊಯ್ದರು. ನಾವು ಸುಮಾರು ೪೦ ಮಹಿಳೆಯರಿದ್ದೆವು. ಅಲ್ಲಿ ಯಾವ ಬೇಡಿಕೆಗೂ ಒಪ್ಪದ ಕಾರಣ ರಾತ್ರಿ ಒಂದು ಗಂಟೆಗೆ ನಮ್ಮನ್ನು ಉಡುಪಿ ಜೈಲಿಗೆ ಹಾಕಿದರು. ಗರ್ಭಿಣಿ ಹೆಂಗಸರು, ವೃದ್ಧೆಯರು, ಚಿಕ್ಕ ಮಗುವಿನ ತಾಯಂದಿರು ಅವರಲ್ಲಿದ್ದರು.

ನಾವು ದಲಿತರು ಎಂಬ ಕಾರಣಕ್ಕೆ ಜೈಲಿನಲ್ಲಿ ಇತರೆ ಕೈದಿಗಳು ನಮ್ಮನ್ನು ಶೋಷಣೆ ಮಾಡುತ್ತಿದ್ದರು. ಶೌಚಾಲಯವೂ ಸೇರಿದಂತೆ ಎಲ್ಲಾ ಶುಚಿಗೊಳಿಸುವ ಕೆಲಸವನ್ನು ನಮ್ಮಿಂದಲೇ ಮಾಡಿಸುತ್ತಿದ್ದರು. ಕಾರಣವಿಲ್ಲದೆ ನಮ್ಮ ಮೇಲೆ ಸಿಟ್ಟಿಗೇಳುವುದು, ಮೂದಲಿಸುವುದು ಸಾಮಾನ್ಯವಾಗಿತ್ತು. ಒಮ್ಮೆ ಶೌಚಾಲಯದಲ್ಲಿ ಮುಟ್ಟಿನ ಕಲೆಗಳು ಕಂಡುಬಂದಾಗ ಅದನ್ನು ಕೊರಗ ಹೆಂಗಸರೇ ಮಾಡಿದ್ದು ಎಂಬ ಆರೋಪ ಹೊರಿಸಿದರು. ಇದರಿಂದ ರೋಷ ಉಕ್ಕಿದ ಈ ಮಹಿಳೆಯರು ಆರೋಪ ಮಾಡಿದವರನ್ನು ಶೌಚಾಲಯಕ್ಕೆ ಕರೆದುಕೊಂಡು ಹೋಗಿ ಬಟ್ಟೆ ಎತ್ತಿ ತೋರಿಸಿ ಅದು ನಮ್ಮದಲ್ಲ ಎಂದು ಸಾಧಿಸಿ ತೋರಿಸಿದ ಪ್ರಸಂಗವೂ ನಡೆಯಿತು. ಜೈಲಿನ ಒಳಗೆ ಬಳೆ, ಸರ ಎಲ್ಲವನ್ನೂ ತೆಗೆಯಬೇಕಾದ ಪ್ರಸಂಗದಲ್ಲಿ ಅಕ್ಕಣಿ, ಬಾಬಿ, ಬೊಮ್ಮಿ ಮುಂತಾದ ಮಹಿಳೆಯರು ತುಂಬಾ ಗಲಾಟೆ ಮಾಡಿದರು. ಮಕ್ಕಳಿದ್ದವರಿಗೆ ಜೈಲಿನಲ್ಲಿ ತುಂಬಾ ಕಷ್ಟವಾಯಿತು. ಒಬ್ಬಳಿಗೆ ಮೂರು ತಿಂಗಳ ಮಗುವಿತ್ತು. ಅದಕ್ಕೆ ಉಬ್ಬಸ ಕೂಡಾ ಇತ್ತು. ಆ ಮಗುವಿಗೆ ಔಷಧಿ ಕೂಡಾ ಸರಿಯಾಗಿ ಕೊಡಲಾಗಲಿಲ್ಲ.

ನಮ್ಮಲ್ಲಿ ಗರ್ಭಿಣಿ ಹೆಂಗಸರಿದ್ದರು ಎಂಬ ಕಾರಣಕ್ಕೆ ೧೫ ದಿವಸದಲ್ಲಿ ನಮಗೆ ಜಾಮೀನು ಸಿಕ್ಕಿತು. ಬಳಿಕ ಬಿಡುಗಡೆಯಾಗಿ ಬಂದಾಗ ಮೊದಲು ಕೋಡಿಕಲ್‌ನಲ್ಲಿ, ಬಳಿಕ ಉಡುಪಿಯಲ್ಲಿ ನಮ್ಮನ್ನು ಸಮುದಾಯದವರು ಪ್ರೀತಿಯಿಂದ ಸ್ವಾಗತಿಸುವ ಸಮಾರಂಭವನ್ನು ಮಾಡಿದರು. ಆದರೆ ಉಡುಪಿಯಲ್ಲಿ ಇಡೀ ಊರೇ ಕೊರಗ ಸಮುದಾಯಕ್ಕೆ ಬಹಿಷ್ಕಾರ ಹಾಕಿತು. ಯಾವ ಸಾಮಾನು ತರಬೇಕಾದರೂ, ಹೆಬ್ರಿಗೆ ಹೋಗಬೇಕಾಗಿತ್ತು. ಬಸ್‌ಗಳಲ್ಲಿಯೂ ಸಹ ಕೂಡಾ ಪೋಸ್ಟರ್‌ಗಳನ್ನು ಹಾಕಿ ಪ್ರಚಾರ ಮಾಡಿ ಬಹಿಷ್ಕಾರದ ಶಿಕ್ಷೆ ನೀಡಿದರು.

ಆ ವರ್ಷ ಗೇರು ಬೀಜವನ್ನು ಕೊಯ್ಯಲು ಹೋದಾಗ ನಮಗೆ ಏನೂ ತೊಂದರೆಯಾಗಲಿಲ್ಲ. ನಂತರದ ವರ್ಷದಲ್ಲಿ ಅರಣ್ಯ ಇಲಾಖೆಯವರು ನಮಗೆ ಚೆನ್ನಾಗಿ ಹೊಡೆದರು. ಮೈಮೇಲೆಲ್ಲ ಬಾಸುಂಡೆ ಬಂತು. ಕೇಸ್ ಹಾಕಿದೆವು. ಡಿಸಿ ಆಫೀಸಿನೆದುರು ಧರಣಿ ಕುಳಿತೆವು. ಡಿ.ಸಿ ಕೇರ್ ಮಾಡಲಿಲ್ಲ. ೪೫ ದಿನ ಸತ್ಯಾಗ್ರಹ ಮಾಡಿದೆವು. ಬಹುತೇಕ ಮಹಿಳೆಯರೇ ಈ ಹೋರಾಟದಲ್ಲಿದ್ದದ್ದು. ದಿನಕ್ಕೆ ೫೦ ಜನರಂತೆ ತಂಡೋಪತಂಡವಾಗಿ ಧರಣಿ ಕುಳಿತೆವು. ಕೊನೆಗೆ ಕಾಗೋಡು ತಿಮ್ಮಪ್ಪನವರ ಆದೇಶದಂತೆ ೧೦೦೦ ಎಕರೆಯಷ್ಟು ಭೂಮಿ ನಮಗೆ ಸಿಕ್ಕಿತು. ಇಷ್ಟೆಲ್ಲ ಹೋರಾಟ ಮಾಡಿದ್ದರಿಂದಲೇ ನಮಗೆ ಭುಮಿ ಸಿಕ್ಕಿದ್ದು ಎಂದು ನಾನು ಖಂಡಿತವಾಗಿಯೂ ಹೇಳಬಲ್ಲೆ.

೫.೬. ವರ್ತಮಾನದಲ್ಲಿ ಕೊರಗರ ಸ್ಥಿತಿಗಳು:

ಸಮಾಜದಲ್ಲಿ ಕೊರಗರ ಸಾಂಸ್ಕೃತಿಕ ನೆಲೆಯನ್ನು ಗುರುತಿಸುವಲ್ಲಿ ವಿಫಲವಾಗಿ ಪ್ರಭುತ್ವದೊಂದಿಗೆ ಕೈ ಜೋಡಿಸಿ ಹೀನಾಯ ಬದುಕಿಗೆ ಕಾರಣವಾಗಿತ್ತು. ಈ ವ್ಯವಸ್ಥೆಯ ಶಿಕ್ಷಣ ಪದ್ಧತಿ ಮತ್ತು ಆದಿವಾಸಿ ಜೀವನ ಕ್ರಮ ಪರಸ್ಪರ ತದ್ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿವೆ. ಶಾಲೆಯ ವಾತಾವರಣ, ಭಾಷೆ, ಪಠ್ಯವಿಚಾರ, ಶಿಕ್ಷಕರು, ಉಡುಗೆ ತೊಡುಗೆ ಎಲ್ಲವು ಮೂಕ ವೇದನೆಯನ್ನು ಸೃಷ್ಟಿಸಿದೆ. ಶಾಲೆಯಲ್ಲಿ ಮಕ್ಕಳು ಇರಬೇಕಾದರೆ ಶಾಲೆಯೂ ನಮ್ಮದೇ ಭಾಗವಾಗಿರುತ್ತದೆ. (ಇತರೆ ಸಮಾಜದವರ) ಸಹಪಾಠಿಗಳ ಲವಲವಿಕೆ, ಆರೋಗ್ಯ ಸ್ಥಿತಿ, ಮಾನಸಿಕ ಸ್ಥಿತಿ, ನಮ್ಮಲ್ಲಿ ಸಾಧ್ಯವಿಲ್ಲದ ವಾತಾವರಣದಿಂದಾಗಿ ಕೊರಗರ ಮಕ್ಕಳೊಂದಿಗೆ ಅಂತರ ಏರ್ಪಡುತ್ತದೆ. ನನಗೆ ಸಾಧ್ಯವಿಲ್ಲ ಎಂಬ ಮುನ್ಸೂಚನೆ ಮೂಡುವಂತೆ ಪ್ರೇರೇಪಿಸುತ್ತದೆ. ಕೊರಗರು ಈ ವ್ಯವಸ್ಥೆ ಭಾಗವೆಂದೂ ಎಲ್ಲೂ ಅನಿಸದಿರುವುದರಿಂದ ಅರ್ಧದಲ್ಲೇ ಶಾಲೆ ಬಿಡಬೇಕಾಗುತ್ತದೆ. ಕೊರಗರು ಕಲಿಯುವುದೇ ಇಲ್ಲ ಎಂಬ ಧೋರಣೆ ಬೆಳೆದು ಆರೋಪಕ್ಕೆ ಗುರಿಯಾಗುತ್ತಾರೆ. ನೈಜ ಕಾರಣಗಳತ್ತ ಗಮನ ಹರಿಸುವ ಪ್ರಯತ್ನದ ಪ್ರಜ್ಞೆ ಪ್ರಭುತ್ವದಲ್ಲಿ ಕಾಣುವುದಿಲ್ಲ. ಪರ್ಯಾಯವಾಗಿ ವಿದ್ಯಾರ್ಥಿ ವೇತನ, ಪ್ರೋತ್ಸಾಹ ವೇತನ, ಹೆತ್ತವರಿಗೆ ವಿಶೇಷ ಭತ್ಯೆ, ಸಮವಸ್ತ್ರ, ಹಾಸ್ಟೇಲ್‌ಗಳು, ಆಶ್ರಮ ಶಾಲೆ, ಮಾದರಿ ಶಾಲೆಯ ಕಟ್ಟಡಗಳು ಮತ್ತು ಅನುದಾನದ ಲೆಕ್ಕದಲ್ಲಿ ಶಿಕ್ಷಣದ ಪರಿಕಲ್ಪನೆ ಕೊನೆಗೊಳ್ಳುತ್ತಿದೆ.

ಆಶ್ರಮ ಶಾಲೆಗಳು ಮತ್ತು ಹಾಸ್ಟೇಲ್‌ಗಳ ಕಟ್ಟಡದೊಳಗೆ ನಿಯೋಜನೆಯ ಶಿಕ್ಷಕರು, ಖಾಲಿ ಹುದ್ದೆ, ಸಾಮಾಗ್ರಿಗಳ ಕೊರತೆ, ನಿವೃತ್ತಿ ಶಿಕ್ಷಕರು ಹೀಗೆ ಮಾದರಿ ರೂಪುಗೊಳ್ಳುತ್ತಾ ಮಕ್ಕಳಿಗೆ ವಿತರಿಸುವ ಸಮವಸ್ತ್ರಗಳಲ್ಲಿ ಸಮಾನತೆ ಇದೆ, ಹೊರತು ಶಾಲೆಯೊಳಗೆ, ಊರಿನೊಳಗೆ ಸಮಾನತೆ ಇರುವುದಿಲ್ಲ. ಈಗ ಪ್ರಶ್ನೆಗಳು ಬರುವುದು ಈ ಸ್ಥಿತಿಯಲ್ಲಿ ನಮ್ಮ ಮಕ್ಕಳ ಗುಣಾತ್ಮಕ

ಶಿಕ್ಷಣದ ಮಾದರಿ ಏನು ? ಪ್ರಸ್ತುತ ಮಾದರಿ ಮತ್ತು ಗುಣಾತ್ಮಕ ಪರಿಕಲ್ಪನೆಯಲ್ಲಿ ಸಾಂಸ್ಕೃತಿಕ ಕ್ಷೇತ್ರಗಳ ಪರಿಗಣನೆ ಇದೆಯೇ ? ಸಮುದಾಯ ಒಟ್ಟು ವ್ಯವಸ್ಥೆ ಹಾಗೂ ಪ್ರಭುತ್ವಕ್ಕಿರುವ ಸವಾಲುಗಳೆಂದು ಭಾವಿಸಬೇಕಾಗುತ್ತದೆ.

ಆರೋಗ್ಯದ ಸ್ಥಿತಿಗಳ ವಿಶ್ಲೇಷಣೆ ಮಾಡುವಾಗ ಕೊರಗ ಜನರ ಶವಗಳ ಚಿತ್ರಣ ನೆನಪಾಗುತ್ತದೆ. ಆದಿವಾಸಿ ಬುಡಕಟ್ಟುಗಳಾದ ಕೊರಗ ಸಮುದಾಯದ ಹಿರಿಯರು ಮೂರ್‍ನಾಲ್ಕು ಸಂತತಿಯವರೆಗೂ ಬದುಕುತ್ತಿದ್ದರು. ಹಲ್ಲು ಉದುರುತ್ತಿರಲಿಲ್ಲ. ಕೂದಲು ಬಿಳಿಯಾಗುತ್ತಿರಲಿಲ್ಲ, ಊರುಕೋಲು ಬಳಸುತ್ತಿರಲಿಲ್ಲ, ದೃಷ್ಟಿದೋಷವಿರಲಿಲ್ಲ, ಆಸ್ಪತ್ರೆ, ಇಂಜೆಕ್ಷನ್ ತಿಳಿದಿರಲಿಲ್ಲ. ಆದರೆ ಇದೀಗ ಹುಟ್ಟುವಾಗಲೇ ಇಂಜೆಕ್ಷನ್, ದಿನನಿತ್ಯ ಮಾತ್ರಗಳು, ಒಂದು ತಪ್ಪಿದರೆ ಎರಡು ಸಂತತಿಯವರೆಗೆ ಬದುಕುವುದೇ ಕಷ್ಟ. ಮಾನಸಿಕ ಆಘಾತ, ಅಶಾಂತಿ, ಭಯ, ದೌರ್ಜನ್ಯದ ವಾತಾವರಣ ಆರೋಗ್ಯದ ಮೇಲೆ ಭೀಕರ ಪರಿಣಾಮ ಬೀರುತ್ತಿವೆ. ಆರೋಗ್ಯದ ಯೋಜನೆಗಳು ಕಾಯಿಲೆ ಪೀಡಿತರಿಗೆ ಸಿಗಬೇಕಾದರೆ ಜಾತಿ ಪ್ರಮಾಣ ಪತ್ರ, ವಾಸ್ತವ್ಯ ಪತ್ರ, ರೇಷನ್ ಕಾರ್ಡ್ ಈ ಎಲ್ಲಾ ದಾಖಲೆ ತಯಾರಾಗುವಷ್ಟರಲ್ಲಿ ಆತನ ಸಾವು ದಾಖಲಾಗುತ್ತದೆ. ಕೊರಗರಿಗೆ ಮೆಡಿಕಲ್ ಬಿಲ್ಲು ಪಾವತಿಸುವಷ್ಟು ಸಾಮರ್ಥ್ಯವಿಲ್ಲ. ಇಂತಹ ಯೋಜನೆ ಕನ್ನಡಿಯೊಳಗಿನ ಗಂಟು ಇದ್ದಂತೆ, ಆರೋಗ್ಯದಡಿಯಲ್ಲಿ ಅನುದಾನದಲ್ಲಿ ಕಾದರಿಸಿಕೊಂಡು ವರ್ಷದ ಅಂತ್ಯದಲ್ಲಿ ಕೊರಗರ ಮನೆಗಳಿಗೆ ವೈದ್ಯರ ದಂಡು ಹೋಗಿ ತಪಾಸಣೆ ಮಾಡುವುದು, ಸರಕಾರದ ವಾಹನದಲ್ಲಿ ಎಲ್ಲಾ ಕೊರಗರನ್ನೂ ಆಸ್ಪತ್ರೆಗೆ ಸಾಗಿಸುವುದು ಒಂದೇ ದಿನದ ಈ ಆಟವನ್ನು ನೋಡಿ ಕೊರಗರು ನರಳುತ್ತಿರುವುದು, ಕರೆದರೂ ಬಾರದ ಆರೋಗ್ಯ ಇಲಾಖೆ, ಇದೀಗ ದಿಢೀರನೆ ಮನೆಗೆ ಬರುವುದು ಆಸ್ಪತ್ರೆಗೆ ಸಾಗಿಸುವ ಕ್ರಿಮಿನಲ್ ಸಿದ್ಧಾಂತಗಳಿಂದ ಕೊರಗರ ಸಾವಿಗೆ ಪರಿಹಾರವಿಲ್ಲ. ಈ ಸ್ಥಿತಿಯಲ್ಲಿ ಕೊರಗರ ಉಳಿವಿನ ಪ್ರಶ್ನೆಯೇ ಎಲ್ಲರಿಗೂ ಸವಾಲಾಗಿದೆಯೆಂದು ಭಾವಿಸಲಾಗುತ್ತದೆ.

ಸರಕಾರ ಪ್ರತಿ ವರ್ಷ ಕೋಟಿಗಟ್ಟಲೆ ಹಣ ಮೀಸಲಿಡುವುದು ಖರ್ಚು ಮಾಡುವುದು ಸಂಪ್ರದಾಯವಾಗಿದೆ. ಕೊರಗರ ಮಾನಸಿಕ ಭಾವನಾತ್ಮಕ ಸ್ಥಿತಿಗಳು ಕೌಶಲ್ಯಗಳು ಒಂದು ಕಡೆಯಿದ್ದರೆ ಯೋಜನೆಗಳು ತರಾತುರಿ ಅನುಷ್ಠಾನದ ಗುರಿಸಾಧನೆ ಇನ್ನೊಂದು ಕಡೆಯಾಗುತ್ತದೆ. ಈ ಸಂದರ್ಭದಲ್ಲಿ ಸರಕಾರದ ಸಾಂಪ್ರದಾಯಿಕ ಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗುವುದಿಲ್ಲ. ಇದನ್ನು ಮನಗಂಡು ೧೯೯೩ ಆಗಸ್ಟ್ ೧೮ರಂದು ಐತಿಹಾಸಿಕ ರ‍್ಯಾಲಿ ನಡೆಸಿ ಸಮಗ್ರ ಅಧ್ಯಯನ ಮಾಡಿ ಯೋಜನೆ ರೂಪಿಸಬೇಕೆಂದು ಸರಕಾರವನ್ನು ಒತ್ತಾಯಿಸಿದ ಪರಿಣಾಮವಾಗಿ ಡಾ. ಮಹಮ್ಮದ್ ಫೀರ್ ವರದಿ ತಯಾರಿಸಲಾಯಿತು. ಡಾ. ಫೀರ್

ವರದಿಯಲ್ಲಿ ಹೇಳಿರುವಂತೆ ಸರಕಾರಿ ಯೋಜನೆಗಳು ಕೊರಗರನ್ನು ಸದಾ ಪರಾವಲಂಬಿಗಳಾಗುವಂತೆ ಮಾಡಿದೆಯೆಂದು ಜೊತೆಗೆ ಕೊರಗರು ಅಭಿವೃದ್ಧಿ ಪೂರ್ವ ಹಂತದಲ್ಲಿರುವುದರಿಂದ ಯೋಜನೆಗಳು ಅವರ ಸಹ ಭಾಗಿತ್ವದೊಂದಿಗೆ ತಯಾರಾಗಬೇಕು ಹಾಗೂ ಪೂರ್ವ ಹಂತದ ತರಬೇತಿಗಳನ್ನು ಹೊಂದಿರಬೇಕು ಮತ್ತು ಧೀರ್ಘಕಾಲೀನ ಉದ್ದೇಶದ ಯೋಜನೆಗಳಾಗಬೇಕೆಂದು ಸಲಹೆ ನೀಡುವುದರೊಂದಿಗೆ ಕೊರಗರ ಅಭಿವೃದ್ಧಿ ಮಾಚರಿಯನ್ನು ನೀಡಲಾಗಿದೆ.

ಸರಕಾರಿ ಇಲಾಖೆಗಳು ಮಾತ್ರ ಈ ಮಣ್ಣಿನ ಮೂಲ ನಿವಾಸಿಗಳಾದ ಕೊರಗರಿಗೆ ವಾಸ್ತವ್ಯ ಧೃಡೀಕರಣ ಪತ್ರ, ಜಾತಿ ಪತ್ರ, ಹಕ್ಕು ಪತ್ರ ಹೀಗೆ ಹೊಸ ಲೋಕವನ್ನು ಸೃಷ್ಟಿಸಿ ಇತರೆ ವರ್ಗದವರ ಮನೆ ಮನೆ ಕಛೇರಿ ಬಾಗಿಲುಗಳಲ್ಲಿ ಅಲೆದಾಡಿಸಿ ಅವರ ಪ್ರಶ್ನೆಗಳಿಗೆ ಉತ್ತರವಿಲ್ಲದೆ, ನಮ್ಮ ಸ್ಥಿತಿಯ ಪರಿಕಲ್ಪನೆ ಇಲ್ಲದ ಜನರೊಂದಿಗೆ ವ್ಯವಹಾರ ಮಾಡುವಲ್ಲಿ ಸಂಪೂರ್ಣ ಸೋತು ಹೋಗಿ ನಿರಾಸೆ, ಜಿಗುಪ್ಸೆ ಹುಟ್ಟಿಸಿದೆ. ಅಭಿವೃದ್ಧಿ ಪ್ರಕ್ರಿಯೆಯಿಂದ ಹೊರಗುಳಿಯುವಂತಾಗಿದೆ. ಅನನ್ಯತೆಯ ಪರಿಕಲ್ಪನೆ ಇಲ್ಲದ ಯೋಜನೆಗಳು ಬದಲಾಗದೆ ಕೊರಗರ ಅಸ್ತತ್ವ ಸಾಧ್ಯವೇ? ಉತ್ತರವಿಲ್ಲದ ತಟಸ್ಥ ವ್ಯವಸ್ಥೆಯಲ್ಲಿ ನಾವಿದ್ದೇವೆ ಎಂದು ಕೊರಗರು ತಮ್ಮ ಅಸಹಾಯಕತೆಯನ್ನು ತೋಡಿಕೊಳ್ಳುತ್ತಾರೆ.

೫.೭. ಸ್ವಯಂ ಉದ್ಯೋಗ :

ಸಾಂಪ್ರದಾಯಿಕ ಮೌಲ್ಯಗಳನ್ನು ಹೊಂದಿ ಅನ್ಯೋನ್ಯವಾಗಿದ್ದ ಜನರನ್ನು ಛಿದ್ರಛಿದ್ರಗೊಳಿಸಿ ಅತಂತ್ರ ಸ್ಥಿತಿಗೆ ನೂಕಲ್ಪಟ್ಟ ವ್ಯವಸ್ಥೆಯನ್ನು ಜಾದು ಅಥವಾ ಮಾಯ ಮಾಡಿ ಬದಲಾವಣೆ ತರಲು ಸಾಧ್ಯವಿಲ್ಲ. ಸ್ವಯಂ ಉದ್ಯೋಗಕ್ಕೆ ಏಕಕಾಲದಲ್ಲಿ ೩ ಕೋಟಿ ಮಾಡಿದ ಎಸ್.ಸಿ./ಎಸ್.ಟಿ. ನಿಗಮದ ಕಾರ್ಯ ವೈಖರಿಯನ್ನು ವಿಶ್ಲೇಷಿಸಿದಾಗ ಪ್ರಭುತ್ವದ ಕೊರತೆ ಪ್ರತಿಬಿಂಬಿಸುತ್ತದೆ. ಕಂಪ್ಯೂಟರ್ ತರಬೇತಿ, ಆಟೋರಿಕ್ಷಾ ಇನ್ನಿತರ ಸ್ವಯಂ ಉದ್ಯೋಗದ ಯೋಜನೆಗಳು ಸ್ಪಷ್ಟ ರಹಿತ ಸ್ಥಿತಿಯಲ್ಲಿ ಇರುವುದು ಖಚಿತವಾಗುತ್ತದೆ. ಅಂದಾಜು ಪ್ರಕಾರ ಸ್ವಯಂ ಉದ್ಯೋಗ ತರಬೇತಿಗಳೂ ಒಬ್ಬರಿಗೆ ೫–೬ ವಿಷಯಗಳಲ್ಲಿ ತರಬೇತಿ ನಡೆದಿರಬಹುದು. ಪ್ರತಿವರ್ಷ ಬೇರೆ ಬೇರೆ ವಿಷಯಗಳಲ್ಲಿ ತರಬೇತಿ ಮತ್ತು ಕೊರಗ ಜನರು ಶಿಷ್ಯವೇತನಕ್ಕಾಗಿ ತರಬೇತಿ ಪಡೆದಂತಾಗಿದೆ ಎಂಬುದು ಸ್ವಯಂ ಉದ್ಯೋಗ ಯೋಜನೆಯ ಪ್ರತಿಫಲದ ಬಗೆಗೆ ಕೊರಗರ ಅಭಿಪ್ರಾಯ.

೫.೮. ಸಂಘಟನಾ ಪ್ರಕ್ರಿಯೆ :

ಬುಡಕಟ್ಟು ಸಂಪ್ರದಾಯದಂತೆ ಕೊರಗ ಸಮುದಾಯದ ಮೇಲೆ ಅಪಾರ ಪ್ರೀತಿ ಗೌರವಗಳನ್ನು ಹೊಂದಿರುವ ನಾವು ಸಮಾಜದ ಒತ್ತಡಕ್ಕೆ ಸಿಲುಕಿ ಸಾಮಾಜಿಕ ಕಟ್ಟುಪಾಡುಗಳಿಗೆ ಬಲಿಯಾಗಿ ಪರಸ್ಪರ ಅಪನಂಬಿಕೆ, ಅಗೌರವ ಸ್ಥಿತಿ ನಿರ್ಮಾಣವಾಗಿದ್ದ ಸಂಘಟನೆಗಳು ಬೆಳೆದು, ಹಕ್ಕು ಪ್ರತಿಪಾದನಾ ರೀತಿಯಲ್ಲಿ ಜನರ ಅಭಿವೃದ್ಧಿಗಾಗಿ ಪರಸ್ಪರ ಸರಕಾರದಿಂದ ನಿರಂತರ, ಅವಿರತ ಪ್ರಯತ್ನದ ಫಲವಾಗಿ ಅನನ್ಯತೆಯನ್ನು ಗುರುತಿಸಿಕೊಂಡು ಅಸ್ತಿತ್ವವನ್ನು ಉಳಿಸುವ ಪ್ರಯತ್ನಗಳು ಕೊರಗರಲ್ಲಿ ನಡೆಯುತ್ತಿವೆ. ಇದರಿಂದ ಎಲ್ಲರೂ ಸಮಾನತೆಯಿಂದ ಬೆರೆಯುವ ವಾತಾವರಣ ಸೃಷ್ಟಿಯಾಯಿತು. ಸಂಘಟನಾ ಪ್ರಕ್ರಿಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಗಮನಾರ್ಹವಾಗಿದೆ. ಪರಿಣಾಮವಾಗಿ ಚಳುವಳಿಗಳನ್ನು ತೀವ್ರಗೊಳಿಸಲು ಸಾಧ್ಯವಾಯಿತು. ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಅಲ್ಲಲ್ಲಿ ಕೊರಗ ಸಂಪ್ರದಾಯಕ್ಕಾಗಿ ಅವಿರತವಾಗಿ ಶ್ರಮಿಸುವುದರಿಂದ ಬುಡಕಟ್ಟುಗಳಾದ ಕೊರಗರಿಗೆ ದೊಡ್ಡ ಬಲ ಬಂದಂತಾಗಿದೆ. ಆದರೆ ಹಲವಾರು ಸಂಸ್ಥೆಗಳು ವಿಭಿನ್ನ ಮಾದರಿಯಲ್ಲಿ ಕೆಲಸ ಮಾಡುವ ನಿಲುವಿನಿಂದ ಭವಿಷ್ಯದಲ್ಲಿ ಕೊರಗರಿಗೆ ಅನನ್ಯತೆಗೆ ಕಷ್ಟಕರವಾಗುವ ಸೂಚನೆಗಳಿದ್ದು ವಿಭಿನ್ನ ಕಾರ್ಯತಂತ್ರಗಳಿದ್ದರೂ ಒಂದು ವೇದಿಕೆಗೆ ಬರುವ ಅವಕಾಶಗಳೇ ಮುಂದಿರುವ ಸವಾಲುಗಳು.

೫.೯. ಕೊರಗರು ಮತ್ತು ಆಧುನಿಕತೆಯ ಮುಖಾಮುಖಿ :

೫.೯.೧ ಕೊರಗರ ಕುಲಕಸುಬು, ಆರ್ಥಿಕತೆ ಮತ್ತು ಆಧುನಿಕತೆ :

ಇತರೆ ಗಿರಿಜನ ಸಮುದಾಯಗಳಂತೆ ಕೊರಗರೂ ಸಹ ಪ್ರಕೃತಿ ಪ್ರಿಯರಾಗಿದ್ದು, ಪ್ರಕೃತಿಯೊಡನೆ ಹೊಂದಾಣಿಕೆಯಿಂದ ಬದುಕುವವರು. ಕೊರಗರು ಜೀವನ ನಿರ್ವಹಣೆಗಾಗಿ ಕುಲಕಸುಬುಗಳಾದ ಜೇನು ಸಂಗ್ರಹಿಸುವ, ಬುಟ್ಟಿ ಹೆಣೆಯುವ ಮತ್ತು ಹಗ್ಗ ಮಾಡುವ ಕೆಲಸ ಮಾಡುತ್ತಾರೆ ಮತ್ತು ಇದು ಕೊರಗರ ಆರ್ಥಿಕತೆಯ ಮೂಲವಾಗಿತ್ತು. ಬುಟ್ಟಿ ಹೆಣೆಯಲು ಬೇಕಾದ ಬಿಳಲುಗಳನ್ನು ಕಾಡಿನಲ್ಲಿ ಕಡಿಯುತ್ತಿದ್ದ ಸಂದರ್ಭದಲ್ಲಿ ಬೇಕಾ ಬಿಟ್ಟಿ ಕಡಿಯದೆ ತಮಗೆ ಬೇಕಾದಷ್ಟು ಮಾತ್ರ ಕಡಿದು, ಅವು ಮುಂದಿನ ದಿನಗಳಲ್ಲಿ ಚಿಗುರುವಂತೆ ಜಾಗೃತೆಯಿಂದ ಅದನ್ನು ಅವರು ಕಡಿಯುತ್ತಾರೆ. ಆದರೆ ಆಧುನಿಕತೆಯ ನೆಪದಲ್ಲಿ ಇಂದು ಕಾಡು ನಾಶವಾಗುತ್ತಿದ್ದು ಕೊರಗರ ಕುಲಕಸುಬಿಗೆ ಬೇಕಾದ ಕಚ್ಚಾವಸ್ತು (ಬಿಳಲು) ಸಿಗುತ್ತಿಲ್ಲ. ಅರಣ್ಯ ಇಲಾಖೆ ಕೂಡಾ ಬಿಳಲು ಕಡಿಯದಂತೆ ನಿರ್ಬಂಧ ಹೇರುತ್ತಿದೆ. ಜಾಗತೀಕರಣ ಮತ್ತು ಆಧುನಿಕತೆಯ ಕಾರಣದಿಂದ ಕೊರಗರ ಉತ್ಪನ್ನಗಳಾದ ಹಗ್ಗ ಮತ್ತು ಬುಟ್ಟಿಗೆ ಪರ್ಯಾಯವಾದ ಉತ್ಪನ್ನಗಳು ಮಾರುಕಟ್ಟೆಗೆ ಬರುತ್ತಿದ್ದು, ಕೊರಗರ ಉತ್ಪನ್ನಗಳಿಗೆ ಬೇಡಿಕೆ ಇಲ್ಲವಾಗಿದೆ. ಇದರಿಂದ ಕೊರಗರ

ಜೀವನ ದುಸ್ತರವಾಗಿದೆ. ಆಧುನಿಕತೆಗೋಸ್ಕರ ಸಾವಿರಾರು ವರ್ಷಗಳಿಂದ ಕಾಡಿನಲ್ಲಿ ವಾಸಿಸುತ್ತಿದ್ದ ಆದಿವಾಸಿಗಳನ್ನು ಒಕ್ಕಲೆಬ್ಬಿಸುವ ಕಾರ್ಯ ನಡೆಯುತ್ತಿದೆ.

೫.೯.೨. ಕೊರಗರ ಜೀವನ ಕ್ರಮ ಮತ್ತು ಆಧುನಿಕತೆ :

ಕೊರಗರು ಅತೀ ಸರಳ ಜೀವನ ನಡೆಸುವವರು. ಇವರು ಇಂದಿನವರೆಗೆ ಯಾವುದೇ ಕ್ರಿಮಿನಲ್ ಕೃತ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿಲ್ಲ. ಇವರು ಮತ್ತು ಇತರೆ ಬುಡಕಟ್ಟು ಸಮುದಾಯಗಳಂತೆ ಪ್ರಕೃತಿಯ ನಾಶ ಮಾಡದೆ ಪ್ರಕೃತಿಯೊಡನೆ ಹೊಂದಾಣಿಕೆಯಿಂದ ಬದುಕುತ್ತಿದ್ದಾರೆ. ಇವತ್ತು ಇಡೀ ಜಗತ್ತು ಆದಿವಾಸಿಗಳ ಜೀವನ ಕ್ರಮದ ಕಡೆಗೆ ಗಮನ ಹರಿಸಿದ್ದರೆ ಕೊರಗ ಸಮುದಾಯದಂತಹ ಆದಿವಾಸಿಗಳು ಜಾಗತೀಕರಣ, ಆಧುನಿಕತೆ ಮತ್ತು ಮುಖ್ಯವಾಹಿನಿಗೆ ಹೋಗುವ ಪ್ರಕ್ರಿಯೆಯಲ್ಲಿ ತಮ್ಮ ಜೀವನ ಕ್ರಮವನ್ನು ತೊರೆದು ಬೇರೆಯವರ ಜೀವನ ಶೈಲಿಗೆ ಮಾರು ಹೋಗುತ್ತಿರುವುದು ವಿಷಾದನೀಯ. ಈ ಆಧುನಿಕತೆಯ ಸೋಂಕಿನಿಂದಾಗಿ ಕೊರಗರು ಇಂದು ಆಡಂಬರದ ಜೀವನದ ಕಡೆಗೆ ವಾಲುತ್ತಿದ್ದಾರೆ. ಬೇರೆಯವರನ್ನು ಅನುಕರಣೆ ಮಾಡುವ ಭರದಲ್ಲಿ ಸಾಲ ಮಾಡಿಯಾದರೂ ವೈಭವದ ಆಚರಣೆಗಳ ಕಡೆಗೆ ಗಮನ ಹರಿಸುತ್ತಿರುವುದನ್ನು ಕಾಣುತ್ತಿದ್ದೇವೆ.

೫.೯.೩. ಕೊರಗರ ಶಿಕ್ಷಣ ಮತ್ತು ಆಧುನಿಕತೆ :

ಶಾಲೆಗೆ ಸೇರಿದ ಮಕ್ಕಳಲ್ಲಿ ಶೇ.೫೦ – ೬೦ ಮಕ್ಕಳು ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೆ ಶಾಲೆ ಬಿಡುವುದು ಕೊರಗ ಸಮುದಾಯದವರ ಶಿಕ್ಷಣದ ಪರಿಸ್ಥಿತಿಯ ಗಂಭೀರತೆಯನ್ನು ಸೂಚಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಹಲವರು ಡಿಗ್ರಿ ಪಡೆದದ್ದು ಆಕಸ್ಮಿಕ ಎಂದೇ ಹೇಳಬೇಕಾಗುತ್ತದೆ. ಕೊರಗರು ಶಿಕ್ಷಣದಲ್ಲಿ ಅಭಿವೃದ್ಧಿ ಸಾಧಿಸದೇ ಇರುವುದಕ್ಕೆ ಕೊರಗರ ಮೇಲೆ ಹೇರಲ್ಪಟ್ಟ ಅಜಲು ಒಂದು ಮುಖ್ಯ ಕಾರಣವಾದರೆ, ಹೊಂದಿಕೊಳ್ಳಲಾಗದ ಶಾಲೆಯ ಹೊಸ ವಾತಾವರಣ ಎರಡನೆಯ ಕಾರಣ. ಮನೆಯ ಸಾಂಪ್ರದಾಯಿಕ ಪರಿಸರದಲ್ಲಿ ಬೆಳೆದ ಕೊರಗ ಮಕ್ಕಳು, ತಮ್ಮ ಪಾಲಿಗೆ ಎದುರಾದ ಶಾಲೆಯ ಆಧುನಿಕ ಪರಿಸರಕ್ಕೆ ಒಗ್ಗಿಕೊಳ್ಳಲಾಗದ ಶಿಕ್ಷಣದಿಂದ ವಿಮುಖರಾಗಿದ್ದಾರೆ. ಕೊರಗ ಮಕ್ಕಳ ಶಿಕ್ಷಣದ ಸಂದರ್ಭದಲ್ಲಿಯೂ ಅವರು 'ಪ್ರಿಮಿಟಿವ್ ಟ್ರೈಬಲ್ ಗ್ರೂಪ್' ಅನ್ನುವ ಪರಿಕಲ್ಪನೆಯನ್ನು ಸರಕಾರ ಪರಿಗಣಿಸಬೇಕಾಗಿದೆ. ಯಾಕೆಂದರೆ ಉಳಿದ ಸಮುದಾಯಗಳಿಗೂ, ಕೊರಗರಿಗೂ ಶಿಕ್ಷಣ ಪಡೆಯುವಿಕೆಯಲ್ಲಿ ತಲೆಮಾರುಗಳ ಅಂತರವಿದೆ. ಕೊರಗರಲ್ಲಿ ಪಿ.ಯು.ಸಿ. ಡಿಗ್ರಿ ಪಡೆದವರು ಸಹ ಪ್ರತಿ ಹಂತದಲ್ಲಿಯೂ ಈ ಅಂತರದ ಕಹಿ ಅನುಭವಗಳನ್ನು ಅನುಭವಿಸಿದ್ದಾರೆ ಎಂದು ಕೊರಗರು ಅಭಿಪ್ರಾಯ ಪಡುತ್ತಾರೆ.

೫.೯.೪. ಕೊರಗರ ಆರೋಗ್ಯ ಮತ್ತು ಆಧುನಿಕತೆ :

ಕೊರಗ ಸಮುದಾ ಅದರಲ್ಲೂ ಮಹಿಳೆಯರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಪೌಷ್ಠಿಕ ಆಹಾರದ ಕೊರತೆ ಇದಕ್ಕೆ ಮುಖ್ಯ ಕಾರಣ. ಆಧುನಿಕತೆಯ ಮುಖಾಮುಖಿಯ ಭರದಲ್ಲಿ ಕೊರಗರ ಕುಲಕಸುಬಿಗೆ ಬೇಕಾದ ಕಚ್ಚಾವಸ್ತುಗಳು ಸಿಗದಿದ್ದಾಗ ಮತ್ತು ಉತ್ಪನ್ನಗಳಿಗೆ ಬೇಡಿಕೆ ಕುಸಿದಾಗ ದಿನದ ಒಪ್ಪೊತ್ತಿನ ಊಟಕ್ಕೂ ಪರದಾಟ ಮಾಡಬೇಕಾಗಿದೆ.. ಒಟ್ಟನಲ್ಲಿ ಸರಳ ಮತ್ತು ಸಾಂಪ್ರದಾಯಿಕ ಜೀವನ ಮಾಡುತ್ತಿರುವ ಕೊರಗ ಸಮುದಾಯ ಇಂದು ಆಧುನಿಕತೆಯೊಡನೆ ಮುಖಾಮುಖಿಯಾಗುತ್ತಿರುವ ಸಂದರ್ಭದಲ್ಲಿ ಬೇರೆಯವರ ಆಚರಣೆಗಳು, ನಂಬಿಕೆಗಳು, ಜೀವನ ಕ್ರಮಗಳನ್ನು ನಮ್ಮದು ಎಂದು ಭ್ರಮಿಸುವ ಗೊಂದಲದಲ್ಲಿದ್ದಾರೆ ಎಂದು ಹೇಳಬಹುದು. ಕೊರಗರ ಸುತ್ತ ಇರುವ ಸಮಾಜಗಳು ಆಧುನಿಕ ಮತ್ತು ವೈಭಯುತ ಜೀವನ ಮಾಡುತ್ತಿರುವ ಸಂದರ್ಭದಲ್ಲಿ ಅವರನ್ನು ಅನುಕರಣೆ ಮಾಡುವ ತರಾತುರಿಯಲ್ಲಿ ಕೊರಗರು ಇದ್ದಂತೆ ಕಾಣುತ್ತಿದೆ. ಹಾಗೆ ಆದರೆ ಕೊರಗ ಸಮುದಾಯ ಇಡೀ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಾಗುತ್ತದೆ. ಹೊರಗಿನಿಂದ ಹೇರಲ್ಪಟ್ಟ ಆಧುನಿಕತೆ ಮತ್ತು ಅಭಿವೃದ್ಧಿಯನ್ನು ಕೊರಗರು ಅರಗಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಅಜಲಿನಿಂದ ಅಂತರ್ಮುಖಿಗಳಾದ ಸಮುದಾಯದ ಜನರನ್ನು ಮತ್ತಷ್ಟು ಕುಬ್ಜರನ್ನಾಗಿಸುತ್ತದೆ. ಹೇರಲ್ಪಟ್ಟ ಆಧುನಿಕತೆಯನ್ನು ಅರ್ಥ ಮಾಡಿಕೊಳ್ಳಲಾಗದೆ ಅದನ್ನು ಅನುಭವಿಸುವಲ್ಲಿ ಮತ್ತು ಅನುಕರಣೆ ಮಾಡುವಲ್ಲಿ ಕೊರಗರು ಸೋಲುತ್ತಿದ್ದಾರೆ. ಯಾಕೆಂದರೆ ಆಧುನಿಕತೆ ಮತ್ತು ಅಭಿವೃದ್ಧಿಯ ಮೂಲ ಕೊರಗರಿಗೆ ಹೊಸದಾಗಿದೆ. ಹೀಗಾಗಿ ಕೊರಗರ ಅಭಿವೃದ್ಧಿ ಎಂದರೆ ಸಮಾಜದ ಅಂತಃಸತ್ವದಿಂದ ಹೊರಹೊಮ್ಮಿದ ಅಭಿವೃದ್ಧಿಯಾಗಿರಬೇಕು, ಸಮಾಜದ ಅನನ್ಯತೆ ಮತ್ತು ಮೌಲ್ಯಗಳ ಆಧಾರದ ಮೇಲೆ ಬೆಳೆದರೆ ಮಾತ್ರ ಕೊರಗರನ್ನು ಅಭಿವೃದ್ಧಿ ಪತದಲ್ಲಿ ಮುನ್ನಡೆಸುವುದು ಸಾಧ್ಯ. ಈ ರೀತಿಯ ಅನನ್ಯತೆ ಮತ್ತು ಮೌಲ್ಯಗಳನ್ನು ಮೈಗೂಡಿಸಿಕೊಂಡು ತನ್ನ ಸಂಸ್ಕೃತಿ, ಧರ್ಮ, ಜೀವನ ಕ್ರಮಗಳ ಬಗ್ಗೆ ಸ್ಪಷ್ಟ ನಿಲುವುಗಳೊಂದಿಗೆ ಬೆಳೆದ ಕೊರಗ ಸಮುದಾಯ ಆಧುನಿಕತೆಯೊಡನೆ ಮುಖಾಮುಖಿಯಾದಾಗ ಸಮಾಜದಲ್ಲಿ ಯಾವುದೇ ಗೊಂದಲಗಳು ಇರಲು ಸಾಧ್ಯವಿಲ್ಲ. ಆಗ ಕೊರಗರ ನಿಜವಾದ ಅಭಿವೃದ್ಧಿಯ ಅಧ್ಯಾಯ ಪ್ರಾರಂಭವಾಗುತ್ತದೆ. ಕೊರಗರಿಗೆ ಸಾಂಘಿಕ ಪ್ರಯತ್ನದಿಂದ ಹೇರಲ್ಪಟ್ಟ ಅಜಲು ನಿಷೇಧ ಆಗುವ ಮೂಲಕ ಸಮಾಜದಲ್ಲಿ ಆ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದೆ. ಅದಕ್ಕೊಂದು ಸ್ಪಷ್ಟತೆಯನ್ನು ಕಂಡುಕೊಳ್ಳುತ್ತಾ ಮುಂದುವರಿಯಬೇಕಾಗಿದೆ ಎಂಬುದು ಕೆಲ ಕೊರಗ ಹಿರಿಯರ ಅಭಿಪ್ರಾಯ. ಇಂತಹ

ಸಂದರ್ಭದಲ್ಲಿ ಕೊರಗ ಸಮುದಾಯವು ಉತ್ತರ ಕಂಡು ಕೊಳ್ಳಲೇಬೇಕಾದ ಕೆಲವು ಪ್ರಶ್ನೆಗಳು ಉದ್ಭವಿಸುತ್ತವೆ.

- ಕೊರಗ ಸಮುದಾಯದ ಅಂತಃಸತ್ವದಿಂದ ಹೊಮ್ಮಿದ ಅಭಿವೃದ್ಧಿಯ ಮಾದರಿ ಯಾವುದು ?
- ಕೊರಗರ ಅನನ್ಯತೆಯ ಮಾದರಿ ಯಾವುದು ?
- ಕೊರಗ ಸಮುದಾಯದ ಅಂತಃಸತ್ವದ ಎಳೆಗಳು ಯಾವುವು ?
- ಕೊರಗ ಸಮುದಾಯದ ಮಾನವ ಸಂಪನ್ಮೂಗಳ ಅಭಿವೃದ್ಧಿ ಎಂದರೇನು.

ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡು ಕೊರಗ ಸಮುದಾಯವು ಬರುವ ದಿನಗಳಲ್ಲಿ ಇತರೆ ಸಮುದಾಯಗಳಿಂದ ಮಾದರಿಯಾಗಿ ಬೆಳೆಯಲಿದೆ ಅನ್ನುವ ಭರವಸೆ ಮೂಡಬೇಕಾಗಿದೆ. ಸಮಾಜದ ಅಭಿವೃದ್ಧಿಗೆ ಪೂರಕವಾದ ಮೌಲ್ಯಗಳು, ಧರ್ಮ, ಸಂಸ್ಕೃತಿ, ಆಚರಣೆಗಳನ್ನು ಮೈಗೂಡಿಸಿಕೊಂಡು ಕೊರಗ ಸಮುದಾಯ ಅಭಿವೃದ್ಧಿಯೆಡೆಗೆ ಸಾಗಬೇಕಾಗಿದೆ.

ಅಡಿ ಟಿಪ್ಪಣಿ:

೦೧ ಬಾಬು ಕೊರಗ ಪಾಂಗಾಳ, ಕೊರಗರ ಅಜಲು (ಒಂದು ವಿಶ್ಲೇಷಣೆ) ೨೦೦೯, ಪು. ೧೩-೧೮.

ಆಧಾರ ಗ್ರಂಥಗಳು:

- ನಮ್ಮ ದನಿ, ಮಾಸ ಪತ್ರಿಕೆ, ಸಂಪುಟ ೫, ಕೊರಗರ ವರ್ತಮಾನ ಸ್ಥಿತಿಗತಿ, ಮತ್ತಾಡಿ ಕಾಯರ್ ಪಳಿಕೆ, ೨೦೧೦.
- ನಮ್ಮ ದನಿ, ಮಾಸ ಪತ್ರಿಕೆ, ಕೊರಗರು ಮತ್ತು ಆಧುನಿಕತೆಯ ಮುಖಾಮುಖಿ, ಮೋಹನ್ ಅಡ್ವೆ, ೨೦೧೦.
- ಬಾಬು ಕೊರಗ ಪಾಂಗಳ, ಕೊರಗರ ಅಜಲು (ಒಂದು ವಿಶ್ಲೇಷಣೆ), ವಾಮಂಜೂರು, ಮಂಗಳೂರು ೨೦೦೯.
- ಪ್ರಭಾಕರ ಎ.ಎಸ್., ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಅಧ್ಯಾಯ ೬

ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಸರಕಾರಿ ಇಲಾಖೆಗಳ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಪ್ರಸ್ತುತ ಸ್ಥಿತಿಗಳು

ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಸರಕಾರಿ ಇಲಾಖೆಗಳ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಪ್ರಸ್ತುತ ಸ್ಥಿತಿಗಳು

"ಇಂದು ಜಾಗತೀಕರಣದ ಫಲವಾಗಿ ಮೂರನೇ ಜಗತ್ತಿನ ದೇಶಗಳ ಆಂತರಿಕ ಆಡಳಿತದ ಚುಕ್ಕಾಣಿಯನ್ನು ಸಾಮ್ರಾಜ್ಯಶಾಹಿಗಳು ಹಿಡಿದುಕೊಂಡಿದ್ದಾರೆ. ಇಂತಹ ವಿಷಮ ಸ್ಥಿತಯಲ್ಲಿ ಭಾರತದಂತಹ ದೇಶದಲ್ಲಿ, ಅದರಲ್ಲೂ ಆದಿವಾಸಿಗಳಂತಹ ಅಸಂಘಟಿತ ಸಮುದಾಯದ ಅಭಿವೃದ್ಧಿಯ ಬಗ್ಗೆ ಯೋಚಿಸುವುದು ಈವತ್ತಿನ ಹಲವು ತುರ್ತುಗಳಲ್ಲಿ ಮಹತ್ವದ್ದೆಂದೇ ನಾವು ಭಾವಿಸುತ್ತೇವೆ".೦೧

"ಅಭಿವೃದ್ಧಿಯ ಚರ್ಚೆಗಳು ಹೆಚ್ಚು ಮಾನವೀಯವೂ ಮತ್ತು ಜನತಾಂತ್ರಿಕವಾದವುಗಳೂ ಆಗಬೇಕಿದೆ. ಹೊಸ ಸಮಾಜವನ್ನು ಹುಟ್ಟು ಹಾಕುವ ಮತ್ತು ವಿಷಮ ಸಾಮಾಜಿಕಾರ್ಥಿಕ ವ್ಯವಸ್ಥೆಯನ್ನು ನಾಶ ಮಾಡುವ ರಾಜಕೀಯ ನಿಲುವು ಮತ್ತು ಈ ಬಗೆಯ ಮಾನವೀಯ ಚರ್ಚೆಗೆ ಅನುವು ಮಾಡಿಕೊಡುತ್ತದೆ".೦೨

೬.೧ ಅಭಿವೃದ್ಧಿಯ ಬಹುಮುಖತೆ

"ನಮ್ಮ ದೇಶದ ಬುಡಕಟ್ಟು ಸಮುದಾಯಗಳನ್ನು ದುಡಿಯುವವರು ಅಥವಾ ಕೂಲಿಕಾರರು ಎಂದು ಪರಿಗಣಿಸಲಾಯಿತೇ ವಿನಹ ಅವರು ಕೂಡ ಉತ್ಪಾದಕರು ಎಂಬ ದೃಷ್ಟಿಯಿಂದ ನೋಡಲೇ ಇಲ್ಲ ಎಂಬುದು ವಿಪರ್ಯಾಸ. ಅವರ ಉತ್ಪಾದನಾ ಚಟುವಟಿಕೆಗಳನ್ನು ನಿರ್ಲಕ್ಷಿಸಿದ್ದಲ್ಲದೇ ಆಧುನಿಕ ಅಭಿವೃದ್ಧಿ ಪರಂಪರೆಯಲ್ಲಿ ಅವರು ಒಂದು 'ಹೊರೆ'ಯಾಗಿ ಪರಿಣಮಿಸಿದುದು ಇನ್ನೊಂದು ದುರಂತ. ಇಂದು ನಾವು ಗಿರಿಜನ ಪ್ರದೇಶಗಳಲ್ಲಿ ಎಷ್ಟು ಆರೋಗ್ಯ ಕೇಂದ್ರಗಳನ್ನು ತೆರೆದಿದ್ದೇವೆ, ಎಷ್ಟು ಶಾಲೆಗಳನ್ನು ತೆರೆದಿದ್ದೇವೆ, ಎಷ್ಟು ಹಾಸ್ಟೆಲ್‌ಗಳನ್ನು ತೆರೆದಿದ್ದೇವೆ ಎಂಬುದರ ಮೇಲೆ ನಮ್ಮ ಅಭಿವೃದ್ಧಿಯನ್ನು ಲೆಕ್ಕ ಹಾಕುತ್ತೇವೆ. ಆದರೆ ಅವು ವಸಾಹತುಶಾಹಿ ನೆಲೆಯಲ್ಲಿಯೇ ಕಾರ್ಯನಿರ್ವಹಿಸುತ್ತಾ ಹಿತಾಸಕ್ತ ಸಮುದಯಗಳಿಗಷ್ಟೇ ನೆರವಾಗುತ್ತಿವೆ. ಗಿರಿಜನರಿಗಾಗಿಯೇ ತೆರೆದಿರುವ ಆಶ್ರಮ ಶಾಲೆಗಳಲ್ಲಿಯೂ ಗಿರಿಜನರ ಮಕ್ಕಳು ಇಲ್ಲದಿರುವುದು ಶೋಚನೀಯವಾಗಿದೆ. ಈ ಹಿನ್ನೆಲೆಯಲ್ಲಿ ನಾನು ಇಲ್ಲಿ ಹೇಳಬಯಸುವುದೇನೆಂದರೆ ಗಿರಿಜನರ ಅಭಿವೃದ್ಧಿ ಎಂದರೆ ಅದು ಕೇವಲ ಆರ್ಥಿಕಾಧಾರಿತ ಯೋಜನೆಗಳನ್ನು ರೂಪಿಸುವುದಲ್ಲ. ಆರ್ಥಿಕ ಸವಲತ್ತುಗಳ ಮೂಲಕವಷ್ಟೇ ಅವರನ್ನು ಸಬಲೀಕರಣಗೊಳಿಸುತ್ತೇವೆ ಎಂಬುದಲ್ಲ ಆರ್ಥಿಕಾಧಾರಿತ ಯೋಜನೆಗಳ ಜೊತೆಗೆ ಅಥವಾ

ಅದಕ್ಕೆ ಪೂರಕವಾಗಿ, ಪೂರ್ವದಲ್ಲಿಯೇ ಆ ಜನರನ್ನು ಸಜ್ಜುಗೊಳಿಸುವುದು. ಬುಡಕಟ್ಟು ಸಮುದಾಯಗಳಿಗೆ ಈಗ ಹಣಕ್ಕಿಂತ ಹೆಚ್ಚಾಗಿ ಭದ್ರತೆ ಬೇಕಾಗಿದೆ. ಅಪಮಾನವಿಲ್ಲದಂತೆ ಬದುಕುವ ಮಾನವೀಯ ವಾತಾವರಣ ಬೇಕಾಗಿದೆ. ಅವರ ಭೂಮಿ ಮತ್ತು ಅವರ ಅರಣ್ಯವನ್ನು ಅವರಿಗೆ ಮರಳಿ ನೀಡಿದರೆ ಸಾಕು. ಅವರ ಅಭಿವೃದ್ಧಿ ತಾನಾಗಿಯೇ ಆಗುತ್ತದೆ, ಅರಣ್ಯವೂ ಉಳಿಯುತ್ತದೆ. ಈ ಹಿನ್ನೆಲೆಯಲ್ಲಿ ಭೂಮಿ ಮತ್ತು ಅರಣ್ಯವೆಂಬ ಅಭಿವೃದ್ಧಿ ಮೂಲ ಸಂಗತಿಗಳನ್ನು ಹೆಚ್ಚು ಗಂಭೀರವಾಗಿ ಪರಿಗಣಿಸಬೇಕೆಂದು ಕೋರುತ್ತೇನೆ".೦೩

೬.೨. ಬುಡಕಟ್ಟು ಅಭಿವೃದ್ಧಿಯ ಬಗೆಗೆ ವಿವಿಧ ಚಿಂತಕರ ಅಭಿಪ್ರಾಯಗಳು:

"ಆರಂಭದಿಂದಲೂ ಅಭಿವೃದ್ಧಿಯನ್ನು ವರಮಾನದ ಚೌಕಟ್ಟಿನಲ್ಲಿ ಪರಿಭಾವಿಸಿಕೊಂಡು ಬರಲಾಗಿದೆ, ಒಂದು ದೇಶ/ರಾಷ್ಟ್ರದ ವರಮಾನದ ವರ್ಧನೆಯೇ ಅಭಿವೃದ್ಧಿ. ಭಾರತದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದ ನೀತಿ – ನಿರೂಪಣೆ – ನಿರ್ಣಯಿಸುವ ಎರಡೂ ಸಂಸ್ಥೆಗಳು ರಾಷ್ಟ್ರಮಟ್ಟದ ಸಂಸ್ಥೆಗಳಾಗಿವೆ. ಮೊದಲನೆಯದು ರಾಷ್ಟ್ರೀಯ ಯೋಜನಾ ಆಯೋಗ, ಎರಡನೆಯದು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ. ಇವೆರಡೂ ಸಂಸ್ಥೆಗಳ ಹೆಸರುಗಳಲ್ಲಿರುವ ರಾಷ್ಟ್ರೀಯ ಎನ್ನುವುದು ಅಭಿವೃದ್ಧಿಯ ಅಖಂಡ ಸ್ವರೂಪವನ್ನು ಸೂಚಿಸುತ್ತದೆ. ಇದೇ ರೀತಿ ಅಭಿವೃದ್ಧಿಯ ಮಾಪನವಾದ ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿ.ಎನ್.ಪಿ.)ದಲ್ಲಿನ ರಾಷ್ಟ್ರೀಯ ಕೂಡ ಅಭಿವೃದ್ಧಿ ಮೀಮಾಂಸೆಯ ಅಖಂಡ ಸ್ವರೂಪವನ್ನು ಸೂಚಿಸುತ್ತದೆ. ಹೀಗೆ ಪರಿಭಾವಿಸಿಕೊಂಡ ಅಭಿವೃದ್ಧಿ ಮೀಮಾಂಸೆಯಲ್ಲಿ, ಅಭಿವೃದ್ಧಿ ನೀತಿಯಲ್ಲಿ 'ಬುಡಕಟ್ಟು ಅಭಿವೃದ್ಧಿ' ಎಂಬುದಕ್ಕೆ ಯಾವುದೇ ಅರ್ಥವೂ ಇಲ್ಲವಾಗಿದೆ. ಸಮಾಜ ಆರ್ಥಿಕತೆ, ರಾಜಕಾರಣಗಳು ಜ್ಞಾನಶಿಸ್ತುಗಳು ಬುಡಕಟ್ಟುಗಳನ್ನು ಅಧ್ಯಯನ ಮುಂತಾದ ವಿಷಯ ವಸ್ತುಗಳನ್ನಾಗಿ ಮಾಡಿಕೊಳ್ಳುವುದರಲ್ಲಿ ವಿಫಲವಾಗಿದೆ. ಅಭಿವೃದ್ಧಿ ಮೀಮಾಂಸೆಯಲ್ಲಿ ಅಧ್ಯಯನದ ಮೂಲಮಾನ 'ವ್ಯಕ್ತಿ'ಯೇ ವಿನಾ ಸಮುದಾಯವಲ್ಲ. ಸಮುದಾಯವಾದಿ ಸಂಬಂಧಗಳು ಅಥವಾ ಕುಲ ಸಂಬಂಧಗಳು ಆಧುನಿಕ ಪೂರ್ವ ಸ್ಥಿತಿಯನ್ನು ಸೂಚಿಸುತ್ತವೆ. ಎಲ್ಲ ಬಗೆಯ ಸಮಾಜ ವಿಜ್ಞಾನಗಳೂ ಸಾಂಸ್ಕೃತಿಕ ಸಂಗತಿಗಳನ್ನು ತಮ್ಮ ಸೈದ್ಧಾಂತಿಕ ಚೌಕಟ್ಟಿನಿಂದ ಹೊರಗಿಟ್ಟಿದ್ದವು. ಏಕೆಂದರೆ ಸಾಂಸ್ಕೃತಿಕ ಸಂಗತಿಗಳು ಮೂಲತಃ ಸಮುದಾಯಿಕವಾಗಿದ್ದವು. ಅಲ್ಲಿ ವ್ಯಕ್ತಿಗಿಂತ ಸಮುದಾಯವು ಕೇಂದ್ರ ಬಿಂದುವಾಗಿತ್ತು. ವ್ಯಕ್ತಿಯನ್ನು ಮೂಲ ಘಟಕವನ್ನಾಗಿ ಮಾಡಿಕೊಂಡು ಸಮಾಜ ವಿಜ್ಞಾನಗಳು ಸಮುದಾಯವಾದಿ ಬುಡಕಟ್ಟುಗಳನ್ನು ಸೈದ್ಧಾಂತಿಕವಾಗಿ ಪರಿಗಣಿಸುವುದು ಸಾಧ್ಯವಿರಲಿಲ್ಲ.

ಇವೆಲ್ಲಕ್ಕಿಂತ ಹೆಚ್ಚಾಗಿ ಬುಡಕಟ್ಟು ಮತ್ತು ಪರಿಸರಗಳ ನಡುವಿನ ಸಂಬಂಧವು ಜೈವಿಕವಾದುದು ಮತ್ತು ಸಾವಯುವವಾದುದು. ಆದರೆ ಅಭಿವೃದ್ಧಿ ಮತ್ತು ಪರಿಸರಗಳ ನಡುವಿನ

ಸಂಬಂಧ ಆಕ್ರಮಣಕಾರಿಯಾದುದಾಗಿದೆ. ಪ್ರಕೃತಿ ಪರಿಸರ ಇಲ್ಲಿ ಬದುಕಿನ ಅವಿಭಾಜ್ಯ ಅಂಗ. ಜನರು ಮತ್ತು ಪರಿಸರ ಬೇರೆ ಬೇರೆ ಅಲ್ಲ. ಇವೆರಡರ ನಡುವೆ ಹೊಕ್ಕಳು ಬಳ್ಳಿ ಸಂಬಂಧ ಅಲ್ಲಿರುತ್ತದೆ. ಆಧುನಿಕತೆ ಅಭಿವೃದ್ಧಿ ರಾಷ್ಟ್ರಪ್ರಭುತ್ವಗಳಿಗೆ 'ಬುಡಕಟ್ಟುಗಳು' ನಿವಾರಿಸಿಕೊಳ್ಳಬೇಕಾದ ಒಂದು ಸಂಗತಿಯಾಗಿದೆ. ಆಧುನಿಕತೆಯ ದೃಷ್ಟಿಯಿಂದ ಬುಡಕಟ್ಟುಗಳು ಆಧುನಿಕ ಪೂರ್ವ ಸ್ಥಿತಿಗೆ ಸಂಬಂಧಿಸಿವೆ. ಅಭಿವೃದ್ಧಿ ದೃಷ್ಟಿಯಿಂದ ಅವು ಜೈವಿಕವಾಗಿಯೂ, ಅವಾಣಿಜ್ಯಕವೂ ಆಗಿವೆ. ರಾಷ್ಟ್ರಪ್ರಭುತ್ವಕ್ಕೆ ಅವು ಏಕತೆಗೆ ಭಿನ್ನವಾದ ಸಂಗತಿಗಳಾಗಿವೆ. ಹೀಗೆ ಕಳೆದ ೨೦೦ ವರ್ಷಗಳಿಂದ ಬೆಳೆದುಕೊಂಡು ಬಂದ ಜ್ಞಾನಶಿಸ್ತುಗಳು ಅಲ್ಲಿ ರೂಪಿತವಾದ ಸಿದ್ಧಾಂತಗಳು ಬುಡಕಟ್ಟುಗಳನ್ನು, ಬುಡಕಟ್ಟು ಸಮಾಜವನ್ನು, ಬುಡಕಟ್ಟು ಸಂಸ್ಕೃತಿಯನ್ನು ಆಧುನಿಕತೆಗೆ ಸವಾಲೆಂಬಂತೆ, ಅಭಿವೃದ್ಧಿಗೆ ಕಂಟಕವೆಂಬಂತೆ, ರಾಷ್ಟ್ರಪ್ರಭುತ್ವಕ್ಕೆ ವಿರುದ್ಧವಾದ ಸಂಗತಿಯೆಂಬಂತೆ ಪರಿಭಾವಿಸಿಕೊಂಡು ಬಂದಿವೆ. ಇಲ್ಲಿ ಬುಡಕಟ್ಟುತನವೆಂಬುದು ಬಿಟ್ಟುಕೊಡಬೇಕಾದ ಒಂದು ಸಂಗತಿಯಾಗಿದೆ. ಬುಡಕಟ್ಟು ಮತ್ತು ಅಭಿವೃದ್ಧಿಗಳ ನಡುವಿನ ಸಂಬಂಧವು ಸಂಘರ್ಷಣಾತ್ಮಕವಾದುದಾಗಿದೆ. ಇವೆರಡರ ನಡುವೆ ಘರ್ಷಣೆಗೆ ಕಾರಣವಾಗಿರುವ ಅನೇಕ ಸಂಗತಿಗಳಿವೆ. ಮೊದಲನೆಯದು ರಾಷ್ಟ್ರಪ್ರಭುತ್ವದ 'ಜೀರ್ಣೋದ್ಭವ' ಸ್ವರೂಪ. ಅಲ್ಲಿ ಭಿನ್ನತೆಗೆ, ಭಿನ್ನ ಸಂಸ್ಕೃತಿಗಳ ಸಹಜೀವನಕ್ಕೆ ಅವಕಾಶವಿಲ್ಲ. ಅಲ್ಲಿ ಭಿನ್ನತೆಯನ್ನು ವಿಶಿಷ್ಟತೆಯನ್ನು ವಿಚ್ಛಿದ್ರಕಾರಿ ಶಕ್ತಿಯೆಂದು ಪರಿಗಣಿಸಲಾಗುತ್ತದೆ. ರಾಷ್ಟ್ರಪ್ರಭಿತ್ವವು ಬುಡಕಟ್ಟುಗಳೆಲ್ಲವೂ ತನ್ನಲ್ಲಿ 'ಜೀರ್ಣ'ವಾಗಿ ಬಿಡಬೇಕು, 'ಲೀನ'ವಾಗಿ ಬಿಡಬೇಕು ಎಂದು ಬಯಸುತ್ತದೆ.

ಇವೆರಡರ ನಡುವೆ ಘರ್ಷಣೆಗೆ ಕಾರಣವಾಗಿರುವ ಎರಡನೆಯ ಸಂಗತಿಯೆಂದರೆ ಅಭಿವೃದ್ಧಿಯ 'ಏಕರೂಪೀಕರಣ' ಸ್ವರೂಪ. ಇದು ರಾಷ್ಟ್ರಪ್ರಭುತ್ವದ ಬಹು ಮುಖ್ಯ ಲಕ್ಷಣವಾಗಿದೆ. ಒಂದು ರಾಷ್ಟ್ರ, ಒಂದು ಭಾಷೆ, ಒಂದು ಸಂಸ್ಕೃತಿ, ಒಂದು ಧರ್ಮ, ಒಂದು ಚರಿತ್ರೆ ಮುಂತಾದ ಸಂಗತಿಗಳ ಮೇಲೆ ರಾಷ್ಟ್ರಪ್ರಭುತ್ವವು ನಿಂತಿರುತ್ತದೆ. ಬುಡಕಟ್ಟುಗಳ 'ಅನೇಕತನ'ವು ರಾಷ್ಟ್ರೀಯತೆಗೆ ಮಾರಕವೆಂದು ಭಾವಿಸಲಾಗಿದೆ. ಅಭಿವೃದ್ಧಿಯ ಸಾಧನಗಳಾದ ನಗರೀಕರಣ, ಕೈಗಾರಿಕೀಕರಣ, ಶ್ರಮವಿಭಜನೆ, ವಾಣಿಜ್ಯೀಕರಣ, ಆಡಳಿತೀಕರಣಗಳ ಪ್ರಕ್ರಿಯೆಯಿಂದಾಗಿ ಬುಡಕಟ್ಟೊಂದು ಬುಡಕಟ್ಟಾಗಿ ಉಳಿಯಲು ಸಾಧ್ಯವಿಲ್ಲ.

ಘರ್ಷಣೆಗೆ ಕಾರಣವಾಗಿರುವ ಮೂರನೆಯ ಸಂಗತಿಯೆಂದರೆ ಆಧುನಿಕ ಜ್ಞಾನಶಿಸ್ತುಗಳ 'ಯಾಜಮಾನ್ಯ' ಪ್ರವೃತ್ತಿ. ಆಧುನೀಕರಣ, ಅಭಿವೃದ್ಧಿ, ರಾಷ್ಟ್ರಪ್ರಭುತ್ವ ಇವೆಲ್ಲವೂ ಯಜಮಾನವಾದಿ ಮಹಾಸಂಕಥನಗಳಾಗಿವೆ. ಇದರಿಂದಾಗಿ ಬುಡಕಟ್ಟು ಮತ್ತು ಅಭಿವೃದ್ಧಿಗಳ ನಡುವಿನ ಸಂಬಂಧವು 'ಶ್ರೇಣೀಕೃತ'ವಾಗಿ ಬಿಡುತ್ತದೆ.

ಬುಡಕಟ್ಟು ಅಭಿವೃದ್ಧಿಯೆನ್ನುವ ಸೈದ್ಧಾಂತಿಕ ರಚನೆಯೊಂದು ಇನ್ನೂ ರೂಪಿತವಾಗಿಲ್ಲ. ಆಧುನಿಕ ಜ್ಞಾನ ಶಿಸ್ತುಗಳು ಬುಡಕಟ್ಟು ಸಮಾಜ-ಸಂಸ್ಕೃತಿಗಳನ್ನು ಅಧ್ಯಯನದ ಸಂಗತಿಗಳನ್ನಾಗಿ ಗುರುತಿಸಿಲ್ಲ. ಬುಡಕಟ್ಟು ಸಮಾಜ ಬುಡಕಟ್ಟು ಸಂಸ್ಕೃತಿಯೆನ್ನುವುದೊಂದು ಅಧ್ಯಯನ ಶಿಸ್ತು ಎಂದು ಆಧುನಿಕ ಜ್ಞಾನ ಶಿಸ್ತುಗಳು ಪರಿಗಣಿಸಿಲ್ಲ. 'ಬುಡಕಟ್ಟು ಅಭಿವೃದ್ಧಿ', 'ಬುಡಕಟ್ಟು ರಾಷ್ಟ್ರಪ್ರಭುತ್ವ', 'ಬುಡಕಟ್ಟು ಆಧುನಿಕತೆಗಳ' ನಡುವಿನ ಸಂಬಂಧವನ್ನು ಅಧ್ಯಯನಕ್ಕೆ ಒಳಪಡಿಸುವ, ಈ ಸಂಬಂಧಗಳನ್ನು ಸೈದ್ಧಾಂತಿಕಗೊಳಿಸುವ ಕೆಲಸವಿನ್ನು ಪ್ರಾರಂಭವಾಗಿಲ್ಲ. ಬುಡಕಟ್ಟುಗಳ ಬಗೆಗಿನ ಪೂರ್ವಗ್ರಹಗಳಿಂದ ಆಧುನಿಕ ಜ್ಞಾನಶಿಸ್ತುಗಳು ಹೊರಬರಬೇಕಾಗಿದೆ. ಅಭಿವೃದ್ಧಿ ಮೀಮಾಂಸೆಯಲ್ಲಿ, ಆಧುನೀಕರಣದ ಚರ್ಚೆಯಲ್ಲಿ ಮತ್ತು ರಾಷ್ಟ್ರ ಪ್ರಭುತ್ವದ ಅಧಿಕಾರದಲ್ಲಿ ಬುಡಕಟ್ಟುಗಳಿಗೆ ಸ್ಥಾನ-ಅವಕಾಶವಿಲ್ಲವೆಂಬುದು ಇಲ್ಲಿನವರೆಗಿನ ಚರ್ಚೆಯಿಂದ ಸ್ಪಷ್ಟವಾಗಿದೆ. ಆದರೆ ನಮ್ಮ ಎದುರಿಗಿರುವ ವಾಸ್ತವವೆಂದರೆ ರಾಷ್ಟ್ರಪ್ರಭುತ್ವಗಳಿಗೆ ಬುಡಕಟ್ಟುಗಳನ್ನು ಜೀರ್ಣಿಸಿಕೊಳ್ಳುವುದು ಸಾಧ್ಯವಾಗಿಲ್ಲ. ರಾಷ್ಟ್ರೀಯ ಪ್ರಧಾನ ಧಾರೆಯಲ್ಲಿ ಬುಡಕಟ್ಟುಗಳು ವಿಲೀನಗೊಂಡಿಲ್ಲ. ಆಧುನೀಕರಣವು ಆಧುನಿಕ ಪೂರ್ವ ಸ್ಥಿತಿಯಿಂದ ಬುಡಕಟ್ಟುಗಳನ್ನು ಪರಿವರ್ತಿಸುವಲ್ಲಿ ಯಶಸ್ವಿಯಾಗಿಲ್ಲ. ಅಭಿವೃದ್ಧಿ ಪ್ರಕ್ರಿಯೆಗೆ ಬುಡಕಟ್ಟುಗಳ ವಿಶಿಷ್ಟತೆಯನ್ನು ಅಳಿಸಿಹಾಕಿ ಅವುಗಳಿಗೆ ವಿಶ್ವಾತ್ಮಕ ರೂಪ ನೀಡುವುದು ಸಾಧ್ಯವಾಗಿಲ್ಲ. ಇಂದು ವಿಶ್ವದ ಎಲ್ಲ ದೇಶಗಳಲ್ಲೂ ಬುಡಕಟ್ಟುಗಳು ತಮ್ಮ ಅನನ್ಯತೆ, ವಿಶಿಷ್ಟತೆಗಳನ್ನು ಉಳಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿವೆ.

ಬುಡಕಟ್ಟುಗಳ ಅಭಿವೃದ್ಧಿ ಸಾಮರ್ಥ್ಯವನ್ನು ಗುರುತಿಸುವುದು ಸರ್ಕಾರಗಳಿಗೆ ಸಾಧ್ಯವಾಗಲಿಲ್ಲ. ಏಕೆಂದರೆ ಸರ್ಕಾರವು ಅಭಿವೃದ್ಧಿಯನ್ನು ಗುರುತಿಸಲಿಕ್ಕೆ ಬಳಸುತ್ತಿದ್ದ ಸಾಧನಗಳು ಬುಡಕಟ್ಟು ಸಮಾಜಕ್ಕೆ ಸೂಕ್ತವಾಗಿರಲಿಲ್ಲ. ಏಕೆಂದರೆ ಆಧುನಿಕ ಪೂರ್ವ ಸ್ಥಿತಿಯಲ್ಲಿದ್ದ ಬುಡಕಟ್ಟುಗಳ ಅಭಿವೃದ್ಧಿ ಸಾಮರ್ಥ್ಯವು ಕನಿಷ್ಠತಮವಾಗಿದ್ದರೆ ಅದರಲ್ಲಿ ಆಶ್ಚರ್ಯ ಪಡುವಂತಹುದೇನೂ ಇರಲಿಲ್ಲ. ಬುಡಕಟ್ಟುಗಳ ಅಭಿವೃದ್ಧಿಗೆ ಮಾನದಂಡ ಬುಡಕಟ್ಟು ಸಮಾಜದೊಳಗಿನಿಂದಲೇ ಮೂಡಿಬರಬೇಕಾಗುತ್ತದೆ. ಬುಡಕಟ್ಟುಗಳದ್ದೇ ಆದ ಮಾನದಂಡಗಳಿಂದ ಬುಡಕಟ್ಟುಗಳನ್ನು ಪರಿಭಾವಿಸಿಕೊಳ್ಳಬೇಕಾಗುತ್ತದೆ.

ಜಾಗತೀಕರಣ ಪ್ರವಾಹದಲ್ಲಿ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಅನನ್ಯತೆ ಅಳಿಸಿ ಹೋಗಬಾರದು ಎಂಬುದು ಎಷ್ಟು ಮುಖ್ಯವೋ, ಅವುಗಳು ರಾಷ್ಟ್ರಪ್ರಭುತ್ವವನ್ನು ಒಪ್ಪಿಕೊಂಡು ಜನತಾಂತ್ರಿಕ ಬಹುಸಂಸ್ಕೃತಿ ವ್ಯವಸ್ಥೆಯಲ್ಲಿ ಬದುಕನ್ನು ರೂಪಿಸಿಕೊಳ್ಳಬೇಕಾದುದು ಅಷ್ಟೇ ಮುಖ್ಯವಾದುದಾಗಿದೆ. ಬುಡಕಟ್ಟುಗಳು ರಾಷ್ಟ್ರೀಯ ಪ್ರವಾಹದಲ್ಲಿ ಮುಳುಗಿ ಹೋಗಬೇಕು

ಎಂಬುದೇ ಅಭಿವೃದ್ಧಿಯಲ್ಲ. ಅವುಗಳ ಅನನ್ಯತೆಯ ಒಡಲಲ್ಲೆ ಅವರ ಬದುಕು ಉತ್ತಮವಾಗುವಂತೆ ಮಾಡುವುದೇ ಅಭಿವೃದ್ಧಿ".[೧೪]

ಜಾಗತೀಕರಣದ ಸಂದರ್ಭದಲ್ಲಿ ಬುಡಕಟ್ಟು ಅಭಿವೃದ್ಧಿ

"ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಹಲವಾರು ಬುಡಕಟ್ಟು ಜನರಿದ್ದಾರೆ. ಆದರೆ ಅವರ ಅಭಿವೃದ್ಧಿಗೆ ಪ್ರತ್ಯೇಕ ನೀತಿ ಇಲ್ಲ. ಲ್ಯಾಂಪ್ಸ್ (ಬುಡಕಟ್ಟು ಜನರ ಅರಣ್ಯ ಉತ್ಪನ್ನಗಳನ್ನು ಮಾರಲು ಅನುಕೂಲ ಮಾಡಿಕೊಡುವ ಸಹಕಾರಿ ಸಂಘ), ಆಶ್ರಮ ಶಾಲೆ (ಬುಡಕಟ್ಟು ಮಕ್ಕಳಿಗೆ ಮೀಸಲಿರುವ ವಸತಿ ಶಾಲೆ) ಇತ್ಯಾದಿ ಅಭಿವೃದ್ಧಿ ಕಾರ್ಯಕ್ರಮಗಳು ಮಾತ್ರ ಕರ್ನಾಟಕದಲ್ಲಿ ಇವೆ. ಕರ್ನಾಟಕದಲ್ಲಿ ಸಮಾಜ ಕಲ್ಯಾಣ ಇಲಾಖೆಯೇ ಬುಡಕಟ್ಟು ಜನರ ಅಭಿವೃದ್ಧಿಯ ಉಸ್ತುವಾರಿ ನೋಡಿಕೊಳ್ಳುವುದು ಮತ್ತು ಅವರ ಅಭಿವೃದ್ಧಿಗೆ ಪ್ರತ್ಯೇಕ ವ್ಯವಸ್ಥೆ ಅಥವಾ ಇಲಾಖೆ ಇಲ್ಲ. ಅಂದರೆ ಬುಡಕಟ್ಟು ಅಭಿವೃದ್ಧಿ ಎನ್ನುವುದು ತುಂಬಾ ಸಂಕೀರ್ಣ ಸಮಸ್ಯೆಯಾಗಿ ನಮ್ಮ ಮುಂದೆ ಇದೆ. ಅವರನ್ನು ಉದ್ಧಾರ ಮಾಡುವ ಕಾರ್ಯಕ್ರಮಗಳು ನಿಜವಾಗಿ ಅವರನ್ನು ಉದ್ಧಾರ ಮಾಡುತ್ತಿಲ್ಲ, ಬದಲಿಗೆ ಶೋಷಣೆ ಮಾಡುತ್ತಿವೆ. ಜತೆಗೆ ಚಾರಿತ್ರಿಕವಾಗಿ ಅವರ ರೂಢಿಸಿಕೊಂಡು ಬಂದ ಬದುಕಿಗೆ ಅನುಗುಣವಾಗಿ ಬದುಕಲು ಅಸಾಧ್ಯವಾದ ಸ್ಥಿತಿ ನಿರ್ಮಾಣವಾಗಿದೆ".[೧೫]

ಬುಡಕಟ್ಟು ಅಭಿವೃದ್ಧಿ ಸಾಧ್ಯವಾಗದ ಸಾರ್ವತ್ರಿಕ ಮಾದರಿ:

"ಶೈಕ್ಷಣಿಕ ಚರ್ಚೆಗಳಲ್ಲಿ ಮತ್ತು ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವ ಪ್ರಯತ್ನಗಳಲ್ಲಿ, ಇತ್ತೀಚಿನ ದಿನಗಳಲ್ಲಿ ಅತ್ಯಂತ ವ್ಯಾಪಕವಾಗಿ ಬಳಕೆಯಲ್ಲಿರುವ ಪರಿಕಲ್ಪನೆಯೆಂದರೆ 'ಅಭಿವೃದ್ಧಿ'. ಆದರೆ ಈ ಅಭಿವೃದ್ಧಿ ಪ್ರಕ್ರಿಯೆ ಸಮಾಜದ ಕೆಳವರ್ಗಗಳಿಗೆ ಮಾತ್ರ ಮೇಲ್ಮುಖ ಚಲನೆಗೆ ಸೋಪಾನವಾಗಿ ಪರಿಣಮಿಸಿದೆಯೇ ಹೊರತು, ಶತಮಾನಗಳಿಂದ ಸಾಮಾಜಿಕ ಅಸಮಾನತೆ ಅನ್ಯಾಯಗಳನ್ನು ಎದುರಿಸುತ್ತಿರುವ ಎಲ್ಲ ಗುಂಪುಗಳಿಗಲ್ಲ ಎನ್ನುವುದು ಇಂದು ಸ್ಥಾಪಿತ ಸತ್ಯ. "ಉಳ್ಳವರನ್ನು ಮತ್ತಷ್ಟು ಅನುಕೂಲವಂತರನ್ನಾಗಿಸಿ, ಪ್ರಕೃತಿದತ್ತವಾದ ಅನೇಕ ಅನುಕೂಲಗಳನ್ನು ಪಡೆದಿದ್ದವರನ್ನು ಇಂದು ಅವನತಿಯ ಅಂಚಿನಲ್ಲಿ ದೂಡಿರುವುದು ಆಧುನಿಕ ಅಭಿವೃದ್ಧಿ ಯತ್ನಗಳ 'ವಿಶಿಷ್ಟ' ಕೊಡುಗೆಗಳಲ್ಲಿ ಒಂದಾಗಿದೆ".[೧೬]

ಅಭಿವೃದ್ಧಿ ಮತ್ತು ಸ್ವಯಂ ಸೇವಾ ಸಂಘಟನೆಗಳು (ಬುಡಕಟ್ಟುಗಳ ಸ್ಥಿತ್ಯಂತರಗಳು)

"ಸ್ವಾತಂತ್ರ್ಯಾನಂತರ ಭಾರತ ಸರ್ಕಾರ ಅಭಿವೃದ್ಧಿಶೀಲ 'ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ' ರಾಷ್ಟ್ರಗಳ ಪರಿಕಲ್ಪನೆಯಲ್ಲಿ ದೇಶವನ್ನು ಅಭಿವೃದ್ಧಿಪಡಿಸುವ ಕಾರ್ಯಕ್ಕೆ ಸಿದ್ಧವಾಯಿತು. ಅಭಿವೃದ್ಧಿ ಎಂದರೆ ದೊಡ್ಡ ದೊಡ್ಡ ಕಾರ್ಖಾನೆಗಳ ಸ್ಥಾಪನೆ, ಬೃಹತ್

ಅಣೆಕಟ್ಟುಗಳ ನಿರ್ಮಾಣ, ಗಣಿಗಾರಿಕೆಗಳು ಎಂದು ಭಾವಿಸಲಾಯಿತು. ವಸಾಹತುಶಾಹಿ ರಾಷ್ಟ್ರಗಳು ತಮ್ಮ ಆಡಳಿತಕ್ಕೊಳಪಟ್ಟ ಎಲ್ಲ ರಾಷ್ಟ್ರಗಳಲ್ಲಿ ತಮ್ಮ ಸಿಂಹಾಸನಗಳನ್ನು ಸ್ಥಾಪಿಸಿ ಭದ್ರ ಬುನಾದಿಯನ್ನು ಹಾಕಿದ್ದವು. ಸ್ವಾತಂತ್ರ್ಯಾನಂತರ ವಸಾಹತುಶಾಹಿ ರಾಷ್ಟ್ರಗಳ ಅಭಿವೃದ್ಧಿ ಕಲ್ಪನೆಯ ನೀತಿಯನ್ನು ಬೆನ್ನು ಹತ್ತಿದ ಭಾರತ ಸರ್ಕಾರದ ಅಂದಿನ ಪ್ರಧಾನ ಮಂತ್ರಿಗಳು ಬೃಹತ್ ಯೋಜನೆಗಳಿಂದ ಮಾತ್ರ ದೇಶ ತೀವ್ರವಾಗಿ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ನಂಬಿದ್ದರು. ದೇಶೀಯ ಉತ್ಪಾದನೆಯನ್ನು, ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದರ ಮೂಲಕ ದೇಶದ ಪ್ರಗತಿಯನ್ನು ಕಾಣುತ್ತಿದ್ದ ಗಾಂಧೀಜಿಯ ಕನಸು ಒಂದು ಕಡೆಯಾದರೆ, ಸಾಗರದಗಲದ ಆಣೆಕಟ್ಟುಗಳನ್ನು ಕಟ್ಟಲು ನೆಹರು ತುರಾತುರಿಯಿಂದ ಓಡಾಡುತ್ತಿದ್ದರು. ಆಣೆಕಟ್ಟುಗಳು ಭಾರತದ ದೇವಾಲಯಗಳು ಎಂದು ಭಾಷಣ ಮಾಡುತ್ತಿದ್ದರು. ಈ ಎರಡೂ ನಿಲುವುಗಳನ್ನು ಒಂದು ರೀತಿಯಿಂದ ಅಪಾಯಕಾರಿ ಎಂದೇ ಹೇಳಬಹುದು. ಆಧುನಿಕ ಜಗತ್ತು ಉತ್ಪಾದನಾ ವ್ಯವಸ್ಥೆಯಲ್ಲಿ ತೀವ್ರವಾಗಿ ಬೆಳೆಯುತ್ತಿತ್ತು. ಇದರ ಮುಂದೆ ಅಮೆಗತಿಯಲ್ಲಿದ್ದ ದೇಶಿ ಉತ್ಪಾದನೆ ಕಲ್ಪನೆಯ ವ್ಯವಸ್ಥೆಯು ನಿಲ್ಲಲು ಸಾಧ್ಯವಾಗಲಿಲ್ಲ. ವಸಾಹತುಶಾಹಿ ರಾಷ್ಟ್ರಗಳು ಅಭಿವೃದ್ಧಿಪಡಿಸಿದ ಅನೇಕ ಕೈಗಾರಿಕಾ ಯೋಜನೆಗಳನ್ನು, ವಿದ್ಯುತ್ ಉತ್ಪಾದನಾ ಘಟಕಗಳನ್ನು ಪಶ್ಚಿಮದ ಅನೇಕ ದೇಶಗಳು ನಮಗೆ ಬೇಡವೆಂದು ರದ್ದುಗೊಳಿಸಿದ್ದವು. ಆದರೆ ಅಲ್ಲಿ ರದ್ದುಗೊಳಿಸಲ್ಪಟ್ಟ ಅನೇಕ ಕೈಗಾರಿಕಾ ಯೋಜನೆಗಳು, ವಿದ್ಯುತ್ ಉತ್ಪಾದನಾ ಘಟಕಗಳು ಭಾರತದಲ್ಲಿ ಸ್ಥಾಪಿಸಲ್ಪಟ್ಟು ಜಾಗತಿಕ ಉತ್ಪಾದನಾ ವಿಧಾನದಲ್ಲಿ ಮೂರನೆಯ ದರ್ಜೆಯ ಮಾದರಿಯನ್ನು ಒಪ್ಪಿಕೊಂಡರು. ಸರ್ಕಾರದ ಅನೇಕ ಅಭಿವೃದ್ಧಿ ಯೋಜನೆಗಳ ಫಲವಾಗಿ ಅನೇಕ ಬುಡಕಟ್ಟುಗಳು ನೆಲೆ ಕಳೆದುಕೊಂಡವು. ನಾಗರಿಕ ಪ್ರಪಂಚದಿಂದ ದೂರವಿದ್ದು ನೆಮ್ಮದಿಯ ಬದುಕನ್ನು ಸಾಗಿಸುತ್ತಿದ್ದ ಅರಣ್ಯವಾಸಿಗಳು, ಸರ್ಕಾರದ ಬೃಹತ್ ಪ್ರಮಾಣದ ಅಭಿವೃದ್ಧಿ ಯೋಜನೆಗಳ ಕೆಳಗೆ ಸಿಕ್ಕು ಒದ್ದಾಡುತ್ತಿವೆ. ಅಭಿವೃದ್ಧಿಯ ಭ್ರಮೆಯಲ್ಲಿ ಸರ್ಕಾರ ಹೇಗೆ ಯೋಜನೆಗಳನ್ನು ಕೈಗೊಳ್ಳುತ್ತದೆ ಎಂಬುದನ್ನು ಉತ್ತರ ಕನ್ನಡ ಜಿಲ್ಲೆಯನ್ನು ಗಮನಿಸಿದಾಗ ಅರ್ಥವಾಗುತ್ತದೆ".[೦೭]

ಕ್ಷೇತ್ರಕಾರ್ಯದಲ್ಲಿ ನಾನು ಬುಡಕಟ್ಟು ಅಭಿವೃದ್ಧಿಗೆ ಸಂಬಂಧಿಸಿದಂತೆ, ಸಮಾಜಕಾರ್ಯದಲ್ಲಿ ಬುಡಕಟ್ಟು ಅಭಿವೃದ್ಧಿಯ ಮಾರ್ಗಗಳು, ನೀತಿಗಳು ಯಾವ ರೀತಿ ಇದೆ ಎಂದು ತಿಳಿಯಲು ಕೆಲವು ಪುಸ್ತಕಗಳು ಹಾಗೂ ಅಂತರ್ಜಾಲದಲ್ಲಿರುವ ಕೆಲವು ಲೇಖನಗಳನ್ನು ಪರಮಾರ್ಶಿಸಿದಾಗ ಕೆಲವು ಪ್ರಮುಖವಾದ ಮಾಹಿತಿಗಳು ದೊರಕಿದವು ಮತ್ತು ಪ್ರಬಂಧ ರಚನಾ ಪ್ರಕ್ರಿಯೆಯಲ್ಲಿ ಈ ಮಾಹಿತಿಗಳು ಉಪಯುಕ್ತವಾದವು. ಮೊದಲನೆಯದಾಗಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಬುಡಕಟ್ಟು ಸಮುದಾಯಗಳು ವಾಸ ಮಾಡುವ ಸ್ಥಳ ಪ್ರದೇಶಗಳು

ಬೇರೆ ಬೇರೆ ಹಂತದ ಅಭಿವೃದ್ಧಿಯನ್ನು ತೋರಿಸುತ್ತದೆ ಮತ್ತು ಒಂದು ಪ್ರದೇಶದ ಸಮಸ್ಯೆಗಳು ಇನ್ನೊಂದು ಪ್ರದೇಶಕ್ಕಿಂತ ಭಿನ್ನವಾಗಿರುತ್ತದೆ. ಇದಕ್ಕೆ ಪೂರಕ ಎಂಬಂತೆ, ಬಯಲು ಪ್ರದೇಶ ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿರುವ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಹಂತಗಳಲ್ಲಿ ಕೆಲವೊಂದು ಗುಣಾತ್ಮಕ ಬದಲಾವಣೆಗಳನ್ನು ಕಾಣಬಹುದಾಗಿದೆ. ಅಂದರೆ, ಎಂ.ಜಿ. ಕುಲಕರ್ಣಿಯವರು (Problems of Tribal Development – A case Study) ಅವರ ಪ್ರಕಾರ "ಒಂದು ಪ್ರದೇಶದ ಹಿಂದುಳಿಯುವಿಕೆಗೂ ಮತ್ತು ಜನರ ಹಿಂದುಳಿಯುವಿಕೆಗೂ ಒಂದಕ್ಕೊಂದು ಸಂಬಂಧ ಇದೆ ಎಂದು ಇಲ್ಲಿ ಸಂಪನ್ಮೂಲಗಳ ಬಳಕೆಗಳು ಸಮತೋಲಿತದಿಂದ ಕೂಡಿರುವುದಿಲ್ಲ" ಎಂದು ತಿಳಿಸುತ್ತಾರೆ. ಎರಡನೆಯದಾಗಿ, ಎ.ಕೆ. ಸಿಂಗ್ (Tribal Development in India) "ಬುಡಕಟ್ಟು ಸಮುದಾಯದ ಜನರು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ನೇರವಾಗಿ ಭಾಗವಹಿಸದಿದ್ದಲ್ಲಿ ಅಭಿವೃದ್ಧಿ ಹೊಂದುವುದು ಅಸಾಧ್ಯ ಎಂದು ಹೇಳುತ್ತಾರೆ. ಬುಡಕಟ್ಟೇತರ ಸಮುದಾಯಗಳು ಬುಡಕಟ್ಟು ಸಮುದಾಯಗಳ ಒಳಗೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪ್ರವೇಶ ಮಾಡುವ ತನಕ, ಅಭಿವೃದ್ಧಿ ಕುರಿತ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸುತ್ತಾರೆ."

ವೃತ್ತಿಪರ ಸಮಾಜ ಕಾರ್ಯಶಾಸ್ತ್ರದಲ್ಲಿ ಬುಡಕಟ್ಟು ಅಭಿವೃದ್ಧಿಗೆ ಸಂಬಂಧಿಸಿದಂತೆ ಅನೇಕ ವಿಚಾರ ಸರಣಿಗಳನ್ನು ಮಂಡಿಸಲಾಗಿದೆ. ಮೊದಲನೆಯದಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವ ಸಂಸ್ಥೆಗಳಾಗಲೀ ಅಥವಾ ಸರಕಾರಗಳಾಗಲೀ, ಬುಡಕಟ್ಟು ಸಮುದಾಯಗಳು ಯಾವ ರೀತಿ ಇವೆಯೋ, ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ಅವುಗಳನ್ನು ಸ್ವೀಕರಿಸಬೇಕು ಅಥವಾ ಒಪ್ಪಿಕೊಳ್ಳಬೇಕು. ಜೊತೆಗೆ ಬುಡಕಟ್ಟು ಸಮುದಾಯಗಳನ್ನು, ಅವರ ಸಂಸ್ಕೃತಿಗಳನ್ನು, ಅವರ ಸಮಸ್ಯೆಗಳನ್ನು ಅರ್ಥೈಸಿಕೊಳ್ಳುವ ಮತ್ತು ಗೌರವಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಎರಡನೆಯದಾಗಿ ಬುಡಕಟ್ಟುಗಳ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಸಂಸ್ಥೆಗಳು/ಸರಕಾರಗಳು, ಬುಡಕಟ್ಟು ಸಮುದಾಯದ ಜನರ ಸ್ವಯಂ-ನಿರ್ಧಾರ ತೆಗೆದುಕೊಳ್ಳುವ ಹಕ್ಕನ್ನು ಪಾಲಿಸಬೇಕು ಮತ್ತು ಬುಡಕಟ್ಟು ಸಮುದಾಯಗಳು ತಮ್ಮ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸ್ವತಃ ನಿರ್ಧಾರಗಳನ್ನು ತೆಗೆದುಕೊಳ್ಳುವುದನ್ನು ಸದಾ ಪ್ರೋತ್ಸಾಹಿಸಬೇಕು. ಇಲ್ಲದೇ ಹೋದಲ್ಲಿ ಇತರರು ತೆಗೆದುಕೊಳ್ಳುವ ನಿರ್ಧಾರಗಳು ಬುಡಕಟ್ಟು ಸಮುದಾಯದ ಅಭಿವೃದ್ಧಿಯ ಬದಲು ಹೆಚ್ಚಿನ ಹಾನಿ ಮಾಡಬಹುದು.

ಮೂರನೆಯದಾಗಿ ಬುಡಕಟ್ಟು ಸಮುದಾಯದ ಜನರು ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ನೇರವಾಗಿ ತೊಡಗಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ

ಸಂಸ್ಥೆಗಳು/ಸರಕಾರಗಳು ಬುಡಕಟ್ಟು ಸಮುದಾಯದ ಜನರ ಜೊತೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳುವುದು ಅಗತ್ಯವಾಗುತ್ತದೆ. ಇದರಿಂದಾಗಿ ಬುಡಕಟ್ಟು ಸಮುದಾಯದ ಜನರಿಗೆ ತಮ್ಮ ಸಮಸ್ಯೆ ಮತ್ತು ಮುಂದಿನ ಗುರಿ/ಉದ್ದೇಶಗಳ ಸ್ಪಷ್ಟವಾದ ಮತ್ತು ಪ್ರಜ್ಞಾಪೂರ್ವಕ ಅರಿವು ಉಂಟಾಗುತ್ತದೆ. ಹೀಗೆ ಸಮಾಜ ಕಾರ್ಯದಲ್ಲಿ ಬರುವ ಬುಡಕಟ್ಟು ಅಭಿವೃದ್ಧಿ ವಿಚಾರಗಳನ್ನು ಗಮನದಲ್ಲಿ ಇಟ್ಟುಕೊಂಡು ಪ್ರಬಂಧ ರಚನೆಗೆ ಹೆಚ್ಚು ಮಹತ್ವ ಕೊಡಲಾಯಿತು.

೬.೩. ಬುಡಕಟ್ಟು ಜನರು ಶಿಕ್ಷಣ ಪಡೆಯುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳು

"ಪರಿಶಿಷ್ಟ ಬುಡಕಟ್ಟಿನ ಜನರಲ್ಲಿ ಅಕ್ಷರಸ್ಥರ ಸಂಖ್ಯೆ ಕಡಿಮೆ ಎಂದು ಹೇಳಬಹುದು. ಅವರಲ್ಲಿನ ಅನಕ್ಷತೆಯು ಅವರ ಅಭಿವೃದ್ಧಿಗೆ ಬಹಳ ತೊಡಕಾಗಿದೆ ಎಂದರೆ ತಪ್ಪಾಗಲಾರದು. ನಾವು ಯಾವ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ? ನಾವುಗಳು ಹೇಗೆ ನಾಗರಿಕ ಸಮಾಜದಿಂದ ಶೋಷಣೆಗೆ ಒಳಗಾಗುತ್ತಿದ್ದೇವೆ? ನಮ್ಮ ಅಭಿವೃದ್ಧಿಗಾಗಿ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ? ಆ ಕಾರ್ಯಕ್ರಮಗಳ ಪ್ರಯೋಜನವನ್ನು ಹೇಗೆ ಪಡೆಯಬೇಕು? ನಾವು ಸಾಮಾಜಿಕವಾಗಿ, ಆರ್ಥಿಕವಾಗಿ ಹೇಗೆ ಅಭಿವೃದ್ಧಿಯಾಗಬೇಕು? ಎಂಬುದರ ಬಗ್ಗೆ ಚಿಂತನೆ ಮಾಡಲು ಹಾಗೂ ತಮ್ಮ ಬುಡಕಟ್ಟುಗಳನ್ನು ಅಭಿವೃದ್ಧಿ ಪಥದೆಡೆಗೆ ಕೊಂಡೊಯ್ಯಲು ಅವರಿಗೆ ಪ್ರಮುಖವಾಗಿ ಶಿಕ್ಷಣ ಬೇಕು, ಅವರು ಅಕ್ಷರಸ್ಥರಾಗಬೇಕು, ಜಾಗತಿಕ ಸಮಾಜದಲ್ಲಿ ತಮ್ಮ ಅಸ್ಥಿತ್ವವನ್ನು ಉಳಿಸಿಕೊಳ್ಳಲು ಬುಡಕಟ್ಟುಗಳಿಗೆ ಶಿಕ್ಷಣ ಅವಶ್ಯವಾಗಿ ಬೇಕಾಗಿದೆ.

ಬುಡಕಟ್ಟುಗಳ ಸರ್ವತೋಮುಖ ಅಭಿವೃದ್ಧಿಗೆ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಭಾರತ ಸ್ವಾತಂತ್ರ್ಯವಾದ ನಂತರ. ಭಾರತ ಸರ್ಕಾರ ಹಲವು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸೌಲಭ್ಯಗಳನ್ನು ಬುಡಕಟ್ಟಿನವರಿಗೆ ಒದಗಿಸಿದೆ. ಅದರಲ್ಲಿ ಶೈಕ್ಷಣಿಕ ಸೌಲಭ್ಯಗಳೆಂದರೆ:- ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿ ಮಾಡಿದಲ್ಲದೆ, 'ಮಕ್ಕಳು ವಿದ್ಯಾಭ್ಯಾಸವನ್ನು ಪಡೆಯುವುದು ಅವರ ಹಕ್ಕು ಎಂಬುದುದನ್ನು ಸಂವಿಧಾನದಲ್ಲಿ ಸೇರಿಸಲಾಗಿದೆ. ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸದೆ ಶಿಕ್ಷಣ ವಂಚಿತರನ್ನಾಗಿ ಮಾಡುವ ತಂದೆ-ತಾಯಿಗಳ ಮೇಲೂ ಕ್ರಮ ಕೈಗೊಳ್ಳುವುದಾಗಿ ನಮ್ಮ ಸರ್ಕಾರ ಘೋಷಿಸಿದೆ.

ಇದಲ್ಲದೆ ಬುಡಕಟ್ಟು ಸಮುದಾಯದ ಮಕ್ಕಳಿಗೆ ಶಾಲೆಯಲ್ಲಿ ಮಧ್ಯಾಹ್ನದ ಊಟ, ಉಚಿತ ಬಟ್ಟೆ, ಪುಸ್ತಕ ವಿತರಣೆ ಅವರಿಗೆ ವಿದ್ಯಾರ್ಥಿ ವೇತನ, ಅಲ್ಲದೆ ಪ್ರತ್ಯೇಕ ವಿದ್ಯಾರ್ಥಿನಿಲಯ ಮತ್ತು ಆಶ್ರಮ ಶಾಲೆಗಳು ಮತ್ತು ಉದ್ಯೋಗ ಮತ್ತು ತಂತ್ರಜ್ಞಾನ ತರಬೇತಿ ಕೇಂದ್ರಗಳನ್ನು ತೆರೆದಿದೆ. ಎಲ್ಲಾ ಶಾಲಾ ಕಾಲೇಜು, ಉನ್ನತ ವ್ಯಾಸಂಗ, ವೃತ್ತಿಪರ ಕೋರ್ಸುಗಳಲ್ಲಿಯೂ ಅವರಿಗೆ ಮೀಸಲಾತಿಯನ್ನು ಒದಗಿಸಿದೆ. ಉನ್ನತ ಹುದ್ದೆಗಳಿಗೆ ಸೇರಬಯಸುವ ಅಭ್ಯರ್ಥಿಗಳಿಗೆ ಉಚಿತ

ತರಬೇತಿಯನ್ನು ನೀಡುತ್ತಿದೆ. ಹೀಗೆ ನಮ್ಮ ಸರ್ಕಾರ ಹಣಕಾಸು ಮತ್ತು ಹಣಕಾಸೇತರ ಸೌಲಭ್ಯಗಳನ್ನು ಒದಗಿಸುತ್ತಿದೆ. ಇದರಿಂದ ಅವರುಗಳು ವಿದ್ಯಾವಂತರಾಗುತ್ತಿದ್ದಾರೆ ಎಂಬುದು ಸರಕಾರದ ವಾದ. ಆದರೆ ಸರ್ಕಾರವು ಒದಗಿಸಿದ ಸೌಲಭ್ಯಗಳಿಗೆ ಅನುಗುಣವಾಗಿ ನಿರೀಕ್ಷಿತ ಮಟ್ಟದಲ್ಲಿ ಅವರುಗಳ ವಿದ್ಯಾಭ್ಯಾಸದ ಮಟ್ಟ ಏರಿಕೆಯಾಗಿಲ್ಲ ಎಂಬುದನ್ನು ಈ ಕೆಳಗಿನ ಜನಗಣತಿಯ ಅಂಕಿ-ಅಂಶಗಳಿಂದ ತಿಳಿದುಕೊಳ್ಳಬಹುದು.

ದೇಶದ ಬುಡಕಟ್ಟಿನ ಜನರ ಅಕ್ಷರಸ್ಥರು

ಜನಗಣತಿ ವರ್ಷ	ಶೇಕಡವಾರು ಅಕ್ಷರಸ್ಥರು
೧೯೬೧	೮.೫೩%
೧೯೭೧	೧೧.೩೦%
೧೯೮೧	೧೬.೩೫%
೧೯೯೧	೨೯.೬೦%
೨೦೦೧	೪೭.೧೦%

ಸರ್ಕಾರ ಬುಡಕಟ್ಟು ಜನರ ಸರ್ವತೋಮುಖ ಅಭಿವೃದ್ಧಿಗೆ ಏನೆಲ್ಲಾ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೂ ಅವರಲ್ಲಿ ಅವಿದ್ಯಾವಂತರ ಸಂಖ್ಯೆ ಹೆಚ್ಚಾಗಿರಲು ಮತ್ತು ಮಧ್ಯದಲ್ಲೆ ಶಾಲೆಗಳನ್ನೂ ಬಿಡಲು ಕಾರಣವೇನೆಂದು ಈ ಕೆಳಗಿನ ಅಂಶಗಳಿಂದ ತಿಳಿದುಕೊಳ್ಳಬಹುದು.

- ಇಂದಿಗೂ ಹಲವು ಬುಡಕಟ್ಟಿನ ಜನರು ದಟ್ಟ ಕಾಡುಗಳಲ್ಲಿ ವಾಸ ಮಾಡುತ್ತಿದ್ದಾರೆ. ಇಂತಹ ಪ್ರದೇಶಗಳಲ್ಲಿ ಶಾಲಾ ವ್ಯವಸ್ಥೆಯನ್ನು ಇನ್ನೂ ಕಲ್ಪಿಸಿಲ್ಲ. ಈ ಜನರು ಇಂದಿಗೂ ಶಾಲೆಗಳನ್ನು ನೋಡಿಲ್ಲ. ಶಾಲೆ, ವಿದ್ಯಾಭ್ಯಾಸ ಅಥವಾ ಶಿಕ್ಷಣ ಎಂದರೇನು? ಎಂಬುದರ ಬಗ್ಗೆ ತಿಳುವಳಿಕೆ ಇಲ್ಲ.
- ಚಿಕ್ಕ-ಚಿಕ್ಕ ಗುಂಪುಗಳಾಗಿ ಪರ್ವತ ಪ್ರದೇಶಗಳಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿರುವುದು ಹಾಗೂ ನಾಗರಿಕ ಸಮಾಜದಿಂದ ದೂರ ಉಳಿದಿರುವುದರಿಂದ ಈ ಜನರಿಗೆ ವಿದ್ಯಾಭ್ಯಾಸದ ಮಹತ್ವ ತಿಳಿದಿಲ್ಲ ಮತ್ತು ಅವರ ವಿದ್ಯಾಭ್ಯಾಸಕ್ಕಾಗಿ ಸರ್ಕಾರ ಒದಗಿಸುತ್ತಿರುವ ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ಯಾವುದೇ ಅರಿವಿಲ್ಲವೆಂದು ಹೇಳಬಹುದು.
- ಬುಡಕಟ್ಟುಗಳಲ್ಲಿ ಉತ್ತರ ಈಶಾನ್ಯ ವಲಯವನ್ನು ಹೊರತು ಪಡಿಸಿದರೆ ಉಳಿದ ವಲಯಗಳ ಪರಿಶಿಷ್ಟ ಬುಡಕಟ್ಟಿನ ಜನರಿಗೆ ವಿದ್ಯಾಭ್ಯಾಸವನ್ನು ನೀಡುವ ಶಿಕ್ಷಕರು ಹೊರಗಿನವರಾಗಿದ್ದಾರೆ. ಅಂದರೆ ನಾಗರಿಕ ಅಥವಾ ಪಟ್ಟಣ ಪ್ರದೇಶದಿಂದ ಬಂದ

ಉಪಾಧ್ಯಾಯರಾಗಿದ್ದಾರೆ. ಇವರಿಗೆ ಬುಡಕಟ್ಟುಗಳ ಜೀವನ ವಿಧಾನ, ಸಂಸ್ಕೃತಿಯ ಬಗ್ಗೆ ತಿಳುವಳಿಕೆ ಇರುವುದಿಲ್ಲ. ಹಾಗೆಯೇ ಉಪಾಧ್ಯಾಯ ಮತ್ತು ಬುಡಕಟ್ಟಿನ ಜನರು ಒಬ್ಬರಿಗೊಬ್ಬರು ಪರಿಚಿತರಲ್ಲದವರಾದುದರಿಂದ ಅಪರಿಚಿತರಂತೆ ವರ್ತಿಸುತ್ತಾರೆ.

- ಬುಡಕಟ್ಟು ಸಮುದಾಯದ ಮಕ್ಕಳ ತಂದೆ-ತಾಯಿಗಳಿಗೆ, ಶಿಕ್ಷಣದ ಮಹತ್ವ ತಿಳಿದಿಲ್ಲವಾದ್ದರಿಂದ ಅವರು ತಮ್ಮ ಮಕ್ಕಳನ್ನು ವಿದ್ಯಾವಂತರಾಗಿ ಎಂದು ಪ್ರೋತ್ಸಾಹಿಸುವುದಿಲ್ಲ. ಮನೆಯಲ್ಲಿಯೂ ವಿದ್ಯಾಭ್ಯಾಸ ಮಾಡಲು ಪೂರಕ ವಾತಾವರಣ ಇಲ್ಲದಿರುವುದರಿಂದ ಮಕ್ಕಳಲ್ಲಿ ಸಹಜವಾಗಿ ವಿದ್ಯಾಭ್ಯಾಸದ ಕಡೆ ಆಸಕ್ತಿ ಇರುವುದಿಲ್ಲ. ಬರೀ ಸಂಬಳಕ್ಕಾಗಿ ಶಿಕ್ಷಕರಾಗಿರುವ ಶಿಕ್ಷಕರು ಹೆಚ್ಚಿನ ಆಸಕ್ತಿ ವಹಿಸಿ ಆ ಮಕ್ಕಳನ್ನು ವಿದ್ಯಾವಂತರನ್ನಾಗಿಸಲು ಮುಂದೆ ಬರುವುದಿಲ್ಲ. ತಿಂಗಳಲ್ಲಿ ಹಲವು ದಿನಗಳು ಶಿಕ್ಷಕರು ಶಾಲೆಗೆ ಗೈರು ಹಾಜರಾಗಿರುತ್ತಾರೆ. ಏಕ ಶಿಕ್ಷಕರಿರುವ ಕಡೆ ಆ ಶಿಕ್ಷಕ ಶಾಲೆ ಕಡೆ ಹೋಗುವುದೇ ಇಲ್ಲ. ಇದಕ್ಕಿಂತ ಹೆಚ್ಚಾಗಿ ನಾಗರಿಕ ಸಮಾಜ ಶಿಕ್ಷಕರುಗಳು ಬುಡಕಟ್ಟು ಪ್ರದೇಶಗಳ ಶಾಲೆಗಳಿಗೆ ಶಿಕ್ಷಕರಾಗಲು ಇಷ್ಟ ಪಡುವುದಿಲ್ಲ. ಅವರು ಪಟ್ಟಣ/ನಗರ ಪ್ರದೇಶಗಳಲ್ಲಿ ನೆಲೆಸಲು ಇಷ್ಟಪಡುತ್ತಾರೆ. ತಮ್ಮ ವಿದ್ಯಾರ್ಥಿಗಳು ಓದಿನ ಬಗ್ಗೆ ಯಾವುದೇ ರೀತಿ ಕಾಳಜಿ ವಹಿಸುವುದಿಲ್ಲ.

- ಬುಡಕಟ್ಟುಗಳು ವಾಸಿಸುವಂತಹ ಪ್ರದೇಶಗಳಲ್ಲಿ ಸರ್ಕಾರ ಶಾಲೆಗಳನ್ನು ಮತ್ತು ಆಶ್ರಮ ಶಾಲೆಗಳನ್ನು ತೆರೆದಿದೆ. ಆದರೆ ಈ ಶಾಲೆಗಳಲ್ಲಿ ಕೇವಲ ಶೇಕಡ ೧೦ ರಿಂದ ೧೫ರಷ್ಟು ಮಕ್ಕಳು ಮಾತ್ರ ಬುಡಕಟ್ಟು ಸಮುದಾಯಗಳಿಗೆ ಮಾತ್ರ ಸೇರಿದರಾಗಿರುತ್ತಾರೆ. ಆಶ್ರಮ ಶಾಲೆಗಳಲ್ಲಿ ನಡೆಯುವ ಕೆಲವೊಂದು ಭ್ರಷ್ಟಾಚಾರಗಳಿಂದಲೂ ತಂದೆ-ತಾಯಿಗಳು ತಮ್ಮ ಮಕ್ಕಳನ್ನು ಇಲ್ಲಿಗೆ ಕಳುಹಿಸುವುದಿಲ್ಲ.

- ಪ್ರತಿ ಜನಗಣತಿಯ ವರ್ಷದಲ್ಲಿ ಬುಡಕಟ್ಟು ಸಮುದಾಯಗಳ ಅಕ್ಷರಸ್ಥರ ಪ್ರಮಾಣವನ್ನು ಪ್ರಕಟಿಸಲಾಗುತ್ತಿದೆ ಹಾಗೂ ಅವರಲ್ಲಿ ಅಕ್ಷರಸ್ಥರ ಪ್ರಮಾಣ ಏರಿಕೆಯಾಗುತ್ತಿರುವುದನ್ನು ಕಾಣಬಹುದು. ಆದರೆ ಅದರ ಅರ್ಧ ಸತ್ಯವೇನೆಂದರೆ ಕೆಲವು ರಾಜಕೀಯ ನಾಯಕರುಗಳ ಪ್ರಭಾವದಿಂದ ಇತರೆ ಹಿಂದುಳಿದ ಜಾತಿಗಳನ್ನು ಪರಿಶಿಷ್ಟ ಬುಡಕಟ್ಟಿನ ಪಟ್ಟಿಗೆ ಸೇರಿಸಲಾಗುತ್ತಿದೆ. ಈ ಪಟ್ಟಿ ವರ್ಷದಿಂದ ವರ್ಷಕ್ಕೆ ದೊಡ್ಡದಾಗುತ್ತಿದೆ. ಹೀಗೆ ಹೊಸದಾಗಿ ಸೇರ್ಪಡೆಯಾಗುತ್ತಿರುವ ನಗರ ಪ್ರದೇಶದ ಇತರ ಜಾತಿಗಳು ಪರಿಶಿಷ್ಟ ಬುಡಕಟ್ಟಿನ ಜನರಿಗೆ ಸಿಗುತ್ತಿರುವ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ.

ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿರುವ ನಿಜವಾದ ಬುಡಕಟ್ಟಿನ ಜನರಿಗೆ ಯಾವುದೇ ಸೌಲಭ್ಯ ದೊರೆಯುತ್ತಿಲ್ಲವೆಂದು ಹೇಳಬಹುದು.

- ಇಂದು ಸರ್ಕಾರ ಬುಡಕಟ್ಟುಗಳ ವಿದ್ಯಾಭ್ಯಾಸದ ಹೊಣೆಯನ್ನು ಹಲವು NGO ಗಳಿಗೆ ವಹಿಸಿದೆ. NGO ಗಳು ಬುಡಕಟ್ಟಿನ ಜನರ ವಿದ್ಯಾಭ್ಯಾಸಕ್ಕಾಗಿ ಹತ್ತು ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿವೆ. ಆದರೆ ಕೆಲವು NGO ಗಳ ಮುಖ್ಯ ಉದ್ದೇಶವೆಂದರೆ ಹಣ ಮಾಡುವುದಾಗಿದೆ. ಬುಡಕಟ್ಟುಗಳಲ್ಲಿ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೇವೆ. ಇಂತಿಷ್ಟು ಜನ ವಿದ್ಯಾವಂತರಾಗಿದ್ದಾರೆ/ರಾಗುತ್ತಿದ್ದಾರೆ ಎಂದು ಸುಳ್ಳು ಮಾಹಿತಿ ನೀಡಿ ಸರ್ಕಾರವನ್ನು ವಂಚಿಸಿ ಹಣ ಮಾಡುತ್ತಿವೆ.
- ಕ್ರಿಸ್ತ ಮಿಷನರಿಗಳು ವಿದ್ಯಾಭ್ಯಾಸ ನೀಡುವುದರ ನೆಪದಲ್ಲಿ ಬುಡಕಟ್ಟು ಜನರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳಿಸುತ್ತಿದ್ದಾರೆ ಎಂಬ ವಾತಾವರಣ ನಿರ್ಮಾಣ ಮಾಡಿರುವುದರಿಂದ ಹಾಗೂ ಇದರ ಸಂಬಂಧವಾಗಿ ಆಗಾಗ್ಗೆ ಗಲಭೆ, ಘರ್ಷಣೆಗಳಾಗುತ್ತಿರುವುದರಿಂದ ಬುಡಕಟ್ಟಿನ ಜನರು ವಾಸಿಸುವ ಪ್ರದೇಶಗಳಲ್ಲಿ ಒಂದು ರೀತಿ ಭಯದ ವಾತಾವರಣ ನಿರ್ಮಾಣಗೊಳ್ಳುತ್ತಿದೆ. ಇದರಿಂದಾಗಿ ಬುಡಕಟ್ಟಿನ ಜನರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಲು ಹಿಂಜರಿಯುತ್ತಿದ್ದಾರೆ.
- ಸರ್ಕಾರದ ಕಾನೂನುಗಳು ಬುಡಕಟ್ಟುಗಳನ್ನು ಒಕ್ಕಲೆಬ್ಬಿಸುತ್ತಿರುವುದರಿಂದ ತಮ್ಮ ನೆಲೆಗಳನ್ನು ಕಳೆದುಕೊಂಡು ಈ ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸ ತೊಡಗಿದ್ದಾರೆ. ಇವರುಗಳನ್ನು ಸ್ಥಳೀಯ ಗ್ರಾಮೀಣ ಜನರು ಅಸ್ಪೃಶ್ಯರಂತೆ ಕಾಣುತ್ತಿದ್ದಾರೆ. ಇವರ ಮಕ್ಕಳನ್ನು ಶಾಲೆಗಳಲ್ಲಿ ಅವಮಾನೀಯವಾಗಿ ನಡೆಸಿಕೊಳ್ಳುವುದರಿಂದ ಈ ಮಕ್ಕಳು ಶಾಲೆಗೆ ಹೋಗುತ್ತಿಲ್ಲವೆಂದು ಕೆಲವು ಅಧ್ಯಯನಗಳಿಂದ ತಿಳಿದು ಬಂದಿದೆ. ಆದಿವಾಸಿಗಳ ಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳಾ ಸಮುದಾಯವಂತೂ ಅಜ್ಞಾನದ ಕೂಪದಲ್ಲಿಯೇ ಇದೆ. ಇವರುಗಳ ವಿದ್ಯಾಭ್ಯಾಸಕ್ಕೆ ಯಾವುದೇ ಗಮನಹರಿಸಿಲ್ಲ.

ಸರ್ಕಾರ ಪರಿಶಿಷ್ಟ ಬುಡಕಟ್ಟಿನ ಪಟ್ಟಿಯನ್ನು ದೊಡ್ಡದು ಮಾಡುವ ಬದಲು ನಿಜವಾದ ಬುಡಕಟ್ಟಿನ ಜನರನ್ನು ಗುರುತಿಸಿ ಅವರುಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಪರಿಸ್ಥಿತಿಯನ್ನು ನಿವಾರಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಯಶಸ್ವಿಯಾಗಿ ಕಾರ್ಯರೂಪಕ್ಕೆ ತಂದಾಗ ಮಾತ್ರ ಅವರ ಅಭಿವೃದ್ಧಿ ಸಾಧ್ಯ ಎಂದು ಹೇಳಬಹುದು".೧೮

೬.೪. ಸರಕಾರದ ಪ್ರಸ್ತುತ ಸಮಸ್ಯೆಗಳು ಮತ್ತು ಮುಂದಿರುವ ಸವಾಲುಗಳು:

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸರಕಾರ ಮತ್ತು ಸರ್ಕಾರಿ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಕಾರ್ಯವೈಖರಿಗಳು ಈ ಜಿಲ್ಲೆಗಳ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದರೆ ತಪ್ಪಾಗಲಾರದು. ಎರಡೂ ಜಿಲ್ಲೆಗಳಲ್ಲಿ ಈ ಹಿಂದೆ ಅಧಿಕಾರಕ್ಕೆ ಬಂದ ಜಿಲ್ಲಾಧಿಕಾರಿಗಳಾಗಲೀ ಐ.ಟಿ.ಡಿ.ಪಿ. ಇಲಾಖೆಯ ಯೋಜನಾ ಸಮನ್ವಯಾಧಿಕಾರಿಗಳಾಗಲೀ ಅವರು ತೆಗೆದುಕೊಂಡ ನಿರ್ಧಾರಗಳು ಅನುಷ್ಠಾನ ಮಾಡಿದ ಹೊಸ ಕ್ರಿಯಾತ್ಮಕ ಕೆಲಸಗಳು ಮತ್ತು ಬುಡಕಟ್ಟು ಸಮುದಾಯದ ಮುಖಂಡರುಗಳು, ಜನರೊಂದಿಗೆ ಬೆಳೆಸಿಕೊಂಡಿದ್ದ ಸಂಬಂಧಗಳು ಇವುಗಳೆಲ್ಲವೂ ಇಂದಿನ ಬುಡಕಟ್ಟುಗಳ ಅಭಿವೃದ್ಧಿಯ ಚಿತ್ರಣಕ್ಕೆ ಕಾರಣಗಳು. ಇದರ ಜೊತೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಕೆಲವು ಬೆರಳೆಣಿಕೆಯ ಕ್ರಿಯಾಶೀಲ ಶಾಸಕರುಗಳ ಆಡಳಿತ, ಜನಸ್ಪಂದನೆ ಮತ್ತು ಶಿಫಾರಸ್ಸುಗಳು ಕೂಡಾ ಈ ಉಭಯ ಜಿಲ್ಲೆಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇವೆಲ್ಲದರ ಪರಿಣಾಮವಾಗಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಯೋಜನೆಗಳು ತ್ವರಿತಗತಿಯಲ್ಲಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿದ್ದು, ರಾಜ್ಯದ ಉಳಿದ ಜಿಲ್ಲೆಗಳಿಗಿಂತ ಅಭಿವೃದ್ಧಿ ಪ್ರಕ್ರಿಯೆಯು ವೇಗವಾಗಿ ಸಾಗುತ್ತಿದೆ. ಇವೆಲ್ಲದರ ಜೊತೆಗೆ ಸರಕಾರಿ ಸಂಸ್ಥೆಗಳು ಅನೇಕ ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ಎದುರಿಸುತ್ತಿದ್ದು, ಈ ಸಮಸ್ಯೆಗಳ ಮತ್ತು ಸವಾಲುಗಳೇ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಪ್ರಮುಖ ಅಡೆ–ತಡೆಗಳಾಗಿವೆ ಎಂದರೆ ತಪ್ಪಾಗಲಾರದು.

೬.೪.೧. ಸರಕಾರದ ನೀತಿಗಳು ಮತ್ತು ಅಭಿವೃದ್ಧಿ ಯೋಜನೆಗಳ ನಡುವಿನ ಗೊಂದಲಗಳು:

ಸರಕಾರದ ಅಸ್ಪಷ್ಟ ನೀತಿಗಳು, ದುರ್ಬಲ ಬುಡಕಟ್ಟು ಸಮುದಾಯಗಳಿಗೊಂದು ನೀತಿ ಮತ್ತು ಸಬಲ ವರ್ಗದವರಿಗೊಂದು ನೀತಿ ಸರಕಾರದಿಂದ ತಮಗೆ ಬೇಕಾಗುವ ರೀತಿಯಲ್ಲಿ ನೀತಿಗಳ ಬದಲಾವಣೆ ಹೀಗೆ ಅನೇಕ ಕಾರಣಗಳಿಂದ ಸರಕಾರದ ನೀತಿ ಮತ್ತು ಅಭಿವೃದ್ಧಿ ಯೋಜನೆಗಳ ಗೊಂದಲಗಳಿಂದ ಕೆಲವೊಂದು ಅಭಿವೃದ್ಧಿ ಯೋಜನೆಗಳು ವಿಫಲವಾಗಿವೆ. ಕೊರಗ ಮತ್ತು ಮಲೆಕುಡಿಯರ ಕುಲಕಸುಬುಗಳಿಗೆ ಸಂಬಂಧ ಪಟ್ಟಂತೆ, ಮಲೆಕುಡಿಯರನ್ನು ಪಶ್ಚಿಮ ಘಟ್ಟದ ಅಭಯಾರಣ್ಯಗಳಿಂದ ಒಕ್ಕಲೆಬ್ಬಿಸಿ ಅವರಿಗೆ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸುವ ವಿಚಾರದಲ್ಲಿ ಭೂಮಿ ಮತ್ತು ಭೂ ಹಕ್ಕು ಪತ್ರಗಳನ್ನು ಹಂಚುವ ಮತ್ತು ನೀಡುವಿಕೆಯ ಕುರಿತಂತೆ ಮತ್ತು ಇನ್ನೂ ಅನೇಕ ಸೂಕ್ಷ್ಮ ವಿಚಾರಗಳಲ್ಲಿ ಸರಕಾರದ ನೀತಿಗಳ ಮತ್ತು ಅಭಿವೃದ್ಧಿ

ಯೋಜನೆಗಳ ಗೊಂದಲಗಳಿಂದ ಸರಕಾರವು ಬುಡಕಟ್ಟು ಸಮುದಾಯದ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಲು ವಿಫಲವಾಗಿದೆ.

೬.೪.೨. ಅಸ್ಥಿರ ಸರಕಾರಗಳು ಮತ್ತು ಸರಕಾರದ ಪ್ರಭಾವ ಮತ್ತು ಅಧಿಕಾರಿಗಳ ವರ್ಗಾವಣಾ ನೀತಿಗಳು:

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯಲ್ಲಿ ಸರಕಾರಿ ಸಂಸ್ಥೆಗಳು ಹಿನ್ನೆಡೆ ಅನುಭವಿಸಲು ಪ್ರಮುಖ ಕಾರಣ ಅಸ್ಥಿರ ಸರಕಾರಗಳು. ಸರಕಾದ ಒಂದು ಅವಧಿಯಲ್ಲಿ ಒಂದು ಸಚಿವಾಲಯಕ್ಕೆ ಅನೇಕ ಸಚಿವರು ಅಧಿಕಾರವನ್ನು ವಹಿಸಿ ಆ ಸಚಿವಾಲಯದ ಸಂಕ್ಷಿಪ್ತ ವಿಷಯಗಳನ್ನು ಅರ್ಥ ಮಾಡಿಕೊಳ್ಳದ ಮೊದಲೇ ಆ ಸ್ಥಾನಕ್ಕೆ ಇನ್ನೊಬ್ಬ ವ್ಯಕ್ತಿ ಬಂದಿರುತ್ತಾರೆ. ಹೀಗಾಗಿ ಸಚಿವರುಗಳು ಆಯಾಯ ಪ್ರದೇಶದ ಬುಡಕಟ್ಟುಗಳ ಸ್ಥಿತಿ-ಗತಿಗಳು, ಅವರ ಅಗತ್ಯತೆಗಳು, ಅವರಿಗೆ ಸೂಕ್ತವಾಗುವ ಅಭಿವೃದ್ಧಿ ಯೋಜನೆಗಳ ವಿವರಗಳನ್ನು ಗ್ರಹಿಸಿಕೊಳ್ಳದೆ ಯೋಜನೆಗಳನ್ನು ಜಾರಿಗೊಳಿಸುತ್ತಾರೆ ಅಥವಾ ಅರ್ಧಕ್ಕೆ ನಿಲ್ಲಿಸುತ್ತಾರೆ. ಇದರ ಪರಿಣಾಮ ಬುಡಕಟ್ಟುಗಳ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಕಂಡು ಬರುತ್ತದೆ. ಇದರ ಜೊತೆಗೆ ಸರಕಾರದ ಪ್ರಭಾವ ಮತ್ತು ಅಧಿಕಾರಿಗಳ ವರ್ಗಾವಣಾ ನೀತಿಗಳಿಂದಾಗಿ ದಕ್ಷ, ಪ್ರಾಮಾಣಿಕ, ಯೋಗ್ಯ ಮತ್ತು ಅನುಭವಿ ಅಧಿಕಾರಿಗಳು ಒಂದೇ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಲು ಅವಕಾಶ ಸಿಗದ ಕಾರಣ ಅವರು ಸಿದ್ಧಪಡಿಸಿದ ಯೋಜನೆಗಳು ಕಾರ್ಯಗತ ರೂಪಕ್ಕೆ ಬರದೆ ನಿಂತು ಹೋಗುತ್ತದೆ. ಇನ್ನು ಅನುಷ್ಠಾನಗೊಂಡ ಅಭಿವೃದ್ಧಿ ಕಾರ್ಯಕ್ರಮಗಳು ಅಂತಿಮ ಗುರಿಗಳನ್ನು ತಲುಪದೆ ವಿಫಲವಾಗಿ ಬಿಡುತ್ತವೆ ಮತ್ತು ಈ ರೀತಿಯಾಗಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಪ್ರಕ್ರಿಯೆಗೆ ಹಿನ್ನಡೆಯಾಗುತ್ತದೆ.

೬.೪.೩. ರಾಜಕೀಯ ಪಕ್ಷಗಳ ಮತ್ತು ರಾಜಕರಣಿಗಳ ಹಸ್ತಕ್ಷೇಪ:

ಸರಕಾರಿ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಕೆಲವೊಮ್ಮೆ ರಾಜಕೀಯ ಪಕ್ಷಗಳ ಅಥವಾ ರಾಜಕರಣಿಗಳ ಹಸ್ತಕ್ಷೇಪವೇ ಪ್ರಮುಖ ಸಮಸ್ಯೆಯಾಗಿ ಕಾಡುತ್ತಿದೆ. ಯಾವುದೋ ಬುಡಕಟ್ಟಿನ ವ್ಯಕ್ತಿಯೋ, ಕುಟುಂಬವೋ ಅಥವಾ ವಿರೋಧ ಪಕ್ಷದ ಬೆಂಬಲಿಗರೆಂದು ತಿಳಿದೋ, ಅಥವಾ ತನ್ನ ಪಕ್ಷದ ಕಾರ್ಯಕರ್ತರೆಂದೋ ಅವರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ತಡೆಯೊಡ್ಡುವುದು ಅಥವಾ ಕಾರ್ಯಕ್ರಮಗಳು ತ್ವರಿತವಾಗಿ ಸಿಗುವ ಹಾಗೆ ಮಾಡಲು ಹಸ್ತಕ್ಷೇಪ ಮಾಡುವುದು ಕಂಡು ಬಂದಿದೆ. ಇದರಿಂದ ಕೆಲವು ಕುಟುಂಬಗಳು ಇನ್ನೂ ಸಂಕಷ್ಟದಲ್ಲಿರುವುದನ್ನು ಕಾಣಬಹುದು.

೬.೪.೪. ಭ್ರಷ್ಟಾಚಾರ:

ಬುಡಕಟ್ಟು ಅಭಿವೃದ್ಧಿ ಸಂಬಂಧಿತ ಸರಕಾರಿ ಸಂಸ್ಥೆಗಳಲ್ಲಿ ಕೆಲವೊಂದು ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಭ್ರಷ್ಟಾಚಾರದಲ್ಲಿ ತೊಡಗಿಕೊಂಡಿದ್ದು, ಇದರಿಂದಾಗಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯಲ್ಲಿ ಹಿನ್ನೆಡೆಯಾಗಿದೆ ಎಂದು ಹೇಳಬಹುದು. ಲಂಚ, ಹಣ ಮತ್ತು ಅಧಿಕಾರಗಳ ದುರುಪಯೋಗ ಹೀಗೆ ಅನೇಕ ತರಹದ ಭ್ರಷ್ಟಾಚಾರದ ಕೆಲಸಗಳಲ್ಲಿ ಕೆಲವು ಸಿಬ್ಬಂದಿಗಳು ಮಾತ್ರವಲ್ಲ ಬದಲಿಗೆ ಅಧಿಕಾರಿಗಳೂ ಕೂಡ ಶಾಮೀಲಾಗಿರುವುದು ಕಂಡು ಬಂದಿದೆ. ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಬಿಡುಗಡೆ ಹಣದಲ್ಲಿ ಬೆಲೆಬಾಳುವ ಪೀಠೋಪಕರಗಳು, ವಾಹನಗಳನ್ನು ಖರೀಧಿಸಿಕೊಂಡು ಸ್ವಂತಕ್ಕೆ ಬಳಸಿಕೊಳ್ಳಲಾಗಿದೆ. ಕೆಲವೊಮ್ಮೆ ಹಣಕೊಟ್ಟು ವ್ಯಕ್ತಿಗೆ ಅನುದಾನ/ಅಭಿವೃದ್ಧಿ ಕಾರ್ಯಕ್ರಮಗಳ ಲಾಭಾಂಶಗಳು ಮೊದಲಿಗೆ ತ್ವರಿತವಾಗಿ ಆ ವ್ಯಕ್ತಿಯ ಹೆಸರಿಗೆ ಮಂಜೂರುಗೊಳ್ಳುತ್ತವೆ. ಈ ರೀತಿಯ ಭ್ರಷ್ಟಾಚಾರಗಳಿಂದ ಬುಡಕಟ್ಟುಗಳ ಅಭಿವೃದ್ಧಿಗೆ ಹಿನ್ನೆಡೆಯಾಗಿದೆ.

೬.೪.೫. ಸಿಬ್ಬಂದಿ ಕೊರತೆ:

ಸರಕಾರಿ ಸಂಸ್ಥೆಗಳು ಎದುರಿಸುತ್ತಿರುವ ಇನ್ನೊಂದು ಪ್ರಮುಖ ಸಮಸ್ಯೆ ಸಿಬ್ಬಂದಿಗಳ ಕೊರತೆ. ಬುಡಕಟ್ಟುಗಳ ಅಭಿವೃದ್ಧಿ ಸಂಬಂಧಿ ಇಲಾಖೆಗಳಲ್ಲಿ ಸಿಬ್ಬಂದಿಗಳ ಕೊರತೆಯಿದ್ದು, ಅನೇಕ ವರ್ಷಗಳಿಂದ ಈ ಹುದ್ದೆಗಳಿಗೆ ಸರಕಾರ ನೇಮಕ ಮಾಡಿಲ್ಲ ಎಂಬ ವಿಷಯ ಗಮನಕ್ಕೆ ಬಂದಿದೆ. ಹೀಗಾಗಿ ಸರಕಾರಿ ಇಲಾಖೆಗಳಲ್ಲಿ ಕೆಲವು ಸಿಬ್ಬಂದಿಗಳು ಇಬ್ಬರು ಮೂವರ ಕೆಲಸಗಳನ್ನು ಒಬ್ಬರೇ ನಿಭಾಯಿಸಬೇಕಾದ ಪರಿಸ್ಥಿತಿ ಉಂಟಾಗಿದ್ದು, ಸಿಬ್ಬಂದಿಗಳು ಒತ್ತಡದಲ್ಲಿ ಕಾರ್ಯ ನಿರ್ವಹಿಸಬೇಕಾದ ಸನ್ನಿವೇಶ ಉಂಟಾಗಿದೆ. ಇನ್ನು ಹೆಚ್ಚಿನ ಇಲಾಖೆಗಳಲ್ಲಿ ಗುತ್ತಿಗೆ ಆಧಾರಲ್ಲಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಕೆಲ ಸಿಬ್ಬಂದಿಗಳಿಗೆ ಸರಿಯಾದ ತರಬೇತಿ ಸಿಗದ ಕಾರಣ ಕೆಲಸಗಳು ನಿಧಾನವಾಗಿ ಸಾಗುತ್ತಿವೆ. ಜೊತೆಗೆ ಗುತ್ತಿಗೆ ಆಧಾರದಲ್ಲಿ ನಿರ್ವಹಿಸುವ ಸಿಬ್ಬಂದಿಗಳಿಗೆ ಕನಿಷ್ಠ ವೇತನ ನೀಡುವುದರಿಂದ ಅವರಲ್ಲಿ ಪರಿಣಾಮಕಾರಿಯಾದ ಕೆಲಸಗಳನ್ನು ನಿರೀಕ್ಷಿಸುವುದು ಕಷ್ಟ ಸಾಧ್ಯವಾಗಿದೆ. ಈ ಎಲ್ಲಾ ಕಾರಣಗಳಿಂದ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಪ್ರಕ್ರಿಯೆಗಳು ಕುಂಠಿತಗೊಂಡಿವೆ ಎಂದು ಹೇಳಬಹುದು.

೬.೪.೬. ಬುಡಕಟ್ಟು ಶಾಸಕರು ಮತ್ತು ಸ್ಥಳೀಯ ಸಚಿವರುಗಳ ಕೊರತೆ:

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ತೊಡಕಾಗಿರುವ ಇನ್ನೊಂದು ಪ್ರಮುಖ ಅಂಶವೆಂದರೆ ಸ್ಥಳೀಯ ಬುಡಕಟ್ಟು ಸಮುದಾಯದ ವ್ಯಕ್ತಿಗಳಿಗೆ ಶಾಸಕ ಸ್ಥಾನಮಾನ ಇಲ್ಲಿಯವರೆಗೆ ಒಲಿಯದೇ ಇರುವುದು ಮತ್ತು ಸಮಾಜ ಕಲ್ಯಾಣ

ಇಲಾಖೆ ಅಥವಾ ಬುಡಕಟ್ಟು ಅಭಿವೃದ್ಧಿ ಸಂಬಂಧಿತ ಸಚಿವಾಲಯಗಳಲ್ಲಿ ಸ್ಥಳೀಯ ಶಾಸಕರುಗಳಿಗೆ ಸಚಿವ ಸ್ಥಾನ ಸಿಗದೇ ಇರುವುದರಿಂದ ಉಭಯ ಜಿಲ್ಲೆಗಳ ಬುಡಕಟ್ಟು ಸಮುದಾಯಗಳಿಗೆ ನೆರವಾಗುವಂತಹ ವಿಶೇಷ ಅಭಿವೃದ್ಧಿ ಯೋಜನೆಗಳು ಇನ್ನೂ ಜಾರಿಯಾಗಿಲ್ಲ. ಹೊರಗಿನ ಜಿಲ್ಲೆಗಳ ಸಚಿವರುಗಳಿಗೆ ಸ್ಥಳೀಯ ಬುಡಕಟ್ಟು ಸಮುದಾಯಗಳ ಪ್ರಸ್ತುತ ಸಾಮಾಜಿಕ ಸ್ಥಿತಿ-ಗತಿಗಳು, ಸಮಸ್ಯೆಗಳ ಬಗ್ಗೆ ಸ್ಪಷ್ಟವಾದ ಜ್ಞಾನ ಅರಿವು ಇಲ್ಲದಿರುವುದರಿಂದ ಅವರಿಗೆ ಸೂಕ್ತವಾಗುವ ಅಭಿವೃದ್ಧಿ ಯೋಜನೆಗಳು ಮತ್ತು ಅಭಿವೃದ್ಧಿ ಯೋಜನೆಗಳ ಪ್ರಮಾಣ ಕಡಿಮೆಯಾಗಿದೆ ಮತ್ತು ಇಲ್ಲಿನ ಬುಡಕಟ್ಟು ಸಮುದಾಯಗಳ ಕಡೆಗಿನ ವಿಶೇಷ ಆಸಕ್ತಿ ಕಾಳಜಿ ಇಲ್ಲದಿರುವುದನ್ನು ಕಾಣಬಹುದು.

೬.೪.೭. ಬುಡಕಟ್ಟು ಸಮುದಾಯದ ಜನಸಂಖ್ಯೆ ಆಧಾರದಲ್ಲಿ ಅಭಿವೃದ್ಧಿಯ ಕಡೆಗಣನೆ:-

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬುಡಕಟ್ಟು ಸಮುದಾಯಗಳ ಜನಸಂಖ್ಯೆ ಉಳಿದ ಜಿಲ್ಲೆಗಳಿಗೆ ಹೋಲಿಕೆ ಮಾಡಿದಾಗ ಕಡಿಮೆಯಿದ್ದು, ಈ ಕಾರಣದಿಂದ ಇಲ್ಲಿನ ಸಮುದಾಯಗಳ ಅಭಿವೃದ್ಧಿಯನ್ನು ಸ್ವಲ್ಪ ಮಟ್ಟಿಗೆ ಕಡೆಗಣಿಸಲಾಗಿದೆ ಎಂದು ಹೇಳಬಹುದು. ಕೆಲವು ಜಿಲ್ಲೆಗಳಲ್ಲಿ ಅನುಷ್ಠಾನಗೊಂಡ ಕೆಲವು ವಿಶೇಷ ಅಭಿವೃದ್ಧಿ ಕಾರ್ಯಕ್ರಮಗಳು ಈ ಜಿಲ್ಲೆಗಳಲ್ಲಿ ಇಲ್ಲದಿರುವುದು, ಸಚಿವಾಲಯಗಳಿಂದ ಬಿಡುಗಡೆಯಾಗುವ ಹಣದ ಪ್ರಮಾಣ, ವಿಶೇಷ ನಿಗಮ ಮಂಡಳಿಗಳ ಸ್ಥಾಪನೆ, ಅಧಿಕಾರಿಗಳು ಮತ್ತು ಸಿಬ್ಬಂದಿಗಳ ನೇಮಕಾತಿ ಹೀಗೆ ಅನೇಕ ವಿಷಯಗಳಲ್ಲಿ ಸರಕಾರವು ಈ ಉಭಯ ಜಿಲ್ಲೆಗಳಿಗೆ ಜನಸಂಖ್ಯೆಯ ಆಧಾರದಲ್ಲಿ ತಾರತಮ್ಯ ಮಾಡಿದೆ ಎಂದು ಹೇಳಬಹುದು.

೬.೪.೮. ಸಂಪರ್ಕ ವಂಚಿತ ಮತ್ತು ಬೇರ್ಪಟ್ಟ ಬುಡಕಟ್ಟು ಸಮುದಾಯದ ಕುಟುಂಬಗಳನ್ನು ಗುರುತಿಸುವುದು:

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಸಂಬಂಧ ಪಟ್ಟಂತೆ, ಸರಕಾರಿ ಸಂಸ್ಥೆಗಳು ಎದುರಿಸುವ ಪ್ರಮುಖ ಸಮಸ್ಯೆ ಅಥವಾ ಸವಾಲು ಎಂದರೆ ಅದು ಸಂಪರ್ಕವಂಚಿತ ಮತ್ತು ಬೇರ್ಪಟ್ಟ ಬುಡಕಟ್ಟು ಸಮುದಾಯಗಳ ಕುಟುಂಬಗಳನ್ನು ಗುರುತಿಸುವುದು ಮತ್ತು ಅವರಿಗೆ ಅಭಿವೃದ್ಧಿ ಯೋಜನೆಗಳ ಪ್ರಯೋಜನ ತಲುಪಿಸುವುದು. ಕೊರಗ ಮತ್ತು ಮಲೆಕುಡಿಯ ಸಮುದಾಯಗಳ ಕೆಲ ಕುಟುಂಬಗಳು ಹೊರಗಿನ ಸಂಪರ್ಕಗಳನ್ನು ಕಡಿದುಕೊಂಡು ಕಾಡಿನ ಅಂಚಿನ ಪ್ರದೇಶಗಳಲ್ಲೋ ಅಥವಾ ದೂರದ ಪ್ರದೇಶಗಳಲ್ಲಿ ಸಣ್ಣ ಗುಡಿಸಲುಗಳಲ್ಲಿ ಅತ್ಯಂತ ಸಂಕಷ್ಟದಲ್ಲಿ ಬದುಕುತ್ತಿವೆ. ಸಂಪರ್ಕ ಮತ್ತು ಮಾಹಿತಿಗಳ ಕೊರತೆಯಿಂದ ಇಂತಹ ಕುಟುಂಬಗಳನ್ನು ಗುರುತಿಸಿ ಅವರಿಗೆ ಬೇಕಾದ

ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗದೇ ಇರುವುದು ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಪ್ರಕ್ರಿಯೆಗೆ ಪ್ರಮುಖವಾದ ಅಡೆತಡೆಯಾಗಿದೆ ಎಂದು ಹೇಳಬಹುದು.

೬.೪.೯.ಆಡಳಿತ ಮತ್ತು ಬುಡಕಟ್ಟು ಸಮುದಾಯದ ಅಭಿವೃದ್ಧಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ತಂತ್ರಜ್ಞಾನ ಬಳಕೆಯ ಕೊರತೆ:

ಪ್ರಸ್ತುತ ಬುಡಕಟ್ಟುಗಳ ಅಭಿವೃದ್ಧಿಗೆ ಅನೇಕ ಸರಕಾರಿ ಇಲಾಖೆಗಳು ಅನೇಕ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತಂದು ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಶ್ರಮಿಸುತ್ತಿರುವುವದು ಒಳ್ಳೆಯ ವಿಚಾರವಾದರೂ, ಈ ಸಂದರ್ಭಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಹೊಂದದೇ ಮತ್ತು ಬಳಸದೇ ಇರುವಂತಹದ್ದು. ಸರಕಾರಿ ಸಂಸ್ಥೆಗಳು ಎದುರಿಸುತ್ತಿರುವ ಪ್ರಮುಖ ಸಮಸ್ಯೆ ಎಂದು ಹೇಳಬಹುದು. ಅಧಿಕಾರಿಗಳ ಮತ್ತು ಸಿಬ್ಬಂದಿಗಳ ನಡುವೆ, ಅಧಿಕಾರಿಗಳ ಮತ್ತು ಬುಡಕಟ್ಟು ಸಮುದಾಯದ ಫಲಾನುಭವಿಗಳ ನಡುವೆ ನೇರ ಸಂವಹನಕ್ಕೆ ವಿಡಿಯೋ ಕಾನ್ಫರೆನ್ಸ್ ಸೌಲಭ್ಯಗಳ ಕೊರತೆ, ಅಭಿವೃದ್ಧಿ ಯೋಜನೆಗಳ ಮಾಹಿತಿ ಮತ್ತು ವಿವರಗಳ ಪ್ರಚಾರಕ್ಕೆ ಸಂಬಂಧಿಸಿದಂತೆ ವೆಬ್‌ಸೈಟ್ ಮತ್ತು ಸಾಮಾಜಿಕ ಜಾಲತಾಣಗಳ ಬಳಕೆ ಹೀಗೆ ಕೆಲವೊಂದು ತಂತ್ರಜ್ಞಾನಗಳನ್ನು ಈ ಸರಕಾರಿ ಇಲಾಖೆಗಳು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿಲ್ಲ. ಇದರ ಜೊತೆಗೆ ಬುಡಕಟ್ಟು ಸಮುದಾಯಗಳಿಗೆ ಉದ್ಯೋಗ ತರಬೇತಿ ಸಂದರ್ಭಗಳಲ್ಲಿ ಅಥವಾ ಸ್ವಯಂ ಉದ್ಯೋಗ ಸೌಲಭ್ಯಗಳನ್ನು ನೀಡುವಾಗ ಹಳೆಯ ಕಾಲದ ತಂತ್ರಜ್ಞಾನಗಳನ್ನೇ ಬಳಸಿಕೊಳ್ಳುತ್ತಿವೆ. ಉದಾಹರಣೆಗೆ ಹೊಲಿಗೆ ಅಥವಾ ಕೈಮಗ್ಗ ತರಬೇತಿ ನೀಡುವಾಗ ಅತ್ಯಾಧುನಿಕ ಯಂತ್ರಪೋಕಣಗಳ ಬದಲಿಗೆ ಹಳೆಯ ಕಾಲದ ಯಂತ್ರೋಪಕರಣಗಳನ್ನೇ ಉಪಯೋಗಿಸಿ ತರಬೇತಿ ನೀಡಲಾಗುತ್ತಿದೆ. ಸ್ವಯಂ ಉದ್ಯೋಗದಲ್ಲೂ ಹಳೆಯ ಕಾಲದ ಮಾದರಿಗಳಾದ ಹೈನುಗಾರಿಕೆ, ಮಲ್ಲಿಗೆ ಕೃಷಿ, ಆಟೋರಿಕ್ಷಾಗಳ ವಿತರಣೆ ಇತ್ಯಾದಿಗಳನ್ನು ಹೊರತು ಪಡಿಸಿ ಕಂಪ್ಯೂಟರ್ ಸೈಬರ್‌ಗಳ ನಿರ್ವಹಣೆ, ಜಿಮ್ ಮತ್ತು ಫಿಟ್ನೆಸ್ ಕೇಂದ್ರಗಳ ನಿರ್ವಹಣೆ ಅಥವಾ ಇತರ ತಂತ್ರಜ್ಞಾನ ಆಧಾರಿತ ಸ್ವಯಂ ಉದ್ಯೋಗಗಳ ಸೌಲಭ್ಯಗಳು ಬುಡಕಟ್ಟು ಸಮುದಾಯಗಳಿಗೆ ತಲುಪದಿರುವುದು ಅವರ ಅಭಿವೃದ್ಧಿಗೆ ಹಿನ್ನೆಡೆಯಾಗಿದೆ.

೬.೫. ಸ್ವಯಂ ಸೇವಾ ಸಂಸ್ಥೆಗಳ ಸಮಸ್ಯೆಗಳು ಮತ್ತು ಸವಾಲುಗಳು:

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅನೇಕ ಸ್ವಯಂ ಸೇವಾ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆಯಾದರೂ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಶ್ರಮಿಸುವ ಸ್ವಯಂ-ಸೇವಾ ಸಂಸ್ಥೆಗಳ ಸಂಖ್ಯೆ ಕೇವಲ ಬೆರಳೆಣಿಕೆಯಷ್ಟು ಮಾತ್ರ ಎಂದು ಹೇಳಬಹುದು. ಬಹುಶಃ ಈ ಕಾರಣದಿಂದ ಈ ಉಭಯ ಜಿಲ್ಲೆಗಳಲ್ಲಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ

ಪ್ರಕ್ರಿಯೆ ನಿಧಾನವಾಗಿ ಸಾಗುತ್ತಿವೆ ಎಂದು ಹೇಳಬಹುದು. ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವ ಸ್ವಯಂ ಸೇವಾ ಸಂಸ್ಥೆಗಳು ಅನೇಕ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುತ್ತಿದ್ದು. ಅವುಗಳಲ್ಲಿ ಪ್ರಮುಖವಾದವುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

೬.೫.೧. ಬುಡಕಟ್ಟು ಸಮುದಾಯಗಳ ಸೇವೆಗೆ ಮೀಸಲಾಗಿರುವ ಸ್ವಯಂ ಸೇವಾ ಸಂಸ್ಥೆಗಳ ಕೊರತೆ:

ಪ್ರಸ್ತುತ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿಯ ಬುಡಕಟ್ಟು ಸಮುದಾಯಗಳಾದ ಕೊರಗರು ಮಲೆಕುಡಿಯರು ಮತ್ತು ಮರಾಠಿನಾಯ್ಕ ಸಮುದಾಯಗಳ ಅಭಿವೃದ್ಧಿಗೆ ಕೆಲಸ ಮಾಡುವ ಪ್ರತ್ಯೇಕವಾದ ಸ್ವಯಂ ಸೇವಾ ಸಂಸ್ಥೆಗಳು ಸ್ಥಾಪನೆಯಾಗಿಲ್ಲ. ಪ್ರಸ್ತುತ ಅಭಿವೃದ್ಧಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ದುರ್ಬಲ ವರ್ಗಗಳ ಅಭಿವೃದ್ಧಿಗೆ ಸಹಾಯ ಮಾಡುವ ಉದ್ದೇಶಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತಿವೆ ಮತ್ತು ಈ ಸಂದರ್ಭದಲ್ಲಿ ತಮ್ಮ ಕಾರ್ಯ ವ್ಯಾಪ್ತಿ ಮತ್ತು ಸಾಮರ್ಥ್ಯಕ್ಕೆ ಅನುಸಾರವಾಗಿ ಸ್ಥಳೀಯ ಬುಡಕಟ್ಟುಗಳ ಅಭಿವೃದ್ಧಿಗೆ ಶ್ರಮಿಸುತ್ತಿರುವುದನ್ನು ಕಾಣಬಹುದಾಗಿದೆ. ಹೀಗಾಗಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಸ್ಥಳೀಯ ಬುಡಕಟ್ಟು ಸಮುದಾಯಗಳ ಪೂರ್ಣ ಪ್ರಮಾಣದ ಅಭಿವೃದ್ಧಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿಲ್ಲ ಮತ್ತು ಈ ಕಾರಣದಿಂದ ಉಭಯ ಜಿಲ್ಲೆಗಳ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಪ್ರಕ್ರಿಯೆಗೆ ಹಿನ್ನೆಡೆಯಾಗಿದೆ ಎಂದು ಹೇಳಬಹುದು.

೬.೫.೨. ಬುಡಕಟ್ಟು ಸಮುದಾಯದ ಕಡಿಮೆ ಜನಸಂಖ್ಯೆ ಮತ್ತು ಅನುದಾನದ ಕೊರತೆ :

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಬುಡಕಟ್ಟು ಸಮುದಾಯಗಳಾದ ಕೊರಗ, ಮಲೆಕುಡಿಯ ಮತ್ತು ಮರಾಠಿನಾಯ್ಕರ ಜನಸಂಖ್ಯೆ ಉಳಿದ ಸಮುದಾಯಗಳಿಗಿಂತ ಕಡಿಮೆಯಿದ್ದು ಮತ್ತು ಭೌಗೋಳಿಕವಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ಹಂಚಿ ಹೋಗಿದ್ದು, ಈ ಕಾರಣಗಳಿಂದ ಸ್ವಯಂ ಸೇವಾ ಸಂಸ್ಥೆಗಳು ಇವರ ಬಗ್ಗೆ ವಿಶೇಷ ಆಸಕ್ತಿ ತೋರಿಸಲಿಲ್ಲ ಎಂದು ಹೇಳಬಹುದು. ಇದರ ಜೊತೆಗೆ ಸಕಾರದಿಂದ ಬರುವ ಅನುದಾನದ ಕೊರತೆಯಿಂದ ಹೆಚ್ಚಿನ ಸ್ವಯಂ ಸೇವಾ ಸಂಸ್ಥೆಗಳು ಉಭಯ ಜಿಲ್ಲೆಗಳಲ್ಲಿ ಬುಡಕಟ್ಟು ಸಮುದಾಯಗಳ ಜೊತೆ ಕೆಲಸ ಮಾಡುತ್ತಿಲ್ಲ ಎಂದು ಹೇಳಬಹುದು.

೬.೫.೩. ರಾಜಕೀಯ ಮತ್ತು ಸ್ಥಳೀಯ ಪ್ರಭಾವಿಗಳ ಒತ್ತಡ ಮತ್ತು ಹಸ್ತಕ್ಷೇಪ:

ಪ್ರಸ್ತುತ ಈ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಶ್ರಮಿಸಲು ಅಥವಾ ಅವರಿಗೆ ಸಹಾಯ ಮಾಡುವ ಸಂದರ್ಭಗಳಲ್ಲಿ ಕೆಲ ಸಂದರ್ಭಗಳಲ್ಲಿ ರಾಜಕೀಯ ಮತ್ತು ಸ್ಥಳೀಯ ಪ್ರಭಾವಿಗಳ ಒತ್ತಡಗಳನ್ನು

ಹಸ್ತಕ್ಷೇಪಗಳನ್ನೂ ಎದುರಿಸಿದ್ದ ಸಂದರ್ಭಗಳಿವೆ. ಸ್ವಯಂ ಸೇವಾ ಸಂಸ್ಥೆಗಳ ಮೇಲೆ ಸುಳ್ಳು ಆರೋಪಗಳನ್ನು, ಮೊಕದ್ದಮೆಗಳನ್ನು ದಾಖಲಿಸಿ ಪತ್ರಿಕೆಗಳಲ್ಲಿ ಸ್ವಯಂಸೇವಾ ಸಂಸ್ಥೆಗಳ ಬಗ್ಗೆ ಅಪ ಪ್ರಚಾರ ಮಾಡಿ ಮಾನಹಾನಿ ಮಾಡಿರುವುದರಿಂದ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಅನೇಕ ತೊಂದರೆಗಳನ್ನು ಸಮಸ್ಯೆಗಳನ್ನು ಎದುರಿಸಿವೆ. ಈ ಕಾರಣದಿಂದ ಸ್ವಯಂ ಸೇವಾ ಸಂಸ್ಥೆಗಳು ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಪಲ್ಗೊಳ್ಳುವಿಕೆ ಕಡಿಮೆಯಾಗಿದೆ ಎಂದು ಹೇಳಬಹುದು.

೬.೫.೪. ಸೇವಾ ಮನೋಭಾವದ ಸಿಬ್ಬಂದಿಗಳ ಕೊರತೆ:

ಪ್ರಸ್ತುತ ಸ್ವಯಂ ಸೇವಾ ಸಂಸ್ಥೆಗಳು ಎದುರಿಸುತ್ತಿರುವ ಮತ್ತೊಂದು ಪ್ರಮುಖ ಸಮಸ್ಯೆ ಎಂದರೆ ಸೇವಾ ಮನೋಭಾವದ ಸಿಬ್ಬಂದಿಗಳ ಕೊರತೆ. ಸ್ವಯಂ ಸೇವಾ ಸಂಸ್ಥೆಗಳಲ್ಲಿ ಕೆಲಸ ಮಾಡಲು ಇಂದಿನ ಯುವಕ-ಯುವತಿಯರು ಇಷ್ಟ ಪಡುವುದಿಲ್ಲ. ಮತ್ತೆ ಕೆಲವರು ಕೆಲಸ ಇಲ್ಲದ ಕಾರಣದಿಂದ, ಹಣದ ಅವಶ್ಯಕತೆಯಿಂದ ಸ್ವಲ್ಪ ಸಮಯ ಸ್ವಯಂ ಸೇವಾ ಸಂಸ್ಥೆಗಳಲ್ಲಿ ದುಡಿಯುತ್ತಾರೆ ನಂತರ ಆ ಸಂಸ್ಥೆಯನ್ನು ಬಿಟ್ಟು ಇನ್ನೊಂದು ಕಡೆ ಸೇರುತ್ತಾರೆ. ಸೇವಾ ಮನೋಭಾವದ ಮತ್ತು ಅನುಭವಿ ಸಿಬ್ಬಂದಿಗಳು ಕೆಲವೊಮ್ಮೆ ಸ್ವಯಂ ಸೇವಾ ಸಂಸ್ಥೆಗಳನ್ನು ಬಿಟ್ಟು, ಸಮುದಾಯದ ಸಂಘಟನೆಗಳಲ್ಲಿ ಅಥವಾ ರಾಜಕೀಯದಲ್ಲಿ ತೊಡಗಿಕೊಳ್ಳುತ್ತಿರುವುದು ಕಂಡು ಬರುತ್ತಿದೆ. ಹೀಗೆ ಸ್ವಯಂ ಸೇವಾ ಸಂಸ್ಥೆಗಳು ಸೇವಾ ಮನೋಭಾವವಿರುವ ಸಿಬ್ಬಂದಿಗಳ ಕೊರತೆಯನ್ನು ಎದುರಿಸುತ್ತಿವೆ.

೬.೫.೫. ಹೊಸ ಸ್ವಯಂಸೇವಾ ಸಂಸ್ಥೆಗಳಿಗೆ ಅನುಭವ ಮತ್ತು ಮಾರ್ಗದರ್ಶನ ಕೊರತೆ:

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅನೇಕ ಸ್ವಯಂ ಸೇವಾ ಸಂಸ್ಥೆಗಳು ಹೊಸದಾಗಿ ಕಾರ್ಯಾಚರಣೆ ಮಾಡುತ್ತಿದ್ದರೂ ಅನುಭವ ಮತ್ತು ಮಾರ್ಗದರ್ಶನದ ಕೊರತೆಯಿಂದ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಲು ಆಗುತ್ತಿಲ್ಲ. ಅನುದಾನಗಳ ಮೂಲ, ಅವುಗಳನ್ನು ಪಡೆಯುವ ಕ್ರಮಗಳು, ಸಂಸ್ಥೆಯ ಆಡಳಿತಾತ್ಮಕ ವಿಷಯಗಳು, ಕ್ಷೇತ್ರಕಾರ್ಯ ಮತ್ತು ಅದರ ವಿಧಾನಗಳು, ಅಭಿವೃದ್ಧಿ ಮಾದರಿಗಳನ್ನು ಅಳವಡಿಸಿಕೊಳ್ಳುವಿಕೆ, ಸಂಘಟನಾ ಪ್ರಕ್ರಿಯೆಗಳು, ಆರ್ಥಿಕ ನಿರ್ವಹಣೆ ಹೀಗೆ ಅನೇಕ ವಿಷಯಗಳಲ್ಲಿ ಹೊಸ ಸಂಸ್ಥೆಗಳು ಮಾರ್ಗದರ್ಶನದ ಕೊರತೆಯನ್ನು ಅನುಭವಿಸುತ್ತಿವೆ.

೬.೫.೬. ಸರ್ಕಾರಿ ಸಂಸ್ಥೆಗಳಿಂದ ಜಂಟಿ ಅಭಿವೃದ್ಧಿ ಕಾರ್ಯಕ್ರಮಗಳ ಕೊರತೆ:

ಸರಕಾರದಿಂದ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಅನೇಕ ಯೋಜನೆಗಳು ಜಾರಿಗೆ ಬರುತ್ತಿದ್ದರೂ ಹೆಚ್ಚಿನ ಯೋಜನೆಗಳು ನೇರವಾಗಿ ಫಲಾನುಭವಿಗಳಿಗೆ ತಲುಪುತ್ತಿವೆ. ಹೀಗಾಗಿ ಸ್ವಯಂ ಸೇವಾ ಸಂಸ್ಥೆಗಳ ಮೇಲೆ ಅವಲಂಬನೆ ಕಡಿಮೆಯಾಗಿ ಸ್ವಯಂ ಸೇವಾ

ಸಂಸ್ಥೆಗಳು ಸರಕಾರದಿಂದ ಜಂಟಿ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳ ಕೊರತೆಯನ್ನು ಎದುರಿಸುತ್ತಿವೆ. ಕೆಲವೇ ಕೆಲವು ಬೆರಳೆಣಿಕೆಯ ಸಂಸ್ಥೆಗಳು ಸರಕಾರದೊಂದಿಗೆ ಜಂಟಿಯಾಗಿ ಕಾರ್ಯಕ್ರಮಗಳನ್ನು ನಡೆಸುತ್ತಿವೆ ಮತ್ತು ಆ ಕಾರ್ಯಕ್ರಮಗಳು ಉದ್ಯೋಗ ತರಬೇತಿಯಂತಹ ಅಲ್ಪ ಕಾಲಿನ ಸಮಯ ಮಿತಿಯನ್ನು ಹೊಂದಿರುವ ಕಾರ್ಯಕ್ರಮಗಳಾಗಿರುತ್ತವೆ. ಇದರಿಂದ ಸ್ವಯಂಸೇವಾ ಸಂಸ್ಥೆಗಳಿಗೆ ಅನುಭವ ಅಥವಾ ಲಾಭಗಳೂ ದೊರೆಯುತ್ತಿಲ್ಲ. ಜೊತೆಗೆ ಬುಡಕಟ್ಟು ಸಮುದಾಯಗಳ ಮೇಲೂ ಕೆಲವೊಮ್ಮೆ ಪರಿಣಾಮ ಬೀರುವುದಿಲ್ಲ. ಹಾಗಾಗಿ ಕೆಲವೊಮ್ಮೆ ಸ್ವಯಂ ಸೇವಾ ಸಂಸ್ಥೆಗಳೆ ಇಂತಹ ಕಾರ್ಯಕ್ರಮಗಳ ಬಗ್ಗೆ ಆಸಕ್ತಿ ಒಹಿಸದೇ ಇರುವುದು ಕಂಡುಬರುತ್ತದೆ.

ಅಡಿ ಟಿಪ್ಪಣಿಗಳು:

೦೧ ಪ್ರಭಾಕರ ಎ.ಎಸ್., ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪು. ೨, ೨೦೦೪.

೦೨ ಅದೇ ಪು. ೬, ೨೦೦೪.

೦೩ ಬೋರಲಿಂಗಯ್ಯ ಹಿ.ಚಿ., ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಅಭಿವೃದ್ಧಿಯ ಬಹುಮುಖತೆ, ಪು. ೯-೧೧, ೨೦೦೪.

೦೪. ಚಂದ್ರಶೇಖರ್ ಟಿ.ಆರ್., ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಬುಡಕಟ್ಟು ಅಭಿವೃದ್ಧಿ ಕೆಲವು ಟಿಪ್ಪಣಿಗಳು, ಪು. ೧೬-೨೫, ೨೦೦೪.

೦೫ ಚಂದ್ರಪೂಜಾರಿ ಎಂ, ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಜಾಗತೀಕರಣದ ಸಂದರ್ಭದಲ್ಲಿ ಬುಡಕಟ್ಟು ಪು. ೩೨, ೨೦೦೪.

೦೬ ಇಂದಿರಾ ಆರ್., ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಬುಡಕಟ್ಟು ಅಭಿವೃದ್ಧಿ ಸಾಧ್ಯವಾಗದ ಸಾರ್ವತ್ರಿಕ ಮಾದರಿ, ಪು. ೪೯, ೨೦೦೪.

೦೭ ಗಂಗಾಧರ ದೈವಜ್ಞ, ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಬುಡಕಟ್ಟುಗಳ ಅಭಿವೃದ್ಧಿ ಮತ್ತು ಸ್ವಯಂಸೇವಾ ಸಂಸ್ಥೆಗಳು, ಪು. ೧೨೮, ೨೦೦೪.

೦೮ ಯಶೋದ ಎಸ್., ಬುಡಕಟ್ಟು ಅಧ್ಯಯನ, ಸಂಪುಟ ೩, ಸಂಚಿಕೆ ೨, ಪರಿಶಿಷ್ಟ ಬುಡಕಟ್ಟಿನ ಜನರು ಶಿಕ್ಷಣ ಪಡೆಯುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳು, ಪು. ೭೨-೭೭, ೨೦೦೬

ಆಧಾರ ಗ್ರಂಥಗಳು:

- ಪ್ರಭಾಕರ ಎ.ಎಸ್., ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.
- ಬುಡಕಟ್ಟು ಅಧ್ಯಯನ, ಸಂಪುಟ ೪, ಸಂಚಿಕೆ ೧, ೨, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.
- ಬುಡಕಟ್ಟು ಅಧ್ಯಯನ, ಸಂಪುಟ ೩, ಸಂಚಿಕೆ ೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.
- Jainendra Kumar Jha, Ensyclopedia of Social Work, Vol. 1, Anmol Publication Pvt Ltd., New Delhi, 2001.

ಅಧ್ಯಾಯ – ೭

ಅಧ್ಯಯನದ ಫಲಿತಗಳು

ಅಧ್ಯಯನದ ಫಲಿತಗಳು

ಭಾರತ ವಿಭಿನ್ನತೆಯಲ್ಲಿ ಏಕತೆಯನ್ನು ಹೊಂದಿರುವ ಬೃಹತ್ ದೇಶ. ಪ್ರಸ್ತುತ ೧೩೨ ಕೋಟಿಗೂ ಮೀರಿ ಬೆಳೆಯುತ್ತಿರುವ ಭಾರತದ ಜನಸಂಖ್ಯೆಯಲ್ಲಿ ಬುಡಕಟ್ಟು ಸಮುದಾಯಗಳ ಜನಸಂಖ್ಯೆ ಕೇವಲ ೧೦ ಕೋಟಿ ೪೨ ಲಕ್ಷದಷ್ಟು ಮಾತ್ರ. ಅಂದರೆ, ಒಟ್ಟು ಜನಸಂಖ್ಯೆಗೆ ತುಲನೆ ಮಾಡಿದಾಗ ಶೇಕಡ ೮.೬% ರಷ್ಟು ಮಾತ್ರ ಬುಡಕಟ್ಟು ಜನರಿದ್ದಾರೆ. ಇನ್ನು ಕರ್ನಾಟಕದಲ್ಲಿ ಬುಡಕಟ್ಟು ಜನರ ಸಂಖ್ಯೆ ೨೧,೩೪,೭೫೪ ಅಂದರೆ ಶೇಕಡ ೭% ರಷ್ಟು ಮಾತ್ರ. ಇನ್ನು ಉಡುಪಿಯಲ್ಲಿ ೫೨,೮೯೭ (ಶೇಕಡಾ ೪.೪೯%) ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೮೨,೨೬೮ (ಶೇಕಡಾ ೩.೯೪%) ಜನಸಂಖ್ಯೆಯನ್ನು ಹೊಂದಿರುವ ಬುಡಕಟ್ಟು ಸಮುದಾಯದವರ ಸಂಖ್ಯೆ ತೀರಾ ಕಡಿಮೆ ಎಂದರೆ ತಪ್ಪಾಗಲಾರದು. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿರುವ ಬುಡಕಟ್ಟುಗಳ ಜನಸಂಖ್ಯೆ ಮತ್ತು ಉಂಟಾದ ಅಭಿವೃದ್ಧಿ ಪ್ರಕ್ರಿಯೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಕಂಡುಬರುವ ಚಿತ್ರಣವೇನೆಂದರೆ, ಮೊದಲನೆಯದಾಗಿ ಈ ಜಿಲ್ಲೆಗಳಲ್ಲಿ ಬುಡಕಟ್ಟು ಜನಸಂಖ್ಯೆ ತೀರಾ ಕಡಿಮೆ ಇದ್ದ ಕಾರಣ ಈ ಜಿಲ್ಲೆಗಳಲ್ಲಿ ಬುಡಕಟ್ಟು ಅಭಿವೃದ್ಧಿ ಪ್ರಕ್ರಿಯೆಯು ಉಳಿದ ಜಿಲ್ಲೆಗಳಿಗಿಂತ ವೇಗವಾಗಿ ಸಾಗುತಿದೆ ಎಂದು ಹೇಳಬಹುದು. ಎರಡನೆಯದಾಗಿ, ಈ ಜಿಲ್ಲೆಗಳಲ್ಲಿ ಬುಡಕಟ್ಟು ಜನಸಂಖ್ಯೆ ತೀರಾ ಕಡಿಮೆಯಿದ್ದರೂ ಹೆಚ್ಚಿನ ಬುಡಕಟ್ಟು ಜನರಿಗೆ ಇನ್ನೂ ಅಭಿವೃದ್ಧಿ ಕಾರ್ಯಕ್ರಮಗಳು ತಲುಪುವಲ್ಲಿ ವಿಫಲವಾಗಿದೆ ಎಂದು ಹೇಳಬಹುದು. ಅಭಿವೃದ್ಧಿಯ ಹೆಸರಿನಲ್ಲಿ ಇಲ್ಲಿಯವರೆಗೆ ಅದೆಷ್ಟೋ ಕಾರ್ಯಕ್ರಮಗಳು ಅನುಷ್ಠಾನಗೊಂಡರೂ, ಮೂರನೆಯದಾಗಿ ಅಭಿವೃದ್ಧಿ ಕಾರ್ಯಕ್ರಮಗಳು ಜನರಿಗೆ ತಲುಪಿದರೂ ಜನರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳಲ್ಲಿ ಹೆಚ್ಚಿನ ಬದಲಾವಣೆಗಳು ಉಂಟಾಗಲಿಲ್ಲ ಎಂದು ಹೇಳಬಹುದು. ಈ ಕಾರ್ಯಕ್ರಮಗಳು ಬರಿಯ ಕಾರ್ಯಕ್ರಮಗಳಾದವೇ ಹೊರತು ಬುಡಕಟ್ಟು ಸಮುದಾಯಗಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಲಿಲ್ಲ. ಯಾಕೆಂದರೆ ಈ ಕಾರ್ಯಕ್ರಮಗಳು ಬುಡಕಟ್ಟು ಸಮುದಾಯಗಳ ಸಾಮಾಜಿಕ, ಸಾಂಸ್ಕೃತಿಕ ಒಳತೋಟಿಗಳನ್ನು ಅರಿತು ರೂಪಿತವಾಗಿಲ್ಲ, ಜೊತೆಗೆ ಅಭಿವೃದ್ಧಿಯ ಸಿದ್ಧಾಂತ, ಮಾದರಿ, ಚೌಕಟ್ಟುಗಳ ಸ್ಪಷ್ಟತೆಯೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವವರಿಗೂ ಇಲ್ಲವೆಂದರೆ ತಪ್ಪಾಗಲಾರದು. ಈ ಕಾರಣಗಳಿಂದಾಗಿ ಇವತ್ತು ಅಭಿವೃದ್ಧಿಯ ಹೆಸರಿನಲ್ಲಿ ಬುಡಕಟ್ಟು ಸಮುದಾಯದ ಜನರ ನಿಜವಾದ ಬೇಡಿಕೆ ಮತ್ತು ಅವಶ್ಯಕತೆಗಳನ್ನು ಅರಿಯುವ ಬದಲು ಎಲ್ಲೋ ಒಂದು ಕಡೆಯಲ್ಲಿ ರೂಪಿತವಾಗಿರುವ ಸಿದ್ಧ ಮಾದರಿಯ ಅಭಿವೃದ್ಧಿಯ ಯೋಜನೆಗಳನ್ನು ಜಾರಿಗೆ ತಂದಿರುವ

ಪರಿಣಾಮ ಸಮಾಜದ ಒಂದು ಭಾಗವಾಗಿ ರೂಪುಗೊಳ್ಳಬೇಕಿದ್ದ ಬುಡಕಟ್ಟು ಪಂಗಡಗಳು ಕೆಲವೊಂದು ಗೊಂದಲಕ್ಕೊಳಗಾಗಿ ಅತಂತ್ರತೆಯಲ್ಲಿ ಅಸಹನೀಯ ನೋವು, ಅವಮಾನಕ್ಕೊಳಗಾಗಿ ಅನಿಶ್ಚಿತತೆಯಿಂದ ಬದುಕು ಸಾಗಿಸುತ್ತಿದ್ದಾರೆ. ಪ್ರಸ್ತುತ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಹತ್ತು ಹಲವು ಅಭಿವೃದ್ಧಿ ಕಾರ್ಯಕ್ರಮಗಳು ಅನೇಕ ಇಲಾಖೆಗಳ ಮೂಲಕ ಅನುಷ್ಠಾನಗೊಳ್ಳುತ್ತಿವೆ. ಆದರೆ, ಈ ಕಾರ್ಯಕ್ರಮಗಳು ಯಾವ ಆಧಾರದ ಮೇಲೆ ರೂಪಿತಗೊಂಡಿವೆ ಮತ್ತು ಈ ಕಾರ್ಯಕ್ರಮಗಳು ಬುಡಕಟ್ಟು ಜನರ ಬದುಕಿನಲ್ಲಿ ಯಾವ ರೀತಿ ಪ್ರಭಾವ ಅಥವಾ ಬದಲಾವಣೆಗೆ ಸಹಕಾರಿಯಾಗಿವೆ ಎಂಬುದನ್ನು ಪರಿಶೀಲಿಸಬೇಕಾಗಿದೆ. ಇನ್ನು ಕಾರ್ಯಕ್ರಮಗಳನ್ನು ರೂಪಿಸುವುದು ಒಂದು ಹಂತವಾದರೆ ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಪ್ರಮುಖ ಅಂಶ. ಬಹುಶಃ ಹೆಚ್ಚಿನ ಅಭಿವೃದ್ಧಿ ಕಾರ್ಯಕ್ರಮಗಳು ವಿಫಲವಾಗಲು ಬಹುಮುಖ್ಯ ಕಾರಣ ಲೋಪದೋಷಗಳಿಂದ ಕೂಡಿದ ಅನುಷ್ಠಾನ ಪ್ರಕ್ರಿಯೆ ಎನ್ನಬಹುದು. ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಅಧಿಕಾರಿಗಳ ನಿರಾಸಕ್ತಿ ಮತ್ತು ನಿರ್ಲಕ್ಷ, ಕಾರ್ಯಕ್ರಮಗಳ ಬಗ್ಗೆ ಫಲಾನುಭವಿಗಳಿಗೆ ಮಾಹಿತಿ ಮತ್ತು ಅರಿವಿನ ಕೊರತೆ, ಮತ್ತು ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸರಕಾರಗಳ ಅಸಂಬದ್ಧ, ಅವೈಜ್ಞಾನಿಕ ನಿಯಮಗಳು ಹೀಗೆ ಕೆಲವೊಂದು ಕಾರಣಗಳಿಂದ ಅನುಷ್ಠಾನ ಪ್ರಕ್ರಿಯೆ ಅರ್ಧದಲ್ಲೇ ನಿಂತು ಹೋದ ಅಥವಾ ಸಂಪೂರ್ಣವಾಗಿ ಯಶಸ್ಸುಗೊಳ್ಳದೇ ಇರುವುದನ್ನು ನಾವು ಕಾಣುತ್ತೇವೆ. ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಪ್ರಕ್ರಿಯೆ ವಿಫಲವಾಗಲು ಇನ್ನೊಂದು ಪ್ರಮುಖ ಕಾರಣ ಇಲಾಖೆಗಳಲ್ಲಿ ಸಿಬ್ಬಂದಿಗಳ ಕೊರತೆ ಮತ್ತು ಅಧಿಕಾರಿಗಳ ಬದಲಾವಣೆ ಅಥವಾ ವರ್ಗಾವಣೆ ಎನ್ನಬಹುದು. ಎಷ್ಟೋ ಸಂದರ್ಭಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸಂಬಂಧಪಟ್ಟವರಿಗೆ ಸರಿಯಾದ ಮಾಹಿತಿ ಕೊಡಲು ಇಲಾಖೆಗಳಲ್ಲಿ ಸಿಬ್ಬಂದಿಗಳೇ ಇರುವುದಿಲ್ಲ. ಇರುವ ಬೆರಳೆಣಿಕೆಯ ಸಿಬ್ಬಂದಿಗಳಿಗೆ ಕಛೇರಿ ಕೆಲಸಗಳ ನಿರ್ವಹಣೆಯೇ ಹೊರೆಯಾಗಿ ಅವರು ಈ ಕಾರ್ಯಕ್ರಮಗಳ ಅನುಷ್ಠಾನ ಪ್ರಕ್ರಿಯೆ ಬಗ್ಗೆ ಯೋಚಿಸುವುದಿಲ್ಲ. ಇನ್ನು ಕೆಲವು ಸಂದರ್ಭಗಳಲ್ಲಿ ವರ್ಗಾವಣೆಯಾಗಿ ಬಂದ ಅಧಿಕಾರಿಗಳಿಗೆ ಈ ಕಾರ್ಯಕ್ರಮಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಜೊತೆಗೆ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಸರಿಯಾದ ಜ್ಞಾನ ಮತ್ತು ತರಬೇತಿಗಳನ್ನು ಪಡೆದುಕೊಂಡಿರುವುದಿಲ್ಲ. ಹೀಗಾಗಿ ಹೆಚ್ಚಿನ ಅಭಿವೃದ್ಧಿ ಕಾರ್ಯಕ್ರಮಗಳು ಫಲಪ್ರದವಾಗುವುದಿಲ್ಲ. ಆದುದರಿಂದ, ಮುಂದಿನ ದಿನಗಳಲ್ಲಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ನೀತಿಗಳನ್ನು ರೂಪಿಸುವವರು ಅಬಿವೃದ್ಧಿ ಪ್ರಕ್ರಿಯೆಯಲ್ಲಿ ಅಭಿವೃದ್ಧಿ ಹೊಂದಬೇಕಾದವರನ್ನು ಸಕ್ರಿಯವಾಗಿ ಪಾಲ್ಗೊಳ್ಳುವ ಅವಕಾಶಗಳನ್ನು ನೀಡಿ ಆ ಜನರೇ ತಮ್ಮ

ಅಭಿವೃದ್ಧಿಯ ಮಾರ್ಗೋಪಾಯಗಳ ಸೂಕ್ತಾಸೂಕ್ತತೆಗಳ ರೂವಾರಿಗಳಾಗಿದ್ದಲ್ಲಿ ನಿಜವಾದ ಬುಡಕಟ್ಟು ಜನರ ಅಭಿವೃದ್ಧಿಗೆ ಕಾರ್ಯಕ್ರಮಗಳು ಅಥವಾ ಯೋಜನೆಗಳು ವಿಫಲವಾಗಲು ಇನ್ನೊಂದು ಬಹುಮುಖ್ಯ ಕಾರಣ ನಮ್ಮಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಫಲಿತಾಂಶ ಮತ್ತು ಪರಿಣಾಮಗಳನ್ನು ಮೌಲ್ಯಮಾಪನ ಮಾಡುವ ವ್ಯವಸ್ಥೆಗಳು ಇಲ್ಲದೇ ಇರುವುದು. ಸ್ವಾತಂತ್ರ್ಯ ಸಿಕ್ಕಿದ ನಂತರದಿಂದ ಇತ್ತೀಚನವರೆಗೆ ಅದೆಷ್ಟೋ ಅಭಿವೃದ್ಧಿ ಯೋಜನೆಗಳು ಬಂದು ಹೋಗಿವೆ. ಸರಕಾರಗಳಿಂದ ಅದೆಷ್ಟೋ ಕೋಟಿ ರೂಪಾಯಿಗಳು ಬಿಡುಗಡೆಯಾಗಿವೆ. ಪ್ರತಿವರ್ಷವೂ ಬಿಡುಗಡೆಯಾಗುತ್ತಲೇ ಇವೆ. ಆದರೆ ಇವುಗಳ ಪರಿಣಾಮ ಏನಾಗಿದೆ? ಇವುಗಳಿಂದ ಬುಡಕಟ್ಟು ಸಮುದಾಯದ ಅಭಿವೃದ್ದಿ ಅಗಿದೆಯಾ? ಅಭಿವೃದ್ಧಿಯಾಗಿಲ್ಲ ಅಂದರೆ ಅದಕ್ಕೆ ಕಾರಣಗಳೇನು? ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಪಟ್ಟಂತೆ ಏನೆಲ್ಲ ಪ್ರಮುಖ ಸಮಸ್ಯೆಗಳು ಕಂಡು ಬಂದಿವೆ ಮತ್ತು ಅವುಗಳಿಗೆ ಕಂಡುಕೊಂಡ ಪರಿಹಾರಗಳೇನು? ಹೀಗೆ ಅನೇಕ ಪ್ರಶ್ನೆಗಳಿಗೆ ನಮ್ಮಲ್ಲಿ ಸರಿಯಾದ ಉತ್ತರಗಳು ಸಿಗುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ಬಳಿಕ ಏನಾಯಿತು ಎಂದು ತಿಳಿಯುವ ಗೋಜಿಗೆ ಯಾರೂ ಹೋಗುವುದಿಲ್ಲ. ಹಾಗಾಗಿ ಎಲ್ಲಿಯ ತನಕ ಈ ಅಭಿವೃದ್ಧಿ ಕಾರ್ಯಕ್ರಮಗಳ ಫಲಿತಾಂಶ ಮತ್ತು ಪರಿಣಾಮಗಳ ಬಗ್ಗೆ ವಿಶ್ಲೇಷಣಾತ್ಮಕವಾದ ಮೌಲ್ಯಮಾಪನದ ವ್ಯವಸ್ಥೆಗಳು ಇರುವುದಿಲ್ಲವೋ ಅಲ್ಲಿಯ ತನಕ ಅಭಿವೃದ್ಧಿ ಕಾರ್ಯಕ್ರಮಗಳು ಪ್ರಕಟಗೊಳ್ಳುತ್ತವೆಯೇ ಹೊರತು ಅಭಿವೃದ್ಧಿ ಪ್ರಕ್ರಿಯೆ ಮಾತ್ರ ನಿಂತ ನೀರಿನಂತಾಗುತ್ತದೆ ಎಂದು ಹೇಳಬಹುದು.

ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಸರಕಾರದ ಅಭಿವೃದ್ಧಿ ಯೋಜನೆಗಳು ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದುದು ಅವುಗಳನ್ನು ಬುಡಕಟ್ಟು ಜನರಿಗೆ ತಲುಪಿಸುವ ಸ್ವಯಂಸೇವಾ ಸಂಸ್ಥೆಗಳ ಪಾತ್ರ. ಈ ಸ್ವಯಂಸೇವಾ ಸಂಸ್ಥೆಗಳು ಸರಕಾರ ಮತ್ತು ಬುಡಕಟ್ಟು ಜನರ ನಡುವಿನ ಸಂಪರ್ಕ ಕೊಂಡಿ ಎಂದು ಹೇಳಿದರೆ ತಪ್ಪಾಗಲಾರದು. ಆದರೆ ಇವತ್ತಿನ ದಿನಗಳಲ್ಲಿ ಸ್ವಯಂಸೇವಾ ಸಂಸ್ಥೆಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇದರಿಂದಾಗಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯು ನಿರೀಕ್ಷಿಸಿದ ಮಟ್ಟದಲ್ಲಿ ವೇಗವನ್ನು ಪಡೆಯುತ್ತಿಲ್ಲ ಎಂದರೆ ತಪ್ಪಾಗಲಾರದು. ಅನುದಾನದ ಕೊರತೆ, ಅರ್ಪಣಾ ಮನೋಭಾವ ಮತ್ತು ಸೇವಾ ಬದ್ಧತೆ ಹೊಂದಿರುವ ಸಿಬ್ಬಂದಿಗಳ ಕೊರತೆ, ರಾಜಕೀಯ ಮತ್ತು ಮೇಲ್ವರ್ಗದ ಜನರ ಒತ್ತಡಗಳು, ಅನುದಾನದ ದುರ್ಬಳಕೆ, ವಂಚನೆ ಹೀಗೆ ಅನೇಕ ಕಾರಣಗಳಿಂದ ಸ್ವಯಂಸೇವಾ ಸಂಸ್ಥೆಗಳು ನಿಷ್ಕ್ರೀಯವಾಗಿ ಬಿಡುತ್ತವೆ ಅಥವಾ ಅರ್ಧದಲ್ಲೇ ಬೀಗ ಜಡಿಯಲ್ಪಡುತ್ತದೆ. ಇನು ಕೆಲವು ಸಂದರ್ಭಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳೇ ಸ್ವಾರ್ಥದ ಕಾರಣಗಳಿಂದ ಉದ್ದೇಶ

ಪೂರ್ವಕವಾಗಿಯೇ ಅಭಿವೃದ್ಧಿ ಪ್ರಕ್ರಿಯೆಗೆ ತಡೆಯೊಡ್ಡಿದ ಉದಾಹರಣೆಗಳೂ ಇವೆ. ಸ್ವಯಂಸೇವಾ ಸಂಸ್ಥೆಗಳು ಎದುರಿಸುತ್ತಿರುವ ಇನ್ನೊಂದು ಪ್ರಮುಖ ಸಮಸ್ಯೆಯೆಂದರೆ ಬುಡಕಟ್ಟುಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರಕಾರದಿಂದ ಸ್ವಯಂಸೇವಾ ಸಂಸ್ಥೆಗಳಿಗೆ ನಿರೀಕ್ಷಿತ ಮಟ್ಟದ ಪ್ರೋತ್ಸಾಹ ಮತ್ತು ಅನುದಾನ ದೊರಕದೇ ಇರುವುದು. ಇದರಿಂದಾಗಿ ಸ್ವಯಂಸೇವಾ ಸಂಸ್ಥೆಗಳು ಸರಕಾರದ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಹಿಂದೇಟು ಹಾಕುತ್ತವೆ ಎಂದರೆ ತಪ್ಪಾಗಲಾರದು. ಇನ್ನು ಕೆಲವು ಸಂದರ್ಭಗಳಲ್ಲಿ ಸ್ವಯಂಸೇವಾ ಸಂಸ್ಥೆಗಳು ಬುಡಕಟ್ಟು ಸಮುದಾಯದ ಜನರ ವಿಶ್ವಾಸವನ್ನು ಗಳಿಸುವಲ್ಲಿ ವಿಫಲವಾಗುವುದರ ಜೊತೆಗೆ ಸ್ವಯಂಸೇವಾ ಸಂಸ್ಥೆಗಳ ಯೋಜನೆಗಳು, ನೀತಿಗಳು ಬುಡಕಟ್ಟು ಸಮುದಾಯದ ಜನರಲ್ಲಿ ಗೊಂದಲವನ್ನುಂಟು ಮಾಡಿ ಕೊನೆಗೆ ಸ್ವಯಂಸೇವಾ ಸಂಸ್ಥೆಗಳೇ ಮುಚ್ಚಿ ಹೋಗುತ್ತವೆ.

ಪ್ರಸ್ತುತ ಅಧ್ಯಯನದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಬುಡಕಟ್ಟುಗಳಾದ ಕೊರಗರು, ಮಲೆಕುಡಿಯರು ಮತ್ತು ಮರಾಟಿ ನಾಯ್ಕ ಸಮುದಾಯಗಳ ಅಭಿವೃದ್ಧಿಯಲ್ಲಿ ಸರಕಾರಗಳು ಮತ್ತು ಸ್ವಯಂಸೇವಾ ಸಂಸ್ಥೆಗಳು ಯಾವ ರೀತಿಯಲ್ಲಿ ಪಾತ್ರ ವಹಿಸಿದವು?, ಬುಡಕಟ್ಟುಗಳು ಇಂದಿಗೂ ಎದುರಿಸುತ್ತಿರುವ ಸಮಸ್ಯೆಗಳೇನು? ಸರಕಾರಿ ಸಂಸ್ಥೆಗಳು ಯಾವ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿವೆ? ಸ್ವಯಂಸೇವಾ ಸಂಸ್ಥೆಗಳು ಯಾವ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿವೆ? ಎಂಬುದನ್ನು ವಿವರಿಸಲಾಗಿದೆ.

ಪ್ರಸ್ತುತ ಸನ್ನಿವೇಶದಲ್ಲಿ ದಿನಂಪ್ರತಿ ನಾವು ದಿನಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಕ್ರಾಂತಿಕಾರಿ ಅಭಿವೃದ್ಧಿ ಕಾರ್ಯಕ್ರಮಗಳ ಅಬ್ಬರದ ಪ್ರಚಾರವನ್ನು ನೋಡುತ್ತೇವೆ. ಜೊತೆಗೆ ಆಡಳಿತ ನಡೆಸುವ ಸರಕಾರಗಳೇ ಅಭಿವೃದ್ಧಿ ಕಾರ್ಯಕ್ರಮಗಳ ಹೊತ್ತಿಗೆಗಳನ್ನು ಪ್ರಕಟಿಸುತ್ತೇವೆ. ಪತ್ರಿಕಾಗೋಷ್ಠಿಗಳನ್ನು ಕರೆದು ಬುಡಕಟ್ಟು ಜನರ ಅಭಿವೃದ್ಧಿಗೆ ಇಷ್ಟು ಕೋಟಿ ಹಣ ಮೀಸಲಿಟ್ಟಿದ್ದೇವೆ, ಬಿಡುಗಡೆ ಮಾಡಿದ್ದೇವೆ ಎಂದು ಪ್ರಚಾರ ಪಡೆಯುತ್ತಾರೆ. ಆದರೆ ಒಳ ಸತ್ಯಗಳು ಬೇರೆಯೇ ಆಗಿರುತ್ತವೆ. ಅಭಿವೃದ್ಧಿ ಕಾರ್ಯಕ್ರಮಗಳ ಲಾಭಾಂಶವನ್ನು ಸಮುದಾಯದ ಕೆಲವೇ ಕೆಲವು ವ್ಯಕ್ತಿಗಳು ಮಾತ್ರ ಪಡೆಯುತ್ತಾರೆ ಮತ್ತು ಪಡೆಯುತ್ತಲೇ ಇರುತ್ತಾರೆ. ಯಾಕೆಂದರೆ, ಇವರು ಸಮುದಾಯದ ಪ್ರಬಲ ವ್ಯಕ್ತಿಗಳಾಗಿರುತ್ತಾರೆ, ಶಿಕ್ಷಿತರಾಗಿರುತ್ತಾರೆ. ಸಂಘಟನೆಗಳಲ್ಲಿ ಗುರುತಿಸಿಕೊಂಡಿರುತ್ತಾರೆ ಮತ್ತು ಆರ್ಥಿಕವಾಗಿಯೂ ಉತ್ತಮ ಸ್ಥಿತಿಯಲ್ಲಿದ್ದಾರೆ. ಆದರೆ, ಬುಡಕಟ್ಟು ಸಮುದಾಯದಲ್ಲಿ ದುರ್ಬಲವಾಗಿರುವ ಅನಕ್ಷರಸ್ಥ ಬಡ ಜನರು ಇನ್ನೂ ಅದೇ ಹಿಂದಿನ ಬಡತನದ ಸ್ಥಿತಿಯಲ್ಲಿಯೇ ಇದ್ದಾರೆ. ಅಭಿವೃದ್ಧಿ ಪ್ರಕ್ರಿಯೆಗಳಿಂದ ಇನ್ನೂ ಮಾರು ದೂರವಿದ್ದಾರೆ. ಇಂತಹ ಸಂದರ್ಭಗಳಲ್ಲಿ ಬುಡಕಟ್ಟು ಸಮುದಾಯಗಳ ಸವಾಲುಗಳೇನು? ಸರಕಾರದ ಮುಂದಿರುವ ಸವಾಲುಗಳೇನು?

ಸ್ವಯಂಸೇವಾ ಸಂಸ್ಥೆಗಳು ಮಾಡಬಹುದಾದ, ಮಾಡಬೇಕಾದ ಕಾರ್ಯಗಳೇನು? ಒಟ್ಟಾರೆಯಾಗಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯ ಬಗ್ಗೆ ಸ್ಪಷ್ಟವಾದ ಚಿತ್ರಣವನ್ನು ನೀಡಲು ಪ್ರಸ್ತುತ ಈ ಅಧ್ಯಯನದಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗಿದೆ.

ಪ್ರಸ್ತುತ ಅಧ್ಯಯನವು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯಲ್ಲಿ ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳ ಪಾತ್ರವನ್ನು ವಿಮರ್ಶಾತ್ಮಕವಾಗಿ ವಿವರಿಸುವ ಅಧ್ಯಯನವಾಗಿದೆ. ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಕ್ರಮವಾಗಿ ೦.೭೨೨ ಮತ್ತು ೦.೭೧೪ ಮಾನವ ಅಭಿವೃದ್ಧಿ ಸೂಚ್ಯಾಂಕಗಳನ್ನು ಗಳಿಸಿ ಬೆಂಗಳೂರು ನಗರದ ಜೊತೆಗೆ ಮೊದಲ ಮೂರು ಸ್ಥಾನಗಳನ್ನು ಗಳಿಸಿಕೊಂಡಿದೆ. ಆದರೆ ಬುಡಕಟ್ಟು ಸಮುದಾಯಗಳ ಮಾನವ ಅಭಿವೃದ್ಧಿ ಸೂಚ್ಯಾಂಕವು ಇತರ ಸಮುದಾಯಗಳಿಗಿಂದ ಅತೀ ಕಡಿಮೆಯಿದ್ದು ಈ ಅಂಶವು ಅಭಿವೃದ್ಧಿಗೆ ಸಂಬಂಧಪಟ್ಟಂತೆ ಕೆಲವೊಂದು ಕ್ಷೇತ್ರಗಳಲ್ಲಿ ಬುಡಕಟ್ಟು ಸಮುದಾಯಗಳು ಹೆಚ್ಚಿನ ಅಸಮಾನತೆಯನ್ನು ಹೊಂದಿರುವುದನ್ನು ಸೂಚಿಸುತ್ತದೆ.

ಪ್ರಸ್ತುತ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಬುಡಕಟ್ಟು ಸಮುದಾಯಗಳ ಸ್ಥಿತಿ–ಗತಿಗಳನ್ನು ಅಭಿವೃದ್ಧಿಯ ದೃಷ್ಟಿಕೋನದಲ್ಲಿ ಗಮನಿಸಿದಾಗ ಅಭಿವೃದ್ಧಿ ಪ್ರಕ್ರಿಯೆಯು ಕೊರಗ ಸಮುದಾಯದಲ್ಲಿ ಮಂದಗತಿಯಲ್ಲಿ ಸಾಗುತ್ತಿದ್ದು ಈ ನಿಟ್ಟಿನಲ್ಲಿ ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ಇನ್ನೂ ಹೆಚ್ಚಿನ ಗಮನವನ್ನು ಹರಿಸುವ ಅವಶ್ಯಕತೆಯಿದೆ. ಮುಖ್ಯವಾಗಿ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗದ ಜೊತೆಗೆ ಮೂಲಭೂತ ಅವಶ್ಯಕತೆಗಳನ್ನು ತುರ್ತಾಗಿ ಪೂರೈಸುವಲ್ಲಿ ಸರಕಾರವು ಹೆಚ್ಚಿನ ಗಮನವನ್ನು ಹರಿಸಬೇಕಾಗಿದೆ. ಹಾಗೆಯೇ, ಪಶ್ಚಿಮ ಘಟ್ಟದ ಅರಣ್ಯ ಪ್ರದೇಶಗಳಲ್ಲಿ ವಾಸವಾಗಿರುವ ಮಲೆಕುಡಿಯರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವಲ್ಲಿ ಸರಕಾರವು ಗಮನ ಹರಿಸಬೇಕಾಗಿದೆ ಮತ್ತು ಒಕ್ಕಲೆದ್ದು ಹೋಗದೇ ಇನ್ನೂ ಅರಣ್ಯ ಪ್ರದೇಶದಲ್ಲೇ ಉಳಿದಿರುವ ಮಲೆಕುಡಿಯ ಕುಟುಂಬಗಳ ಬೇಡಿಕೆಗಳಿಗೆ ಸ್ಪಂದಿಸಿ ಪುನರ್‌ವಸತಿ ವ್ಯವಸ್ಥೆಗಳನ್ನು ತುರ್ತಾಗಿ ಮಾಡಬೇಕಾಗಿದೆ.

ಹಾಗೆಯೇ ಮರಾಠಿನಾಯ್ಕ ಬುಡಕಟ್ಟು ಸಮುದಾಯಗಳು ವಾಸ ಮಾಡುವ ಪ್ರದೇಶಗಳ ಅಧ್ಯಯನಗಳನ್ನು ಮಾಡಿ ಅವರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವತ್ತ ಸರಕಾರವು ಹೆಚ್ಚಿನ ಗಮನವನ್ನು ನೀಡಬೇಕಾಗಿದೆ. ಇನ್ನು ಸರಕಾರದ ಬುಡಕಟ್ಟು ಅಭಿವೃದ್ಧಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಶೀಘ್ರವಾಗಿ ತುಂಬಿಸಿ ಸಿಬ್ಬಂದಿ ಕೊರತೆಯನ್ನು ಪರಿಹರಿಸುವುದರ

ಜೊತೆಗೆ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆ (Planning) ಅನುಷ್ಠಾನ ಪ್ರಕ್ರಿಯೆ, ನಿರ್ವಹಣೆ ಮತ್ತು ಆಡಳಿತ ಮತ್ತು ಮೌಲ್ಯಮಾಪನಗಳ ಬಗ್ಗೆ ಸಿಬ್ಬಂದಿಗಳಿಗೆ ವಿಶೇಷ ತರಬೇತಿಯನ್ನು ನೀಡುವತ್ತ ಸರಕಾರವು ಗಮನ ಹರಿಸಬೇಕಾಗಿದೆ.

ಹಾಗೆಯೇ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಶ್ರಮಿಸಲು ಸ್ವಯಂಸೇವಾ ಸಂಸ್ಥೆಗಳ ಸ್ಥಾಪನೆಗೆ ಸರಕಾರವು ವಿಶೇಷ ಪ್ರೋತ್ಸಾಹ ಮತ್ತು ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿ ಸೂಕ್ತ ವ್ಯವಸ್ಥೆಗಳನ್ನು ಕಲ್ಪಿಸುವತ್ತ ಗಮನಹರಿಸಬೇಕಾಗಿದೆ.

"ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳ ಪಾತ್ರ (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಪರಿಗಣಿಸಿ)" ಎಂಬ ವಿಷಯದ ಮಹಾ ಪ್ರಬಂಧ ನನ್ನ ಪ್ರಾಮಾಣಿಕ ಪ್ರಯತ್ನವಾಗಿದೆ. ಅಧ್ಯಯನ ಕಾಲದಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗೆಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಆದರೂ ಯಾವುದಾದರೂ ಮಾಹಿತಿ ಕಣ್ಣು ತಪ್ಪಿನಿಂದ ನನ್ನ ಗಮನಕ್ಕೆ ಬಾರದೆ ಉಳಿದಿರಬಹುದು. ಅವುಗಳನ್ನು ಮುಂದಿನ ಅಧ್ಯಯನಕಾರರ ಅಧ್ಯಯನಕ್ಕೆ ಬಿಡಲಾಗಿದೆ.

ಕೊರಗರು:

- ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಕೊರಗರು ಎಲ್ಲಾ ಕ್ಷೇತ್ರಗಳಲ್ಲಿ ಅತ್ಯಂತ ಕೆಳಮಟ್ಟದಲ್ಲಿದ್ದಾರೆ ಮತ್ತು ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಅತ್ಯಂತ ಕಡಿಮೆ ಅಂಕಗಳನ್ನು ಹೊಂದಿರುತ್ತಾರೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಂಡು ಬರುವ ಬುಡಕಟ್ಟು ಸಮುದಾಯಗಳಾದ ಮರಾಠಿ ನಾಯ್ಕ ಮತ್ತು ಮಲೆಕುಡಿಯ ಸಮುದಾಯಗಳೊಂದಿಗೆ ತುಲನೆ ಮಾಡಿದಾಗ ಕೊರಗರ ಅಭಿವೃದ್ಧಿಯ ಪ್ರಮಾಣವು ತೀರ ಹಿಂದುಳಿದಿದೆ.
- ಕೊರಗರಲ್ಲಿ ಶೇಕಡ ೨೦ ರಷ್ಟು ಕುಟುಂಬಗಳು ಇನ್ನೂ ಹಳೆಯ ಮಾದರಿಯ ಹುಲ್ಲಿನ ಗುಡಿಸಲುಗಳಲ್ಲಿ ವಾಸ ಮಾಡುತ್ತಿದ್ದು ಅತ್ಯಂತ ಕಷ್ಟಮಯ ಜೀವನ ನಡೆಸುತ್ತಿದ್ದಾರೆ. ಸುಮಾರು ಶೇಕಡ ೫೫ರಷ್ಟು ಕುಟುಂಬಗಳಿಗೆ ಸರಿಯಾದ ಶೌಚಾಲಯದ ವ್ಯವಸ್ಥೆ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಇಲ್ಲ.
- ಕೊರಗ ಸಮುದಾಯದ ಪುರುಷರು ಮತ್ತು ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಕುಲಕಸುಬುಗಳನ್ನು ಬಿಟ್ಟು ಕೂಲಿ ಕೆಲಸಗಳಿಗೆ ತೆರಳುತ್ತಿದ್ದು ಕೃಷಿ ಕೂಲಿ ಕಾರ್ಮಿಕರಾಗಿ

ದುಡಿಯುತ್ತಿದ್ದಾರೆ. ಪುರುಷರು ೨೫೦ ರೂಪಾಯಿಗಳಿಂದ ೩೦೦ ರೂಪಾಯಿಗಳನ್ನು ಗಳಿಸುತ್ತಿದ್ದರೆ, ಮಹಿಳೆಯರು ೧೫೦ ರಿಂದ ೨೦೦ ರೂಪಾಯಿಗಳನ್ನು ಗಳಿಸುತ್ತಿದ್ದಾರೆ. ಇದರ ಪರಿಣಾಮ ಕೊರಗರ ಮೂಲ ಕುಲಕಸುಬಾದ ಬುಟ್ಟಿ ನೇಯುವಿಕೆ ನಿಧಾನಕ್ಕೆ ನೇಪಥ್ಯಕ್ಕೆ ಸರಿಯುತ್ತಿದ್ದು ಇಂದಿನ ಕೊರಗ ಯುವ ಜನರು ಇದರ ಕಡೆಗೆ ಅನಾಸಕ್ತಿ ವಹಿಸಿದ್ದು, ಬುಟ್ಟಿ ತಯಾರಿಕೆಯ ಪಾರಂಪರಿಕ ಜ್ಞಾನ ಕೂಡ ಅವಸಾನದತ್ತ ಸಾಗುತ್ತಿದೆ. ಆದರೆ ಕೃಷಿ ಕೂಲಿ ಕಾರ್ಮಿಕರಾಗಿ ಮಾರ್ಪಾಡಾದ ನಂತರ ಅವರಲ್ಲಿ ತಲಾ ಆದಾಯದಲ್ಲಿ ಹೆಚ್ಚಳ ಕಂಡು ಬಂದಿದೆ ಮತ್ತು ಜೀವನ ಗುಣಮಟ್ಟ ಸುಧಾರಿಸಿದೆ.

- ಕೊರಗ ಸಮುದಾಯದ ಶೇಕಡ ೨೫ ರಿಂದ ೩೦ ರಷ್ಟು ಕುಟುಂಬಗಳು ಸರಕಾರದಿಂದ ಪಡೆದ ಅಲ್ಪ ಪ್ರಮಾಣದ ಕೃಷಿ ಭೂಮಿಯನ್ನು ಹೊಂದಿದ್ದರೂ ಕೃಷಿ ಜ್ಞಾನದ ಕೊರತೆ, ಬಂಡವಾಳದ ಕೊರತೆ, ಕಾರ್ಮಿಕರ ಕೊರತೆಗಳಿಂದ ತಮ್ಮ ಹೊಲದಲ್ಲಿ ದುಡಿಯದೇ ಕೃಷಿ ಕೂಲಿ ಕಾರ್ಮಿಕರಾಗಿ ಬೇರೆಯವರ ಹೊಲಗಳಲ್ಲಿ ದುಡಿಯುತ್ತಿದ್ದಾರೆ.

- ಅಪೌಷ್ಠಿಕಾಂಶತೆ, ಮದ್ಯವ್ಯಸನ ಮತ್ತು ವೈಯ್ಯಕ್ತಿಕ ಮತ್ತು ಪರಿಸರ ಸ್ವಚ್ಛತೆಯ ಕೊರತೆ, ಪೌರ ಕಾರ್ಮಿಕತನ ಹೀಗೆ ಅನೇಕ ಕಾರಣಗಳಿಂದ ಕೊರಗ ಸಮುದಾಯದ ಜನಸಂಖ್ಯೆ ತೀವ್ರವಾಗಿ ಇಳಿಮುಖವಾಗಿದೆ. ಇದರ ಜೊತೆಗೆ ಕೊರಗ ಸಮುದಾಯದಲ್ಲಿ ಮಕ್ಕಳ ಸಾವಿನ ಪ್ರಮಾಣ ಇತರ ಸಮುದಾಯಗಳಿಗಿಂತ ೧೦ ಪಟ್ಟು ಅಧಿಕವಾಗಿದೆ. ಕುಷ್ಠರೋಗ, ಕ್ಷಯರೋಗದಂತಹ ಮಾರಕ/ಸಾಂಕ್ರಾಮಿಕ ಕಾಯಿಲೆಗಳ ಜೊತೆಗೆ ವೈದ್ಯಕೀಯ ಸೌಲಭ್ಯಗಳನ್ನು ಸಕಾಲದಲ್ಲಿ ಪಡೆಯದಿರುವುದು ಮತ್ತು ಅಂತಹ ಸೌಲಭ್ಯಗಳನ್ನು ಪಡೆಯಲು ಹಿಂದೇಟು ಹಾಕುತ್ತಿರುವುದು ಕೂಡ ಸಾವಿನ ಪ್ರಮಾಣ ಹೆಚ್ಚಲು ಪ್ರಮುಖ ಕಾರಣವಾಗಿದೆ. ವರ್ಷದಲ್ಲಿ ಆರು ತಿಂಗಳು ಪೌಷ್ಠಿಕ ಆಹಾರ ವಿತರಣೆಯ ವ್ಯವಸ್ಥೆ, ಉಚಿತ ವೈದ್ಯಕೀಯ ಚಿಕಿತ್ಸೆಗಳ ನೆರವು ಇದ್ದರೂ ಕೊರಗ ಸಮುದಾಯದ ಜನಸಂಖ್ಯೆ ತೀವ್ರ ಇಳಿಮುಖವಾಗಿರುವುದು ಆತಂಕದ ವಿಷಯವಾಗಿದೆ.

- ಶೇಖಡ ೫೦ ರಿಂದ ೫೫ ರಷ್ಟು ಕೊರಗ ಕುಟುಂಬಗಳಲ್ಲಿ ಮದ್ಯವ್ಯಸನಿಗಳಿದ್ದು ಅವರು ಸಂಪಾದಿಸಿದ ಹೆಚ್ಚಿನ ಹಣವನ್ನು ಮದ್ಯ ಖರೀದಿಗೆ ಉಪಯೋಗಿಸುತ್ತಾರೆ. ಕೊರಗ ಸಮುದಾಯದ ಮಹಿಳೆಯರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಮದ್ಯವ್ಯಸನಿಗಳಾಗಿದ್ದು ಜೊತೆಗೆ ಮಕ್ಕಳು ಕೂಡ ಹದಿಹರೆಯಕ್ಕೆ ಬರುವ ಮುನ್ನವೇ ಮದ್ಯಪಾನದ ಕಡೆ ಆಕರ್ಷಣೆಕ್ಕೊಳಗಾಗುವುದು ಕಳವಳಕಾರಿ ವಿಷಯವಾಗಿದೆ. ಮಲೆಕುಡಿಯರು ಮತ್ತು

ಮರಾಠಿ ನಾಯ್ಕ ಸಮುದಾಯಗಳಿಗೆ ತುಲನೆ ಮಾಡಿದಾಗ ಕೊರಗ ಸಮುದಾಯದಲ್ಲೇ ಮದ್ಯವ್ಯಸನಿಗಳ ಸಂಖ್ಯೆ ಹೆಚ್ಚಿರುವುದು ಕಂಡು ಬಂದಿದೆ.

❖ ಕೊರಗ ಸಮುದಾಯದ ಸಾಕ್ಷರತಾ ಪ್ರಮಾಣವು ಉಳಿದ ಬುಡಕಟ್ಟು ಸಮುದಾಯಗಳಿಗಿಂತ ಅತ್ಯಂತ ಕಡಿಮೆ ಇದೆ. ಜೊತೆಗೆ ಕೊರಗ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಅರ್ಧದಲ್ಲಿಯೇ ಮೊಟಕುಗೊಳಿಸಿದ್ದಾರೆ. ಅದರಲ್ಲೂ ಕೊರಗ ಸಮುದಾಯದ ಹೆಣ್ಣುಮಕ್ಕಳ ಅನಕ್ಷರತೆ ಪ್ರಮಾಣ ಮತ್ತು ಅರ್ಧದಲ್ಲಿಯೇ ಶಾಲೆ ತೊರೆಯುವವರ ಪ್ರಮಾಣ ಉಳಿದೆಲ್ಲಾ ಸಮುದಾಯಗಳಿಗಿಂತ ಹೆಚ್ಚು ಇದೆ. ಹಿಂಜರಿಕೆಯ ಸ್ವಭಾವ, ಕುಟುಂಬದ ಮೇಲಿನ ವ್ಯಾಮೋಹ, ಆರ್ಥಿಕ ಸಮಸ್ಯೆ, ಭಾಷಾ ಸಮಸ್ಯೆ, ಪೋಷಕರಿಂದ ಶೈಕ್ಷಣಿಕ ಜ್ಞಾನ ಮತ್ತು ಪ್ರೋತ್ಸಾಹದ ಕೊರತೆ ಹೀಗೆ ಅನೇಕ ಕಾರಣಗಳಿಂದ ಕೊರಗ ಸಮುದಾಯದ ಜನರ ಸಾಕ್ಷರತಾ ಪ್ರಮಾಣ ಕುಂಠಿತಗೊಂಡಿದೆ.

❖ ಕೊರಗ ಬುಡಕಟ್ಟು ಜನರು ಉಳಿದ ಬುಡಕಟ್ಟು ಜನರಿಗಿಂತ ಅತೀ ಹೆಚ್ಚಿನ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದು ಹೆಚ್ಚಿನ ಜನರು ಕ್ಷಯರೋಗ, ಕುಷ್ಠರೋಗ, ಮಲೇರಿಯಾ ಇತ್ಯಾದಿ ಸಾಂಕ್ರಾಮಿಕ ರೋಗಗಳಿಗೆ ಸುಲಭವಾಗಿ ತುತ್ತಾಗುತ್ತಿದ್ದಾರೆ. ಹೆಚ್ಚಿನ ಸಂದರ್ಭಗಳಲ್ಲಿ ಕೆಲವೊಂದು ಕಾಯಿಲೆಗಳಿಗೆ ಸ್ಥಳೀಯ ಗಿಡಮೂಲಿಕೆ ಔಷಧಗಳನ್ನು ಬಳಸಿ ರೋಗ ಉಲ್ಬಣಗೊಂಡು ಪ್ರಾಣಾಪಾಯದ ಉದಾಹರಣೆಗಳೂ ಕಂಡು ಬಂದಿವೆ.

❖ ಕೊರಗ ಸಮುದಾಯವು ಆದಿಮ ಬುಡಕಟ್ಟು (ಪಿ.ಟಿ.ಜಿ.) ಗುಂಪಿಗೆ ಸೇರಿದ ನಿಟ್ಟಿನಲ್ಲಿ ಈ ಸಮುದಾಯಕ್ಕೆ ಕೇಂದ್ರ ಸರಕಾರದಿಂದ ಸಿಗುತ್ತಿದ್ದ ವಿಶೇಷ ಅನುದಾನವು ೨೦೧೩ನೇ ವರ್ಷದಿಂದ ಸ್ಥಗಿತಗೊಂಡಿದ್ದು, ಇದರಿಂದ ಸಿಗುತ್ತಿದ್ದ ಅನೇಕ ಸೌಲಭ್ಯಗಳಿಗೆ ಆರ್ಥಿಕ ಕೊರತೆಯಾಗಿದ್ದು, ಇದು ಕೊರಗರ ಅಭಿವೃದ್ಧಿಗೆ ಸ್ವಲ್ಪ ಮಟ್ಟಿನ ಹಿನ್ನಡೆಯನ್ನು ತಂದಿದೆ.

❖ ಶೇಕಡಾ ೧೦ ರಿಂದ ೧೫ರಷ್ಟು ಕೊರಗ ಜನರು ಇನ್ನೂ ಕೂಡ ಅಸ್ಪೃಶ್ಯತೆಯ ಆಚರಣೆಯಾದ ಅಜಲು ಪದ್ಧತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದು, ಇವರೆಲ್ಲರೂ ಅನಕ್ಷರಸ್ಥರಾಗಿದ್ದು ದೂರ ದೂರದ ಕುಗ್ರಾಮಗಳಲ್ಲಿ ವಾಸವಾಗಿರುವವರಾಗಿದ್ದಾರೆ. ಮೇಲ್ವರ್ಗದ ಜನರ ಒತ್ತಡ, ಹಣದ ಆಮಿಷ, ಅಜ್ಞಾನ ಮತ್ತು ಕಾನೂನು ಅರಿವಿನ ಕೊರತೆ, ಪಾರಂಪರಿಕ ಆಚರಣೆಗಳ ಮೇಲಿನ ಅತಿಯಾದ

ನಂಬಿಕೆ ಹೀಗೆ ಕೆಲವೊಂದು ಕಾರಣಗಳಿಂದ ಅಜಲು ಪದ್ಧತಿ ನಿಷೇಧಗೊಂಡರೂ ಇನ್ನೂ ಕೂಡ ಅಜಲು ಪದ್ಧತಿ ಆಚರಣೆಯಲ್ಲಿ ತೊಡಗಿಸಿಕೊಂಡಿದ್ದು ಕಳವಳಕಾರಿ ಅಂಶವಾಗಿದೆ.

❖ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಜಿಲ್ಲಾಧಿಕಾರಿ ಆಡಳಿತಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಇಲಾಖೆಗಳು ಹಾಗೂ ಇನ್ನಿತರ ಇಲಾಖೆಗಳು ಕೊರಗ ಸಮುದಾಯದ ಬಗ್ಗೆ ವಿಶೇಷ ಕಾಳಜಿ, ಮುತುವರ್ಜಿ ವಹಿಸಿ ಕೆಲಸ ಮಾಡುತ್ತಿವೆ. ವಿಶೇಷ ಆರೋಗ್ಯ ಸೇವೆಗಳು, ತುರ್ತು ಭೂ ಸಮಸ್ಯೆಗಳ ಪರಿಹಾರ, ಅಜಲು ಪದ್ಧತಿಯ ಮೇಲೆ ತೀವ್ರ ನಿಗಾ ಮತ್ತು ಕಟ್ಟುನಿಟ್ಟಿನ ಕ್ರಮ, ವಿಶೇಷ ಆಶ್ರಮ ಶಾಲೆ ಮತ್ತು ಕಲೆವೊಂದು ವಿಶೇಷ ಯೋಜನೆಗಳನ್ನು ಹಮ್ಮಿಕೊಂಡು ಕೂಡಲೇ ಅನುದಾನಗಳನ್ನು ಬಿಡುಗಡೆ ಮಾಡುವುದು, ಕೊರಗ ಸಂಘಟನೆಗಳ ಜೊತೆ ನಿಯಮಿತ ಭೇಟಿಯ ಜೊತೆ ಅವರ ಬೇಡಿಕೆಗಳಿಗೆ ತುರ್ತು ಸ್ಪಂದನೆ ಹೀಗೆ ಅನೇಕ ಕಾರಣಗಳಿಂದ ಸರಕಾರಿ ಇಲಾಖೆಗಳು ಕೊರಗ ಸಮುದಾಯದ ಮೇಲಿನ ಕೆಲಸಗಳನ್ನು ಪರಿಣಾಮಕಾರಿಯಾಗಿ ಮಾಡುತ್ತಿರುವುದರಿಂದ ಇತ್ತೀಚಿನ ವರುಷಗಳಲ್ಲಿ ಕೊರಗ ಸಮುದಾಯದ ಅಭಿವೃದ್ಧಿ ಪ್ರಕ್ರಿಯೆ ವೇಗವನ್ನು ಪಡೆದುಕೊಂಡಿದೆ ಎಂದು ಹೇಳಬಹುದು.

❖ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿರುವ ಕೊರಗ ಸಮುದಾಯವು ತಮ್ಮ ಪ್ರಮುಖ ಸಮಸ್ಯೆಗಳನ್ನು ನಿಧಾನವಾಗಿ ಪರಿಹರಿಸಿಕೊಂಡು ಅಭಿವೃದ್ಧಿಯತ್ತ ಮುಖ ಮಾಡಲು ಪ್ರಮುಖ ಕಾರಣ, ಸಮಗ್ರ ಗ್ರಾಮೀಣ ಆಶ್ರಮ ಎಂಬ ಸ್ವಯಂಸೇವಾ ಸಂಸ್ಥೆ ಅಸಂಘಟಿತರಾಗಿದ್ದ ಕೊರಗ ಸಮುದಾಯದ ಜನರನ್ನು ಸಂಘಟಿಸಿ ಅನೇಕ ಕಡೆಗಳಲ್ಲಿ ಕೊರಗ ಸಂಘಟನೆಗಳನ್ನು ಸ್ಥಾಪಿಸಿ ಅವರಲ್ಲಿ ನಾಯಕತ್ವ ಗುಣವುಳ್ಳವರನ್ನು ಗುರುತಿಸಿ ಅವರಿಗೆ ಮಾರ್ಗದರ್ಶನ ಮತ್ತು ಜವಾಬ್ದಾರಿಗಳನ್ನು ನೀಡಿ ದೊಡ್ಡ ಬದಲಾವಣೆಗೆ ಈ ಸ್ವಯಂಸೇವಾ ಸಂಸ್ಥೆ ಕಾರಣವಾಗಿದೆ. ಕೊರಗ ಸಮುದಾಯದ ಜನರಲ್ಲಿ ಶಿಕ್ಷಣದ ಮಹತ್ವವನ್ನು ಪಸರಿಸುತ್ತಾ ಅಜಲು ಪದ್ಧತಿಯ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಿ ಅದರ ವಿರುದ್ಧ ಹೋರಾಟಕ್ಕೆ ಬೆಂಬಲವಾಗಿದ್ದುಕೊಂಡು "ಅಜಲು ಪದ್ಧತಿ ನಿಷೇಧ ಕಾಯ್ದೆ" ಜಾರಿಗೆ ಬರುವಲ್ಲಿ ಈ ಸ್ವಯಂಸೇವಾ ಸಂಸ್ಥೆ ಪ್ರಮುಖ ಪಾತ್ರವಹಿಸಿದೆ. ಇದರ ಜೊತೆಗೆ ಸರಕಾರದ ಅಭಿವೃದ್ಧಿ ಯೋಜನೆಗಳನ್ನು ಸಮುದಾಯದ ಜನರಿಗೆ ತಲುಪಿಸುತ್ತಾ ಕೊರಗ ಜನರಲ್ಲಿ ಸ್ವ-ಉದ್ಯೋಗದ ಮಾಹಿತಿಯ ಜೊತೆಗೆ ತರಬೇತಿಯನ್ನು ನೀಡುತ್ತಾ, ಕೊರಗ ಜನರಿಗೆ ವೈಯಕ್ತಿಕವಾಗಿಯೂ, ಸಾಮೂಹಿಕವಾಗಿಯೂ ಅವರ

ಸಮಸ್ಯೆಗಳ ಪರಿಹಾರಕ್ಕೆ ಮಾರ್ಗದರ್ಶನ ನೀಡುತ್ತಾ ಅವರ ಅಭಿವೃದ್ಧಿಗೆ ಬೆನ್ನೆಲುಬಾಗಿ ನಿಂತಿದೆ ಈ ಸ್ವಯಂಸೇವಾ ಸಂಸ್ಥೆ.

❖ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಹೋಬಳಿ ಮಟ್ಟದಲ್ಲಿ, ತಾಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಕೊರಗ ಸಂಘಟನೆಗಳಿದ್ದು ಕೊರಗ ಸಮುದಾಯದ ಸಮಸ್ಯೆಗಳಿಗೆ ಪರಿಹಾರ ಪಡೆಯುವಲ್ಲಿ ಮತ್ತು ಸಮುದಾಯವನ್ನು ಮೇಲೆತ್ತುವಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ. ಆದರ ಕೊರಗ ಸಮುದಾಯದಲ್ಲೇ ಕೆಲವೊಂದು ಜನರ ನಡುವಿನ ಭಿನ್ನಾಭಿಪ್ರಾಯಗಳಿಂದ ಕೆಲವು ಜನರು ಈ ಸಂಘಟನೆಗಳಲ್ಲಿ ಪಾಲ್ಗೊಳ್ಳದೆ ತಟಸ್ಥರಾಗಿದ್ದಾರೆ. ಇದರ ಪರಿಣಾಮವಾಗಿ ಅಭಿವೃದ್ಧಿ ಯೋಜನೆಗಳಲ್ಲಿ ಸಮುದಾಯದ ಜನರ ಪೂರ್ಣ ಪ್ರಮಾಣದ ಭಾಗವಹಿಸುವಿಕೆ ಮತ್ತು ತೊಡಗಿಸಿಕೊಳ್ಳುವಿಕೆ ಇಲ್ಲದ ಕಾರಣ ಅಭಿವೃದ್ಧಿಯ ಲಾಭಾಂಶಗಳು ಕೆಲವು ಜನರಿಗೆ ದೊರೆಯದಿರುವುದು ಕಂಡು ಬಂದಿದೆ.

❖ ಕೊರಗ ಕುಟುಂಬಗಳಲ್ಲಿ ಪೋಷಕರು ತಮ್ಮ ಮಕ್ಕಳ ಬಗ್ಗೆ ಕಾಳಜಿ ವಹಿಸುವಲ್ಲಿ ನಿರ್ಲಕ್ಷ್ಯವಹಿಸುತ್ತಿರುವುದು ಕಂಡು ಬಂದಿದೆ. ಶಿಕ್ಷಣ, ಆರೋಗ್ಯ, ಪೌಷ್ಠಿಕ ಆಹಾರ ಹೀಗೆ ಕೆಲವು ವಿಷಯಗಳಲ್ಲಿ ಮಕ್ಕಳಿ ಬಗ್ಗೆ ಪೋಷಕರು ಹೆಚ್ಚು ಕಾಳಜಿ ಕೊಡದಿರುವುದು ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಗಮನಕ್ಕೂ ಬಂದಿದ್ದು, ಈ ಬಗ್ಗೆ ವಿವಿಧ ಕೊರಗ ಕಾಲೊನಿಗಳಿಗೆ ಭೇಟಿ ನೀಡಿ ವಿಷಯ ಸಂಗ್ರಹಣೆ ಮಾಡಿದೆ. ಈ ನಿಟ್ಟಿನಲ್ಲಿ ಕೊರಗ ಸಮುದಾಯದ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯ ಕುರಿತು ಸಭೆ ಆಯೋಜಿಸಿ ಅಧ್ಯಯನ ನಡೆಸಲು ತೀರ್ಮಾನಿಸಲಾಗಿದೆ.

❖ ಕೆಲವೊಂದು ಕೊರಗ ಕುಟುಂಬಗಳಿಗೆ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯಡಿ ಮನೆಗಳನ್ನು ನಿರ್ಮಿಸಿದರೂ, ಅವರ ಮನೆಗಳಿಗೆ ಹಕ್ಕು ಪತ್ರ ಮತ್ತು ಮನೆ ಸಂಖ್ಯೆಗಳನ್ನು ನೀಡದಿರುದರಿಂದ ಈ ಕೊರಗ ಕುಟುಂಬಗಳು ಸರಕಾರದ ಕೆಲವೊಂದು ಸೌಲಭ್ಯಗಳನ್ನು ಪಡೆಯುವಲ್ಲಿ ವಂಚಿತರಾಗಿದ್ದಾರೆ. ಈ ಸಮಸ್ಯೆಯಿಂದಾಗಿ ಕೆಲವೊಂದು ಕೊರಗ ಕುಟುಂಬಗಳು ಬ್ಯಾಂಕ್ ಹಾಗೂ ಇತರ ಸಂಸ್ಥೆಗಳಿಂದ ಹಣಕಾಸು ಸೌಲಭ್ಯಗಳು ಸಿಗದ ಕಾರಣ ಕಷ್ಟವನ್ನು ಎದುರಿಸುತ್ತಿದ್ದಾರೆ.

❖ ಹೆಚ್ಚಿನ ಕೊರಗ ಸಮುದಾಯದ ಜನರಿಗೆ ಸರಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ಸ್ಪಷ್ಟವಾದ ಅರಿವು ಇಲ್ಲದಿರುವುದು ಕಂಡು ಬಂದಿದೆ. ಕೆಲವೊಂದು ವ್ಯಕ್ತಿಗಳು/ಕುಟುಂಬಗಳು ಸೌಲಭ್ಯಗಳನ್ನು ಉಪಯೋಗಿಸಿ ಅಥವಾ ಬಳಸಿಕೊಳ್ಳುವುದಲ್ಲಿ

ಅನಾಸಕ್ತಿ ಮತ್ತು ನಿರ್ಲಕ್ಷ ವಹಿಸುತ್ತಿರುವುದು ಕಂಡು ಬಂದಿದ್ದು ಇದ್ದು ಅಭಿವೃದ್ಧಿಗೆ ಸಂಬಂಧ ಪಟ್ಟಂತೆ ಕೊರಗ ಸಮುದಾಯದ ಹಿನ್ನೆಡೆಗೆ ಕಾರಣವಾಗಿದೆ.

❖ ಕೊರಗ ಸಮುದಾಯದ ಜನರಲ್ಲಿನ ಅನಕ್ಷರತೆ, ಮುಗ್ಧತೆ, ಸಂಕೋಚ ಪ್ರವೃತ್ತಿ, ಸಾಮಾಜಿಕ ಕೀಳರಿಮೆಗಳಿಂದ ಈ ಸಮುದಾಯದ ಜನರ ಸಾಮಾಜಿಕ ಮತ್ತು ಔದ್ಯೋಗಿಕ ಸ್ಥಾನಪಲ್ಲಟನೆ ತುಂಬಾ ಕಡಿಮೆಯಗಿದೆ. ಕೊರಗ ಸಮುದಾಯದ ಮಕ್ಕಳು ಇತರ ಮಕ್ಕಳಂತೆ ಶಾಲೆಗಳಲ್ಲಿ ಬೆರೆಯುತ್ತಿಲ್ಲ. ಕೊರಗ ಸಮುದಾಯದ ಹೆಂಗಸರು ಮಹಿಳಾ ಮಂಡಳಿ, ಸ್ತ್ರೀ ಶಕ್ತಿ ಸ್ವಸಹಾಯ ಸಂಘಟನೆ ಇತ್ಯಾದಿ ಸಂಘಟನೆಗಳಲ್ಲಿ ತೊಡಗಿಸಿಕೊಳ್ಳುತಿಲ್ಲ. ಒಟ್ಟಾರೆ ಕೊರಗ ಸಮುದಾಯದ ಜನರು ತಮ್ಮ ಸಮುದಾಯವನ್ನು ಬಿಟ್ಟು ಹೊರಗಿನ ಸಮುದಾಯಗಳೊಂದಿಗೆ ಅಂತರವನ್ನು ಕಾಪಾಡಿಕೊಂಡ ಪರಿಣಾಮ ಧನಾತ್ಮಕವಾದ ಸಾಮಾಜಿಕ ಬದಲಾವಣೆಗಳು ಮತ್ತು ಅಭಿವೃದ್ಧಿ ಪ್ರಕ್ರಿಯೆಗಳು ನಿಧಾನಗೊಂಡಿವೆ.

<u>ಮಲೆಕುಡಿಯರು:</u>

✓ ಮಲೆಕುಡಿಯರಲ್ಲಿ ಶೇಕಡಾ ೭೦ ರಷ್ಟು ಮಲೆಕುಡಿಯರು ತಮ್ಮ ಮೂಲ ವಾಸಸ್ಥಾನಗಳಾದ ದಕ್ಷಿಣ ಕನ್ನಡದ ಪಶ್ಚಿಮ ಘಟ್ಟ ಅರಣ್ಯ ಪ್ರದೇಶಗಳನ್ನು ಬಿಟ್ಟು ತಪ್ಪಲಿನ ಗ್ರಾಮಗಳಲ್ಲಿ ಸರಕಾರ ನೀಡಿರುವ ಜಾಗಗಳಲ್ಲಿ ವಾಸಮಾಡುತ್ತಿದ್ದರೆ ಇನ್ನುಳಿದ ಶೇಕಡಾ ೩೦ ರಷ್ಟು ಮಲೆಕುಡಿಯರು ಪಶ್ಚಿಮ ಘಟ್ಟದ ಅರಣ್ಯ ಪ್ರದೇಶಗಳಲ್ಲೇ ವಾಸಿಸುತ್ತಿದ್ದಾರೆ.

✓ ಸರಕಾರದ ಅರಣ್ಯ ನೀತಿಗಳಿಂದಾಗಿ ಜೀವನದ ಅಭದ್ರತೆ, ಅಧಿಕಾರಿಗಳು ಹಾಗೂ ಪೋಲೀಸರ ದೌರ್ಜನ್ಯ ಕಿರುಕುಳಗಳು ಮತ್ತು ಆಧುನೀಕರಣದ ಪ್ರಭಾವಗಳು ಹೆಚ್ಚಿನ ಸಂಖ್ಯೆಯಲ್ಲಿ ಮಲೆಕುಡಿಯರು ಪಶ್ಚಿಮ ಘಟ್ಟ ಅರಣ್ಯಗಳನ್ನು ತೊರೆಯಲು ಕಾರಣವಾಗಿದೆ. ಆದರೆ, ಇವರೆಲ್ಲರೂ ಒಲ್ಲದ ಮನಸ್ಸಿನಿಂದ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಜೊತೆಗೆ ಪ್ರಸ್ತುತ ತಾವು ನಡೆಸುತ್ತಿರುವ ಜೀವನದಲ್ಲಿ ತೃಪ್ತಿಕರವಾದ ಭಾವನೆಯನ್ನು ಹೊಂದಿಲ್ಲ. ತಮ್ಮ ಮೂಲವಾಸಸ್ಥಾನದ ಬಗ್ಗೆ ಇನ್ನೂ ಪೂಜ್ಯ ಭಾವನೆ ಮತ್ತು ಸೆಳೆತ ಇರುವುದರಿಂದ ಕೆಲವು ಜನರು ಅರಣ್ಯ ಪ್ರದೇಶಗಳಲ್ಲಿ ವಾಸ ಮಾಡುವ ಮಲೆಕುಡಿಯರ ಜೊತೆ ಸಂಪರ್ಕವನ್ನು ಹೊಂದಿದ್ದಾರೆ.

- ✓ ತಮ್ಮ ಮೂಲಸ್ಥಾನದ ಬಗ್ಗೆ ಪೂಜ್ಯ ಭಾವನೆ, ಕೃಷಿ ಮತ್ತು ಕಾಡುತ್ಪತ್ತಿಗಳಿಂದ ಸಿಗುವ ಉತ್ತಮ ಆದಾಯ, ತಮ್ಮ ಬೇಡಿಕೆಯಷ್ಟು ಸಿಗದ ಸರಕಾರದ ಪರಿಹಾರ ಹಣ ಈ ಪ್ರಮುಖ ಕಾರಣಗಳಿಂದ ಕೆಲವೊಂದು ಮಲೆಕುಡಿಯ ಕುಟುಂಬಗಳು ಇನ್ನೂ ಪಶ್ಚಿಮ ಘಟ್ಟದ ಅರಣ್ಯ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ. ಕೆಲವೊಂದು ಮೂಲಭೂತ ಅವಶ್ಯಕಗಳ ಪೂರೈಕೆ ಮತ್ತು ಕಾಡುತ್ಪತ್ತಿಗಳ ಮಾರಾಟದ ಸಲುವಾಗಿ ಗ್ರಾಮ ಮತ್ತು ಪಟ್ಟಣ ಪ್ರದೇಶಗಳ ಸಂಪರ್ಕ ಹೊಂದಿದ್ದಾರೆ.
- ✓ ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮಲೆಕುಡಿಯರು ರಸ್ತೆ, ವಿದ್ಯುತ್, ಆಸ್ಪತ್ರೆ, ಶಾಲೆಗಳು ಹೀಗೆ ಕೆಲವೊಂದು ಮೂಲಭೂತ ಸೌಲಭ್ಯಗಳನ್ನು ಹೊಂದದೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅತ್ಯಂತ ಹಿಂದುಳಿದಿದ್ದಾರೆ. ಇನ್ನು ಅರಣ್ಯ ಪ್ರದೇಶಗಳನ್ನು ಬಿಟ್ಟು ಗ್ರಾಮೀಣ ಪ್ರದೇಶಗಳಿಗೆ ಬಂದು ನೆಲೆನಿಂತು ಮಲೆಕುಡಿಯರು ಸರಕಾರ ನೀಡಿರುವ ಅತ್ಯಲ್ಪ ಭೂಮಿಯಿಂದ ಕೃಷಿ ಮಾಡಲಾಗದೆ, ಬೇರೆ ಕಡೆ ಕೃಷಿ ಕೂಲಿ ಕಾರ್ಮಿಕರಾಗಿ ಹೋಗುತ್ತಿದ್ದಾರೆ. ಮಲೆಕುಡಿಯರು ವಾಸ ಮಾಡುತ್ತಿರುವ ಕೆಲವೊಂದು ಕಾಲೋನಿಗಳಿಗೆ ಸರಿಯಾದ ರಸ್ತೆ ಸಂಪರ್ಕಗಳಿಲ್ಲದೆ ತೊಂದರೆಯನ್ನು ಅನುಭವಿಸುತ್ತಿದ್ದಾರೆ.
- ✓ ಮಲೆಕುಡಿಯರಲ್ಲಿ ಸ್ವಯಂ-ಉದ್ಯೋಗ, ಸೇವಾ ವಲಯ ಮತ್ತು ಕೈಗಾರಿಕಾ ವಲಯಗಳಲ್ಲಿ ದುಡಿಯುತ್ತಿರುವ ಸಂಖ್ಯೆ ಹೆಚ್ಚುತ್ತಿದ್ದು ಯುವಕರು ಗಾರೆ ಕೆಲಸ, ವಾಹನ ಬಾಡಿಗೆ, ಅಂಗಡಿಗಳ ಮೂಲಕ ಆದಾಯ ಗಳಿಸುತ್ತಿದ್ದರೆ, ಯುವತಿಯರು ಶಿಕ್ಷಕರಾಗಿ, ನರ್ಸ್‌ಗಳಾಗಿ, ಸರಕಾರಿ ಕಛೇರಿಗಳಲ್ಲಿ ಕ್ಲರ್ಕ್‌ಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.
- ✓ ಮಲೆಕುಡಿಯರಲ್ಲಿ ಸಾಕ್ಷರತಾ ಪ್ರಮಾಣವು ನಿರಂತರವಾಗಿ ವೃದ್ಧಿಸುತ್ತಿದ್ದು ಪ್ರಸ್ತುತ ಹೆಚ್ಚಿನ ಮಕ್ಕಳು ಶಾಲಾ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಹೆಚ್ಚಿನ ಮಕ್ಕಳು ಸರಕಾರದಿಂದ ನಡೆಯುವ ವಿಶೇಷ ಆಶ್ರಮ ಶಾಲೆಗಳಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಆದರೆ, ಎಸ್.ಎಸ್.ಎಲ್.ಸಿ. ಶಿಕ್ಷಣ ನಂತರ ವಿದ್ಯಾಭ್ಯಾಸವನ್ನು ನಿಲ್ಲಿಸುವ ಮಕ್ಕಳ ಪ್ರಮಾಣ ಹೆಚ್ಚಿದೆ.
- ✓ ಜಿಲ್ಲೆಯಲ್ಲಿ ಮಲೆಕುಡಿಯ ಸಂಘದ ಘಟಕಗಳ ಅನೇಕ ಭಾಗಗಳಿದ್ದು ಕೆಲವು ಕಡೆ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಆದರೆ, ಕೆಲವೊಂದು ರಾಜಕೀಯ ಕಾರಣಗಳಿಂದ ಕೆಲವು ಕಡೆ ಮಲೆಕುಡಿಯ ಸಂಘಟನೆಯು ಇಬ್ಭಾಗಗೊಂಡು ನಿಷ್ಕ್ರಿಯಗೊಂಡಿದೆ. ಅರಣ್ಯ ಪ್ರದೇಶದಲ್ಲಿರುವ ಮಲೆಕುಡಿಯರು ಮಲೆಕುಡಿಯ ಸಂಘದ ಸದಸ್ಯರಾಗಿ ಸಂಘಟನೆ ಬಗ್ಗೆ

ಒಳ್ಳೆಯ ಅಭಿಪ್ರಾಯವನ್ನು ಹೊಂದಿದ್ದರೆ ಗ್ರಾಮಗಳಲ್ಲಿ ವಾಸ ಮಾಡುವ ಮಲೆಕುಡಿಯರು ಸಂಘಟನೆಯಿಂದ ದೂರ ಉಳಿಯುತ್ತಿರುವುದು ಕಂಡು ಬಂದಿದೆ.

- ✓ ಮುಗ್ಧ ಜನರಾದ ಮಲೆಕುಡಿಯರು ದಲ್ಲಾಳಿಗಳಿಂದ ಮತ್ತು ವ್ಯಾಪಾರಿಗಳಿಂದ ಆರ್ಥಿಕ ಶೋಷಣೆಗೊಳಗಾಗುತ್ತಿದ್ದಾರೆ. ಪ್ರಸ್ತುತ ಕಾಡುತ್ಪನ್ನಗಳ ಬೆಲೆ ಹೆಚ್ಚಾಗಿದ್ದರೂ ವ್ಯಾಪಾರಿಗಳು, ಮಧ್ಯವರ್ತಿಗಳು ಮಲೆಕುಡಿಯರಿಂದ ಅತ್ಯಂತ ಕಡಿಮೆ ಬೆಲೆಗೆ ಕಾಡುತ್ಪತ್ತಿಗಳನ್ನು ಖರೀದಿಸಿ ನಂತರ ಮೂರು ಪಟ್ಟು ಅಧಿಕ ಬೆಲೆಗೆ ಔಷಧಿ ಮತ್ತು ಇತರ ಕಂಪೆನಿಗಳಿಗೆ ಮಾರಾಟ ಮಾಡುತ್ತಾರೆ.
- ✓ ಮಲೆಕುಡಿಯರಲ್ಲಿ ಅತೀ ಹೆಚ್ಚಿನ ಜನರು ರಕ್ತಹೀನತೆಯಿಂದ ಬಳಲುತ್ತಿದ್ದು ೧೬೦ಳ ಕುಟುಂಬಗಳಲ್ಲಿ ಸುಮಾರು ೭೬೮ಳ ಮಲೆಕುಡಿಯರಲ್ಲಿ ರಕ್ತಹೀನತೆ ಸಮಸ್ಯೆಯು ಸ್ವಾಭಾವಿಕವಾಗಿ ಕಂಡು ಬಂದಿದ್ದು ಆತಂಕಕಾರಿ ವಿಷಯವಾಗಿದೆ.

ಮರಾಠಿನಾಯ್ಕರು:

- ➢ ಮರಾಠಿನಾಯ್ಕ ಬುಡಕಟ್ಟು ಸಮುದಾಯವು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅಭಿವೃದ್ಧಿ ಹೊಂದಿದ ಬುಡಕಟ್ಟು ಸಮುದಾಯವಾಗಿದೆ. ಮರಾಠಿನಾಯ್ಕ ಸಮುದಾಯವು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಅಭಿವೃದ್ಧಿ ಹೊಂದಿದ್ದು ಇತರ ಸಮುದಾಯಗಳಂತೆಯೇ ಜೀವನ ನಡೆಸುತ್ತಿದ್ದಾರೆ.
- ➢ ಮರಾಠಿನಾಯ್ಕ ಸಮುದಾಯದಲ್ಲಿ ಹೆಚ್ಚಿನ ಕುಟುಂಬಗಳು ಅಲ್ಪ ಪ್ರಮಾಣದ ಕೃಷಿಯ ಜೊತೆಗೆ ಸ್ವ-ಉದ್ಯೋಗಗಳನ್ನು ನಡೆಸುತ್ತಿದ್ದಾರೆ. ಉಳಿದ ಬುಡಕಟ್ಟು ಸಮುದಾಯಗಳಿಗೆ ತುಲನೆ ಮಾಡಿದಾಗ ಈ ಸಮುದಾಯದಲ್ಲಿ ಹೆಚ್ಚಿನ ಜನರು ಸರಕಾರಿ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದಾರೆ.
- ➢ ಸರಕಾರದ ಸೌಲಭ್ಯಗಳನ್ನು ಪಡೆಯುವಲ್ಲಿ ಮರಾಠಿನಾಯ್ಕ ಸಮುದಾಯವು ಮುಂದಿದ್ದಾರೆ. ಸರಕಾರದ ಮೀಸಲಾತಿ ಸೌಲಭ್ಯಗಳು ಸಾಮಾಜಿಕ ಭದ್ರತಾ ಸೌಲಭ್ಯಗಳು, ಆರ್ಥಿಕ ಮತ್ತು ಶೈಕ್ಷಣಿಕ ಶೌಲಭ್ಯಗಳನ್ನು ಪರಿಣಾಮವಾಗಿ ಬಳಸಿಕೊಂಡು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮುಂದುವರೆಯುತ್ತಿದ್ದಾರೆ.
- ➢ ಮರಾಠಿ ಸಮುದಾಯದ ಜನರು ರಾಜಕೀಯವಾಗಿಯೂ ಉಳಿದ ಬುಡಕಟ್ಟು ಸಮುದಾಯಗಳಿಗಿಂತ ಮುಂದುವರೆದಿದ್ದಾರೆ. ಈ ಸಮುದಾಯದ ಜನರು

ಪಂಚಾಯತ್‌ಗಳಲ್ಲಿ ತಾಲೂಕು ಪಂಚಾಯತ್‌ಗಳಲ್ಲಿ ಸದಸ್ಯರುಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.

- ಮರಾಠಿ ಸಮುದಾಯದ ಜನರು ಶೈಕ್ಷಣಿಕವಾಗಿಯೂ ಉಳಿದ ಬುಡಕಟ್ಟು ಸಮುದಾಯಗಳಿಗಿಂತ ಅತ್ಯಂತ ಮುಂದುವರೆದಿದ್ದಾರೆ. ಪದವಿ ಶಿಕ್ಷಣ ಪಡೆಯುವವರ ಸಂಖ್ಯೆಯೂ ಹೆಚ್ಚಿದೆ. ಅದರಲ್ಲೂ ಪದವಿ ಶಿಕ್ಷಣ ಪಡೆಯುವವರಲ್ಲಿ ಪಮಹಿಳೆಯರ ಸಂಖ್ಯೆ ಹೆಚ್ಚಿದ್ದು ಪುರುಷರಿಗಿಂತ ಮಹಿಳೆಯರೇ ಹೆಚ್ಚಿನ ಶಿಕ್ಷಣ ಪಡೆದಿರುವುದು ಕಂಡು ಬಂದಿದೆ.
- ಮರಾಠಿನಾಯ್ಕ ಸಮುದಾಯದಲ್ಲಿ ಜನರ ಜೀವನ ಗುಣಮಟ್ಟ ಉಳಿದ ಬುಡಕಟ್ಟು ಸಮುದಾಯಗಳಿಗಿಂತ ಉತ್ತಮವಾಗಿದ್ದು ಹೆಚ್ಚಿನ ಕುಟುಂಬಗಳಲ್ಲಿ ಶೌಚಾಲಯ, ಬಾವಿ, ವಿದ್ಯುತ್ ಉಪಕರಣಗಳು ವಾಹನ ಸೌಲಭ್ಯಗಳು, ಆರೋಗ್ಯ ಸೇವೆಗಳನ್ನು ಪಡೆದುಕೊಂಡಿದ್ದಾರೆ.
- ಕೆಲವೊಂದು ಗ್ರಾಮಗಳಲ್ಲಿ ಮರಾಠಿ ಸಮುದಾಯದ ಜನರು ವಾಸ ಮಾಡುವ ಪ್ರದೇಶಗಳು ಸರಕಾರದಿಂದ ನಿರ್ಲಕ್ಷ್ಯಕ್ಕೊಳಗಾಗಿದ್ದು ರಸ್ತೆಗಳು ಡಾಂಬರೀಕರಣಗೊಳ್ಳದೆ ಸಂಪೂರ್ಣ ಹದಗೆಟ್ಟಿದ್ದು, ಬೇಸಿಗೆ ಕಾಲದಲ್ಲಿ ನೀರಿನ ಪೂರೈಕೆಗೆ ಸರಿಯಾದ ವ್ಯವಸ್ಥೆಗಳು ಇಲ್ಲದ ಕಾರಣ ನೀರಿನ ಸಮಸ್ಯೆಯನ್ನೂ ಎದುರಿಸುತ್ತಿದ್ದಾರೆ.

ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ತೊಡಗಿಕೊಂಡಿರುವ ಸರಕಾರಿ ಸಂಸ್ಥೆಗಳ ಅಧ್ಯಯನದಿಂದ ಬಂದ ಫಲಿತಗಳು

- ಬುಡಕಟ್ಟು ಅಭಿವೃದ್ಧಿಗೆ ಸಂಬಂಧಿಸಿದಂತೆ ಸರಕಾರದ ಕೆಲವು ಸಂಸ್ಥೆ/ಇಲಾಖೆಗಳ ನಡುವೆ ಸಂಪರ್ಕ, ಸಂವಹನ, ಸಮನ್ವಯದ ಕೊರತೆ ಕಂಡು ಬಂದಿದೆ. ಮುಖ್ಯವಾಗಿ ಬುಡಕಟ್ಟು ಸಮುದಾಯಗಳಿಗೆ ಭೂ ಹಂಚಿಕೆ, ಭೂ ಹಕ್ಕು ಪತ್ರ ನೀಡಿಕೆಗೆ ಸಂಬಂಧಪಟ್ಟಂತೆ ಬುಡಕಟ್ಟು ಅಭಿವೃದ್ಧಿ ಇಲಾಖೆಗಳು, ಅರಣ್ಯ ಇಲಾಖೆಗಳು, ಕಂದಾಯ ಇಲಾಖೆಗಳ ನಡುವೆ ಭೂಮಿಗೆ ಸಂಬಂಧಿಸಿದಂತೆ ಕೆಲವೊಂದು ವ್ಯಾಜ್ಯಗಳು, ಕಾನೂನು ತೊಡಕುಗಳು, ಭೂಮಿಯ ಮೇಲಿನ ಅಧಿಕಾರ, ಗಡಿ ಗುರುತಿಸುವಿಕೆ ಹಾಗೂ ಇನ್ನಿತರ ವಿಷಯಗಳಿಗೆ ಸಂಬಂಧಪಟ್ಟಂತೆ ಗೊಂದಲಗಳಿದ್ದು ಇವು ಬುಡಕಟ್ಟು ಅಭಿವೃದ್ಧಿಯ ಹಿನ್ನೆಡೆಗೆ ಕಾರಣವಾಗಿದೆ.
- ಬುಡಕಟ್ಟು ಸಮುದಾಯದ ಕುಟುಂಬಗಳು ಎದುರಿಸುತ್ತಿರುವ ಸಮಸ್ಯೆಗಳು ಮಾಧ್ಯಮಗಳಲ್ಲಿ ಪ್ರಕಟವಾದಾಗ ಸರಕಾರಿ ಸಂಸ್ಥೆಗಳು (ಐ.ಟಿ.ಡಿ.ಪಿ, ಜಿಲ್ಲಾದಲಿತ ಕಛೇರಿ,

ಸಮಾಜ ಕಲ್ಯಾಣ ಇಲಾಖೆ, ಪಂಚಾಯತ್‌ಗಳು ಇತ್ಯಾದಿ) ತುರ್ತಾಗಿ ಸ್ಪಂದಿಸುತ್ತಿರುವಂತಹ ಧನಾತ್ಮಕ ಅಂಶಗಳು ಕಂಡು ಬಂದಿದೆ. ಬುಡಕಟ್ಟು ಸಮುದಾಯದ ಸಮಸ್ಯೆಗಳು ಅದರಲ್ಲೂ ಮುಖ್ಯವಾಗಿ ಭೂ, ವಸತಿ ಮತ್ತು ಆರೋಗ್ಯ ಸಮಸ್ಯೆಗಳಿಗೆ ಸರಕಾರಿ ಸಂಸ್ಥೆ/ಇಲಾಖೆಗಳು ತ್ವರಿತ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಇದು ಬುಡಕಟ್ಟು ಸಮುದಾಯಗಳಿಗೆ ಪೂಕರವಾಗುವ ಅಂಶವಾಗಿದೆ.

- ಪ್ರಸ್ತುತ ಕೆಲವೊಂದು ಬುಡಕಟ್ಟು ಸಮುದಾಯಗಳ ಕುಟುಂಬಗಳು ಸರಿಯಾದ ಭೂದಾಖಲೆಗಳಿಲ್ಲದೆ ಅನೇಕ ಸಮಸಯೆಗಳನ್ನು ಎದುರಿಸುತ್ತಿದ್ದು, ಈ ಸಮಸ್ಯೆಗೆ ಸಂಬಂಧಿಸಿದಂತೆ ಜನಪ್ರತಿನಿಧಿಗಳು, ಜಿಲ್ಲಾಡಳಿತ ಮತ್ತು ಬುಡಕಟ್ಟು ಅಭಿವೃದ್ಧಿ ಸಂಸ್ಥೆಗಳು ತಾತ್ಕಾಲಿಕವಾಗಿ ಇಂತಹ ಕುಟುಂಬಗಳಿಗೆ ವಿಶೇಷವಾಗಿ ಭೂ ಸರ್ವೇ ಮಾಡಿ ಭೂ ಹಂಚಿಕೆ ಮಾಡಲು ಆದೇಶ ಹೊರಡಿಸಿದರೂ ಭೂ ಹಂಚಿಕೆ ಕಾರ್ಯಕ್ರಮವು ಅಸಮರ್ಪಕ ಅವೈಜ್ಞಾನಿಕ ಮತ್ತು ನಿಧಾನವಾಗಿ ಸಾಗುತ್ತಿಲುವುದು ಕಂಡು ಬಂದಿದೆ.
- ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬುಡಕಟ್ಟು ಕುಟುಂಬಗಳಿಗೆ ನಿವೇಶನ ಹಕ್ಕು ಪತ್ರ ಹಾಗೂ ನಿವೇಶನ ರಹಿತ ಕುಟುಂಬಗಳಿಗೆ ನೂತನ ನಿವೇಶನ ಹಕ್ಕು ಪತ್ರ ನೀಡುವ ಕಾರ್ಯಕ್ರಮ /ವ್ಯವಸ್ಥೆಯ ಕೆಲವೊಂದು ತಾಲೂಕುಗಳಲ್ಲಿ ಪ್ರಗತಿದಾಯಕವಾಗಿದ್ದರೆ ಇನ್ನು ಕೆಲವು ತಾಲೂಕುಗಳಲ್ಲಿ ಆಶಾದಾಯಕವಾಗಿಲ್ಲ. ಕೆಲವು ಕಡೆ ಹದಿನೈದು ವರ್ಷಗಳಿಂದ ನಿವೇಶನ ಹಕ್ಕು ಪತ್ರಕ್ಕಾಗಿ ಮನವಿ ಮಾಡುತ್ತಿದ್ದರೂ ಸಂಬಂಧಪಟ್ಟ ಇಲಾಖೆಗಳು ಸಕಾರಾತ್ಮಕವಾಗಿ ಸ್ಪಂದಿಸದಿರುವುದು ಕಂಡುಬಂದಿದ್ದು, ಇದು ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮತೋಲನಕ್ಕೆ ಕಾರಣವಾಗಿದೆ.
- ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬುಡಕಟ್ಟು ಸಮುದಾಯಗಳು ಅಭಿವೃದ್ಧಿಗೆ ಸಂಬಂಧಿಸಿದಂತೆ, ಒಂದು ಜಿಲ್ಲೆಯಲ್ಲಿ ಸರಕಾರಿ ಸಂಸ್ಥೆಗಳು ಉತ್ತಮವಾದ, ಪರಿಣಾಮಕಾರಿಯಾದ, ಕ್ರಿಯಾತ್ಮಕವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದ್ದರೆ ಇನ್ನೊಂದು ಜಿಲ್ಲೆಯಲ್ಲಿ ಈ ಕಾರ್ಯಕ್ರಮಗಳು ಇಲ್ಲದಿರುವುದು ಕಂಡು ಬಂದಿದೆ. ಈ ಕಾರಣದಿಂದ ಒಂದೇ ಬುಡಕಟ್ಟು ಸಮುದಾಯದ ಜನರು ಒಂದು ಜಿಲ್ಲೆವೊಂದು ಸೌಲಭ್ಯಗಳನ್ನು ಪಡೆದುಕೊಂಡರೆ, ಇನ್ನೊಂದು ಜಿಲ್ಲೆಯಲ್ಲಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

ಸಲಹೆಗಳು:

ಪ್ರಸ್ತುತ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳ ನೆರವಿನಿಂದ ಬುಡಕಟ್ಟು ಸಮುದಾಯಗಳಾದ ಕೊರಗರು, ಮಲೆಕುಡಿಯರು ಮತ್ತು ಮರಾಟಿ ನಾಯ್ಕರಲ್ಲಿ ಅಭಿವೃದ್ಧಿ ಪ್ರಕ್ರಿಯೆಯು ನಿಧಾನವಾಗಿ ಕಂಡು ಬರುತ್ತಿದ್ದರೂ ಪರಿಣಾಮಕಾರಿಯಾಗಿ ಸಾಗುತ್ತಿದೆ ಎಂದು ಬುಡಕಟ್ಟುಗಳ ದಶಕದ ಹಿಂದಿನ ಮತ್ತು ಇಂದಿನ ಸ್ಥಿತಿ-ಗತಿಗಳನ್ನು ಅವಲೋಕಿಸಿ ಮತ್ತು ತುಲನೆ ಮಾಡಿ ಹೇಳಬಹುದು ಮತ್ತು ಅಭಿವೃದ್ಧಿ ಪ್ರಕ್ರಿಯೆಯಿಂದ ಆದಂತಹ ಬದಲಾವಣೆಗಳನ್ನು ಗುರುತಿಸಬಹುದು. ಆದರೆ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಬುಡಕಟ್ಟು ಸಮುದಾಯಗಳು ಇನ್ನೂ ಕೂಡ ಸಮಸ್ಯೆಗಳಿಂದ ಸಂಪೂರ್ಣವಾಗಿ ಹೊರಬಂದಿಲ್ಲ. ಜೊತೆಗೆ ಇಲ್ಲಿನ ಬುಡಕಟ್ಟು ಸಮುದಾಯಗಳ ನಡುವೆ ಮತ್ತು ಬುಡಕಟ್ಟು ಸಮುದಾಯಗಳೊಳಗೆ ಪ್ರಾದೇಶಿಕವಾಗಿ ಅಭಿವೃದ್ಧಿ ಪ್ರಕ್ರಿಯೆ ಮತ್ತು ಅಭಿವೃದ್ಧಿ ಪ್ರಮಾಣದಲ್ಲಿ ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಕೊರಗ ಬುಡಕಟ್ಟು ಸಮುದಾಯವು ಹೆಚ್ಚಿನ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅಭಿವೃದ್ಧಿ ಪ್ರಕ್ರಿಯೆ ಮಂದಗತಿಯಲ್ಲಿ ಸಾಗುತ್ತಿದ್ದರೆ ಮರಾಟಿ ನಾಯ್ಕ ಸಮುದಾಯವು ಉತ್ತಮ ಜೀವನ ಗುಣಮಟ್ಟ ಹೊಂದಿದು ಅಭಿವೃದ್ಧಿ ಪ್ರಕ್ರಿಯೆಯು ತೀವ್ರಗತಿಯಲ್ಲಿ ಸಾಗುತ್ತಿದೆ. ಇನ್ನು ಅತ್ಯಂತ ದೂರದ ಮತ್ತು ಕುಗ್ರಾಮಗಳಲ್ಲಿರುವ ಕೊರಗರು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅತ್ಯಂತ ಹಿಂದುಳಿದಿದ್ದು ನಿಕೃಷ್ಟ ಜೀವನ ನಡೆಸುತ್ತಿದ್ದರೆ, ಕೊರಗ ಸಂಘಟನೆಗಳಿರುವ ಮತ್ತು ನಗರ ಪ್ರದೇಶಗಳಿಗೆ ಹತ್ತಿರವಿರುವ ಗ್ರಾಮ/ಕಾಲೋನಿಗಳಲ್ಲಿ ವಾಸವಾಗಿರುವ ಕೊರಗರು ಉತ್ತಮ ಗುಣಮಟ್ಟದ ಜೀವನ ನಡೆಸುತ್ತಿದ್ದಾರೆ. ಹಾಗೆಯೇ ಒಕ್ಕಲೆದ್ದು ಹೋಗದೆ ಅರಣ್ಯ ಪ್ರದೇಶದಲ್ಲೇ ಉಳಿದುಕೊಂಡು ವಾಸ ಮಾಡುತ್ತಿರುವ ಮಲೆಕುಡಿಯರು ಮೂಲಭೂತ ಅವಶ್ಯಕತೆಗಳಿಂದ ವಂಚಿತರಾಗಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಹಿಂದುಳಿದಿದ್ದರೆ, ಒಕ್ಕಲೆದ್ದು ಬಂದು ಗ್ರಾಮಗಳಲ್ಲಿ ವಾಸ ಮಾಡುತ್ತಿರುವ ಮಲೆಕುಡಿಯರು ಉತ್ತಮ ಗುಣಮಟ್ಟದ ಜೀವನವನ್ನು ನಡೆಸುತ್ತಿದ್ದಾರೆ.

ಪ್ರಸ್ತುತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಡಿಯಲ್ಲಿ ಸುಮಾರು ೩೦ಕ್ಕಿಂತಲೂ ಅಧಿಕ ಅಭಿವೃದ್ಧಿ ಇಲಾಖೆಗಳು ಕಾರ್ಯನಿರ್ವಹಿಸುತ್ತಿದ್ದು ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ವಿವಿಧ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿವೆ. ಆದರೆ ಸರಕಾರಿ ಅಧಿಕಾರಿಗಳ ನಿರ್ಲಕ್ಷ್ಯ, ಸಿಬ್ಬಂದಿಗಳ ಕೊರತೆ, ರಾಜಕೀಯ ಹಸ್ತಕ್ಷೇಪ, ಪರಸ್ಪರರ ನಡುವಿನ ಭಿನ್ನಾಭಿಪ್ರಾಯಗಳು ಮತ್ತು ಇಲಾಖೆಗಳು ಮತ್ತು ಬುಡಕಟ್ಟುಗಳ ನಡುವಿನ ಸಂಪರ್ಕ ಮತ್ತು ಸಮನ್ವಯತೆಯ ಕೊರತೆಯಿಂದ

ಅಭಿವೃದ್ಧಿ ಯೋಜನೆಗಳು ಬುಡಕಟ್ಟು ಜನರಿಗ ನಿರೀಕ್ಷಿತ ಮಟ್ಟದಲ್ಲಿ ಸರಿಯಾದ ಸಮಯಕ್ಕೆ ತಲುಪದ ಕಾರಣ ಅಭಿವೃದ್ಧಿ ಪ್ರಕ್ರಿಯೆಯು ಮಂದ ಗತಿಯಲ್ಲಿ ಸಾಗುತ್ತಿದೆ. ಜೊತೆಗೆ ಸರಕಾರದ ಅಭಿವೃದ್ಧಿ ಯೋಜನೆಗಳನ್ನು ಬುಡಕಟ್ಟು ಜನರಿಗೆ ತಲುಪಿಸಲು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸ್ವಯಂಸೇವಾ ಸಂಸ್ಥೆಗಳ ಕೊರತೆಯಿದ್ದು, ಮತ್ತು ಸದ್ಯ ಕಾರ್ಯನಿರ್ವಹಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳು ಕೆಲವೊಂದು ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುತ್ತಿರುವುದು ಈ ಜಿಲ್ಲೆಗಳಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಪ್ರಮುಖ ಹಿನ್ನಡೆಯಾಗಿದೆ ಎಂದು ಹೇಳಬಹುದು. ಈ ಸಮಸ್ಯೆಗಳ ಪರಿಹಾರೋಪಾಯಕ್ಕಾಗಿ ಪ್ರಸ್ತುತ ಅಧ್ಯಯನದಲ್ಲಿ ಕೆಲವೊಂದು ಸಲಹೆಗಳನ್ನು ಉಲ್ಲೇಖಿಸಲಾಗಿದೆ.

- ಇತ್ತೀಚಿನ ವರ್ಷಗಳಲ್ಲಿ ಕೊರಗ ಸಮುದಾಯದ ಜನಸಂಖ್ಯೆ ತೀವ್ರವಾಗಿ ಇಳಿಮುಖಗೊಳ್ಳುತ್ತಿರುವ ಕಾರಣ ಸರಕಾರಗಳು ವಿಶೇಷವಾದ ಕಾರ್ಯಕ್ರಮಗಳನ್ನು ತುರ್ತಾಗಿ ರೂಪಿಸುವ ಅಗತ್ಯ ಇದೆ. ಮತ್ತು ಈ ಸಮಸ್ಯೆಯ ಪರಿಹಾರಕ್ಕೆ ವಿಶೇಷವಾದ ಸಮಿತಿಯನ್ನು ರಚಿಸಿ ಪರಿಸ್ಥಿತಿಯ ಮೇಲೆ ನಿರಂತರವಾಗಿ ಗಮನಿಸುವ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದೆ.
- ಈಗಾಗಲೇ ಹೆಚ್ಚಿನ ತಾಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೊರಗ ಸಂಘಟನೆಗಳು ದೂರದ ಕುಗ್ರಾಮಗಳನ್ನು ತಲುಪಬೇಕು ಮತ್ತು ಅಲ್ಲಿಯ ಜನರನ್ನು ಸಂಘಟನೆಗಳಿಗೆ ಸೇರಿಸಿ, ಸಮುದಾಯದೊಳಗಿನ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಂಡು ಸಮುದಾಯವನ್ನು ಇನ್ನಷ್ಟು ಬಲಪಡಿಸಬೇಕಾಗಿದೆ.
- ಕೊರಗ ಸಮುದಾಯದ ಜನರು ಅನೇಕ ಆರೋಗ್ಯ ಸಂಬಂಧಿ ಸಮಸ್ಯೆಗಳನ್ನು ಪರಿಹರಿಸಲು ವೈದ್ಯಾಧಿಕಾರಿಗಳನ್ನು ಒಳಗೊಂಡ ವಿಶೇಷವಾದ ಸಮಿತಿಯೊಂದನ್ನು ರಚಿಸಿ, ಸಮಿತಿಯ ಮೂಲಕ ಆರೋಗ್ಯ ಸಂಬಂಧಿ ಸ್ಥಾನಮಾನ, ಅಂಕಿ-ಅಂಶ ಸಂಗ್ರಹ, ಬದಲಾವಣೆಗಳು, ವಿಶೇಷ ಕಾರ್ಯ ಯೋಜನೆ, ಅರಿವು ಮತ್ತು ಜನಜಾಗೃತಿ, ನಿಗಾ ವಹಿಸುವಿಕೆ ಮತ್ತು ಪರಿಸ್ಥಿತಿಗಳ ಮೌಲ್ಯ ಮಾಪನಗಳನ್ನು ಮಾಡುವ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದೆ.
- ಅನೇಕ ಕಾರಣಗಳಿಂದಾಗಿ ಕೊರಗ ಭಾಷೆ ಮತ್ತು ಕೊರಗರ ಪಾರಂಪರಿಕ ಡೋಲು ತಯಾರಿಸುವಿಕೆಯ ಪಾರಂಪರಿಕ ಕಲೆ ಸದ್ಯ ವಿನಾಶದ ಅಂಚಿನಲ್ಲಿದ್ದು ಅವುಗಳ ರಕ್ಷಣೆಗೆ

ಗಮನ ನೀಡಬೇಕಾಗಿದೆ ಮತ್ತು ಸಮಾಜದಲ್ಲಿ ಅವುಗಳಿಗೆ ಗೌರವಯುತ ಸ್ಥಾನಮಾನವನ್ನು ಕಲ್ಪಿಸಬೇಕಾಗಿದೆ.

- ❖ ಕೊರಗ ಮತ್ತು ಮಲೆಕುಡಿಯರ ಕಾಡುತ್ಪತ್ತಿ ಮತ್ತು ಕಾಡುತ್ಪನ್ನಗಳಿಗೆ ಸೂಕ್ತವಾದ ಬೆಲೆಯನ್ನು ದೊರಕಿಸುವ ಸಲುವಾಗಿ ಸರಕಾರವು ವಿಶೇಷವಾದ ಯೋಜನೆಯನ್ನು ರೂಪಿಸಿ ಜಾರಿಗೊಳಿಸಬೇಕಾಗಿದೆ.
- ❖ ಕೊರಗ ಮತ್ತು ಮಲೆಕುಡಿಯ ಜನರ ಕೌಶಲ್ಯ ಮತ್ತು ಸಾಮರ್ಥ್ಯಗಳನ್ನು ಗುರುತಿಸಿಕೊಂಡು, ಅದಕ್ಕೆ ಪೂರಕವಾಗುವಂತಹ ಉದ್ಯೋಗ ತರಬೇತಿ ಮತ್ತು ಉದ್ಯೋಗವಾಕಾಶಗಳನು ಕಲ್ಪಿಸಲು ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ವಿಶೇಷವಾದ ಯೋಜನೆಯನ್ನು ರೂಪಿಸಿ ಜಾರಿಗೊಳಿಸಬೇಕಾಗಿದೆ.
- ❖ ಕೊರಗ ಮತ್ತು ಮಲೆಕುಡಿಯ ಸಮುದಾಯಗಳ ಕುಟುಂಬಗಳು ಉಭಯ ಜಿಲ್ಲೆಗಳಲ್ಲಿ ಅಲ್ಪ ಪ್ರಮಾಣದಲ್ಲಿ ಇರುವುದರಿಂದ ಪ್ರತಿಯೊಂದು ಕುಟುಂಬಕ್ಕೂ ಒಂದು ವಿಶೇಷ ಗುರುತಿನ ಚೀಟಿ ಅಥವಾ ಇತರ ವ್ಯವಸ್ಥೆಯನ್ನು ಮಾಡಿ, ಅದರ ಮೂಲಕ ಅಭಿವೃದ್ಧಿ ಯೋಜನೆಗಳನ್ನು ನೇರವಾಗಿ ಅವರಿಗೆ ತಲುಪಿಸುವ ಜೊತೆಗೆ ಯೋಜನೆಗಳನ್ನು ಮೌಲ್ಯಮಾಪನ ಮಾಡುವ ವ್ಯವಸ್ಥೆಯನ್ನು ಮಾಡಬೇಕಾಗಿದೆ.
- ❖ ಕೊರಗ ಮತ್ತು ಮಲೆಕುಡಿಯರ ಅಭಿವೃದ್ಧಿಗೆ ಶ್ರಮಿಸುವ ಒಂದು ಪ್ರತ್ಯೇಕ ಸ್ವಯಂಸೇವಾ ಸಂಸ್ಥೆಗಳ ಅಗತ್ಯತೆಯಿದ್ದು, ಈ ನಿಟ್ಟಿನಲ್ಲಿ ಪೂರಕ ವಾತಾವರಣ ಮತ್ತು ಸರಕಾರದ ಪ್ರೋತ್ಸಾಹದ ಅವಶ್ಯಕತೆಯಿದ್ದು, ಸರಕಾರ ಮತ್ತು ಸಾಮಾಜಿಕ ಕಾರ್ಯಕರ್ತರು/ಹೋರಾಟಗಾರರು ಈ ನಿಟ್ಟನಲ್ಲಿ ಗಮನ ಹರಿಸುವುದು ಅವಶ್ಯಕವಾಗಿದೆ. ಜೊತೆಗೆ ಇಂತಹ ಸ್ವಯಂಸೇವಾ ಸಂಸ್ಥೆಗಳಿಗೆ ಸರಕಾರವು ಹೆಚ್ಚಿನ ಮೊತ್ತದ ಅನುದಾನವನ್ನು ಶೀಘ್ರ ಸಮಯದಲ್ಲಿ ದೊರಕುವಂತಹ ವ್ಯವಸ್ಥೆಯನ್ನು ಮಾಡಬೇಕಾಗಿದೆ.
- ❖ ಕೊರಗ, ಮಲೆಕುಡಿಯ ಮತ್ತು ಮರಾಠಿನಾಯ್ಕ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಪೂರಕವಾಗಿ ಸರಕಾರವು ಬುಡಕಟ್ಟು ಅಭಿವೃದ್ಧಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ತುರ್ತಾಗಿ ಸಿಬ್ಬಂದಿ/ಅಧಿಕಾರಿಗಳನ್ನು ನೇಮಿಸಬೇಕು ಮತ್ತು ಸಿಬ್ಬಂದಿ/ಅಧಿಕಾರಿಗಳನ್ನು ನೇಮಿಸುವ ಸಂದರ್ಭಗಳಲ್ಲಿ ಬುಡಕಟ್ಟು ಸಮುದಾಯಗಳ

ಅಭಿವೃದ್ಧಿ ಯೋಜನೆಗಳು ಮತ್ತು ಅದರ ನಿರ್ವಹಣೆಯ ಜ್ಞಾನ ಮತ್ತು ಅನುಭವಗಳು ಆಯ್ಕೆಯ ಮಾನದಂಡಗಳಾಗಬೇಕು.

❖ ಕೊರಗ ಮತ್ತು ಮಲೆಕುಡಿಯ ಸಮುದಾಯಗಳಲ್ಲಿ ಸಾಕ್ಷರತಾ ಪ್ರಮಾಣ ಹೆಚ್ಚಳ ಮತ್ತು ಪ್ರೌಢಶಾಲೆಯವರೆಗಿನ ಕಡ್ಡಾಯ ವಿದ್ಯಾಭ್ಯಾಸಕ್ಕೆ ವಿಶೇಷ ಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ ಈಗಿರುವ ಆಶ್ರಮ ಶಾಲೆಗಳು/ವಿಶೇಷ ಶಾಲೆಗಳಲ್ಲಿ ಗುಣಮಟ್ಟ ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳಬೇಕು.

❖ ಕೊರಗ ಮತ್ತು ಮಲೆಕುಡಿಯ ಸಮುದಾಯಗಳಲ್ಲಿರುವ ವಿದ್ಯಾವಂತರನ್ನು ಗುರುತಿಸಿ, ಅಂತಹ ವಿದ್ಯಾವಂತ ಜನರ ಗುಂಪುಗಳನ್ನು ರಚಿಸಿ, ಅದರ ಮೂಲಕ ಕೊರಗ ಮತ್ತು ಮಲೆಕುಡಿಯ ಸಮುದಾಯದ ಜನರಿಗೆ ಅರಣ್ಯ ನೀತಿಗಳು ಮತ್ತು ಅದಕ್ಕೆ ಪೂರಕವಾಗಿರುವ ಕಾನೂನು ಮಾಹಿತಿಗಳನ್ನು ನೀಡುವುದರ ಜೊತೆಗೆ ರಾಜಕೀಯ ಚಟುವಟಿಕೆಗಳು ಮತ್ತು ಅಭಿವೃದ್ಧಿ ಯೋಜನೆಗಳಲ್ಲಿ ಭಾಗವಹಿಸಲು ಮತ್ತು ತೊಡಗಿಸಿಕೊಳ್ಳಲು ಪ್ರೇರೇಪಿಸಬೇಕು. ಈ ನಿಟ್ಟಿನಲ್ಲಿ ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ಗಮನಹರಿಸಬೇಕಾಗಿದೆ.

❖ ಪ್ರಸ್ತುತ ಕೊರಗ, ಮಲೆಕುಡಿಯ ಮತ್ತು ಮರಾಠಿನಾಯ್ಕ ಸಮುದಾಯಗಳಿಗೆ ಸಿಗುವ ಅಭಿವೃದ್ಧಿ ಯೋಜನೆಗಳ ಪ್ರಭಾವ ಮತ್ತು ಪರಿಣಾಮ, ಆ ಯೋಜನೆಗಳ ಅನುಷ್ಠಾನದ ಬಳಿಕ ಉಂಟಾದ ಬದಲಾವಣೆಗಳು, ಯೋಜನೆಗಳಲ್ಲಿರುವ ಲೋಪದೋಷಗಳು, ಯೋಜನೆಗಳ ಬಗ್ಗೆ ಸಮುದಾಯದ ಜನರಿಗೆ ಅಭಿಪ್ರಾಯಗಳನ್ನು ತಿಳಿದುಕೊಂಡು ಮೌಲ್ಯಮಾಪನ ಮಾಡುವ ಕಡೆಗೆ ಸರಕಾರವು ಗಮನಹರಿಸಬೇಕಾಗಿದೆ.

❖ ಯಾವುದೇ ಅಭಿವೃದ್ಧಿ ಯೋಜನೆಗಳನ್ನು ಬುಡಕಟ್ಟುಗಳಿಗೆ ಜಾರಿಗೊಳಿಸುವ ಮುನ್ನ ಸೂಕ್ತವಾದ ಅಧ್ಯಯನವನ್ನು ನಡೆಸುವ ವ್ಯವಸ್ಥೆಯನ್ನು ಸರಕಾರವು ರೂಪಿಸಬೇಕಾಗಿದೆ.

❖ ಬುಡಕಟ್ಟು ಸಮುದಾಯಗಳಾದ ಕೊರಗ, ಮಲೆಕುಡಿಯ ಮತ್ತು ಮರಾಟಿ ನಾಯ್ಕ ಜನರ ಮೇಲೆ ಅನ್ಯಾಯ, ದೌರ್ಜನ್ಯ, ಶೋಷಣೆಗಳನ್ನು ನಡೆಸುವವರ ಮೇಲೆ ಮತ್ತು ಅವರ ಹಕ್ಕುಗಳನ್ನು ಕಸಿದುಕೊಳ್ಳುವವರ ಮೇಲೆ ಇನ್ನೂ ಹೆಚ್ಚಿನ ಕಠಿನ ಕ್ರಮಗಳನ್ನು ಕೈಗೊಳ್ಳಲು ಸರಕಾರವು ಮುಂದಾಗಬೇಕು.

❖ ಕೊರಗ ಮತ್ತು ಮಲೆಕುಡಿಯ ಸಮುದಾಯಗಳಲ್ಲಿ ಭೂ ಸಮಸ್ಯೆಗಳು ಪ್ರಮುಖವಾಗಿದ್ದು ಭೂ ಹಕ್ಕು ಪತ್ರ ವಿತರಣೆ, ಭೂ ಮೌಲ್ಯ ಮಾಪನದ ಜೊತೆಗೆ ಫಲವತ್ತಾದ

ಭೂಮಿಯನ್ನು ಸರಕಾರಗಳು ಒದಗಿಸುವುದರ ಜೊತೆಗೆ ಭೂ ಅತಿಕ್ರಮಣ, ಶೋಷಣೆಗಳಿಂದ ಸೂಕ್ತ ರಕ್ಷಣೆಯನ್ನು ಒದಗಿಸುವಂತಹ ಯೋಜನೆಗಳನ್ನು ರೂಪಿಸುವಲ್ಲಿ ಸರಕಾರವು ಗಮನಹರಿಸಬೇಕಾಗಿದೆ.

- ❖ ಕೊರಗ ಮತ್ತು ಮಲೆಕುಡಿಯ ಸಮುದಾಯದ ಜನರಲ್ಲಿ ಆಧುನಿಕ ಕೃಷಿ ವಿಧಾನಗಳ ಬಗ್ಗೆ ವಾಣಿಜ್ಯ ಬೆಳೆಗಳ ಕೃಷಿ ಜೊತೆಗೆ ಕೃಷಿ ಪೂರಕ ಉದ್ದಿಮೆ, ಮಾರುಕಟ್ಟೆ ವ್ಯವಹಾರಗಳ ಜ್ಞಾನದ ಕೊರತೆ ಇದ್ದು ಇದರ ಬಗ್ಗೆ ಸೂಕ್ತವಾದ ತರಬೇತಿಯನ್ನು ನೀಡುವಲ್ಲಿ ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ಗಮನ ಹರಿಸಬೇಕಾಗಿದೆ.
- ❖ ಪ್ರಸಕ್ತ ಸಾಮಾಜಿಕ ಸನ್ನಿವೇಶದಲ್ಲಿ ಅನೇಕ ಕಾರಣಗಳಿಂದ ಉದ್ಯೋಗ ಸಮಸ್ಯೆಗಳು ಹೆಚ್ಚುತ್ತಿದ್ದು ಇದರ ಪರಿಣಾಮ ಕೊರಗ, ಮಲೆಕುಡಿಯ ಮತ್ತು ಮರಾಠಿನಾಯ್ಕ ಸಮುದಾಯದ ಜನರಲ್ಲೂ ಕಂಡು ಬಂದಿದ್ದು, ಈ ನಿಟ್ಟಿನಲ್ಲಿ ಸರಕಾರವು ಈ ಜನರ ಸಾಮರ್ಥ್ಯ ಮತ್ತು ಕೌಶಲ್ಯ ಹೆಚ್ಚಳದ ಜೊತೆಗೆ ಸ್ವ-ಉದ್ಯೋಗದ ಮೂಲಕ ಉತ್ಪಾದನಾ ಸಾಮರ್ಥ್ಯ ಮತ್ತು ಆದಾಯ ವೃದ್ಧಿಯ ಕಡೆಗೆ ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ಗಮನಹರಿಸಬೇಕಾಗಿದೆ.
- ❖ ಕೊರಗ, ಮಲೆಕುಡಿಯ ಮತ್ತು ಮರಾಠಿನಾಯ್ಕ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಕೈಗೊಂಡಿರುವ ಯೋಜನೆಗಳ ಆಡಳಿತ ಮತ್ತು ನಿರ್ವಹಣೆಯು ಹೆಚ್ಚು ಪಾರದರ್ಶಕ, ಸ್ಪಷ್ಟತೆ, ಸರಳ ಮತ್ತು ಪರಿಣಾಮಕಾರಿಯಾಗುವ ನಿಟ್ಟಿನಲ್ಲಿ ಸರಕಾರವು ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಪ್ರಾರಂಭದಿಂದ ಅಂತ್ಯದವರೆಗಿನ ಎಲ್ಲಾ ಮಾಹಿತಿಗಳನ್ನು ಸಮಾಜದ ಎಲ್ಲಾ ಜನರಿಗೆ ಸುಲಭದಲ್ಲಿ ಸಿಗುವಹಾಗೆ ವ್ಯವಸ್ಥೆ ಮಾಡಬೇಕು ಮತ್ತು ಸಮಾಜದ ಇತರ ಜನರೂ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ಈ ಮೂಲಕ ಅವಕಾಶಗಳನ್ನು ಒದಗಿಸಬೇಕು.
- ❖ ಪ್ರಸ್ತುತ ಕೊರಗ ಮತ್ತು ಮಲೆಕುಡಿಯ ಸಮುದಾಯದ ಜನರ ರಾಜಕೀಯ ಚಟುವಟಿಕೆಗಳಲ್ಲಿನ ಭಾಗವಹಿಸುವಿಕೆ ತೀರ ಕಡಿಮೆಯಿದ್ದು ಅವರ ಪ್ರಾತಿನಿಧ್ಯತೆ ಹೆಚ್ಚಿಸುವತ್ತ ಸರಕಾರಗಳು ವಿಶೇಷ ನೀತಿಗಳನ್ನು ರೂಪಿಸುವ ಅಗತ್ಯವಿದೆ.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಅಂಬಳಿಕೆ ಹಿರಿಯಣ್ಣ 'ಬುಡಕಟ್ಟು ಜನರ ಬದಲಾಗುತ್ತಿರುವ ಆರ್ಥಿಕ ಜೀವನ, ಜಾನಪದ ಕೆಲವುಅಧ್ಯಯನಗಳು' ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೪.

ಈಶ್ವರ ಜೋಶಿ, ಎನ್. ದಕ್ಷಿಣ ಕನ್ನಡದ ಕುಡುಬಿಯರು ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೩.

ಉದಯ ವರ್ಮ ರಾಜ, ತುಳುನಾಡಿನ ಗತ ವೈಭವ, ಕನ್ನಡ ಸಾಹಿತ್ಯ ಪರಿಷತ್ತು ಕೇರಳ ವಿಶೇಷ ಘಟಕ, ಕಾಸರಗೋಡು–೧೯೯೮.

ಗಂಗಾಧರ ದೈವಜ್ಞಕೊರಗರು ಸಮಕಾಲೀನ ಸ್ಪಂದನ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ–೨೦೧೨.

ಗಾಯತ್ರಿ ನಾವಡ, 'ತವರಿನ ಕಟ್ಟು ಕಡಿವ ಕುಡಬಿ ವಿವಾಹ', ಬೆಳ್ಳಿ ಹಬ್ಬದ ಸ್ಮರಣ ಸಂಚಿಕೆ ಭಂಡಾರ್‌ಕರ ಕಾಲೇಜು, ಕುಂದಾಪುರ, ೧೯೮೮.

ಗೋಪಾಲ ಗೌಡ, ಎಂ. 'ದಕ್ಷಿಣ ಕನ್ನಡದ ಕುಡುಬಿ ಜನಾಂಗ', ಕಿರಣ ವಾರ್ಷಿಕ ಮ್ಯಾಗಜಿನ್, ಸಂಚಿಕೆ–೨, ಜೈನ್ ಜೂನಿಯರ್ ಕಾಲೇಜು, ಮೂಡಬಿದಿರೆ, ೧೯೨೬.

ಚಂದ್ರ ಪೂಜಾರಿ, ಎಂ. ಸಮಾಜ ಸಂಶೋಧನೆ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೫.

ಚಂದ್ರ ಪೂಜಾರಿ, ಎಂ. ಸಂಶೋಧನ ಪ್ರಸ್ತಾಪ, ಸಂಪುಟ ಮಾಲೆ–೧೫೮, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೮.

ಚಂದ್ರಶೇಖರ, ಬಿ.ಎಸ್. ಸಮಾಜ ವಿಜ್ಞಾನಗಳಲ್ಲಿ ಸಂಶೋಧನ ವಿಧಾನಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೦. ಚಿದಾನಂದ ಮೂರ್ತಿ, ಎಂ. ಸಂಶೋಧನ ತರಂಗ, ಸಂ.೨, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೦.

೧. ನಾಗೇಶ, ಎಚ್. ವಿ. 'ಕರ್ನಾಟಕ ಬುಡಕಟ್ಟುಗಳಲ್ಲಿ ನ್ಯಾಯ ತೀರ್ಮಾನ', ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೩.

೨. ನಾಯಕ್, ಎನ್.ಆರ್ 'ಕಾರವಾರ ಜಿಲ್ಲೆಯ ಬುಡಕಟ್ಟು ಜನಾಂಗದ ಜಾನಪದ', ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೯.

೩. ಪ್ರಭಾಕರ, ಎ. ಎಸ್. 'ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು", ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೪. ಪ್ರಭಾಕರ ಎ.ಎಸ್. ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪ್ರಸಾರಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ–೨೦೦೪.

೫. ಪ್ರಭಾಕರ, ಎ.ಎಸ್. ಆದಿವಾಸಿ ವ್ಯಾಖ್ಯಾನ, ಸಿದ್ಧಾರ್ಥ ಪ್ರಕಾಶನ, ಎಂ.ಪಿ. ಪ್ರಕಾಶ ನಗರ, ಹೊಸಪೇಟ್, ೨೦೦೬.

೬. ಪ್ರಭಾಕರ ಜೋಶಿ ಎಂ. ಗುರುರಾಜ ಮಾರ್ಪಳ್ಳಿ, ದಕ್ಷಿಣ ಕನ್ನಡ (ಮಂಗಳೂರು ಮತ್ತು ಉಡುಪಿ ಜಿಲ್ಲೆಗಳು), ವಿದ್ಯಾ ಪಬ್ಲಿಶಿಂಗ್ ಹೌಸ್, ಮಂಗಳೂರು–೧೯೯೭

ಪ್ರಶಾಂತ, ಎಚ್.ಡಿ. ಕರ್ನಾಟಕ ರಾಜ್ಯಕೋಶ, ಸಂ-೪, ಜನಸಮುದಾಯ ಸಂಪುಟ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.
ಪಾಲ್ತಾಡಿ ರಾಮಕೃಷ್ಣ ಆಚಾರ್, ಹೋಳಿ ಕುಣಿತ, ಜಾನಪದ ಕುಣಿತಗಳು, ಕರ್ನಾಟಕ ಸಂಘ, ಪುತ್ತೂರು, ೧೯೯೨.
ಬಾಬು ಕೊರಗ ಪಾಂಗಳ, ಕೊರಗರ ಅಜಲು (ಒಂದು ವಿಶ್ಲೇಷಣೆ), ವಾಮಂಜೂರು, ಮಂಗಳೂರು-೨೦೦೯
ಬೋರಲಿಂಗಯ್ಯ ಹಿ.ಚಿ., 'ಕಾಡು ಕಾಂಕ್ರೀಟ್ ಮತ್ತು ಜಾನಪದ', ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೫.
ಬೋರಲಿಂಗಯ್ಯ ಹಿ.ಚಿ. 'ವಿಸ್ಮೃತಿ ಮತ್ತು ಸಂಸ್ಕೃತಿ', ಸಿ.ವಿ.ಜಿ., ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧.
ಬೋರಲಿಂಗಯ್ಯ ಹಿ.ಚಿ., ಪ್ರಭಾಕರ ಎ.ಎಸ್. ಬುಡಕಟ್ಟು ಅಧ್ಯಯನ ಸಂಪುಟ-೧ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೪.
ಬೋರಲಿಂಗಯ್ಯ ಹಿ.ಚಿ., ಪ್ರಭಾಕರ ಎ.ಎಸ್. ಬುಡಕಟ್ಟು ಅಧ್ಯಯನ ಸಂಪುಟ-೨ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೪.
ಬೋರಲಿಂಗಯ್ಯ ಹಿ.ಚಿ., ಪ್ರಭಾಕರ ಎ.ಎಸ್. ಬುಡಕಟ್ಟು ಅಧ್ಯಯನ ಸಂಪುಟ-೨ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೫.
ಬೋರಲಿಂಗಯ್ಯ ಹಿ.ಚಿ., ಪ್ರಭಾಕರ ಎ.ಎಸ್. ಬುಡಕಟ್ಟು ಅಧ್ಯಯನ ಸಂಪುಟ-೪ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೫.
ಮಹಾದೇವ ನಾರಾಯಣರಾವ್ ಜೋಶಿ, ಶ್ರೀ ಗುರುರಾಜ ನಾರಾಯಣರಾವ್ ಜೋಶಿ, ಸಾಮಾಜಿಕ ವಿಜ್ಞಾನಗಳಲ್ಲಿ ಸಂಶೋಧನೆ (ತಂತ್ರಗಳು ಮತ್ತು ವಿಧಾನಗಳು) ಸುಶೀಲ ಪ್ರಕಾಶನ, ಧಾರವಾಡ, ೧೯೯೮.
ಮುನಿರಾಜು ಎಸ್.ಬಿ., ಬುಡಕಟ್ಟು ಅಭಿವೃದ್ಧಿ: ಒಂದು ವಿಮರ್ಶಾತ್ಮಕ ಅಧ್ಯಯನ, ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೮
ಮೇತ್ರಿ ಕೆ.ಎಂ. 'ಬುಡಕಟ್ಟು ಕುಲ ಕಸುಬುಗಳು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ-೨೦೦೨
ಮೇತ್ರಿ ಕೆ.ಎಂ., ಚಲುವರಾಜು, ಬುಡಕಟ್ಟು ಅಧ್ಯಯನ ಸಂಪುಟ-೨, ಸಂಚಿಕೆ ೨ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ-೨೦೦೬.
ಮೇತ್ರಿ ಕೆ.ಎಂ. ಚಲುವರಾಜು, ಬುಡಕಟ್ಟು ಅಧ್ಯಯನ, ಸಂಪುಟ-೨, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ-೨೦೦೬
ರಮೇಶ್ ಸ.ಚಿ., ಅಲೆಮಾರಿಗಳ ಸ್ಥಿತಿಗತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೫.
ರವೀಂದ್ರನಾಥ. ಕೆ. 'ಅಧ್ಯಯನದ ವಿಧಿವಿಧಾನಗಳು', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.
ಲಕ್ಕಪ್ಪ ಗೌಡ, ಎಚ್.ಜೆ. 'ಕರ್ನಾಟಕ ಬುಡಕಟ್ಟುಗಳು', ಸಂ-೧, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮
ವಿವೇಕ ರೈ ಬಿ.ಎ., ಯದುಪತಿ ಗೌಡ ಡಿ., 'ಮಲೆ ಕುಡಿಯೆರು' ಪ್ರಸಾಅಂಗ ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳೂರು, ೧೯೯೬.

ಶಿರೂರ, ಬಿ.ವಿ. ಸಂಶೋಧನ ಸ್ವರೂಪ, ಅನ್ನಪೂರ್ಣ ಪ್ರಕಾಶನ, ಮಂಜುನಾಥ ನಗರ, ಹುಬ್ಬಳ್ಳಿ, ೧೯೯೨.

ಸವಿತಾ ನಾಯಕ್, ಉತ್ತರ ಕನ್ನಡ ಜಿಲ್ಲೆಯ ಕೆಲವು ಬುಡಕಟ್ಟುಗಳಲ್ಲಿ ಪ್ರಸಾದನ ಕಲೆ, ಜಾನಪದ ಪ್ರಕಾಶನ, ಹೊನ್ನಾವರ, ೨೦೦೦.

ಸುಚೇತ ಜೋಷಿ ಎಂ. ಕೊಂಕಣಿ ಕುಡುಬಿ ಜನಾಂಗ ರಜತ ವಿವೇಕ ವಾರ್ಷಿಕ ಪತ್ರಿಕೆ, ಎಸ್.ವಿ. ಜ್ಯೂನಿಯರ್ ಕಾಲೇಜು, ಎಡಪದವು, ೧೯೯೦.

ಸುಂದರ ನಾಯಕ್ ಕೆ., ಕರಾವಳಿ ಕರ್ನಾಟಕದ ಮರಾಠಿ ಜನಾಂಗ ಪರಂಪರೆ ಮತ್ತು ಆಧುನಿಕತೆ, ದೀಪಪ್ರಿಯ ಪ್ರಕಾಶನ, ಬೆಂಗಳೂರು, ೨೦೦೮.

ಸೂರ್ಯನಾತ್ ಕಾಮತ್, 'ಕರ್ನಾಟಕ ರಾಜ್ಯ ಗೆಜೆಟಿಯರ್' ಭಾಗ-೨, ಸುಬ್ರಾಯ ಹೆಗಡೆ ಅಟ್ಟೆ, ಕುಣಬಿಯರು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೪

ಪರಿಶಿಷ್ಟ ವರ್ಗಗಳ ಮಾಹಿತಿ ಕೈಪಿಡಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಕಛೇರಿ ಮಂಗಳೂರು ಮತ್ತು ಉಡುಪಿ.

"ನಮ್ಮ ಧ್ವನಿ"- ಕೊರಗ ಮಾಸ ಪತ್ರಿಕೆ, ಸಮಗ್ರ ಗ್ರಾಮೀಣ ಆಶ್ರಮ, ಶಿರ್ವ, ಉಡುಪಿ.

…ಂಗ್ಲೀಷ್ ಪರಮಾರ್ಶನ ಗ್ರಂಥಗಳು:

೧೦. Ananthakrishna Iyer & Nanjudayya, The Mysore Tribes and Castes, Vol-II, Mysore University, Mysore, 1928.

೧೧. Ananthakrishna Iyer, L.K. The Mysore Tribes and Castes, Vol-I the University of Mysore, Mysore, 1935.

೧೨. Gururajachar S. Some Aspects of Economic and Social Life in Karnataka (A.D.1000-1300), Prasaranga, University, Mysore, 1974.

೧೩. Goel O.P., Role of NGOs in Development of Social System, Isha Books Delhi, 2004

೧೪. Havanur, L.G. Karnataka backward classes commission, Vol-II Bangalore, 1975.

೧೫. Jainendra Kumar Jha, Encyclopedia of Social Work, Vol.1, Anmol Publication Pvt. Ltd., Publications, New Delhi 2001.

೧೬. Jyotsna, Kamat K. Social Life in Medieval Karnataka, Abhinav Publications, New Delhi, 1980.

೧೭. Krishnayya, S.A. Itinerant performer Kudubivesas, Encyclopedic of the folk Culture of Karnataka Vol-I, Hanur Krishnamurthy (Ed), Institute of Asian Studies, Madras, 1991.

೧೮. Krishnayya, S.A. Holi festival of Kudubis, Prasaranga, RRC No.14 Udupi, 1987.

Lawrence D' Souza S.J. 'Koragas – A Primitive Tribe of South India', UNESCO Co-Action Learning Centre Mangaluru-1991.

Mohammed Peer and O.D. Heggade, Tribal Development Programme: A case study of Karnataka An evaluation report submitted to the Government of India, Department of Sociology, Mangalore University, 1992.

Patel A.K. – Dubey M.V., NGOs and Social Work, Cresecent Publishing Corporation 2010.

Ravindranath, Y. Social Change among the Tribals: A case study of Kudubis of DK. (Unpublished Ph.D., thesis), Department of Sociology Mangalore University, Mangalagangothri, 1995.

Saki, Making History, Karnataka's people and their past, Vol-I, Vimukthi Prakashana Bangalore, 1998.

Stephen Fuchs, At the Bottom of Indian Society, Munshiram Manoharlal Publishers Pvt. Ltd., 1981.

Samagra Grameena Ashrama, Reports of Plans and Budget, 2010.

ಮಾಹಿತಿದಾರರ ಪಟ್ಟಿ

ಹೆಸರು	ವಯಸ್ಸು	ವೃತ್ತಿ	ಸಮುದಾಯ	ವಿಳಾಸ
ಶಂಕರ ನಾಯ್ಕ	೫೧	ಕೃಷಿ	ಮರಾಠಿ ನಾಯ್ಕ	ಕಾಡುಹೊಳೆ ಕಾಲೊನಿ ವರಂಗ ಗ್ರಾಮ, ಕಾರ್ಕಳ ತಾ., ಉಡುಪಿ ಜಿ
ಸುಂದರ ನಾಯ್ಕ	೬೫	ಕೂಲಿ	ಮರಾಠಿನಾಯ್ಕ	ಕಾಡುಹೊಳೆ ಕಾಲೊನಿ ವರಂಗ ಗ್ರಾಮ, ಕಾರ್ಕಳ ತಾ., ಉಡುಪಿ ಜಿ
ಸಂಜೀವ ನಾಯ್ಕ	೫೨	ಕೂಲಿ	ಮರಾಠಿನಾಯ್ಕ	ಕಾಡುಹೊಳೆ ಕಾಲೊನಿ ವರಂಗ ಗ್ರಾಮ, ಕಾರ್ಕಳ ತಾ.,ಉಡುಪಿ ಜಿ.
ಆನಂದ ನಾಯ್ಕ	೫೫	ಕೂಲಿ	ಮರಾಠಿನಾಯ್ಕ	ಕಾಡುಹೊಳೆ ಕಾಲೊನಿ ವರಂಗ ಗ್ರಾಮ, ಕಾರ್ಕಳ ತಾ., ಉಡುಪಿ ಜಿ
ನರಂಗನಯ್ಕ	೪೮	ಕೂಲಿ	ಮರಾಠಿನಾಯ್ಕ	ಕಾಡುಹೊಳೆ ಕಾಲೊನಿ ವರಂಗ ಗ್ರಾಮ, ಕಾರ್ಕಳ ತಾ., ಉಡುಪಿ ಜಿ
ವಿಠಲ ನಾಯ್ಕ	೪೫	ಕೂಲಿ	ಮರಾಠಿನಾಯ್ಕ	ಕಾಡುಹೊಳೆ ಕಾಲೊನಿ ವರಂಗ ಗ್ರಾಮ, ಕಾರ್ಕಳ ತಾ., ಉಡುಪಿ ಜಿ
ಶಿವ ನಾಯ್ಕ	೫೨	ಕೂಲಿ	ಮರಾಠಿನಾಯ್ಕ	ಕಾಡುಹೊಳೆ ಕಾಲೊನಿ ವರಂಗ ಗ್ರಾಮ, ಕಾರ್ಕಳ ತಾ., ಉಡುಪಿ ಜಿ
ಸುಮಿತ್ರ	೪೦	ಕೂಲಿ	ಮರಾಠಿನಾಯ್ಕ	ಕಾಡುಹೊಳೆ ಕಾಲೊನಿ ವರಂಗ ಗ್ರಾಮ, ಕಾರ್ಕಳ ತಾ., ಉಡುಪಿ ಜಿ
ಕೂಸಪ್ಪ ನಾಯ್ಕ	೭೦	ಕೃಷಿ	ಮರಾಠಿನಾಯ್ಕ	ಕಾಡುಹೊಳೆ ಕಾಲೊನಿ ವರಂಗ ಗ್ರಾಮ, ಕಾರ್ಕಳ ತಾ., ಉಡುಪಿ ಜಿ
ಕೇಶವ ನಾಯ್ಕ	೩೮	ಕೂಲಿ	ಮರಾಠಿನಾಯ್ಕ	ಕಾಡುಹೊಳೆ ಕಾಲೊನಿ ವರಂಗ ಗ್ರಾಮ, ಕಾರ್ಕಳ ತಾ., ಉಡುಪಿ ಜಿ
ಹರೀಶ್ ನಾಯ್ಕ	೩೫	ಕೂಲಿ	ಮರಾಠಿನಾಯ್ಕ	ಕಾಡುಹೊಳೆ ಕಾಲೊನಿ ವರಂಗ ಗ್ರಾಮ, ಕಾರ್ಕಳ ತಾ., ಉಡುಪಿ ಜಿ
ಲಲಿತ	೫೨	ಕೂಲಿ	ಮರಾಠಿನಾಯ್ಕ	ಕಾಡುಹೊಳೆ ಕಾಲೊನಿ ವರಂಗ ಗ್ರಾಮ, ಕಾರ್ಕಳ ತಾ., ಉಡುಪಿ ಜಿ
ಶೇಖರ ನಾಯ್ಕ	೪೪	ಕೂಲಿ	ಮರಾಠಿನಾಯ್ಕ	ಮುದೆಲ್‌ಕಡಿ ಕಾಲೊನಿ, ಮುನಿಯಾಲು ಅಂಚೆ, ಕಾರ್ಕಳ ತಾ.
ಸುನೀತಾ	೪೬	ಕೂಲಿ	ಮರಾಠಿನಾಯ್ಕ	ಮುದೆಲ್‌ಕಡಿ ಕಾಲೊನಿ, ಮುನಿಯಾಲು ಅಂಚೆ, ಕಾರ್ಕಳ ತಾ.
ನಾರಾಯಣ ನಾಯ್ಕ	೫೫	ಕೂಲಿ	ಮರಾಠಿನಾಯ್ಕ	ಮುದೆಲ್‌ಕಡಿ ಕಾಲೊನಿ, ಮುನಿಯಾಲು ಅಂಚೆ, ಕಾರ್ಕಳ ತಾ.,
ವಸಂತಿ	೫೬	ಸ್ವಯಂ ಉದ್ಯೋಗ	ಮರಾಠಿನಾಯ್ಕ	ಮುದೆಲ್‌ಕಡಿ ಕಾಲೊನಿ, ಮುನಿಯಾಲು ಅಂಚೆ, ಕಾರ್ಕಳ ತಾ.
ದಿವಾಕರ ನಾಯ್ಕ	೪೫	ಅರೆ ಸರಕಾರಿ ನೌಕರ	ಮರಾಠಿನಾಯ್ಕ	ಮುದೆಲ್‌ಕಡಿ ಕಾಲೊನಿ, ಮುನಿಯಾಲು ಅಂಚೆ, ಕಾರ್ಕಳ ತಾ.,
ಸಂಜೀವ ನಾಯ್ಕ	೪೬	ಕೂಲಿ	ಮರಾಠಿನಾಯ್ಕ	ಮುದೆಲ್‌ಕಡಿ ಕಾಲೊನಿ, ಮುನಿಯಾಲು ಅಂಚೆ, ಕಾರ್ಕಳ ತಾ.
ಗಣೇಶ್ ನಾಯ್ಕ	೪೭	ಕೂಲಿ	ಮರಾಠಿನಾಯ್ಕ	ಮುದೆಲ್‌ಕಡಿ ಕಾಲೊನಿ, ಮುನಿಯಾಲು ಅಂಚೆ, ಕಾರ್ಕಳ ತಾ.,
ಸಂತೋಷ ನಾಯ್ಕ	೫೨	ಕೂಲಿ	ಮರಾಠಿನಾಯ್ಕ	ಮುದೆಲ್‌ಕಡಿ ಕಾಲೊನಿ, ಮುನಿಯಾಲು ಅಂಚೆ, ಕಾರ್ಕಳ ತಾ.
ವಿಠಲ ನಾಯ್ಕ	೫೦	ಹೋಟೇಲ್ ಉದ್ದಿಮೆ	ಮರಾಠಿನಾಯ್ಕ	ಮುದೆಲ್‌ಕಡಿ ಕಾಲೊನಿ, ಮುನಿಯಾಲು ಅಂಚೆ, ಕಾರ್ಕಳ ತಾ.,

ಜಾನು	೫೩	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಬಾಬು	೬೩	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಹುಕ್ರ	೬೪	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಶ್ರೀಧರ	೫೧	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಚೀಂಕ್ರ	೪೧	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಶೇಖರ	೩೯	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಶಶಿಧರ	೩೦	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಜಾನು	೫೩	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಹೊನ್ನಯ್ಯ	೪೧	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಕೆಂಪಯ್ಯ	೬೦	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ನೀಲಯ್ಯ	೩೮	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಬಾಬು	೬೧	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಆನಂದ	೫೩	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಶೀನಪ್ಪ	೩೮	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ರವಿ	೩೮	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಮಂಜಪ್ಪ	೫೪	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ವೀರಮ್ಮ	೫೬	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಕಮಲ	೫೩	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ದೇವಪ್ಪ	೪೯	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ನೋಣಯ್ಯ	೬೦	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಲಿಂಗಪ್ಪ	೫೪	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಉದಯ	೩೮	ಕೃಷಿ	ಮಲೆಕುಡಿಯ	ಪಂಜಾಲು ಕಾಲೊನಿ, ಕುತ್ಲೂರು ಗ್ರಾಮ, ಬೆಳ್ತಂಗಡಿ ತಾ., ದ.ಕ. ಜಿ.
ಹುಕ್ರ	೪೮	ರಿಕ್ಷಾ ಚಾಲನೆ	ಕೊರಗ	ಬಡುಗುಡ್ಡೆ ಕೊರಗ ಕಾಲೊನಿ ಹೆಬ್ರಿ, ಕಾರ್ಕಳ ತಾ., ಉಡುಪಿ ಜಿ.
ಗೋಂಕ್ರ	೭೨	–	ಕೊರಗ	ಹೆಬ್ರಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.
ಶುಕ್ರ	೪೫	ಬ್ಯಾಂಕ್ ಉದ್ಯೋಗಿ	ಕೊರಗ	ಹೆಬ್ರಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.
ಶಶಿಧರ್	೩೨	ಕೂಲಿ	ಕೊರಗ	ಹೆಬ್ರಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.
ಬೀಚು	೬೫	ಕೂಲಿ	ಕೊರಗ	ಹೆಬ್ರಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.
ಮಹೇಶ	೪೨	ಕೂಲಿ	ಕೊರಗ	ಹೆಬ್ರಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.
ಬಾಬಣ್ಣ	೪೭	ಕೂಲಿ	ಕೊರಗ	ಹೆಬ್ರಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.
ಬೊಗ್ಗು	೬೨	ಕೂಲಿ	ಕೊರಗ	ಹೆಬ್ರಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.
ಮುಂಗುಳಿ	೬೮	ಕೂಳಿ	ಕೊರಗ	ಹೆಬ್ರಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.
ಬೀಚು	೫೦	ಕೂಲಿ	ಕೊರಗ	ಹೆಬ್ರಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.
ಶಾರದ	೩೫	ಕೂಲಿ	ಕೊರಗ	ಹೆಬ್ರಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.
ಕರಿಯ	೫೫	ಕೂಲಿ	ಕೊರಗ	ಹೆಬ್ರಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.
ಪ್ರಕಾಶ	೩೫	ಕೂಲಿ	ಕೊರಗ	ಹೆಬ್ರಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.

ಲೀಲ	೫೫	ಬುಟ್ಟಿ ನೇಯ್ಗೆ	ಕೊರಗ	ಕೊರಗ ಕಾಲೊನಿ, ಸಚ್ಚರಿ ಪೇಟೆ, ಮುಂಡ್ಕೂರು, ಕಾರ್ಕಳ ತಾ.
ವಿಠಲ	೪೮	ಕೂಲಿ	ಕೊರಗ	ಕೊರಗ ಕಾಲೊನಿ, ಸಚ್ಚರಿ ಪೇಟೆ, ಮುಂಡ್ಕೂರು, ಕಾರ್ಕಳ ತಾ
ಪಾಡೀ	೬೪	ಬುಟ್ಟಿ ನೇಯ್ಗೆ	ಕೊರಗ	ಕೊರಗ ಕಾಲೊನಿ, ಸಚ್ಚರಿ ಪೇಟೆ, ಮುಂಡ್ಕೂರು, ಕಾರ್ಕಳ ತಾ.,
ಐತಪ್ಪ	೪೨	ಕೂಲಿ	ಕೊರಗ	ಕೊರಗ ಕಾಲೊನಿ, ಸಚ್ಚರಿ ಪೇಟೆ, ಮುಂಡ್ಕೂರು, ಕಾರ್ಕಳ ತಾ.,
ಮಾಣಿಗ	೭೫	ನಿವೃತ್ತ ಸರಕಾರಿ ಉದ್ಯೋಗಿ	ಕೊರಗ	ಮರಿಣಾಪುರ ಕಾಲೊನಿ, ಕಾರ್ಕಳ ತಾ., ಉಡುಪಿ ಜಿ.
ರತ್ನ	೩೫	ಕೂಲಿ	ಕೊರಗ	ಮರಿಣಾಪುರ ಕಾಲೊನಿ, ಕಾರ್ಕಳ ತಾ., ಉಡುಪಿ ಜಿ.
ಗುರುವ	೪೨	ಕೂಲಿ	ಕೊರಗ	ಮರಿಣಾಪುರ ಕಾಲೊನಿ, ಕಾರ್ಕಳ ತಾ., ಉಡುಪಿ ಜಿ.
ಸುಧೀರ	೪೦	ಪೌರ ಕಾರ್ಮಿಕ	ಕೊರಗ	ಮರಿಣಾಪುರ ಕಾಲೊನಿ, ಕಾರ್ಕಳ ತಾ., ಉಡುಪಿ ಜಿ.
ಆನಂದ	೪೨	ಅರೆ ಸರ್ಕಾರಿ ಉದ್ಯೋಗ	ಕೊರಗ	ಮರಿಣಾಪುರ ಕಾಲೊನಿ, ಕಾರ್ಕಳ ತಾ., ಉಡುಪಿ ಜಿ.
ಪ್ರಕಾಶ	೬೨	ರಿಕ್ಷಾ ಚಾಲಕರು	ಕೊರಗ	ಮರಿಣಾಪುರ ಕಾಲೊನಿ, ಕಾರ್ಕಳ ತಾ., ಉಡುಪಿ ಜಿ.
ವಸಂತ	೬೦	ನಿವೃತ್ತ ಸರಕಾರಿ ಚಾಲಕರು	ಕೊರಗ	ಮರಿಣಾಪುರ ಕಾಲೊನಿ, ಕಾರ್ಕಳ ತಾ., ಉಡುಪಿ ಜಿ.
ತನಿಯ	೫೫	ಸರಕಾರಿ ಉದ್ಯೋಗ	ಕೊರಗ	ಮರಿಣಾಪುರ ಕಾಲೊನಿ, ಕಾರ್ಕಳ ತಾ., ಉಡುಪಿ ಜಿ.
ಮುತ್ತಯ್ಯ	೪೦	ಮೇಸ್ತ್ರಿ	ಕೊರಗ	ಮರಿಣಾಪುರ ಕಾಲೊನಿ, ಕಾರ್ಕಳ ತಾ., ಉಡುಪಿ ಜಿ.
ಸಂಜೀವ	೩೩	ಪೌರ ಕಾರ್ಮಿಕ	ಕೊರಗ	ಮರಿಣಾಪುರ ಕಾಲೊನಿ, ಕಾರ್ಕಳ ತಾ., ಉಡುಪಿ ಜಿ.
ರಾಜು	೫೬	ಸರಕಾರಿ ನೌಕರ	ಕೊರಗ	ಮರಿಣಾಪುರ ಕಾಲೊನಿ, ಕಾರ್ಕಳ ತಾ., ಉಡುಪಿ ಜಿ.
ಪೂವಪ್ಪ	೩೨	ಪೌರ ಕಾರ್ಮಿಕ	ಕೊರಗ	ಮರಿಣಾಪುರ ಕಾಲೊನಿ, ಕಾರ್ಕಳ ತಾ., ಉಡುಪಿ ಜಿ.
ಗೋವಿಂದ	೫೮	ಪೌರ ಕಾರ್ಮಿಕ	ಕೊರಗ	ಮರಿಣಾಪುರ ಕಾಲೊನಿ, ಕಾರ್ಕಳ ತಾ., ಉಡುಪಿ ಜಿ.
ಬುಗಟು	೭೦	ಕೂಲಿ	ಕೊರಗ	ಮರಿಣಾಪುರ ಕಾಲೊನಿ, ಕಾರ್ಕಳ ತಾ., ಉಡುಪಿ ಜಿ.
ಸಂಜೀವ (ಬೊಗ್ಗು)	೫೮	ಪೌರ ಕಾರ್ಮಿಕ	ಕೊರಗ	೧೭ನೇ ಅಡ್ಡರಸ್ತೆ, ತೆಳ್ಳಾರು, ಕಾರ್ಕಳ ತಾ., ಉಡುಪಿ ಜಿ.
ರಾಘು	೫೯	ಪೌರ ಕಾರ್ಮಿಕ	ಕೊರಗ	೧೭ನೇ ಅಡ್ಡರಸ್ತೆ, ತೆಳ್ಳಾರು, ಕಾರ್ಕಳ ತಾ., ಉಡುಪಿ ಜಿ.
ಪ್ರಿಯಾ	೨೩	ಖಾಸಗಿ ಉದ್ಯೋಗಿ	ಕೊರಗ	೧೭ನೇ ಅಡ್ಡರಸ್ತೆ, ತೆಳ್ಳಾರು, ಕಾರ್ಕಳ ತಾ., ಉಡುಪಿ ಜಿ.
ಸುಶೀಲಾ	೪೦	ಬೀಡಿ ಕಾರ್ಮಿಕ	ಕೊರಗ	೧೭ನೇ ಅಡ್ಡರಸ್ತೆ, ತೆಳ್ಳಾರು, ಕಾರ್ಕಳ ತಾ., ಉಡುಪಿ ಜಿ.
ಕರ್ಣ	೪೦	ಪೌರ ಕಾರ್ಮಿಕ	ಕೊರಗ	ಕೊರಗರ ಕಾಲೊನಿ, ಬಂಡೀಮಠ, ಕಾರ್ಕಳ ತಾ., ಉಡುಪಿ ಜಿ.
ಅಚ್ಚಿರ	೫೮	ಪೌರ ಕಾರ್ಮಿಕ	ಕೊರಗ	ಕೊರಗರ ಕಾಲೊನಿ, ಬಂಡೀಮಠ, ಕಾರ್ಕಳ ತಾ., ಉಡುಪಿ ಜಿ.
ಅವಿಲ್	೩೩	ಕೂಲಿ	ಕೊರಗ	ಕೊರಗರ ಕಾಲೊನಿ, ಬಂಡೀಮಠ, ಕಾರ್ಕಳ ತಾ., ಉಡುಪಿ ಜಿ.
ಭಾಸ್ಕರ	೪೩	ಪೌರ ಕಾರ್ಮಿಕ	ಕೊರಗ	ಕೊರಗರ ಕಾಲೊನಿ, ಬಂಡೀಮಠ, ಕಾರ್ಕಳ ತಾ., ಉಡುಪಿ ಜಿ.
ಉಮೇಶ	೨೬	ಪೌರ ಕಾರ್ಮಿಕ	ಕೊರಗ	ಕೊರಗರ ಕಾಲೊನಿ, ಬಂಡೀಮಠ, ಕಾರ್ಕಳ ತಾ., ಉಡುಪಿ ಜಿ.
ಜ್ಯೋತಿ	೩೨	ಖಾಸಗಿ ವೃತ್ತಿ	ಕೊರಗ	ಮೂಡುಶೆಡ್ಡೆ ವಾಮಂಜೂರು, ಮಂಗಳೂರು ತಾ., ದ.ಕ. ಜಿ.
ಸರಸ್ವತಿ	೪೩	ಸರಕಾರಿ ಉದ್ಯೋಗಿ	ಕೊರಗ	ಮೂಡುಶೆಡ್ಡೆ ವಾಮಂಜೂರು, ಮಂಗಳೂರು ತಾ., ದ.ಕ. ಜಿ.
ಸಂಜೀವ	೪೫	ಪೌರ ಕಾರ್ಮಿಕ	ಕೊರಗ	ಮೂಡುಶೆಡ್ಡೆ ವಾಮಂಜೂರು, ಮಂಗಳೂರು ತಾ., ದ.ಕ. ಜಿ.
ಶೋಭ	೩೬	ಖಾಸಗಿ ವೃತ್ತಿ	ಕೊರಗ	ಮೂಡುಶೆಡ್ಡೆ ವಾಮಂಜೂರು, ಮಂಗಳೂರು ತಾ., ದ.ಕ. ಜಿ.

ತನಿಯ	೪೦	ಪೌರ ಕಾರ್ಮಿಕ	ಕೊರಗ	ಮೂಡುಶೆಡ್ಡೆ ವಾಮಂಜೂರು, ಮಂಗಳೂರು ತಾ., ದ.ಕ. ಜಿ.
ಗಣೇಶ	೫೬	ಪೌರ ಕಾರ್ಮಿಕ	ಕೊರಗ	ಮೂಡುಶೆಡ್ಡೆ ವಾಮಂಜೂರು, ಮಂಗಳೂರು ತಾ., ದ.ಕ. ಜಿ.
ಹರೀಶ	೩೦	ಪೌರ ಕಾರ್ಮಿಕ	ಕೊರಗ	ಮೂಡುಶೆಡ್ಡೆ ವಾಮಂಜೂರು, ಮಂಗಳೂರು ತಾ., ದ.ಕ. ಜಿ.
ಮಾಲಿನಿ	೪೮	ಬುಟ್ಟಿ ನೇಯ್ಗೆ	ಕೊರಗ	ಕೊರಗ ಕಾಲೊನಿ, ಅಂಬೇಡ್ಕರ್ ನಗರ, ಕುಂಭಾಶಿ, ಕುಂದಾಪುರ ತಾ.
ಕುಂಭ	೭೦	ಬುಟ್ಟಿ ನೇಯ್ಗೆ	ಕೊರಗ	ಕೊರಗ ಕಾಲೊನಿ, ಅಂಬೇಡ್ಕರ್ ನಗರ, ಕುಂಭಾಶಿ, ಕುಂದಾಪುರ ತಾ.
ಸುಶೀಲ	೪೫	ಬುಟ್ಟಿ ನೇಯ್ಗೆ	ಕೊರಗ	ಕೊರಗ ಕಾಲೊನಿ, ಅಂಬೇಡ್ಕರ್ ನಗರ, ಕುಂಭಾಶಿ, ಕುಂದಾಪುರ ತಾ.
ಕರ್ಕು	೫೫	ಬುಟ್ಟಿ ನೇಯ್ಗೆ	ಕೊರಗ	ಕೊರಗ ಕಾಲೊನಿ, ಅಂಬೇಡ್ಕರ್ ನಗರ, ಕುಂಭಾಶಿ, ಕುಂದಾಪುರ ತಾ.,
ಲಚ್ಚು	೭೨	ಬುಟ್ಟಿ ನೇಯ್ಗೆ	ಕೊರಗ	ಕೊರಗ ಕಾಲೊನಿ, ಅಂಬೇಡ್ಕರ್ ನಗರ, ಕುಂಭಾಶಿ, ಕುಂದಾಪುರ ತಾ.
ಕಲ್ಯಾಣಿ	೬೨	ಬುಟ್ಟಿ ನೇಯ್ಗೆ	ಕೊರಗ	ಕೊರಗ ಕಾಲೊನಿ, ಅಂಬೇಡ್ಕರ್ ನಗರ, ಕುಂಭಾಶಿ, ಕುಂದಾಪುರ ತಾ.
ಸಾಲು	೪೭	ಬುಟ್ಟಿ ನೇಯ್ಗೆ	ಕೊರಗ	ಕೊರಗ ಕಾಲೊನಿ, ಅಂಬೇಡ್ಕರ್ ನಗರ, ಕುಂಭಾಶಿ, ಕುಂದಾಪುರ ತಾ.
ಪುಷ್ಪ	೪೨	ಕೂಲಿ	ಕೊರಗ	ಜಾಲ, ನಾವುರ ಬೆಳ್ತಂಗಡಿ, ದಕ್ಷಿಣ ಕನ್ನಡ ತಾ.
ಹರೀಶ	೨೮	ಕೂಲಿ	ಕೊರಗ	ಜಾಲ, ನಾವುರ ಬೆಳ್ತಂಗಡಿ, ದಕ್ಷಿಣ ಕನ್ನಡ ತಾ.
ಸುರೇಶ	೨೯	ಕೂಲಿ	ಕೊರಗ	ಜಾಲ, ನಾವುರ ಬೆಳ್ತಂಗಡಿ, ದಕ್ಷಿಣ ಕನ್ನಡ ತಾ.
ಬಾಬು	೨೬	ಕೂಲಿ	ಕೊರಗ	ಜಾಲ, ನಾವುರ ಬೆಳ್ತಂಗಡಿ, ದಕ್ಷಿಣ ಕನ್ನಡ ತಾ.
ನಾರಾಯಣ	೪೦	ಕೂಲಿ	ಕೊರಗ	ಜಾಲ, ನಾವುರ ಬೆಳ್ತಂಗಡಿ, ದಕ್ಷಿಣ ಕನ್ನಡ ತಾ.

ಉಡುಪಿ ಜಿಲ್ಲೆ ಕೊರಗರಿಗೆ ಜಿಲ್ಲಾಡಳಿತ ಭೂಮಿ ಹಂಚಿಕೆ ಮಾಡಿದ ವಿವರ

ಉಡುಪಿ ತಾಲೂಕು:

ಕ್ರಸಂ	ಗ್ರಾಮ	ಸರ್ವೆನಂಬರ್	ವಿಸ್ತೀರ್ಣ	ಹೆಸರು ಮತ್ತು ವಿಳಾಸ
೧	೩೩ ಶಿರೂರು ಹೆಗ್ಗುಂಜೆ	೦.೫೩, ೦.೭೨	೧.೨೫	ಸುಮಿತ್ರ ಕೋಂ ಚಂದ್ರ, ಕೊರಾಡಿ ಹನೆಹಳ್ಳಿ ಗ್ರಾಮ, ಉಡುಪಿ
೨	೩೩ ಶಿರೂರು ಹೆಗ್ಗುಂಜೆ	೧೧೮, ೧೬೨/೧	೧.೨೫	ರೇಖಾ ಕೋಂ ಸುಧಾರಕ, ಕೊರಾಡಿ, ಹನೆಹಳ್ಳಿ ಗ್ರಾಮ, ಉಡುಪಿ ತಾಲೂಕು
೩	೩೩ ಶಿರೂರು ಹೆಗ್ಗುಂಜೆ	೧೧೮, ೧೬೨/೧	೧.೨೫	ಶಕುಂತಲ ಕೋಂ ಸುಂದರ, ಕೊರಾಡಿ, ಹನೆಹಳ್ಳಿ ಗ್ರಾಮ, ಉಡುಪಿ ತಾಲೂಕು
೪	೩೩ ಶಿರೂರು ಹೆಗ್ಗುಂಜೆ	೧೧೮, ೧೬೨/೧	೧.೨೫	ಜಯಂತಿ ಬಿನ್ ದುರ, ಹಿಲಿಯಾಣ ಹ್ಯೊಂಗೆ ಬೆಳಾರ್ ಗ್ರಾಮ ಉಡುಪಿ ತಾಲೂಕು
೫	೩೩ ಶಿರೂರು ಹೆಗ್ಗುಂಜೆ	೧೧೮, ೧೬೨/೧	೧.೨೫	ಸಂಜೀವ ಬಿನ್ ಗೋವಿಂದ, ಹಿಲಿಯಾಣ ಹ್ಯೊಂಗೆ ಬೆಳಾರ್‌ಗ್ರಾಮ ಉಡುಪಿ ತಾಲೂಕು
೬	೩೩ ಶಿರೂರು ಹೆಗ್ಗುಂಜೆ	೧೧೮, ೧೬೨/೧	೧.೨೫	ಅಮ್ಮಣ್ಣಿ ಕೋಂ ನಾಗ, ಹಿಲಿಯಾಣ ಹ್ಯೂಂಗೆ ಬೆಳಾರ್ ಗ್ರಾಮ, ಉಡುಪಿ ತಾಲೂಕು
೭	೩೩ ಶಿರೂರು ಹೆಗ್ಗುಂಜೆ	೧೧೮, ೧೬೨/೧	೧.೨೫	ಸಾವಿತ್ರಿ ಬಿನ್ ಪದ್ದ, ರಂಗನ್ಕೆರೆ ಹೇರಾಡಿ ಗ್ರಾಮ, ಉಡುಪಿ ತಾಲೂಕು
೮	೩೩ ನೇ ಶಿರೂರು	೧೪೦/೧.	೧.೫೦	ಶೇಖರ್ ಬಿನ್ ಪದ್ದ, ರಂಗನ್ಕೆರೆ ಹೇರಾಡಿ ಗ್ರಾಮ, ಉಡುಪಿ
೯	೩೩ ನೇ ಶಿರೂರು	೧೪೦/೧	೧.೫೦	ಜಯಕರ ಬಿನ್ ಮಹಾಬಲ, ರಂಗನ್ಕೆರೆ, ಹೇರಾಡಿ, ಉಡುಪಿ
೧೦	೩೩ ನೇ ಶಿರೂರು	೧೪೦/೧	೧.೫೦	ಆನಂದ ಬಿನ್ ಪದ್ದ, ರಂಗನ್ಕೆರೆ, ಹೇರಾಡಿಗ್ರಾಮ, ಉಡುಪಿ
೧೧	೩೩ ನೇ ಶಿರೂರು	೧೪೦/೧	೧.೫೦	ಸವಿತಾ ಬಿನ್ ದಾರು, ರಂಗನ್ಕೆರೆ, ಹೇರಾಡಿಗ್ರಾಮ, ಉಡುಪಿ
೧೨	೩೩ ನೇ ಶಿರೂರು	೧೩೩/೧	೨.೧೬	ಗೋಪಿ ಕೋಂ ಕರಿಯ,೩೩ನೇ ಶಿರೂರುಗ್ರಾಮ, ಉಡುಪಿ
೧೩	೩೩ ನೇ ಶಿರೂರು	೧೩೩/೧	೨.೧೬	ಸನಿಯಬಿನ್ ಕರಿಯ,೩೩ನೇ ಶಿರೂರುಗ್ರಾಮ, ಉಡುಪಿ
೧೪	೩೩ ನೇ ಶಿರೂರು	೧೩೩/೧	೨.೧೬	ಚಿಕ್ಕ ಬಿನ್ ರಾಮ, ೩೩ನೇ ಶಿರೂರುಗ್ರಾಮ, ಉಡುಪಿ
೧೫	೩೩ ನೇ ಶಿರೂರು	೧೫೮/೧	೧.೬೦	ಸುಂದರಿ ಕೋಂ ಪ್ರಭಾಕರ, ರಂಗನ್ಕೆರೆ, ಹೇರಾಡಿಗ್ರಾಮ, ಉಡುಪಿ
೧೬	೩೩ ನೇ ಶಿರೂರು	೧೭೯/೧ಬಿ	೨.೬೭	ಉದಯ ಕೋಂ ಜಯ, ಹೆಗ್ಗುಂಜೆಗ್ರಾಮ, ಉಡುಪಿ
೧೭	೩೩ ನೇ ಶಿರೂರು	೧೭೯/೧ಎ	೨.೫೦	ಪಿಟ್ಟ ಕೋಂ ರಘರಾಮ, ಹೆಗ್ಗುಂಜೆಗ್ರಾಮ, ಉಡುಪಿ
೧೮	೩೩ ನೇ ಶಿರೂರು	೧೭೯/೧ಸಿ	೨.೧೦	ಮೇರಿ ಕೋಂ ಈರ, ಹೆಗ್ಗುಂಜೆ ಗ್ರಾಮ, ಉಡುಪಿ
೧೯	೩೩ ನೇ ಶಿರೂರು	೧೭೯/೧ಇ	೧.೧೯	ಶ್ರೀಧರ ಬಿನ್ ಗೌರಿ, ಹೆಗ್ಗುಂಜೆ ಗ್ರಾಮ, ಉಡುಪಿ
೨೦	೩೩ನೇ ಶಿರೂರು	೧೭೯/೧ಡಿ	೧.೨೮	ಶೀನ ಬಿನ್ ಗೌರಿ, ಹೆಗ್ಗುಂಜೆಗ್ರಾಮ, ಉಡುಪಿ
೨೧	ಹೆಗ್ಗುಂಜೆ	೧೬೨/೧	೧.೫೦	ಚಂದ್ರಬಿನ್ ಗೋಂವಿದ, ಗೋಳಿಯಂಗಡಿ, ಹಿಲಿಯಾಣಗ್ರಾಮ ಉಡುಪಿ
೨೨	ಹೆಗ್ಗುಂಜೆ	೧೬೨/೧	೧.೫೦	ಗುಲಾಬಿ ಕೋಂ ಸುಬ್ಬ, ಗೋಳಿಯಂಗಡಿ, ಹಿಲಿಯಾಣಗ್ರಾಮ, ಉಡುಪಿ
೨೩	ಹೆಗ್ಗುಂಜೆ	೧೬೨/೧	೧.೫೦	ಗೋಪಿ ಕೋಂ ದುರ್ಗ, ಗೋಳಿಯಂಗಡಿ, ಹಿಲಿಯಾಣಗ್ರಾಮ, ಉಡುಪಿ
೨೪	ಕಾವಡಿ	೧೧೦	೧.೧೬	ಬೇಬಿ ಬಿನ್ ಮುಕ್ತ, ಕಲಾಶ್ರಿ, ನಡೂರು ಗ್ರಾಮ, ಉಡುಪಿ
೨೫	ಕಾವಡಿ	೧೧೦	೧.೧೧	ಲಕ್ಷ್ಮೀ ಬಿನ್ ಮುಕ್ತ, ಕಲಾಶ್ರಿ, ನಡೂರುಗ್ರಾಮ,ಉಡುಪಿ
೨೬	ಕಾವಡಿ	೧೧೧	೧.೨೪	ಬಾಗಿ ಕೋಂ ಶಂಕರ, ಬಿಲ್ಲಾಡಿಗ್ರಾಮ, ಉಡುಪಿ
೨೭	ಕಾವಡಿ	೧೧೧	೧.೨೭	ಮಂಜು ಬಿನ್ ಮುಕ್ತ, ಕಲಾಶ್ರಿ, ನಡೂರು ಗ್ರಾಮ,

				ಉಡುಪಿ
೨೮	ಕಾವಡಿ	೧೧೧	೧.೨೭	ಶೇಖರ ಬಿನ್ ಗುರುವ, ಕಲ್ರಾಶಿ, ನಡೂರು ಗ್ರಾಮ, ಉಡುಪಿ
೨೯	ಕಾವಡಿ	೧೧೧	೧.೧೦	ಅನಿತ ಕೋಂ ಗಣೇಶ, ರಂಗನ್ಕೆರೆ, ಹೇರಾಡಿ ಗ್ರಾಮ, ಉಡುಪಿ
೩೦	ಕಾವಡಿ	೧೧೧	೧.೨೮	ಚಂದ್ರನಾಣು, ರಂಗನ್ಕೆರೆ, ಹೇರಾಡಿ ಗ್ರಾಮ, ಉಡುಪಿ
೩೧	ಹಿಲಿಯಾಣ	೧೩೦/೧ಪಿ೨		ಗೌರಿ ಕೋಂ ಬಿಜ್ಜು, ಅಮ್ರ ಕಲ್ಲು, ಹಿಲಿಯಾಣ ಗ್ರಾಮ, ಉಡುಪಿ
	ಹಿಲಿಯಾಣ	೧೩೦/೧ಪಿ೩	೩.೧೧	
	ಹಿಲಿಯಾಣ	೧೫೦/೧ಪಿ೨		
೩೨	ಕಾವಡಿ	೧೩೭/೪ಪಿ೨	೧.೨೫	ಸುಮಂಗಲ ಬಿನ್ ಬಿಚ್ಚು, ಎಮ್. ಈ. ಕಾಲನಿ ವಡ್ಡರ್ಸ ಗ್ರಾಮ, ಉಡುಪಿ
೩೩	ನೀರಾವರಿ	೩೪೩/೩	೧.೦೫	ದೋಗು ಬಿನ್ ನರಂಗ ಪಕಿರಣ ಕಟ್ಟೆ, ಮಲ್ಲಾರು ಗ್ರಾಮ, ಉಡುಪಿ
೩೪	ನೀರಾವರಿ	೧೭೯/ಎ	೧.೬೯	ಯಮುನಾ ಕೋಂ ಕುದ್ರು ಗುಡ್ಡೆ, ನೀಲಾವರ ಗ್ರಾಮ, ಉಡುಪಿ
	ನೀರಾವರಿ	೨೮೧ಡಿ		
೩೫	ನೀರಾವರಿ	೨೮೧/ಬಿ	೧.೨೬	ಸುಂದರ ಬಿನ್ ಗುಡ್ಡ ಪಕಿರಣ ಕಟ್ಟೆ, ಮಲ್ಲೂರು ಗ್ರಾಮ, ಉಡುಪಿ
೩೬	ನೀರಾವರಿ	೨೮೧/ಬಿ	೧.೨೫	ಅಪ್ಪಿ ಕೋಂ ಗುಡ್ಡ ಪಕಿರಣ ಕಟ್ಟೆ, ಮಲ್ಲೂರು ಗ್ರಾಮ, ಉಡುಪಿ
	ನೀರಾವರಿ	೨೮೧/ಸಿ		
೩೭	ಚೇರ್ಕಾಡಿ	೨೩೦/೧	೧.೭೫	ಯಮುನಾ ಕೋಂ ಕೆಂಚ, ಪಕಿರಣ ಕಟ್ಟೆ ಮಲ್ಲಾರುಗ್ರಾಮ, ಉಡುಪಿ
೩೮	ಆರೂರು	೧೮೪/೨ಬಿ	೧.೦೨	ರಮೇಶ ಬಿನ್ ದೋಗು, ಪಕಿರಣ ಕಟ್ಟೆ ಮಲ್ಲಾರುಗ್ರಾಮ, ಉಡುಪಿ
೩೯	ಹಲುವಳ್ಳಿ	೯೩/೨	೨.೫೦	ಜಾಬು ಕೋಂ ಐತ, ಸೂರಾಲು ಪೆಜ ಮಂಗೂರು ಗ್ರಾಮ, ಉಡುಪಿ
೪೦	ಹಲುವಳ್ಳಿ	೯೩/೩	೨.೫೦	ಅಕ್ಕು ಕೋಂ ಗುಂಬ್ಯ, ಕೆಡಂಗೋಡು, ಹೊಸೂರು, ಉಡುಪಿ
೪೧	ಹಲುವಳ್ಳಿ	೯೩/೪	೨.೫೦	ಅಣ್ಣಿ ಬಿನ್ ಗುರುವ, ಸೂರಾಲು ಪೆಜಮಂಗೂರು, ಉಡುಪಿ
೪೨	ಹಲುವಳ್ಳಿ	೯೩/೧	೧.೮೮	ಪಾರ್ವತಿ ಕೋಂ ಕುಮಾರ, ಕಡೆಂಗೋಡು, ಹೊಸೂರುಗ್ರಾಮ, ಉಡುಪಿ
೪೩	ಹೊಸೂರು	೨೨೨/೧ಬಿ	೧.೫೨	ವಿಶ್ವನಾಥ, ಉಡುಪಿ ಪಾತ, ಸೂರಾಲು, ಪೆಜಮಂಗೂರು ಗ್ರಾಮ ಉಡುಪಿ
೪೪	ಬೈರಂಪಳ್ಳಿ	೨೪೬/೨ಬಿ	೧.೪೭	ಸುಜನಿ ಕೋಂ ಮಂಜು,ನೇಜಾರ್, ಮೂಡುತೋನ್ಸೆ ಗ್ರಾಮ, ಉಡುಪಿ
೪೫	ಬೈರಂಪಳ್ಳಿ	೨೪೬/ಸಿ	೧.೪೮	ಜಗದೀಶ ಬಿನ್ ನಕ್ರ, ನೇಜರ್ ಮೂಡುತೋನ್ಸೆ ಗ್ರಾಮ, ಉಡುಪಿ
೪೬	ಬೈರಂಪಳ್ಳಿ	೨೧೩/೨	೧.೧೫	ಸುಂದರ ಬಿನ್ ಸದಿಯ, ಮೂಡಬೆಟ್ಟು, ಎರ್ಮಾಳು ಗ್ರಾಮ,ಉಡುಪಿ
೪೭	ಬೈರಂಪಳ್ಳಿ	೨೧೩/೩	೧.೧೫	ತಿಮ್ಮ ಕೋಂ ಬೊಗ್ಗು, ಮೂಡಬೆಟ್ಟು ಎರ್ಮಾಳು ಗ್ರಾಮ, ಉಡುಪಿ
೪೮	ಬೈರಂಪಳ್ಳಿ	೨೧೩/೪	೧.೧೫	ಸುಧಾಕರ ಬಿನ್ ಅಮ್ಮು, ಮೂಡಬೆಟ್ಟು ಎರ್ಮಾಳು ಗ್ರಾಮ, ಉಡುಪಿ
೪೯	ಬೈರಂಪಳ್ಳಿ	೨೧೩/೫	೧.೧೫	ಕೂರ್ಚ ಬಿನ್ ಸದಿಯ, ಅಡ್ವೆ, ಬೆಳ್ಳಿ ಬೆಟ್ಟು, ನಂದಿಕೂರುಗ್ರಾಮ, ಉಡುಪಿ
೫೦	೪೧ಶಿರೂರು	೮೭/೨	೦.೮೩	ಮುಚ್ಚಿ ಕೋಂ ತೌಡ, ಅಡ್ವೆ, ನಂದಿಕೂರು ಗ್ರಾಮ, ಉಡುಪಿ

	೪೧ಶಿರೂರು	೨೦೫/೧ಸಿ	೦.೨೩	
೫೧	೪೧ಶಿರೂರು	೮೭/೨	೦.೮೯	ಕರ್ದುಕೋಂ ಪ್ರದ್ದ ಅಡ್ವೆ, ನಂದಿಕೂರು ಗ್ರಾಮ, ಉಡುಪಿ
	೪೧ಶಿರೂರು	೨೦೫/೧ಡಿ	೦.೧೭	
೫೨	ಬೆಳ್ಳಂಪಳ್ಳಿ	೧೦೫/೨	೧.೨೦	ಪ್ರಕಾಶ ಬಿನ್ ದುರ್ಗ, ಕೋಡು ಶಿರ್ವ ಗ್ರಾಮ, ಉಡುಪಿ
೫೩	ಬೆಳ್ಳಂಪಳ್ಳಿ	೧೦೫/೩	೧.೨೦	ಕರುಣಾಕರ ಬಿನ್ ತೌಡ, ಅಡ್ವೆ, ನಂದಿಕೂರು ಗ್ರಾಮ ಉಡುಪಿ
೫೪	ಬೆಳ್ಳಂಪಳ್ಳಿ	೧೦೫/೪	೧.೨೦	ರಮೇಶ, ಕೆ. ಬಿನ್ ಮಾದು. ಪಾದೆಬೆಟ್ಟು ಗ್ರಾಮ, ಉಡುಪಿ
೫೫	ಬೆಳ್ಳಂಪಳ್ಳಿ	೧೦೫/೫	೧.೨೦	ಸುನೀತ ಕೋಂ ತಿಮ್ಮ, ಕೋಡು ಶಿರ್ವಗ್ರಾಮ, ಉಡುಪಿ
೫೬	ಬೆಳ್ಳಂಪಳ್ಳಿ	೧೦೫/೬	೧.೨೦	ಶಿವಾನಂದ ಬಿನ್ ಕೋಂಗಲ,ತಜೆ, ಎಲ್ಲೂರು ಗ್ರಾಮ, ಉಡುಪಿ
೫೭	ಬೆಳ್ಳಂಪಳ್ಳಿ	೧೦೫/೭	೧.೨೦	ತುಕಾರಾಮ ಬಿನ್ ತೋಮ, ಮೂಡಬೆಟ್ಟು, ಎರ್ಮಾಳು ಗ್ರಾಮ, ಉಡುಪಿ
೫೮	ಬೆಳ್ಳಂಪಳ್ಳಿ	೧೦೫/೮	೧.೨೦	ವಸಂತಿ ಬಿನ್ ಬಾಕು, ತಜೆ, ಎಲ್ಲೂರು ಗ್ರಾಮ,ಉಡುಪಿ
೫೯	ಬೆಳ್ಳಂಪಳ್ಳಿ	೧೦೫/೯	೧.೨೦	ಕೋಂಗಲ ಬಿನ್ ಬಾಕು, ತಜೆ, ಎಲ್ಲೂರು ಗ್ರಾಮ, ಉಡುಪಿ
೬೦	೩೪ ಕುದಿ	೧೭೯/೧	೧.೦೦	ಬೇಬಿ ಕೋಂ ಮಿಣ್ಣ, ಕೆಂಜೂರು ಗ್ರಾಮ, ಉಡುಪಿ
೬೧	೩೪ ಕುದಿ	೧೭೯/೧	೧.೦೦	ಬೇಬಿ ಕೋಂ ಬೊಗ್ರ, ಪೆಜಮಂಗೂರುಗ್ರಾಮ, ಉಡುಪಿ
೬೨	೩೪ ಕುದಿ	೧೭೯/೧	೧.೦೦	ಗೌರಿ ಕೋಂ ಬೋಳು, ಪೆಜಮಂಗೂರು ಗ್ರಾಮ, ಉಡುಪಿ
೬೩	೩೪ ಕುದಿ	೧೭೯/೧	೧.೦೦	ಬಾಬಿ ಕೋಂ ಗುರುವ, ಸೂರಾಲು, ಪೆಜಮಂಗೂರು ಗ್ರಾಮ, ಉಡುಪಿ
೬೪	೩೪ ಕುದಿ	೧೭೯/೧	೧.೦೦	ಲಕ್ಷ್ಮೀ ಕೋಂರಾಮ, ಕೆಂಜೂರು ಗ್ರಾಮ, ಉಡುಪಿ
೬೫	ಪೆರ್ಡೂರು	೬೩೨/೫	೦.೭೮- ೧.೦೦	ಗಿರಿಜ ಕೋಂ ಮಂಜು, ಪೆರ್ಡೂರು ಗ್ರಾಮ, ಉಡುಪಿ
	ಪೆರ್ಡೂರು	೪೮೭	೦.೨೨	
೬೬	ಪೆರ್ಡೂರು	೬೩೨/೫	೦.೬೨ ೧.೧೦	ಭಾಗೀರಥಿ ಕೋಂ ಐತ ಮಂಜು, ಪೆರ್ಡೂರು ಗ್ರಾಮ, ಉಡುಪಿ
	ಪೆರ್ಡೂರು	೪೮೭	೦.೪೮	
೬೭	ಪೆರ್ಡೂರು	೪೮೭	೧.೧೦	ನೀಲು ಕೋಂ ಕೃಷ್ಣ ಕೊರಗ, ಪೆರ್ಡೂರು ಗ್ರಾಮ, ಉಡುಪಿ
೬೮	ಪೆರ್ಡೂರು	೪೮೭	೧.೦೪	ಅಕ್ಕಣಿ ಕೋಂ ಕುಂಜರ ಕೊರಗ, ೩೮ನೇ ಕಳ್ತೂರು ಗ್ರಾಮ, ಉಡುಪಿ
೬೯	ಪೆರ್ಡೂರು	೪೮೭	೧.೦೪	ಬೊಮ್ಮಿ ಕೋಂ ಚಣಿಲ ಕೊರಗ, ೩೮ನೇ ಕಳ್ತೂರುಗ್ರಾಮ,ಉಡುಪಿ
೭೦	ಪೆರ್ಡೂರು	೪೯೭	೧.೦೫	ರತ್ನಾ ಕೋಂ ಚಣಿಲ ಕೊರಗ, ೩೮ನೇ ಕಳ್ತೂರು ಗ್ರಾಮ, ಉಡುಪಿ
೭೧	ಪೆರ್ಡೂರು	೨೯೭	೧.೦೦	ಗುಲಾಬಿ ಕೋಂ ಸುರೇಶ, ೩೮ನೇ ಕಳ್ತೂರುಗ್ರಾಮ, ಉಡುಪಿ
೭೨	ಪೆರ್ಡೂರು	೨೯೭	೧.೦೦	ನೀಲು ಕೋಂ ಮಂಜು, ೩೮ನೇ ಕಳ್ತೂರು ಗ್ರಾಮ, ಉಡುಪಿ
೭೩	ಪೆರ್ಡೂರು	೨೯೭	೧.೦೦	ಪುಟ್ಟಿ ಕೋಂ ಸನಿಯ, ೩೮ನೇ, ನೇ ಕಳ್ತೂರು ಗ್ರಾಮ, ಉಡುಪಿ
೭೪	ಪೆರ್ಡೂರು	೨೯೭	೧.೦೦	ಲಕ್ಷ್ಮೀ ಕೋಂ ಚಂದ್ರ, ೩೮ ನೇ ಕಳ್ತೂರು ಗ್ರಾಮ, ಉಡುಪಿ
೭೫	ಪೆರ್ಡೂರು	೨೯೭	೧.೦೦	ಗೀತಾ ಕೋಂ ಚಂದ್ರ, ೩೮ನೇ ಕಳ್ತೂರು ಗ್ರಾಮ,ಉಡುಪಿ
೭೬	ಪೆರ್ಡೂರು	೨೯೭	೧.೦೦	ಮುತ್ತು ಕೋಂ ಮಂದರ, ಕಳ್ತೂರು ಗ್ರಾಮ, ಉಡುಪಿ
೭೭	ಪೆರ್ಡೂರು	೨೯೭	೧.೦೦	ವನಿತಾ ಕೋಂ ಕುಶಲ, ಕೆಂಜೂರು ಗ್ರಾಮ, ಉಡುಪಿ

೭೮	ಪೆರ್ಡೂರು	೨೯೭		ಸುಜಾತ ಕೋಂ ಶಂಕರ, ಕೆಂಜೂರು ಗ್ರಾಮ, ಉಡುಪಿ
೭೯	ಶಿರ್ವಾ	೬೩೩/೧	೧.೦೫	ಅಮ್ಮಣ್ಣಿ ಕೋಂ ಗುಡ್ಡ, ಕೋಡು, ಶಿರ್ವಾಗ್ರಾಮ, ಉಡುಪಿ
೮೦	ಶಿರ್ವಾ	೬೩೩/೧	೧.೦೬	ಸುಶೀಲ ಬಿನ್ ನರಂಗ, ಮೈಕೋಡಿ, ಪಿಲಾರ್ ಗ್ರಾಮ ಉಡುಪಿ
೮೧	ಶಿರ್ವಾ	೬೩೩/೧	೧.೦೯	ಗೌರಿ ಕೋಂ ಶೇಖರ ಬಂಡ್ಸಾಲೆ ಎಲ್ಲೂರು ಗ್ರಾಮ, ಉಡುಪಿ
೮೨	ಶಿರ್ವಾ	೬೩೩/೧	೧.೦೦	ಗೀತಾ ಕೋಂ ಶೇಖರ ಬಂಡ್ಸಾಲೆ ಎಲ್ಲೂರು ಗ್ರಾಮ, ಉಡುಪಿ
೮೩	ಶಿರ್ವಾ	೬೩೯/೩	೦.೩೫	ವನಿತಾ ಕೋಂ ಭೋಜು, ಪಾದೂರು ಗ್ರಾಮ, ಉಡುಪಿ
೮೪	ಶಿರ್ವಾ	೧೩೯/೩	೦.೩೫	ಗುಲಾಬಿ ಕೋಂ ವಾಸು, ಪಾದೂರು ಗ್ರಾಮ, ಉಡುಪಿ
೮೫	ಶಿರ್ವಾ	೯೬ಪಿ ೩	೦.೨೬	ಬಿಜ್ಜು ಕೊರತಿ ಕೋಂ ಮಂಜು, ಕಾವಡಿ ಗ್ರಾಮ,ಉಡುಪಿ
೮೬	ಶಿರ್ವಾ	೯೬ಪಿ ೪	೦.೧೦	ಸಂಖಿಕೊರತಿ ಕಾವಾಡಿ ಗ್ರಾಮ,ಉಡುಪಿ
೮೭	ಶಿರ್ವಾ	೯೬ಪಿ ೫	೦.೧೦	ಪ್ರಫುಲ್ಲ ಕೊರತಿ, ಕೋಂ ಶೀನ, ಕಾವಡಿ ಗ್ರಾಮ, ಉಡುಪಿ
೮೮	ಶಿರ್ವಾ	೯೬ಪಿ ೬	೦.೯	ಶೋಭಾ ಕೊರತಿ ಕೋಂ ಪ್ರಭಾಕರ, ಕಾವಡಿ ಗ್ರಾಮ, ಉಡುಪಿ
೮೯	ಪಾದೂರು	೯೬ಪಿ೯	೦.೧೩	ಚಂದು ಕೋರತಿ ಕೋಂ ಕೃಷ್ಣ, ಕಾವಡಿ ಗ್ರಾಮ, ಉಡುಪಿ
೯೦	ಬೊಮ್ಮರಬೆಟ್ಟು	೨೯೩/೩ಪಿ೧೭	೦.೧೦	ಪ್ರಮೀಳಾ ಕೋಂ ಹರೀಶ ಕೊರಗ ಅಂಬೇಡ್ಕರ್ ಕಾಲೋನಿ ಹಿರೇಭೆಟ್ಟು ಆತ್ರಾಡಿ ಗ್ರಾಮದ, ಉಡುಪಿ
೯೧	ಬೊಮ್ಮರಬೆಟ್ಟು	೨೯೩/೩ಪಿ೨	೦.೧೦	ಯು. ಕೆ ಲಕ್ಷ್ಮೀ ಕೋಂ ಸುಧಾಕರ ಕೊರಗ, ಮನೆ ನಂಬ್ರ-೧-.೧೨೪ ಆತ್ರಾಡಿ ಗ್ರಾಮದ ಬ್ಲಾಕ್ ನಂ-೧ ಆತ್ರಾಡಿ, ಉಡುಪಿ
೯೨	ಬೊಮ್ಮರಬೆಟ್ಟು	೨೯೩/೩ಪಿ೧೮	೦.೧೦	ರೇಖಾ ಕೋಂ ಚಂದ್ರಶೇಖರ ಕೊರಗ, ಕೊರಗರ ಕಾಲನಿ ಆತ್ರಾಡಿ ಪೋಸ್ಟ್, ಉಡುಪಿ
೯೩	ಬೊಮ್ಮರಬೆಟ್ಟು	೨೯೩/೩ಪಿ೧೩	೦.೧೦	ಗೀತಾ ಕೋಂ ಬಾಬುಕೊರಗ ಅಲೆವೂರು ಗ್ರಾಮ, ಗುಡ್ಡೆ ಅಂಗಡಿ ಉಡುಪಿ
೯೪	ಬೊಮ್ಮರಬೆಟ್ಟು	೨೯೩/೩ಪಿ೧೨	೦.೧೦	ಶಶಿಕಲಾ ಕೋಂ ಪ್ರಸಾದ್ ಕೊರಗ, ಸಿದ್ಧಾರ್ಥ ನಗರ ಅಲೆವೂರು ಗ್ರಾಮ ಉಡುಪಿ
೯೫	ಬೊಮ್ಮರಬೆಟ್ಟು	೨೯೩/೩ಪಿ೩	೦.೧೦	ಸುಧಾ ಕೋಂ ವಿಜಯ ಕೊರಗ, ಸಿದ್ಧಾರ್ಥ, ನಗರ ಅಲೆವೂರುಗ್ರಾಮ ಉಡುಪಿ
೯೬	ಬೊಮ್ಮರಬೆಟ್ಟು	೩೧೦/೧ಎಫ್‌ಪಿ೪	೦.೧೦	ಗೀತಾ ಕೋಂ ಶೇಖರ ಕೊರಗ, ಸಿದ್ಧಾರ್ಥ ನಗರ, ಅಲೆವೂರುಗ್ರಾಮ, ಉಡುಪಿ
೯೭	ಬೊಮ್ಮರಬೆಟ್ಟು	೨೯೩/೩ಪಿ೪	೦.೧೦	ಜಯಂತಿ ಕೋಂ ದಿ. ಕುಟ್ಟಿ ಕೊರಗ, ಸಿದ್ಧಾರ್ಥ ನಗರ ಅಲೆವೂರುಗ್ರಾಮ, ಉಡುಪಿ
೯೮	ಬೊಮ್ಮರಬೆಟ್ಟು	೨೯೩/ಪಿ೧೧	೦.೧೦	ಸಂಪ್ರಿಯ ಕೋಂ ವಾಸು ಕೊರಗ, ಸಿದ್ಧಾರ್ಥ ನಗರ, ಅಲೆವೂರು ಗ್ರಾಮ ಉಡುಪಿ
೯೯	ಬೊಮ್ಮರಬೆಟ್ಟು	೨೯೩/೩ಪಿ೫	೦.೧೦	ಜೇಬಿ ಕೋಂ ಸಂಜೀವ ಕೊರಗ, ಸಿದ್ಧಾರ್ಥ ನಗರ ಅಲೆವೂರು ಗ್ರಾಮ, ಉಡುಪಿ
೧೦೦	ಬೊಮ್ಮರಬೆಟ್ಟು	೨೯೩/೩ಪಿ೬	೦.೧೦	ನಿರ್ಮಲ ಕೋಂ ಆನಂದ ಕೊರಗ, ಸಿದ್ಧಾರ್ಥ ನಗರ ಅಲೆವೂರು ಗ್ರಾಮ, ಉಡುಪಿ
೧೦೧	ಬೊಮ್ಮರಬೆಟ್ಟು	೩೧೦/೧ಎ ಫ್ಪಿ೩	೦.೧೦	ಸುನೀತಾ ಕೋಂ ರಮೇಶ ಕೊರಗ, ಕುದ್ಮಲ್ ರಂಗರಾವ್ ಅಲೆವೂರು ಗ್ರಾಮ, ಉಡುಪಿ
೧೦೨	ಬೊಮ್ಮರಬೆಟ್ಟು	೨೯೩/೩ಪಿ೧೪	೦.೧೦	ಪ್ರಮೋದ ಕೋಂ ಭಾಸ್ಕರ ಕೊರಗ, ಶಿವಳ್ಳಿಗ್ರಾಮ, ಮಂಚಿಕೋಡಿ ಅಂಚೆ, ಉಡುಪಿ
೧೦೩	ಬೊಮ್ಮರಬೆಟ್ಟು	೨೯೩/೩ಪಿ೭	೦.೧೦	ಉಷಾ ಕೋಂ ಸೋಮಯ್ಯ ಕೊರಗ, ೨ಬಿ, ೧೬೦ ಬಡಗುಬೆಟ್ಟು, ಇಂದಿರಾ ನಗರ, ಉಡುಪಿ
೧೦೪	ಬೊಮ್ಮರಬೆಟ್ಟು	೩೧೦೧ಎಫಪಿ೫	೦.೧೦	ಶಕುಂತಲಾ ಕೋಂ ದಯಾನಂದ ಕೊರಗ, ೭೬-

				ಬಡಗಬೆಟ್ಟು, ಕಸ್ತೂರಿ ಬಾ ನಗರ, ಉಡುಪಿ
೧೦೫	ಬೊಮ್ಮರಬೆಟ್ಟು	೨೯೩/೩ಪಿ೧೧	೦.೧೦	ಸವಿತಾ ಕೋಂ ರಾಘವೇಂದ್ರ ಕೊರಗ ಮುಡ್ಲುಕೋಡು, ೭೬-ಬಡಗಬೆಟ್ಟು ಕಸ್ತೂರಿ ನಗರ, ಉಡುಪಿ
೧೦೬	ಬೊಮ್ಮರಬೆಟ್ಟು	೨೯೩/೩ಪಿ೮	೦.೧೦	ಸುಮತಿ ಕೋಂ ವಸಂತ ಕೊರಗ, ಮುಡ್ಲುಕೋಡು ೭೬- ಬಡಗುಬೆಟ್ಟು, ಕಸ್ತೂರಿ ಬಾ ನಗರ, ಉಡುಪಿ
೧೦೭	ಬೊಮ್ಮರಬೆಟ್ಟು	೩೧೦/೧ಎಪ್ ಪಿ೨	೦.೧೦	ಕುಸುಮ ಕೋಂ ಸಾಧು ಕೊರಗ ಅಂಬಲಪಾಡಿ ಹೈವೆ ಹತ್ತಿರ ೪-೧-೩೪ಎ೩ ಕನ್ನೇರು ಪಾಡಿ, ಉಡುಪಿ
೧೦೮	ಬೊಮ್ಮರಬೆಟ್ಟು	೨೯೩/೩ಪಿ೧೬	೦.೧೦	ಬಬಿತಾ ಕೋಂ ಸತೀಶ ಕೊರಗ, ಮನೆ.ನಂ. ೬-೧೬೬ , ಮಂಚಿ ಕುಮೇರಿ, ಉಡುಪಿ
೧೦೯	ಬೊಮ್ಮರಬೆಟ್ಟು	೨೯೩/೩ಪಿ೯	೦.೧೦	ವೀಣಾ ಕೋಂ ಲೋಕೇಶ್ ಕೊರಗ, ಚಿಟ್ಪಾಡಿ ಗ್ರಾಮ,ಬೀಡಿನ ಗುಡ್ಡೆ, ೭೬ನೇ ಬಡಗಬೆಟ್ಟು, ಉಡುಪಿ
೧೧೦	ಬೊಮ್ಮರಬೆಟ್ಟು	೨೯೩/೩ಪಿ೧೫	೦.೧೦	ಮೀನಾಕ್ಷಿ ಕೋಂ ಕುಮಾರ.ಕೆ, ೬-೧೪೨ಎ೧.ಮಂಚಿಕುಮೇರಿ ಶಿವಳ್ಳಿ ಗ್ರಾಮ,ಉಡುಪಿ
೧೧೧	ಬೊಮ್ಮರಬೆಟ್ಟು	೨೯೩/೩ಪಿ೧೫	೦.೧೦	ಸೋಮಿ ಬಿನ್ ರಘು ಕೊರಗ, ಪಡ್ಡಮ ಪಡುಭಾಗ ಬೊಮ್ಮರಬೆಟ್ಟು ಗ್ರಾಮ, ಹಿರಿಯಡ್ಕ,ಉಡುಪಿ

ಕುಂದಾಪುರ ತಾಲೂಕು

ಕ್ರ.ಸಂ	ಗ್ರಾಮ	ತಾಲೂಕು	ಸರ್ವೆನಂಬರ್	ವಿಸ್ತೀರ್ಣ	ಹೆಸರು ಮತ್ತು ವಿಳಾಸ
೧	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಪಾರ್ವತಿ ಕೋಂ ಭದ್ರ ಹಾಲಾಡಿ ಗ್ರಾಮ, ಕುಂದಾಪುರ
೨	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಅಪ್ಪಿ ಕೋಂ.ದೂಮ,ಹಾಲಾಡಿ ಗ್ರಾಮ, ಕುಂದಾಪುರ
೩	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಗುಲಾಬಿ ಕೋಂನಾರಾಯಣ,ಹಾಲಾಡಿಗ್ರಾಮ, ಕುಂದಾಪುರ
೪	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಬಾಗಿ ಕೋಂನಾರಾಯಣ,ಹಾಲಾಡಿ ಗ್ರಾಮ, ಕುಂದಾಪುರ
೫	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಕೊಲ್ಲಮ್ಮ ಕೋಂ ಜೋಗಪ್ಪ ಹಾಲಾಡಿ ಗ್ರಾಮ, ಕುಂದಾಪುರ
೬	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ನಾಗು ಕೋಂ ಶಂಕರ,ಹಾಲಾಡಿ ಗ್ರಾಮ, ಕುಂದಾಪುರ
೭	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಚೀರು ಕೋಂ ಕುಪ್ಪ .ಹಾಲಾಡಿ ಗ್ರಾಮ, ಕುಂದಾಪುರ
೮	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಚಂದು ಕೋಂ.ಚಂದ್ರು, ಹಾಲಾಡಿ ಗ್ರಾಮ, ಕುಂದಾಪುರ
೯	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಆಶಾ ಕೋಂ.ಶಂಕರ, ಹಾಲಾಡಿ ಗ್ರಾಮ, ಕುಂದಾಪುರ
೧೦	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಗುಲ್ಲ ಕೋಂ.ರಾಮ, ಹಾಲಾಡಿ ಗ್ರಾಮ, ಕುಂದಾಪುರ
೧೧	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಶಂಖರ ಬಿನ್ ಲಿಂಗ, ಹಾಲಾಡಿ ಗ್ರಾಮ, ಕುಂದಾಪುರ
೧೨	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಸುಶೀಲ ಕೋಂ.ಶೀನ, ಹಾಲಾಡಿ ಗ್ರಾಮ, ಕುಂದಾಪುರ
೧೩	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಗಿರಿಜಾ ಕೋಂ.ಅಪ್ಪು, ಹಾಲಾಡಿ ಗ್ರಾಮ, ಕುಂದಾಪುರ
೧೪	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಶೀತು ಕೋಂ.ಬಾಬು, ಹಾಲಾಡಿ ಗ್ರಾಮ, ಕುಂದಾಪುರ
೧೫	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ನಾಗರತ್ನ ಕೋಂ.ನಾಗರಾಜ್ರು,ಹಾಲಾಡಿಗ್ರಾಮ, ಕುಂದಾಪುರ
೧೬	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ದುರ್ಗಿ ಕೋಂ.ಮರಿಯ್ರು, ಹಾಲಾಡಿ ಗ್ರಾಮ, ಕುಂದಾಪುರ
೧೭	೭೬ನೇ	ಕುಂದಾಪುರ	೧೩೬	೧.೦೦	ಲಲಿತ ಕೋಂ.ಮಂಜು, ಹಾಲಾಡಿ ಗ್ರಾಮ,

	ಹಾಲಾಡಿ				ಕುಂದಾಪುರ
೧೮	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಗಿರಿಜಾ ಕೋಂ.ಚಂದ್ರು, ಹಾಲಾಡಿ ಗ್ರಾಮ, ಕುಂದಾಪುರ
೧೯	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಗುಲಾಬಿ ಕೋಂ.ಶೇಖರ, ಹಾಲಾಡಿ ಗ್ರಾಮ, ಕುಂದಾಪುರ
೨೦	೭೬ನೇ ಹಾಲಾಡಿ	ಕುಂದಾಪುರ	೧೩೬	೧.೦೦	ಗೌರಿ ಕೋಂ.ದುರ್ಗ, ಹಾಲಾಡಿ ಗ್ರಾಮ, ಕುಂದಾಪುರ
೨೧	೭೬ನೇ ಹಾಲಾಡಿ	ಕುಂದಾಪುರ	೧೮೨	೧.೦೦	ಲಕ್ಷ್ಮೀ ಕೋಂ.ಉಮೇಶ, ಹಾಲಾಡಿ ಗ್ರಾಮ, ಕುಂದಾಪುರ
೨೨	೭೬ನೇ ಹಾಲಾಡಿ	ಕುಂದಾಪುರ	೧೮೨	೧.೦೦	ಗುಲಾಬಿ ಕೋಂ.ಲೋಕು, ಹಾಲಾಡಿ ಗ್ರಾಮ, ಕುಂದಾಪುರ
೨೩	೭೬ನೇ ಹಾಲಾಡಿ	ಕುಂದಾಪುರ	೧೮೨	೧.೦೦	ಮಂಜು ಕೋಂ.ಕರಿಯ, ಹಾಲಾಡಿ ಗ್ರಾಮ, ಕುಂದಾಪುರ
೨೪	೭೬ನೇ ಹಾಲಾಡಿ	ಕುಂದಾಪುರ	೧೮೨	೧.೦೦	ವಸಂತಿ ಕೋಂ.ರಾಜು, ಹಾಲಾಡಿ ಗ್ರಾಮ, ಕುಂದಾಪುರ
೨೫	೭೬ನೇ ಹಾಲಾಡಿ	ಕುಂದಾಪುರ	೧೮೨	೧.೦೦	ನರ್ಸಿ ಕೋಂ.ಬಸವ, ಹಾಲಾಡಿ ಗ್ರಾಮ, ಕುಂದಾಪುರ
೨೬	೭೬ನೇ ಹಾಲಾಡಿ	ಕುಂದಾಪುರ	೧೮೨	೧.೦೦	ಸುಜಾತ ಕೋಂ.ರಾಜು, ಹಾಲಾಡಿ ಗ್ರಾಮ, ಕುಂದಾಪುರ
೨೭	ಕನ್ಯಾನ	ಕುಂದಾಪುರ	೧೨೬	೧.೧೫	ಚಿಕ್ಕು ಕೋಂ.ಸಾಧು, ಕನ್ಯಾನ ಗ್ರಾಮ, ಕುಂದಾಪುರ
೨೮	ಕನ್ಯಾನ	ಕುಂದಾಪುರ	೧೨೬	೧.೧೫	ದೀಪ ಕೋಂ.ಶ್ರೀನಿವಾಸ, ತಲ್ಲೂರು ಗ್ರಾಮ, ಕುಂದಾಪುರ
೨೯	ಕನ್ಯಾನ	ಕುಂದಾಪುರ	೧೨೬	೧.೦೦	ಶಾರದ ಕೋಂ.ರಾಜು, ಕಟ್‌ಬೆಲ್ತೂರು ಗ್ರಾಮ, ಕುಂದಾಪುರ
೩೦	ನಾಡ	ಕುಂದಾಪುರ	೨೫೫	೧.೧೭	ಗೌರಿ ಕೋಂ.ಮುದುರ, ಕೋಣ್ಕಿ, ನಾಡಗ್ರಾಮ, ಕುಂದಾಪುರ
೩೧	ನಾಡ	ಕುಂದಾಪುರ	೨೫೫	೧.೧೭	ಮುತ್ತು ಕೋಂ.ಮಂಜು,ಕೋಣ್ಕಿ, ನಾಡಗ್ರಾಮ, ಕುಂದಾಪುರ

ಕಾರ್ಕಳ ತಾಲೂಕು

ಕ್ರ.ಸಂ	ಹೆಸರು ಮತ್ತು ವಿಳಾಸ	ಹೊಸತಾಗಿ ಭೂಮಿ ನೀಡಿರುವ ಸ್ಥಳ	ಸರ್ವೆ ನಂಬರ್	ವಿಸ್ತೀರ್ಣ
1	ಪಿಣಿಯಕೊರಗS\O ಚಿಕ್ಕಕೊರಗ ಅಡಲ್ಬೆ ಗ್ರಾಮ, ಕಾರ್ಕಳ	ಕಾರಾಡಿ	105	1–50
2	ಬೊಗ್ಗು ಕೊರಗ S\Oಖಡಾಗುಡ್ಡೆ,ಹೆಬ್ರಿಗ್ರಾಮ ಕಾರ್ಕಳ	ಕಾರಾಡಿ	105	1–50
3	ಬಿಕ್ರು ಕೊರಗ w/oಕೊರಗ ಬಡಾಗುಡ್ಡೆ ಹೆಬ್ರಿಗ್ರಾಮ, ಕಾರ್ಕಳ	ಕಾರಾಡಿ	105	1–50
4	ಗುರುವಪ್ಪ ಕೊರಗ, S\Oಕೂಕ್ರ ಕೊರಗ ಬಡಾಗುಡ್ಡೆಗ್ರಾಮ,ಕಾರ್ಕಳ	ಕಾರಾಡಿ	105	1–50
5	ಡಿ.ಶೇಕರS/O ಬಾಬು ಕೊರಗ ಬಡಾಗುಡ್ಡೆ,ಹೆಬ್ರಿಗ್ರಾಮ,ಕಾರ್ಕಳ	ಕಾರಾಡಿ	105	1–50
6	ಆನಂದS\O ಕೆಂಪಕೊರಗ ಬಡಾಗಡ್ಡೆ,ಹೆಬ್ರಿಗ್ರಾಮ,ಕಾರ್ಕಳ	ಕಾರಾಡಿ	105	1–50
7	ಗೋಪಾಲS\O ಬಾಬು ಕೊರಗ ಬಡಾಗುಡ್ಡೆ, ಹೆಬ್ರಿಗ್ರಾಮ,ಕಾರ್ಕಳ	ಕಾರಾಡಿ	105	1–50
8	ರಾಜೀವಿd/o ಸೋಮಕೊರತಿ,ಬಡಾಗುಡ್ಡೆ,ಹೆಬ್ರಿಗ್ರಾಮ,ಕಾರ್ಕಳ	ಕಾರಾಡಿ	105	1–50
9	ಬಸವ S\Oಬಾಬುಕೊರಗ,ಬುಡಾಗುಡ್ಡೆ,ಹೆಬ್ರಿ ಗ್ರಾಮ,ಕಾರ್ಕಳ	ಕಾರಾಡಿ	105	1–50
10	ಗಣೇಶS\Oಮೋಹನ, ಬುಡಾಗುಡ್ಡೆ ಹೆಬ್ರಿಗ್ರಾಮ,ಕಾರ್ಕಳ	ಕಾರಾಡಿ	105	1–50
11	ಪ್ರಕಾಶ S\Oತನಿಯ,ಬುಡಾಗುಡ್ಡೆ ಹೆಬ್ರಿಗ್ರಾಮ, ಕಾರ್ಕಳ	ಕಾರಾಡಿ	105	1–50
12	ದಯಾನಂದS\O ಚಂದಯ್ಯ,ಬಡಾಗುಡ್ಡೆ ಹೆಬ್ರಿಗ್ರಾಮ,ಕಾರ್ಕಳ	ಕಾರಾಡಿ	105	1–50
13	ರವಿಕೊರಗಗುತ್ತಿಗೆಗುಡ್ಡೆ ಮುದ್ರಾಡಿ ಗ್ರಾಮ ಮತ್ತು ಅಂಚೆ, ಕಾರ್ಕಳ	ಕಾರಾಡಿ	105	1–50

14	ಕುಂರ್ಚೆw/o ಅಂಗಾರ ಬಡಾ ಗುಡ್ಡೆಂಗಡಿ ಮರ್ಣೆಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	105	2–00
15	ಭಾಗಿw/o ರಾಜುಕೊರಗ,ಗುತ್ತಿಗೆ ಗುಡ್ಡೆ ಮುದ್ರಾಡಿ ಗ್ರಾಮ,ಕಾರ್ಕಳ	ನಿಡ್ಡದೆ ಪಾದೆ	105	2–00
16	ರತ್ನ w/oಜಗನ್ನಾಥಕೊರಗ, ಗುತ್ತಿಗೆಗುಡ್ಡೆ, ಮುದ್ರಾಡಿ, ಕಾರ್ಕಳ	ನಿಡ್ಡದೆ ಪಾದೆ	105	2–00
17	ಕುಂರ್ಬಿಲು w/o ಐತಕೊರಗ ಗುತ್ತಿಗೆ ಗುಡ್ಡೆ, ಮುದ್ರಾಡಿ, ಕಾರ್ಕಳ	ನಿಡ್ಡದೆ ಪಾದೆ	105	2–00
18	ರಾಜೀವಿ w/oದಿನೇಶ ಕೊರಗ,ಗುತ್ತಿಗೆ ಗುಡ್ಡೆ, ಮುದ್ರಾಡಿ,ಕಾರ್ಕಳ	ನಿಡ್ಡದೆ ಪಾದೆ	105	2–00
19	ಮೆಣ್ಕುw/o ಬೀರ ಕೊರಗ, ಜತ್ತ ಗುರಿ ಮುಂಡಾರು ಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	105	2–00
20	ಅಚ್ಚುw/o ಕಾಡ್ಯಾ ಕೊರಗ, ನಿಡ್ಡದೆ ಪಾದೆ, ಶಿರ್ಲಾಲು ಗ್ರಾಮ ಹಾಡಿ ಅಂಗಡಿ ಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	105	2–00
21	ವಿಶಾಲಾಕ್ಷಿw/o ಗುಂಡು ಕೊರಗ, ಗುತ್ತಿಗೆ ಗುಡ್ಡೆ ಮುದ್ರಾಡಿ,ಕಾರ್ಕಳ	ನಿಡ್ಡದೆ ಪಾದೆ	105	2–00
22	ಸಾಂತುw/o ಬಾಬು ಕೊರಗ,ಬಡಾಗುಡ್ಡೆ ಹೆಬ್ರಿ ಗ್ರಾಮ,ಕಾರ್ಕಳ	ನಿಡ್ಡದೆ ಪಾದೆ	105	2–00
23	ಅಪ್ಪಿ w/oದೂಜ ಕೊರಗ, ಬಡಾಗುಡ್ಡೆ ಹೆಬ್ರಿ ಗ್ರಾಮ,ಕಾರ್ಕಳ	ನಿಡ್ಡದೆ ಪಾದೆ	105	2–00
24	ಬೊಡ್ಡಿ w/oಗೋಂಕ್ರ ಕೊರಗ,ಬಡಾಗುಡ್ಡೆ ಹೆಬ್ರಿ ಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	105	2–00
25	ಸುಮಿತ್ರ w/oಡಿ ಸೇಖರ ಕೊರಗ ನಿಡ್ಡೆದೆಪಾದ, ಶಿರ್ಲಾಲು ಹಾಡಿ ಅಂಗಡಿ ಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	105	2–00
26	ಅಮ್ಮಣ್ಣಿw/o ದಯಾನಂದ ಕೊರಗ ಬಡಾಗುಡ್ಡೆ ಹೆಬ್ರಿ, ಕಾರ್ಕಳ	ನಿಡ್ಡದೆ ಪಾದೆ	105	2–00
27	ಶಾರದw/o ಕಿಟ್ಟ ಕೊರಗ, ನಿಡ್ಡದೆಪಾದೆ, ಶಿರ್ಲಾಲು ಗ್ರಾಮ ಹಾಡಿ ಅಂಗಡಿ, ಕಾರ್ಕಳ	ನಿಡ್ಡದೆ ಪಾದೆ	105	2–00
28	ಅಪ್ಪಿw/o ಸೀನ ಕೊರಗ, ನಿಡ್ಡದೆಪಾದೆ, ಶಿರ್ಲಾಲು ಗ್ರಾಮ ಹಾಡಿ ಅಂಗಡಿ, ಕಾರ್ಕಾಳ	ನಿಡ್ಡದೆ ಪಾದೆ	105	2–00
29	ಜಾನಕಿw/o ಅರುಣ ಕೊರಗ, ಗುತ್ತಿಗೆ ಗುಡ್ಡೆ ಮರ್ಣೆ ಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	105	2–00
30	ಅಪ್ಪಿ w/oತುಕ್ರ ಕೊರಗ, ಗುತ್ತಿಗೆ ಗುಡ್ಡೆ ಮರ್ಣೆ ಗ್ರಾಮ	ನಿಡ್ಡದೆ ಪಾದೆ	105	2–00
31	ಅಕ್ಕಿ w/oಗುರುವ ಕೊರಗ, ನಿಡ್ಡದೆಪಾದೆ ಶಿರ್ಲಾಲು ಗ್ರಾಮ ಹಾಡಿ ಅಂಗಡಿ, ಕಾರ್ಕಳ	ನಿಡ್ಡದೆ ಪಾದೆ	105	2–00
32	ರತ್ನ w/oರವಿ ಕೊರಗ, ನಿಡ್ಪಲ್ ಪಾದೆ, ಹಾಲಡಿ ಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	105	2–00
33	ವಸಂತಿ w/oಬಿ.ಕೆ ರಮೇಶ, ಬಂಡು ಕುಮೇರಿ, ಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	105	2–00
34	ಸುಶೀಲw/o ರಾಮ, ಗುತ್ತಿಗೆ ಗುಡ್ಡೆ, ಮುದ್ರಾಡಿ ಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	105	2–00
35	ಗುಳ್ಳಿ w/oಚಾಂಟು, ಮಂಡಾಡಿ ಜಡ್ಡು ಚಾರ ಗ್ರಾಮ ಹೆಬ್ರಿ, ಕಾರ್ಕಳ	ನಿಡ್ಡದೆ ಪಾದೆ	105	2–00
36	ಚಿಕ್ಕ ಕೊರಗ S\Oಕಟ್ಲ ಕೊರಗ, ಕಲ್ಲೊಟ್ಟೆ, ಕಡ್ತಾಲ ಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	125–1	0–50
37	ಸುಂದರಿw/o ಬೊಗ್ರ ಕೊರಗ, ಕಲ್ಲೊಟ್ಟೆ, ಕಡ್ತಾಲ ಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	125–1	0–50
38	ಅಶೋಕ S\O, ಕೊರಗ ಕೂಕ್ರ ಕೊರಗ, ಕಲ್ಲೊಟ್ಟೆ, ಕಡ್ತಾಲ	ನಿಡ್ಡದೆ ಪಾದೆ	125–1	0–50

	ಗ್ರಾಮ, ಕಾರ್ಕಳ			
39	ಬಾಬುಕೊರಗS\Oಕೂಕ್ರ ಕೊರಗ, ಕಡ್ತಲ ಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	125–1	0–50
40	ಕಟ್ಲ ಕೊರಗS\O ಮೆಣ್ಪ ಕೊರಗ, ಕಡ್ತಲ ಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	125–1	0–50
41	ಅಪ್ಪು ಕೊರಗ S\Oಬೊಗ್ರ ಕೊರಗ, ಕಲ್ಲೊಟ್ಟೆ, ಕಡ್ತಾಲ ಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	125–1	0–50
42	ಪಜಿರ ಕೊರಗS\O ಕೂಕ್ರ ಕೊರಗ, ಕಲ್ಲೊಟ್ಟೆ, ಕಡ್ತಾಲ ಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	125–1ಪೈ	0–50
43	ಮೊಂಟ ಕೊರಗ S\Oಬಚ್ಚ ಕೊರಗ, ಮಟ್ಲಪಾಡಿ ಅಂಡಾರುಗ್ರಾಮ ಮುನಿಯಾಲು ಅಂಚೆ, ಕಾರ್ಕಳ	ನಿಡ್ಡದೆ ಪಾದೆ	125–1ಪೈ	1–00
44	ಅಪ್ಪಿ ಕೊರಗ S\Oಕೂಕ್ರ ಕೊರಗ, ಕಲ್ಲೊಟ್ಟೆ, ಕಡ್ತಾಲ ಗ್ರಾಮ, ಕಾರ್ಕಳ	ನಿಡ್ಡದೆ ಪಾದೆ	125–1ಪೈ	1–00
45	ಅಕ್ಕು ಕೊರಗತಿw/o ಮುಂಗುರಿ ಕೊರಗ, ದಬೇ ಕುಂಟಾಡಿ ಕಲ್ಯಾ ಗ್ರಾಮ ಕುಂಟಾಡಿ ಅಂಚೆ, ಕಾರ್ಕಳ	ಕುಂಟಾಡಿ	125–1ಪೈ	0–61
46	ಕುರುಂಬಿಲು w/oರಾಮ ಕೊರಗ, ದರ್ಬೆ ಕುಂಟಾಡಿ ಕಲ್ಯಾ ಗ್ರಾಮ ಕುಂಟಾಡಿ ಅಂಚೆ, ಕಾರ್ಕಳ	ಕುಂಟಾಡಿ	125–1ಪೈ	1–05
47	ಬಿಟ್ಟು w/oನಾರಾಯಣ ಕೊರಗ, ದರ್ಬೆ ಕುಂಟಾಡಿ ಕಲ್ಯಾ ಗ್ರಾಮ ಕುಂಟಾಡಿ ಅಂಚೆ, ಕಾರ್ಕಳ	ಕುಂಟಾಡಿ	125–1ಪೈ	1–03
48	ಕುಟ್ಟಿ S\Oಕಾಜು, ದರ್ಬೆ ಕುಂಟಾಡಿ ಕಲ್ಯಾ ಗ್ರಾಮ ಕುಂಟಾಡಿ ಅಂಚೆ, ಕಾರ್ಕಳ	ಕುಂಟಾಡಿ	150–1	0–50
49	ಬಾಬು S\Oಪೀಂಟ, ದರ್ಬೆ ಕುಂಟಾಡಿ ಕಲ್ಯಾ ಗ್ರಾಮ ಕುಂಟಾಡಿ ಅಂಚೆ, ಕಾರ್ಕಳ	ಕುಂಟಾಡಿ	150–1	0–50
50	ನಾರಾಯಣS\O ಪೀಂಟ, ದರ್ಬೆ ಕುಂಟಾಡಿ ಕಲ್ಯಾ ಗ್ರಾಮ ಕುಂಟಾಡಿ ಅಂಚೆ, ಕಾರ್ಕಳ	ಕುಂಟಾಡಿ	150–1	0–50
51	ಬೇಬಿw/oರವಿ ಕೊರಗ, ಗುತ್ತಿಗೆ ಗುಡ್ಡೆ, ಮುದ್ರಾಡಿ, ಕಾರ್ಕಳ	ಕುಂಟಾಡಿ	170–1	1–00
52	ಅರುಣ ಕೊರಗS\O ತುಕ ಕೊರಗ, ಗುತ್ತಿಗೆ ಗುಡ್ಡೆ, ಮುದ್ರಾಡಿ, ಕಾರ್ಕಳ	ಕುಂಟಾಡಿ	170–1	1–00
53	ದಯಾನಂದS\O ಬೊಗ್ರ ಕೊರಗ, ಮರಿನಾಮುರ ಬೊಮ್ಮಳ, ಕಾರ್ಕಳ	ಕೂಕ್ರ ಬೈಲು	170–1	1–00
54	ವಸಂತಿ S\Oಭನಪಾಲ್, ಮರಿನಾಪುರ ಬೊಮ್ಮಳ, ಕಾರ್ಕಳ ಅಂಚೆ	ಕೂಕ್ರ ಬೈಲು	170–1	1–00
55	ಸುಂದರ S\Oಮಾಣಿಗ, ಮರಿನಾಪುರ ಬೊಮ್ಮಳ, ಕಾರ್ಕಳ ಅಂಚೆ	ಕೂಕ್ರ ಬೈಲು	170–1	1–00
56	ಶಿವರಾಮS\O ತನಿಯ, ಮರಿನಾಪುರ ಬೊಮ್ಮಳ, ಕಾರ್ಕಳ ಅಂಚೆ	ಕೂಕ್ರ ಬೈಲು	170–1	1–00
57	ವಿಜಯS\O ಕರಿಯ, ಮರಿನಾಪುರ ಬೊಮ್ಮಳ, ಕಾರ್ಕಳ ಅಂಚೆ	ಕೂಕ್ರ ಬೈಲು	170–1	1–00
58	ಭವಾನಿc/o ಬುದ್ದ ಕೊರಗ, ಗುರುಮಿಯಾರು ಸಾಂತೂರು ಕೊಪ್ಪ ಇನ್ನ, ಕಾರ್ಕಳ	ಸಾಂತೂರು ಕೊಪ್ಪ	182–3ಎ1ಎ2	1–00
59	ರೇವತಿ w/oರಂಗ ಕೊರಗ, ಗುರುಮಿಯಾರು ಸಾಂತೂರು ಕೊಪ್ಪ ಇನ್ನ, ಕಾರ್ಕಳ	ಸಾಂತೂರು ಕೊಪ್ಪ	183–1	1–00
60	ಅಪ್ಪಿw/o ಬಾಬು, ಮುಲ್ಲಡ್ಕ ಮುಂಡ್ಕೂರು ಗ್ರಾಮ, ಕಾರ್ಕಳ	ಸಾಂತೂರು ಕೊಪ್ಪ	183–1	1–00
61	ಗುಲಾಬಿ w/oಪಾಂಟ ಕೊರಗ, ಗುರುಮಿಯಾರು ಸಾಂತೂರು ಕೊಪ್ಪ, ಕಾರ್ಕಳ	ಸಾಂತೂರು ಕೊಪ್ಪ	182–	1–00
62	ಶರ್ಮಿಳಾw/o ಬಾಬು ಪಾರಂಗ, ಗುರುಮಿಯಾರು ಸಾಂತೂರು ಕೊಪ್ಪ ಇನ್ನ, ಕಾರ್ಕಳ	ಸಾಂತೂರು ಕೊಪ್ಪ	182–	1–00

63	ಸೀನ S\Oನರಂಗ ಕೊರಗ, ಕಾಂಜರ ಕಟ್ಟೆ, ಇನ್ನಾ ಗ್ರಾಮ ಮತ್ತು ಅಂಚೆ, ಕಾರ್ಕಳ	ಕಾಂಜರ ಕಟ್ಟೆ	230–8–ಬಿ	0–60
64	ಮರ್ದ ಕೊರಗ, ಕಾಂಜರ ಕಟ್ಟೆ, ಇನ್ನಾ ಗ್ರಾಮ ಮತ್ತು ಅಂಚೆ, ಕಾರ್ಕಳ	ಕಾಂಜರ ಕಟ್ಟೆ	230–8–ಬಿ	0–90
65	ಅಕ್ಕು ಯಾನೆ ಗೋಳಿw/o ನಕ್ರ ಕೊರಗ, ಕಾಂಜರ ಕಟ್ಟೆ ಇನ್ನಾ ಗ್ರಾಮ ಮತ್ತು ಅಂಚೆ, ಕಾರ್ಕಳ	ಕಾಂಜರ ಕಟ್ಟೆ	235–5–ಎ	1–00
66	ಗೋಪ ಕೊರಗ S\Oಕಾಳು ಕೊರಗ, ಬಂಗ್ಲೆ ಗುಡ್ಡೆ, ಮರ್ಣೆ ಗ್ರಾಮ ಅಜೆಕಾರು ಅಂಚೆ, ಕಾರ್ಕಳ	ಬಂಗ್ಲೆ ಗುಡೆ	502–1ಪೈ	1–22
67	ನರಂಗS\O ಐತ ಕೊರಗ, ಬಂಗ್ಲೆ ಗುಡ್ಡೆ, ಮರ್ಣೆ ಗ್ರಾಮ ಅಜೆಕಾರು ಅಂಚೆ, ಕಾರ್ಕಳ	ಬಂಗ್ಲೆ ಗುಡೆ	502–	1–11
68	ಚಾಂಟು ಕೊರಗ S\Oಕೆಂಚ ಕೊರಗ, ಮುಂಡಾಡಿ ಜಡ್ಡು, ಚಾರ ಗ್ರಾಮ, ಕಾರ್ಕಳ	ಬಂಗ್ಲೆ ಗುಡೆ	502–	0–55
69	ಜಗನ್ನಾಥ S\Oಅಂಗಾರ ಕೊರಗ, ಗುಡ್ಡೆ ಅಂಗಡಿ, ಮರ್ಣೆ ಗ್ರಾಮ, ಅಜೆಕಾರು ಅಂಚೆ, ಕಾರ್ಕಳ	ಬಂಡು ಕುಮೇರಿ	276–1ಪೈ	1–29
70	ಅಶೋಕ ಕೊರಗS\O ಐತ ಕೊರಗ, ಬಂಡುಕುಮೇರಿ ಮರ್ಣೆ ಗ್ರಾಮ, ಕಾರ್ಕಳ	ಬಂಡು ಕುಮೇರಿ	276–ಪೈ	1–25
71	ಬೊಳ್ಳು ಕೊರಗ S\Oಯಾನೆ ನೊಕ್ಕು ಕೊರಗ ಕುಡುಪ ಕೊರಗ, ಗುಡ್ಡೆ ಅಂಗಡಿ, ಮರ್ಣೆ ಗ್ರಾಮ, ಅಜೆಕಾರು ಅಂಚೆ, ಕಾರ್ಕಳ	ಬಂಡು ಕುಮೇರಿ	309–ಪೈ	1–28
72	ವಸಂತಿw/o ಬಿ.ಕೆರಮೇಶ್, ಬಂಡುಕುಮೇರಿ, ಮರ್ಣೆ ಗ್ರಾಮ, ಕಾರ್ಕಳ	ಬಂಡು ಕುಮೇರಿ	537/1ಎಬಿ	1–20
73	ಐತ ಕೊರಗ S\Oಕುಡುಪ ಕೊರಗ, ಗುಡ್ಡೆ ಅಂಗಡಿ, ಮರ್ಣೆ ಗ್ರಾಮ, ಅಜೆಕಾರು ಅಂಚೆ, ಕಾರ್ಕಳ	ಗುಡ್ಡೆ ಅಂಗಡಿ	306	1–07
74	ಚಂದ್ರ ಕೊರಗ ಬಿನ್ ತುಕ್ರ ಕೊರಗ, ದೂಪದ ಕಟ್ಟೆ ಬೇಳಂಜೆ ಗ್ರಾಮ, ಕಾರ್ಕಳ	ಗುಡ್ಡೆ ಅಂಗಡಿ	306	1–00
75	ಅಪ್ಪು ಕೊರಗ ಬಿನ್ ಬಸಪ್ಪ ಕೊರಗ, ದೂಪದ ಕಟ್ಟೆ ಬೇಳಂಜೆ ಗ್ರಾಮ, ಕಾರ್ಕಳ	ಗುಡ್ಡೆ ಅಂಗಡಿ	306	1–00
76	ಗೋಪಾಲ ಕೊರಗ ಬಿನ್ ತುಕ್ರ ಕೊರಗ, ದೂಪದ ಕಟ್ಟೆ ಬೇಳಂಜೆ ಗ್ರಾಮ, ಕಾರ್ಕಳ	ಗುಡ್ಡೆ ಅಂಗಡಿ	306	1–00
77	ತನಿಯ ಕೊರಗ ಬಿನ್ ಬಸವ ಕೊರಗ, ದೂಪದ ಕಟ್ಟೆ ಬೇಳಂಜೆ ಗ್ರಾಮ, ಕಾರ್ಕಳ	ಗುಡ್ಡೆ ಅಂಗಡಿ	306	1–00
78	ಉಮೇಶ ಕೊರಗ ಬಿನ್ ಬಾಬು ಕೊರಗ, ಮುಲ್ಲಡ್ಕ ಮುಂಡ್ಕೂರು ಗ್ರಾಮ, ಕಾರ್ಕಳ	ಗುಡ್ಡೆ ಅಂಗಡಿ	306	1–00
79	ರಮೇಶ ಬಿನ್ ಕಡಂಜರ ಕೊರಗ, ಮುಲ್ಲಡ್ಕ ಮುಂಡ್ಕೂರು ಗ್ರಾಮ, ಕಾರ್ಕಳ	ಗುಡ್ಡೆ ಅಂಗಡಿ	306	1–00
80	ಶಾರದ ಕೋಂ ಕರ್ಣ, ಬಂಡೀಮಠ ಮುಡ್ಕೂರು ಅಂಚೆ, ಕಾರ್ಕಳ	ಗುಡ್ಡೆ ಅಂಗಡಿ	306	1–17
81	ಶಶಿಕಾಲw/o ಕುಪ್ಪ ಕೊರಗ, ಸಚ್ಚೇರಿ ಪೇಟೆ, ಮುಡ್ಕೂರು ಗ್ರಾಮ, ಕಾರ್ಕಳ	ಗುಡ್ಡೆ ಅಂಗಡಿ	306	1–00
82	ಸುಂದರಿ w/o ಚಂದು ಕೊರಗ, ವರಂಗ ಗ್ರಾಮ ಮುನಿಯಾಲು ಅಂಚೆ, ಕಾರ್ಕಳ	ಗುಡ್ಡೆ ಅಂಗಡಿ	306	1–00
83	ಕರ್ಗಿw/o ನಕ್ರ ಕೊರಗ, ಮುಲ್ಲಡ್ಕ ಮುಂಡ್ಕೂರು ಗ್ರಾಮ ಮತ್ತು ಅಂಚೆ, ಕಾರ್ಕಳ	ಗುಡ್ಡೆ ಅಂಗಡಿ	306	1–00
84	ಪಾಡಿ w/oಗುಳ್ಳ ಕೊರಗ, ಸಚ್ಚೇರಿ ಪೇಟೆ, ಮುಂಡ್ಕೂರು ಗ್ರಾಮ, ಕಾರ್ಕಳ	ಗುಡ್ಡೆ ಅಂಗಡಿ	306	1–00
85	ಪುಟ್ಟು w/oರಾಮ ಕೊರಗ, ವಡ್ಡಿನ ಗುಡ್ಡೆ, ಮುದ್ರಾಡಿ ಗ್ರಾಮ, ಕಾರ್ಕಳ	ಗುಡ್ಡೆ ಅಂಗಡಿ	306	1–00

86	ಸುಶೀಲ w/oಬಾಬು ಕೊರಗ, ವಡ್ಡಿನ ಗುಡ್ಡೆ, ಮುದ್ರಾಡಿ ಗ್ರಾಮ, ಕಾರ್ಕಳ	ಗುಡ್ಡೆ ಅಂಗಡಿ	306	1–00
87	ರಾಧw/o ಗುಡು ಕೊರಗ, ವರಂಗ ಗ್ರಾಮ ಮುನಿಯಾಲು ಅಂಚೆ, ಕಾರ್ಕಳ	ಗುಡ್ಡೆ ಅಂಗಡಿ	306	1–00
88	ಗೀತಾ w/oರಾಜು ಕೊರಗ, ಕಟಾರಿನದಿ ಬಳಿ ಮುಡಾರು ಗ್ರಾಮ, ಕಾರ್ಕಳ	ಗುಡ್ಡೆ ಅಂಗಡಿ	306	1–05
89	ಸುಮತಿw/o ಶಂಕರ ಕೊರಗ, ಪೇರಲ್ ಪಾದೆ, ಬೆಳ್ಮಣ್ ಗ್ರಾಮ, ಕಾರ್ಕಳ	ಗುಡ್ಡೆ ಅಂಗಡಿ	306	1–05
90	ಸುಂದರಿ w/oನರಂಗ ಕೊರಗ, ಕ್ಲೇಶ ಬೆಟ್ಟು, ರೆಂಜಾಳ ಗ್ರಾಮ, ಕಾರ್ಕಳ	ಗುಡ್ಡೆ ಅಂಗಡಿ	306	1–05
91	ಶಾಲಿನಿw/o ಸುಂದರ ಕೊರಗ, ಕಟಾರಿನದಿ ಬಳಿ ಮುಡಾರು ಗ್ರಾಮ, ಬಜಗೋಳಿ ಅಂಚೆ, ಕಾರ್ಕಳ	ಗುಡ್ಡೆ ಅಂಗಡಿ	306	1–05
92	ಬೇಬಿw/o ರಾಜು ಕೊರಗ, ಪೇರಲ್ ಪಾದೆ, ಬೆಳ್ಮಣ್ ಗ್ರಾಮ, ಕಾರ್ಕಳ	ಗುಡ್ಡೆ ಅಂಗಡಿ	258/344	1–21
93	ಅಮ್ಮಣ್ಣಿ w/oಬಿರ್ಕಿಲಾ, ಗುರುಮೇರಿ ಸಾಂತೂರು ಕೊಪ್ಲ, ಇನ್ನಾ ಗ್ರಾಮ ಮತ್ತು ಅಂಚೆ, ಕಾರ್ಕಳ	ಗುಡ್ಡೆ ಅಂಗಡಿ	258/344	1–21
94	ಗೋಪಿw/o ಸಂಜೀವ ಕೊರಗ, ಕಲ್ಯಾ ಗ್ರಾಮ ಮತ್ತು ಅಂಚೆ, ಕಾರ್ಕಳ	ಗುಡ್ಡೆ ಅಂಗಡಿ	254/2	1–35

ಕ್ಷೇತ್ರಕಾರ್ಯದಲ್ಲಿ ಬಳಸಿದ ಪ್ರಶ್ನಾವಳಿ

ಬುಡಕಟ್ಟು ಅಭಿವೃದ್ಧಿ ಸಂಬಂಧಿ ಸರಕಾರಿ ಸಂಸ್ಥೆಗಳಿಗೆ ಸಿದ್ಧ ಪಡಿಸಲಾದ ಪ್ರಶ್ನಾವಳಿ

೧. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ತಾಲೂಕುವಾರು ಕೊರಗ + ಮಲೆಕುಡಿಯ + ಮರಾಠಿ ನಾಯ್ಕ ಜನಸಂಖ್ಯೆ.

[ಪುರುಷರು + ಮಹಿಳೆಯರು = ಒಟ್ಟು]

೨. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ದಕ್ಷಿಣ ಕನ್ನಡ ಕೊರಗ + ಮಲೆಕುಡಿಯ + ಮರಾಠಿ ನಾಯ್ಕ ಸಾಕ್ಷರತೆ ಪ್ರಮಾಣ.

[ಪುರುಷರು + ಮಹಿಳೆಯರು = ಒಟ್ಟು]

೩. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ದಕ್ಷಿಣ ಕನ್ನಡ ಕೊರಗ + ಮಲೆ ಕುಡಿಯ + ಮರಾಠಿ ನಾಯ್ಕ ಉದ್ಯೋಗ ಪ್ರಮಾಣ

[ಪುರುಷರು + ಮಹಿಳೆಯರು = ಒಟ್ಟು]

೪. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ದಕ್ಷಿಣ ಕನ್ನಡ ಕೊರಗ + ಮಲೆಕುಡಿಯ + ಮರಾಠಿ ನಾಯ್ಕ ತಲಾ ಆದಾಯ ಪ್ರಮಾಣ

[ಪುರುಷರು + ಮಹಿಳೆಯರು = ಒಟ್ಟು]

೫. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ದಕ್ಷಿಣ ಕನ್ನಡ ಕೊರಗ + ಮಲೆಕುಡಿಯ + ಮರಾಠಿ ನಾಯ್ಕ ಸ್ವಂತ ಭೂಮಿ ಹೊಂದಿರುವ ಪ್ರಮಾಣ

[ಕುಟುಂಬಗಳು + ಜಾಗ ಎಕರೆಗಳಲ್ಲಿ]

೬. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಕೊರಗರಿಗೆ ಅನುಷ್ಠಾನ ಮಾಡಲಾದ ವಿಶೇಷ ಅಭಿವೃದ್ಧಿ ಕಾರ್ಯಕ್ರಮಗಳು + ಬಿಡುಗಡೆಯಾದ ಹಣ + ಫಲಾನುಭವಿಗಳ ಸಂಖ್ಯೆ

೭. ಮಲೆಕುಡಿಯರಗೆ ಅನುಷ್ಠಾನ ಮಾಡಲಾದ ವಿಶೇಷ ಅಬಿವೃದ್ಧಿ ಕಾರ್ಯಕ್ರಮಗಳು + ಬಿಡುಗಡೆಯಾದ ಹಣ + ಫಲಾನುಭವಿಗಳ ಸಂಖ್ಯೆ

೮. ಮರಾಠಿ ನಾಯ್ಕರಿಗೆ ಅನುಷ್ಠಾನ ಮಾಡಲಾದ ವಿಶೇಷ ಅಭಿವೃದ್ಧಿ ಕಾರ್ಯಕ್ರಮಗಳು + ಬಿಡುಗಡೆಯಾದ ಹಣ + ಫಲಾನುಭವಿಗಳ ಸಂಖ್ಯೆ

೯. ಒಟ್ಟು ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳಲಿ ಅತೀ ಹೆಚ್ಚು ಫಲಾನುಭವಿಗಳನ್ನು ಹೊಂದಿರುವ ಪ.ಪ. ಸಮುದಾಯ

[ಫಲಾನುಭವಿಗಳ ಸಂಖ್ಯೆ ಅಥವಾ ಪ್ರಮಾಣ] (ಹಿಂದಿನ ೫ ವರ್ಷಗಳಲ್ಲಿ) (ಕಾರ್ಯಕ್ರಮದ ಹೆಸರು)

೧೦. ಹಿಂದಿನ ೫ (ಐದು) ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಬಿಡುಗಡೆಯಾದ ಒಟ್ಟು ಹಣ + ಬಳಕೆಯಾದ ಹಣ + ಹಿಂದಿರುಗಿಸಿದ ಹಣ (ಅಂಕಿ ಅಂಶ)

೧೧. ಹಿಂದಿನ ೫ ವರ್ಷಗಳಲ್ಲಿ ಅತೀ ಹೆಚ್ಚು ಫಲಾನುಭಿಗಳನ್ನು ಹೊಂದಿದ (ಪ್ರಯೋಜನ ಪಡೆದ) ಅಭಿವೃದ್ದಿ ಕಾರ್ಯಕ್ರಮಗಳು (ಕಾರ್ಯಕ್ರಮಗಳ ವಿವರ + ಫಲಾನುಭವಿಗಳ ಸಂಖ್ಯೆ) (ಇಸವಿ)

೧೨. ಹಿಂದಿನ ೫ ವರ್ಷಗಳಲ್ಲಿ ಅತೀ ಕಡಿಮೆ ಫಲಾನುಭವಿಗಳನ್ನು (ಯಶಸ್ವಿಯಾಗದ) ಅಭಿವೃದ್ಧಿ ಕಾರ್ಯಕ್ರಮಗಳು (ವಿಫಲವಾದ) (ಕಾರ್ಯಕ್ರಮಗಳ ವಿವರ + ಫಲಾನುಭವಿಗಳ ಸಂಖ್ಯೆ) (ಕಾರಣ)

೧೩. ಇತ್ತೀಚಿನ ವರ್ಷಗಳಲ್ಲಿ ಅರ್ಧದಲ್ಲೇ ಸ್ಥಗಿತಗೊಳಿಸಿದ ಅಭಿವೃದ್ಧಿ ಕಾರ್ಯಕ್ರಮಗಳ ವಿವರಗಳು ಮತ್ತು ಅದಕ್ಕೆ ಕಾರಣಗಳು.

೧೪. ಮುಂದಿನ ದಿನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಜಾರಿಗೊಳಿಸಲಾಗುವ ಹೊಸ ಕಾರ್ಯಕ್ರಮಗಳ ವಿವರಗಳು

೧೫. ಹಿಂದಿನ ೫ ವರ್ಷಗಳಲ್ಲಿ ವಸತಿ ಯೋಜನೆಯಡಿಯಲ್ಲಿ ಮನೆಯನ್ನು ಪಡೆದು ಕೊಂಡ ಫಲಾನುಭವಿಗಳ ವಿವರಗಳು ಬಿಡುಗಡೆಯಾದ (ಇಸವಿ – S.T(ಕೊ.ಮ.ಕು.ಮ.ನಾಯ್ಕ) ತಾಲೂಕು ಫಲಾನುಭವಿಗಳು– ಹಣ

೧೬. ಹಿಂದಿನ ೫ ವರ್ಷಗಳಲ್ಲಿ ಭೂಮಿಗಳನ್ನು ಪಡೆದುಕೊಂಡ ಫಲಾನುಭವಿಗಳ ವಿವರಗಳು (ಇಸವಿ – (ಕೊ+ಮ.ಕು+ಮ.ನಾಯ್ಕ) + ತಾಲೂಕು+ ಫಲಾನುಭವಿಗಳು – ಒತ್ತುವರಿಯಾದ ಸರಕಾರದ ಜಾಗ

೧೭. ಹಿಂದಿನ ೫ ವರ್ಷಗಳಲ್ಲಿ ಸ್ವಯಂ–ಉದ್ಯೋಗ ತರಬೇತಿ ಪಡೆದುಕೊಂಡ ಫಲಾನುಭವಿಗಳ ವಿವರಗಳು (ಇಸವಿ – (ಕೊ+ಮ.ಕು+ಮ.ನಾಯ್ಕ + ತಾಲೂಕು) – ಫಲಾನುಭವಿಗಳು – ಕಾರ್ಯಕ್ರಮ ವಿವರ – ಬಿಡುಗಡೆಯಾದ ಹಣ

೧೮. ಹಿಂದಿನ ೫ ವರ್ಷಗಳಲ್ಲಿ ಸ್ವಯಂ–ಉದ್ಯೋಗ ಸೌಲಭ್ಯ ಪಡೆದುಕೊಂಡ ಫಲಾನುಭವಿಗಳ ವಿವರಗಳು

[ಇಸವಿ – ಕೊ+ಮ.ಕು.+ಮ. ನಾಯ್ಕ + ತಾಲೂಕು +) – ಫಲಾನುಭವಿಗಳು – ಪಡೆದ ಸೌಲಭ್ಯ ವಿವರ – ಬಿಡುಗಡೆಯಾದ ಹಣ

೧೯. ಹಿಂದಿನ ೫ ವರ್ಷಗಳಲ್ಲಿ ಶೈಕ್ಷಣಿಕಕ್ಕೆ ಸಂಬಂಧಪಟ್ಟಂತೆ ವಿದ್ಯಾರ್ಥಿವೇತನ ಫಲಾನುಭವಿಗಳ ವಿವರಗಳು

[ಇಸವಿ – (ಕೊ.+ಮ.ಕು+ಮ. ನಾಯ್ಕ) – (ಪ್ರಾಥಮಿಕ ಪ್ರೌಢ ಉನ್ನತ) + ತಾಲೂಕು + ಫಲಾನುಭವಿಗಳು – ಬಿಡುಗಡೆಯಾದ ಹಣ

೨೦. ಹಿಂದಿನ ೫ ವರ್ಷಗಳಲ್ಲಿ ನೀರಾವರಿ ಸೌಲಭ್ಯಗಳನ್ನು ಪಡೆದ ಫಲಾನುಭವಿಗಳ ವಿವರಗಳು (ಯೋಜನೆಯ ಹೆಸರು)

[ಇಸವಿ–(ಕೊ.ಮ.ಕು.+ಮ.ನಾಯ್ಕ+ತಾಲೂಕು+) – ಕೊರೆದ ಬಾವಿ/ಬೋರ್‌ವೆಲ್– ಫಲಾನುಭವಿಗಳು – ಬಿಡುಗಡೆಯಾದ ಹಣ

೨೧. ಸ್ವಯಂಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳ್ಳುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳ ವಿವರಗಳು

[ಅಭಿವೃದ್ಧಿ ಕಾರ್ಯಕ್ರಮದ ಹೆಸರು + ಸ್ವಯಂಸೇವಾ ಸಂಸ್ಥೆಯ ಹೆಸರು + ಪ್ರಯೋಜನ ಪಡೆದ ಸಮುದಾಯಗಳು (ಕೊ.+ಮ.ಕು+ಮ. ನಾಯ್ಕ) + ಫಲಾನುಭವಿಗಳ ಸಂಖ್ಯೆ + ಬಿಡುಗಡೆಯಾದ ಹಣ)

೨೨. ಕಳೆದ (ಹಿಂದಿನ) ೫ ವರ್ಷಗಳಲ್ಲಿ ಕೊರಗ ಸಮುದಾಯದ ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದಂತೆ ವಿವರಗಳು

[ಇಸವಿ + ಮೂಲಭೂತ ಸೌಲಭ್ಯಗಳು + ಬಿಡುಗಡೆಯಾದ ಹಣ + ಪ್ರಯೋಜನ ಪಡೆದ ಊರು/ಕೋಲೊನಿಗಳು/ಕುಟುಂಬಗಳು]

೨೩. ಕಳೆದ (ಹಿಂದಿನ) ೫ ವರ್ಷಗಳಲಿ ಮಲೆ ಕುಡಿಯ ಸಮುದಾಯದ ಮುಳಭೂತ ಸೌಲಭ್ಯಗಳಿಗೆ ಸಂಬಂಧಿಸಿದಂತೆ ವಿವರಗಳು

[ಇಸವಿ + ಮೂಲಭೂತ ಸೌಲಭ್ಯಗಳು + ಬಿಡುಗಡೆಯಾದ ಹಣ + ಪ್ರಯೋಜನ ಪಡೆಸ ಊರು/ಕೋಲೊನಿ/ಕುಟುಂಬಗಳು]

೨೪. ಕಳೆದ (ಹಿಂದಿನ) ೫ ವರ್ಷಗಳಲ್ಲಿ ಮರಾಠಿ ನಾಯ್ಕ ಸಮುದಾಯದ ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದಂತೆ ವಿವರಗಳು

[ಇಸವಿ + ಮೂಲಭೂತ ಸೌಲಭ್ಯಗಳು + ಬಿಡುಗಡೆಯಾದ ಹಣ + ಪ್ರಯೋಜನ ಪಡೆದ ಊರು/ಕೋಲೊನಿ/ಕುಟುಂಬ]

೨೫. ಮೂಲನಿವಾಸಿ ಪಂಗಡದ ಅಭಿವೃದ್ಧಿಗೆ ಸಂಬಂಧಿಸಿನಂತೆ ಅನುಷ್ಠಾನ ಮಾಡಲಾದ ವಿಶೇಷ ಕಾರ್ಯಕ್ರಮಗಳ ವಿವರಗಳು

[ಇಸವಿ + ವಿಶೇಷ ಕಾರ್ಯಕ್ರಮದ ಹೆಸರು + ಫಲಾನುಭವಿಗಳು + ಬಿಡುಗಡೆಯಾದ ಹಣ]

೨೬. ಕೊರಗರಿಗೆ ನೀಡಲಾಗುವ ಪೌಷ್ಠಿಕ ಆಹಾರದ ವಿವರಗಳು ಆಹಾರದ ವಿವರ + ಫಲಾನುಭವಿಗಳ ಸಂಖ್ಯೆ + ಬಿಡುಗಡೆಯಾದ ಹಣ

೨೭. ವಿದ್ಯುತ್ ಸೌಲಭ್ಯ ಪಡೆದ ಫಲಾನುಭವಿಗಳ ವಿವರಗಳು [೫೬ ವರ್ಷಗ ಹಿಂದೆ]

[ಇಸವಿ + (ಕೊರಗ+ಮ.ಕು.+ಮ.ನಾ) + ಫಲಾನುಭವಿಗಳು + ಬಿಡುಗಡೆಯಾದ ಹಣ

೨೮. ಕೃಷಿ (ಉಪಕರಣ) ಸೌಲಭ್ಯ ಪಡೆದ ಫಲಾನುಭವಿಗಳ ವಿವರಗಳು

[ಇಸವಿ + (ಕೊ.ಮ.ಕು.+ಮ.ನಾ) + ಫಲಾನುಭವಿಗಳು + ಬಿಡುಗಡೆಯಾದ ಹಣ

೨೯. ಐ.ಟಿ.ಡಿ.ಪಿ. ವತಿಯಿಂದ ಹಿಂದಿನ ೫ ವರ್ಷಗಳಿಂದ ನಿರ್ಮಾಣಗೊಂಡ ಮನೆಗಳು

(ಸಮುದಾಯ + ಇಸವಿ + ನಿರ್ಮಾಣಗೊಮಡ ಮನೆಗಳು + ತಾಲೂಕು)

(ಕೊ.+ಮ.ಕು+ಮ.ನಾಯ್ಕ)

೩೦. ಕೊರಗ ಕಾಲೊನಿ/ಗ್ರಾಮಗಳಿಗೆ ಹಿಂದಿನ ೫ ವರ್ಷಗಳೀಮದ ನಿರ್ಮಾಣಗೊಂಡ ಸಮುದಾಯ ಭವನದ ವಿವರಗಳು

(ಇಸವಿ + ಸಮುದಾಯ ಭವನದ ಊರಿನ ಹೆಸರು + ನಿರ್ಮಾಣ ಮೊತ್ತ)

೩೧. ಮಲೆ ಕುಡಿಯ ಕಾಲೊನಿ/ಗ್ರಾಮಗಳಿಗೆ ಹಿಂದಿನ ೫ ವರ್ಷಗಳಿಂದ ನಿರ್ಮಾಣಗೊಂಡ ವಿವರಗಳು (ಇಸವಿ + ಸಮುದಾಯ ಭವನ ಊರಿನ ಹೆಸರು + ನಿರ್ಮಾಣ ಮೊತ್ತ)

೩೨. ಮರಾಠಿ ನಾಯ್ಕ ಕಾಲೊನಿ/ಗ್ರಾಮಗಳಿಗೆ ೫ ವರ್ಷಗಳಿಂದ ನಿರ್ಮಾಣಗೊಂಡ ಸಮುದಾಯ ಭವನದ ವಿವರಗಳು

(ಇಸವಿ + ಸಮುದಾಯ ಭವನದ ಊರಿನ ಹೆಸರು + ನಿರ್ಮಾಣ ಮೊತ್ತ)

೩೩. ಕೊರಗ ಕಾಲೊನಿ/ಗ್ರಾಮಗಳಿಗೆ ಹಿಂದಿನ ೫ ವರ್ಷಗಳಿಂದ ನಿರ್ಮಾಣಗೊಂಡ ಬೀದಿ ದೀಪಗಳ ವಿವರಗಳು

(ಇಸವಿ + ಬೀದಿ ದೀಪ ಹಾಕಿದ ಊರು/ಕಾಲೊನಿ + ಅನುಷ್ಠಾನ ಮೊತ್ತ)

೩೪. ಮಲೆಕುಡಿಯ ಕಾಲೊನಿ/ಗ್ರಾಮಗಳಿಗೆ ಹಿಂದಿನ ೫ ವರ್ಷಗಳಿಂದ ನಿರ್ಮಾಣಗೊಂಡ ಬೀದಿ ದೀಪಗಳ ವಿವರಗಳು

(ಇಸವಿ + ಬೀದಿ ದೀಪ ಹಾಕಿದ ಊರು/ಕಾಲೊನಿ + ಅನುಷ್ಠಾನ ಮೊತ್ತ)

೩೫. ಮರಾಠಿ ನಾಯ್ಕ ಕಾಲೊನಿ/ಗ್ರಾಮಗಳಿಗೆ ಹಿಂದಿನ ೫ ವರ್ಷಗಳಿಂದ ನಿರ್ಮಾಣಗೊಂಡ ಬೀದಿ ದೀಪಗಳ ವಿವರಗಳು

(ಇಸವಿ + ಬೀದಿ ದೀಪ ಹಾಕಿದ ಊರು/ಕಾಲೊನಿ + ಅನುಷ್ಠಾನ ಮೊತ್ತ)

೩೬. ಕೊರಗ ಕಾಲೊನಿ/ಗ್ರಾಮಗಳಿಗೆ ಹಿಂದಿನ ೫ ವರ್ಷಗಳಿಮದ ನಿರ್ಮಾಣಗೊಂಡ ರಸ್ತೆ (ಕಾಂಕ್ರೀಟು ರಸ್ತೆ)ಗಳ ವಿವರಗಳು

(ಇಸವಿ + ರಸ್ತೆ (ಕಾಂಕ್ರೀಟು) ನಿರ್ಮಾಣದ ಊರು/ಕಾಲೊನಿ + ಅನುಷ್ಠಾನ ಮೊತ್ತ)

೩೭. ಮಲೆಕುಡಿಯ ಕಾಲೊನಿ/ಗ್ರಾಮಗಳಿಗೆ ಹಿಂದಿನ ೫ ವರ್ಷಗಳಿಂದ ನಿರ್ಮಾಣಗೊಂಡ ರಸ್ತೆ (ಕಾಂಕ್ರೀಟು ರಸ್ತೆ)ಗಳ ವಿವರಗಳು

(ಇಸವಿ + ರಸ್ತೆ (ಕಾಂಕ್ರೀಟು) ನಿರ್ಮಾಣದ ಊರು/ಕಾಲೊನಿ + ಅನುಷ್ಠಾನ ಮೊತ್ತ)

೩೮. ಮರಾಠಿ ನಾಯ್ಕ ಕಾಲೊನಿ/ಗ್ರಾಮಗಳಿಗೆ ಹಿಂದಿನ ೫ ವರ್ಷಗಳಿಂದ ನಿರ್ಮಾಣಗೊಂಡ ರಸ್ತೆ (ಕಾಂಕ್ರೀಟು) ವಿವರಗಳು

(ಇಸವಿ + ರಸ್ತೆ (ಕಾಂಕ್ರೀಟು) ನಿರ್ಮಾಣದ ಊರು/ಕಾಲೊನಿ + ಅನುಷ್ಠಾನ ಮೊತ್ತ)

೩೯. ಕೊರಗ ಕಾಲೋನಿ/ಗ್ರಾಮಗಳಿಗೆ ಹಿಂದಿನ ೫ ವರ್ಷಗಳೀಮದ ನಿರ್ಮಾಣಗೊಮಡ ನೀರಿನ ಟ್ಯಾಂಕ್/ಬೋರ್‌ವೆಲ್/ಬಾವಿಗಳ ವಿವರಗಳು

(ಇಸವಿ + ನೀರಿನ ಟ್ಯಾಂಕ್/ಬೋರ್‌ವೆಲ್/ಬಾವಿ ನಿರ್ಮಾಣಗೊಂಡ ಊರಿನ/ ಕಾಲೋನಿ + ಅನುಷ್ಠಾನ ಮೊತ್ತ)

೪೦. ಮಲೆಕುಡಿಯ ಕಾಲೋಣಿ/ಗ್ರಾಮಗಳಿಗೆ ಹಿಂದಿನ ೫ ವರ್ಷಗಳಿಮದ ನಿರ್ಮಾಣಗೊಂಡ ನೀರಿನ ಟ್ಯಾಂಕ್/ಬೋರ್‌ವೆಲ್/ಬಾವಿಗಳ ವಿವರಗಳು

(ಇಸವಿ+ನೀರಿನ ಟ್ಯಾಂಕ್/ಬೋರ್ವೆಲ್/ಬಾವಿ ನಿರ್ಮಾಣಗೊಂಡ ಊರಿನ ಹೆಸರು + ಅನುಷ್ಠಾನ ಮೊತ್ತ)

೪೧. ಮರಾಠಿನಾಯ್ಕ ಕಾಲೋನಿ/ಗ್ರಾಮಗಳಿಗೆ ಹಿಂದಿನ ೫ ವರ್ಷಗಳಿಂದ ನಿರ್ಮಾಣಗೊಮಡ ನೀರಿನ ಟ್ಯಾಂಕ್/ಬೋರ್‌ವೆಲ್/ಬಾವಿಗಳ ವಿವರಗಳು

(ಇಸವಿ + ನೀರಿನ ಟ್ಯಾಂಕ್/ಬೋರ್‌ವೆಲ್/ಬಾವಿ ನಿರ್ಮಾಣದ ಊರು/ಕಾಲೊನಿ ಹೆಸರು + ಅನುಷ್ಠಾನ ಮೊತ್ತ)

೪೨. ಕೊರಗ ಕಾಲೊನಿ/ಗ್ರಾಮಗಳಿಗೆ ಹಿಂದಿನ ೫ ವರ್ಷಗಳಿಂದ ಒದಗಿಸಿದ ವಿಶೇಷ ಮೂಲಭೂತ ಸೌಕರ್ಯಗಳ (ಭೂಮಿ + ಅಂಗನವಾಡಿ + ಆರೋಗ್ಯ ಕೇಂದ್ರ) ವಿವರಗಳು (ಇಸವಿ + ವಿಶೇಷ ಯೋಜನೆ + ಅನುದಾನ ಮೊತ್ತ)

೪೩. ಮಲೆಕುಡಿಯ ಕಾಲೊನಿ/ಗ್ರಾಮಗಳಿಗೆ ಹಿಂದಿನ ೫ ವರ್ಷಗಳಿಂದ ಒದಗಿಸಿದ ವಿಶೇಷ ಮೂಲಭೂತ ಸೌಕರ್ಯಗಳ (ಭೂಮಿ + ಅಂಗನವಾಡಿ + ಆರೋಗ್ಯ ಕೇಂದ್ರ) ವಿವರಗಳು (ಇಸವಿ + ವಿಶೇಷ ಯೋಜನೆ + ಅನುದಾನ ಮೊತ್ತ)

೪೪. ಮರಾಠಿ ನಾಯ್ಕ ಕಾಲೋನಿ/ಗ್ರಾಮಗಳಿಗೆ ಹಿಂದಿನ ೫ ವರ್ಷಗಳಿಂದ ಒದಗಿಸಿದ ವಿಶೇಷ ಮೂಲಭೂತ ಸೌಕರ್ಯಗಳ (ಭೂಮಿ + ಅಂಗನವಾಡಿ + ಆರೋಗ್ಯ ಕೇಂದ್ರ ವಿವರಗಳು (ಇಸವಿ + ವಿಶೇಷ ಯೋಜನೆ + ಅನುದಾನ ಮೊತ್ತ)

೪೫. ಹಿಂದಿನ ೫ ವರ್ಷಗಳಿಂದ, ಕೊರಗ ಮಲೆಕುಡಿಯ ಮತ್ತು ಮರಾಠಿ ನಾಯ್ಕ ಸಮುದಾಯದ ಊರು/ಕಾಲೋನಿಗಳಿಗೆ ಒದಿಗಿಸಿದ ರುದ್ರಭೂಮಿಯ ವಿವರಗಳು (ಒದಗಿಸಿದ್ದರೆ)

೪೬. ಕೆಲವೊಂದು ವಿಶೇಷ ಅಭಿವೃದ್ಧಿ ಕಾರ್ಯಕ್ರಮಗಳ ಛಾಯಾಚಿತ್ರಗಳು
(ಉದಾ: ಸ್ಮಾರ್ಟ್‌ಕಾರ್ಡ್, ಅಭಿವೃದ್ಧಿ ಯೋಜನೆಯ ಉದ್ಘಾಟನೆ, ನಿರ್ಮಾಣ ಕಾರ್ಯ) ಇತ್ಯಾದಿ.

೪೭. ಹಿಂದಿನ ೫ ವರ್ಷಗಳಿಂದ ಕೊರಗ ಸಮುದಾಯಗಳಿಗೆ ಪೂರೈಸುತ್ತಿರುವ ಪೌಷ್ಠಿಕ ಆಹಾರದ ವಿವರಗಳು
(ಇಸವಿ + ಆಹಾರ ಪಡೆಯುವ ಕುಟುಂಬಗಳ ಸಂಖ್ಯೆ + ಅನುದಾನ ಮೊತ್ತ)

೪೮. ಹಿಂದಿನ ೫ ವರ್ಷಗಳಿಂದ ಕೊರಗ ಮಲೆಕುಡಿಯ ಸಮುದಾಯಗಳಿಗೆ ಪೂರೈಸುತ್ತಿರುವ ಪೌಷ್ಠಿಕ ಆಹಾರದ ವಿವರಗಳು.
(ಇಸವಿ + ಆಹಾರ ಪಡೆಯುವ ಕುಟುಂಬಗಳ ಸಂಖ್ಯೆ + ಅನುದಾನ ಮೊತ್ತ)

ಬುಡಕಟ್ಟು ಅಭಿವೃದ್ಧಿಯಲ್ಲಿ ನಿರತ ಸ್ವಯಂ ಸೇವಾ ಸಂಸ್ಥೆಗಳಿಂದ ಮಾಹಿತಿ ಸಂಗ್ರಹಿಸಲು ಸಿದ್ಧಪಡಿಸಿದ ಪ್ರಶ್ನಾವಳಿ

೧. ಸ್ವಯಂ ಸೇವಾ ಸಂಸ್ಥೆಯ ಪ್ರಾಥಮಿಕ ವಿವರಗಳು?
(ಹೆಸರು, ನೋಂದಾವಣೆಯಾದ ವರ್ಷ ಮತ್ತು ಕಾಯ್ದೆ, ಧ್ಯೇಯ, ಉದ್ದೇಶಗಳು, ಆಡಳಿತ ಮಂಡಳಿ ಇತ್ಯಾದಿ)

೨. ಸ್ವಯಂಸೇವಾ ಸಂಸ್ಥೆಯ ಆರ್ಥಿಕ ಮೂಲಗಳು?

೩. ಸ್ವಯಂ ಸೇವಾ ಸಂಸ್ಥೆಯ ಕಾರ್ಯವ್ಯಾಪ್ತಿ ಮತ್ತು ಇತರ ಶಾಖೆಗಳು?

೪. ಸ್ವಯಂಸೇವಾ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮಗಳ ವಿವರಗಳು?

೫. ಸ್ವಯಂಸೇವಾ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳು?

೬. ಸ್ವಯಂಸೇವಾ ಸಂಸ್ಥೆಗಳು ಪ್ರಸ್ತುತ ಎದುರಿಸುತ್ತಿರುವ ಸಮಸ್ಯೆಗಳು?

೭. ಪ್ರಸ್ತುತ ಸ್ವಯಂಸೇವಾ ಸಂಸ್ಥೆಗಳ ಮುಂದಿರುವ ಸವಾಲುಗಳು?

೮. ಸ್ವಯಂಸೇವಾ ಸಂಸ್ಥೆ ಮತ್ತು ಸರಕಾರ ಜಂಟಿಯಾಗಿ ಕೈಗೆತ್ತಿಕೊಂಡ ಯೋಜನೆ/ಕಾರ್ಯಕ್ರಮಗಳ ವಿವರಗಳು

೯. ಸ್ವಯಂಸೇವಾ ಸಂಸ್ಥೆಗಳ ಅಭಿವೃದ್ಧಿ ಕಾರ್ಯಕ್ರಮಗಳಿಂದ ಸಮುದಾಯಗಳಲ್ಲಿ ಕಂಡು ಬಂದ ಬದಲಾವಣೆಗಳು?

೧೦. ಅಭಿವೃದ್ಧಿ ಕಾರ್ಯಕ್ರಮಗಳ ಛಾಯಾಚಿತ್ರ ಮತ್ತು ಇನ್ನಿತರ ವಿವರಗಳು?

೧.ಹೆಸರು:

೨. ಗ್ರಾಮ:

೩. ಉದ್ಯೋಗ ವಿಧ:

೧. ಸರಕಾರ,

೨. ಸ್ವಯಂ ಉದ್ಯೋಗ,

೩. ಕೃಷಿ,

೪. ಕೂಲಿ

೫. ದಿನ / ತಿಂಗಳ ಆದಾಯ:

೪. ಸರಕಾರದಿಂದ ಪಡೆದ ಸೌಲಭ್ಯಗಳು :

೧.ತುರ್ತು ಪರಿಹಾರ ನಿಧಿ,

೨. ನೀರಾವರಿ ಸೌಲಭ್ಯ

೩. ವಿಶೇಷ ಆರೋಗ್ಯ ಅನುದಾನ

೪. ಸ್ವ ಉದ್ಯೋಗ (ಸಾಲ/ಸೌಲಭ್ಯ/ತರಬೇತಿ)

೫.ಸ್ವಯಂ ಸೇವಾ ಸಂಸ್ಥೆಗಳಿಂದ ಪಡೆದ ಸೌಲಭ್ಯಗಳು:

(ಹಣ/ತರಬೇತಿ/ಶಿಕ್ಷಣ/ಆರೋಗ್ಯ/ಸಹಾಯ)

೫. ಸೇರಿದ/ ಭಾಗವಹಿಸಿದ: ೧. ಸ್ವಯಂ ಸೇವಾ ಸಂಸ್ಥೆ

೨. ಸಂಘಟನೆ

೩. ರಾಜಕೀಯ ಪಕ್ಷ

೬. ಮೀಸಲಾತಿ ಸೌಲಭ್ಯ ವಿವರ

೧. ವೃತ್ತಿ ಶಿಕ್ಷಣ

೨. ಉದ್ಯೋಗ

೩. ರಾಜಕೀಯ

೪. ಇತರೆ

೭. ಪುನರ್ವಸತಿ ಪಡೆದ ವಿವರ:

೧. ಪುನರ್ವಸತಿ ಪ್ರಕ್ರಿಯೆಗೆ ಒಳಪಟ್ಟಿಲ್ಲ

೨. ಪುನರ್ವಸತಿ ಪ್ರಕ್ರಿಯೆಗೆ ಕಾಯುತ್ತಿದೆ/ತಡೆಹಿಡಿಯಲಾಗಿದೆ

೩. ಪುನರ್ವಸತಿ ಪ್ರಕ್ರಿಯೆ ಸಂಪೂರ್ಣಗೊಂಡಿದೆ (Feed Back)

೮. ಸ್ಥಳೀಯ ಪಂಚಾಯತ್‌ನಿಂದ ಸಹಾಯ/ಕೊಡಗೆಗಳು(ವಿವರ):

೯. ಗ್ರಾಮಕ್ಕೆ ಸರಕಾರದಿಂದ ದೊರೆತ ಸೌಲಭ್ಯ:

೧೦.ಗ್ರಾಮಕ್ಕೆ ಸ್ವಯಂಸೇವಾ ಸಂಸ್ಥೆಯಿಂದ ದೊರೆತ ಸೌಲಭ್ಯ:

ಸಹಿ:


ಸಂಶೋಧನಾ ವಿದ್ಯಾರ್ಥಿ

(ಅತುಲ್ ಎಸ್ ಸೇಮಿತ)

ಛಾಯ ಚಿತ್ರಗಳು



ಆರ್ಥಿಕ ಮುಗ್ಗಟ್ಟಿನಿಂದ ಅರ್ಧದಲ್ಲೆ ನಿಂತ ಮಲೆಕುಡಿಯರ ಆರ್‌ಸಿಸಿ ಮನೆ



ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಮೂಲಕ ನಾಯ್ದುಗುರಿ ಕಾಲೋನಿಯಲ್ಲಿ ನಿರ್ಮಾಣಗೊಂಡ ಕಾಂಕ್ರೀಟ್ ರಸ್ತೆ



ಸಚ್ಚರಿಪೇಟೆಯಲ್ಲಿ ಮನೆಯಾಗಿ ಪರಿವರ್ತಿತಗೊಂಡಿರುವ ಉದ್ಯೋಗ ತರಬೇತಿ ಸಣ್ಣ ಕೈಗಾರಿಕ ಘಟಕ



ಕುಟೀರ ಜ್ಯೋತಿ ಸೌಲಭ್ಯ ಪಡೆದ ಕೊರಗ ಕುಟುಂಬ



ಸಚ್ಚರಿಪೇಟೆಯಲ್ಲಿ ನಿರ್ಮಾಣಗೊಂಡ ಹಳೆಯ ಬಾವಿ



ಸ್ವಯಂ ಉದ್ಯೋಗ ತರಬೇತಿಯಡಿ ಮಲ್ಲಿಗೆ ಕೃಷಿ ಮಾಡುತ್ತಿರುವ ಕೊರಗ ಕುಟುಂಬ



ಸಚ್ಚರಿಪೇಟಯಲ್ಲಿರುವ ಕೊರಗ ಭವನ




ಕುಂಭಾಶಿ ಗ್ರಾಮ ಪಂಚಾಯತ್‌ವತಿಯಿಂದ ಅಂಬೇಡ್ಕರ್ ಕೊರಗ ಕಾಲೋನಿಯಲ್ಲಿ
ನಿರ್ಮಾಣಗೊಂಡ ಹೈಮಾಸ್ಕ್ ದೀಪ



ಐ.ಟಿ.ಡಿ.ಪಿ ಮತ್ತು ಅಕ್ಷರ ಸಂಸ್ಥೆಯ ಆಶ್ರಯದೊಂದಿಗೆ ನಡೆದ ಮಕ್ಕಳ ರಜಾ
ಶಿಬಿರದ ಉದ್ಘಟನಾ ಕಾರ್ಯಕ್ರಮ




ರಜಾ ಶಿಬಿರದಲ್ಲಿ ಕೊರಗ ಮಕ್ಕಳಿಗೆ ಹಾವಿನ ಬಗ್ಗೆ ಪ್ರಾತ್ಯಕ್ಷಿಕೆ



ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಉಡುಪಿಯ ಮೂಲಕ ನಿರ್ಮಾಣಗೊಂಡ ಅಂಬೇಡ್ಕರ್ ಭವನ



ಮಂಜರಪಲ್ಕೆಯಲ್ಲಿ ಐ.ಟಿ.ಡಿ.ಪಿ ವತಿಯಿಂದ ನಿರ್ಮಾಣಗೊಂಡ ರವಿಯವರ ನೂತನ ಮನೆ



ಸಚ್ಚರಿಪೇಟೆ ಪಂಚಾಯತ್ ವತಿಯಿಂದ ಕೊರಗರ ಕಾಲೋನಿಯಲ್ಲಿ ನಿರ್ಮಾಣಗೊಂಡ
ಸೋಲಾರ್ ಬೀದಿ ದೀಪ



ಸಮಗ್ರ ಗ್ರಾಮೀಣ ಆಶ್ರಮದ ವತಿಯಿಂದ ಕೊರಗ ಸಮುದಾಯದಗಳ
ಮಕ್ಕಳಿಗೆ ತರಬೇತಿ ಕಾರ್ಯಕ್ರಮ



ಬುಟ್ಟಿ ಹೆಣೆಯುತ್ತಿರುವ ಕೊರಗ ಮಹಿಳೆ





ಸಮಗ್ರ ಗ್ರಾಮೀಣ ಆಶ್ರಮ ಮತ್ತು ಕೊರಗಾಭಿವೃದ್ಧಿ ಸಂಘಟನೆಗಳ ಆಶ್ರಯದೊಂದಿಗೆ ನಡೆದ ಕೊರಗರ ಗಜ ಮೇಳ



ಸಾಂಪ್ರದಾಯಿಕ ಕೊಳಲನ್ನು ಊದುತ್ತಿರುವ ಕೊರಗ ಸಮುದಾಯದ ಪುರುಷ.

ಬುಡಕಟ್ಟು ಅಧ್ಯಯನ ವಿಭಾಗ